B Ramaswamy

ನಾಗವರ್ಮಕವಿಕೃತ

ಕಾವ್ಯಾವಲೋಕನಂ

ಬಿ. ರಾಮಸ್ವಾಮಿ.

ನಾಗವರ್ಮಕವಿಕೃತ

ಕಾವ್ಯಾವಲೋಕನಂ

ಸಂಪಾದಕರು:

ಶಿ. ಶಿ. ಬಸವನಾಳ, ಎಂ. ಎ.

ಮತ್ತು

ಕೇಪು ಶಂಕರನಾರಾಯಣ

ಪ್ರಥಮಮುದ್ರಣ

ಪ್ರಸ್ತಾವನೆ, ಟಿಪ್ಪಣಿಗಳಿಂದೊಡಗೂಡಿದುದು

ಕರ್ನಾಟಕ ವಿದ್ಯಾವರ್ಧಕ ಸಂಘ

ಧಾರವಾಡ

೧೯೩೬

ಮುದ್ರಕರು:

ಶಿ. ಬ. ಹರಿಹರ

ವ್ಯವಸ್ಥಾಪಕ, ತೋಂಟದಾರ್ಯ ಮುದ್ರಣಾಲಯ

ಧಾರವಾಡ

ಪ್ರಕಾಶಕರು:

ಕಾಂತೇಶ ಶ್ರೀನಿವಾಸ ಕಮಲಾಪೂರ

ಗೌರವ ಕಾರ್ಯದರ್ಶಿ

ಕರ್ನಾಟಕ ವಿದ್ಯಾವರ್ಧಕ ಸಂಘ

ಧಾರವಾಡ

ಮುನ್ನುಡಿ

ನಾಗವರ್ಮನ ಕಾವ್ಯಾವಲೋಕನವು ಅಲಂಕಾರಶಾಸ್ತ್ರಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ವಿವೇಚಿಸುವ ಒಂದೇ ಒಂದಾದ ಕನ್ನಡ ಪುರಾತನ ಗ್ರಂಥ. ಇದನ್ನು ಕೀರ್ತಿಶೇಷರಾದ ಪ್ರಾಕ್ತನವಿಮರ್ಶವಿಚಕ್ಷಣ, ಮಹಾಮಹೋಪಾಧ್ಯಾಯ, ರಾ. ಬ. ಆರ್. ನರಸಿಂಹಾಚಾರ್ಯರವರು ೧೯೦೩ ರಲ್ಲಿಯೇ ಅನೇಕ ಉಪಯುಕ್ತವಾದ ಅನುಬಂಧಗಳೊಡನೆ ಪ್ರಕಟಿಸಿದ್ದರು. ಕನ್ನಡವು ವಿಶ್ವವಿದ್ಯಾಲಯಗಳಲ್ಲಿ ಪ್ರೌಢವಿದ್ಯಾರ್ಥಿಗಳ ಅಭ್ಯಾಸದ ವಿಷಯವಾಗಿ ಏರ್ಪಟ್ಟಂದಿನಿಂದ ಈ ಗ್ರಂಥದ ಉಪಯುಕ್ತತೆಯು ಹೆಚ್ಚಾಗಿ ಕಂಡುಬಂದಿತು. ಆದರೆ ಇತ್ತೀಚೆಗೆ ಕೆಲವು ವರ್ಷಗಳಿಂದ ಈ ಗ್ರಂಥದ ಮುದ್ರಿತ ಪ್ರತಿಗಳು ದುರ್ಲಭವಾದುದರಿಂದ ಇದನ್ನು ಪರಿಷ್ಕರಿಸಿ ಟಿಪ್ಪಣಿಯೊಡನೆ ಮುದ್ರಿಸಬೇಕೆಂದು ಬಯಸಿ ಮದರಾಸು ಮತ್ತು ಮೈಸೂರು ಪ್ರಾಚ್ಯಕೋಶಾಲಯಗಳಲ್ಲಿ ದೊರೆಯುವ ಹಸ್ತಪ್ರತಿಗಳೊಡನೆ ಹೋಲಿಸಿ ನೋಡಿ ಮುದ್ರಣಕ್ಕಾಗಿ ಮಾತೃಕೆಯನ್ನು ೧೯೪೭ ರಲ್ಲಿಯೇ ಸಿದ್ಧಪಡಿಸಿದೆವು.

ಮುಂಬೈ ಪ್ರಾಂತಿಕ ಸರಕಾರದವರು ೧೯೪೮ರಲ್ಲಿ ಕನ್ನಡ ಸಂಶೋಧನ ಸಮಿತಿಯೊಂದನ್ನು ಧಾರವಾಡದಲ್ಲಿ ಹೊಸದಾಗಿ ಸ್ಥಾಪಿಸಿ ತನ್ಮೂಲಕ ಉಪಯುಕ್ತವೆನಿಸುವ ಕನ್ನಡ ಗ್ರಂಥಗಳ ಪ್ರಕಟನೆಗೆ ಧನಸಹಾಯವನ್ನು ಮಾಡುವ ಯೋಜನೆಯನ್ನು ಕೈಕೊಂಡುದರಿಂದ ಈ ಗ್ರಂಥವನ್ನು ಅವರ ಉದಾರಾಶ್ರಯದಲ್ಲಿ ಪ್ರಕಟಿಸಲಾಗಿದೆ.

ಈ ಗ್ರಂಥಕ್ಕೆ ನಾವು ಟಿಪ್ಪಣಿಯನ್ನು ಜೋಡಿಸಿದುದು ವಿದ್ಯಾರ್ಥಿಗಳಿಗೆ ಅನುಕೂಲವಾಗಬೇಕೆಂಬ ದೃಷ್ಟಿಯಿಂದ; ಪಂಡಿತರಿಗೆ ಮಾನ್ಯವಾಗಬೇಕೆಂಬ ಧಾರ್ಷ್ಟ್ಯದಿಂದಲ್ಲ. ಕೆಲವೆಡೆ ವಿಸ್ತಾರವಾಗಿದ್ದ ವಿಷಯಗಳನ್ನು ಸಂಗ್ರಹಿಸಿ, ಮತ್ತೆ ಕೆಲವೆಡೆ ಸಂಕ್ಷಿಪ್ತವಾಗಿದ್ದ ವಿಷಯಗಳನ್ನು ವಿಸ್ತರಿಸಿ, ಸಂದಿಗ್ಧವಾದ ವಿಷಯಗಳನ್ನು ಒಮ್ಮೊಮ್ಮೆ ವಿವರಿಸಿ, ಒಮ್ಮೊಮ್ಮೆ ವಿವೇಚಿಸಿ, ಒಟ್ಟಿನಲ್ಲಿ ವಿದ್ಯಾರ್ಥಿಗಳ ಕುತೂಹಲವನ್ನು ಕುದುರಿಸಬೇಕೆಂಬ ಗುರಿಯನ್ನು ಇಲ್ಲಿ ಇಟ್ಟುಕೊಳ್ಳಲಾಗಿದೆ. ನಮ್ಮ ಈ ಪ್ರಯತ್ನದ ಪರಿಣಾಮವಾಗಿ ಲೋಪ – ಆಗಮ – ಆದೇಶರೂಪ ದೋಷಗಳುಂಟಾಗಿದ್ದರೆ ವಿದ್ವನ್ಮಣಿಗಳು ಕ್ಷಮಿಸುವರೆಂದು ಆಶಿಸುತ್ತೇವೆ. ‘ಕುರಿತೋದದೆಯುಂ ಕಾವ್ಯ ಪರಿಣತಮತಿ’ಗಳಾದವರ ಈ ನಾಡಿನಲ್ಲಿ, ವಿಮರ್ಶಕಬುದ್ಧಿಯು ಪ್ರಬಲವಾಗಿ ಪ್ರಚೋದಿತವಾಗಿರುವ ಈ ಕಾಲದಲ್ಲಿ, ಎಂದಿನಿಂದಲೂ ಪ್ರಕಟವಾಗುತ್ತ ಬಂದಿರುವ ಕನ್ನಡಿಗರ ಸೌಹಾರ್ದದ ಭರವಸೆಯಿಂದ ಈ ಕಾರ್ಯವನ್ನು ಕೈಕೊಂಡಿದ್ದೇವೆ. ಇದರಲ್ಲಿ ಕಂಡುಬರಬಹುದಾದ ಕುಂದು ಕೊರತೆಗಳನ್ನು ತೋರಿಸಿಕೊಟ್ಟಲ್ಲಿ ಮುಂದಿನ ಮುದ್ರಣದ ಸುಯೋಗವು ದೊರೆತಾಗ ತಿದ್ದಿಕೊಳ್ಳಲು ಸಿದ್ಧರೇ ಇರುವೆವು.

ಸರಭಸತೆಯಿಂ ಮತ್ತೊಂದಜ್ಞಾನದಿಂದುಚಿತೋಕ್ತಿಯೊಳ್
ಪೊರೆಯದಿದು ತಾನಿನ್ನೊಂದೇನಾನುಮಾದೊಡಮಿಲ್ಲಿ ಮ
ತ್ಸರವಿರಹಿತರ್ ಪೌರೋಭಾಗ್ಯವ್ಯಪೇತಮನಸ್ಕರ
ಕ್ಕರಿಗರಧಿಕಪ್ರಜ್ಞರ್ ಕೆಯ್ಕೊಂಡು ತಿರ್ದುಗೆ ದೋಷಮಂ

ಎಂದು ನಾಗವರ್ಮನೇ ಹೇಳಿರುವಾಗ ನಾವು ಪ್ರತ್ಯೇಕವಾಗಿ ಹೇಳಬೇಕಾದುದೇನಿದೆ?

ಈ ಗ್ರಂಥವನ್ನು ಮುದ್ರಿಸುವ ಕಾರ್ಯದಲ್ಲಿ ತೋಂಟದಾರ್ಯ ಮುದ್ರಣಾಲಯದ ಕಾರ್ಯಕರ್ತರುಗಳಾದ ಶ್ರೀಯುತರುಗಳಾದ ಎಸ್. ಬಿ. ಹರಿಹರ ಮತ್ತು ಎಮ್. ಜಿ. ವಿರೂಪಾಕ್ಷನ್ ಇವರಿಬ್ಬರೂ ಗ್ರಂಥವು ಸರ್ವರೀತಿಯಿಂದಲೂ ಚಿತ್ತಾಕರ್ಷಕವಾಗಬೇಕೆಂದು ಬಹು ಶ್ರಮವಹಿಸಿದ್ದಕ್ಕಾಗಿ ನಾವು ಅವರಿಗೆ ತುಂಬ ಆಭಾರಿಗಳಾಗಿದ್ದೇವೆ. ಸಂಪಾದಕರು ಒಂದೆಡೆ, ಮುದ್ರಕರು ಇನ್ನೊಂದೆಡೆ ಇದ್ದುದರಿಂದ ಕೆಲವು ಅಚ್ಚಿನ ದೋಷಗಳು ಅನಿವಾರ್ಯವಾಗಿ ಉಳಿದುದಕ್ಕಾಗಿ ವಿಷಾದಿಸುತ್ತೇವೆ.

ಈ ಗ್ರಂಥದ ಮುದ್ರಣಕ್ಕೆ ಧನಸಹಾಯ ಮಾಡಿದುದಕ್ಕಾಗಿ ಕನ್ನಡ ಸಂಶೋಧನ ಸಮಿತಿಯವರಿಗೂ ತನ್ಮೂಲಕ ಮುಂಬೈ ಸರಕಾರಕ್ಕೂ ಕೃತಜ್ಞರಾಗಿದ್ದೇವೆ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದವರು ಮುಂಬರಲಿರುವ ತಮ್ಮ ಸುವರ್ಣಮಹೋತ್ಸವದ ಅಂಗವೆಂದು ಈ ಗ್ರಂಥವನ್ನು ಪ್ರಕಟಿಸಿ, ಇದಕ್ಕೆ ಪ್ರಶಸ್ತಿಯನ್ನುಂಟುಮಾಡಿದುದಕ್ಕಾಗಿ ಅವರಿಗೆ ಚಿರಋಣಿಯಾಗಿದ್ದೇವೆ.

ಬೆಳಗಾವಿ,

ತಾ. ೨೫-೧೨-೧೯೩೯ — ಸಂಪಾದಕರು

ಪ್ರಕಾಶಕರ ಒಂದೆರಡು ಮಾತುಗಳು

ಈ ಗ್ರಂಥವನ್ನು ಪ್ರಕಟಿಸುವುದಕ್ಕೆಂದು ದ್ರವ್ಯಸಹಾಯ ಮಾಡಿದುದಕ್ಕಾಗಿ ಧಾರವಾಡದ ಕನ್ನಡ ಸಂಶೋಧನ ಸಮಿತಿಯವರಿಗೆ ಸಂಘವು ಅತ್ಯಂತ ಋಣಿಯಾಗಿದೆ. ಪ್ರೊ. ಬಸವನಾಳರವರೂ ಶ್ರೀಮಾನ್ ಕೇಪು ಶಂಕರನಾರಾಯಣರವರೂ ತಾವು ಸಂಪಾದಿಸಿದ ಈ ಗ್ರಂಥವನ್ನು ಸಂಘಕ್ಕೆ ಕೊಟ್ಟುದಕ್ಕಾಗಿ ಅವರಿಗೆ ಸಂಘವು ಆಭಾರಿಯಾಗಿದೆ. ಬೆಳಗಾವಿಯಲ್ಲಿ ಇದೇ ತಿಂಗಳಲ್ಲಿ ಜರಗಿದ ೨೫ನೆಯ ಸಾಹಿತ್ಯ ಸಮ್ಮೇಳನದ ಕಾಲಕ್ಕೆ ಅದರ ಮಾನ್ಯ ಅಧ್ಯಕ್ಷರಾದ ಶ್ರೀಮಾನ್ ಮುದುವೀಡು ಕೃಷ್ಣರಾಯರು ಸಮ್ಮೇಳನದಲ್ಲಿಯೇ ೨೮ನೆಯ ಡಿಸೆಂಬರ ೧೯೩೯ನೆಯ ದಿವಸ ಈ ಗ್ರಂಥದ ಪ್ರಕಟಣವನ್ನು ಮಾಡಿದುದಕ್ಕಾಗಿ ಅವರಿಗೆ ಸಂಘದ ಪರವಾಗಿ ನಾವು ಕೃತಜ್ಞರಾಗಿದ್ದೇವೆ.

ಕರ್ನಾಟಕ ವಿದ್ಯಾವರ್ಧಕ ಸಂಘ,
ಧಾರವಾಡ.
ತಾ. ೩೦-೧೨-೧೯೩೯

ಕಾಂತೇಶ ಶ್ರೀ. ಕಮಲಾಪೂರ,
ಗೌರವ ಕಾರ್ಯದರ್ಶಿ.

ಪ್ರಸ್ತಾವನೆ

ಕನ್ನಡಸಾಹಿತ್ಯದಲ್ಲಿ ನಾಗವರ್ಮ ಎಂಬ ಹೆಸರಿನಿಂದ ಪ್ರಸಿದ್ಧರಾದ ಕವಿಗಳು ಇಬ್ಬರಾಗಿರುವರೆಂದು ತಿಳಿದು ಬಂದಿರುವುದು. ಮೊದಲನೆಯ ನಾಗವರ್ಮನು ವೆಣ್ಣಮಯ್ಯನೆಂಬವನ ಮಗನು, ರನ್ನಮಹಾಕವಿಗೂ ಗುರುಗಳಾಗಿದ್ದ ಅಜಿತಸೇನ ದೇವರಶಿಷ್ಯನು, ಸಯ್ಯಡಿಯಾತನು, ಕವಿರಾಜನೆಂಬ ಬಿರುದುಳ್ಳವನು; ರಕ್ಕಸಗಂಗನ ಆಳಿಕೆಯಲ್ಲಿ ಎಂದರೆ ಹತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಬದುಕಿದ್ದನೆನ್ನ ಬಹುದು; ಕರ್ಣಾಟಕಛಂದೋಂಬುಧಿಯನ್ನು ಬರೆದನು. ಕರ್ಣಾಟಕಕಾದಂಬರಿ ಯನ್ನು ಇವನೇ ಬರೆದಿರಬಹುದು. ಎರಡನೆಯ ನಾಗವರ್ಮನು ದಾಮೋದರ ನೆಂಬವನ ಮಗನು, ಜನ್ನಮಹಾಕವಿಗೆ ಉಪಾಧ್ಯಾಯನು, ಕವಿತಾಗುಣೋದಯ ನೆಂಬ ಬಿರುದುಳ್ಳವನು; ಚಲುಕ್ಯರಾಯನಾದ ಜಗದೇಕಮಲ್ಲನ ಆಳಿಕೆಯಲ್ಲಿ ಎಂದರೆ ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿದ್ದನೆನ್ನಬಹುದು; ವಸ್ತುಕೋಶ, ಕರ್ಣಾಟಕಭಾಷಾಭೂಷಣ, ಛಂದೋವಿಚಿತಿಗಳನ್ನು ಬರೆದನು. ಪ್ರಸ್ತುತಗ್ರಂಥವಾದ ಕಾವ್ಯಾವಲೋಕನವನ್ನು ಇವನೇ ಬರೆದಿರುವನು. ಈ ಇಮ್ಮಡಿ ನಾಗವರ್ಮನನ್ನೇ ಮುಂದೆ (ಬರಿಯ) ನಾಗವರ್ಮನೆಂದು ನಿರ್ದೇಶಿಸುವೆವು.

ನಾಗವರ್ಮನು ಹನ್ನೆರಡನೆಯ ಶತಮಾನದವನೆನ್ನುವುದಕ್ಕೆ ಕರ್ಣಾಟಕಕವಿ ಚರಿತೆಕಾರರು ಕೊಟ್ಟಿರುವ ಆಧಾರಗಳನ್ನು ಇಲ್ಲಿ ಸಂಗ್ರಹವಾಗಿ ಹೇಳುವೆವು. ಜನ್ನನು ತನ್ನ ಅನಂತನಾಥಪುರಾಣದಲ್ಲಿಯ—

> ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವ
> ರ್ಮನಿದಾನೀಂತನಶರ್ವವರ್ಮನೆ ಗಡಂ ಜನ್ನಂಗುಪಾಧ್ಯಾಯನಿಂ
> ದು ನೃಸಿಂಹಕ್ಷಿತಿಪಾಲನಲ್ಲಿ ಕಟಕೋಪಾಧ್ಯಾಯನಾರೆಂಬ ಸೂ
> ಕ್ತಿನವೀನೋಜ್ಜ್ವಲಬಾಣನಪ್ಪ ಸುಮನೋಬಾಣಂ ಕವಿಶ್ರೇಷ್ಠರೊಳ್

ಎಂಬ (೧-೩೪) ಪದ್ಯದಲ್ಲಿ ತನ್ನ ಉಪಾಧ್ಯಾಯನ ಹೆಸರನ್ನು ಇದಾನೀಂತನಶರ್ವ ವರ್ಮನಾದ ನಾಗವರ್ಮನೆಂದು ಹೇಳಿರುವನು. ಕಾವ್ಯಾವಲೋಕನದ—

> ಅಭಿಮತಶಬ್ದಸಂಸ್ಮರಣದಿಂ ಜನಮುಂ ತಿಳಿವಂತು ಮಾಡಿ ವಾಗ್
> ವಿಭವಮುದಪ್ರತರ್ಕ್ಯಮೆನೆ ಸಂದೆಸಕಂ ದೆಸೆಯಂತಸೆಯ್ದೆ ತತ್
> ಸಭೆಯೊಳಗಗ್ರಪೂಜೆವಡೆದೊಂದು ಮಹಾಮಹಿಮಾನುಭಾವದಿಂ
> ದಭಿನವಶರ್ವವರ್ಮನಿವನೆಂದಪುದುರ್ವರೆ ನಾಗವರ್ಮನಂ

ಎಂಬ (೪೨೩) ಪದ್ಯದಿಂದ ಈ ಗ್ರಂಥದ ಕರ್ತೃವಾದ ನಾಗವರ್ಮನಿಗೆ ಅಭಿನವ (=ಇದಾನೀಂತನ) ಶರ್ವವರ್ಮನೆಂಬ ಬಿರುದು ಇದ್ದಿತೆಂದು ಕಂಡುಬರುವುದರಿಂದ

ಇವನೇ ಜನ್ನನ ಉಪಾಧ್ಯಾಯನಾಗಿದ್ದನೆಂಬುದರಲ್ಲಿ ಸಂದೇಹವಿಲ್ಲ. ಚಾಳುಕ್ಯರ ಜಗದೇಕಮಲ್ಲನು ಕ್ರಿಸ್ತಾಬ್ದ ೧೧೩೮ರಿಂದ ೧೧೫೦ ರ ವರೆಗೆ ಆಳಿದಂತೆ ತಿಳಿಯುವುದ ರಿಂದ ಅವನಲ್ಲಿ ಕಟಕೋಪಾಧ್ಯಾಯನಾಗಿದ್ದ ನಾಗವರ್ಮನು ಅವನ ಕಾಲದಲ್ಲಿ ಜೀವಿಸಿದ್ದನಲ್ಲದೆ ೧೨೦೯ರಲ್ಲಿದ್ದ ಜನ್ನನಿಗೆ ಗುರುವಾಗಬೇಕಾದರೆ ಮುಂದೆಯೂ ಬಹು ಕಾಲ ಬದುಕಿರಬೇಕೆಂದು ಊಹಿಸಬಹುದು. ಆದುದರಿಂದ ೧೨ನೆಯ ಶತಮಾನದ ಉತ್ತರಾರ್ಧದಲ್ಲಿ ಬದುಕಿದ್ದನೆಂದು ಹೇಳಲು ಸಂದೇಹವಿಲ್ಲ.

ನಾಗವರ್ಮನು ಜೈನಬ್ರಾಹ್ಮಣನೆನ್ನುವುದಕ್ಕೆ ಕಾವ್ಯಾವಲೋಕನದ

ದ್ವಿಜವಂಶಾರ್ಣವಪಾರಿಜಾತಕುಜದೇಶೀಯಂ ಜಿನೇಂದ್ರಕ್ರಮಾಂ
ಬುಜಚಂಚನ್ನವಚಂಚರೀಕಯುವಲೀಲೋದ್ದಾಮಂ...........

ಇತ್ಯಾದಿಯಾದ (೯೬೦) ಪದ್ಯವು ಆಧಾರವಾಗಿದೆ. ಇದೂ ಅಲ್ಲದೆ ಇವನು ಜೈನ-ಪುರಾಣವೊಂದನ್ನು ಬರೆದಿರುವನೆಂಬುದು ಜನ್ನನ —

ಎನಗನುಕೂಲಮಕ್ಕೆ ಗುಣವರ್ಮನ ಜಾಣ್-ನುಡಿ ಪಂಪನಿಂಪು ಪೊ
ನ್ನನ ಬಗೆ ನಾಗವರ್ಮನ ಬಹುಜ್ಞತೆ ರನ್ನನ ಕಾಂತಿ ನಾಗಚಂ
ದ್ರನ ರಸಭಾವಮುಗ್ಗಳನ ವಕ್ರತೆ ನೇಮಿಯ ದೇಸೆ ಪುಷ್ಪಬಾ
ಣನ ಮೃದುಬಂಧಮೀ ಕವಿಗಳಲ್ತೆ ಜಿನೇಂದ್ರಪುರಾಣಕರ್ತೃಗಳ್

ಎಂಬ (೧-೩೫) ಪದ್ಯದಿಂದಲೂ ಜಿನಪುರಾಣಗಳನ್ನು ಬರೆದ ಆಚಣ್ಣ, ಎರಡನೆಯ ಗುಣವರ್ಮ ಇವರು ನಾಗವರ್ಮನನ್ನು ಸ್ತುತಿಸಿರುವುದರಿಂದಲೂ ಗೊತ್ತಾಗುತ್ತದೆ; ಆದರೆ ಯಾವ ಪುರಾಣವನ್ನು ಬರೆದಿದ್ದನೆಂಬುದು ಹೇಳಬರುವಂತಿಲ್ಲ.

ನಾಗವರ್ಮನು ತನಗೆ ಮುಂಚಿನವರಾದ ಕವಿಗಳಲ್ಲಿ ಆದಿಪಂಪ, ಹರಿಪಾಲ, ಗುಣವರ್ಮ, ನಯಸೇನರ ಹೆಸರುಗಳನ್ನು ತನ್ನ ಕರ್ಣಾಟಕಭಾಷಾಭೂಷಣದಲ್ಲಿ ಅಲ್ಲಲ್ಲಿ ಹೇಳಿರುವನು. ಅಲ್ಲದೆ 'ಸಲೆ ನೆಗಳ್ದುವು ಧಾರಿಣಿಯೊಳಗೆ ನಾಗವರ್ಮನ ಗುಣ ವರ್ಮನ ಶಂಖವರ್ಮನಧ್ವಾನಂಗಳ್' ಎಂಬ ಕಾವ್ಯಾವಲೋಕನದ (೧೮೫) ಪದ್ಯ ಭಾಗದಲ್ಲಿ ಮೊದಲನೆಯ ನಾಗವರ್ಮ, ಮೊದಲನೆಯ ಗುಣವರ್ಮ, ಶಂಖವರ್ಮ ಇವರ ಹೆಸರುಗಳನ್ನು ಎತ್ತಿರುವನೆಂದು ಊಹಿಸಲಾಗಿದೆ. ಹಾಗೂ ಕಾವ್ಯಾವಲೋಕನ, ಭಾಷಾಭೂಷಣಗಳಲ್ಲಿ ಪೊನ್ನ, ರನ್ನ, ಹಂಸರಾಜ, ನಾಗಚಂದ್ರ (ಅಭಿನವಪಂಪ) ಮೊದಲಾದವರ ಪದ್ಯಗಳೂ ಉದಾಹೃತವಾಗಿವೆ.

ಕಾವ್ಯಾವಲೋಕನದ ಕೊನೆಯಲ್ಲಿ 'ಛಂದೋವಿಚಿತಿಯಲಂಕೃತಿ ಸಂದಭಿಧಾನ .... ಕೋಶಮೆಂಬಿವು .... ನಾಗವರ್ಮನ ಕೃತಿಗಳ್' ಎಂಬ ಪದ್ಯದಿಂದ ಈತನು ಕಾವ್ಯಾವಲೋಕನವೆಂಬ ಅಲಂಕೃತಿಗ್ರಂಥವಲ್ಲದೆ ಛಂದೋವಿಚಿತಿ ಎಂಬ ಒಂದು

ಛಂದಶ್ಶಾಸ್ತ್ರವನ್ನೂ ಅಭಿಧಾನವಸ್ತುಕೋಶವೆಂಬ ಕೋಶಗ್ರಂಥವನ್ನೂ ರಚಿಸಿರುವ ನೆಂದು ತಿಳಿದುಬರುತ್ತದೆ. ಇವುಗಳಲ್ಲದೆ ಕನ್ನಡಭಾಷೆಯ ವ್ಯಾಕರಣಗ್ರಂಥವನ್ನು — ಕಾವ್ಯಾವಲೋಕನದ ಪ್ರಥಮಾಧಿಕರಣವಾದ ಶಬ್ದಸ್ಮೃತಿಯಲ್ಲಿ ಹೇಳಿದ ವಿಷಯ ಗಳನ್ನೇ ವಿಸ್ತರಿಸಿ — ಕರ್ಣಾಟಕಭಾಷಾಭೂಷಣವೆಂಬ ಹೆಸರಿನಿಂದ ಸಂಸ್ಕೃತದಲ್ಲಿ ರಚಿಸಿರುವನು.

ಛಂದೋವಿಚಿತಿ ಎಂಬ ಗ್ರಂಥವು ಈಗ ಉಪಲಬ್ಧವಿಲ್ಲ. ಮೊದಲನೆಯ ನಾಗವರ್ಮನು ಬರೆದಿರಬಹುದೆಂದು ಊಹಿಸಲಾದ — ಈಗ ಪ್ರಚಾರದಲ್ಲಿರುವ ಛಂದೋಂಬುಧಿಯಲ್ಲಿ ಒಂದೇ ಲಕ್ಷಣವನ್ನು ಹೇಳುವ ಅನೇಕ ಪದ್ಯಗಳು ಒಂದೇ ಎಡೆಯಲ್ಲಿ ದೊರೆಯುವುದರಿಂದಲೂ ಗಿರಿಜಾಕಲ್ಯಾಣ ಮೊದಲಾದ ಇತ್ತೀಚಿನ ಕಾವ್ಯ ಗಳೊಳಗಿನ ಪದ್ಯಗಳು ಅದರಲ್ಲಿ ಸಿಕ್ಕುವುದರಿಂದಲೂ ಅದರ ಕೆಲವು ಹಸ್ತಪ್ರತಿಗಳ ಪ್ರಕರಣಾಂತದ ಗದ್ಯದಲ್ಲಿ 'ಭಗವದರ್ಹತ್ಪರಮೇಶ್ವರ' ಎಂದೂ ಬೇರೆ ಕೆಲವುಗಳಲ್ಲಿ 'ಭಗವದ್‌ಭವಾನೀವಲ್ಲಭ' ಎಂದೂ ಇರುವುದರಿಂದಲೂ ಛಂದಶ್ಶಾಸ್ತ್ರವನ್ನು ಹೇಳುವ ಬೇರೆಬೇರೆ ಕೃತಿಗಳು ಅದರಲ್ಲಿ ಬೆರೆತು ಈಗಿನ ರೂಪವನ್ನು ಹೊಂದಿರಬೇಕೆಂಬ ಊಹೆಗೆ ಆಸ್ಪದವಿದೆ. ವಸ್ತುಕೋಶದ ಕೊನೆಯ ಪದ್ಯವಾದ —

ಅತಿಬಾಣಂ ಹರಿಯಂತಧಃಕೃತಮಯೂರಂ ತಾರಕಾರಾತಿಯಂ
ತತಿಮಾಘಂ ಶಿಶಿರಾಂತ್ಯದಂತೆ ಸುರಪಪ್ರೋಚ್ಚಂಡಕೋದಂಡದಂ
ತೆ ತಿರೋಭೂತ ಗುಣಾಢ್ಯನಬ್ಜವನದಂತಾವಿರ್ಭವದ್ದಂಡಿ ಭಾ
ರತದಂತಾತ್ತಧನಂಜಯೈಕವಿಭವಂ ವಾಗ್ಗುಂಫದೊಳ್ ನಾಕಿಗಂ

ಎಂಬುದು ಛಂದೋಂಬುಧಿಯ ಕೊನೆಯಲ್ಲಿಯೂ (ಪುಟ ೮೬, ಪದ್ಯ ೨೬೭, ಕಾವ್ಯ ಕಲಾನಿಧಿಯ ಪ್ರತಿ) ದೊರೆಯುವುದರಿಂದ ಈ ಊಹೆಗೆ ಮತ್ತಷ್ಟು ಬಲಬರುತ್ತದೆ. ಈ ಊಹೆಯು ಸರಿಯಾಗಿದ್ದರೆ ನಾಗವರ್ಮನ ಛಂದೋವಿಚಿತಿಯೂ ಅದರಲ್ಲಿ ಸಮಾವೇಶವಾಗಿರಬಹುದೆಂದು ಕೆಲವರು ತರ್ಕಿಸುತ್ತಾರೆ. ಅಂತೂ ಇದು ಸಂಶೋಧನೆಗೆ ತಕ್ಕ ವಿಷಯ.

ವಸ್ತುಕೋಶವೆಂಬುದು ಕನ್ನಡದಲ್ಲಿ ಬಳಸುವ ಸಂಸ್ಕೃತ ಶಬ್ದಗಳಿಗೆ ಅರ್ಥ ವನ್ನು ಹೇಳುವ ನಿಘಂಟು; ಪದ್ಯರೂಪದಲ್ಲಿದೆ. ಇದನ್ನು ಮದ್ರಾಸ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಶಾಖೆಯವರು ೧೯೩೩ರಲ್ಲಿ ಪ್ರಕಟಿಸಿದ್ದಾರೆ. ಇದನ್ನು ವರರುಚಿ, ಭಾಗುರಿ, ಹಲಾಯುಧ, ಶಾಶ್ವತ, ಅಮರಸಿಂಹ ಮೊದಲಾದವರ ಕೋಶಗಳ ಆಧಾರದಿಂದ ಬರೆದಿರುವುದಾಗಿ ಕವಿಯು ಹೇಳಿದ್ದಾನೆ.

ಕರ್ಣಾಟಕಭಾಷಾಭೂಷಣವು ಸಂಸ್ಕೃತ ಸೂತ್ರವೃತ್ತಿಗಳಿಂದ ಕೂಡಿದ ಕನ್ನಡ ವ್ಯಾಕರಣ ಗ್ರಂಥ. ಇದರಲ್ಲಿ ಕನ್ನಡ ಪೂರ್ವಕವಿಗಳ ಗ್ರಂಥಗಳಿಂದ ಉದಾಹರಣೆಗಳಿರುವುವು. ಇದನ್ನು ರೈಸ ಸಾಹೇಬರು ೧೮೮೪ರಲ್ಲಿ ಪ್ರಕಟಿಸಿದರು. ಅದನ್ನೇ ಮತ್ತೆ ಸಂಸ್ಕರಿಸಿ ಹಳೆಯ ಒಂದು ಕನ್ನಡ ಟೀಕೆಯೊಡನೆ ದಿವಂಗತ ಆರ್. ನರಸಿಂಹಾಚಾರ್ಯರು ಮುದ್ರಿಸಿ ಕಾವ್ಯಾವಲೋಕನದೊಡನೆ ಒಂದೇ ಪುಸ್ತಕವಾಗಿ ಕಟ್ಟಿಸಿ ೧೯೦೩ರಲ್ಲಿ ಪ್ರಕಟಿಸಿದರು.

ಇನ್ನುಳಿದ ನಾಗವರ್ಮನ ಕೃತಿಯಾದ ಪ್ರಸ್ತುತಗ್ರಂಥವಾದ ಕಾವ್ಯಾವಲೋಕನವನ್ನು ವಿವೇಚಿಸುವ ಸಂದರ್ಭದಲ್ಲಿ ಕನ್ನಡದಲ್ಲಿ ಉಪಲಬ್ಧವಾಗುವ ಬೇರೆ ಅಲಂಕಾರ ಗ್ರಂಥಗಳನ್ನು ಕುರಿತು ಒಂದೆರಡು ಮಾತುಗಳನ್ನು ಹೇಳುವುದು ಅಪ್ರಸ್ತುತವಾಗಲಾರದು. ಕನ್ನಡದಲ್ಲಿ ಅಲಂಕಾರಶಾಸ್ತ್ರಕ್ಕೆ ಸಂಬಂಧಪಟ್ಟ ಗ್ರಂಥಗಳು ಅನೇಕವಾಗಿದ್ದರೂ ಅವು ಯಾವುವೂ ಸ್ವತಂತ್ರವಾಗಿ ರಚಿತವಾದುವುಗಳಲ್ಲ. ಸಂಸ್ಕೃತಗ್ರಂಥಗಳ ಅನುವಾದಗಳಾಗಲೀ ಅವುಗಳ ಆಧಾರದಿಂದ ರಚಿತವಾದುವುಗಳಾಗಲೀ ಆಗಿವೆ. ಇವುಗಳಲ್ಲಿ ನೃಪತುಂಗನ (೮೧೪-೮೭೭) ಹೆಸರಿನಿಂದ ಪ್ರಸಿದ್ಧವಾದ ಕವಿರಾಜಮಾರ್ಗವು ಮೊದಲನೆಯದಾಗಿದೆ. ಇದಲ್ಲದೆ ಸುಮಾರು ಕಾವ್ಯಾವಲೋಕನದ ಕಾಲಕ್ಕೆ ಹುಟ್ಟಿರಬಹುದಾದ ಉದಯಾದಿತ್ಯಾಲಂಕಾರ, ಸುಮಾರು ೧೫೦೦ರಲ್ಲಿ ಹುಟ್ಟಿರಬಹುದಾದ ಮಾಧವಾಲಂಕಾರ ಎಂಬ ಇನ್ನೆರಡು ಗ್ರಂಥಗಳೂ ದೊರೆಯುತ್ತವೆ. ಈ ಮೂರೂ ಗ್ರಂಥಗಳಿಗೆ ದಂಡಿಯ (೭ನೆಯ ಶತಮಾನ) ಕಾವ್ಯಾದರ್ಶವೇ ಆಧಾರವಾಗಿದೆ. ಕವಿರಾಜಮಾರ್ಗವು ಪ್ರಾಯಶಃ ಕಾವ್ಯಾದರ್ಶದ ಅನುವಾದವಾಗಿದೆ. ಮಾಧವಾಲಂಕಾರವು ಅದರ ಭಾಷಾಂತರವೇ ಆಗಿದೆ. ಉದಯಾದಿತ್ಯಾಲಂಕಾರವು ೭೨ ಪದ್ಯಗಳುಳ್ಳ ಚಿಕ್ಕ ಗ್ರಂಥ. ಇದರಲ್ಲಿ ಕಾವ್ಯಭೇದ, ರೀತಿ, ರಸ, ಕಾವ್ಯಗುಣಗಳು, ೩೬ ಅರ್ಥಾಲಂಕಾರಗಳು, ಇವುಗಳ ಲಕ್ಷಣಗಳು, ವಿವೃತವಾಗಿವೆ; ಮತ್ತೂ ಲಕ್ಷ್ಯ-ಲಕ್ಷಣಗಳು ಬಹುತರವಾಗಿ ಒಂದೇ ಪದ್ಯದಲ್ಲಿ ಹೇಳಲಾಗಿವೆ.

ಮುಂದೆ ಮೈಸೂರ ಚಿಕದೇವರಾಯನ ಕಾಲದಲ್ಲಿ ತಿರುಮಲಾರ್ಯನು (೧೬೪೫-೧೭೦೬) ಅಪ್ರತಿಮವೀರಚರಿತೆಯನ್ನೂ ಶಿರಸಂಗಿಯ ಜಾಯಗೊಂಡ ದೇಸಾಯಿಯು (೧೭೧೨-೧೭೬೧) ಕನ್ನಡ ಕುವಲಯಾನಂದವನ್ನೂ ಅಳಿಯ ಲಿಂಗರಾಜನು (೧೮೨೩-೧೮೭೪) ನರಪತಿಚರಿತವನ್ನೂ ಬರೆದಿದ್ದಾರೆ. ಇವುಗಳಲ್ಲಿ ಅಪ್ರತಿಮವೀರಚರಿತ-ನರಪತಿಚರಿತಗಳು ಚಂಪೂರೂಪದಲ್ಲಿರುವುವು. ಮೊದಲನೆಯದರಲ್ಲಿ ಉದಾಹರಣಪದ್ಯಗಳು ಚಿಕದೇವರಾಯನ ಸ್ತುತಿರೂಪವಾಗಿಯೂ ಎರಡನೆಯದರಲ್ಲಿ ಮುಮ್ಮಡಿ ಕೃಷ್ಣರಾಜನ ಸ್ತುತಿರೂಪವಾಗಿಯೂ

ಇರುವುವು. ಇವುಗಳಲ್ಲಿ ಬರುವ ಅರ್ಥಾಲಂಕಾರಗಳಿಗೆ ಸಂಬಂಧಪಟ್ಟ ಅಂಶಗಳಿಗೆಲ್ಲಾ ಅಪ್ಪಯದೀಕ್ಷಿತನ (೧೬ ನೆಯ ಶತಮಾನದ ಕೊನೆ) ಕುವಲಯಾನಂದವೇ ಮುಖ್ಯ ಆಧಾರವಾಗಿದೆ. ಜಾಯಗೊಂಡನ ಕೃತಿಯು ಕುವಲಯಾನಂದದ ಸಂಗ್ರಹರೂಪದ ಭಾಷಾಂತರವೇ ಆಗಿದೆ. ಇದು ಬಹುತರವಾಗಿ ಬೇರೆಬೇರೆ ಷಟ್ಪದಿಗಳಲ್ಲಿ ಬರೆಯಲ್ಪಟ್ಟಿದೆ. ಅಲ್ಲಲ್ಲಿ ವಿವರಣೆಗಳು ಗದ್ಯದಲ್ಲಿ ಬರುತ್ತವೆ. ಇದರಲ್ಲಿ ೧೦೧ ಅರ್ಥಾಲಂಕಾರಗಳಿದ್ದು ಪ್ರತಿಯೊಂದಕ್ಕೂ ಮೂರು ಮೂರು ಉದಾಹರಣೆಗಳನ್ನು ಕೊಟ್ಟಿರುವನು. ಇದರಲ್ಲಿಯ ಉದಾಹರಣೆಗಳು ಚಾಯಣಭಾರತ, ಚಿತ್ರಭಾರತ, ಜೈಮಿನಿಭಾರತ, ಭಾವಚಿಂತಾರತ್ನ ಮೊದಲಾದ 'ವರ್ಣಕ' ಕಾವ್ಯಗಳೊಳಗಿನವು.

ಸುಮಾರು ೧೨೦೦ ರಲ್ಲಿ ಕವಿಕಾಮನಿಂದ ರಚಿತವಾದ ಶೃಂಗಾರರತ್ನಾಕರವೂ -ಇದಕ್ಕೆ ರಸವಿವೇಕವೆಂದೂ ಹೆಸರುಂಟು-ಸುಮಾರು ೧೫೫೦ ರಲ್ಲಿ ಸಾಳ್ವನಿಂದ ರಚಿತವಾದ ರಸರತ್ನಾಕರವೂ ೧೬೦೦ರ ಸುಮಾರಿಗೆ ರಚಿತವಾದ ತಿಮ್ಮನ ನವರಸಾಲಂಕಾರವೂ ಸುಮಾರು ೧೬೫೪ರಲ್ಲಿ ರಚಿತವಾಗಿರಬಹುದಾದ ಶಿರಸಂಗಿಯ ಜಾಯಗೊಂಡ ದೇಸಾಯಿಯ ರಸಮಂಜರಿ ಅಥವಾ ಶೃಂಗಾರತಿಲಕವೂ ರಸಕ್ಕೆ ಸಂಬಂಧಿಸಿದ ವಿಷಯಗಳನ್ನು ಪ್ರತಿಪಾದಿಸುವ ಗ್ರಂಥಗಳಾಗಿವೆ. ಸಾಳ್ವ-ತಿಮ್ಮರಿಬ್ಬರೂ ಕವಿಕಾಮ, ನಾಗವರ್ಮ ಇವರ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡಿದ್ದಾರೆ. ಸಾಳ್ವನು ಶಾರದಾವಿಲಾಸವೆಂಬ ಇನ್ನೊಂದು ಗ್ರಂಥವನ್ನೂ ಬರೆದಂತೆ ತೋರುತ್ತದೆ. ಇದರಲ್ಲಿ ಧ್ವನಿಗೆ ಸಂಬಂಧಪಟ್ಟ ವಿಷಯಗಳು ಪ್ರತಿಪಾದಿತವಾಗಿರಬೇಕೆಂಬುದು ಈಗ ಉಪಲಬ್ಧವಾಗಿರುವ ಇದರ ಎರಡನೆಯ ಆಶ್ವಾಸದಿಂದ ಊಹಿಸಬಹುದಾಗಿದೆ.

ಮೇಲೆ ವಿವರಿಸಿದಂತೆ ಕನ್ನಡದಲ್ಲಿ ಅಲಂಕಾರಗ್ರಂಥಗಳು ಅನೇಕವಾಗಿದ್ದರೂ ಅಲಂಕಾರಶಾಸ್ತ್ರದಲ್ಲಿ ಸಮಾವೇಶವಾಗುವ ಎಲ್ಲ ವಿಷಯಗಳನ್ನು ವಿವೇಚಿಸುವ ಗ್ರಂಥವು ನಾಗವರ್ಮನ ಕಾವ್ಯಾವಲೋಕನವೊಂದೇಯಾಗಿರುವುದರಿಂದ ಕನ್ನಡ ಸಾಹಿತ್ಯದಲ್ಲಿ ಇದರ ಮಹತ್ತ್ವವು ವಿಶೇಷವಾಗಿರುವುದು. ಇದರ ಮೊದಲನೆಯ ಅಧಿಕರಣವಾದ ಶಬ್ದಸ್ಮೃತಿಯಲ್ಲಿ ನಾಗವರ್ಮನು ಕನ್ನಡನುಡಿಯ ವ್ಯಾಕರಣವನ್ನು ಶಾಸ್ತ್ರೀಯವಾಗಿ ವಿವೇಚಿಸಿದ್ದಾನೆ. ಕವಿರಾಜಮಾರ್ಗದಲ್ಲಿ ವ್ಯಾಕರಣಕ್ಕೆ ಸಂಬಂಧಿಸಿದ ವಿಷಯಗಳು ಪ್ರಾಸಂಗಿಕವಾಗಿ ಅಲ್ಲಲ್ಲಿ ಬರುವುವೇ ಹೊರತು ಸಂಪೂರ್ಣ ವಿವೇಚನೆಯು ದೊರೆಯುವುದಿಲ್ಲ. ಆದುದರಿಂದ ಶಬ್ದಸ್ಮೃತಿಯೇ ಮೊದಲನೆಯ ಕನ್ನಡ ವ್ಯಾಕರಣ ಗ್ರಂಥವೆಂಬುದರಲ್ಲಿ ಸಂದೇಹವಿಲ್ಲ. ಇದಕ್ಕೆ ಯಾವದೇ ಆಧಾರಗ್ರಂಥವನ್ನು ಕವಿಯು ಹೇಳಿಲ್ಲವಾದುದರಿಂದ ಇದು ಸ್ವತಂತ್ರವಾಗಿಯೇ ರಚಿತವಾಗಿರಬೇಕು.

ಕಾವ್ಯಾವಲೋಕನದ ಉಳಿದ ನಾಲ್ಕು ಅಧಿಕರಣಗಳಲ್ಲಿ ಅಲಂಕಾರಶಾಸ್ತ್ರದ ವಿಷಯಗಳೇ ವಿವೇಚಿತವಾಗಿವೆ. ಇದಕ್ಕೆಲ್ಲಾ ಸಂಸ್ಕೃತ ಆಲಂಕಾರಿಕರ ಗ್ರಂಥಗಳೇ

ಆಧಾರವಾಗಿರುವುವು. ಅವರಲ್ಲಿ ೭ನೆಯ ಶತಮಾನದವರಾದ ದಂಡಿ-ಭಾಮಹರ, ೮ನೆಯ ಶತಮಾನದವನಾದ ವಾಮನನ, ೯ ನೆಯ ಶತಮಾನದವನಾದ ರುದ್ರಟನ ಹೆಸರುಗಳನ್ನು ಈ ಗ್ರಂಥದ ೯೬೧ನೆಯ ಪದ್ಯದಲ್ಲಿ ಹೇಳಿದ್ದಾನೆ. ಇವರಲ್ಲದೆ ಭರತ (೧ನೆಯ ಶತಮಾನ), ಹೇಮಚಂದ್ರ (೧೦೮೮-೧೧೭೩) ಇವರ ಗ್ರಂಥಗಳನ್ನೂ ಆಧಾರ ವಾಗಿಟ್ಟುಕೊಂಡಂತೆ ಊಹಿಸಬಹುದು. ಇದರ ಎರಡನೆಯ ಮತ್ತು ಮೂರನೆಯ ಅಧಿಕರಣಗಳಾದ ಕಾವ್ಯಮಲವ್ಯಾವೃತ್ತಿ-ಗುಣವಿವೇಕಗಳಿಗೆ ಭಾಮಹ, ದಂಡಿ, ವಾಮನ, ರುದ್ರಟ ಇವರ ಗ್ರಂಥಗಳು ಆಧಾರಗಳಾಗಿವೆ. ಅದರಲ್ಲಿಯೂ ದಂಡಿ ಮತ್ತು ರುದ್ರಟರ ಗ್ರಂಥಗಳ ಉಪಯೋಗವನ್ನು ಹೆಚ್ಚಾಗಿ ಮಾಡಿಕೊಂಡಂತೆ ತೋರುತ್ತದೆ. ನಾಲ್ಕನೆಯ ಅಧಿಕರಣದಲ್ಲಿ ಈ ಆಲಂಕಾರಿಕರಲ್ಲದೆ ಹೇಮಚಂದ್ರನ ಕಾವ್ಯಾನು ಶಾಸನವನ್ನು ಉಪಯೋಗಿಸಿರಬಹುದೆಂದು ಕಂಡುಬರುತ್ತದೆ. ಐದನೆಯ ಅಧಿಕರಣದ ಮುಖ್ಯ ಭಾಗವಾದ ಕವಿಸಮಯದ ವಿಷಯವನ್ನು ಹೇಮಚಂದ್ರನ ಗ್ರಂಥದಿಂದಲೇ ಸಂಗ್ರಹಿಸಿದ್ದಾನೆಂದು ಹೇಳಬಹುದು. ಸಂಸ್ಕೃತದಲ್ಲಿ ಕವಿಸಮಯವನ್ನು ವಿವೇಚಿಸುವ ಗ್ರಂಥಗಳಲ್ಲಿ ರಾಜಶೇಖರನ (೧೦ ನೆಯ ಶತಮಾನ) ಕಾವ್ಯಮೀಮಾಂಸೆಯೇ ಮೊದಲನೆಯದಾದರೂ ಕಾವ್ಯಾವಲೋಕನದಲ್ಲಿಯ ವಿಷಯವಿವೇಚನೆಯ ಪದ್ಧತಿಯು ಹೇಮಚಂದ್ರನ ಅನುಸಾರವಾಗಿರುವುದರಿಂದ ಕಾವ್ಯಾನುಶಾಸನವನ್ನೇ ನಾಗವರ್ಮನು ಆಧಾರವಾಗಿಟ್ಟುಕೊಂಡಿದ್ದನೆಂದು ಹೇಳಬೇಕಾಗುವುದು. ಸಂಸ್ಕೃತ ದಲ್ಲಿ ಕವಿಸಮಯವನ್ನು ಕುರಿತು ಬರೆದ ಅಮರಚಂದ್ರ, ವಾಗ್ಭಟ ಮೊದಲಾದವರು ನಾಗವರ್ಮನ ತರುವಾಯದ ಕಾಲದವರಿರಬೇಕೆಂದು ಇತ್ತೀಚಿನ ಶೋಧಗಳಿಂದ ಕಂಡುಬರುತ್ತದೆ.

ನಾಗವರ್ಮನಿಗಿಂತ ಮೂರು-ನಾಲ್ಕು ಶತಮಾನಗಳ ಹಿಂದೆಯೇ ಹುಟ್ಟಿದ ಕವಿರಾಜಮಾರ್ಗದ ಹೆಸರನ್ನು ನಾಗವರ್ಮನು ಹೇಳಿಲ್ಲ. ಈ ಎರಡೂ ಗ್ರಂಥಗಳಲ್ಲಿ ವಿವೇಚಿತವಾದ ವಿಷಯವು ಒಂದೇಯಾಗಿರುವುದರಿಂದಲೂ ಎರಡಕ್ಕೂ ದಂಡಿಯ ಕಾವ್ಯಾದರ್ಶವು ಬಹುಮಟ್ಟಿಗೆ ಆಧಾರವಾಗಿರುವುದರಿಂದಲೂ ಇವೆರಡರಲ್ಲಿಯೂ ಅನೇಕ ಸಾಮ್ಯಗಳು ಕಂಡುಬರುತ್ತವೆ. ಆದರೆ ವ್ಯಾಕರಣಕ್ಕೆ ಸಂಬಂಧಿಸಿದ ಒಂದೆರಡು ವಿಷಯಗಳಲ್ಲಿಯೂ ಕನ್ನಡಕಾವ್ಯಗಳ ಭೇದಗಳನ್ನು ಹೇಳುವಲ್ಲಿಯೂ ಇವೆರಡ ರಲ್ಲಿಯ ಹೋಲಿಕೆಗಳು ಅತ್ಯಂತ ನಿಕಟವಾಗಿರುವುದರಿಂದ ನಾಗವರ್ಮನು ಕವಿರಾಜ ಮಾರ್ಗವನ್ನು ನೋಡಿದ್ದರೂ ನೋಡಿರಬಹುದೆಂಬ ಊಹೆಗೆ ಎಡೆಯುಂಟು; ಆದರೆ ಆ ಗ್ರಂಥದಿಂದ ಉದಾಹರಣೆಗಳನ್ನು ತೆಗೆದುಕೊಂಡಿಲ್ಲ.

ಕನ್ನಡಕ್ಕೆ ನಾಗವರ್ಮನಿಂದ ಅನೇಕ ರೀತಿಯಾಗಿ ಉಪಕಾರವಾಗಿರುವುದ ರಿಂದ ಅವನಿಗೆ ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟಸ್ಥಾನವಿದೆಯೆನ್ನಬಹುದು. ಕನ್ನಡ

ಸುಡಿಗೆ ವ್ಯಾಕರಣವನ್ನು ಕನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ಇವನೇ ಮೊದಲು ಬರೆದನು. ಕೇಶಿರಾಜನ ಶಬ್ದಮಣಿದರ್ಪಣವು (ಸೂ. ೧೨೬೦) ಇವನ ಶಬ್ದ ಸ್ಮೃತಿಯ ಆಧಾರದಿಂದಲೇ ಹೆಚ್ಚು ವಿಸ್ತಾರವಾಗಿ ರಚಿತವಾಗಿದೆ. ಅದರಲ್ಲಿಯ ಅನೇಕ ಉದಾಹರಣೆಗಳು ಕಾವ್ಯಾವಲೋಕನದಿಂದಲೇ ಎತ್ತಿಕೊಂಡುವುಗಳಾಗಿವೆ. ಕನ್ನಡ ಭಾಷೆಯ ವ್ಯಾಕರಣವನ್ನು ವಿಸ್ತಾರವಾಗಿ ಪ್ರತಿಪಾದಿಸುವ ಸಂಸ್ಕೃತ ಗ್ರಂಥ ವಾದ ಭಟ್ಟಾಕಲಂಕನ (೧೭ನೆಯ ಶತಮಾನ) ಶಬ್ದಾನುಶಾಸನಕ್ಕೂ ನಾಗವರ್ಮನ ಗ್ರಂಥಗಳು ಮಾದರಿಯಾಗಿವೆ. ಸಾಳ್ವನು ರಸರತ್ನಾಕರವೆಂಬ ತನ್ನ ಗ್ರಂಥಕ್ಕೆ ಕಾವ್ಯಾವಲೋಕನದ ರಸಪ್ರಕರಣವು ಆಧಾರವೆಂದು ಕಂಠೋಕ್ತವಾಗಿ ಹೇಳಿದ್ದಾನೆ. ಕವಿಸಮಯದ ವಿಷಯಕ್ಕೆ ಕಾವ್ಯಾವಲೋಕನದ ಹೊರತು ಇನ್ನಾವ ಗ್ರಂಥವೂ ಕನ್ನಡದಲ್ಲಿ ಉಪಲಬ್ಧವಿಲ್ಲ. ಇವನ ವಸ್ತುಕೋಶಕ್ಕಿಂತ ಮೊದಲು ಇನ್ನಾವ ನಿಘಂಟೂ ಕನ್ನಡದಲ್ಲಿ ಇದ್ದಂತೆ ಕಾಣುವುದಿಲ್ಲ. ಇದನ್ನು ಅನುಸರಿಸಿಯೇ ಮಂಗರಾಜನು (೧೩೯೮) ಅಭಿನವನಿಘಂಟು ಅಥವಾ ಮಂಗಾಭಿಧಾನವೆಂಬ ಕೋಶವನ್ನೂ ದೇವೋ ತ್ತಮನು (ಸು. ೧೬೦೦) ನಾನಾರ್ಥರತ್ನಾಕರವನ್ನೂ ಬರೆದುದಾಗಿ ಹೇಳಿಕೊಂಡಿ ದ್ದಾರೆ. ನಾಗವರ್ಮನನ್ನು ಆಚಣ್ಣ, ಜನ್ನ, ಸಾಳ್ವ, ಮೊದಲಾದವರು ಸ್ತುತಿಸಿದ್ದಾರೆ. ಈತನಿಗೆ ಅಭಿನವಶರ್ವವರ್ಮ, ಕವಿಕರ್ಣಪೂರ, ಕವಿತಾಗುಣೋದಯ, ಕವಿಕಂಠಾ ಭರಣ ಎಂಬ ಬಿರುದುಗಳಿದ್ದಂತೆ ಇವನ ಗ್ರಂಥಗಳಿಂದಲೇ ಕಂಡುಬರುತ್ತದೆ. ಈತನು ಘನವಿದ್ವಾಂಸನೂ ಸರಸಕವಿಯೂ ಆಗಿದ್ದನೆಂಬುದು ಇವನ ಕೃತಿಗಳಿಂದಲೇ ಕಂಡು ಬರುತ್ತದೆ. ಕಾವ್ಯಾವಲೋಕನದಲ್ಲಿ ಉದಾಹರಣೆಗೆಂದು ಕೊಟ್ಟ ಅನೇಕ ಪದ್ಯಗಳು ಸಂಸ್ಕೃತ ಪ್ರಸಿದ್ಧ ಕವಿಗಳ ಪದ್ಯಗಳ ಸರಸವಾದ ಅನುವಾದಗಳಾಗಿದ್ದು ನಾಗವರ್ಮ ನಿಂದಲೇ ಕನ್ನಡಿಸಲ್ಪಟ್ಟಿರುವುವೆಂದು ಊಹಿಸಬಹುದಾಗಿದೆ.

ಮೂಲದಲ್ಲಿ ಪ್ರಸಿದ್ಧಕನ್ನಡ ಪುರಾತನ ಗ್ರಂಥಗಳಿಂದ ನಾಗವರ್ಮನು ಎತ್ತಿಕೊಂಡಿ ರುವ ಉದಾಹರಣೆಗಳ ಕೆಳಗೆ ಸಣ್ಣ ಅಕ್ಷರಗಳಲ್ಲಿ ಆಯಾ ಕವಿಗಳ ಮತ್ತು ಅವರ ಗ್ರಂಥಗಳ ಹೆಸರುಗಳನ್ನು ಆಶ್ವಾಸ ಮತ್ತು ಪದ್ಯಸಂಖ್ಯೆಗಳೊಡನೆ ಕೊಟ್ಟಿರುವೆವು. ಶಬ್ದಸ್ಮೃತಿಭಾಗದ ಉದಾಹರಣೆಗಳ ಮೇಲೆ ಆಯಾ ಉದಾಹರಣೆಗಳಲ್ಲಿರುವ ವ್ಯಾಕರಣವಿಶೇಷಗಳನ್ನು ನಿರ್ದೇಶಿಸಿದೆ. ಅಂತಹ ಕಡೆಗಳಲ್ಲಿ ಕಂಸದಲ್ಲಿ ಹಾಕಿರುವ ಶಬ್ದಗಳು ಸಂಪಾದಕರವು. ಟಿಪ್ಪಣಿಗಳಲ್ಲಿ ಕಾವ್ಯಾವಲೋಕನದ ಸೂತ್ರಸಂಖ್ಯೆಯ ಕೆಳಗೆ ಸಣ್ಣ ಅಕ್ಷರಗಳಲ್ಲಿ ಬೇರೆ ಬೇರೆ ಗ್ರಂಥಗಳಲ್ಲಿ ದೊರೆಯುವ ಸಂವಾದಿ ಸೂತ್ರಗಳ ಸಂಖ್ಯೆಯನ್ನು ಕೊಟ್ಟಿದೆ. ಕಾವ್ಯಾವಲೋಕನದ ಉದಾಹರಣಪದ್ಯಗಳಲ್ಲಿ ಶಬ್ದ ಮಣಿದರ್ಪಣ, ಕರ್ಣಾಟಕಭಾಷಾಭೂಷಣ, ಶಬ್ದಾನುಶಾಸನಗಳಲ್ಲಿ ಉದಾಹೃತ ವಾದುವುಗಳನ್ನು ಟಿಪ್ಪಣಿಯಲ್ಲಿ ಪದ್ಯಸಂಖ್ಯೆಗಳ ಮುಂದೆ ಆಯಾ ಗ್ರಂಥಗಳನ್ನು

ಸೂತ್ರಸಂಖ್ಯೆಯೊಡನೆ ನಿರ್ದೇಶಿಸಲಾಗಿದೆ. ಅಲಂಕಾರಭಾಗಗಳಲ್ಲಿ (ಅಧಿಕರಣ ೨ ರಿಂದ ೫) ನಾಗವರ್ಮನು ಆಧಾರವಾಗಿಟ್ಟುಕೊಂಡಿರಬಹುದಾದ ಗ್ರಂಥಗಳ ಸೂತ್ರಗಳನ್ನು ಹೇಳಿರುವುದಲ್ಲದೆ ಅದೇ ವಿಷಯದಲ್ಲಿ ಗಣ್ಯರಾದ ಇತ್ತೀಚಿನ ಆಲಂಕಾರಿಕರ ಗ್ರಂಥಗಳೊಳಗಿನ ಸೂತ್ರಗಳ ಸಂಖ್ಯೆಗಳನ್ನೂ ಕೊಡಲಾಗಿದೆ. ಇದರಿಂದ ಆಯಾ ವಿಷಯಗಳನ್ನು ಆಳವಾಗಿ ತಿಳಿದುಕೊಳ್ಳಬೇಕೆನ್ನುವವರಿಗೆ ಅನುಕೂಲವಾಗಬಹುದೆಂದು ಆಶಿಸಲಾಗಿದೆ.

ಈ ಮುದ್ರಣದಲ್ಲಿ ನಾವು ಉಪಯೋಗಿಸಿದ ಮಾತೃಕೆಗಳ ಪಾಠಾಂತರಗಳನ್ನು ಕೊಡುವಾಗ ಮುಂದೆ ಕೊಟ್ಟ ಸಂಜ್ಞೆಗಳನ್ನು ಇಟ್ಟುಕೊಳ್ಳಲಾಗಿದೆ. ಮ-ಮದ್ರಾಸ ಪ್ರಾಚ್ಯಕೋಶಾಲಯದ ಅಪೂರ್ಣ ಪ್ರತಿ. ಮೈ– ಮೈಸೂರ ಪ್ರಾಚ್ಯಕೋಶಾಲಯದ ತಾಡವೋಲೆಯ ಪ್ರತಿ. ಕಾ– ೧೯೦೩ರಲ್ಲಿ ದಿವಂಗತ ರಾ. ಬ. ಆರ್. ನರಸಿಂಹಾಚಾರ್ಯರ ಸಂಪಾದಕತ್ವದಲ್ಲಿ ಮುದ್ರಿತ ಪ್ರತಿ. ನ- ಅದೇ ಗ್ರಂಥದ ಅಡಿಟಿಪ್ಪಣಿಗಳ ಪಾಠಾಂತರ. ಪ- ಅದೇ ಗ್ರಂಥದ ಪರಿಶಿಷ್ಟದಲ್ಲಿ ಕೊಟ್ಟ ಪಾಠಾಂತರ. ಪಾ- ಕಾವ್ಯಾವಲೋಕನದಲ್ಲಿ ಉದಾಹೃತವಾದ ಪೂರ್ವಕವಿಗಳ ಗ್ರಂಥಗಳ ಮುದ್ರಿತ ಪ್ರತಿಗಳಲ್ಲಿ ದೊರೆಯುವ ಪಾಠಾಂತರ. ದರ್ಪಣ — ಶಬ್ದಮಣಿದರ್ಪಣ. ಮ. ದರ್ಪಣ — ಶಬ್ದಮಣಿದರ್ಪಣದ ಮಂಗಳೂರ ಪ್ರತಿ. ಸಾ. ದರ್ಪಣ — ಶಬ್ದಮಣಿದರ್ಪಣದ ಸಾಹಿತ್ಯಪರಿಷತ್ತಿನ ಪ್ರತಿ.

★

ಅನುಕ್ರಮಣಿಕೆ

ಪ್ರಸ್ತಾವನೆ ೧- ೮

ಕಾವ್ಯಾವಲೋಕನಂ ೧-೨೧೭

೧. ಶಬ್ದಸ್ಮೃತ್ಯಧಿಕರಣಂ ೩- ೯೫
- ೧. ಸಂಜ್ಞಾಪ್ರಕರಣಂ ೩- ೮
- ೨. ಸಂಧಿಪ್ರಕರಣಂ ೯- ೨೧
- ೩. ನಾಮಪ್ರಕರಣಂ ೨೨- ೪೭
- ೪. ಸಮಾಸಪ್ರಕರಣಂ ೪೮- ೭೩
- ೫. ತದ್ಧಿತಪ್ರಕರಣಂ ೭೪- ೮೪
- ೬. ಆಖ್ಯಾತಪ್ರಕರಣಂ ೮೫- ೯೫

೨. ಕಾವ್ಯಮಲವ್ಯಾವೃತ್ತ್ಯಧಿಕರಣಂ ೯೭-೧೧೨
- ೧. ಪದಪದಾರ್ಥಸಂಧಿದೋಷವಿನಿಶ್ಚಯಪ್ರಕರಣಂ ೯೭-೧೦೨
- ೨. ವಾಕ್ಯವಾಕ್ಯಾರ್ಥದೋಷಾನುಕೀರ್ತನಪ್ರಕರಣಂ ೧೦೩-೧೧೨

೩. ಗುಣವಿವೇಕಾಧಿಕರಣಂ ೧೧೩-೧೭೨
- ೧. ಮಾರ್ಗವಿಭಾಗದರ್ಶನಪ್ರಕರಣಂ ೧೧೩-೧೧೮
- ೨. ಶಬ್ದಾಲಂಕಾರನಿರ್ಣಯಪ್ರಕರಣಂ ೧೧೯-೧೩೫
- ೩. ಅರ್ಥಾಲಂಕಾರಪ್ರಕರಣಂ ೧೩೬-೧೭೨

೪. ರೀತಿಕ್ರಮರಸನಿರೂಪಣಾಧಿಕರಣಂ ೧೭೩-೧೮೮
- ೧. ರೀತಿಪ್ರಕರಣಂ ೧೭೩-೧೭೬
- ೨. ರಸಪ್ರಕರಣಂ ೧೭೭-೧೮೮

೫. ಕವಿಸಮಯಾಧಿಕರಣಂ ೧೮೯-೨೧೭
- ೧. ಅಸದಖ್ಯಾತಿಪ್ರಕರಣಂ ೧೮೯-೧೯೪
- ೨. ಸದಕೀರ್ತನಪ್ರಕರಣಂ ೧೯೫-೧೯೮
- ೩. ನಿಯಮಾರ್ಥಪ್ರಕರಣಂ ೧೯೯-೨೦೨
- ೪. ಐಕ್ಯಪ್ರಕರಣಂ ೨೦೩-೨೧೭

ಟಿಪ್ಪಣಿಗಳು ೨೧೯-೩೫೨

ಪರಿಶಿಷ್ಟ ೧: ಪದ್ಯಗಳ ಅಕಾರಾದಿ ೧- ೧೫

ಪರಿಶಿಷ್ಟ ೨: ಪಾರಿಭಾಷಿಕಶಬ್ದಗಳ ಅಕಾರಾದಿ ೧೬- ೨೫

ಶುದ್ಧಾಶುದ್ಧಪತ್ರಿಕೆ

ಶ್ರೀ ವೀತರಾಗಾಯ ನಮಃ

ಕಾವ್ಯಾವಲೋಕನಂ

ಶ್ರೀವರ್ಧಮಾನ[೧]ನಾನತ[೧]
ದೇವಾಧಿಪ[೨]ಮಕುಟಕೋಟಿಘಟ್ಟಿತಚರಣಂ
ಕೇವಲವಿಬೋಧಲೋಚನ
ನಾ[೩]ವಗಮೊಲ್ದೀಗೆ ಕಾವ್ಯದೊಳ್ ನ[೩]ಮಗಱಿವಂ ೧

ಪರಮಾಗಮಮೂರ್ತಿ ಚರಾ
ಚರಲೋಕಾಲೋಕಸಂಪ್ರದಾಯಿನಿ ವಿಬುಧೋ
ತ್ಕರಮಾನಸಾಬ್ಜವಾಸಿನಿ
ಸರಸ್ವತೀದೇವಿ ವರದೆಯಕ್ಕೆಮಗೆಂದುಂ ೨

ಸಕಲಬುಧಸಮಿತಿ ನೆಱೆ[೪] ಕೊಂ
ಡು ಕೊನೆದು ನಲವಿಂದೆ ಕೀರ್ತಿಸುತ್ತಿರೆ ಮುದದಿಂ
ಸುಕರಮುದಾಗಿರೆ ಕರ್ಣಾ
ಟಕದಿಂ ಕಾವ್ಯಾವಲೋಕಮಂ ವಿರಚಿಸುವೆಂ ೩

ಕವಿಗಳ್ಗಿದು ಕೆಯ್ಗನ್ನಡಿ
ಕವಿತೆಗೆ ಬಾಱಿಸ್ಮೊದಲುದಾತ್ತವಾಗ್ದೇವತೆಗು
ದ್ಭವಹೇತುಕೋಶಗೃಹಮೆನೆ
ಭುವನದೊಳಿದು ಪರೆದು ನಿಲ್ವುದೊಂದಚ್ಚರಿಯೇ ೪

ಸಮುಚಿತಶಬ್ದಸ್ಮೃತಿ ಕಾ
ವ್ಯಮಲವ್ಯಾವೃತ್ತಿ ಗುಣವಿವೇಕಂ ರೀತಿ
ಕ್ರಮರಸನಿರೂಪಣಂ ಕವಿ
ಸಮಯಮುಮಿಂತಯ್ದುಮಿದ[೫]ಱೊಳಧಿಕರಣಂಗಳ್ ೫

೧-೧ ನವನತ (ನ) ೨ ಸುರ (ಮೈ) ೩-೩ ನಿಷ್ಕೃತಸಕಲತತ್ತ್ವನೀಗೆ (ನ) ೪ ಕೈ (ಮೈ)
೫ ಮಿಪ (ಮ)

೧ ಶಬ್ದಸ್ಮೃತ್ಯಧಿಕರಣಂ

ಮಹಾಸ್ರಗ್ಧರೆ

ಪರಮಾರ್ಥಂ ಪೇೞಿಪಟ್ಟಿರ್ದಧಿಕರಣಮಿವಿಂತಯ್ದಱೊಳ್ ಶಬ್ದಸಿದ್ಧಿ
ಸ್ಮರಣ[೧]ಕ್ಕಾದ್ಯಕ್ಕುದಾತ್ತ[೧]ಪ್ರಕರಣಗಣನಾವೃತ್ತಿಯಿಂ ಪೊರ್ದಿ ನಿಲ್ಕುಂ
ತರದಿಂದಂ ಸಂಧಿ ನಾಮಸ್ಥಿತಿ ವಿತತಸಮಾಸಕ್ರಮಂ ತದ್ಧಿತಂ ವಿ
ಸ್ತರರೂಪಾಖ್ಯಾತಮಾಖ್ಯಾತಮುಮೆನೆ ದೊರೆವೆತ್ತಯ್ದುಮಧ್ಯಾಯವರ್ಗಂ ೬

೧ ಸಂಜ್ಞಾಪ್ರಕರಣಂ

ಸೂತ್ರಂ ೧

ಸ್ವರಮೊಂದುಂ ವ್ಯಂಜನ[೨]ಮೆಂ
ದೆ[೨]ರಡಕ್ಕುಂ ವರ್ಣಭೇದಮಾದ್ಯಕ್ಷರದಿಂ
ಬರೆ ಪದಿನಾಲ್ಕುಂ ಸ್ವರಮಿಂ[೩]
ಪರಿಶೇಷಂ ವ್ಯಂಜನಂಗಳರೆಮಾತ್ರಿಕೆಗಳ್ ೭

ಉದಾಹರಣೆ : ಸ್ವರಕ್ಕೆ :

೧ ನಿರುಪಮರಮೇಯ[೪]ಮಹಿಮರ್
ಚರಿತಾರ್ಥರ್ ಸ್ವಪ್ರಧಾನರಾದಿಪ್ರಭವರ್
ಸ್ವರದಂತಿರೆ ಪದಿನಾಲ್ವರ್
ಪರಿವಿಡಿಯಿಂ ಮನುಗಳಾದರಲ್ಲಿಂ ಬೞಿಯಿಂ[೫] ೮

ವ್ಯಂಜನಕ್ಕೆ :

೨ ಉದ್ಯೋತಿತವಿಶ್ವರ್ ಕೃತ
ವಿದ್ಯರ್ ಸೋಽಷ್ಮ[೬]ಪ್ರತಾಪರಖಿಲಾಂತಪದ[೭]
ಕ್ಕಾದ್ಯರ್ ವ್ಯಂಜನದಂತನ
ವದ್ಯರ್ ಮೂವತ್ತುಮೂವರಾದರ್ ದೇವರ್ ೯

೧-೧ ಕ್ಕಾದತ್ತುಪಾತ್ತ (ನ) ೨–೨ ಮೆರಡೆ (ಮ) ೩ ಮಿಾ (ಮ); ಮವು (ನ); ದಿಂ (ನ, ಮೈ)
೪ ರಮ್ಯಯ (ನ) ೫ ಬೞಿಯುಂ (ಮ, ಕಾ) ೬ ಸೋಷ್ಮ (ಮ, ನ) ೭ ಲಾಂತಸ್ಥ (ನ)

ಸೂತ್ರಂ ೨

ಸ್ವರದೊಳಗನೇಕಮಾತ್ರಾ[೧]
ನಿ[೨]ರತಂ ಹ್ರಸ್ವಂ ದ್ವಿಮಾತ್ರಮಂತದು[೨] ದೀರ್ಘಂ
ಪರಿವಿಡಿ[೩]ಯಿಂ ಮಾತ್ರಾತ್ರಯ
ಪರಿಗತಮಪ್ಪುದೆ ವಲಂ ಪ್ಲುತಂ ತಾನಕ್ಕುಂ[೪] ೧೦

ಉದಾಹರಣೆ :

ಪೊಕ್ಕಳಮೆಸೆದಿರ್ಪಿನಮೊಳ
ಪೊಕ್ಕುಚಿತಂ ಹ್ರಸ್ವದೀರ್ಘಸಹಿತಂ ಪ್ಲುತಮೆ
ಕ್ಕೆಕ್ಕೆಯೆ ನೆಗೞ್ದೊರ್ಮೊದಲೊಳೆ
ಕುಕ್ಕೂಕೂ ಎಂದು ಕೋೞಿ ಕೂಗಿದುವಾ[೫]ಗಳ್ ೧೧

ಸೂತ್ರಂ ೩

ಪರಿಹರಿಸೆ[೬]ಯುವರ್ಣಮನಾ
ಸ್ವರಂಗಳವು ನಾಮಿಯೆಂಬುವಕ್ಕುಂ ಸಂಧ್ಯ
ಕ್ಷರಮೆನೆ ಯಥಾರ್ಥದಿಂ[೭] ವ್ಯವ
ಹರಿಸುಗುಮೇಕಾರಮಾದಿಯಾಗಿರೆ ನಾಲ್ಕುಂ ೧೨

[೮]ಅವರ್ಣಸುಕ್ರಮಪ್ರಯೋಗಂ[೮] :

(ನಾಮಿಗಳ್ಗೆ) :

ಉಪೇಂದ್ರವಜ್ರವೃತ್ತಂ

೧ ಅವರ್ಣವಾದಕ್ಕೆಡೆಯಾಗದೊಳ್ಪಿಂ
ದವರ್ಣಿಕಾಮರ್ ಗುಣವೃದ್ಧಿಧರ್ಮರ್
ದಿವಾಕರರ್ ವ್ಯಾಕೃತಿನಾಮಿಗಳ್ವೋಲ್
ದಿವಕ್ಕೆ ಪನ್ನಿರ್ವರೆ ಮುಖ್ಯರಾದರ್ ೧೩

೧ ಮಾತ್ರಂ (ಮ) ೨–೨ ರಂತರಂ ಹ್ರಸ್ವಮಾ ದ್ವಿಮಾತ್ರಮೆ (ಮ) ೩ ಮಿತಿ (ನ) ೪ ನೆನಿಕುಂ (ನ) ೫ ದುದಾ (ಮ, ನ) ೬ ಸಿ (ಮ) ೭ ಯಥಾರ್ಥಕಂ (ನ) ೮–೮ ಅದು ಪ್ರಯೋಗಂ (ಮ) ೯ ದಾ (ಮ); ಕಾ (ನ)

(ಸಂಧ್ಯಕ್ಷರಂಗಳ್ಗೆ):

೨ ವರಸಂಧ್ಯಕ್ಷರದಂತಿರೆ
ಗುರು ದೀರ್ಘಂ ಗೂಢಸಂಧಿಯೆನೆ ತೋೞ್ ನಾಲ್ಕುಂ
ಕರಮೆಸೆದಿರ್ಕುಂ ಪದ್ಮೋ
ದರಂಗೆ ಚಕ್ರಾಸಿಶಂಖಶಾರ್ಙ್ಗಸಮೇತಂ ೧೪

ಸೂತ್ರಂ ೪

ಎಯ್ದೆ ಕಕಾರದಿನಿರ್ಪ
ತ್ತಯ್ದಕ್ಕರಮೆಯ್ದುವನ್ನೆಗಂ ಪರಿವಿಡಿಯಿಂ
ದಯ್ದಯ್ದುಗೆಯ್ದೆ ವರ್ಣದಿ
ನಯ್ದುಂ ವರ್ಗಂಗಳಕ್ಕುಮುೞಿದುವವರ್ಗಂ ೧೫

ಉದಾಹರಣೆ :

ವರ್ಗಾಕ್ಷರಮೆಂತಂತೆ ನಿ
ಸರ್ಗಕೃತಸ್ಪೃಷ್ಟಕರಣಮುಳವಡೆ ಹೃದಯಾಂ
ತರ್ಗತಮಾದುವು ಮನಸಿಜ
ಮಾರ್ಗಣಮಯ್ದುಂ ನೃಪಂಗೆ ತತ್ಸನ್ನಿಧಿಯೊಳ್ ೧೬

ಸೂತ್ರಂ ೫

ಅನುನಾಸಿಕಮಕ್ಕುಂ ಙ ಞ
ಣ ನ ಮಂಗಳೆ ಯ ವ ಲಮನನುನಾಸಿಕಮುಂ ಮ
ತ್ತನುನಾಸಿಕಮುಮವಕ್ಕುಂ
ಜನೋಕ್ತಿಯಿಂದಱಿವುದವಱ ವಿಷಯಾಂತರಮಂ ೧೭

ಉದಾಹರಣೆ : ಅನುನಾಸಿಕಕ್ಕೆ :

೧ ಬಿಜ್ಜಮೆತ್ತಿಸೆವಿಜ್ಜೆಯ
ಸಜ್ಜಳಮುನ್ನೊಣ್ಣಗೆಡೆವ ಶುಕಶಾರಿಕೆಯುಂ
ಸೊಜ್ಜ[1] ಬಲವನ್ನ ತೀಡುವ
ತೆಜ್ಜಣಗಾಳಿಯುಮದೇ[2]ಮ್ಮನಜ್ಜೊಳಿಸಿದುವೋ[3] ೧೮

೧ ಸೋಜ್ಜ (ಮ) ೨ ಮಿದೇಂ (ಕಾ); ಮಿವೇಂ (ಮೈ) ೩ ದೋ (ನ, ಮ)

ಯು ವ ಲಂಗಳ್ಗೆ :

೨ ಅಯ್ಯನೆನೆ ಬಳ್ಕಿ ತಾಮೆಂ
ದೊಯ್ಯನೆ ನುಡಿದೆಲ್ಬು[೧] ಗಿರಿಜೆ ಪೋಪುದು[೨] ಮಿತ್ತೇ
ನಯ್ಯ[೨] ನವಜಲದಕಂಠನ[೩]
ಜಯ್ಯಾತ್ಮಂ ನೆನೆದನಮಳಸುರಮುನಿವರರಂ[೪] ೧೯

೩ ಶ್ರುತಿಪದ್ಧತಿವೆರಸು ಸರ
ಸ್ವತಿಗಾ ಗಾಯತ್ರಿವೆರಸು ಸಾವಿತ್ರಿಗರುಂ
ಧೃತಿವೆರಸು ಸಪ್ತಋಷಿಯರ
ಕುತಪಕ್ಕೇಂ[೫] ಸೇವೆ ಸಾಮರವಮುಖರಮುಖಾ ೨೦

೪ ಕಲ್ಲೆನ್ನದೆ ಬೆಳೆದ ಪಸುಱ್
ಪುಱ್[೬]ಲ್ಲೆಂದಾಸೆಯೊಳೆ ಸಾರ್ದು ಮರಕತ[೭]ದೊಡ್ಡಂ
ಗಲ್ಲನೆ ಪಾಯ್ದು[೮] ಮೃಗಂಗಳ್
ಕಲ್ಲನೆ ಕನಲುತ್ತುಮಿರ್ಪುವೀ ಗಿರಿವರದೊಳ್ ೨೧
(ರನ್ನನ ಅಜಿತತೀರ್ಥಕರಪುರಾಣತಿಲಕಂ: ೯, ೨೨)

ಸೂತ್ರಂ ೬

ಲ ರ ಡಗ್ರಹಣದೆ ಳ ಱ ೞಾ
ಕ್ಷರಮುಕ್ಕುಂ ಪೀಡನಪ್ರಯತ್ನಾಶ್ರಯದಿಂ
ದೊರೆಕೊಂಡ ಸಂಖ್ಯೆಯೊಳಮನು
ಕರಣದೊಳಂ ವರ್ತಿಕುಂ ಮಹಾಪ್ರಾಣಂಗಳ್ ೨೨

ಉದಾಹರಣೆ : ಪೂರ್ವಾರ್ಧದೊಳ್ : (ಳಕಾರಕ್ಕೆ) :

೧ ಬೆಳಗುಗಳ ಬಳೆದ ಬಳಗದ
ಬಳಸುಗಳೊಳಗೊಳಗೆ ತೊಳಗಿ ಪೊಳೆಪೊಳೆದೊಳಗು
ಚ್ಚಳಿಸಿ ತಳತಳಿಸಿ[೯] ದೆಸೆಗಳ
ನಳುರ್ದುಸಿರೊಳ್[೧೦]ಕೆಳೆರ್ದು ಮಿಳಿರ್ದು ತಳರ್ದತ್ತಾಗಳ್ ೨೩

೧ ದಟ್ಟಿ (ನ,ಮು) ೨–೨ ಮಿತ್ತಾ।ದಯ್ಯ (ನ); ಮಿತ್ತಾ।ತಯ್ಯ (ಮೈ) ೩ ಕಂತುವ (ಮು, ಮೈ, ನ) ೪ ವರದಂ (ನ) ೫ ತಪಕ್ಕಂ (ನ) ೬ ಪು (ಮು, ಮೈ) ೭ ಮರಕದ (ಮು) ೮ ಸಾರ್ದು (ಮು); ಕಾಯ್ದು (ಕಾ); ಕಾರ್ದು (ನ) ೯ ತಳವಳಿಸಿ (ಮು) ೧೦ ರಲ್ (ದರ್ಪಣ)

('ಱ'ಕ್ಕೆ:)

೨ ತೊಱೆಗಳ ಪುಳಿನತಳಂಗಳ
ತೆಱೆಪುಗಳರೆದೆಱೆದು ಪ್ರೋಲ್ತುವೆರ್ದೆ[1]ದೆಱೆದಿರೆ ನಾ
ಣೆಱಕದಿನರೆದೆಱೆದೋಪಳ
ಮಿಱುಗುವ ಘನಜಘನತಳದ ತೆಱೆಪಿನ ತೆಱನಂ ೨೪

೩ ಮೊರೆದೆಱಗುವರಿಯ ಮಿಱುಗುವ
ಸರಲಂ [2]ಗಱಿವಿಡಿದು ಮೊನೆ[2]ವರಂ ನರನೆಡೆಯೊಳ್
ಪರಿದು[3] ಕಿಱಿಕಿಱಿದೆ ಕೆದಱಿರೆ[4]
ಸರಲೊಳೆ ಕೊಱೆಕೊಱೆದು ನೆಱೆಯೆ ಕುಱಿದಱಿದಱಿದಂ ೨೫

('ೞ'ಕ್ಕೆ:)

೪ ಕೞಲೆ ನುಡಿದೞಲೆ ಬಗ್ಗಿಸಿ
ಘೞಿಲೆನೆ ನಡೆಯೆಂದು ಜಡಿದು ಸಾರಥಿಯಂ ಪಾಂ
ಗೞಿದು ನಿಲಲೀಯದಲ್ಲಿಂ[5]
ದೆೞೆದುಯ್ವಂತುಯ್ದಳಾತ್ಮವರನಂ ನರನಂ[6] * ೨೬

ಅಪರಾರ್ಧದೊಳ್ : ಸಂಖ್ಯೆಗೆ :

ಮಣಿವಿಭೂಷಣವೃತ್ತಂ

೫ ನೇಸಱಂ ಪೆಱಗುಮಾಡಿ ಜಯಾವಹಮೆಂಬಿನಂ
ಬೀಸೆ ಬೆಂಬೞಿಯಿನೊಯ್ಯನೆ ಗಾಳಿ ರಣಾಜಿರೋ
ದ್ಭಾಸಿ ಫಲ್ಗುಣನ ಚೋದಿಸೆ ಭೋಂಕೆನೆ ನೂಱುನೂ
ರ್ಛಾಸಿರಂಗಳವೊಲಾಯ್ತು ರಥಂ ಕಡುವೇಗದಿಂ ೨೭

೧ ವೆಡೆ (ನ)
೨–೨ ಮೊನೆವಿಡಿದು ಗರಿ (ನ)
೩ ಪರೆದು (ಮ)
೪ ಕೆಡೆದಿರೆ (ನ)
೫ ದಳವಿಂ (ಮೈ)
೬ ಸ್ಮರನಂ (ಮೈ)
* ಈ ಪದ್ಯವು ಮದ್ರಾಸ ಪ್ರತಿಯಲ್ಲಿ ೨೫ನೆಯ ಪದ್ಯದ ಮೊದಲು ಬಂದಿದೆ.

ಅನುಕರಣಕ್ಕೆ :

ಉತ್ಪಲಮಾಲೆ

೬ ತ್ರ್ಯಂಬಕಲೋಚನಾರ್ಚಿಗಮಿದಗ್ಗಳಮೆಂಬಿನಮೇೞ್ಗೆಯೊಳ್ ಶಿಖಾ
ಡಂಬರಮೆಯ್ದ ನೀಳ್ದೊಳಗುಮಾಡೆ ನಿಶಾಟರನುಂಡನಗ್ನಿ ಘು
ಮ್ಮೆಂಬ ಛಟಚ್ಛಟೆಂಬ ಧಗ[೧]ಯೆಂಬ ಧಗದ್ಧಗಯೆಂಬ[೧] ಥಟ್ಟುಫೊ
ಟ್ಟೆಂಬ ರವಂ ಕಱುತ್ತಡಸಿ ಮೆಲ್ವ ಸರಕ್ಕನುಸಾರಿಯಪ್ಪಿನಂ ೨೮

ಸೂತ್ರಂ ೭

ನಿರತಂ[೨]ಪ್ರಕೃತಿಪ್ರತ್ಯಯ
ಮೆರಡುಮೊಡಂಬಟ್ಟು ತೋಱಿ ಪದಮೆನೆಪಡೆಗುಂ
ಪರವರ್ಣದೊಳೆಳಸಿಕ್ಕುಗಂ
ಸ್ವರರಹಿತವ್ಯಂಜನಂಗಳಾ[೩] ಸಂಹಿತೆಯೊಳ್ ೨೯

ಲಕ್ಷ್ಯಂ : (ಪದಕ್ಕೆ) :

ಗೇಯವೃತ್ತಂ

೧ ಇದ್ಧಂ
ಶುದ್ಧಂ
ಸಿದ್ಧಂ
ಬುದ್ಧಂ ೩೦

(ವ್ಯಂಜನಂಗಳ ಸಂಹಿತೆಗೆ) :

ನಾಗವೃತ್ತಂ

೨ ಎನ್ನೊಲ್ದು ಬೇಱ್ಪು
ದನ್ನೆಟ್ಟನೀ
ಗುನ್ನಾಲ್ವರೆಣ್ಬ
ರುನ್ನಾಗರೊಳ್ * ೩೧

ಇದು ಶಬ್ದಸ್ಮೃತಿಯೊಳ್ ಸಂಜ್ಞಾಪ್ರಕರಣಂ ಸಮಾಪ್ತಂ

೧–೧ ಲೆಂಬೆ ಧಗಲ್ಧಗಲೆಂಬ (ಮ) ೨ ನಿರುತಂ (ಮೈ) ೩ ಗಳವು (ಮೈ)

* ಎನ್ನೊಲ್ ಬೇಱ್ಪು।ದುಂ ನೆಟ್ಟನೆನಿಗೆ॥ನುನ್ನಾಪರೆಣ್ಬ।ರುನ್ನಾಗರೊಳ್ (ಮ, ನ).

೨ ಸಂಧಿಪ್ರಕರಣಂ

ಸೂತ್ರ ೮

ಸ್ವರಮಿರೆ ಪರದೊಳ್ ಪೂರ್ವ
ಸ್ವರಲೋಪಂ ಕೃತವಿಭಕ್ತಿಗಕ್ಕುಂ ಪ್ರಕೃತಿ
ಸ್ವರದೊಳುದೇದಂ[೧]ತಕ್ಕಾ
ಚರಿಸುವರವಿ[೨]ನಷ್ಟನಾಮಭಾಗಸ್ಥಿತಿಯೊಳ್ ೩೨

ಪ್ರಯೋಗಂ : **ಪೂರ್ವಾರ್ಧಕ್ಕೆ :**

ಸ್ರಗ್ಧರೆ

೧ ಎನ್ನಯ್ಯಂಗಕ್ಕುಮೆನ್ನಂ ನಡೆಪಿ[೩]ದತಿರಥಂಗಕ್ಕುಮೆನ್ನಾನೆಗಕ್ಕುಂ
ಮುನ್ನಾವೊಂ ಗಂಡನಿಂತಣ್ಮಿದನಿನಿತು ಭರಂಗೆಯ್ದು ನಿಂತೊಳ್ಳಿತೆಚ್ಚಂ
ತನ್ನೊಂದಾಯಕ್ಕೆ[೪] ಮಕ್ಕಳ್ಗಿನಿತು ಮುನಿದನೆಂದೆಲ್ಲಮಂ [೫]ಮೆಚ್ಚಿ ಸುತ್ತುಂ
ತನ್ನಂ[೫] ಪಾಯ್ವಂಬನಂಬಿಂ ಕಡಿದನೊಡನೆ ಮಾರ್ಕೊಂಡು ಗಾಂಡೀವಧನ್ವಂ

ಅಪರಾರ್ಧದೊಳ್: ಉ ಕಾರಾಂತಕ್ಕೆ :

ಮತ್ತೇಭವಿಕ್ರೀಡಿತಂ

೨ ಸೊವಡೊಂದೊಯ್ಯನೆ ಬಂದು ಪೊಯ್ಯೆ ಮುನಿಸಿಂದಾರಯ್ದು ಕೆಂಪುಣ್ಮೆ ಪೊ
ಣ್ಮುವಿನಂ ಬೆಚ್ಚನೆ[೬] ಬಿಟ್ಟ ದಿಟ್ಟಿಗಳಿ[೭]ನೆಯ್ತಂದೋವದಾವೇಗದಿಂ
ಕಿವಿಯಂ ನಿಚ್ಚಳಮಪ್ಪಿನಂ ತೆಱೆದು ನಿಂದೋರೊಂದಱೊಳ್ ತಾಗಿ ಪೋ
ರ್ವುವು ಕಾಡಾನೆಗಳೊರ್ಮೆಗೊರ್ಮೆ ಶಬರರ್ ಜೀಯಯ್ಯ ಭಾಷ್ಪೆಂ[೮]ಬಿನಂ

ಎ ಕಾರಾಂತಕ್ಕೆ :

ತರಳವೃತ್ತಂ

೩ ಪೊಗಟಲಾದುವು ನಾಲಗುಳ್ಳರ ಬಾಯ್ಗಳೀತನ ಚಾಗಮುಂ
ಪೊಗಟದಿರ್ಪುವೆ ಮುಚ್ಚದಾಂತ ಚತುರ್ಬಲಂ[೯]ಗಳ ಮೆಯ್ಗಳೊಳ್
ಬಗಿ[೧೦]ದಸುಂಗೊಳೆ ಸುಯ್ದು ಕೆತ್ತುವ ಪುಣ್ಣ ಬಾ[೧೧]ಯ್ಗಳೆ ಬೀರಮುಂ
ಪೊಗಟ್ವ ಬಾಯ್ಗಳೆನಿಪ್ಪುವಣ್ಮೆನ[೧೨] ಪೆಂಪು ಬೀರರ ಬೀರನಾ ೩೫

೧ ಳುವೇದಂ (ಮು) ೨ ರತಿ (ಮು) ೩ ನಡಸಿ (ಮೈ) ೪ ತನ್ನೌದಾರ್ಯಕ್ಕೆ (ನ)
೫–೫ ಮೆಚ್ಚುತುಂ ಸಂ।ಪನ್ನಂ (ಮು); ಮೆಚ್ಚುತುಂ ಸಂ।ಛನ್ನಂ (ನ, ಮೈ) ೬ ಬಿಚ್ಚನೆ
(ನ, ಮೈ) ೭ ದಿಟ್ಟಗಳ (ನ) ೮ ಭಾಪೆಂ (ನ) ೯ ಚತುರ್ವಲಂ (ಮು) ೧೦ ಬಿಗಿ (ನ)
೧೧ ವಾ (ಮು) ೧೨ ದಣ್ಮೆನೆ (ನ)

*ಅವಿನಷ್ಟನಾಮಭಾಗಕ್ಕೆ :

೪ ಪಟುವೇಕವಾಕ್ಯನಮಳಂ
ದಿಟಕ್ಕೆ ಕುಡಲಾರ್ಪ[೧]ನೆನಿಸಿದವನೀತಳದೊಳ್[೧]
ಅಟ[೨]ಮುಟಿಗಂ ಗಾಳುವಿವಂ[೩]
ಕುಟಿಲಂ ಲಂಪಟನೆನಿಪ್ಪವಂ[೪] ಮಾನಸನೇ ೩೬

ಸೂತ್ರಂ ೯

ಸವನಿಕುಮಾಕಾರಂ ಮೇ
ಣಿವರ್ಣಮೇಕಾರಮೆಂಬಿವರ್ಕೆ ಯಕಾರಂ
[೫]ವ್ಯವಧಾಯಕಂ ವೃವರ್ಣ[೫]
ಕ್ಕೆ ವಕಾರಂ ಸ್ವರಮುವಿದಿರೊಳಾಗೆ ಯಥೇಷ್ಟಂ ೩೭

ಉದಾಹರಣೆ: **ಪೂರ್ವಾರ್ಧಕ್ಕೆ: (ಅ ಕಾರಕ್ಕೆ) :**

೧ ಆಯಿರ್ದ ಮಾೞ್ಕೆಯೊಳೆ ಪರ
ಮಾಯುಷ್ಯಾಂತಂಬರಂ ನಿರಾಕುಳಮಾಗಿ
ಪಾರ್ಯಿರವಿನ ಜೈನಾಭಿ
ಪ್ರಾಯಂ ಪ್ರಾಯೋಪಗಮನ[೬]ದಿಂ ತೊಱೆಯಿಸಿದಂ[೬] ೩೮

(ಪಂಪನ ಆದಿಪುರಾಣ : ೨,೫೩)

(ಇ ಕಾರಕ್ಕೆ):

ಚಂಪಕಮಾಲೆ

೨ ಸುರಕರಿಯಿಲ್ಲಿಯಲ್ಲದವಗಾಹಮಿರಲ್ ಬಗೆದಾರದಾ ದಿಶಾ
ಕರಿಕುಳಮಿಲ್ಲಿಯಲ್ಲದೆ ವಿಹಾರಿಸಲೊಲ್ಲವು ದಿವ್ಯವಾಹನಂ
ಹರವೃಷಮಿಲ್ಲಿಯಲ್ಲದುಣಲೊಲ್ಲದು ನೀರನೊಱಲ್ದು ಮಾ ಮಹೇ
ಶ್ವರರೊಸೆದಿಲ್ಲಿಯಲ್ಲದಿರರೀ ತೆಱದಿಂ ನದಿ ದೇವತಾತ್ಮಕಂ ೩೯

೧-೧ ನೆನೆ ಜಸಂಬಡೆಗೆಳೆಯೊಳ್ (ನ) ೨ ಜಟ (ಮ) ೩ ವಿನಂ (ಮ) ೪ ನೆನಿಪ್ಪನುಂ (ನ) ೫-೫ ವ್ಯವಧಾರಯುಕಂ ಋತ್ವ (ಮ); ವ್ಯವಧಾಯಕಂ ಋವರ್ಣ (ವ್ಯೈ) ೬-೬ ಮಂ ನೋನಿಸಿದಂ (ನ, ಮ, ಸಾ. ದರ್ಪಣ) ; ದಿಂ ತೊರೆಯಿಸಿದಂ (ಪಾ)

* 'ವಿನಷ್ಟನಾಮಗುಣಕ್ಕೆ' ಎಂದು 'ಮ' ಪ್ರತಿಯಲ್ಲಿದೆ.

(ಈ ಕಾರಕ್ಕೆ) :

೩ ಸ್ತ್ರೀಯೆಂಬನಾಥೆಯೆಂಬ
ನ್ಯಾಯದ ಕೊಲೆಯೆಂಬ ದುರ್ಬಲಸ್ಯ ಬಲಂ[೧] ರಾ
ಜಾಯೆಂಬ ವಾಕ್ಯಮಂ [೨]ಮಱೆ
ದೀ[೨] ಯುವತಿಗೆ ಬಾಳ[೩]ನಿಂತು ಕೀೞ್ಪುದೆ[೩] ಮರುಳೇ ೪೦

ಉವರ್ಣ-ಋವರ್ಣಗಳ ವ ಕಾರಕ್ಕೆ :

(ಉ ಕಾರಕ್ಕೆ) :

೪ ವಿಧುವಿಲ್ಲದಿರುಳ್ ಕೆಲದೊಳ್[೪]
ವಧುವಿಲ್ಲದ ಲೀಲೆ ಮಧುರಮಧುವಿಲ್ಲದ ಪೂ
ದಧಿಯಿಲ್ಲದುಣಿಸದೇವುದೊ
ಬುಧರಿಲ್ಲದ ಸಭೆ ಸರಸ್ವತೀ[೫]ಮಣಿಹಾರಾ[೫] ೪೧

(ಋ ಕಾರಕ್ಕೆ) :

ಮಹಾಸ್ರಗ್ಧರೆ

೫ ಇವಳಂ ಶೃಂಗಾರಸಾರಂ ಕುಸುಮಶರನೆ ಮೇಣ್ ಮಾಡಿದಂ ಪ್ರೋಲ್ಲಸತ್ಪ
ಲ್ಲವಪುಷ್ಪಂ ಮೇಣ್ ಬಸಂತಂ ಬಯಸಿ ಪಡೆದನೆತ್ತಂ ಸುಧಾಸಾರಮಂ[೬] ಸೂ
ಸುವ ಚಂದ್ರಂ ತಾನೆ ಮೇಣ್ ಪುಟ್ಟಿಸಿದನತಿಜಡಂ ಛಾಂದಸಂ ಪದ್ಮಜಂ ನಿ
ಕ್ಕುವಮಲ್ಲಂ ಕರ್ತೃವಾದಂದಿ[೭]ನಿತತಿಶಯಮಂ ತಾಳ್ವುದೇ[೮] ಕನ್ನೆಯಂದಂ *

ಯಥೇಷ್ಟಗ್ರಹಣಕ್ಕೆ :

೬ ಆತನಯೆ ತೋರದೊಡೆಗಳಿ
ವಾತನ ನಿಡು[೯]ದೋಳೆ ನಡೆಯು[೯]ಮಾತನ ನಡೆ ದಲ್
ಮಾತೇನೊ ನೆಗಳ್ದ ನರ[೧೦]ನೆಂ
ಬಾತಂ ಪೆಱನಲ್ಲನೀತನಾಗಲೆವೇೞ್ಕುಂ ೪೩

೧ ಬಲೋ (ಮ, ಮೈ) ೨-೨ ಬಿಸುಟೇ (ನ,) ೩-೩ ನೆಂತು ಕೀೞ್ವುದು (ಮ) ೪ ತನ್ನಯೆ (ದರ್ಪಣ) ೫-೫ ಮುಖತಿಲಕಾ(ಪ, ದರ್ಪಣ) ೬ ಸೌಧಮಂ (ದರ್ಪಣ) ೭ ತಾನೆಂಬಿ (ದರ್ಪಣ) ೮ ತಾಳ್ದುದೀ (ಮ, ದರ್ಪಣ) ೯-೯ ದೋಳ್ಗೊಳೊಳದು (ನ) ೧೦ ವರ (ನ, ಮೈ)

* ಈ ಪದ್ಯವು 'ಮೈ' ಪ್ರತಿಯಲ್ಲಿ ೪೧ ನೆಯ ಪದ್ಯದ ಮೊದಲು ಬರೆದಿದೆ.

(ಪ್ರಕೃತಿಸ್ವರಲೋಪಕ್ಕೆ):

ಉತ್ಪಲಮಾಲೆ

೭ ಉರ್ವಿಯೊಳೆಲ್ಲಿಯುಂ[೧] ನೆಗಳ್ದ ನಾಯಕನಂ ಗುಣರಕ್ತಚಿತ್ತ[೨]ಗಂ
ಧರ್ವಕುಮಾರ[೨]ಕೋದಿತಯಶೋನಿಧಿಯಂ ತ್ವರಿತಪ್ರಯಾಣದಿಂ
ದೊರ್ವನೆ ಪೋಗಿ ಕಂಡು ಚಲ[೩]ದಗ್ಗಳಿಯಂ ಮಗುಳ್ದಿಂ[೪] ಮದಿಷ್ಟಮಂ
ನಿರ್ವಿವರಸ್ತನೀ ಬಗೆಗೊಡಂಬಡುವಪ್ಪೊಡೆ ಪೋಗಿ ಬಾರೆನೇ[೫] ೪೪

(ಯ ಕಾರಾಗಮಕ್ಕಂ ಪ್ರಕೃತಿಸ್ವರಲೋಪಕ್ಕಂ):

೮ ಪೋಗದಿರೆಂದು ನೀಂ ತಡೆವೆಯಪ್ಪೊಡೆ ಪೋಗೆನಮೋಘಮತ್ತ[೬] ನೀ
ಡಾಗದೆ ಬರ್ಪುದೆಂದು[೭] ನುಡಿಯಲ್ ಬಗೆವಪ್ಪೊಡೆ ಪೋಪುದರ್ಕೆ ತಳ[೮]
ಳ್ವಾಗದೆ ಪೋಗಲಿತ್ತುದೆ ಮಗುಳ್ತ್ರರ್ವಿಂಗೆ ನಿಮಿತ್ತಮಕ್ಕುಮಂ
ತಾಗದೆ ತೂಗುವುಯ್ಯಲ ಮಗುಳ್ತ್ರರವಿಂಗೆ ನಿಮಿತ್ತಮಪ್ಪವೋಲ್ ೪೫

ಸೂತ್ರಂ ೧೦

ಅರಮೆ ಎಲೇ ಏ ಓಹೋ
ಅರೆ ಎಂಬ ನಿಪಾತಮುಂ ವಿಶಂಕಾಪರಮುಂ
ದೊರೆವೆತ್ತ[೧೦]ವಧಾರಣಮುಂ
ಸ್ವರೂಪದಿಂ ನಿಲ್ಕುಮವಿಕೃತಂಗಳವೆಂದುಂ ೪೬

ಪ್ರಯೋಗಂ: ('ಅರಮೆ'ಗೆ):

೧ ಅರಮೆ ಅರಲ್ದ ಬಯಲ್ದಾ
ವರೆಗಳ ಪುದುವು[೧೧]ಗಳೊಳರಮೆ ಎಳದಳಿರ[೧೨] ಲತಾಂ
ತರದೊಳುಱಿದುಱಿದು[೧೩] ಕಾಡುಗು[೧೪]
ಮಿರುಳಪ್ಪಿನಮಱಸುವಿನಿಯಳಂ ಚಕ್ರಾಹ್ವಂ ೪೭

೧ ಳಾಯುಗಂ (ಮ, ಸ, ಮೈ) ೨-೨ ಗಾಂ|ಧರ್ವಕುಮಾರ (ನ) ೩ ಬಲ (ನ) ೪ ಮಗುಱ್ದುಂ (ನ) ೫ ಬಾರನೇ (ಮ, ಮೈ, ನ) ೬ ನತ್ತ (ಮೈ) ೭ ದಿಂದು (ಮ) ೮ ತಾ (ಮ) ೯ ಮರುಳ್ತನ (ಮ, ನ, ಮೈ) ೧೦ ಕೊಂಡ (ನ, ಮೈ) ೧೧ ಪೊದಱು (ದರ್ಪಣ) ೧೨ ದಳಿಪ (ಮ, ಮೈ, ನ) ೧೩ ಳವಿದವಿದು (ದರ್ಪಣ) ೧೪ ನೋಡುಗು (ನ)

('ಎಲೇ'ಗೆ):

ಮತ್ತೇಭವಿಕ್ರೀಡಿತಂ

೨ ಗಗನಾಭೋಗ[೧]ಮನೆಯ್ದೆ ನೀಳ್ದೊಗೆದ ಗೌರಚ್ಛಾಯೆ ಶುಭ್ರಾಭ್ರಲೀ
ಲೆಗಡರ್ಪಾಗಿರೆ ಪರ್ವಿ ತೋರ್ಪು[೨]ದಿದು ತಾಂ[೨] ಮತ್ತಾವುದತ್ಯದ್ಭುತಂ
ಬಗೆ ಪೋಯ್ತಾಗಳೆಲೇ ಇದಲ್ತೆ ತುಹಿನಕ್ಷೋಣೀಧ್ರದುತ್ತುಂಗಸಾ
ನುಗಳೊಳ್[೩] ಭೋರೆನೆ [೪]ಬಂದು ಪಾಯ್ವುದದೆ[೪] ನೋಡಾಕಾಶಗಂಗಾಜಲಂ

('ಏ'ಗೆ):

೩ ನುಡಿದನೆ ಕಾವು[೫]ದನೇ ಎರ್ದೆ
ಗಿಡದಿರು ಜವನಿಟ್ಟ ರಕ್ಕೆ ನಿನಗೀವುದನೇಂ
[೬]ನುಡಿದನೆ[೬] ಏ ಅದು ಕೆಯ್ಯದು[೮]
ನುಡಿದುದು ತಪ್ಪುಗುಮೆ[೯] ಗಂಗಚೂಡಾಮಣಿಯಾ ೪೯

(ಶ್ರವಣಬೆಳಗುಳದ ಶಿಲನೆಯ ಶಾಸನ)

('ಓಹೋ'ಕ್ಕೆ):

೪ ಓಹೋ ಇರಲಿಂ ಪೆಱವಱ
ಮಾಹಾತ್ಮ್ಯಮುಮಂಬು[೧೦]ನಿಧಿಯ ವಾರಿಯೆ[೧೧] ತನಗಂ
ತಾಹಾರಮೆಂದೊಡಿನ್ನ
ತ್ಯಾಹಿತಮನದೆಂತು[೧೨] ಪೊಗೞ್ವುದೌರ್ವಾನಲನಾ* ೫೦

೧ ಭಾಗ (ಮೈ) ೨-೨ ದಿಪೆ ದಲ್ (ಮ, ಮೈ, ನ) ೩ ನುಗಳಿಂ (ನ) ೪-೪ ಪಾಯುತಿರ್ಪುದಿದು; ಪೊಯ್ಯುತಿರ್ಪುದಿದು (ನ); ಬಂದು ಪಾಯ್ದುದದೆ (ಮೈ) ೫ ನಾವು (ಮ) ೬-೭ ನುಡಿದನೊ (ಮ, ಮೈ) ೬-೮ ನುಡಿದನೆ ಆದುಕೆಯ್ಯದು ಮೇಣ್ (ನ, ದರ್ಪಣ) ೯ ಮೊ (ಮೈ) ೧೦ ಮನಂಬು (ಮ, ಮೈ, ನ, ದರ್ಪಣ) ೧೧ ವಾರಿಯ (ಮ) ೧೨ ದಿಂತು (ಮ)

* "ಈ ಪದ್ಯಕ್ಕೆ ಪ್ರತಿಯಾಗಿ ಒಂದು ಪ್ರತಿಯಲ್ಲಿ :

ಒಂದೆರಡು ಮೂಱುನಾಲ್ಕ
ಯ್ದೊಂದೆಣಿಸುತ್ತಾಗಳಂತೆ ನಡೆತಂದಿರ್ಪ
ತ್ತೊಂದಾದೊಡಾಗಳೋಹೋ
ಎಂದಂ ಗಡ ಪರಶುರಾಮನತಿಕುಪಿತಮನಂ

ಎಂಬ ಪದ್ಯವಿದೆ." (ನ)

('ಅರೆ' ಗೆ):

ಚಂಪಕಮಾಲೆ

೫ ಅರೆ ಎಡೆ ಹಸ್ತಿಶಿಕ್ಷಣವಿಚಕ್ಷಣರಿಂದರೆ ಅಶ್ವಶಿಕ್ಷೆಯಿಂ
ದರೆ ಉಱಿ ಮಲ್ಲವೇಷಮಹಿಷೋದ್ಧುರಯುದ್ಧರಸಪ್ರಿಯರ್ಕಳಿಂ
ದರೆ ಎಡೆ ಕಾರ್ಮುಕವ್ಯಸನಕರ್ಮಠಧನ್ವಿಜನಪ್ರವೇಕರಿಂ
ದರೆ ಎಡೆಯೊರ್ಮೆ[೧]ಯೊಂದು ಪರಿಯಿಂ ಪುರಬಾಹಿರಮೊಪ್ಪಿ ತೋಱುಗುಂ ೫೧

ವಿಶಂಕೆಗೆ:

೬ ಇನಿಯನೆ ಬೆಲ್ಲದಿಂದಿನಿಯನೀವನೆ ಆಃ[೨] ಪಿರಿದೀವನಿತ್ತುದಂ
ನೆನೆವನೆ ಚಿಃ ಅದಂ ನೆನೆಯನುಕ್ಕೆವಗೆಯ್ತುದ ಗಾಳುಗೆಯ್ದ[೩] ಕೂ
ರ್ಪನೆ ಕಳೆ ಕೂರನೇ[೪]ಳಿದಕೆಗಂಡು[೪] ಬಿಸುಟ್ಪನೆ ಉಃ[೫] ಬಿಸುಟ್ಪ[೬]ನಿಂ
ತಿನಿತು[೬] ವಿವೇಕಮಿಲ್ಲದವನೆಲ್ಲ್ರುವನಂ[೭] ಬೆಲೆವೆಂಡಿರೊಲ್ವರೇ[೮] ೫೨

ಅವಧಾರಣಕ್ಕೆ:

ಉತ್ಪಲಮಾಲೆ

೭ ಏತಱ ಮಾತೊ ಭೂತಳದೊಳರ್ಥವಿಹೀನನ ಶೌಚಮುಣ್ಮೆ ಪೆ
ರ್ಮಾತು ಕುಲಂ ನೆಗೞ್ತೆಯಿನಿತುಂ ವಿಫಲಂ ಧನಮುಳ್ಳನಾವೊನಂ
ತಾತನೆ ಶೂರನಾತನೆ ಕುಲೋದ್ಭವನಾತನೆ ಶುದ್ಧವೃತ್ತನಂ
ತಾತನೆ ಇಂದ್ರನಾತನೆ[೯] ಮನೋಭವನಾತನೆ ಅಂಬುಜೋದ್ಭವರ್[೯] ೫೩

ಸೂತ್ರ ೧೧

ಪದವಿಧಿಯಿಂ ನೆಱೆದುತ್ತರ
ಪದದಾದಿಯೊಳೊಂದಿ ನಿಂದ ವರ್ಗಪ್ರಥಮ
ಕ್ಕದಱ ತೃತೀಯಾಕ್ಷರಮ
ಪ್ಪುದದಕ್ಕುಂ[೧೦] ಬಹುಳಮುಱಿಯೆ ಚಟವರ್ಗಂಗಳ್ ೫೪

೧ ಪರೆ ಎರ್ಮೆ (ಮ, ಮೈ, ನ); ಎಡೆಪೆರ್ಮೆ (ನ) ೨ ಆಃ (ನ) ೩ ಗಾಳುಗೆಯ್ದ (ಮೈ); ಥಾಳಿ ಗೆಯ್ದೆ; ಗಾರುಗೆಟ್ಟು (ನ) ೪-೪ ಳಿದಿಕೆಗಂಡು; ಳಿದಿಕೆಡಂಗು (ನ) ೫ ಏ (ಮ) ೬-೬ ನೆಂ। ಬಿನಿತು (ನ) ೭ ನೆನ್ನನುವಂ (ಮ, ಮೈ, ನ) ೮ ರೊಲ್ವನೇ (ಮ) ೯-೯ ಗುಣೋನ್ನತ ನಾತನೆ ಆಂಬುಜೋದರಂ (ಮ, ಮೈ, ನ, ದರ್ಪಣ) ೧೦ ದಕ್ಕಂ (ನ)

ಉದಾಹರಣೆ : **(ಕ ಕಾರವು ಗ ಕಾರವಾದುದಕ್ಕೆ) :**

೧ ಪೞಗನ್ನಡಂ[೧] ಪುದುಂಗೊಳೆ
ಕೊಱಸಕ್ಕದಮುಂ ತಗುೞ್ಚಿ ಜಾಣ್ [೨]ಕಿಡೆ ಮುತ್ತಂ
ಮೆೞಸಂ ಕೋದಂತಿರೆ[೨] ಪೇ
ೞ್ವಱಗವಿಗಳ ಕವಿತೆ ಬುಧರನೆರ್ದೆಗೊಳಿಸುಗುಮೇ ೫೫

(ತ ಕಾರವು ದ ಕಾರವಾದುದಕ್ಕೆ) :

ಉತ್ಪಲಮಾಲೆ

೨ ಪಂದಲೆಯೋಳಿದೋರಣದ ಸೀಯದರಂ ಪೊಸದೂವೆದೂಪ[೩] ತೂ
ಗುಂದಲೆ ಬಾೞ್ವೆಣಂ[೪] ಪೊಡರೆ ಬಳ್ಕುವ [೫]ಸಮ್ಮನ ಸೂಲಮಾಲದೊಳ್[೫]
ಸಂದಣಿಯಾಗಿ[೬] ನೇಲ್ವ ಪೆಣನೊಂದಿರೆ ನಿಂದುರಿ[೭]ಯುಯ್ಯಲೇಱ ಕೈ
ರಂ[೮]ದಱಯಲ್ಕೆ ಮಾಡಿದಡೆಮುಂಚಿಕೆ[೮] ಮಿಂಚಿದುದಾ ಶ್ಮಶಾನದೊಳ್ ೫೬

(ಪ ಕಾರವು ಬ ಕಾರವಾದುದಕ್ಕೆ) :

ಹರಿಣೀವೃತ್ತಂ

೩ ಎೞಲದೆನಸುಂ ಕಾಮವ್ಯಾಮೋಹದಿಂದಿರೆ ನೀಳ್ದ ತ
ಣ್ಬುಱಲ ತಳದೊಳ್ ರುದ್ರಂ ಕಂಡಲ್ಲಿ ಕಣ್ಬೊಲನಾಗಿ[೯] ಕೆಯ್
ಗಱದ[೧೦] ಮುಳಿಸಿಂ ಪೆರ್ವಾವಾಗೆಂದು ಶಾಪಮನಿತ್ತ[೧೧]ನಂ
ದೞಲೆ[೧೧] ಮನದೊಳ್ [೧೨]ತಾಪಂಬೆತ್ತಿಂ ವಿಯೋಗವಿಷಣ್ಣನೆಂ[೧೨] ೫೭

ಬಹುಳಗ್ರಹಣಕ್ಕೆ :
(ಕೆಲವೆಡೆಗಳಲ್ಲಿ ಕ ಕಾರವು ಗ ಕಾರವಾಗದಿರುವುದಕ್ಕೆ) :

೪ ಒರ್ಕೆಯ್ಸಿ ಬಿಲ್ಲನಂ[೧೩]ಬುಮ
ನುರ್ಕಾಳ್ಗಳ್ ಸುರಿಗೆ[೧೪]ಗಿಱ್ತು ಮಾಣ್ದಿರದಾ ಗೋ
ವರ್ಕಳಿದಿರ್ಚಿದ ಘೋೞಾ
ಯ್ಲರ್ಕಳೊಳಿಕ್ಕತುಳಮಿಱದು ಕುಱದಱಯಾದರ್ ೫೮

೧ ಗನ್ನಡದ (ಮ, ಮೈ, ನ) ೨–೨ ಗಿಡೆ ಮುತ್ತುಂ। ಮೆೞಸುಂಗೋದಂತಿರೆ (ಮ, ಮೈ) ೩ ದಂಬೆ ತೂಪ (ಮ, ಮೈ, ನ) ೪ ಪೋೞ್ವೆಣಂ (ನ, ಪ) ೫–೫ ಸಮ್ಮನ ಸೂಲವಾಲದೊಳ್ (ಮೈ); ಬೊಮ್ಮನ ಸೂಲಮಾಗಲಾ (ಪ) ೬ ಸಂದಳಿಯಾಗಿ (ಮೈ); ಸಂದಳಿಗೊಂಡು (ಪ) ೭ ದುವಿ (ಮ) ೮–೮ ದಱಯಲ್ಕೆ ಮಾಡಿದಡಮುಂಚಿಗೆ (ಮ, ನ); ದಿಱಯಲ್ಕೆ ಮಾಡಿದೊಡೆ ಮುಂಚಿಕೆ (ಪ) ೯ ನಾಗೆ (ಪ) ೧೦ ಗಱಯೆ (ನ) ೧೧–೧೧ ನಿಂ। ತೞಲೆ (ನ) ೧೨–೧೨ ತಾಪಂ ಬೆತ್ತಂ ವಿಯೋಗಿವಿಷಣ್ಣನೇ (ಮ); ತಾಪಂ ಬೆತ್ತಂ ವಿಯೋಗವಿಷಣ್ಣನೇ (ಮೈ); ಶಾಪಂಬೆತ್ತಂ ವಿಯೋಗಿವಿಷಣ್ಣನೇ (ನ) ೧೩ ಬಿಲ್ಲುಮಂ (ಮೈ, ನ) ೧೪ ಸುರಗಿ (ಮ, ಮೈ, ನ)

(ತ ಕಾರವು ದಕಾರವಾಗದಿರುವುದಕ್ಕೆ) :

ಮತ್ತೇಭವಿಕ್ರೀಡಿತಂ

೫ ನೆಗೆದಂಭೋದಪಥಕ್ಕೆ ಜುಂಕೆವೆರಸೊಂದದ್ರೀಂದ್ರಮಾಕಾಶಮಂ
ಬಗಿದತ್ತಿರ್ಬಗಿಯಾಗೆ ಪಾಱದಪುದೆಂಬಾ ಶಂಕೆಯಂ ಮಾಡಿ ತೊ
ಟ್ಟಗೆ ತದ್ಗ್ರಾಹ[೧]ಮುಮಂ ಗಜೇಂದ್ರಮುಮನೊರ್ತುರ್ತ್ತೆಂಬಿನಂ ತುತ್ತಿ ದೇ
ವಗಣಕ್ಕಚ್ಚರಿಯಾಗೆ[೨] ಪಾಱ ಸುರರಾಜಾವಾಸಮಂ ಮುಟ್ಟಿದಂ ೫೯

(ಪ ಕಾರವು ಬ ಕಾರವಾಗದಿರುವುದಕ್ಕೆ) :

ತರಳವೃತ್ತಂ

೬ ನಡುವನಾಟಿಸದುಂತೆ[೩] ನೋಡಿದೊಡಂ ವಳಿತ್ರಯಮಧ್ಯದೊಳ್
ನಡುವ ದಿಟ್ಟಿಯನಾಗದಾರ್ಗಮುಗಲ್ಚಲೆಂಬನಿತೊಪ್ಪುವೊ
ಳ್ಪಿಡಿಯೆ ತೀವಿ ಪೊಗಬಿತ್ತಿಗಾದಮು[೪]ಳುಂಬಮಾಗಿಯುಮಂತುಮೊ
ಪಿರ್ಡಿಯೆ ದಲ್ ನಡು ನೂತವಾತಚಲಲ್ಲತಾಲಲಿತಾಂಗಿಯಾ ೬೦

ಚಟವರ್ಗಪ್ರತಿಷೇಧಕ್ಕೆ: (ಚ ಕಾರವು ಜ ಕಾರವಾಗದಿರುವುದಕ್ಕೆ):

ಚಂಪಕಮಾಲೆ

೭ ಅತಿಶಯಮಾಯ್ತು ಕಾಲ್ದುಜುಗಲಿ[೫]ಟ್ಟೆಳಮಾಯ್ತುರಚಲ್ಲಿ ಕೊಂದು ಕೂ
ಗಿತು ಕಟಿ[೬]ಚಲ್ಲಿ ಸೂಸಕದ ನೂಪುರದಬ್ಬರಮಾದುದಬ್ಬರಂ
ಮತಿಗಿಡಿಸಿತ್ತು ದಿಟ್ಟಿ ಸೆಱಗೆಯ್ದುದು ಪುರ್ವಿನೊಳಾದ ಜರ್ವು ತಾಂ
ದ್ರುತ[೭]ತರಮಾ ದ್ರುತಂ[೮] ಸಮೆದ ತಾಣದೊಳಾಡುವ ಗಾಡಿಕಾರ್ತಿಯಾ ೬೧

(ಟ ಕಾರವು ಡ ಕಾರವಾಗದಿರುವುದಕ್ಕೆ) :

೮ ಕಡುಟಕ್ಕು[೯]ಗೊಂಡವೊಲ್ ಮೆಯ್
ನಡುಗೆ[೯] ಮನಂ ವಿಕಳಮಾಗೆ ನುಡಿಗಳ್ ಮೊದಲಿಂ
ದಡಿಗಿಡೆ ಕಾಲ್ ತಡತಡ[೧೦]ವರೆ
ತೊಡರ್ದಳಿಪಿಂದೆಳಸಿ [೧೧]ನೋಳ್ಪ ಮೃಗಲೋಚನೆಯಾ[೧೧] ೬೨

೧ ತದ್ವಾಹ (ನ) ೨ ಯಾಗಿ (ಮೈ) ೩ ಸುಪಂತೆ (ನ) ೪ ನಾಡೆಯ (ಮ, ಮೈ) ೫ ಕಾದು ಜುಗಲಿ (ಮ, ನ); ಕಾಲ್ದುಜುಗಳಿ (ಮೈ, ನ) ೬ ತಱಿ (ನ) ೭ ದೃತ (ನ) ೮ ದೃತಂ (ನ) ೯ ಗೊಂಡು ನಲ್ಮೆಯು।ನುಡಿಗೆ (ಮ); ಗೊಂಡವೊಲ್ ಕೆಯ್।ನಡುಗೆ (ನ) ೧೦ ತಡಪಡ (ನ) ೧೧-೧೧ ನೋಟ್ಪ ಮೃಗಲೋಚನೆಯಂ (ಕಾ); ನೊೞ್ಪಿ ಮೃಗಲೋಚನೆಯಾ (ನ)

ಸೂತ್ರಂ ೧೨

ಸ್ವರದಿಂ ಯು ಲ ದಿನನಾದಿ
ಷ್ವರೇಫದಿಂ ಪರದೊಳಮುರ್ದು ತೋಱಿ ಪವರ್ಗಂ
ದೊರೆಕೊಳ್ಗುಂ ವಾದೇಶಮ
ದರೆ ಉಱು ವಾಕ್ಯದೊಳಮನ್ವಿತಾರ್ಥದೊಳಕ್ಕುಂ[1] ೬೨

ಪ್ರಯೋಗಂ: ಸ್ವರಕ್ಕೆ :

(ಸ್ವರದ ಮುಂದಣ ಪ-ಬ ಕಾರಗಳು ವ ಕಾರವಾದುದಕ್ಕೆ) :

ಚಂಪಕಮಾಲೆ

೧ ಎಳವೆಱಿ ದಾಡೆ ಕೆಂದಳಿರೆ ನಾಲಗೆ ಮಾಮರವಳ್ಳಿಗೊಂಬಿನೊಳ್
ಮಿಳಿರ್ವೆಳವಳ್ಳಿ ಬಾಲಮಲರ್ಗೊಂಗಲೆ[2] ಕೇಸರಮೆಂಬಿನಂ ಮನಂ
ಗೊಳೆ ಮಧುಮಾಸಕೇಸರಿ ವಿಯೋಗಿಗಳೆಂಬ ಮೃಗಂಗಳಂ ಭಯಂ
ಗೊಳಿಸಿದುದುದ್ಧ[3]ಕೀರಮದಕೋಕಿಲಗರ್ಜಿತತರ್ಜಿತಂಗಳಿಂ ೬೪

(ರನ್ನನ ಅಜಿತತೀರ್ಥಕರಪುರಾಣತಿಲಕಂ ೬,೨೭)

(ಸ್ವರದ ಮುಂದಣ ಮ ಕಾರವು ವ ಕಾರವಾದುದಕ್ಕೆ) :

೨ ಮರವಣಿಗಂ ಬೀಣೆಗಮಂ
ತರಮಾವುದೊ [4]ಸುಕವಿರಚಿತ[4]ಮೃದುಲಲಿತಪದ
ಸ್ಫುರಿತಸರಸೋಕ್ತಿಗಂ ನಿ
ಷ್ಠುರಕುಕವಿಕಟೂಕ್ತಿಗಳ್ಗಮೇನಂತರಮೋ ೬೫

ಯು-ಲಾದಿಗೆ :

(ಯು ಕಾರದ ಮುಂದಣ ಪ ಕಾರವು ವ ಕಾರವಾದುದಕ್ಕೆ) :

೩ ಸುರಿಗೆ ಶುಭಂಕರ[5]ಗತ್ತಿಗೆ
ಕರಗಂ ತಲೆಮುಂಡೆ ಮರುಳ ಬಾಯ್ವುಱ[6] ಪಱಿಯಾ
ಗಿರೆ ಕಳದೊಳಿಱಿಯಲಿರ್ದುವು
ನೆರೆದು ನಿಶಾಚರರ ತಕ್ಕಿನೆಕ್ಕತುಳಂಗಳ್ ೬೬

೧ ತಾರ್ಥಂಗಳೊಳಂ (ಮ,ನ,ಮೈ) ೨ ಲಗೊರ್ಂಚಲೆ (ಪಾ) ೩ ದುತ್ಕ (ನ,ಪ) ೪-೪ ದೋಷ ರಹಿತ (ದರ್ಪಣ) ೫ ಕರಿ (ನ) ೬ ಬಾಯ್ದೆರೆ (ಮ)

(ಯ ಕಾರದ ಮುಂದಣ ಬ-ಭ ಕಾರಗಳು
ವ ಕಾರವಾದುದಕ್ಕೆ) :

೪ ಮೆಯ್ವೆಸ[೧]ದಿಂ ಕೆಯ್ವೆಸ[೨]ದಿಂ
ಬಾಯ್ವೆಸ[೩]ದಿಂ ಮಂತ್ರತಂತ್ರ[೪]ದಿಂದಂ ಸುಖಮುಂ[೪]
ಮೆಯ್ವಿಡೆ ವನಿತೆಗೆ ಪಡೆದಾ[೫]
ಮೆಯ್ವೋಗ[೬]ಕ್ಕೆಳಸಿ ಸೋಲ್ವ[೬]ನೆಬ್ಬುವೊಜಂಗಂ ೬೭

(ಲ ಕಾರದ ಮುಂದಣ ಪ ಕಾರವು ವ ಕಾರವಾದುದಕ್ಕೆ) :

ಉತ್ಪಲಮಾಲೆ

೫ ಬಲ್ವೆಣನುರ್ಚಿ[೭] ಕೋಡೊಳಿರೆ ನೆತ್ತರುರೋಮಣಿಯಿಂ ನೆಲಕ್ಕೆ ಬಾ
ನಲ್ವರಿವನ್ನೆಗಂ ಪ್ರಹತದಿಂದಿಱಿದೆತ್ತಿದೊಡಗ್ರಹಸ್ತದೊಳ್
ನೇಲ್ವ ಪೆಣಕ್ಕೆ ಪರ್ದೆಱಗೆ ವೈರಿಯ ನಾಲ್ಕು ಬಲಕ್ಕನೊಂದೆ[೮] ಬಂ
ಬಲ್ವರಿಯುತ್ತುಮಿರ್ದುದು[೯] ಜಯದ್ವಿರದಂ ಜಯಸಿಂಗ[೧೦]ಭೂಪನಾ ೬೮

(ಲ ಕಾರದ ಮುಂದಣ ಪ-ಬ ಕಾರಗಳು ವ ಕಾರವಾದುದಕ್ಕೆ) :

೬ ಬಲ್ವಲಿಕೆಯಿಂದಿದಿರ್ಚಿದ[೧೧]
ಬಿಲ್ವಡೆ ತನ್ನೆಚ್ಚ ನಿಶಿತಶರಸಂಹತಿಯಿಂ
ದೆಲ್ವಡಗಾಯ್ತುನಿತುಮದೆನೆ
ಬಿಲ್ವಲ್ಮೆಯ ಮಾತ[೧೨]ಮಾನುಷಂ ಮಾಧವನಾ ೬೯

(ಸ್ವರ-ಯ-ಲ ಕಾರೆಗಳ ಮುಂದಣ ಮ ಕಾರವು
ವ ಕಾರವಾದುದಕ್ಕೆ) :

೭ ಧರೆಯೊಳ್ ಬೀರದ ಪೆಂಪಿಂ[೧೩]
ನರನಿಂದಿರ್ಮಡಿ ಬಕಾರಿಯಿಂ ಮೂವಡಿ ಭಾ
ಸ್ಕರಸುತನಿಂ ನಾಲ್ವಡಿ [೧೪]ಶಂ
ಕರಗ[೧೪]ನಿಂದಯ್ವಡಿ ನೆಗೞ್ತೆಯುದಟರ ಭೀಮಂ * ೭೦

೧ ಮೆಯ್ವಸ (ನ) ೨ ಕೆಯ್ವಸ (ನ) ೩ ಬಾಯ್ವಸ (ನ) ೪–೪ ದಿಂದಂ ಶುಭಮುಂ (ಮು, ಮೈ); ದಿಂ ಮುಂ ಶುಭಮುಂ (ನ) ೫ ಪಡೆವುದು (ಮು, ಮೈ, ನ) ೬–೬ ಕೆ ತಾನೆ ಸಾಲ್ವ (ಮು, ಮೈ, ನ) ೭ ನುರ್ವಿ (ನ) ೮ ದೊಂದೆ (ಮು, ಮೈ, ನ) ೯ ಮಿರ್ಪುದು (ಮು, ಮೈ, ನ) ೧೦ ಧೀರ (ನ) ೧೧ ಬಲ್ವಕೆಯಿಂದಲಿದಿರ್ಚಿದ (ನ) ೧೨ ಮಾತು (ಮು) ೧೩ ಪೆಂಪಿನ (ನ, ದರ್ಪಣ) ೧೪–೧೪ ಮುರಾಹರ (ದರ್ಪಣ)

* ಒಂದು ಪ್ರತಿಯಲ್ಲಿ ಈ ಪದ್ಯವನ್ನು "ಆದೇಶ ರೇಫಕ್ಕೆ" ಉದಾಹರಣೆಯೆಂದು ಕೊಟ್ಟಿದೆ(ನ)

ಅನಾದಿಷ್ಟರೇಫಕ್ಕೆ: (ಆದೇಶವಲ್ಲದ ರ ಕಾರದ ಮುಂದಣ
ಷ-ಬ ಕಾರಗಳು ವ ಕಾರವಾದುದಕ್ಕೆ)

೮ ಬೇರ್ವೆರಸು ಕಿೞ್ತು ಪಲವುಂ
ನೀರ್ವೂಗಳನೊಟ್ಟಿಕೊಂಡು ಬರ್ಪ ಗಜೇಂದ್ರಂ[1]
ಸೋರ್ವ ಮದಧಾರೆ[2] ಕಟದೊಳ್
ನೇರ್ವಟ್ಟಿರೆ ಸುರಕರೀಂದ್ರಮೆನಿಸಿದುದಾಗಳ್ ೭೧

ವಾಕ್ಯಕ್ಕೆ : (ವಾಕ್ಯದಲ್ಲಿ ಪ ಕಾರವು ವ ಕಾರವಾದುದಕ್ಕೆ) :

ಪ್ರಮಿತಾಕ್ಷರವೃತ್ತಂ

೯ ಕಮನೀಯವಿಭ್ರಮಗುಣಾನ್ವಿತೆಯರ್
ಪ್ರಮಿತಾಕ್ಷರಾಭರಣಭೂಷಿತೆಯರ್
ತಮರೂರ್ಗೆ ವೋಪ ಕುಲಜಾಂಗನೆಯರ್
ಕಮಳೋದರಂಗೆ ಪಡೆದರ್ ಮುದಮಂ ೭೨

ಸೂತ್ರಂ ೧೩

ಯ ಲ ರಹಿತವ್ಯಂಜನದೊಳ್[3]
ನಿಲೆ ಮುಂದೆ ಸ ಕಾರಮಲ್ಲಿ[4] ಬಹುಳಂ ಚತ್ವಂ
ಕೆಲಕೆಲವೆಡೆಯೊಳ್ ಜತ್ವಂ
ನೆಲೆಗೊಳ್ಗುಂ ಸಂಖ್ಯೆಯಾದೊಡಕ್ಕುಂ ಛತ್ವಂ ೭೩

ಉದಾಹರಣೆ: ಚತ್ವಕ್ಕೆ: (ಣ ಕಾರದ ಮುಂದಣ ಸ ಕಾರದ ಚತ್ವಕ್ಕೆ) :

ದ್ರುತಪದವೃತ್ತಂ

೧ ನೆರೆಪೆ ತುಂಬಿಗಳನಾತ್ಮಮುಖೋದ್ಯತ್
ಪರಿಮಳಂ ಕಮಳಬಂಧುರಗಂಧಂ
ಪರೆಪೆ ಕೇಕಿಗಳ ತಾಂಡವಮಂ ನುಣ್-
ಚರದ ತಿಣ್ಪು ಘನಘೋಷಗಭೀರಂ ೭೪

೧ ಗಜಂ ಮುಂ (ಮು,ನ)
೨ ವಾರಿ (ನು,ನ)
೩ ನದಿಂ (ಕಾ)
೪ ದಲ್ಲಿ (ನ)

ಬಹುಳಗ್ರಹಣಕ್ಕೆ: (ಸ ಕಾರವೇ ಉಳಿಯುವುದಕ್ಕೆ) :

೨ ಕಣ್ಸೋಲಮನಱಿಯಂ ಪೆಱ
ವೆಣ್ ಸುರವಧು[೧]ಗೆಣೆಗೆ ವರ್ಪೊಡಂ[೧] ತೊಡರ್ದಾತಂ
ಮೇಣ್ ಸುರನಕ್ಕೆಮ ಚಲದ ಪ
ವಣ್ ಸರಿ ಕೀಲ್ಸರಿಗೆ[೨] ವಾರನಹಿತಕೃತಾಂತಂ ೭೫

ಜತ್ವಕ್ಕೆ: (ನ ಕಾರದ ಮುಂದೆ ಸ ಕಾರವು ಜ ಕಾರವಾದುದಕ್ಕೆ) :

೩ ಕರಿವೆರಸಿದ ಪೊಸದುಗುಲದ
ತೆರಳ್ಕೆವೆತ್ತುಡೆ ಹಟತ್ಕಟೀಸೂತ್ರಪರಿ
ಸ್ಫುರಿತದೊಳಂ ಕಟ್ಟಿದ ಪೊನ್-
ಜುರಿಗೆಯೊಳಂ ಜನಮನೇಂ ಮನಂಗೊಳಿಸಿದುದೋ[೩] ೭೬
(ಪಂಪನ ಆದಿಪುರಾಣ ೪,೩೬)

ಛತ್ವಕ್ಕೆ : (ಸಂಖ್ಯೆಯಲ್ಲಿ) :

ಮತ್ತೇಭವಿಕ್ರೀಡಿತಂ
೪ ಪದಿನೆಣ್ಛಾಸಿರ[೪]ಲೋಹವಕ್ಕರೆಯ ಜಾತ್ಯಶ್ವಂಗಳಿರ್ಛಾಸಿರಂ
ಮದಮಂ ಮುಕ್ಕುಳಿಸಿರ್ದ ದಂತಿಘಟೆಗಳ್ ಪತ್ತೆಂಟು ಲಕ್ಕಂ[೫] ರಣೋ[೬]
ನ್ಮದಪತ್ತಿವ್ರಜಮೆಂಬ ಸೈನ್ಯಮುದದಿಂ [೭]ಬಂದರ್ ಪಲರ್ ಕಾದಿ[೭]ಯೋ
ಡಿದೊಡೆಬ್ಬಟ್ಟಿದನಟ್ಟಿ ಮುಟ್ಟಿ[೮] ಪಿಡಿ[೯]ದಂ ಚಾಳುಕ್ಯ[೧೦]ಚಕ್ರೇಶ್ವರಂ ೭೭

ಯ-ಲ ಪ್ರತಿಷೇಧಕ್ಕೆ :
(ಯ-ಲ ಕಾರಗಳ ಮುಂದಣ ಸ ಕಾರದ ಸಹಜಸ್ಥಿತಿಗೆ) :

೫ ವೀರಶ್ರೀ ವಿಜಯನ ಕೆಯ್
ಸಾರೆ ಸುರಾಂ[೧೧]ಗನೆಯುರೊಸೆದು ಪರಸುವ ರವಮುಂ
ಭೋರೆಂದೆಱಗುವ ಕುಸುಮಾ
ಸಾರದ ಬಲ್ಸರಿಯುಮೆಸೆದುವಂ[೧೨]ಬರತಳದೊಳ್ ೭೮

೧-೧ ಗೆಣೆಯೆನಿಪ್ಪೊಡಂ (ಪ, ದರ್ಪಣ) ೨ ಕೀಳ್ಸರಿಗೆ (ಸ) ; ಕೇಳ್ ಸರಿಗೆ (ನ, ಮೈ) ೩ ದನೋ (ನ) ೪ ಪದಿನೇಟಿಸಾಸಿರ (ಮ) ೫ ಮತ್ತೆಂಟುಲಕ್ಕಂ (ಮ); ನೂರ್ಛಾಸಿರಂಗಳ್ (ದರ್ಪಣ) ೬ ರಜೋ (ಮ) ೭-೭ ಬಂದುಪ್ಪಳಂ ಕಾದಿ (ಮೈ, ನ); ಬಂದುವ್ವಳಂ ಕಾಡಿ (ಮ) ೮ ಕಟ್ಟಿ (ಮ) ೯ ಬಡಿ (ನ) ೧೦ ಚಾಣುಕ್ಯ (ಮ, ಮೈ) ೧೧ ಪುರಾಂ (ನ) ೧೨ ಮೆಃದುದಂ (ಮ)

ಸೂತ್ರಂ ೧೪

ಸ್ವರಮುಮದಿರ್ರೆ ಮುಂದೇಕ
ಸ್ವರದೊಳ್ ನ ಣ ಲ ಯ ಳ ಕಾರಮನಿತುಂ ಹ್ರಸ್ವಾ
ಕ್ಷರಪೂರ್ವಮಾಗೆ ಪೀನಂ
ಸ್ವರೂಪದಿಂ ದ್ವಿತ್ವವೃತ್ತಿಯುಂ ತಾಳ್ದಿರ್ಕುಂ ೭೯

ಪ್ರಯೋಗಂ: (ನ-ಣ ಕಾರಗಳ ದ್ವಿತ್ವಕ್ಕೆ):

೧ ಪೊನ್ನುಳ್ಳವನೆ ಕುಲೀನಂ
ಚೆನ್ನಂ ಕಲಿ ಸತ್ಯವಾದಿಯೆನಿಸುಗು[೧]ಮದಱಿಂ
ದಿನ್ನುಂ ಪೊನ್ನನೆ[೧] ಪಡೆವುದು
ಪೊನ್ನಿಂ ಸಮನಿಸುಗುಮಲ್ತೆ ಪೆಣ್ಣುಂ ಮಣ್ಣುಂ ೮೦

(ಲ-ಳ-ಯ ಕಾರಗಳ ದ್ವಿತ್ವಕ್ಕೆ):

೨ ಕಲ್ಲೆಲ್ಲಂ ಕಿಸುಗಲ್ ಮರ
ನೆಲ್ಲಮವಿಮ್ಮಾವು ಬಳ್ಳಿಯೆಲ್ಲಂ ಲತೆ ಮು
ಳ್ಳೆಲ್ಲಂ ಕೇದಗೆ ಬೆಳೆಗೆ
ಯ್ಯೆಲ್ಲಂ ಫಲಶಾಲಿಯೆಂದೊಡೇವೊಗಟ್ವುದದಂ[೨] ೮೧

ಪೀನಗ್ರಹಣಕ್ಕೆ: (ಲ ಕಾರವು ದ್ವಿತ್ವವಾಗದುದಕ್ಕೆ):

ನವನಳಿನವೃತ್ತಂ

೩ ಪುಲಿಗಳ ಮಿಾಸೆಯನುಯ್ಯಲಾಡಲೆ[೩] ನಂಜನೆಂ
ಜಲಿಸಲುಮುಟ್ತಿಯೆ[೪] ಕಾಳಕೂಟಮನೆನ್ನ ದೋ
ರ್ವಲಮನತಿಕ್ರಮಿಸಲ್ಕಮಾಟಿಸಿ ಬಂದನೊ
ಳ್ಗಲಿ ದಲಿವಂ ಜವನಲ್ಲಿಯುಂಡಿಗೆದಂದನೋ ೮೨

ಅನೇಕಸ್ವರನಿಷೇಧಕ್ಕೆ:

೪ ಸರಣಾರುಮೊಳರೆ[೫] ಖಳಸಂ
ಸರಣದೊಳದವಟಲನೆಯ್ದಿ ನಮೆವರ್ಗೆ[೬] ಜಿನೇ
ಶ್ವರಧರ್ಮಮೊಂದೆ ತಾನದು
ಶರಣಂ ಭವಹರಣಮಲ್ಲಿ ಸಂದೆಯಮುಂಟೇ[೭] ೮೩

ಇದು ಶಬ್ದಸ್ಮೃತಿಯೊಳ್ ಸಂಧಿಪ್ರಕರಣಂ ಸಮಾಪ್ತಂ

೧-೧ ಮಿನ್ನುಂ।ಮುನ್ನಂ ಪೊನ್ನಂ (ಮ, ಮೈ, ನ) ೨ ಪೊಗಟ್ವಪುದೋ (ನ) ೩ ಲಾಡಲು(ಮ) ೪ ಮುತ್ತಿಯೆ, ತಳ್ತಿಯೆ(ನ) ೫ ಶರಣರುಮೊಳರೇ(ಮ) ೬ ವಂಗೆ(ನ) ೭ ಪೇಟಲ್ ತೊದಳುಂಟೇ(ನ)

೩ ನಾಮಪ್ರಕರಣಂ

ಸೂತ್ರಂ ೧೫

ಧಾತುವಿವರ್ಜಿತಮರ್ಥೋ
ಪೇತಂ ಲಿಂಗಂ ಮುಮಿಂಕೆಯುದ[೧]ದೊಳ್ ಎಂದಿಂ[೧]
ತೀ ತೆಱದಿಂದೇೞಕ್ಕುಂ
ಖ್ಯಾತವಿಭಕ್ತಿಗಳದರ್ಕೆ ಕಾರಕವಶದಿಂ ೮೪

ಸೂತ್ರಂ ೧೬

ಪರಿವಿಡಿಯೆ ಕರ್ತೃಕರ್ಮಂ
ಕರಣಾಖ್ಯಂ ಸಂಪ್ರದಾನಮುಪ[೨]ನಯನಾಖ್ಯಾ[೨]
ನಿರತಮುಪಾದಾನಮುಮಧಿ
ಕರಣಮುಮೆನೆ ಕಾರಕಂಗಳಾಱುಂ ನೆಗೞ್ಗುಂ ೮೫

ಪ್ರಯೋಗಂ: (‘ನೆಲ’ ಶಬ್ದಕ್ಕೆ ಏೞುಂ ವಿಭಕ್ತಿಪ್ರತ್ಯಯಂಗಳ್ ಪತ್ತಿದುದರ್ಕೆ) :
೧ ನೆಲನಿದು ನೆಲನಂ ಪಾಲಿಸು
ನೆಲದಿಂ ಪುರುಳಕ್ಕುಮಾರ್ ನೆಲಕ್ಕೆಱಗದವರ್
ನೆಲದತ್ತ[೩]ಣಿನುಱದರಿಯಂ
ತೊಲಗಿಸು ನೆಲದೆಱೆ[೩]ಯ ನೆಲದೊಳೊದವಿ[೪]ಸು ಜಸಮಂ ೮೬

ಸೂತ್ರಂ ೧೭

ಅವಱೊಳ್ ದ್ವಿತ್ವಬಹುತ್ವಂ
ಬವರಿಸೆ[೫] ತಳ್ತಿರ್ಕುಮಲ್ಲಿ[೬] ಗಳ್ ಶಬ್ದಂ ಮ
ತ್ತವು ಸರ್ವನಾಮ ಗುಣವಚ
ನವೃತ್ತಿಯಂ ತಾಳ್ದಿ[೭]ನೆಗೞ್ಗುಮವು ಬಹುಳತೆಯಿಂ ೮೭

೧–೧ ದೊಳ್ ಎಂದಂ (ಮ); ದೊಳಮೆಂದಿಂ (ನ) ೨–೨ ದಯುನಾಖ್ಯಾ; ನಯುಮಭಿದಾ (ನ, ಮ) ೩ ನೆಲನತ್ತ (ಮ, ಮೈ, ನ) ೪ ಳೊದಗಿ (ಮೈ) ೫ ಜವಳಿಸೆ, ಬವಳಿಸೆ (ನ); ಬವರಿಸಿ (ಮ) ೬ ಮೆಯ್ದ್ದ (ನ) ೭ ತಾಳ್ದಿ (ನ); ತಾಳ್ದು (ನ, ಮ)

ಪ್ರಯೋಗಂ: (ದ್ವಿ-ಬಹುವಚನಂಗಳಲ್ಲಿ 'ಗಳ್' ಶಬ್ದಪ್ರಯೋಗಕ್ಕೆ):

೧ ಅಲರ್ಗಣ್ ಮೀನ್‌ಬೊಣರಂತಿರೆ
ನೆಲೆಮೊಲೆಗಳ್ ಚಕ್ರಯುಗಲಮುಂ ತಿವಳಿಗಳು
ಚ್ಚಲಿತತರಂಗಂಗಳನಿಱ[೧]
ಸೆ ಲತಾಂಗಿಯುರಂಬುಜಾಕರಕ್ಕೆಣೆಯಾದರ್ * ೫೮

(ದ್ವಿ-ಬಹುವಚನಂಗಳಲ್ಲಿ 'ಗಳ್' ಶಬ್ದಪ್ರಯೋಗಕ್ಕೆ):

ಮತ್ತೇಭವಿಕ್ರೀಡಿತಂ

೨ ಕಿಡಿಗಳ್ ಜಾತಿಜರಾದಿಗಳ್ಗೆ ದುರಘ[೧]ವ್ರಾತಾಯುಧಕ್ಕಳ್ಕ[೧]ದು
ರ್ಕುಡಿಗಳ್ ಪುಣ್ಯದ ಬೀಡುಬಿಟ್ಟ ಗುಡಿಗಳ್ ಧರ್ಮಾರ್ಥಿಗಳ್ಗಪ್ಪ ಕೆಯ್-
ಪಿಡಿಗಳ್ ಜೈನಗೃಹಕ್ಕೆ ನಿಲ್ತ ಪಡಿಗಳ್ ಸಂಸಾರವಾರಾಶಿಯಾ
ತಡಿಗಳ್ ಶ್ರೀಗುಣಭದ್ರ[೨]ದೇವರಡಿಗಳ್ ನಿಲ್ಕೆಮ್ಮ[೩] ಹೃತ್ಪದ್ಮದೊಳ್ ೫೯

(ಬಹುವಚನದೊಳ್ ಸರ್ವನಾಮ-
ಗುಣವಚನಂಗಳ್ಗೆ 'ಅವು' ಶಬ್ದಪ್ರಯೋಗಂ):

೩ ಅವು ಪಿರಿಯುವು ಭಾವಿಪೊಡಿಂ
ತಿವು ಕಿಱಿಯುವೆನಿಪ್ಪುದಿದುವೆ ಭೇದಂ ‡ಪೆಱತಿ
ಲ್ಲವಱವಱಂತರಮೆನಿಸಿದು[೪]
ವವನೀಧರದಣೆಯ ಪುಲಿಗಳುಂ ಬೆಕ್ಕುಗಳುಂ‡ ೬೦

ಬಹುಳಗ್ರಹಣಕ್ಕೆ :
(ಸರ್ವನಾಮದೊಳ್ 'ಗಳ್' ಶಬ್ದಪ್ರಯೋಗಕ್ಕೆ):

೪ ನೀಂಗಳ ಕಾಲ್ಗರ್ಚಿದ ನೀ
ರುಂ[೫] ಗಂಗೆಯ ನೀರುಮೆಂಬಿವೀ[೬] ನಿಖಿಳಜಗ
ನ್ಮಂಗಳಕರಂ[೭]ಗಳೆನಗೊ
ರ್ವಂಗಂ ಸಮನಿಸಿದುವಿಂತು[೮] ನೋಂತರುಮೊಳರೇ ೬೧

೧-೧ ವ್ರಾತಾದ್ರಿಗಳ್ಗಳ, ವ್ರಾತಾಸಿಗುಳ್ಳಳ್ಕ (ನ) ೨ ಗುಣಚಂದ್ರ (ನ) ೩ ನಿಲ್ಕೆನ್ನ (ನ) ೪ ಮೆನಿಸುವು (ನ, ಮ) ೫ ರಂ (ಮೈ) ೬ ಬವಂ (ಮೈ) ೭ ಪದಂ (ನ) ೮ ದುದಿಂತು(ಮ) ‡‡ನಿಮುಗಾ। ವುವು ಮನಕೇಱುವುವಟ್ಟಿಱಾ। ನವನಾಯ್ಕುಳಿಗೊಳ್ಳಿಮೆಂದು ನವರತ್ನಮುಮಂ (ದರ್ಪಣ).
* ಈ ಪದ್ಯವು 'ಮೈ' ಪ್ರತಿಯಲ್ಲಿ ಇಲ್ಲ.

ಸೂತ್ರಂ ೧೮

ಪುರಷ ಸ್ತ್ರೀವಾಚಕಮಾ
ಗಿರೆಯುಂ ಮತ್ತಲ್ಲಿ ಸರ್ವನಾಮಂ ಸಯ್ತೊಂ
ದಿರೆಯುಮಿರರ್ ದಿರ್ ವಿರ್ ಕಳ್
ದೊರೆಕೊಂಡನುಸರಿಸುಗುಂ ಜನೋಕ್ತಿಕ್ರಮದಿಂ ೯೨

ಲಕ್ಷ್ಯಂ : (ಪುಂ-ಸ್ತ್ರೀ ಬಹುವಚನಂಗಳೊಳ್
'ಇರ್-ಅರ್-ವಿರ್' ಶಬ್ದಂಗಳ ಪ್ರಯೋಗಕ್ಕೆ) :

ವಸಂತತಿಲಕವೃತ್ತಂ

೧ ಆರಾರ್ಗೆ ಪೆಂಡಿರೊಡವುಟ್ಟಿದರೆಂಬರಾರಾ
ರ್ಗಾರಾ[1]ರ್ಗೆ ತಂದೆವಿರತಿಪ್ರಿಯಪುತ್ರರಾರಾ
ರ್ಗಾರಾ[2]ರ್ಗೆ ತಾಯ್ವಿರೆರಡಿಲ್ಲದೆ ಕೂರ್ಪರಾರಾ
ರ್ಗಾರ[3]ಯ್ಯೆ ತಾನೆ ತನಗಿಂ[4] ನೆರಮಲ್ಲರಾರುಂ ೯೩

(ಪುಂ-ಸ್ತ್ರೀವಾಚಕಸರ್ವನಾಮಂಗಳೊಳಂ
'ದಿರ್' ಶಬ್ದಪ್ರಯೋಗಕ್ಕೆ) :

ಪೃಥ್ವೀವೃತ್ತಂ

೨ ಇವಳ್ದಿರೊಳಿವಂದಿರಂ ವಿಕೃತರೂಪರಂ ಕೂಡುವಂ
ತವಶ್ಯಮನುರೂಪರೂಪರನೆ ಕೂಡಲೇಂ ಕೂಡದೋ[5]
ವಿವೇಕಮಿನಿ[6]ತೇಕೆ ಪುಟ್ಟದೊ ಪಿತಾಮಹಂಗೆಂಬ ಚಿ
ತ್ರವಿಭ್ರಮಮನಾಗಿಪರ್ ಸುಱಿವ ಬೇಡರಾ ಬೆಟ್ಟ[7]ದೊಳ್ ೯೪

'ಕಳ್' ಅಂತಕ್ಕೆ :

ತರಳವೃತ್ತಂ

೩ ಅಱಿಯಲಾಗದು ನೆಟ್ಟನೆಂದು ಬಿಸುಟ್ಪುದಂ ನಯಮಲ್ತು ಪಾಂ
ಗಱಿವ ವಿಪ್ರವರರ್ಕಳಿಂ[8] ಚರರಿಂ ವಿಚಾರಪರರ್ಕಳಿಂ
ಪೆಱರುಮನ್ನರ್[9] ನಿನ್ನುಮಾರಯಿಸಿಂ ವಿದಗ್ಧರಿನೊಯ್ಕನೆ
ತ್ತಱಿಯಲಕ್ಕುಮೊ ಸಯ್ಪಿನಿಂ ಸಮನಿಕ್ಕು[10]ಮಲ್ತೆ[11] ಸಮಾಹಿತಂ ೯೫

೧ ರಾರಾ (ಮ,ಮೈ,ನ) ೨ ರಾರಾ (ಮ,ಮೈ) ೩ ರಾರ (ಮ,ಮೈ,ನ) ೪ ತನಗಂ (ಮೈ,ನ)
೫ ಕೂಡದೊಂ (ಮೈ) ೬ ಮನಿ (ನ) ೭ ಬೇಟ (ನ) ೮ ವರರ್ಕಳಂ (ಮೈ) ೯ ಮನ್ನರ (ನ)
೧೦ ನಕ್ಕು (ನ) ೧೧ ಮಂತೆ (ಮ)

ಸೂತ್ರಂ ೧೯

ಅಕ್ಕುಮನುಸ್ವಾರಮುದಂ
ತಕ್ಕೆ ಸಮಂತೆಲ್ಲಿಯಾದೊಡಂ ಮತ್ತದಱಿಂ
ಮಿಕ್ಕುವಱೊಳ್ ಲೋಪಂ ತಾ
ನಕ್ಕುಂ ಪ್ರಥಮೈಕವಚನಮಂತೊಂ[1]ದಕ್ಕುಂ ೯೬

ಪ್ರಯೋಗಂ : (ಪ್ರಥಮೆಗೆ) :

೧ ಬಗಿದು[2] ಪುಗಲ್ಕರಿದೆಲ್ಲಿಯು
ಮೊಗೆದ ಮರಂ ಪೊದಱು ಬಳ್ಳಿ ಗಿಡುವೆಂಬಿವಱಿಂ
ಮಿಗಿಲೆನಿಪ ಬಲ್ಲೆ ನಗಸಾ
ನುಗಳೊಳದಂತಾವ ಮೆಯ್ಯೊಳಂ ಪುದಿದಿರ್ಕುಂ ೯೭

ಸೂತ್ರಂ ೨೦

ಕೇವಲಮುದಂತಲಿಂಗದೊ
ಳಾವರ್ಜಿತಮಪ್ಪ ಮಾಗಮಂ ಗಳ್ಗಕ್ಕುಂ
ತಾವೊಂದಿ ಬಿಂದುಗಳ್ಗು
ದ್ಭಾವಿಸಿ ನೆಗಳ್ಗುಂ ಮ ನಂ ಸ್ವರಂ ನಿಲೆ ಪರದೊಳ್ ೯೮

ಪ್ರಯೋಗಂ : ಪೂರ್ವಾರ್ಧಕ್ಕೆ : ('ಮ್' ಆಗಮಕ್ಕೆ) :

೧ ಪೊಂಗಳಸಂಗಳಿನೆಸೆವು
ತ್ತುಂಗಧ್ವಜತೋರಣಂಗಳಿಂ ಸೊಗಯಿಪ ಕೂ
ಟಂಗಳಿನೆಲ್ಲಂ[3] ನಾಡೆ ಮ
ನಂಗೊಳಿಪುವು ಪುರದ ರಮ್ಯಹರ್ಮ್ಯಚಯಂಗಳ್ ೯೯

ಅಪರಾರ್ಧಕ್ಕೆ : (ಅನುಸ್ವಾರದ 'ಮ','ನ' ಕಾರಗಳಿಗೆ) :

೨ ಹರನಗಮಿಂತಿದು ಲಂಕೇ
ಶ್ವರನೀ ಗಿರಿವರಮನೊತ್ತಿ ಕಿೞ್ತೆತ್ತಿದನ
ಚ್ಚರಿವಟ್ಟು ಸುರವಿಯಚ್ಚರ
ಗರುಡೋರಗಸಮಿತಿ ನೆರೆದು ನಡೆ ನೋಡುವಿನಂ ೧೦೦

೧ ಮತ್ತೊಂ (ನ) ೨ ಬಗೆದು (ನ) ೩ ಗಳಿವೆಲ್ಲಂ (ಮ,ನ); ಗಳವೆಲ್ಲಂ (ಮೈ,ನ)

ಸೂತ್ರಂ ೨೧

ಅವು ಪರವಾಗಿರೆ ಲಿಂಗಾಂ
ತವರ್ಣಲೋಪಂ ಗುಣೋಕ್ತಿಗಕ್ಕುಂ ಪ್ರಾಯಂ
ಸ್ವವಿಭಕ್ತ್ಯಾದ್ಯಕ್ಷರವಾ
ಗಿ ವರ್ತಿಕುಂ ಸರ್ವನಾಮದೊಳ್ ಮತ್ತದುವುಂ ೧೦೧

ಪ್ರಯೋಗಂ : ('ಅವು' ಪರವಾದಾಗ ಗುಣವಚನದ ಅಂತ್ಯಲೋಪಕ್ಕೆ) :

೧ ಇನಿಯವು ವಿಷಯಸುಖಂ ನಂ
ಜಿನ ಸವಿವೊಲ್ ತತ್‌ಕ್ಷಣಂ ವ್ರತಾಚರಣಂ ಮು
ರ್ದಿನ ಕಯ್ಪಿಯಂತೆ ವಿರಸಂ
ಮುನಕ್ಕವೆರಡುಂ ವಿಪಾಕವಿಪರೀತಂಗಳ್ ೧೦೨

ಪ್ರಾಯೋಗ್ರಹಣಕ್ಕೆ :

೨ ಬಂಡ[೧]ಣದೊಳೆನ್ನನೋಡಿಸಿ
ಕೊಂಡುಯ್ದಂ ನಿನ್ನನಾ ಸರಿತ್ಸುತನಾನುಂ
ಪೆಂಡತಿಯೆನಾದೆನದಱಿಂ
ಪೆಂಡಿರ್ ಪೆಂಡಿರೊಳದೆಂತು ಬೆರಸು[೨]ವರಬಲೇ ೧೦೩

(ಪಂಪನ ವಿಕ್ರಮಾರ್ಜುನವಿಜಯ ೧,೭೬)

ಸೂತ್ರಂ ೨೨

ಸ್ವರಮಿದಿರೊಳಕಾರಾಂತ
ಕ್ಕಿರೆ ನಾಗಮುಮಕ್ಕುಮಲ್ಲಿ ಪುಲ್ಲಿಂಗ[೩]ದೊಳ
ನ್ನೆರ[೩]ಡನೆಯ ವಿಭಕ್ತಿಯುನ
ತ್ತಿರಲಿತ್ತು ನಪುಂಸಕಕ್ಕೆ ದಾಗಮುಮಕ್ಕುಂ ೧೦೪

ಪ್ರಯೋಗಂ: (ಪುಲ್ಲಿಂಗದೊಳ್ 'ನ್' ಅಗಮುಕ್ಕೆ) :

೧ ಇವನಧಿಕಪುಣ್ಯನೀತನ
ನವಶ್ಯಮೋಲಗಿಸೆ ತೀರ್ಗು[೪]ಮಭಿಮತಮಿವನಿಂ
ಭುವನವಿಶೇಷಕರಾರೆಂ
ದವನವನತ[೫]ನಾದನಾ ಧರಾಧಿಪನಡಿಯೊಳ್ ೧೦೫

೧ ಭಂಡ(ಮೈ) ೨ ಕೂಡು(ಕಾ) ೩-೩ ದೊಳಂ ಎರ(ನ) ೪ ತೋರ್ಗು(ಮು, ಮೈ, ನ) ೫ ನತನವ(ನ)

(ನಪುಂಸಕದಲ್ಲಿ ' ದ್ ' ಆಗಮಕ್ಕೆ) :

೨ ಮನದಿಂ ಬೇಗಂ ಮುಟ್ಟಿದ[೧]
ನನೂನಫಲಕುಸುಮಪಲ್ಲವ[೨]ಭ್ರಾಜಿತಮುಂ
ಬನದೊಳಗೆ ಪವನನಂದನ
ನನಿಂದ್ಯಗುಣನೆಸೆವಶೋಕಧಾತ್ರೀರುಹಮುಂ[೩] ೧೦೬

ಸೂತ್ರಂ ೨೩

ಮತ್ತಾ[೪] ದ್ವಿತೀಯೆಗಂ ಮು ನ
ವೊತ್ತರಿಸಿರ್ಕುಂ ವಿಭಾಷೆಯಿಂ ನಿಧನ[೫]ದೊಳಂ
ಪತ್ತಿ ನಿಮಿರ್ದಮರ್ದು ನಿಲ್ಕುಮು
ದಾತ್ತತೆ ಮಿಗೆ ದಂ ತೃತೀಯೆಗೇದಂತಂ ಮೇಣ್ ೧೦೭

ಪ್ರಯೋಗಂ : ದ್ವಿತೀಯೆಗೆ :

೧ ನೆಲನಂ ನುಂಗಲುಮಂಬುಧಿ
ಜಲಮಂ ತವೆ ತುಳ್ಕಲುಂ ಕುಲಾಚಲಕುಲಮಂ
ನೆಲೆಯಿಂ ಕಿಱಲುಂ[೬] ತಾರಾ
ವಲಿಯನುದಿರ್ಚಲುಮೊಡರ್ಚಿದಂ ಚಕ್ರಧರಂ ೧೦೮

೨ ಹರನಗಮಿಂತಿದು ಲಂಕೇ
ಶ್ವರನೀ ಗಿರಿವರಮನೊತ್ತಿ ಕಿಱತ್ತಿದನ
ಚ್ಚರಿವಟ್ಟು ಸುರವಿಯಚ್ಚರ
ಗರುಡೋರಗಸಮಿತಿ ಮುಚ್ಚಿ ತಲೆದೂಗುವಿನಂ * ೧೦೯

ತೃತೀಯೆಗೆ :

೩ ಭಯದಿಂದಂ ಮುಳಿಸಿಂದಂ
ಸ್ಮಯದಿಂದಂ ರಾಗದಿಂದಮುಳಿಪಿಂದಂ ದು
ರ್ಣಯಮುಂ ಭಾವಿಸದೆ ಯದೃ
ಚ್ಛೆಯಿಂದೆ ನೆಗಲ್ವಂಗೆ ತೀರ್ವ ಕಜ್ಜಮುಮೊಳವೇ ೧೧೦

೧ ಪುಟ್ಟಿದ (ದರ್ಪಣ) ೨ ಕಿಸಲಯ (ಸಾ.ದರ್ಪಣ) ೩ ಹದಿಂ(ಸಾ.ದರ್ಪಣ) ೪ ಮತ್ತಂ(ನ) ೫ ನಿನದ (ಮ) ೬ ನೆಗಪಲ್ (ನ)

* ಇದು ೧೧೦ನೆಯ ಪದ್ಯವಾಗಿ ಮೊದಲೊಮ್ಮೆ (ಕಡೆಯ ಸಾಲಿನಲ್ಲಿ ಸ್ವಲ್ಪ ವ್ಯತ್ಯಾಸದಿಂದ) ಬಂದಿದೆ. 'ಇದು ಒಂದು ಪ್ರತಿಯಲ್ಲಿ ಇಲ್ಲ' (ನ)

ಮತ್ತೇಭವಿಕ್ರೀಡಿತಂ

೪ ಬಗೆದಂತಾಗೆ ಸುರೇಂದ್ರರಿಂ ಕ್ರಮದೆ ಕಲ್ಯಾಣದ್ವಯಂ ಜೈನದೀ
ಕ್ಷೆಗೆ ಪೂಣ್ದ ಕ್ಷಯಪುಣ್ಯನುಗ್ರ೧ತಪಮೆಂಬುಗ್ರಾಸಿಯಿಂ ಕೂಡೆ ಘಾ
ತಿಗಳಂ ಘಾತಿಸಿ ತದ್ಯುಗಂಧರಮಹಾಯೋಗೀಶ್ವರಂ ಪೊರ್ದಿದಂ೨
ನೆಗಳ್ದಾರ್ಹಂತ್ಯಮನೇನನೀಯದೊ ಶುಭಧ್ಯಾನೋಪಯೋಗೋದಯಂ ೧೧೧

(ಪಂಪನ ಆದಿಪುರಾಣ ೩,೮೦)

ಸೂತ್ರಂ ೨೪

ಅಕ್ಕುಂ ಬಹುಳಮುಕಾರಾಂ
ತಕ್ಕೆ ತೃತೀಯಾದಿ೩ಗಳೊಳಿನಾ೩ಗಮಮಱುವೆಂ
ದಕ್ಕುಮವು ಸರ್ವನಾಮದ೪
ಪಕ್ಕದೊಳಿರೆ ಮೊದಲೊಳಿರ್ದುಕಾರದ ನೆಲೆಯೊಳ್ ೧೧೨

ಉದಾಹರಣೆ : **ಪೂರ್ವಾರ್ಧಕ್ಕೆ : (‘ಇನ್’ ಆಗಮಕ್ಕೆ) :**

೧ ಮನುವಿನ ಮಾರ್ಗಂ ಸುರಗುರು
ವಿನಱಿವು ಪವಮಾನಸೂನುವೊಂದಾಯತಿ ಪೆಂ
ಪಿನೊಳೆಸೆವ ಕರ್ಣನೊರ್ನುಡಿ೫
ತನಗವು ನಿಜಮಾಗೆ ನೆಗಳ್ದನಾ ವಿಭುವಿಳೆಯೊಳ್ ೧೧೩

ಅಪರಾರ್ಧಕ್ಕೆ : (‘ಅಱ್’ ಆಗಮಕ್ಕೆ) :

೨ ಅದಱಿಂದಾನೊಂದಂ ಬೇ
ಡಿದಪೆಂ ಮಾರ್ಕೊಳ್ಳದೀವುದೆಂಬುದುಮದಱೊಳ್
ಪುದಿದನುರಾಗಂ ಮಾಣ್ದಿರೆ
ತದಸ್ತುವೆಂದಿತ್ತನಮಳವಸ್ತುವನಾತಂ೬ ೧೧೪

ಸೂತ್ರಂ ೨೫

ಮೊದಲೊಳನುಸ್ವಾರಂ ಬೆರ
ಸದಂತಪುಲ್ಲಿಂಗದೊಳ್ ಗೆಯಕ್ಕುಂ ದ್ವಿತ್ವಂ
ವಿದಿತನಪುಂಸಕದೊಳ್ ಪ
ಕ್ಷದಿಂ ತೃತೀಯಂ ಚತುರ್ಥಿಗಂತು ಬಿಡುವಱೊಳ್ ೧೧೫

೧ ದುಗ್ರ (ಮ) ೨ ತಾಳ್ದಿದಂ (ಕಾ) ೩-೩ ಗಳ್ಗಿನಾ (ನ) ೪ ನಾಮದೆ (ನ) ೫ ನೊಳ್ನುಡಿ (ಮ, ಮೈ, ನ, ದರ್ಪಣ) ೬ ನಾದಂ (ನ)

ಪ್ರಯೋಗಂ : (ಚತುರ್ಥಿಗೆ) :

೧ ಆತಂಗವಾಕೆಗಂ ವಿ
ಖ್ಯಾತಯಶಂ ಪುಟ್ಟಿದಂ ಕುಲಕ್ಕಂ ಚಲಕಂ
ಭೂತಳದೊಳಾರ್ಗಮಧಿಕಂ
ನೀತಿಪರಂ ಪರಬಲಾಬ್ಧಿಗೌರ್ವಪ್ರತಿಮಂ ೧೧೬

ಸೂತ್ರಂ ೨೬

ಅತ್ತಣಿ೧ಮೆಂದನುಸಂಧಿಸಿ
ಯೊತ್ತಂಬರದಿಂ೧ ತಗುಳ್ಚುವರ್ ಪಂಚಮಿಯೊಳ್
ಬಿತ್ತರಿಸುವರ್ ತೃತೀಯಾ
ವೃತ್ತಿಯುಮಂ ಪಂಚಮೀಪ್ರಯೋಗದೊಳರೆಬರ್ ೧೧೭

ಉದಾಹರಣೆ : (ಪಂಚಮಿಗೆ) :

ಚಂಪಕಮಾಲೆ

೧ ಕವಡಿಕೆ ಬಂದುದೋಪ೨ಳುಲಿ೨ದಟ್ಟಿದಳಾಳ್ದನ ನಂಟರತ್ತ೩ಣಿಂ
ದವದಳವಾಯ್ತು ಪೋಯ್ತುರವಣಂ ಪೊಲೆವಾವುಗೆನೆಂಬ೪ನಾದನಿ
ನ್ನವಧರಿಸಲ್ಕವಾಜಿ೫ನೆನುತುಂ೫ ಮುಗುಲ್ದಾಡುವ೬ನಿಲ್ಲಜಂಗೆ ತಾಂ
ಕವಡಿಕೆ ಕೆಯ್ಯೊಳಿರ್ದುಮವು ಮುಂದಲೆ೭ಯೊಳ್ ನೆಲಸಿರ್ದುವಲ್ಲವೇ ೧೧೮

(ಪಂಚಮ್ಯರ್ಥದ ತೃತೀಯೆಗೆ) :

ಮಣಿವಿಭೂಷಣವೃತ್ತಂ

೨ ಮತ್ತಹಸ್ತಿಗಳ ಮಸ್ತಕದಿಂ ಬಿದಿರಿಂ ಫಣೀಂ
ದ್ರೋತ್ತಮಾಂಗದಿನಗುರ್ವಿಪ ಪಂದಿಯ ಕೋಲ್ಕಳಿಂ
ಪತ್ತುವಿಟ್ಟಗನಿಕುಂಜ೮ದೊಳೊಕ್ಕಳಮುತ್ತನಾ
ಯುತ್ತುಮಿರ್ಪ ಶಬರಪ್ರಿಯಕಾಮಿನಿಯರ್ಕಳ೯ ೧೧೯

೧-೧ ನೆತ್ತನುಬಂಧಿಸಿ।ಕು (ತು) ತ್ತುಂಬ ದನಂ (ಮೈ, ನ)
೨ ದುವೋಪ (ನ) ೩ ನಂಟನತ್ತ (ನ)
೪ ನಂಬ, ವೆಂಬ (ನ) ೫ ವೆನುತುಂ (ನ)
೬ ಮುಗುಟಿರ್ದೋಡುವ (ನ) ೭ ಮೂದಲೆ (ಮ)
೮ ನಿಕಾಯ (ಮ, ಮೈ, ನ, ಸಾ. ದರ್ಪಣ) ೯ ನಿಯರ್ಕಳಿಂ (ಮ, ನ, ದರ್ಪಣ)

ಸೂತ್ರಂ ೨೭

ಆದಿವಿಭಕ್ತಿಯೊಳಂ ಸ್ವಾ
ಮ್ಯಾದಿಯೊಳಂ ಷಷ್ಠಿ ತಾನದಕ್ಕುಂ ಕೆಲರು
ತ್ಪಾದಿಸುವರ್ ಸ್ವಾಮಿತ್ವದೊ
ಳಾದಮುಭೇದದೆ ಚತುರ್ಥಿಯಂ ಷಷ್ಠಿಯುಮಂ ೧೨೦

ಲಕ್ಷ್ಯಂ : (ಷಷ್ಠಿಗೆ) :

೧ ಕಿವಿಗಾದ ಸಂತಸಂ ಕ
ಣ್ಗವತರಿಸಿದುದೀಗಳೆಮಗೆ ಕಾಮಾಂಧಕಿ[೧]ಗ
ಳ್ಗವದಾತಮಂತ್ರಸಿದ್ಧಿಯು
ಮವಯುವದಿಂದಾಯ್ತು ನಿನ್ನ ಬರೆ ಮುರ[೨]ಮಥನಾ ೧೨೧

ಅದಲ್ಲದೆಯುಂ : (ಪ್ರಥಮಾರ್ಥದ ಷಷ್ಠಿಗೆ) :

ಸ್ವಾಗತವೃತ್ತಂ

೨ ತೆಂಕವಕ್ಕ[೩]ದೊಳಸಂಖ್ಯಬಲಂ ನಿಃ
ಶಂಕೆಯಿಂ ನೃಪನ ಪೇೞೆ ವಿರುದ್ಧಾ
ತಂಕನಳ್ಕುೞೆ ಸುಶರ್ಮ[೪]ನೃಪಂ ವೀ
ತಾಂಕುಶಂ ತುೞುಗೊಳಲ್ ಪೊೞಮುಟ್ಟಂ[೫] ೧೨೨

ಸ್ವಾಮ್ಯಾದಿಗೆ : (ಸ್ವಾಮಿತ್ವದಲ್ಲಿಯ ಚತುರ್ಥಿ ಮತ್ತು ಷಷ್ಠಿಗಳಿಗೆ) :

ಚಂಪಕಮಾಲೆ

೩ ಮದನನ ಕೆಯ್ದುವೆಲ್ಲಿದನನಂಗನ ಕೆಯ್ಪೊಡೆ[೬]ಯೆಲ್ಲಿದಂ ವಿಲಾ
ಸವ ಕಣಿಯೆಲ್ಲಿದಂ ಚದುರ ಪುಟ್ಟದ[೭]ನೆಲ್ಲಿದನೆಲ್ಲಿದಂ ವಿನೋ
ದದ ಮೊದಲೆಲ್ಲಿದಂ ಸೊಬಗಿನಾಗರಮೆಲ್ಲಿದನಿಚ್ಚೆಯಾಣ್ಮನೆ
ಲ್ಲಿದನೆರ್ದೆಗಾಣ್ಮ[೮]ನೆನ್ನರಸನೆಲ್ಲಿದನೋ ಲಲಿತಾಂಗವಲ್ಲಭಂ ೧೨೩
(ಪಂಪನ ಆದಿಪುರಾಣ ೩,೧೫)

೧ ಕಾಮುಂದಕಿ (ಮು, ಮ್ಯೈ, ನ) ೨ ಮಧು (ನ) ೩ ತೆಂಕವಂಕ (ಕಾ) ೪ ಸುವರ್ಮ (ಮು)
೫ ಮೊೞಮುಟ್ಟಂ (ನ) ೬ ಕೆಯ್ಪಿಡಿ (ಕಾ) ೭ ನೆಲ್ಲಿದ (ಕಾ) ೮ ನೆರ್ದೆಯಾಣ್ಮ (ಪಾ)

ಅಪರಾರ್ಧಕ್ಕೆ : (ಸ್ವಾಮಿತ್ವದಲ್ಲಿಯ ಚತುರ್ಥಿಗೆ) :

ಸ್ವಾಗತವೃತ್ತಂ

೪ ಈತನೀ ನೆಲನನಾಳ್ವರಸಂ ಕೇ
ಳೀತನೀ ಧರಣಿಗೀಶ್ವರನೇಮಾ
ತೀತನೀ ವಿಷಯನಾಯಕನೀ ತೋ
ರ್ಪಾತನೀ ದೆಸೆಯ ನಾಲ್ಕ[1]ಧಿನಾಥಂ ೧೨೪

ಸೂತ್ರಂ ೨೯

ಗುಣದಿಂ ಕ್ರಿಯೆಯಿಂ ನಿರ್ಧಾ
ರಣೆಯೊಳ್[2] ಸಪ್ತಮಿಯುಮುಕ್ಕುಮಾದಿಯದಾಮುಂ
ತ್ರಣದೊಳ್ ನೆಗಳ್ಗುಂ ಸಾಧಾ
ರಣದೊಳ್ ಲೋಪಂ ತದೇಕವಚನಕ್ಕಕ್ಕುಂ ೧೨೫

ಲಕ್ಷ್ಯಂ : ಪೂರ್ವಾರ್ಧಕ್ಕೆ : (ಸಪ್ತಮಿಗೆ) :

ಚಂಪಕಮಾಲೆ

೧ ಸುರರೊಳಗೆಂತು ವಜ್ರಿ ಭಗಣಂಗಳೊಳೆಂತು ಸುಧಾ[3]ಕರಂ ಮಹಾ
ಗಿರಿಗಳೊಳೆಂತು ಮೇರು ಭುಜಗಂಗಳೊಳೆಂತು ಭುಜಂಗನಾಯಕಂ
ನರರೊಳಗೆಂತು ಚಕ್ರಿ ವಿಹಗಂಗಳೊಳೆಂತು ಗರುತ್ಮನಂತೆ ನೀಂ
ಪಿರಿಯೆ ಜಿನೇಂದ್ರ ದೇವರೊಳಗಿಂದ್ರ[4]ನರೇಂದ್ರಫಣೀಂದ್ರ[5]ವಂದಿತಾ ೧೨೬

ಅಪರಾರ್ಧಕ್ಕೆ : (ಸಂಬೋಧನೆಗೆ) :

ಮತ್ತೇಭವಿಕ್ರೀಡಿತಂ

೨ ಚತುರಂತಕ್ಷಿತಿಕಾಂತೆ ಕೇಳ್ ಜಲಧಿ ಕೇಳ್ ಸಪ್ತಾರ್ಚಿ ಕೇಳ್ ತಾತ ಮಾ
ರುತ ಕೇಳ್ ಮಾರುತಮಾರ್ಗ ಕೇಳ್ ಪಗೆವನಂ ಕೊಂದೆನ್ನ ಕೋಪಾಗ್ನಿಗಾ
ಹುತಿಮಾೞ್ಪೆಂ ಕೊಲಲಾಱದಂದು ತಱಿಸಂದಾನೆನ್ನನಿಂದಗ್ನಿ[6]ಗಾ
ಹುತಿಮಾೞ್ಪೆಂ ಗಡ[7]ಮೆಂದು ಪೂಣ್ದೊದಱಿದಂ[8] ಕೌರವ್ಯಕೋಳಾಹಳಂ[9]

(ರನ್ನನ ಗದಾಯುದ್ಧ ೬,೨೩)

೧ ನಾಱ್ಗ (ಮು,ಮೈ) ೨ ರಣದಿಂ (ಮು,ಮೈ) ೩ ನಿಶಾ (ನ) ೪-೫ ಮುನೀಂದ್ರನರೇಂದ್ರ (ಮೈ,ನ) ೬ ಸಂದಗ್ನಿ(ಪ) ೭ ಗಡಿ(ಕಾ) ೮ ದೊಳಱಿದಂ (ಮೈ) ೯ ಕಾಳಾನಳಂ(ಮು,ಮೈ,ನ)

ಸೂತ್ರಂ ೨೯

ಭಾಷೆಯೊಳೇಕತ್ವಕ್ಕವಿ[೧]
ಶೇಷದಿನೇದಂತಮಲ್ಲಿ ವರ್ತಿಸುಗುಮಿರಾ
ಶ್ಲೇಷಂ ತಾನಕ್ಕುಂ ಪರಿ
ಶೇಷದ್ವಿಬಹುತ್ವವಿಷಯಮೆನಿತನಿತರ್ಕಂ ೧೨೮

ಪ್ರಯೋಗಂ: (ಸಂಬೋಧನೆಯಲ್ಲಿ ಏಕವಚನದ 'ಏ' ಗೆ) :

ಮತ್ತೇಭವಿಕ್ರೀಡಿತಂ

೧ ಎಳಮಾವೇ ತಳಿರುಯ್ಯಲೇ ಕೊಳೆ ತಗುಳ್ದಿಂದೋಳಮೇ ಕೋಗಿಲೇ
ಗಿಳಿಯೇ ತುಂಬಿಯ ಬಂಬಲೇ ಪುಳಿನಮೇ ಬೆಳ್ದಿಂಗಳೇ ಚಂದ್ರನೇ
ಕೊಳನೇ ನಂದನಮೇ ಲತಾಭವನಮೇ ಸುಗ್ಗೀ ಕರಂ ಬರ್ದಿದೆಂ[೨]
ಗಳ ನೀಮೆಲ್ಲರುಮೆನ್ನ ಬರ್ದುಗೆಯನಾ ನಲ್ಲಂಗೆ ಪೇೞಿಂ ಗಡಿಂ[೩] ೧೨೯

(ಬಹುವಚನದ 'ಇರ' ಕ್ಕೆ) :

ಚಂಪಕಮಾಲೆ

೨ ಸುರತರುನಂದನಂಗಳಿರ ರತ್ನಪಿನದ್ಧವಿಮಾನಕುಟ್ಟಿಮಾಂ
ತರಸುರತಾ[೪]ಲಯಂಗಳಿರ ಚಾರುವಿಲೋಲಕಟಾಕ್ಷಪಾತಸೌಂ[೫]
ದರಪರಿವಾರದೇವಿಯರಿರಾ ಕಡುಕೆಯ್ದು ಕೃತಾಂತನಿಂತು ನಿ
ರ್ನೆರಮೆೞೆದುಯ್ಯೆ ಬಾರಿಸದೆ ಕೆಮ್ಮನುಪೇಕ್ಷಿಸಿ ನೋಡುತಿರ್ಪಿರೇ[೬] ೧೩೦
(ಪಂಪನ ಆದಿಪುರಾಣ ೩,೪)

ಸೂತ್ರಂ ೩೦

ಎಸೆದಿರೆ ನಿಲ್ಕುಂ ಸಂಬೋ
ಧಿಸುವೆಡೆಗಳೊಳಮರ್ದು ದೇಸೆಯಿಂ ಮಾರ್ಗದೊಳಂ
ನಿಸದಂ ಕ್ರಮುಗತಿಯೊಳತಿ
ಪ್ರಶಸ್ತಿಯಿಂ ಹ್ರಸ್ವದೀರ್ಘಕಾಕುಗಳೆರಡುಂ ೧೩೧

೧ ಕ್ಕೆವಿ (ನ) ೨ ಬಂದಿದೇಂ (ನ) ೩ ಗಡಾ (ನ, ೪ ಸುರಸಾ (ಪ, ದರ್ಪಣ) ೫ ಸುಂ (ಕಾ, ದರ್ಪಣ) ೬ ತಿರ್ಪುದೇ (ಕಾ); ತಿರ್ಪರೇ (ನ)

ಪ್ರಯೋಗಂ : ಹ್ರಸ್ವಕ್ಕೆ :

ಸ್ವಾಗತವೃತ್ತಂ

೧ ಕೇಳ ಮಾಧವ ಭವನ್ಮಥಿತವ್ಯಾ[೧]
ಳೋಳದಾನವಕುಲಾಂಬುಧಿಲಬ್ಧೋ
ನ್ಮೀಳನಂ [೨]ಭುವನಸಂಹೃತಿ[೨]ಮೂಲಂ
ಕಾಳಕೂಟಮೆನೆ [೩]ಪುಟ್ಟಿ ನಿಶಾಟಂ[೩] ೧೩೨

ದೀರ್ಘಕ್ಕೆ :

೨ ವಾರಣೇಂದ್ರಮಣಿಹೇಮವರಸ್ತ್ರೀ
ಸಾರವಸ್ತುಚಯಮುಂ ಕ್ರಮದಿಂ ಕೆಯ್-
ಸಾರಲಾಟಿಸು[೪]ವೊಡಿಂ ತಡವಲ್ತೇ[೪]
ಕಾರಣಂ[೫] ಕುರುಪತೀ ನಮ[೬]ಗೀಗಳ್ ೧೩೩

ಸೂತ್ರಂ ೩೧

ಸ್ವರಸಂಜ್ಞಕಂಗಳಮರ್ದೊಂ
ದಿರೆ ಮುಂದೆ ವಿಕಲ್ಪದಿಂ ದ್ವಿತೀಯೆಗೆ ದೀರ್ಘಂ
ದೊರೆಕೊಳ್ಗುಮೆಲ್ಲಿಯಾನುಂ
ಪುರಾತನೋಕ್ತಿಗಳೊಳಂತ[೭]ದಲ್ಲಿ ಯಥೇಷ್ಟಂ ೧೩೪

ಪ್ರಯೋಗಂ : (ದ್ವಿತೀಯೆಯ ದೀರ್ಘಕ್ಕೆ):

ಪೃಥ್ವೀವೃತ್ತಂ

೧ ದಿವಾಕರನ ಪುಟ್ಟಿ ಪೋದ ದಿತಿಜಾಂಡಖಂಡಂಗಳಾ
ನವಂ ಪಿಡಿದು ಪದ್ಮಜಂ ತಗುಳೆ ಪಾಡಿ ಸಾ[೮]ಮಂಗಳಂ
ಸವರ್ಷಜಲ[೯] ಜಾತಿಗಂಧಮುದಕೋಪಸತ್ತ್ವಂಗಳಾ
ನವಂ ಪಡೆದನಿಂದ್ರಜಾಲಿಗನ ಪೋಲೆ ಕಣ್ಗೊಪ್ಪಿದಂ[೧೦] ೧೩೫

೧ ತಾವ್ಯಾ (ನ) ೨-೨ ಯುವನಸಂಹತಿ (ನ) ೩-೩ ಪುಟ್ಟಿತು ಶಾಪಂ (ನ) ೪-೪ ವುದಿಂ ತಡಮಲ್ತೇ (ನ); ವೊಡಿಂ ತಡವಂತೇಂ (ಪ, ದರ್ಪಣ) ೫ ವಾರಣಂ(ನ) ೬ ಎಮ(ನ, ದರ್ಪಣ) ೭ ಳಱಿವು (ನ) ೮ ನಾ (ಮೈ, ನ) ೯ ಸವರ್ಷಬಲ (ಮೈ); ಸುವರ್ಷಬಲ (ನ) ೧೦ ದೆಂ(ಮ)

ಸೂತ್ರಂ ೩೨

ತುದಿಯೊಳ್ ದೀರ್ಘಾದೇಶಂ
ಪೊದಟ್ಬ್ದು[೧] ಷಷ್ಠೀವಿಭಕ್ತಿಗರೆಬರ ಮತದಿಂ
ಪುದಿದಿರ್ಕುಂ ಕೆಲಬರ್ ಖೇ
ದದೊಳಂ ಸಂಭ್ರಮದೊಳಂ ಪ್ರಯೋಗಿಸುವರದಂ ೧೩೬

ಪ್ರಯೋಗಂ : ಷಷ್ಠಿಯ ದೀರ್ಘಕ್ಕೆ :

ಮಹಾಸ್ರಗ್ಧರೆ

೧ ಮೃಡನಾ ಗಂಗಾಂಬುಧಾರಾಜಟಿಲಿತಜಟನಾ ಪಾದಯುಗ್ಮಕ್ಕೆ[೨] ಮುನ್ನಂ
ಪೊಡೆವಟ್ಟಿಂದ್ರಂ ಬಱಿಕ್ಕೀಕೆಗೆ ಪೊಡೆವಡೆ ತನ್ಮೌಲಿರತ್ನಪ್ರತಾನಂ
ತೊಡ[೩]ರ್ದುದ್ಯದ್ದ್ಯುತಿ ತಟ್ಟುತ್ತಡಿವಳಿರ್ಗ[೪]ಳವಿನ್ನೂಡಿದಂತಪ್ಪುವೀಗಳ್[೪]
ಮುಡಿದತ್ತಿಂದ್ರಂಗಮುಗ್ರಾಸುರಬಲಮಥನೋದ್ಯೋಗಯೋಗಪ್ರಯೋಗಂ

ಖೇದಸಂಭ್ರಮಂಗಳ್ಗೆ : (ಖೇದದೊಳ್ ದೀರ್ಘಕ್ಕೆ) :

ಉತ್ಪಲಮಾಲೆ

೨ ಪೊಂಬೆಸದಿಂದಮೆಯ್ದೆ ಸಮೆದಂತೆಸೆದೊಪ್ಪುವ ಬಣ್ಣಮುಂ ಕರಂ
ಪಂಬಲಿಸಲ್ಕೆ ತಕ್ಕವಚಱಾಗಿ[೫]ಸದೋಗರಗಂಪುಮಾವ ಪೂ
ವಿಂ ಬಗೆವಾಗಳಿಂತಿವಱೊಳಗ್ಗಳಮಾದೊಡಮುಕ್ಕಟಾ ಮರುಳ್-
ದುಂಬಿಗಳೇಕೆ ಸಂಪಗೆಗಳೊಳ್ ಪಗೆಗೊಂಡುವೊ ನಿರ್ನಿಮಿತ್ತದಿಂ ೧೩೮

(ಸಂಭ್ರಮದೊಳ್ ದೀರ್ಘಕ್ಕೆ) :

ಮತ್ತೇಭವಿಕ್ರೀಡಿತಂ

೩ ಪುಗಿಲಂ ಕ್ರೀಡನಶೀಲನಕ್ಕರಿಗ[೬]ನಾದಂ ಪಲ್ಲವಗ್ರಾಹಿ ವಾ
ಸುಗಿ ನಮ್ಮಾದುದನಾಗಲುಂ ನಮೆ[೭]ಯಲುಂ ಮೆಯ್ದುರ್ಕುಮೇ ತಾರ[೮]ನೆಂ
ಬೆ ಗಡಾ ವೇಳೆಯೆ[೯]ನೆಂಬ ಡೊಂಬ[೧೦]ನಱಿಯೆಂ [೧೧]ಕುತ್ತಂ ನೆಲಕ್ಕಿಕ್ಕಿ ದಂ[೧೧]
ದಗಲೆಂ ರಾಜಿಗ[೧೨] ನಿನ್ನನೆನ್ನೊಡಲೊಳೆನ್ನೀ ಪ್ರಾಣಮುಳ್ಳನ್ನೆಗಂ ೧೩೯

೧ ಪೊದಟ್ಬ್ದು(ನ) ೨ ಪದ್ಮಕ್ಕೆ (ಕಾ) ೩ ಪೊಡ (ನ) ೪-೪ ಳಿವಂ ಸೂಡಿದಂತಕ್ಕುಮಿಾಗಳ್(ನ); ಳವಿಂ ಮಾಡಿದಂತಪ್ಪುವೀಗಳ್ (ಮು) ೫ ಮಾಗಿ (ಮೈ) ೬ ಕ್ಕಗಿಲ (ನ) ೭ ಸಮೆ (ನ) ೮ ತಾರೆ (ನ) ೯ ಳೆಯ (ನ) ೧೦ ದೊಂಬ (ನ) ೧೧-೧೧ ಪುತ್ತಂ ನೆಲಕ್ಕಿಕ್ಕಲೆಂ (ನ) ೧೨ ರಾಜೆಗ, ದಾಜಿಗ (ನ)

ಸೂತ್ರಂ ೩೩

ಮೊದಲ ವಿಭಕ್ತಿಯೆ ವಾಕ್ಯದ
ಮೊದಲೊಳ್ ತುದಿದಿರೆಯುಮುರುವಿಶೇಷಣಗತಿಯಿಂ
ಪದಸಂತಾನಂ ತಾನದು
ತುದಿಯ ವಿಭಕ್ತಿಯೊಳೆ ಕಾರಕಾನ್ವಿತಮಕ್ಕುಂ ೧೪೦

ಪ್ರಯೋಗಂ : (ವಿಶೇಷಣಪದದ ಪ್ರಥಮೆಗೆ) :

೧ ಸಂಗತಸತ್ತ್ವರ್[೧] ಕುರುರಾ
ಜಂಗಂ ಕರ್ಣಂಗಮೇೞಿಸಲ್ಕರಿದನಿದಂ
ತಾಂ ಗಡಮೇೞಿಪನೀ ಪಾ
ರ್ಥಂಗಕ್ಕಟ ಮೆಯ್ಯೊಳೊಂದು ಮರುಳುಂಟಕ್ಕುಂ ೧೪೧
(ಪಂಪನ ವಿಕ್ರಮಾರ್ಜುನವಿಜಯ ೩, ೬೨)

(ವಿಶೇಷಣ-ವಿಶೇಷ್ಯಗಳ ವಿಭಕ್ತಿ ಒಂದೇ ಆದುದಕ್ಕೆ) :

೨ ನರಪರೊಳಗೊಂದು ಕೋಟಿಯು
ಮರೆ[೨] ಚಾಪ[೩]ಬಲಕ್ಕಧೀಶನಂ[೩] ದುಂದುಭಿಯಂ
[೪]ಬರಿಸಿ ಮದವರಜನೆಂದಂ[೪]
ತಿರೆ ನೆಗೞ್ದಿಂದಾಹವಕ್ಕೆ ಪೇೞ್ದಂ ಬೆಸನಂ ೧೪೨

ಸೂತ್ರಂ ೩೪

ಕಾರಕಮುಂ ಕ್ರಿಯೆಯುಂ ಕ್ರಿಯೆ
ಕಾರಕದಿಂದನ್ವಿತಾರ್ಥಮಾಗಿರ್ಪನಮ
ಧ್ಯಾರೋಪಮೆಯ್ದುಗುಂ ತತ್-
ಕಾರಕಗತಿಯೊಳ್[೫] ವಿಭಕ್ತಿ ಪರಿಣತಮಕ್ಕುಂ ೧೪೩

೧ ಸತ್ವಂ (ಕಾ;ಪಾ)
೨ ದರಿ (ಮೈ); ಮರಿ (ನ)
೩-೩ ಬಲಕಮಧೀಶನಂ (ಮ); ಬಲಕ್ಕಮಧಿಕನಂ (ನ)
೪-೪ ಬರಿಸಿದುದವರಜನೆಂದಂ (ಮೈ); ಬರಿಸಿದುದವರಜಸಂದಂ (ನ)
೫ ಯೊಳೆ (ನ)

ಪ್ರಯೋಗಂ : (ಅಧ್ಯಾರೋಪಕ್ಕೆ) :

ಚಂಪಕಮಾಲೆ

೧ ಅಮೃತದ ಕಂಡಸಕ್ಕರೆಯ ಕೂಟಮುಮೊಲ್ವಳ[1] ಕೂಟಮುಂ ಸಮಾ
ನಮೆ ವಲಮೊಲ್ಲದಳ್ಗೆ ವಿಟ[2]ನೇಟವಿಟಂ ಬರೆ ಕೂಟ[2]ಮಿಂಪನೀ
ಗುಮೆ ಬೆಲೆಗೊಂಡೆನಾ[3] ಬೆಲೆಗೆ ಮೆಯ್ವೆಲೆ ಮೆಯ್ ನಿನತಿತ್ತೆ[4]ನೆಂಬ ಕೂ
ಟಮುನದನೊಂದು ಕೂಟಮೆನಲಕ್ಕುಮೆ ನಂಜಿನ ಕಾಳಕೂಟಮುಂ ೧೪೪

೨ ಪಿಡಿಯೆ ಮೆಲಲ್ ಪಿಡಿ ಸೃಕ್ವದೊ
ಳಡಸಿದ ಪಲ್ಲವಕೆ ಪಲ್ಲಮುಱಿ ನಿಳ್ಕುವುದುಂ
ಕಡೆಗಣ್ಣೊಳ್ ಕಂಡೊಂದಿಭ
ಮುಡಿದಿತ್ತುದು ಸಾರ್ದ್ರಸಲ್ಲಕೀಪಲ್ಲವಮುಂ ೧೪೫

ವಿಭಕ್ತಿಪರಿಣಾಮಕ್ಕೆ :

ಮತ್ತೇಭವಿಕ್ರೀಡಿತಂ

೩ ಅಸುಹೃತ್ಸೇನೆಗೆ ಸಾಲ್ವನೊರ್ವನೆ ಗಡಂ ರುದ್ರಾವತಾರಂ ಗಡಂ
ನೊಸಲೊಳ್ ಕಣ್ ಗಡಮೆಂದು ನಚ್ಚಿ[5] ಪೊರೆದೆಂ ತಾನಕ್ಕೆ ತಮ್ಮಮ್ಮನ
ಕ್ಕಿಸಲಂಬಂ[6] ತಿರುವಾಯ್ಗೆ ತಂದಱವರೇ[7] ತಮ್ಮಿರ್ವರುಂ[8] ಕೆಯ್ದುವಂ
ಬಿಸುಟರ್ ಜೋಳದ ಪಾಟಿಯಂ ಬಗೆದರ್[9]ಲ್ಲಾ [10]ದ್ರೌಣಿಯುಂ
ದ್ರೋಣನುಂ[10] ೧೪೬

(ರನ್ನನ ಗದಾಯುದ್ಧ ೨,೧೭)

ಸೂತ್ರಂ ೩೫

ಜಾತಿಯೊಳಂ ಸಂಖ್ಯಾನಾ[11]
ಖ್ಯಾತಿಯೊಳಂ ಕೂಡಿ ನೆಗಟ್ಗುಮೇಕಬಹುತ್ವೋ
ದ್ಯೋತನಪರಮೇಕತ್ವಂ
ಮಾತೇಂ ಭಾವದೊಳಮೇಕ[12]ವಚನ[13]ಮೆ ಅಕ್ಕುಂ[13] ೧೪೭

೧ ಮೋಪಳ (ಮ,ಮೈ,ನ) ೨-೨ ನಾಟವಿಟಂ ಬರೆ ಕೂಟ (ಮ,ಮೈ); ನಾಟವಿಟಂ ಬಗೆ ಗೂಟ (ನ) ೩ ಗೊಂಡನಾ(ಮೈ) ೪ ನಿನತೆತ್ತೆ(ಮೈ); ನಿನಗಿತ್ತೆ (ನ) ೫ ನಂಬಿ(ಕಾ) ೬ ಲಂಬಿಂ (ಕಾ) ೭ ದಂದವರಿದಂ (ಮ,ಮೈ,ನ) ೮ ತಾಮಿರ್ವರುಂ (ಪಾ,ದರ್ಪಣ) ೯ ಬಗೆದರ (ನ); ಬಗೆದುದಿ (ಪ) ೧೦-೧೦ ದ್ರೋಣನುಂ ದ್ರೌಣಿಯುಂ (ಮ,ಮೈ) ೧೧ ನು(ನ) ೧೨ ದೇಕ(ಮ) ೧೩-೧೩ ಮೆಯಕ್ಕುಂ (ಮೈ)

ಪ್ರಯೋಗಂ : ಜಾತಿಗೆ :

೧ ಕರಿಯಿವು[1] ಕರಿಯಲ್ಲಿವು ಗಿರಿ
ಗಿರಿಯಲ್ಲಿವು ಕರಿ [2]ಕರೀಂದ್ರಮಲ್ಲಿವು ಗಿರಿ ಪೋ
ಕರಿಗಿರಿ[2]ಯೆಂದಿನಿಸಪ್ಪೊಡ
ಮರಣ್ಯದೊಳಗಱಿಯಲಾಗ ಕರಿಯಂ ಗಿರಿಯಂ ೧೪೮

ಸಂಖ್ಯೆಗೆ :

೨ ದೆಸೆ ಪತ್ತು ಜಲಧಿ ನಾಲ್ಕಾ
ಗಸವೊಂದು ಕುಲಾದ್ರಿಯೇೞು ತಾಮೆನೆ ಮತ್ತೀ
ವಸುಧಾಮಧ್ಯದೊಳೆತ್ತಲ್[3]
ಮಿಸುಕುವನಿನ್ನೆತ್ತಲುೞಿವನಹಿತಕ್ಷಿತಿಪಂ ೧೪೯

ಭಾವಕ್ಕೆ :

೩ ನಡುವಣ ಕರ್ಪುಂ ಕಡೆಯಣ
ಕಡುವೆಳ್ಪುಂ ತುದಿಯ ಕೂರ್ಪುಮೆಸೆದಿರೆ ವಿಟರಂ
ಬಿಡದಿಸಲೆ ತೆಗೆದ ಮದನನ
ನಿಡಿಯ[4]ಲರ್ಗಣೆಗಳನೆ ಪೋಲ್ತುವಾಕೆಯ ಕಣ್ಗಳ್ ೧೫೦

ಸಂಖ್ಯಾಜಾತಿವ್ಯತ್ಯಯಕ್ಕೆ :

ಸ್ವಾಗತವೃತ್ತಂ

೪ ಸಂತಮಿರ್ಪುದೆ[5] ನವಗ್ರಹಮಾಶಾ
ದಂತಿಗಳ್ ಪದುಳಮೇ ದಿವದೊಳ್ ನಿ
ಶ್ಚಿಂತಮಿರ್ಪರೆ ಸುರರ್ ದಿತಿಪುತ್ರಾ
ಕ್ರಾಂತಿಯಿಲ್ಲ[6] ವಲಮೆಂಬುದುಮಾಗಳ್ ೧೫೧

ಸೂತ್ರಂ ೩೬

ನೀನಾಂ ತಾನೆನಿಕುಂ ಪ್ರಥ
ಮಾನಿರ್ದೇಶಕ್ಕೆ ನಿನಗೆಯೆನಗೆ ತನಗೆಯೆಂ
ಬೀ ನುಡಿ ಚತುರ್ಥಿಯೊಳ್ ಸಲೆ
ತಾನಕ್ಕುಂ ಯುಷ್ಮದಸ್ಮದನ್ಯೋಕ್ತಿಗಳೊಳ್ ೧೫೨

೧ ಯವು (ನ) ೨-೨ ವರಂಗಳಲ್ಲಿವು ಕರಿ ಪೋ। ಗಿರಿವರ (ಮ, ಮೈ, ನ) ೩ ಳೆತ್ತಲು (ಮೈ)
೪ ನಿಡಿದ (ನ) ೫ ಮಿರ್ಪುವೆ (ನ) ೬ ಕ್ಲಾಂತಿಯಿಲ್ಲ (ಮ); ಕ್ರಾಂತಿಯಲ್ಲ (ನ)

ಉದಾಹರಣೆ : ('ಆಂ-ನೀಂ-ತಾಂ' ಗಳ್ಗೆ)

೧ ಆನುಂ ದುಶ್ಶಾಸನನುಂ
ನೀನುಂ ಮೂವರೆ ದಲಾತನುಂ ಕಲಿದ ಬಲಿ
ಕ್ಕಾನುಂ [೧]ನೀನೆ ದಲೀಗಳ್[೧]
ನೀನುಮಗಲ್ದೆತ್ತವೋದಯಂಗಾಧಿಪತೀ ೧೫೩
(ರನ್ನನ ಗದಾಯುದ್ಧ ೫,೧೧)

೨ ತಾನೆ ಗಡಳಿಪಂ[೨] ಮೂರ್ಖಂ
ತಾನೆ ಗಡಂ ತೊಡರ್ದು ಮುಡಿಗೆಗಂ ಬೋ[೩]ವಕ್ಕಂ
ತಾನೆ ಗಡ ಬರ್ಪನೆನಿಸುವೊ
ಡಾ [೪]ನರನಯ್ದಾಱು ದಿವಸಮುಂ [೫]ಬಟ್ಟಪನೇ[೬] ೧೫೪

ದ್ರುತವಿಲಂಬಿತವೃತ್ತಂ

೩ ಎನಗೆ ಕೂರ್ಪುದನಾ ಘಟಸಂಭವಂ
ನಿನಗೆ [೭]ಕೂರನಟಲ್ ನಿನತಲ್ತು[೭] ಕೇ
[೮]ಳೆನಿತುಮಾಱದಲ್[೮] ಶೋಕಮನಿರ್ವರುಂ[೯]
ಮುನಿವರಂ ತವೆ [೧೦]ಕೊಂದೊಡನೀಗುವಂ[೧೦] ೧೫೫
(ಪಂಪನ ವಿಕ್ರಮಾರ್ಜುನವಿಜಯ ೧೨,೩೬)

೪ ತನಗೆ ಮೇಗಿ[೧೧]ನಿಸೆಂಬನಿತಾದೊಡಾ
ವನುಮನಾವನುಮೊಲ್ಗುಮೆ ಮೆಚ್ಚಲಂ
ತಿನಿತು ಮೆಚ್ಚದರೆಲ್ಲಮನೆನ್ಗುಮೆಂ
ದನಿತಱಿಂ ಪಲಿ ಸಾರ್ಗುಮೆ ಗಂಡರಂ ೧೫೬

ಸೂತ್ರಂ ೩೭

ಅವನಾತನೆಂಬ ಮಾತುಗ
ಳವು ಪುಲ್ಲಿಂಗಪ್ರಯೋಗದೊಳ್ ಸ್ತ್ರೈಣದೊಳಿ
ನ್ನವಳಾಕೆಯೆಂಬ ನುಡಿ ಸಂ
ಭವಿಕುಂ ಶೇಷದೊಳದೆಂಬ ಮಾತೆಸೆದಿ[೧೨]ರ್ಕುಂ ೧೫೭

೧-೧ ನೀನೇ ಕಲಿಗಳ್ (ನ) ೨ ಗಳಿದಪಂ (ಮೈ,ನ) ೩ ಜೋ, ಚೌ (ನ) ೪-೬ ನವನ್ಯೆದಾಱು ದಿವಸದೊಳ್ ಬಂದಪನೇ (ನ) ೫-೬ ಬಟ್ಟಿಪಳೇ (ಮೈ) ೭-೭ ಕೂರನೆ ದಲ್ ನಿನಗಿತ್ತ (ನ) ೮-೮ ಳೆನಿತುಮಾಱದ (ಪ); ಳೆನತು ತಂದೆಯು (ಕಾ) ೯ ನಿರ್ವೆಮುಂ (ಕಾ) ೧೦-೧೦ ಕೊಂದೊಡೆ ನೀಗುವೆಂ (ನ) ೧೧ ಮೇಲಿ (ನ) ೧೨ ಮಾತೊಂದಿ (ನ)

ಪ್ರಯೋಗಂ : (‘ ಅವಂ-ಆತಂ-ಅವಳ್-ಆಕೆ ’ ಗಳ್ಗೆ) :

೧ ಅವನಾಕೆಯನಂತಾತನ
ನವಳುಮಗಲ್ದೊಂದು ಪೊೞ್ತುಮಿರಲಾಱರ್ ಕೂ
ರ್ಪವರನಿತುವರೆಗಮಾರೆನೆ
ಭವಾಂತರಸ್ನೇಹಮವರೊಳಾದುದಳುಂಬಂ ೧೫೮

(‘ ಅದು ’ ಗೆ) :

ಚಂಪಕಮಾಲೆ

೨ ಅದು ಸುಖದೊಂದು ಪಿಂಡಮದು ಪುಣ್ಯದ ಪುಂಜಮದಂಗಜಂಗೆ ಬಾೞ್ಗೆ-
ಮೊದಲಪು ಚಿತ್ತಜಂಗೆ ಕುಲದೈವಮದಂಗಜಚಕ್ರವರ್ತಿಗೆ
ತ್ತಿದ ಪೊಸವಟ್ಟಮಂತದು ಮನೋಜನ ಕೆಯ್ಪಿಡಿಯೆಂದೆ[1] ಮಾಣ್ದೆನಾ[2]
ಸುದತಿಯ ರೂಪನಿಂ ಪೆಱತನೆಂದೊಡೆ ಚಿಃ ಕರಮುಗ್ಗನಾಗೆನೇ[3]* ೧೫೯
(ಪಂಪನ ಆದಿಪುರಾಣ ೨,೭೪)

ಸೂತ್ರಂ ೩೮

ನಿತ್ಯಂ ನಪುಂಸಕತ್ವಮ
ಪತ್ಯಕಲತ್ರಾದಿ ಶಬ್ದದೊಳ್ ಸ್ತ್ರೀಪುಂಸ
ವ್ಯತ್ಯಯಮುಕ್ಕುಂ ಕರುಣೋ
ಪತ್ಯಕೆಗಳೊಳಂ ವಧಾ[4]ಭಿಲಾಷಾದಿಯೊಳಂ ೧೬೦

ಪ್ರಯೋಗಂ : (‘ ಅಪತ್ಯ ’ ಶಬ್ದಕ್ಕೆ) :

೧ ತದಪತ್ಯಂ ಚಾಗದ[5] ಪೆಂ
ಪೊದವಿರೆ ನೆಗೞ್ದಳ್ ಜಗಕ್ಕೆ ವಿನಯಗುಣೈಕಾ
ಸ್ಪದೆ ಸುಗ್ಗಿಯಬ್ಬೆ ತನಗೊಂ
ದಿದ ಚಾಗವೆಡಂಗಿಯೆಂಬ ಪೆಸರೆಸೆವಿನೆಗಂ ೧೬೧

(‘ ಕಲತ್ರ ’ ಶಬ್ದಕ್ಕೆ) :

೨ ಸರಸತಿಗಂ ಸಿರಿಗಂ ಮ
ಚ್ಚರಿಸುವ ವಿದ್ಯಾವಿಶೇಷವಿಭವೋನ್ನತಿಯಿಂ
ಸುರಮಾನವಲಲನೆಯರೇ[6]
ದೊರೆಯರುಮಾ ನೃಪಕಲತ್ರಮಂ ಪೋಲ್ತಪರೇ ೧೬೨

೧ ಯೆಂದು (ಪ;ಪಾ) ೨ ಮಾಣ್ಬೆನಾ (ಕಾ) ೩ ನಾಗನೇ (ಮು) ೪ ತದಾ (ಮು,ಮೈ) ೫ ಭಾವದ (ನ) ೬ ಯರೀ (ನ)

* ಈ ಪದ್ಯದಲ್ಲಿ ‘ಅದು’ ಎಂಬುದು ಬಂದೆಡೆಗಳಲ್ಲೆಲ್ಲ ‘ಇದು’ ಎಂಬುದರ ಪ್ರಯೋಗವೂ ಒಂದು ಪ್ರತಿಯಲ್ಲಿರುವುದು.

ಆದಿಗ್ರಹಣಕ್ಕೆ :

ಉತ್ಪಲಮಾಲೆ

೩ ಒರ್ವಳೆ ಪೆರ್ಮೆಗಳ್ ಬಗೆವೊಡಿನ್ನೆಮಗೀಕೆಯೆ ಗಂಡುಗೂಸು ತಾಂ
ಸರ್ವಕಲಾವಿದಗ್ಧೆ ಪೆಱತೇನೊ ಸರಸ್ವತಿಗತ್ತಮತ್ತೆ ಪ
ನ್ನಿರ್ವರಲ[೧]ಗ್ಗಳಂ ಶ್ರುತದೊಳಾದೊಡಮೇನಿನಿಸೂನಮುಂಟು ಗಾಂ
ಧರ್ವಮನೊಂದುಮಂ ನೆಱೆಯೆ ಕಲ್ಲಳೆ ಕಲ್ಪಿಪುದಂತದಂ[೨] ನೃಪಾ ೧೬೩

ಅಪರಾರ್ಥಕ್ಕೆ :

ತರಳವೃತ್ತಂ

೪ ಕರುಣದಿಂ ಮೃಗಮಂ ನಿಜಾಂಕ[೩]ದೊಳಿಟ್ಟೊಡಾ ಕಱೆಯಾದೊಡೀ
ಧರೆ ಮೃಗಾಧಿಪನೆಂದುದಿಲ್ಲ ಮೃಗಾಂಕನೆಂದುದು ಚಂದ್ರನಂ
ಕರುಣಮಿಲ್ಲದ ಸಿಂಗಮಂ ಮೃಗರಾಜನೆಂದುದು ಭೂಪರೊಳ್
ಧರೆಗಧೀಶ್ವರನಕ್ಕುಮೇ ಪರಚಕ್ರಕರ್ಕಶನಲ್ಲದಂ ೧೬೪

ಮತ್ತೇಭವಿಕ್ರೀಡಿತಂ

೫ ಎಳನೀರೊತ್ತಿನೊಳೊತ್ತಿ ಬರ್ಪ ಪೊನಲೊಳ್ ಸಾಂದ್ರೇಂದುಕಾಂತೋಪಳೋ
ಚ್ಚಳಿತಾಚ್ಛಾಚ್ಛಜಳಪ್ರವಾಹಭರದೊಳ್ ಮಂದಾನಿಳಾಂದೋಳನಾ
ಕುಳಿತಾ[೪]ರಾಮಫಳಾಮೃತೋಪಮರಸಸ್ರೋತಂಗಳೊಳ್ ಸಾಲ್ವಿನಂ
ಬೆಳೆದೋರಂತೊಱಗಿರ್ದ[೫] ಶಾಳಿವನದಿಂ ಸೇವ್ಯಂ ನಗೋಪತ್ಯಕಂ ೧೬೫

(ಪಂಪನ ಆದಿಪುರಾಣ ೧,೬೪)

೬ ಆವಳುಮನೊಲಿಸಿ ಕಂಟಿಸಿ
ಗೋವರ[೬] ಗುಗ್ಗುರಿಗೆ[೭]ಮಾಡಿಯುಂ ತಣಿಯಯ್ ಪೆ
ರ್ಮಾವುಲಿಗನಯೋ[೮] ಪೇೞೆಂ[೯]
ಸ್ತ್ರೀವಧೆ ನಿನಗಶ್ವಮೇಧಮೋ ಸಂಬಳ[೧೦]ಮೋ ೧೬೬

೧ ನ್ನಿರ್ವರೊಳ (ನ) ೨ ದಂತುಮಂ (ನ) ೩ ನಿಜಾಂಗ (ಮ,ನ) ೪ ಕಳಿತಾ (ಮ)
೫ ತೊಸೆದಿರ್ಪ (ಮೈ,ನ) ; ತೆಸೆದಿರ್ಪ (ಮ,ನ); ತೆಱಗಿರ್ದ (ಪಾ) ೬ ಗೋವರು (ನ)
೭ ಗುಗ್ಗರಿಕೆ (ಮೈ,ನ) ೮ ನೆಯೋ (ಮೈ); ನೆಯುಂ (ಮ,ನ) ೯ ಪೇೞೆಂ (ಮ)
೧೦ ಸಂದಿಳ (ನ)

ಪುಷ್ಪಿತಾಗ್ರವೃತ್ತಂ

೭ ಎನಗದಱಭಿಲಾಷೆ ತಾನದೇನುಂ
ಮನದೊಳಗಿಲ್ಲ ವಿವೇಕಶೂನ್ಯನಾದಂ
ತನಗನುಚಿತ[1]ಮಪ್ಪುದೊಂದ[1]ಕೃತ್ಯ
ಕ್ಕನಿತುವರಂ ಬಗೆದಂದನೂಹೆಯಿಂದಂ ೧೬೭

ಗ್ರೀವಾದಿಯೊಳ್ ವಿಕಲ್ಪಕ್ಕೆ : ('ಗ್ರೀವ' ರೂಪಕ್ಕೆ) :

ಶಾರ್ದೂಲವಿಕ್ರೀಡಿತಂ

೮ ಕೈಲಾಸಾದ್ರಿಯನೆತ್ತಿ ನೊಂದ ಭುಜಸಂದೋಹಂಗಳಂ[2] ಕೃಷ್ಣಕೀ
ಲಾಲಂ ಸೋರ್ವಿನಮೆಯ್ದೆ ನೀಳ್ದನಿತುಮಾ ಗ್ರೀವಂಗಳಂ ರಾಗದಿಂ
ನೀಲಗ್ರೀವನಳುಂಬಮಪ್ಪ ದಯೆಯಿಂದಂ ನೀವಿ ರಾಗಾಬ್ಧಿಕ
ಲ್ಲೋಲಂ ಪೆರ್ಚೆ ದಶಾನನಂಗೆ ಪಿರಿದೊಂದುತ್ಸಾಹ[3]ಮಂ ಮಾಡಿದಂ ೧೬೮

('ಗ್ರೀವೆ' ರೂಪಕ್ಕೆ) :

೯ ಗ್ರೀವೆ ಮೊಗಮುಂಸಮುಳಿಕಂ
ಭ್ರೂವಕ್ಷಂ [4]ತೋಳ್ ತೊಳಂಕು[4] ತೊಡೆಯೆಂಬೆಡೆಯೊಳ್
ತೀವಿದುವು ಭೀಮನಿಸೆ ವಿಶಿ
ಖಾವಲಿ ಮಾಱಾಂತರಾತಿಸೇನೆಯ ಮೆಯ್ಯೊಳ್ ೧೬೯

ಸೂತ್ರಂ ೩೯

ಆ ಕಾರಕ್ಕೆ ಲಘೂಕೃತ
ಮೇ ಕಾರಂ ಬಹುಳಮಕ್ಕುಮಿಾದೂದಂತ
ಕ್ಕೇಕಾಕ್ಷರಪದಮುಱೆಯೆ ನಿ
ರಾಕುಳದಿಂ ಹ್ರಸ್ವಮಕ್ಕುಮೆಲ್ಲೆಡೆಗಳೊಳಂ ೧೭೦

ಪ್ರಯೋಗಂ : (ಅಂತ್ಯ 'ಆ' ಕಾರವು 'ಎ' ಕಾರವಾದುದಕ್ಕೆ) :

೧ ಧರೆಯುಂ ಕ್ಷಮೆಯಿಂ ಹಿಮವದ್-
ಗಿರಿಸುತೆಯುಂ ಪೆಂಪಿನಿಂ ಸುರಾಪಗೆಯುಂ ಬಿ
ತ್ತರಿಸುವ ಜಸದೆಸಕದಿನನು
ಕರಿಸುವಳಾ ಕಾಂತೆ ಕಾಂತಿಯಿಂ ಶಶಿಕಳೆಯುಂ ೧೭೧

೧-೧ ಮಪ್ಪೊಡಂದ; ಮಪ್ಪುದೊಂದು (ನ) ೨ ಗಳಿಂ (ನ) ೩ ದಾಹ್ಲಾದ (ನ) ೪-೪ ತೋಳ್ಗಳೆರಡು (ನ)

ಬಹುಳಗ್ರಹಣಕ್ಕೆ :

ಮತ್ತೇಭವಿಕ್ರೀಡಿತಂ

೨ ಕಮಲಂಬೊಲ್ ಮೊಗಮುತ್ಪಲಂಬೊಲಲರ್ಗಣ್ ಚಕ್ರಾಹ್ವಯಂಬೊಲ್ ಕುಚಂ
ಭ್ರಮರಂಬೊಲ್ ಕಚಮಿಕ್ಷುಚಾಪದಳಿನೀಜ್ಯಾಯಂತೆವೊಲ್ ಬಾಸೆ ಕ
ಣ್ಗಮರ್ದಿಂಬಾಗಿರೆ ಲಕ್ಕಿಸೂಱ್ ಪರಸುತುಂ ಶ್ರೀಗಾತ್ಮಶಿವಸ್ತೂಪಮೋ
ಪಮೆಯರ್ ದೈವದಗಣ್ಯಪುಣ್ಯವಧುವರ್ ಸೇಸಿಕ್ಕಿ ಬಂದಾಡಿದರ್ ೧೭೨

ಅಂತುಮಲ್ಲದೆಯುಂ :

೩ ಉದಯಾಸ್ತೋನ್ನತಶೈಲಸೇತುಹಿಮವತ್ಕುಕ್ಷಿಕೀಳಪರ್ಯಂತಸಂ
ಪದೆಯಂ ವಾರ್ಧಿತರತ್ತರಂಗನಿನದತ್ಕಾಂಚೀಕಳಾಪಾಂಚಿತಾ
ಸ್ಪದೆಯಂ ಸಾಧಿಸಿ ಕಬ್ಬಿಗಂಗೆ ನೆಲನಂ ನಿರ್ವ್ಯಾಜದಿಂದಂ ನಿಮಿ
ರ್ಚಿದ ಗೆಲ್ಲಂ ಭುವನೈಕರಾಮುಮಹಿಪಂಗಕ್ಕುಂ ಪೆಱರ್ಗಕ್ಕುಮೇ ೧೭೩

ಅಪರಾರ್ಥಕ್ಕೆ : ('ಈ-ಊ' ಕಾರಗಳ ಹ್ರಸ್ವಕ್ಕೆ) :

ಅನವದ್ಯವೃತ್ತಂ

೪ ಮದನವಿಭ್ರಮಲಕ್ಷ್ಮಿಗೆ ಮೂಲಂ ವಾಗ್ವಧುಗಾಯತಿ ಲೀಲೆಗಾ
ಸ್ಪದಮುಳುರ್ಕೆಗೆ ತಾಯುರುಸೌಭಾಗ್ಯಕ್ಕೆ ವಿಳಾಸನಿಕೇತನಂ
ಮದಗಜಾಲಸಗಾಮಿನಿ ತಾನಾ ಕಾಮಿನಿ ಗೋಮಿನಿಯಿಂ ಮಿಗಿಲ್
ಚದುರ ಪಾೞಿಯ ಸೀಳದ ಪೆಂಪಿಂದಾ ಸತಿಗಾರ್ ದೊರೆ ಧಾತ್ರಿಯೊಳ್ ೧೭೪

ಏಕಾಕ್ಷರಪದಕ್ಕೆ :

ಇಂದ್ರವಜ್ರವೃತ್ತಂ

೫ ಆಗಳ್ ಜಸಂ ಕೆಯ್ದುವನಿಕ್ಕಿ ವೀರ
ಶ್ರೀಗಾಣ್ಮನಯ್ ಪಾಣ್ಬತನಕ್ಕೆಳಿಪ್ಪಯ್
ಪೋಗೇಕೆ ನೀಂ ಮೆಯ್ಗರೆದಿರ್ಪಯೆಂದಾ
ಭೋಗೀಶ್ವರಂಗಂದು ವಿನಮ್ರನಾದಂ ೧೭೫

೧ ಚ (ಮು, ಮೈ, ನ)
೨ ಲಕ್ಕೆ (ಮೈ, ನ)
೩ ಶ್ರೀಗೋತು (ನ)
೪-೪ ಗೆನೆ ವಲಂ (ನ)
೫ ಳರ್ಕೆನ (ನ)

ಸೂತ್ರಂ ೪೦

ಧಾತು[೧]ವಿಹಿತಂ ತೃಶಬ್ದಂ
ಖ್ಯಾತವಿಭಕ್ತ್ಯಂತರಂಗದೊಳ್ ನಿಲ್ಕುಂ ತಾ
[೨]ನಾ ತೆಱದೆ ನಿಲ್ಲದಂದುಪ[೨]
ಜಾತಾರಾದೇಶವಾಗಿ[೩] ನಿಯತಂ ನೆಗಳ್ಗುಂ ೧೭೬

ಲಕ್ಷ್ಯಂ : ('ಋ' ಕಾರದ ಸಹಜಸ್ಥಿತಿಗೆ) :
೧ ಹೋತೃವೆನಾನಧ್ವರಿಯುಯ್
ಭ್ರಾತೃವೆ ನೀನುೞಿದ ಋತ್ವಿಜರ್ ಯಾದವರು
ದ್ಗಾತೃ ಶುಚಿಸಚಿವನೆನೆ ಸುರ
ಜೇತೃವೆ ಪಶುವಾಗೆ[೪]ಯಾಮೆ ಬೇಳಿವೆ[೪] ಮುನ್ನಂ ೧೭೭

('ಆರ' ಆದೇಶಕ್ಕೆ) :
ಶಾರ್ದೂಲವಿಕ್ರೀಡಿತಂ
೨ ಆನ್ನೋಡರ್ಜುನನೆಂಬೆನಂತಕಸುತಂ ಭರ್ತಾರನೆಂಬಾತನ
ಕ್ಕನ್ನಾನಾನ್ನವಿಪಾಕಿ[೫] ವಲ್ಲಲನವಂ ಭೀಮಂ ಹಯಾಧ್ಯಕ್ಷತಾ
ಸನ್ನದ್ಧಂ ನಕುಲಂ ಗವಾಧಿಕೃತನಾ ಸಾದೇವನಂದಾವಳಿಂ
ದನ್ನರ್ ಕೀಚಕರಳ್ಕಿದರ್ ಮಗಳವೊಳ್[೬] ಸೈರಂಧ್ರಿ ಪಾಂಚಾಲನಾ ೧೭೮

ಸೂತ್ರಂ ೪೧

ಬಿದಿಗಭಿಧಾನಂ ತಾನಂ
ತದಾದೊಡಕ್ಕುಂ ವಿಧಾತೃಶಬ್ದಂ ರಾಂತಂ
ತ್ರಿದಿವಸ್ಥಿತರೊಳರಾದೇ
ಶದಿಂದವೊಡಗೂಡಿ ವರ್ತಿಕುಂ ಪಿತೃಶಬ್ದಂ ೧೭೯

೧ ಧಾತೃ (ಮೈ)
೨-೨ ನಾ ತೆಱದಿಂದಲ್ಲದೊಡಪ (ಮ); ನೇತೆಱದಿಂದಲ್ಲದೊಡುಪ (ಮೈ, ನ)
೩ ಮಾಗೆ (ಮ)
೪-೪ ನಾವೆ ಬೇಳಿವೆ (ಮೈ, ನ); ನಾವೆ ಬೇಳ್ವೆವೆ (ಮ)
೫ ನಾನಾಜ್ಯವಿಪಾಕ (ಮ, ಮೈ)
೬ ಳವಳ್ (ಮೈ)

ಉದಾಹರಣೆ : ಪೂರ್ವಾರ್ಧಕ್ಕೆ : ('ವಿಧಾತ್ರ' ರೂಪಕ್ಕೆ) :

೧ ಕೆಯ್ವಾರಮೇಂ ಪೊಗೞ್ತಿಯೆ
ಮುಯ್ವಾಂಪನಿತಂದವೊಂದೆ[೧] ಸುಂದರಿಯೆರಡುಂ
ಮುಯ್ವಂ[೨] ಪಡೆದಗ್ಗಳಿಕೆಗೆ
ಮೆಯ್ವೆರ್ಚಿ ವಿಧಾತ್ರುನಿರದೆ[೩] [೪]ಮುಯ್ವಂ ನೋೞ್ಪಂ[೪] ೧೮೦

ಅಪರಾರ್ಧಕ್ಕೆ : ('ಪಿತರ' ರೂಪಕ್ಕೆ) :

೨ ಉಡುವವರುಮನುಣ್ಬರುಮಂ
ನಡೆ ನೋಡಿ ಕನಲ್ದೊನಲ್ದು ಮುನ್ನಿನ ಭವದೊಳ್
ಕುಡದರ್[೫] ಕಣ್ಬಡಿನೊಳ್ ಧೃತಿ
ಗಿಡೆ ಬಡವರ ಪಿತರರಂತೆ ಮಱುಗುತ್ತಿರ್ಕುಂ ೧೮೧

ಸೂತ್ರಂ ೪೨

ಶ್ವಯುವಾಧ್ವನ್ ಸಖಿಯನ್ಪ್ರ
ತ್ಯಯಮನ್ನಂತಂ ಬಹುತ್ವವಿಷಯಕೃತಾದೇ
ಶಯುತಂ ವಿಕಲ್ಪದಿಂದಂ
ಪ್ರಯೋಗಿಸಲ್ಪಡೆಗುೞ[೬]ಮೆಸೆವಿನಂ ಕನ್ನಡದೊಳ್ ೧೮೨

ಪ್ರಯೋಗಂ :

ಸ್ರಗ್ಧರೆ

೧ ಶ್ವಾನಂಗಳ್ ಗಂಧ[೭]ಮಾರ್ತಂಡನನತಿಹಿತದಿಂ ಕಾಪುಗೊಂಡಿರ್ದುವುಗ್ರ
ಶ್ವಾನಂಗಳ್ ಕಂಡು ದೂರಾಂತರದೊಳಿವರ ಬರ್ಪಂದಮಿಂಬಲ್ಲಿದ[೮]ಸ್ಮದ್
ಭೂನಾರೀನಾಥನೊಳ್ ತಳ್ತಿಱಿವ ಬವಸೆಯಂ ಪೂಣ್ದು[೯] ಬಂದಪ್ಪರೀತಂ
ಗೀ ನಿದ್ರಾಭಂಗಮಂ ಮಾೞ್ಪುದು ಪದನಣಮಲ್ತೆಂದು ನಿಂದಾಂತುವಾಗಳ್ ೧೮೩

೧ ನೊಂದೆ (ಮೈ) ೨ ಮುಯ್ಯುಂ (ನ) ೩ ನರನೆ (ಮ, ಮೈ); ನರಮೆ (ನ) ೪–೪ ಮುಯ್ವಾಂತಿರ್ಪಂ (ಮ, ನ) ೫ ಕೆಡೆದಂ (ಮ, ಮೈ, ನ) ೬ ಪಡುಗು (ಮ, ಮೈ) ೭ ಕಂಡು (ಮೈ, ನ) ೮ ಬಲ್ಲದ (ಮೈ) ೯ ಪಾರ್ದು (ಮ); ಮಾಣ್ದು (ನ)

('ಯುವಾನ' ರೂಪಕ್ಕೆ) :

ಸ್ವಾಗತವೃತ್ತಂ

೨ ಈ ಯುವಾನರನವದ್ಯವಿದ್ಯರಾ[1]
ವ್ನಾಯಶುದ್ಧರವದಾತಕೀರ್ತಿಗಳ್
ತೋಯಜಾಕ್ಷಿ ನಡೆ ನೋಡೆ[2] ಮನ್ಮಥ
ಶ್ರೀಯನಾದರಿಸಿ ನಿಂದರಿಂತಿವರ್ ೧೮೪

('ಅಧ್ವಾನ' ರೂಪಕ್ಕೆ) :

೩ ಪ್ರಣುತಗುಣರೆನಿಪ ವಿಬುಧಾ
ಗ್ರಣಿಗಳ್ ಕೆಯ್ಕೊಂಡು ಪೊಗೞೆ ಸಲೆ ನೆಗೞ್ದವು ಧಾ
ರಿಣಿಯೊಳಗೆ ನಾಗವರ್ಮನ
ಗುಣವರ್ಮನ ಶಂಖವರ್ಮನಧ್ವಾನಂಗಳ್ ೧೮೫

('ಸಖಾಯ' ರೂಪಕ್ಕೆ) :

೪ ಸಮವಯಸಂ ಸಮಸತ್ತ್ವಂ
ಸಮಾನವಿಭವಂ ಸಮಾನಶೀಲವ್ಯಸನಂ
ಸಮವಿದ್ಯಾವಿಭವಯುತಂ
ಸಮಸುಖದುಃಖಂ[3] ಸಹಾಯನಕ್ಕೆ ಸಖಾಯಂ ೧೮೬

('ಶ್ರೇಯಾಂಸ' ರೂಪಕ್ಕೆ) :

ಸ್ರಗ್ಧರೆ

೫ ಈಯಲ್ ಬಂದತ್ತು ಕಲ್ಪಾಂಘ್ರಿಪಮಭಿಮತಮಂ ಪೂರ್ವಪುಣ್ಯಾರ್ಜಿತಂ[4] ಕೊ
ಳ್ಳೀಯಲ್[4] ಬಂದತ್ತಿದೊಂ[5]ದಕ್ಷಯನಿಧಿಯೆನುತುಂ ತನ್ನನೊಲ್ದಾ ತ್ರಿಲೋಕ[6]
ಶ್ರೀಯೆಲ್ಲಂ ಪೊರ್ದಿದಂತೇನೊಸೆದನೊ ಮನದೊಳ್ ಸೂಕ್ತಿಕರ್ಣಾವತಂಸಂ
ಶ್ರೇಯಾಂಸಂ ಪ್ರೋನ್ನತಾಂಸಂ ಸುಕವಿಜನಮನೋಮಾನಸೋತ್ತಂಸಹಂಸಂ
(ಪಂಪನ ಆದಿಪುರಾಣ ೯,೧೩೨)

('ವಿದ್ವಾಂಸ' ರೂಪಕ್ಕೆ) :

೬ ಅದ್ವೈತವಾದಿನಿವಹಮ
ದದ್ವಿರದಘಟಾವಿಪಾಟನೈಕಪಟಿಷ್ಠಂ
ಸ್ಯಾದ್ವಾದಾಚಲಸಿಂಹಂ
ವಿದ್ವಾಂಸರ್ ಪೊಗೞೆ ವಾದಿರಾಜಂ ನೆಗೞ್ದಂ ೧೮೮

೧ ವಿದ್ಯದಾ (ಮೈ) ೨ ನೋಡು (ಮೈ) ೩ ದುಃಖಸುಖಂ (ಮ,ನ) ೪-೪ ಕೇಳೀಯಲ್ (ಕಾ) ೫ ದತ್ತದೊಂ (ಕಾ) ೬ ತ್ರಿಲೋಕೀ (ನ)

ವಿಕಲ್ಪಗ್ರಹಣಕ್ಕೆ :

ಉತ್ಪಲಮಾಲೆ

೭ ಜ್ಯಾಯನರಣ್ಯದೊಳ್ ನೆಲಸುಗುಂ[೧] ಗಡಮಯ್ಯ[೨] ಕನೀಯನನ್ವಯ
ಶ್ರೀಯೊಳಧಿಷ್ಠಿತಂ ಗಡಮಿನಾನ್ವಯಜಾತರೊಳಿನ್ನವಿನ್ನವ
ನ್ಯಾಯಮವಿನ್ನವಿನ್ನವಬಳಾಮುಖರತ್ವಮವಿನ್ನವಿನ್ನವ
ಶ್ರೀಯಮವಿನ್ನವಿನ್ನವಕೃತಕ್ರಮವೃತ್ತಿಯನಾರೊ ಸೈರಿಪರ್ ೧೮೯

ಸೂತ್ರಂ ೪೩

ಪಡೆಗುಂ ವಿಭಾಷೆಯಿಂದಂ
ಕಡೆಯೊಳದಂತತೆಯನಸ್ವರಂ ವೃದ್ಧನವೋಲ್
ಪಡೆಗುಮದರ್ಶನಮಂ ಮೇಣ್
ಪಡೆಗುಂ ದ್ವಿರ್ಭಾವವೃತ್ತಿಯುಂ ಮೇಣ್ ಶ್ರುತಿವೋಲ್[೩] ೧೯೦

ಪ್ರಯೋಗಂ :

೧ ಪರಿಣತವಯಸರೆಮಿರ್ಕ
ಙ್ಗುರುಡರೆಮೆಮಗಿಂಬುಕೆಯ್ವುದುಚಿತಂ ನಿನ್ನೀ[೪]
ಗುರು ನುಡಿದ ನುಡಿಗೊಡಂಬಡು
ಗುರುವಚನಮ[೫]ಲಂಘನೀಯ[೫]ಮೆಂಬುದು ಮಗನೇ ೧೯೧

(ರನ್ನನ ಗದಾಯುದ್ಧ ೪,೨)

೨ ಮೊದಲೊಳ್ ಚಪಲಂ ಮರ್ಕಟ
ನದು ವೃಶ್ಚಿಕದಷ್ಟನೆಂಬವೋಲ್ ನವವಯದು[೬]
ನ್ಮದಮಂತೆ[೭] ಸುತಂ ಪಿತೃಧನ
ಮದಮತ್ತಂ ಮೂರ್ಖನೆಂದೊಡೇನಱಸುವುದೋ ೧೯೨

ವ್ಯವಸ್ಥಿತವಿಭಾಷೆಗೆ :

ಪೃಥ್ವೀವೃತ್ತಂ

೩ ಇವಂಬುನಿಧಿಕೂಪದಿಂದಮರನಂದನಕ್ಕೇತಮೆ
ತ್ತುವಲ್ಲಿ ಗಱಕೆಯಾಗಲುಂ ಕಡಲ ಗುಣ್ಪಸಾರಯ್ಯಲುಂ
ದಿವಕ್ಕಡರಲೇಣಿಯಂ ಸಮೆಯಲುಂ ವಲಂ ಬಾಱತ್ತಿಯೆಂ
ಬವೊಲ್ ಬೆಳೆದು ನಿಂದ ಪೆರ್ವಿದಿರ ಸುರ್ವಗುರ್ವೆಲ್ಲಿಯುಂ ೧೯೩

೧ ಸುವಂ (ನ) ೨ ಮೆಯ್ಯ್ಯ,ಮಯ್ಯ್ಯ (ನ); ಮೇಯೆ (ಮ) ೩ ಶ್ರುತಿಯೊಳ್ (ಮೈ); ಕೃತಿಯೊಳ್, ಕೃತಿವೊಲ್ (ನ) ೪ ನೀನೀ (ನ) ೫-೫ ಲಂಘ್ಯನಿಯತ (ನ) ೬ ನವಯವಮು (ನ) ೭ ಮಂತ್ರಿ (ನ)

ಲೋಪಕ್ಕೆ :

೪ ಸರಿವಱಿಗಱಿ[೧]ವಂತಿರೆ ಭೋ
ಗರ್ರೆದೊರ್ಮೊದಲೆಱಗಿ ದೆಸೆಗಳೆಲ್ಲಮನೊಡನಾ
ವರಿಸಿ ತರತರದೆ ನಸುಮಸು
ಳ್ದಿರೆ ಪುದಿದುವು ನಭವನಭವನಂಬುಗಳೆತ್ತಂ ೧೯೪

ದ್ವಿರ್ಭಾವಕ್ಕೆ :

೫ ದಿಕ್ಕನಿತುಂ ತೋಱಿದುವು ಜ
ಲಕ್ಕನೆ ಮೂಕಾದಿಗಳ್ಗಮಂದತಿಲಲಿತಂ
ವಾಕ್ಯಾದುವು ಕುಸುಮಿಸಿದುವು
ಮಿಕ್ಕೆಸೆವಾ ಕ್ಷುಪ[೨]ಕುಜಾತ[೩]ವೀರುತ್ತುಗಳುಂ[೩] ೧೯೫

ಸೂತ್ರಂ ೪೪

ಅನುಸಂಧಿಸಿ ಕೃತ್ಸ್ನವ್ಯಂ
ಜನಂಗಳಿರೆ ಮುಂದೆ ಬಿಂದು ಪರಿವರ್ತಿಸುಗುಂ
ಮ ನ[೪]ದೊಳ್ ವರ್ಗಂ[೪] ಪರಮಾ
ಗಿ ನಿಲೆ ವಿಕಲ್ಪದೆ ತದೀಯಪಂಚಮಮುಕ್ಕುಂ ೧೯೬

ಪ್ರಯೋಗಂ : ಪೂರ್ವಾರ್ಧಕ್ಕೆ :

೧ ಕುಲಮುಂ ಚಲಮುಂ ವಿದ್ಯಾ
ಬಲಮುಂ ಶೌರ್ಯಾವಲೇಪಮುಂ ಪೊಗಱಿ ನೆಲಂ
ನೆಲಕೆಲ್ಲಂ ನೆಗಱ್ದಂ ದ್ವಿ
ಟ್ಕುಲಕುಲನಗದಳನಪಟುಪವಿಪ್ರತಿಮಭುಜಂ ೧೯೭

ಅಪರಾರ್ಧಕ್ಕೆ :

೨ ಪನ್ನಗತಲ್ಪಙ್ಕಂಸಹ
ರನ್ನಗಧರನಸುರಮರ್ದನಞ್ಚಕ್ರಿ ಮುಕು
[೫]ನ್ದನ್ನಳಿನನಾಭನೇಗೊಳ
ಲೆನ್ನಮ್ಬಲ[೫]ಗರ್ವದಿಂದಿದಿರ್ಚುವನಾವಂ ೧೯೮

ಇದು ಶಬ್ದಸ್ಮೃತಿಯೊಳ್ ನಾಮಪ್ರಕರಣಂ ಸಮಾಪ್ತಂ

೧ ಕಱಿ (ಮ, ಮೈ, ನ) ೨ ಮಿಕ್ಕಿಸವಾಕ್ಷಪ (ನ) ೩-೩ ನೀರೋಟ್ಟುಗಳುಂ(ಮ) ೪-೪ ದೊಳ ವರ್ಗಂ ೫-೫ದಂ ನಳಿನಾಭನೆನಿನಗೊಳ। ನೆನ್ನಂ ಬಲ, ದಂ ನಳಿನನಾಭನೆಲೆಗೊಳ। ಲೆನ್ನಂ ಬಲ(ನ)

೪ ಸಮಾಸಪ್ರಕರಣಂ

ಸೂತ್ರಂ ೪೫

ಸಂಗತಿಯಿಂದಂ ನಾಮಪ
ದಂಗಳವೇಕಾರ್ಥಗತಿಯೊಳಾಗೆ ಸಮಾಸಂ
ಸಂಗಳಿಸುಗುಂ ವಿಭಕ್ತಿಗ
ಣಂಗಳ್ಗಂತರದೊಳಲ್ಲಿ ಲೋಪಮುದಕ್ಕುಂ ೧೯೯

ಅದೆಂತೆನೆ : (ಸಮಾಸಸ್ಥಿತಿಗೆ) :

೧ ಕಡುಗಾಡಿ ನಾಡೆಯುಂ [೧]ಕ
ಣ್ಗಡರೆ[೧] ಮನಂ ಬೆರ್ಚೆ ಸುತನ ಬರ್ಪಂದಂ ಚೆ
ಲ್ವೊಡರಿಸೆ ಬಲ್ವಿಡಿ[೨] ವಿಡಿದುದು
ತೊಡರ್ದಳಿಪಿಂ ನೋಪ್ಪ ನೋಟಕರ್ಕಳ ಮನಮಂ ೨೦೦

ಅಲ್ಲಿ ಗಮಕಕ್ಕೆ* :

೨ ಕಱಿದ ಮನಃಪ್ರಿಯವಿರಹದಿ
ನಱಲ್ದು ಬಸವಱಿದು ನೋದೆ ತನ್ನುರದೊಳ್ ಬಾ
ಸುಱ ತಳ್ಪ ಶೋಕಶಿಖಿಯುಂ
ಕಱಲ್ಚಲೆಂದೊಟ್ಟಿದಸುಗೆದಳಿರಂ ಪೋಲ್ಕುಂ ೨೦೧

ಅಂತುಮಲ್ಲದೆಯುಂ :

ತರಳವೃತ್ತಂ

೩ ಬಲಿಯ ಮಾಂತದ ಬೇಟದೊಳ್ ಪೊಲಗೆಟ್ಟು ಬೆಚ್ಚನೆ[೩] ಬಿಟ್ಟ ಕಣ್-
ಮಲರ್ಗಳಂ ಮಲೆದಿಟ್ಟನೆ[೪]ಯ್ತುರೆ ಕಾಯ್ದು ಸುಂಗೊಳೆ ದೈತ್ಯನಂ
ಪೊಲಸು ನಾರ್ಪಿನೆಗಂ ತ್ರಿಶೂಲದಿನೊತ್ತಿ ಕೊಂದ ಕುಮಾರಿ ಕೂ
ರ್ತಲಸದಿರ್ಕೆ ಭುಜಾಸಿಧಾರೆಯೊಳಂಕಮುಳ್ಳರ ದೇವನಾ ೨೦೨

೧–೧ ಕ|ಣ್ಗೆಡಱೆ(ಕಾ); ಕ|ಣ್ಗೆಡದೆ (ನ) ೨ ಬಲ್ವಿಕೆ, ಬಲಿದೀ (ನ) ೩ ಬಿಚ್ಚನೆ (ನ) ೪ ದಿರ್ಙನೆ (ಮ, ಮೈ, ನ)

* ಇದು ಕೆಲವು ಪ್ರತಿಗಳಲ್ಲಿ ಇಲ್ಲ.

೪ ಆ ಜಂಬೂದ್ವೀಪಮಹಾ
ರಾಜಕಿರೀಟಾನುಕಾರಿ ಚಾಮೀಕರವಿ
ಭ್ರಾಜಿತಕಟಕಮಗೇಂದ್ರಸ
ಮಾಜಚಮೂಚಕ್ರವರ್ತಿ ಮಂದರಶೈಲಂ * ೨೦೩

ಸೂತ್ರಂ ೪೬

ಉತ್ತರಪದದರ್ಥಂ ಮೆ
ಯ್ವೆತ್ತಿರೆ ತತ್ಪುರುಷಮಂತದೇಕಾಶ್ರಯಮಾ
ಗುತ್ತುಮಿರೆ ಕರ್ಮಧಾರಯ
ಮೆತ್ತಂ[1] ದ್ವಿಗುಸಂಜ್ಞಮದುವೆ ಸಂಖ್ಯಾದಿಪದಂ ೨೦೪

ಪ್ರಯೋಗಂ : ತತ್ಪುರುಷಕ್ಕೆ :

ಚಂಪಕಮಾಲೆ

೧ ಅರಮನೆಗಲ್ತು ಸೂಳೆಮನೆಗಲ್ತು ಸವಣ್-ಮನೆಗಲ್ತು ಕೂಡೆ ಬ
ಲ್ಲರ ಬಗೆಗಲ್ತು ವಸ್ತುಕೃತಿಯಂ ಸಲೆ ಪೇೞ್ವುದು ಕಲ್ತು ಪೇೞದಂ
ದರಮನೆಗಲ್ತು ಸೂಳೆಮನೆಗಲ್ತು ಸವಣ್-ಮನೆಗಲ್ತು ಕೂಡೆ ಬ
ಲ್ಲರ ಬಗೆಗಲ್ತದಾವೆಡೆಗಮಲ್ತದು ಕಲ್ಪಿ ವಲಂ[2] ಕವೀಂದ್ರರಾ ೨೦೫

ಕರ್ಮಧಾರಯಕ್ಕೆ :

ಮತ್ತೇಭವಿಕ್ರೀಡಿತಂ

೨ ಅಲರ್ಗಣ್ ಪೊಂಗಿದ ಲಾಳೆ[3]ವಾಯ್ ನಗೆಮೊಗಂ ತೊಂಗಲ್ಗುರುಳ್ ಕೆಂದಳಂ
ಸುಲಿವಲ್ ಸೋರ್ಮುಡಿ ತೆಳ್ವಸಿಱ್ ಪೆಱ್ನೊಸಲ್ ಪೊಂಬಾೞೆ ಪಚ್ಚೋಲೆ ನೇ
ಱಿಲ ಪಣ್ಣಂ[4] ತಿಳಿಯೆಣ್ಣೆಯೊಳ್ ಬಯಸಿ ತೊಯ್ದಂತಪ್ಪ ನುಣ್ಗರ್ಪು ಪೆರ್-
ಮೊಲೆ ಚೆಲ್ವಾಗಿರೆ ನಿಂದ ಬೇಡಿತಿಯುರಂ ಕಂಡಂ ಮಹೀವಲ್ಲಭಂ ೨೦೬

೧ ಮತ್ತಾ (ಮ, ಮೈ, ನ) ೨ ವರಂ (ಮ) ೩ ಲೋಳೆ (ಮ, ಮೈ, ನ) ೪ ಬಣ್ಣಂ (ಮೈ)

* ಈ ಪದ್ಯವು ಕೆಲವು ಪ್ರತಿಗಳಲ್ಲಿಲ್ಲ (ನ)

ದ್ವಿಗುವಿಂಗೆ :

೩ ಇರ್ವಾರ್ಳ್ ಮೂವಾಳಿಕ್ಕಿ
ದುರ್ವರ್ರೆಯೊಳ್ [೧]ಬೆಳಿಗೆ ಸಾರೆ[೧] ಕೊಳೆ ಪದವೞಿಗಳ್
ಕರ್ವಿನ ಮಡಲಂತೆ ಕವ
ಲ್ತುರ್ವಿದ ಕೈಯ್ಪೊಲಗಳೆಸೆಗುವೋ[೨]ರೊಂದೆಡೆಯೊಳ್ ೨೦೭

ಸೂತ್ರಂ ೪೭

ದ್ವಿಪದಂ ಮೇಣ್ ಬಹುಪದಮ
ನ್ಯಪದಾರ್ಥದೊಳೊಂದಿ ನಿಲೆ ಬಹುವ್ರೀಹಿ ಸಮ
ಸ್ತ[೩]ಪದಾರ್ಥಂ ದ್ವಂದ್ವಂ[೩] ಪೂ
ರ್ವಪದಪ್ರಾಧಾನ್ಯಮವ್ಯಯೀಭಾವಾಖ್ಯಂ[೪] ೨೦೮

ಪ್ರಯೋಗಂ : ಬಹುವ್ರೀಹಿಗೆ :

೧ ಕುಡು[೫]ವಿಲ್ಲನೆಚ್ಚ ಸರಲುಂ[೬]
ನಡದು ದಲಂದೊರ್ವನೆರ್ದೆಯನೊಳ್ಗಬ್ಬಮುಮೊಳ್-
ನುಡಿಯುಂ ಗೇಯಮುಮುರ್ಚದ
ಕಡುಗಲ್ಲೆರ್ದೆಯೆರ್ದೆಯನಂಬು ಮೇಣುರ್ಚುಗುಮೇ ೨೦೯

೨ ಪಟ್ಟ್ಕ[೭]ಮೂಗಿನ ಮರ[೮]ವುಲಿ
ವೊಟ್ಟೆಯ[೮]ಕುಸಿಗೊರಲ ಕೆಂಚುದಲೆ[೯]ನವಿರ [೧೦]ಕರಂ
ಕೆಟ್ಟೊ[೧೦]ಡೆದ ಸರ[೧೧]ದವಂ [೧೨]ಕಡೆ
ಪಟ್ಟು[೧೨] ಮನಂಗೆಟ್ಟು ನಾಡುನಾಡಂ ತಿರಿಗುಂ ೨೧೦

ದ್ವಂದ್ವಕ್ಕೆ :

೩ ಕೞಿಮುೞಿಗಳೊಳವು ನೋೞ್ಪೊಡೆ
ಪೆಱಪೆಱರ ಕುಲಕ್ಕೆ ಕೊಂಡ ಕೊಟ್ಟಿಡೆಗಳೊಳಂ
ಕೞಿಯಿಲ್ಲ ತೈಲನಲ್ಲದೆ
ಪೆಱಸಾವೊಂ ಪಿಕ್ಕಿ[೧೩] ನೋೞ್ಪೊಡಿರ್ತಲೆಗೋಜಂ[೧೪] ೨೧೧

೧-೧ ಬೆದೆಗೆ ಸಾಲೆ (ನ) ೨ ಸೆದುವೋ (ನ) ೩-೩ ಪದಾರ್ಥದ್ವಂದ್ವಂ (ನ) ೪ ಭಾವಾರ್ಥಂ (ನ) ೫ ಕಡು (ಮ) ೬ ಕೋಲುಂ (ದರ್ಪಣ) ೭ ಕಟ್ಟ್ಕ (ಮ) ೮-೮ ದುಲಿ|ದೊಟ್ಟೆಯ (ನ) ೯ ಕೆಂದಲೆಯ (ನ) ೧೦-೧೦ ಕಲಂ|ಕಿಟ್ಟೊ (ಮ); ಕರ್ದಂ|ಕೆಟ್ಟೊ (ನ) ೧೧ ಕರ (ನ) ೧೨-೧೨ ಬಗೆ|ಗೆಟ್ಟು (ಮ, ಮೈ, ನ) ೧೩ ಬರ್ಕೆ (ನ) ೧೪ ಗೋಲಂ (ಪ); ಗೊವಜಂ (ಮ)

ಚಂಪಕಮಾಲೆ

೪ ತೊಱಗಲೆ ಏಟ್ಟಹಳ್ಳಿ ನೆಗೞ್ದಾಜಿರಗೋಳಮೆನಿಪ್ಪಗುರ್ವವೆ
ತ್ತಱಿಕೆಯ ಜೇಡವಟ್ಟುಗಳ ಬೂತುಗಬೀರುಗಗೋಯೆ[1]ಯರ್ಕಳಂ
ನೆಱೆಯುರೆನಿಪ್ಪೊಡಂ ಕಿಡಿಸಲಂಕದ ಮುನ್ನಿನ ಚಕ್ರವರ್ತಿಗಳ್
ಪೆಱರಳಿ[2]ವಲ್ತುವಂ ಕಿಡಿಸಿತೊಟ್ಟಜೆ[2] ತೈಲಪಚಕ್ರವರ್ತಿಯಾ ೨೧೨

ಅವ್ಯಯೀಭಾವಕ್ಕೆ :

೫ ಸಂತಂ ಕಿಱಿಕ್ಕಿಱಿಗಳೊಳೋ
ರಂತಿರೆ ಕೆಯ್ಗಾವವಳ್ದಿರಂ ನೋೞ್ಪವರಂ
ಮಿಂತಲೆವಾಯ್ತೆರೆ ಪೊರಮು
ಯ್ವಂ ತಾಗಿರೆ ತೆಗೆದು ಮದನನಾರ್ದಿಸುತಿರ್ಪಂ ೨೧೩

ಸೂತ್ರಂ ೪೮

ಪತ್ತಿರೆ ಕಾರಕದೊಳ್ ಮುಂ
ದೊತ್ತಿ ಸಮರ್ಥಕ್ರಿಯಾಪದಂ ಪದವಿಧಿ ತಾ
ನೊತ್ತರಿಸುಗುಮದಱೊಳ್ ತ
ಳ್ತಿತ್ತಮುದಂತಕ್ಕೆ ಬಿಂದು ಸಂದಿಸಿ ನಿಲ್ಕುಂ ೨೧೪

ಪ್ರಯೋಗಂ : (ಕ್ರಿಯಾಸಮಾಸಕ್ಕೆ) :

೧ ಊರೇಱಲ್[3] ಮನೆಮಾಡ
ಲ್ಕಾರಂಬಂಗೆಯ್ಯಲೆೞ್ತುಗೊಳಲಾಳಾಳ್[4]
ಲ್ಕಾರಾಮುಮಿಡ[5]ಲ್ಕೆಂದುಂ
ದಾರುಣತಾರೆಗಳನುೞಿಯೆ ಪೆಱವಱೊಳುಚಿತಂ ೨೧೫

ಸೂತ್ರಂ ೪೯

ಉತ್ತರಪದಂ ವಿಶೇಷ್ಯದೊ
ಳೊತ್ತರಿಸಿರೆ ಪೂರ್ವಪದದುಪಾಂತ್ಯಸ್ವರದಿಂ
ದತ್ತಿರ್ದುರ್ವರ್ಕೆ[6] ಲೋಪಂ
ಮತ್ತಮಿಕಾರಕ್ಕೆ ಬಹುಳಮಕ್ಕುಮೆಕಾರಂ ೨೧೬

೧ ಗೋಲೆ (ಮ, ಮೈ, ನ) ೨-೨ ವಲ್ತುವಂ ಕೆಡಿಸಿದೊಟ್ಟಜೆ (ನ) ೩ ಊರ ತೆಱಲ್ (ಮೈ, ನ)
೪ ಳಾಗ (ನ) ೫ ಮಿರ (ಮೈ) ೬ ದರ್ಕೆ (ಮ)

ಪ್ರಯೋಗಂ : (' ಪಿರಿದು ' ' ಪೆರ್ ' ಆದುದಕ್ಕೆ) :

೧ ಪೆರ್ಮರನನಡರ್ದ ವನಲತೆ
ಕಾರ್ಮುಗಿಲಂ[1] ತಳ್ತ ಮಿಂಚು ವಿಂಧ್ಯಾಚಲಮಂ
ನೆರ್ಮಿದ ನರ್ಮದೆಯೆನಿಸಿದ
ಳೊರ್ಮೆಯೆ ವನಚರನನಪ್ಪಿ ವನಚರಿಯೊರ್ವಳ್ ೨೧೭

ಬಹುಳಗ್ರಹಣಕ್ಕೆ : (' ಬಿಣ್ಣಿತು ' ' ಬಿಣ್ ' ಆದುದಕ್ಕೆ) :

೨ ಪಣ್ಗಾಯ್ ತಳ್ತ ತುಱುಂಗಲ
ಬಿಣ್ಗೊನೆಯಿಂ ತೂಗಿ ತೊನೆವ ಕೌಂಗಂ[2] ತನ್ನ
ತ್ತಣ್ಗೆ ಬರೆತೆಗೆವ ತೆಱದಿಂ
ಕಣ್ಗೊಳಿಸಿದುದೆಳಸಿ ನಾಗಲತೆ ದಾಂಗುಡಿಯಿಂ ೨೧೮

ಸೂತ್ರಂ ೫೦

ಸ್ವರಮಾದಿಯಪ್ಪುವವು ಮುಂ
ತಿರೆ ದೀರ್ಘಂ ಮೊದಲೊಳಗುರುಗಕ್ಕುಂ ತದಮಾಂ
ತರದೊಳ್ ಣ ಟ ಳ ನ ತಂಗಳ್
ದೊರೆಕೊಳೆ ತಳೆಗುಂ ದ್ವಿರುಕ್ತಿಯುಂ ಬಹುಳತೆಯಿಂ ೨೧೯

ಪ್ರಯೋಗಂ : **ಪೂರ್ವಾರ್ಧಕ್ಕೆ :**

೧ ಕಾರೊಸಡುಂ ಕಬ್ಬಾಯುಂ
ಪೇರೊಡಲುಂ ತೊಳಪ ದಾಡೆಯುಂ ಪೆರ್ಬಸಿಱುಂ
ಕ್ರೂರೇಕ್ಷಣಮುಂ ದನುಜಾ
ಕಾರಮನೊಡ[3]ರಿಸೆ ನಿಶಾಟರರ್ಮಿಸಿ ತೋರ್ಪರ್ ೨೨೦

ಅಗುರುಗ್ರಹಣಕ್ಕೆ :

ಮಣಿವಿಭೂಷಣವೃತ್ತಂ

೨ ಮೇಲುದಂ ಮುಱಿದು ಮೆಯ್ಮುಱಿದೊರ್ವಳೊಱಲ್ದು ಮುಂ
ಬಾಲೆಯುಂ ತಿರಿಪಿ ನೂಂಕಿ ಪವಿತ್ರಮನಿಟ್ಟು ಪ
ಚ್ಚೋಲೆವಚ್ಚದೊಳೊಡಂಬಡೆ ಬಂದು[4] ವಿದಗ್ಧ ಭೂ
ಪಾಲನಂದನನನಂದರುಣಾಧರೆ ನೋಡಿದಳ್ ೨೨೧

೧ ಲೊಳ್ (ಪ) ೨ ಕೌಂಗುಂ (ಮೈ) ೩ ಮುಮೊಡ (ಮೈ, ನ) ೪ ಬಂದ (ಮ)

ಣ ಕಾರಕ್ಕೆ :

೩ ಪಣ್ಣನೆ ತೊಲಲ್ದು ತೀಡುವ
ತಣ್ಣೆಲರೊಳೆಲರ್ಚೆ ವನಚರವ್ರಜಮುದಱೊಳ್
ತಣ್ಣನೆ ತಣಿದಿರೆ [1]ಬನದೊಳ್[1]
ಪಣ್ಣನೆ ತಿನುತಿರ್ಪುವೆಳಸಿ ತರುಚರಕುಳಮುಂ ೨೨೨

ಟ ಕಾರಕ್ಕೆ :

೪ ನಿಟ್ಟೆಯ್ದೆಯಾಗು [2]ಪತಿಯೊಳ್
ತೊ[2]ಟ್ಟನುವಶೆಯಾಗು ಶೀಲವತಿಯಾಗು ಚಿರಂ
ನಿಟ್ಟಾಯುವಾಗು ನೀನೆಂ
ದಿಟ್ಟರ್ ಸೇಸೆಯನಗಣ್ಯಪುಣ್ಯಾಂಗನೆಯರ್ ೨೨೩

ೞ ಕಾರಕ್ಕೆ :

೫ ಅೞ್ಕಾಡಿ[3] ನರನ ಕೂರ್ಗಣೆ
ಯೞ್ಕೇಱಿಂಗೞ್ಕಿಬೞ್ಕಿ ಕುರುಬಲಮೆಲ್ಲಂ
ಬೆೞ್ಕೋಟಮೋಡೆ ನಕ್ಕನಿ
ಸೊೞ್ಕೞಿದೆಗೋದನೊದಱಿ ಚಟ್ಟ[4]ನೊೞೊವಜಂ[5] ೨೨೪

ನ ಕಾರಕ್ಕೆ :

೬ ಇನಿಯಳ ತನಿ[6]ಸೋಂಕಿನ್ನುಣಿ[7]
ಸನೆ ಮಾಲ್ಯಾಭರಣಲೇಪನಂ ತಂಬುಲಮೆಂ
ಬಿನಿತುಂ ರಾಗಮನಾಗಿಸೆ
ಮನದೊಳ್ ದಿವಿಜೇಂದ್ರವಿಭವದಿಂ ಸುಖಮಿರ್ದಂ[8] ೨೨೫

ತ ಕಾರಕ್ಕೆ :

ತರಳವೃತ್ತಂ
೭ ಮಡದೊಳೊಂದುವುದೆತ್ತ ಕಿತ್ತಡಿಗಳ್ಗೆ ನಿಪ್ಪ ತೊಳಪ್ಪುವಾ
ಮಡದೊಳೊಂದಿಯೆ ನಿಂದ ಕಿತ್ತಡಿಗಳ್ಗೆ ನಿತ್ಯನಿಯಾಮದಿಂ
ಪೊಡೆವಡಿಂ ಗಡಮೆಂದು ನೀಱರನೂಱಿ ಸಾರ್ಱುವ ಮಾಟಕ್ಕಿಯಿಂ
ಪೊಡೆವ ಡಿಂಡಿಮಮೆಂಬಿನಂ ಕಳನೂಪುರಧ್ವನಿ ಪೊಣ್ಮುಗುಂ ೨೨೬

೧-೧ ಪೀನಂ (ನ) ೨-೨ ಪತಿಗೋ।ತು (ಮೈ, ನ) ೩ ಡೆ (ಮ) ೪ ಭಟ್ಟ (ಪ) ೫ ಳೋಜಂ (ಮೈ) ೬ ತಳ (ನ) ೭ ಕಿನ್ನುಣ (ನ) ೮ ಮಿರ್ದೆಂ (ಮ) ೯ ನೂ (ನ)

ಬಹುಳಗ್ರಹಣಕ್ಕೆ :

೮ ಅಂಚೆಯುರಗಿಳಿಯ ಪುರುಳಿಯ
ಕೊಂಚೆಯ ಕೋಗಿಲೆಯ ನವಿಲ ಪಾರಾವತದೊಂ
ದಿಂಚರದಿಂದಂ ಶಬ್ದಾ
ತ್ಮಂ ಚರಮುಚರಂ ಜಗಂ ದಲೆನಿಸಿದುದು ಬನಂ ೨೨೭

ಸೂತ್ರಂ ೫೧

ಕಡಿದು ನಿಡಿದೆಂಬಿವೆರಡಱ
ಕಡೆಯೊಳ್ ಟತ್ವಂ ತಕಾರಮುಕ್ಕುಂ ಕಿಱಿದೆಂ
ಬೆಡೆಯೊಳ್ ಸ್ವರಮಿರೆ ತಾಮವು
ಪಡೆಗುಮುಕಾರಾಂತಭಾವಮುಂ ವ್ಯಂಜನದೊಳ್ ೨೨೮

ಪ್ರಯೋಗಂ : (' **ಕಡಿದು-ನಿಡಿದು** ' ಗಳ್ ' **ಕಟ್-ನಿಟ್** ' ಆದುದಕ್ಕೆ) :

೧ ಕಟ್ಟಾಯುದ ಕಣಿ ಪೆಂಪಿನ
ಕಟ್ಟಳೆ[೧]ಚೌವಟದ ಮೇರು[೧] ನನ್ನಿಯ ತವರೂರ್
ನೆಟ್ಟನೆನಿಸಿದ ಜಸಂ ನೇ
ವರ್ಟ್ಟಿ[೨]ರೆ ನಿಟ್ಟಾಯು[೨]ವಕ್ಕೆ ದುಟ್ಟತಳಕ್ಕಂ[೩] ೨೨೯

(' **ಕಿಱಿದು** ' ' **ಕಿತ್** ' **ಆದುದಕ್ಕೆ**) :

೨ ಬಾಱಿಯ ಖರ್ಜೂರದ ಕಿ
ತ್ತೀಱಿಯ ಕರ್ಪೂರದ ಮಾವಿನರನೇಱಿಲ ಕಂ
ಚೀಱಿಯ ಪಲಸಿನ ಮರದಿಂ
ನೂಱದುಮೆಸೆದಿರ್ಪುವು[೪]ದಱ ಬಹಿರುದ್ಯಾನಂ ೨೩೦

ಉದಂತಭಾವಕ್ಕೆ : (' **ಕಡಿದು-ನಿಡಿದು** ' ಗಳ್ ' **ಕಡು-ನಿಡು** '
ಆದುದಕ್ಕೆ) :

೩ ತೊಡೆ[೫]ಯಿಂ ಕಡುಗುದುರೆಗಳಂ
ಮಡದಿಂ ನಡು[೬]ಪಟ್ಟ ದಂತಿಯುಂ ನಿಡುದೋಳಿಂ
ಕಡುವಾಳಂ ಕೂರಸಿಯುಂ
ಕಡಂಗಿದಣಿ[೭]ಯುಂ ಸಮುಂತು ಬಸದಾಗಿಸುವಂ[೮] ೨೩೧

೧-೧ ಚೌತನದ ಮೇಗು (ಮೈ); ಚೌತನದ ವೇಗು (ನ) ೨-೨ ರದಿಟ್ಟಾಯು (ಮೈ, ನ) ೩ ತಳಕ್ಕುಂ, ತುಳಕ್ಕಂ (ನ) ೪ ದಿರ್ಪುದ (ನ) ೫ ಉಡೆ (ಮು, ಮೈ, ನ) ೬ ನಡೆ (ನ) ೭ ದರಿ (ಮು, ಮೈ, ನ) ೮ ದಾಗಿಸುಗುಂ (ಮೈ); ಮಾಗಿಸುವಂ (ನ)

(‘ ಕಿಱಿದು ’ ‘ ಕಿಱು ’ ಆದುದಕ್ಕೆ) :

೪ ಕಿಱುನೆಲೆಯ ಲತಾಲಲಿತೆಗೆ
ತಿಱುಮುಕೊಳಲ್ಕಪ್ಪ[1] ಸಾರ್ಕೆಯೊಳ್ಗೊಂಬುಗಳೊಳ್
ತುಱುಗಿದ ತಳಿರಿಂ ನನೆಯಿಂ
ಕಿಱುಮಿಡಿಯಿಂದೆಸೆದುದಸದಳಂ ಮಾಕಂದಂ ೨೩೨

ಸೂತ್ರಂ ೫೨

ಪಚ್ಚನೆಯುಂ ಕೆಚ್ಚನೆಯುಂ
ಬೆಚ್ಚನೆಯುಮೆನಿಪ್ಪ ಶಬ್ದದಂತಕ್ಕಕ್ಕುಂ
ಬೆಚ್ಚಂತಿರೆ ಮತ್ವಂ ಕೆಲ
ರಿಚ್ಚಯಿಪರ್ ಸ್ವಂತಮುಮನೆ ಕಾರೇತ್ವ[2]ಮುಮಂ ೨೩೩

ಪ್ರಯೋಗಂ : **ಮತ್ವಕ್ಕೆ : (‘ ಪಚ್ಚನೆ-ಕೆಚ್ಚನೆ ’ ಗಳ್ ‘ ಪಮ್-ಕೆಮ್ ’ ಆದುದಕ್ಕೆ) :**

೧ ಪಂದಳಿರ ತೋರಣಂ ತ
ಳ್ತೊಂದಿದ ಕೆಂಗುಡಿಯ ಪುದಿವು ಮುತ್ತಿನ ಕಡೆ[3] ಚೆ
ಲ್ವಿಂದೆಸೆವ ಮಂಗಳಾನಕ
ದೊಂದು ರವಂ ಬಗೆಗೆ ವಂದುದಂದರಮನೆಯೊಳ್ ೨೩೪

(‘ ಬೆಚ್ಚನೆ ’ ‘ ಬೆಮ್ ’ ಆದುದಕ್ಕೆ) :

೨ ಎನಿತುಂ ಕಾಯ್ದುಂ ಬೆಂನೀರ್
ಮನೆಸುಡದೆಂಬಂತೆ ನಿನಗವರ್ ನಿಲೆ ಕಾಯ್ದುಂ
ಮನದೊಳ್ ಪೊಲ್ಲದ[4]ನೆಂದುಂ[5]
ನೆನೆಯರಿ[6]ದಂ ನಂಬು ಕುರುಕುಲಾಂಬರ[7]ಭಾನೂ ೨೩೫

ಸ್ವಾಂತಾಧಿಕಾರಕ್ಕೆ : * (‘ ಪಚ್ಚನೆ-ಕೆಚ್ಚನೆ ’ ಗಳ್ ‘ ಪಸುರ್-ಕಿಸು ’ ಎಂದಾದುದಕ್ಕೆ) :

೩ ಪಸುರ್ವೊನ್ನ ಜಗಲಿ ಪಚ್ಚೆಯ
ಪಸುರ್ವಂದರ್ ಮುತ್ತಿನಕ್ಕಿ ನೀಲದ ಜಾಗಂ
ಕಿಸುಗಲ್ಲರುಣಸರೋರುಹ
ಮೆಸೆದಿರ್ದುವು ರಾತ್ರಿಮತಿಯ ಬೀಡಿನೊಳೆತ್ತಂ ೨೩೬

೧ ಕೊಳಲ್ಬರ್ಪ (ನ) ೨ ಕಾರತ್ವ (ನ) ೩ ಕೊಡೆ (ಮ, ಮೈ, ನ, ದರ್ಪಣ) ೪ ಪೊಲ್ಲಮ (ನ, ದರ್ಪಣ) ೫ ನೆಂತುಂ (ಕಾ) ೬ ಯರ (ನ, ದರ್ಪಣ) ೭ ಕುಲಾನ್ವಯ (ದರ್ಪಣ)

* ಇದರ ಬದಲಾಗಿ ‘ಕಾ’ ಪ್ರತಿಯಲ್ಲಿ ‘ ಸ್ವಾಂತಕ್ಕೆ ’ ಎಂದಿದೆ.

('ಬೆಚ್ಚನೆ' 'ಬಿಸು' ಆದುದಕ್ಕೆ):

೪ ವಾಸರಪತಿ ಬಿಸುಗದಿರಿಂ
ಪೇಸದೆ ತವೆ ಪೀರ್ಗುಮೆಂಬ ಮಱುಕದೊಳಂಭೋ
ಜಾಸನನಂಬುಜವನಮಂ
ಬಾಸಣಿಸಿದನೆನಿಪುವಿಡಿದ[೧] ತಾವರೆಯೆಲೆಗಳ್ ೨೩೭

ಉದಾಹರಣೆ : ಯೋಗಭಾವದಿಂ ಕೇವಲಸ್ವಂತಕ್ಕೆ : *

೫ ಬೇಸಱಿಸುವಂಗಜಾಗ್ನಿಯ
ಕೇಸುರಿ ಕೊಳೆ ಕಱಿದ ಪತಿಯ ವಿರಹದಿನಾಗಳ್
ಕೀಸುಗಳೆವಂತೆ[೨] ಕಡಗವು
ನಾ ಸತಿ ಕಳೆದಿತ್ತಳಾತ್ಮಕರಪಲ್ಲವದಿಂ ೨೩೮

ಸೂತ್ರಂ ೫೩

ಪೊಸತು[೩] ಪೞದೆಳದು ಪೊಱಗೊಳ
ಗು ಷಮಮೆನಿಪ್ಪಿ[೪] ವೞ್ತೊಳತ್ವಮಂತಕ್ಕೆ ನಿಪಾ
ತಿಸೆ ಷಡೆಗುಮವೞ್ತೊಳೊಳಗಿಂ
ಗಸಂಗದಿಂ ಷಮನಿಸಿರ್ಕುಮುಳ್ಳಾದೇಶಂ ೨೩೯

ಪ್ರಯೋಗಂ : ('ಪೊಸತು' 'ಪೊಸ' ಎಂದಾದುದಕ್ಕೆ):

೧ ಪೊಸದೇಸೆಯಂ ಬೆಡಂಗಂ
ರಸ[೫]ಪುಷ್ಟಿಯನರ್ಥದೃ[೫]ಷ್ಟಿಯಂ ಬಗೆವರೊ ಭಾ
ವಿಸುವರೊ ಸಾರಣೆಯಂತಿರೆ[೬]
ಕಸವನೆ[೭] ಪಿಡಿ[೮]ವರ್ ಕೆಲರ್[೮] ಮಹಾಪುರುಷರ್ಕಳ್ ೨೪೦

(ರನ್ನನ ಅಜಿತತೀರ್ಥಕರಪುರಾಣತಿಲಕಂ ೧, ೯೧)

('ಪೞದು' 'ಪೞ' ಎಂದಾದುದಕ್ಕೆ):

೨ ತುಱಿಕಲಡುಗೆಗಳೊಳೇಂ ಪೞ
ಗೞವೆಯ ಕೂೞ್ ತವುಡುಗಳೆದ ತೊವರಿಯ ತೊವೆ ಕಾ
ಯ್ದುಱಿಪಿದ ತುಪ್ಪಂ ಕೋಡುವ
ಕೞಲಲ್ಲದೆ ದಿವ್ಯಭೋಜನಂ ಪೆಱತುಂಟೇ[೯] ೨೪೧

೧ ವೆಸೆವ (ನ) ೨ ದಂತೆ (ಕಾ) ೩ ದು (ನ) ೪ ನಿಪ್ಪ (ನ) ೫-೫ ಪುಷ್ಟಿಯನರ್ಥಸ್ಸ (ಕಾ)
೬ ಣಗೆಯವೊಲ್ (ಕಾ) ೭ ಕಸವಂ (ಪ, ಪಾ) ೮-೮ ದೆಳಸುವರ್ (ನ) ೯ ತೊಳವೇ (ನ)
* ಇದರ ಬದಲಾಗಿ 'ಕಾ' ಪ್ರತಿಯಲ್ಲಿ 'ಐತ್ವಕ್ಕೆ' ಎಂದಿದೆ.

('ಎಳದು' 'ಎಳ' ಎಂದಾದುದಕ್ಕೆ):

೩ ಎಳದಳಿರ ತುಱುಗಲೊಳ್ ನೆಱೆ
ದಳದಳಿಪೆಳಮಾವಿನಳ್ಕೆಗೊಂಬಂ ತಳ್ವೊ
ಯ್ದೆಳಸಿದ ವಸಂತದೂತಿಯ
ನಿಳಿರ್ಪುಯ್ಯಲನಾಡುವಬಲೆ ಪಾಡಿದಳೊರ್ವಳ್ ೨೪೨

('ಪೊಱಗು' 'ಪೊಱ' ಎಂದಾದುದಕ್ಕೆ):

೪ ಅಳವಿಗಱಿದುರುನಿತಂಬ
ಸ್ಥಳಭಾರಮನಾಂತ ಕಾಲ್ಗೆ ಪೊಱ ಅಡಿಗಳೊಳೀ
ಲಳಿತತುಳಾಕೋಟಿಗಳಂ
ತಳೆವುದದೇವಿರಿದೊ ಮದಗಜಾಲಸಗತಿಯಾ ೨೪೩

('ಒಳಗು' 'ಒಳ' ಎಂದಾದುದಕ್ಕೆ):

೫ ಒಳಕೆಯ್ಯೊಳಿರ್ದು ಪಲ್ಗಿರಿ
ದೊಳವಾಲಂಗೊಂಡು ಮೊರೆವ ಭಷಕನ ತೆಱದಿಂ
ದೊಳಪೊಕ್ಕು ದುರ್ಗಮಂ ಚಂ[1]
ಚಳಚಿತ್ತಂ ನುಡಿಗುಮೆಮಗೆ ಬಲ್ಗಂ[2]ಡಿಕೆಯಂ ೨೪೪

೬ ಸಮುಸುತಿ[3]ಯೊಳೊಂದಿದೊಳ್ಪಿನ
ರಮಣೀರಮಣೀಯಗೇಯಮಾಸ್ಥಾಯಿಕೆಯೊಳ್
ಸಮುಸಂದಮುರ್ದ್ದಿನ ಸರಿವಱೆ
ಸಮಂತು ಕಱೆದಪ್ಪುದೆಂ[4]ಬಿನಂ ರಂಜಿಸುಗುಂ ೨೪೫

೭ ಒಳಗುಳ್ಳೋವಣಮುಮರ್ದಿರೆ
ಚಳನಂ[5] ಪೊಱಗೆಸೆಯೆ ಬೆಳಪನೆಯ್ದುವ ಬೆಳಗಂ
ಪೊಳೆವ ಸುಲಿವಲ್ಲೆ ಮುಸುಳಿಸೆ
ವಿಳಾಸದಿಂ ದರ್ಭಶಯನತಳಗತನಾದಂ ೨೪೬

೧ ಸಂ (ಕಾ) ೨ ಬಲ್ಲಂ (ಮ)
೩ ಸ್ರುತಿ (ಮ); ಶ್ರುತಿ(ನ); ಶೃತಿ (ಮೈ, ನ) ೪ ಕಱೆದಪುವಿವೆಂ (ನ)
೫ ಚಳವೊಂ (ನ)

ಸೂತ್ರಂ ೫೪

ತತ್ಪುರುಷಸಮಾಸದೊಳು
ದ್ಯತ್ಪೂರ್ವಪದಾಂತ್ಯಲೋಪಮಕ್ಕುಂ ಪ್ರಚುರಂ
ವ್ಯುತ್ಪಾದಿಸಲ್ಕೆ ಪಡೆ[1]ಗುಂ
ತತ್ಪರದೊಳ್ ಬೞಿಯಮುಚಿತವರ್ಣಾಗಮಮುಂ[2] ೨೪೭

ಪ್ರಯೋಗಂ : (' ಅರಸು-ಮಾವು ' ಗಳ ಅಂತ್ಯಲೋಪಕ್ಕೆ) :

೧ ಅರನೇಱಿಲ ಪೊಂಬಾೞಿಯ
ಸುರಯಿಯ ಮಾಮರದ ಬಕ್ಕೆ[3]ವಲಸಿನ ಪುದುವಿಂ
ಪರೆ[4]ದುರ್ಬಿದ ಕಟ್ತಲೆ ದಿನ
ಕರಾಂಶುಗಳ್ಗಂ ವಿಭೇದಿಸಲ್ಕರಿದದಱೊಳ್ ೨೪೮

ಪ್ರಚುರಗ್ರಹಣಕ್ಕೆ :

೨ ಅರಸುಗುಣಂಗಳನತಿಭೀ
ಕರಕಾಂತಂಗಳನವಂ ವಿಯಚ್ಚರರಾಜಂ
ಧರಯಿಸಿದಂ ಜಳನಿಧಿ ಜಳ
ಚರಚಯಮುಂ[5] ರತ್ನಚಯಮುಮಂ ಧರಯಿಪವೋಲ್ ೨೪೯

ಅಪರಾರ್ಧಕ್ಕೆ : (ಉಚಿತವರ್ಣಾಗಮಕ್ಕೆ) :

೩ ಮಾಂಗಾಯ ಗೊಂಚಲೊಳಗುೞಿ
ದಿಂಗೊರಲಿಂದುಲಿವ ಗಂಡುಗೋಗಿಲೆ[6]ಗಳರ
ಲ್ದೊಂ[6]ಗಲ ನಿಱಿದಳಿರೊಳಗೆ ಜಿ
ನುಂಗುವ ಪೆಣ್ದುಂಬಿಗಳುಮಳುಂಬಂ ಬನದೊಳ್ ೨೫೦

ಸೂತ್ರಂ ೫೫

ಪ್ರಾಯಿಕಮಕ್ಕುಂ ದೀರ್ಘಾ
ಮ್ನಾಯಮುದಂತೆಲ್ಲ ಶಬ್ದದೊಳ್ ವೃತ್ತಿಗತಂ[7]
ಮಾಯೆಂಬುದು ಮಹಿಮಾಭಿ
ಪ್ರಾಯದೊಳೊಂದಿರ್ಕುನೊಂದಿ ಮಹತೆಂ[8]ಬುದಱೊಳ್ ೨೫೧

೧ ಪಡು (ಮ, ಮೈ) ೨ ಮುಂ (ಮ, ಮೈ) ೩ ಬರ್ಕೆ (ಮೈ) ೪ ಪರಿ (ನ) ೫ ಚಯಮುಂ (ಮೈ) ೬-೬ ಯಮುಲ।ದೊರ್ಣಂ (ಮೈ, ನ) ೭ ಗಳಂ (ಮ) ೮ ದೆಂ (ಮ, ಮೈ, ನ); ಮೆಂ (ನ)

ಪ್ರಯೋಗಂ : ('ಎಲ್ಲಾ' ರೂಪಕ್ಕೆ) :
ಮಂದಾಕ್ರಾಂತಂ

೧ ಬಲ್ಲಂತೆಂತುಂ ಗುಣಮನೊಳಕೆಯ್ವಾರ್ಪ[1]ನಾರ್ಪಂದದಿಂದಿ
ನ್ನೆಲ್ಲಿರ್ದುಂ ಪೊಲ್ಲಮೆಯನುಗುಗೆಂಬುಕ್ತಿಯಂ ನನ್ನಿಮಾಳ್ಪಂ
ತೆಲ್ಲಾರತ್ನಂ[2]ಗಳುಮನೊಳಕೊಂಡೊಳ್ಪನಂಭೋಧಿ ಲೋಕ
ಕ್ಕೆಲ್ಲಂ ಬೀೞಲ್ ಪೊಱಗೆ ಕಸಮಂ ನಿಚ್ಚಮಾಡಾಡುತಿರ್ಕುಂ ೨೫೨

ಪ್ರಾಯೋಗ್ರಹಣಕ್ಕೆ : ('ಎಲ್ಲ' ರೂಪಕ್ಕೆ) :

೨ ಎಲ್ಲಂಗಮೆಲ್ಲಧನಮುಮ
ನೆಲ್ಲೆಡೆಯೊಳಮೆಲ್ಲತೆಱದೊಳಂ ಕುಡುಗೆಮ [3]ಸಿ
ಲ್ಕಿಲ್ಲ[3]ದೆ ಬವರದೊಳೇಂ ಗಳ
ಗೆಲ್ಲಂಗುಳ್[4]ಡದಿರ್ಕೆ ಪೊಣರ್ದೊಡಾರ್ಗಂ ಗಂಡಂ ೨೫೩

ಉತ್ತರಾರ್ಧಕ್ಕೆ : ('ಮಹತ್' 'ಮಾ' ಎಂದಾದುದಕ್ಕೆ) :

೩ ಮಾದೇವನುಮಾದೇವಿಗೆ
ಸಾದರದಿಂ ಪೇೞ್ದನೀತ[5]ನುತ್ತಮಸತ್ತ್ವಂ
ಮಾದಾನಿ ಶೌರ್ಯಧನ[6]ನುದಿ
ತೋದಿತಪುಣ್ಯಂ ಹರಿಪ್ರಿಯಂ ನರನೆಂಬಂ ೨೫೪

ಸೂತ್ರಂ ೫೬

ಪರಿಗದಿತಬಹುವ್ರೀಹಿಗೆ
ಚರಮದೊಳಕ್ಕುಂ ಯಥಾಪ್ರಯೋಗ[7]ಮಕಾರಂ
ಪರಪದಮಿಲ್ಲೆಂಬೊಂದಿದುಲ್
ದೊರೆಕೊಂಡಿರ್ದ ಲಿತ್ವಮಂತ್ಯವರ್ಣಕ್ಕ[10]ಕ್ಕುಂ ೨೫೫

ಪ್ರಯೋಗಂ : (ಬಹುವ್ರೀಹಿಯಲ್ಲಿಯ ಅ ಕಾರಾಂತಕ್ಕೆ) :

೧ ಬಲ್ದಲೆಯಂ ತೋಳ್ನೀಳ್ದನ[11]
ಗಲ್ದುರದಂ ಬಟ್ಟದೊಡೆಯವಂ ಕೆಂಗಣ್ಣಂ
ನೀಲ್ದ ಕಿವಿಯಾತನೆನಿಸುವ
ನೊಲ್ದೊಲಿಸುಗುಮೆಸೆವ ಬೀರಸಿರಿಯಂ ಧುರದೊಳ್ ೨೫೬

೧ ಕೆಯ್ವಾರ್ಪ (ಮೈ); ಕೊಳ್ಗಾರ್ಪ(ನ) ೨ ಲೋಕಂ (ಮೈ, ನ) ೩-೩ ಸಿರ್ಕಿಲ್ಲ (ಮೈ)
೪ ಕು (ಮೈ) ೫ ಪೇೞ್ದನಿತ್ತ (ಮ, ಮೈ); ಪೇೞ್ದುಮಿಾತ (ನ) ೬ ಪರ(ನ) ೭ ಪ್ರಕಾರ (ನ)
೮ ಲ್ಲೆಂದಿಂತಿವು (ಮ, ಮೈ, ನ) ೯ ರ (ನ) ೧೦ ವರ್ಣದೊಳ (ನ) ೧೧ ಳ್ನೀಲ್ವನ(ಮೈ)

ಉತ್ತರಾರ್ಧಕ್ಕೆ : (‘ ಇಲ್ಲ ’ ಎಂಬುದು ‘ ಇಲಿ ’ ಆದುದಕ್ಕೆ) :

೨ ಸೊಗಯಿಸುಗುಮೆ ಪಲ್ಲಿಲಿ[೧]ವಾ
ಯಗಿಲಿಲಿಗಂಧಂ[೧] ಸಮಂತು ಕೂರಿಲಿಕುಡುಗೋಲ್
ಮಿಗೆ ನಾಣಿಲಿಯೆನಿಸುವ ವಧು
ನಗೆಗೆಡೆಯಕ್ಕುಂ ಸಮಸ್ತಜಗತೀತಳದೊಳ್ ೨೫೭

ಸೂತ್ರಂ ೫೭

ಒಂದೆಂಬುದರ್ಕೆ ರೇಫಂ
ಸಂದಿಸುಗುಂ ಕಡೆಯೊಳೆರಡೆನಿಪ್ಪುದಱೊಳ್ ತಾ
ನೊಂದಿ ನೆಲಸುಗುಮಿರಾದೇ
ಶಂ ದಲ್ ಮೇಣ್ ಮೇಣುಕಾರಲೋಪಮುದಕ್ಕುಂ ೨೫೮

ಪ್ರಯೋಗಂ : (‘ ಒಂದು ’ ಎಂಬುದು ಸ್ವರಪರವಾಗೆ ‘ ಓರ್ ’ ವ್ಯಂಜನಪರವಾಗೆ ‘ ಒರ್ ’ ಎಂದಾದುದಕ್ಕೆ) :

೧ ಓರೆಂಜಲ್ಗೊ[೨]ರ್ಪಂತಿಗೆ
ವಾರದ ಖಳರೊಡನೆ ಬೆರಸಿ ಮೇಳಂ[೩]ಗೊಂಡಂ
ದಾರುಂ ಲಘುವಪ್ಪರ್ ಪ್ರ
ಸ್ತಾರದೊಳಮುರ್ದೆಂಬ ಶಿಥಿಲಸಂಯೋಗದವೋಲ್ ೨೫೯

(‘ ಎರಡು ’ ‘ ಇರ್ ’ ಎಂದಾದುದಕ್ಕೆ) :

೨ ಇರ್ವರ್ಯ್ಗಂ[೪] ಹಿತಮುಂ ಜಿನ
ಧರ್ಮಮನಿಂಬಾಗಿ ತಿಳಿದು ನೆಗಟ್ವಂ[೫]ಗಕ್ಕುಂ
ಸ್ವರ್ಮೋಕ್ಷಸಿದ್ಧಿ ಬಗೆವಂ
ದಾರ್ಮಂ ಪೆಱತಿಲ್ಲ ದೇಹಿಗೀ ಸಂಸೃತಿಯೊಳ್ ೨೬೦

ಉ ಕಾರ ಲೋಪಕ್ಕೆ :

ಮತ್ತೇಭವಿಕ್ರೀಡಿತಂ

೩ ಗೆಲವಂ ಕೊಂಡಭಿಮಾನಿಯಾದನೊಳಕೊಂಡನ್ಯಾವನೀಕಾಂತೆಯಂ
ಸಲೆ ಶೌಚವ್ರತಿಯಾದ[೬]ನಿರ್ತೆಱದೆರಟ್ಮಾತಾಡಿ[೬] ಬಟ್ದಂ ಜಗದ್-
ವಲಯಕ್ಕೊರ್ನುಡಿಕಾ[೭]ಱನಾದನನಯು[೮]ಕ್ಕುಳ್ಳಿ ಸಂಗ್ರಾಮದೊಳ್
ಕಲಿಯಾದಂ[೯] ವಿಪರೀತಜಾತಚರಿತಂ ಭೂಪಾಲರೊಳ್ ಕಾಮದಂ ೨೬೧

೧-೧ ವಾ।ಯುಗಿಲಿಲಿವಣ್ಣಂ (ಮ, ಮೈ); ವಾ।ಯುಗಿಲಿಲಿವಣ್ಣುಂ(ಪ) ;ವಾಯ್।ಪಗಿಲಿಲಿವಣ್ಣಂ (ನ) ೨ ಲ್ಗೊ (ಮ, ಮೈ) ೩ ಮೆಳ್ತಂ (ನ) ೪ ರ್ಮಯ್ಯಿಂ (ಮ, ಮೈ) ೫ ನೆಗಟ್ದಂ (ಕಾ) ೬-೬ ನಿತ್ತಱದೆರಟ್ಮಾತಾಗೆ (ನ) ೭ ಗಾ (ನ) ೮ ನಯುರ (ಮೈ); ನಯುಶ (ನ) ೯ ಯಾದಾ (ಮ.)

ಸೂತ್ರಂ ೫೮

ಅದಿದೆನ್ನದೆ ಮೂಱಿಂಬೀ
ಪದದಂತಂ ಲೋಪಮೆಯ್ದುಗುಂ ಕಪವರ್ಗಂ
ತುದಿ೧ಯೊಳೆ ಪೊದಳ್ದು೧ ಪುದಿದಿರೆ
ತದಾಗಮಂ ಹ್ರಸ್ವಪೂರ್ವಮಕ್ಕುಂ ಬಹುಳಂ ೨೬೨

ಪ್ರಯೋಗಂ : (' ಮೂಱು ' ಎಂಬುದಱ ಅಂತ್ಯಾಕ್ಷರಲೋಪಕ್ಕೆ) :

ಮತ್ತೇಭವಿಕ್ರೀಡಿತಂ

೧ ನೆಲಸಿರ್ದಪ್ಪುದಧಃಸ್ಥಳಂಬಿಡಿದಧೋಲೋಕಂ ಸಮಂತೆಯ್ದೆ ಸು
ತ್ತಲುಮಿರ್ದಪ್ಪುದು ಮಧ್ಯಲೋಕಮೆಸೆದಿ೨ರ್ದಾ ಚೂಲಿಕಾಭಾಗದಾ
ದಲೆಯೊಳ್ ನಿಂದಪು೩ದೂರ್ಧ್ವಲೋಕಮೆನೆ ಮೂಲೋಕಕ್ಕೆ ಪೆಂಪಿಂದಗುಂ
ದಲೆಯಾಗಿರ್ದುದು ದೇವದಂಪತಿರತಶ್ರೀಸುಂದರಂ ಮಂದರಂ ೨೬೩

(ಪಂಪನ ಆದಿಪುರಾಣ ೧,೫೦)

ಅಪರಾರ್ಥಕ್ಕೆ : (' ಮೂಱು ' ' ಮು ' ಆದುದಕ್ಕೆ) :

ಉತ್ಪಲಮಾಲೆ

೨ ಮುಕ್ಕೊಡೆ ಪುಷ್ಪವೃಷ್ಟಿ ಸುರದುಂದುಭಿ ಕೇಸರಿಪೀಠ೪ವೊಂದಿದಂ
ತಿಕ್ಕುವ೪ ಚಾಮರಂ ಮಿಱುಪ ಪೂಗಳ ಗೊಂಚಲಶೋಕೆ ಭಾನುವಂ೫
ಮಿಕ್ಕ ತೊ೬ಳಪ್ಪ ಭಾವಳಯಮೊಪ್ಪುವ ಪನ್ನೆರಡುಂ ಗು೭ಣಾಳಿ ಲೋ
ಕಕ್ಕೆ ವಿನೂತವೀರಜಿನಪಾಶ್ರಯಮೆಂಬಿವು೮ ಸರ್ವಮಂಗಳಂ ೨೬೪

೩ ಅನವರತದಾನದಿಂ ಮಿ
ಕ್ಕನೂನಸೂನೃತದಿನಸಮ೯ಶೌರ್ಯೋನ್ನತಿಯಿಂ
ವನನಿಧಿಪರೀತಸಕಲಾ
ವನಿಯೊಳ್ ಮುಪ್ಪುರಿವೊಲಾದುದಾ ನೃಪನ ಗುಣಂ ೨೬೫

೧-೧ ಯೊಳ್ ತಗುಳ್ದು (ಕಾ) ೨ ಮೆನಿಸಿ (ಪಾ)
೩ ನಿಂದುದ (ನ) ೪-೪ ಮೊಂದೆ ತಂ।ದಿಕ್ಕುವ (ನ)
೫ ಭೂಷಣಂ (ಮ); ಭಾಷಣಂ (ಮ್ಯೆ,ನ) ೬ ಬೆ (ಮ,ಮ್ಯೆ,ನ)
೭ ಗ (ನ) ೮ ಮೆಂದಿವು (ನ)
೯ ನೆಸೆವ (ನ)

ಬಹುಳಕ್ಕೆ :

ಶಾರ್ದೂಲವಿಕ್ರೀಡಿತಂ

೪ ತೀವಿರ್ದತ್ತು ಮೊದಲ್ ಮೊದಲ್ಗೆ[೧]ಪಣೆಯುಂ[೨] ಮೂಗಯ್ಯ ಮೂಗಯ್ಯ[೩]ನಿ
ತ್ತಾವರ್ಕೆಯ್ದೆ ಕವಲ್‌ಕವಲ್ತು ಪಲವುಂ ಕೊಂಬಾದುವೊಳ್ಗೊಂಬುಗಳ್[೪]
ತೀವಿರ್ದತ್ತು ತಳಿರ್ ಮೊದಲ್ ಪಣೆ ಕವಲ್ಕೊಂಬೆಂಬುವೀ ಕೆಂದಳಿರ್
ಮಾವಿಂಗಲ್ಲದೆ ಮಾವುಗಳ್ಗೆ ಪೆಱವರ್ಕಿಂತೇಂ ಬೆಡಂಗಕ್ಕುಮೇ ೨೬೬

(ಪಂಪನ ಆದಿಪುರಾಣ ೧೧,೯೭)

ಸೂತ್ರಂ ೫೯

ಉಪಹತಿ ನಾಲ್ಕಯ್ದೆಂಬಿವ
ಱುಪಧೆಯೊಳಾ[೫]ಱೆಂಬಿದರ್ಕೆ ಮೊದಲೊಳ್ ಹ್ರಸ್ವಂ
ಸ್ವಪರಸ್ವರಲೋಪಂ[೬] ವ
ರ್ತಿಪುದೇೞಱೊಳಂತ್ಯಲೋಪಮೆಂಟರ್ಕ[೭]ಕ್ಕುಂ ೨೬೭

ಪ್ರಯೋಗಂ : ('ನಾಲ್ಕು-ಅಯ್ದು-ಆಱು-ಏೞು-ಎಂಟು' ಎಂಬಿವು ಕ್ರಮವಾಗಿ 'ನಾಲ್-ಆಯ್-ಅಱು-ಏೞ್-ಎಣ್' ಎಂದು ಆದುದಕ್ಕೆ):

೧ ಉರಗಂ ಕೊಂಡಲ್ಲಿಂ[೮] ನಾ
ಲ್ವೆರಲನಿತಂ ಕಳೆದು ಕಟ್ಟೆ ಮೇಗಂ ಬೇಗಂ
ಸೆರೆವಿಡುಗೆ ಸುಡುಗೆ ಕಡಿದಿರ
ದರಿದಿಕ್ಕುಗೆ[೯]ನೀವಿ ಕಳೆಗೆ[೯] ನಿರ್ವಿಷಮಕ್ಕುಂ ೨೬೮

೨ ಕೀಱ್ ಪುಗಲೆನೆಯುಮೆಂತುಂ
ಮೀಱ್ದನಂ[೧೦] ಪೊಕ್ಕು ಶಾಲೆಯಂ ಶಾರ್ಙ್ಗಮನಂ
ದೇಱ್ಸಿದಪನಹಿಶಯ್ಯೆಯ
ನೇಱ್ದನಯ್ವಾಯ ಶಂಖಮಂ ಪೂರಿಸಿದಂ ೨೬೯

೩ ಅಱುದಿಂಗಳಾಯುವುಂಟೆನೆ[೧೧]
ಮಱುಗುವುದುಂ ನಲ್ಲರಲ್ಲಿ[೧೨] ತಮ್ಮಿಂ ಮುನ್ನಂ
ಪಱ್ವಟ್ಟು ಬರೆ ಕನಲ್ವುದು
ಮಱ್ಪದೆ[೧೩] ನಾಲ್ವರ್ಗೆ[೧೪] ನರಕದುಃಖ[೧೫]ದ ತೆಱನಂ[೧೫] ೨೭೦

(ಪಂಪನ ಆದಿಪುರಾಣ ೯,೫೦)

೧ ಮೊದಲೆ (ಮ) ೨ ಯಿಂ (ನ) ೩ ಯ್ಯೆ (ಪ,ಪಾ) ೪ ವೊಳ್ಗೊಂಬುಮಂ (ಕಾ) ೫ ಯಿನಾ (ನ) ೬ ಸ್ವರವಗಂ (ಮ) ೭ ಟಕ್ಕ (ಮ) ೮ ಲ್ಲಿಗೆ (ಪ) ೯-೯ ಗಿಳಿಯುಗಳಿಗೆ (ನ); ಗಿಳಿಯ ಕಳೆಗೆ (ಪ) ೧೦ ಜಿನಂ (ಮ); ಜನಂ (ಪ); ದಿನಂ (ನ) ೧೧ ವೊಂದೆನೆ (ನ); ಮುಂಟೆನೆ (ದರ್ಪಣ, ಪ,ಪಾ) ೧೨ ಳಲ್ಲಿ (ಮ) ೧೩ ಪ [ಲೆ] ವೆ (ಮ) ೧೪ ಸುರಜನರ್ಗೆ (ಮ,ಪ); ಕಲ್ಪಜರ್ಗೆ (ಪ,ಪಾ) ೧೫-೧೫ ಕ್ರಮುಮಂ (ಪ,ಪಾ)

೪ ಪರಿಮರ್ದಿ[೧]ಸುವುದು ದುತ್ತೂ
ರರಸಮನಿಂಬಾಗಿ[೧] ಪಿಱಿದು[೨] ನೆಲದೊಳ್ ಲವಣಂ
ಬೆರಸೊರಸಿಕೊಂಡು ಪೂಸುಗೆ
ಕರಗುಗುಮೇಱಿಪ್ಪೊರೆಯೆನಿಪ್ಪ ಕುರುವುಂ ಕ್ಷಣದೊಳ್[೩] ೨೭೧

೫ ಕಣ್ಗೆದಱಿದೊಡನೆ ನಾಲ್ವ
ತ್ತೆಣ್ಗಾವುದವರೆಗಮುಗಿದೊಡಂಬುಧಿ ಕಡಲ
ತ್ತಣ್ಗೆ ಹರಿ ಬಂದು[೪]ದಂ ಕಡು[೪]
ಜಾಣ್ಗೆಡದಱಿದಾಗಳವಧಿಬೋಧೋದಯದಿಂ ೨೭೨

ಸೂತ್ರಂ ೬೦

ಒಂಬತ್ತು ದಶಾಹತಿಯಿಂ[೫]
ತೊಂಬತ್ತೆನೆ ಸಲ್ಗುಮಗ್ರದೊಳ್ ನೂಱಿರೆ ಮ
ತ್ತೊಂಬಯ್ಯಾದೇಶಮನವ
ಲಂಬಿಸುಗುಮದಂತೆ ಮುಂತೆ ಸಾಸಿರಮಿರೆಯುಂ ೨೭೩

ಪ್ರಯೋಗಂ : (' ಒಂಬತ್ತ' ಱ ರೂಪಗಳ್) :

೧ ಸಾಸಿರಯೋಜನಮುಮುರ್ದು[೬] ಸು
ರಾಸುರಸಂಸೇವ್ಯಮಾಗಿ ತೊಂಬತ್ತೊಂಬಯ್-
ಸಾಸಿರಯೋಜನಮುಂ ನೆಗೆ
ದೀ ಸುರಗಿರಿ ಪೆಂಪನೇಂ[೭] ಪುದುಂಗೊಳಿಸಿದುದೋ ೨೭೪

(ಪಂಪನ ಆದಿಪುರಾಣ ೭,೬೩)

ಸೂತ್ರಂ ೬೧

ಒಂದೆರಡೆಂಬಿವು ಪರದೊಳ್
ಸಂದಿಸೆ ಪತ್ತರ್ಕೆ ಪನ್ನೆನಿಕ್ಕುಂ ರೂಪಂ
ಮುಂದೆ ಪೆಱತೊಂದಿ[೮] ನಿಲೆ ಪದಿ
ಯೆಂದಕ್ಕುಂ ಸ್ವರದೊಳಮುರ್ದು ನಾಗಮುಮಕ್ಕುಂ ೨೭೫

೧-೧ ಸಿ ದುತ್ತೂರ|ಸ್ವರಸಮನಿಂಬಾಗೆ (ನ) ೨ ಪಿರಿದು (ಮಂ. ದರ್ಪಣ) ೩ ಬೇಗಂ (ಪ, ದರ್ಪಣ) ೪-೪ ಕಂಡೊಡೆ (ನ) ೫ ಯೊಳ್ (ನ) ೬ ಜನಮುಬ್ದು (ಕಾ, ಸಾ. ದರ್ಪಣ) ೭ ಪೆಂಪದೇಂ(ಮ) ೮ ವೊಂದಿ (ಕಾ); ತೊಂದು (ಮ, ನ)

ಪ್ರಯೋಗಂ : (‘ ಪತ್ತು ’ ಎಂಬುದು ‘ ಪನ್-ಪದಿ ’ ಎಂದಾದುದಕ್ಕೆ) :

೧ ಎನಗಿದು ಚೋದ್ಯಂ ಪನ್ನೊಂ
ದನೆಯದು ನೆಲೆ ತನ್ನ ನೆಗಬ್ದುದಂತದು ಪದಿನಾ
ಱನೆಯ ನೆಲೆಗುಯ್ದುದೆಂ[೧]ಬುದ
ನೆನೆ ಸುವಿಧಿನರೇಂದ್ರನಚ್ಯುತೇಂದ್ರನುಮಾದಂ ೨೭೬

(ಪಂಪನ ಆದಿಪುರಾಣ ೬,೧೨)

ಶಾರ್ದೂಲವಿಕ್ರೀಡಿತಂ

೨ ಸಾರಲ್ ಸಲ್ಲದು ಪನ್ನೆರಲ್ಬರಿಸಮುಂ ನಾಡಂತ[೨]ಡಂಗಿರ್ಪುದು
ಗ್ರ್ಯಾರಣ್ಯಂಗಳೊಳೆತ್ತಮೊಂದು ಬರಿಸಂ ಮೆಯ್ದೋಱಲಾಗಾರ್ಗ[೩]ಮುಂ
ದಾರಯ್ದಾರ್ತಡಮಾಡಿದಂದು[೪] ಮಗುಳ್ದತ್ತೀರಾಱುವರ್ಷಂಬರಂ
ಸಾರಲ್ ಸಲ್ಲದು ನಾಡನೆಂಬ ಸಮಕಟ್ಟೆಂತಾದೊಡೆಂತಕ್ಕುಮೋ ೨೭೭

ಸೂತ್ರಂ ೬೨

ಸಾಸಿರಮಿರೆ ಮುಂದೊತ್ತಿ ಸ
ಮಾಸದೊಳಕ್ಕುಂ ಪಯಿನ್ನದರ್ಕೆ ಯಥೋಕ್ತಂ
ಶಾಸಿಸುವರ್ ನೂಱರ್ಕಂ
ಸಾಸಿರಕಂ ಪ್ರಾಂತಲೋಪಮುಂ ಕೆಲವೆಡೆಯೊಳ್ ೨೭೮

ಪ್ರಯೋಗಂ : (‘ ಸಾಸಿರಂ ’ ಪರವಾಗೆ ‘ ಪತ್ತು ’ ಎಂಬುದು ‘ ಪಯಿನ್ ’ ಎಂದಾದುದಕ್ಕೆ) :

ಮತ್ತೇಭವಿಕ್ರೀಡಿತಂ

೧ ಪಿಡಿಯೆಂ ಚಕ್ರಮನೆಂಬ ಚಕ್ರಿಯ[೫]ನಿಳಾಚಕ್ರಂ ಭಯಂಗೊಳ್ವಿನಂ
ಪಿಡಿಯಿಪ್ಪೆಂ ಕರ[೬]ಚಕ್ರಮಂ ನರರಥಂ ತೂಳ್ದಾ ಕುರುಕ್ಷೇತ್ರದಿಂ
ಪಡು[೭]ವೆಣ್ಗಾವುದವೋಗೆ ಪೋಗಲಿಸುವೆಂ[೭] ನಿಚ್ಚಂ ಧರಾಧೀಶರಂ
ಪಡಲಿಟ್ಟಂತಿರೆ [೮]ಮಾಣ್ಪಿನೋವದೆ ಪಯಿಂಛಾಸಿರ್ವರಂ[೮]ಯುದ್ಧದೊಳ್ ೨೭೯

(ಪಂಪನ ವಿಕ್ರಮಾರ್ಜನವಿಜಯ ೧೦,೨೫)

೧ ಗುಯ್ದುನೆಂ(ಕಾ) ೨ ನಾಡತ್ತ (ಮ,ಮೈ,ನ) ; ನಾಡಂಕ (ಸಾ,ದರ್ಪಣ) ೩ ಲಾನಾರ್ಗ(ಮ, ಮೈ) ೪ ತಡೆಮಾಡಿದಂದು (ನ) ; ತಡೆದಂದು ತಂದು(ಮ) ೫ ಚಕ್ರಿಯಿ(ಪಾ) ೬ ವರ(ಕಾ) ೭-೭ ವೆಣ್ಗಾವುದುಪೋಗೆ ಪೋ ಗಡಿಸುವೆಂ (ಪಾ) ೮-೮ ಕೊಳ್ವೆನಾನಯುತಮುಂ ಭೂಪಾಲರಂ (ಪಾ)

ಅಪರಾರ್ಥಕ್ಕೆ :

ಸ್ರಗ್ಧರೆ

೨ ಒರ್ವಂ ಬಂದೊಂದೆ ತೇರೊಳ್ ನೆರೆವ ಕುರುಬಲವ್ಯೂಹಮಂ ಕೇಳ್[೧] ಬೆಂಕೊಂ
ಡುರ್ವೀಶಂ[೧] ನೋಡೆ ಮಾಱಾಂತೆಸಗಮರಿಯ[೨] ನಾಗಿರ್ದನೀ ಮಿಟ್ಟುಗೊಡ್ಡಂ
ಸರ್ವಗರ್ಂ ಸಲ್ಲದೆಂದೆಂದೊವಜನೊದಱ ನಿಂದೊರ್ವನುಂ ನೂಱುನೂರ್ಛಾ
ಸಿರ್ವರ್ ದ್ರೋಣರ್ಕಳಾದಂತಿಸೆ[೪] ಮೊಗಸಿ ಸರಲ್ ಪಾಯ್ದುವಂದತ್ತಮಿತ್ತಂ

೩ ಸಾಸಿರ್ವರ್ ವನಿತೆಯರಯ್-
ಸಾಸಿರ್ವರ್ ಪ್ರಿಯತನೂಜರಱಕೆಯ ಪದಿನೆಣ್-
ಛಾಸಿರ್ವರರಸುಗಳ್ ವೆರ
ಸಾ ಸಾಸಿಗನುಚಿತದೀಕ್ಷೆಯುಂ ಕೆಯ್ಕೊಂಡಂ ೨೮೧

(ಪಂಪನ ಆದಿಪುರಾಣ ೬,೫)

ಸೂತ್ರಂ ೬೩

ಬೆರಸಿ ಸಮಸಂಸ್ಕೃತಂಗಳ್
ಬರೆ ಕನ್ನಡದೊಡನೆ[೪] ಸಮತೆಯಿಂದಂ ಸಲ್ಗುಂ
ನಿರವದ್ಯಮಾಗಿ ಪದವಿಧಿ
ವಿರುದ್ಧಮಕ್ಕುಂ ತದನ್ಯಥಾವೃತ್ತಿಗಳೊಳ್ ೨೮೨

ಪ್ರಯೋಗಂ :

೧ ಅರಸುಗುಣಂ ಪಱಯುನಣಂ
ಬರಲಿತ್ತುದೆ ಶೌಚದಳವು ಪರವೆಣ್ಗಳಿಪಂ
ತರಲಿತ್ತುದೆ ಅಱಜನದೊಳ್
ಬೆರಸಿರಲಿ[೫]ತ್ತುದೆ ಮಹಾನುಭಾವಂ ನೃಪನಾ ೨೮೩

ವಿರುದ್ಧಕ್ಕೆ :

ಮಹಾಸ್ರಗ್ಧರೆ

೨ ತರವೇಱ್ ಮಾಣಿಕ್ಯಭಂಡಾರದ ಪುಡಿಕೆ[೬]ಗಳಂ ಪುಂಜಿಸಲ್ ವೇಱ್ ಸುವರ್ಣೋ
ತ್ಕರಮಂ ತೋಱಲ್ಕೆ ವೇಱ್ ದಂತಿಗಳನಿರಿಸ ವೇಱ್ ಮುಂದೆ ವಾಹಂಗಳಂ ಬಿ
ತ್ತರಿಸಲ್ ವೇಱ್ ಚಿತ್ರಚೀನಾಂಬರಪರಿಕರಮಂ ಮಾಣದೆಂದೋಳಿಯಿಂ ಲೆಂ
ಕರನಾಗಳ್ ಪೇಳ್ದು ನೀಯಲ್ಕೆರೆದ[೭]ವರ್ಗೆ ಮಹಾದಾನಮಂ ವಿಕ್ರಮಾಂಕಂ

೧-೧ ಮಾಱಾಂ।ತುರ್ವೀಶಂ (ಮ, ಮೈ, ನ); ಮಾಱಾಂ।ತುರ್ವೀಶರ್ (ನ) ೨ ಮತಿಯ (ಮ) ೩ ತಿರೆ (ನ) ೪ ದೊಳಗೆ (ಕಾ) ೫ ಬೆರಸಲ್ಕಿ (ನ) ೬ ಪುಟಿಕೆ (ಪ, ದರ್ಪಣ) ೭ ನೀಯಲ್ಕೆರೆವ (ಮ); ನೀಯಲ್ಕವರ (ನ)

ಇಲ್ಲಿ ಕೆಲರ್ ' ತುರಗ - ಅಸಿ ' ಶಬ್ದಂಗಳೊಳ್ ಸಮತೆಯ
ನಿಚ್ಛೈಸುವರವರ್ಕೆ ಲಕ್ಷ್ಯಂ :

೩ ತುರಗದಟಿಂಗಳ್ ಕವಿತರೆ
ತುರಂಗಮಾರೂಢನಾಗಿ ತನ್ನಯ ಹಯಮಂ
ಪರಿಯಿಸಿ ಕೊಂಗುಳಿವರ್ಮಂ
ಕರಾಸಿಯಿಂದಿಱಿದು ತವಿಸಿದಂ ಹಯಬಲಮಂ ೨೮೫

೪ ಕೂರಿಸಿ ವೀರ[1]ಶ್ರೀಯಂ
ಕೂರದರಂ ಕೊಂದು ಸಮರಜಯಮಂ ಮಾಡಲ್
ಕೂರಸಿಯೊಳ್ ನೆಲಸುಗೆ ಕಂ
ಠೀರವವಾಹನೆ ಚಳುಕ್ಯಕಂಠೀರವನಾ ೨೮೬

(ರನ್ನನ ಗದಾಯುದ್ಧ ೧,೫)

ಸೂತ್ರಂ ೬೪

ಚಾಪಲ ವೀಪ್ಸಾಭೀಕ್ಷ್ಣ್ಯ[2]ಸ
ವಿಾಪಾನುಕೃತಿ ಕ್ರಿಯಾಸಮಭಿಹಾರಾದಿ
ವ್ಯಾ[3]ಪನೆಯೊಳ್ ಪದಕ[4]ಕ್ಕುಂ
ರೂಪದ್ವಿತ್ವಂ ಯಥಾಪ್ರಯೋಗಾನುಗತಂ ೨೮೭

ಪ್ರಯೋಗಂ : **ಚಾಪಲಕ್ಕೆ :**

೧ ಅದಱಿಂದಮೊಪ್ಪಿಸೊಪ್ಪಿಸು
ಸುದತಿಯನೆಮ್ಮಣ್ಮ ಸಾರ್ಚು ಸಾರ್ಚೆಲೆ ಎಲೆ ನೀ
ನದಿರದೆ ನಿಲ್ ನಿಲ್ ನೀನಿ
ಲ್ಲಿದಿರ್ಚಿದಿರ್ಚೆನೆ ಜಟಾಯು ರಾವಣನೆಂಗುಂ ೨೮೮

ವೀಪ್ಸೆಗೆ :

ಮತ್ತೇಭವಿಕ್ರೀಡಿತಂ

೨ ಮುದ[5]ಮೂರೂರಬಲಾಜನಕ್ಕೆ ಪರಿನೀರೂರೂರ ತೋಂಟಕ್ಕೆ ಸಂ
ಪದಮೂರೂರ ಗೃಹಕ್ಕೆ ಪಂಕಜದ ಚೆಲ್ವೂರೂರ ಗುಯ್ಯಲ್ಗೆ[6]ಸಂ
ಮದ[6]ಮೂರೂರ ಮದಾಳಿಗಂಚೆಗಳ ಪೆಂಪೂರೂರ[7] ಷಂಡಕ್ಕೆ ಪಾ
ಲೊದವೂರೂರ ದನಕ್ಕತರ್ಕ್ಯಮದಱಿಂ ರಯ್ಯಂ[8] ತದುರ್ವೀತಳಂ ೨೮೯

೧ ವಿಜಯ (ಪಾ) ೨ ಭೀಕ್ಷ್ಣ (ಮೈ) ೩ ಖ್ಯಾ (ಕಾ) ೪ ದದ (ನ) ೫ ಮುಡ (ಪ) ೬-೬ ಯಾಸ್ಪದ (ಪ) ೭ ಚೆಲ್ವೂರೂರ (ಮ, ಮೈ, ಕಾ) ೮ ರಮ್ಯಂ (ಕಾ)

ಅಭೀಕ್ಷ್ಣ್ಯಕ್ಕೆ :

ಚಂಪಕಮಾಲೆ

೩ ಗಿಳಿಯೊಡನೋದಿಯೋದಿ ನುಡಿಗಲ್ತು ಮದಾಲಸರಾಜಹಂಸಮಂ
ಡಳಿಯೊಡನಾಡಿಯಾಡಿ ನಡೆಗಲ್ತು ಕಳಾಪಿಗಳಾಟಮಂ ಮನಂ
ಗೊಳೆ ನಡೆ[1] ನೋಡಿ ನೋಡಿ ಕುಣಿಯಲ್ ನೆಱೆ ಕಲ್ತು ಕಲಾಗುಣಂ ಪೊದ
ಳ್ದಿಳವಡೆ ಬಾಲಭಾವದೊಳೆ ಬಾಲಕಿಯರ್ ಬಳೆವರ್ ನಿರಾಕುಳಂ[2] ೨೯೦

ಸಮೀಪಕ್ಕೆ :

೪ ಅಱಿಪು ಕೊಲೆ ಕಳವು ಪುಸಿಯುವ
ಗಱಿಯಂ ಪಱಿಯೆಂಬ ದೋಷದೊಳ್ ಪೊರೆದ ನರಂ
ಕೆಳಕೆಳಗೆ ನರಕಬಿಲದೊಳ್
ಗಳಗಳನಿೞಿಗುಂ ರಸಾಂತಮಂ ತಾಗುವಿನಂ[3] ೨೯೧

ಅನುಕೃತಿಗೆ :

೫ ವಿನುತಕ್ರೌಂಚಾಚಳರಂ
ಧ್ವನಿಕಟದಿಂ ಮೊಗಸಿ ಬರ್ಪ ಹಂಸಾಳಿಯನಂ
ದನುಕರಿಸಿ ಪರಿದು ಭೋರ್ ಭೋ
ರೆನೆ ಪಾಯ್ದು[4]ಳಿದು ಹಿಮನಗಕ್ಕೆ[5] ಗಂಗಾಸ್ರೋತಂ ೨೯೨

ತ್ರಿಪ್ರಯೋಗಮುಮಿಲ್ಲಿ ಸಾಧುವಕ್ಕುಂ[6]

೬ ಬೆಳೆಗೆಯ್ಗಳೊಳಿರ್ದೆತ್ತಂ[7]
ಕಳರವದಿಂ ಕೆಯ್ಯನೆತ್ತಿ ಹಯ್‌ಲಲ್ಲೆನುತುಂ
ಬಳೆಗಳ್ ಘುಲ್ ಘುಲ್ ಘುಲ್ಕೆನೆ[9]
ಗಿಳಿಸೋವಾಕೆಗಳಿನೊಪ್ಪುಗುಂ ಕೆಲವೆಡೆಯೊಳ್ ೨೯೩

ಕ್ರಿಯಾಸಮಭಿಹಾರಕ್ಕೆ :

೭ ಅಡವಿ ಬಯಲಾಗೆ ನದಮೊ
ಱ್ಕಡುಗೆ ತೆಮರ್ ಸರಿಸಮಾಗೆ ಬಟ್ಟೆಯೊಳೆಲ್ಲಂ
ನಡೆ ನಡೆಯೆಂದೇಂ ನಡೆದುದೊ
ಪಡೆ ಪಡೆದಚ್ಚರಿಯನಾ ಸುರಾಪಗೆವರೆಗಂ[10] ೨೯೪

೧ ಮಿಗೆ (ಪ) ೨ ನಿರಂತರಂ (ದರ್ಪಣ,ಕಾ) ೩ ತಾಪಿನೆಗಂ (ಕಾ) ೪ ಪಾಯ್ವು (ಪ) ೫ ಹೇಮನಗಕೆ (ನ) ೬ ಸಾರ್ಥಕಮುಕ್ಕುಂ (ನ) ೭ ದೆಂತಂ (ಮ) ೮ ಚಲ (ಮು,ಮೈ,ನ) ೯ ಘುಲ್ಲೆನೆ (ಕಾ) ೧೦ ಧರೆಗಂ (ಮ)

ಆದಿಗ್ರಹಣಕ್ಕೆ :

೮ ಅಂತೆಂತೆನೆ ಪರಿಚಾರಕಿ
ಗಿಂತೆಂದಂ ಬ್ರಹ್ಮಚಾರಿ ಕಳೆ ಕಳೆ ಸಿತಗಂ
ಗಿಂತು ಕಿಡಿಸುವುದೆ ತಪಮನ
ದೆಂತುಂ ಗಿರಿಸುತೆಯು[೧] ಬಯಸಲಾತಂ ದೊರೆಯೇ ೨೯೫

ಸೂತ್ರಂ ೬೫

ಪಲ್ಲಟಿಸಿ ಡಕಾರದ ನೆಲೆ
ಯಲ್ಲಿ ಟಕಾರಂ ಳಕಾರದೊಳ್ ರೇಫಂ ತಾ
ನೆಲ್ಲಿಯುಮುಕ್ಕುಂ ಪದವಿಧಿ
ಯಲ್ಲಿ ಪರಂ ವ್ಯಂಜನಾದಿಯಾಗಿರೆ ಬಹುಳಂ ೨೯೬

ಅದೆಂತೆಂದೊಡೆ :

ಸೂತ್ರಂ ೬೬

ಕಾಡುಂ ಕೋಡುಂ ನಾಡುಂ
ನೀಡುಂ ನಾಮಂಗಳೊಳ್ ಕ್ರಿಯಾರ್ಥಂಗಳೊಳಂ
ಮಾಡುವುದುಂ ನೋಡುವುದುಂ
ಬೇಡುವುದುಂ ಟತ್ವವಿಧಿಗೆ ಪರಿಗಣಿತಂಗಳ್ ೨೯೭

ಅನಿತರ್ಕಂ ಯಥಾಕ್ರಮದಿಂ ಪ್ರಯೋಗಂ :

೧ ಕಾಟ್ಕಿಚ್ಚು ತಗುಳೆ ತಮ್ಮೊಳ್
ಕೋಟ್ಕಟ್ಟ ವನದ್ವಿಪೇಂದ್ರಚಯಮತಿಭಯದಿಂ
ನೀಟ್ಕರಿಸಿ[೨] ನಿಲ್ಲದೆನಸುಂ
ನಾಟ್ಕು[೩]ಡಿಮೋಪಂತೆ ಪೋಪುದೀ[೪] ನಗತಟದಿಂ ೨೯೮

ಉತ್ಪಲಮಾಲೆ

೨ ಕಾಟ್ಪುರಮಾಗೆ ಕಾವ್ಯರಸ[೫]ಮರ್ಥಮುಮಕ್ಕರಮುಂ[೫] ಪ್ರತೀತಿಯಂ[೬]
ಮಾಟ್ಪಿನೆಗಂ ಜಲಕ್ಕನಿರೆ ಪೇೞದೆ[೭] ಕೆಮ್ಮನೆ ಗಂಟು[೮]ವೇಟ್ದು ಚಿಃ
ನೋಟ್ಪುದೆ ಮುಯ್ವನಾ ಕೃತಿಗೆ ಪಂಜಿಕೆ[೯] ವೇಟ್ಪುದದರ್ಕೆ ಟಿಪ್ಪಣಂ
ಬೇಟ್ಪುದು ಟೀಕು ಬೇಟ್ಪುದೆನೆ ಪೇಟ್ದವ[೧೦]ನುಂ ಕವಿಯೆಂಬ ಲೆಕ್ಕ[೧೦]ಮೇ ೨೯೯

೧ ಸುತೆಯೆ (ನ) ೨ ಕಿಟ್ಕಲಿಸಿ (ನ) ೩ ನಾಟ್ಕ (ನ) ೪-೪ ಪೋಪಂತೆ ಪೋಪುವೀ (ಮ, ಮೈ)
೫ ದರ್ಥಮನಕ್ಕರಮುಂ (ಪ) ೬ ಯಿಂ, ಯುಂ (ನ) ೭ ಪೇಟ್ವುದು ೮ ನೋಱಂಟು (ಕಾ)
೯ ಪಂಚಿಕೆ (ಮ, ಮೈ) ೧೦-೧೦ ನಂ ಕವಿಯೆನ್ನಬರ್ಕುಮೆ (ನ)

ಅಲ್ಲಿ ರೇಫಕ್ಕೆ :

೩ ಮಾರ್ಪಿಡಿಯೆ ಮಾಣನೀ ಭಟ
ನೇರ್ಪಸವಿ^೧^ಗನೀತನಿದಿರ್ಗೆ ಬರ^೨^ಲಾರ್ಪವರಾರ್
ಮಾರ್ಪಡೆಯೊ^೩^ಳೆನ್ನ ಘನದೋ^೩^
ರ್ದರ್ಪಮನಾವರಿಸಿ ನೆಗಲ್ದ ಕಲಿ^೪^ ರಣವಜ್ರಂ ೩೦೦

ಬಹುಳಗ್ರಹಣಕ್ಕೆ :

ಸ್ರಗ್ಧರೆ

೪ ಪೇಱುರ್ದಿರ್ಪತ್ತುತೋಳುಂ ದಶಮುಖಕುಹರಾ^೫^ಟೋಪಮುಂ ಮಿಟ್ತ್ರ ರೂಪಂ
ತೋಱುರ್ದಂತಿರ್ದ^೬^ ರೂಪುಂ ಹರನಿದಿರೊಳಗುರ್ವಪ್ಪಿನಂ ಪೊಣ್ಮಿದಣ್ಮಂ
ಬೀಱುತ್ತುಂ ದೇವನಂ ಮಚ್ಚಿ^೭^ಸಲವಯವದಿಂದೊಂದೆರಟ್^೮^ ಮೂಱು ನಾಲ್ಕ
ಯ್ದಾಱೇಟೆಂಟೊಂಬತೆಂದಿಂತರಿಗುಮೆ ತಲೆಯೊಂಬತ್ತುಮಂ^೮^ ದೈತ್ಯರಾಜಂ

ಸೂತ್ರಂ ೬೭

ಕೆಲಬರುಪಾಂತ್ಯದಕಾರದ
ನೆಲೆಯೊಳೊಕಾರಂ ವಯದ್ವಯಕ್ಕೌದ್ವೈತ್ವಂ
ಸಲೆ ಕೂಡೆ ಣಕಾರಂ ಕೇ
ವಲಂ ನಕಾರಕ್ಕೆ ಣತ್ವಮಕ್ಕುಮದೆಂಬರ್ ೩೦೨

ಪ್ರಯೋಗಂ : (ಉಪಾಂತ್ಯದ ಅ ಕಾರಂ ಒ ಕಾರವಾದುದಕ್ಕೆ):

೧ ಆವೊಂ ಕಾವೊಂ ಲೋಕಮ
ನಾವೊನಿನಮರರ್ಕಳಮರರೆನಿಸಿದರೊಲವಿಂ
ದಾವೊನುರಃಸ್ಥಳದೊಳ್ ಲ
ಕ್ಷ್ಮೀವಧು ನೆಲಸಿರ್ಪಳಾ ಮುರದ್ವಿಷನೀತಂ ೩೦೩

ವಕಾರದೌತ್ವಕ್ಕೆ :

ಚಂಪಕಮಾಲೆ

೨ ಕಸವರದಾಸೆಯಿಂ ಪ^೧೦^ದೆಪುದೋರ್ಪಟ^೧೦^ವೆಂಡಿರ ನಲ್ಮೆಯೆಂದು ಭಾ
ವಿಸದಿರು ನೀಂ ಮನೋನಯನವಲ್ಲಭ ಕೂರಿಸಿ ಕೂರ್ತ ನಿನ್ನ ಮೆಯ್
ಕಸವರಮೆನ್ನ ನಿನ್ನುಸಿರ ದೌದಲೆಗಾಣ್ಬೆನ^೧೧^ಮೆಂದೆ ನಂಬು ಚಿಃ
ಕಸವರಬೇಟಮೆಂಬುದೆರೆಕೊಳ್ವರ ಬೇಟಮದೆನ್ನ ಬೇಟಮೋ ೩೦೪

೧ ದಿ (ನ) ೨ ವರ (ಮ) ೩-೩ ಳನ್ನಪದದೋ (ನ) ೪ ಕವಿ (ನ) ೫ ಮುಖರಾ (ಕಾ)
೬ ತಪ್ಪ (ನ) ೭ ಪೂಜಿ (ಕಾ) ೮ ಯುಂ ಪತ್ತುಮಂ (ಮ, ಮೈ, ನ) ೯ ಯೊಳ್ (ನ)
೧೦-೧೦ ಡೆದು ತೋರ್ಪೆಳ (ಮ); ದೆಪುದೋರ್ಪೆಳ (ಮೈ) ೧೧ ದೌತಲೆಕಾಣ್ಬೆನ (ನ)

ಯಕಾರದ್ವೈತ್ವಕ್ಕೆ :

ಮತ್ತೇಭವಿಕ್ರೀಡಿತಂ

೩ ಅಸಿತೇಂದೀವರಲೋಲಲೋಚನೆಯನಂದಂತಾ ಸಭಾಮಧ್ಯದೊಳ್
ಪಸುವಂ ಮೋದು[೧]ವವೋಲೆ[೧] ಮೋದೆಯುಮದಂ ಕಂಡಂತೆ ಪಲ್ಗರ್ಚಿ ಸೈ
ರಿಸಿದೆಂ ನಿನ್ನಯೆ ಸನ್ನಿಗಿನ್ನೆವರಮಾ[೨] ದುಶ್ಯಾಸನೋರಃ[೩]ಸ್ಥಲೋ
ಷ್ಣಸೃತಾ[೩]ಸೃಗ್ಜಲಪಾನಮಂ ಬಯಸಿ ಬಾಯ್ ತೇರ್ರೈಸೆ ಸೈತಿರ್ಪೆನೇ[೪] ೩೦೫

(ಪಂಪನ ವಿಕ್ರಮಾರ್ಜುನವಿಜಯ ೭,೫೮)

ನ ಕಾರದ ಣ ತ್ವಕ್ಕೆ[೫] :

೪ ಕಣ್ಣಾರೆ ನೋಡಿ ಮಾವಿನ
ತಣ್ಣೆಲೆಯೊಳ್ ನಲಿವ ಸಿದ್ಧಚಾರಣಗಣಮಂ
ಪಣ್ಣನೆ ಬಂದೆಳಗಾಯರೆ
ಪಣ್ಣನೆ ಪಱಿಪಱಿದು ತಿಂಬ ಬಲಿಮುಖಕುಲಮಂ ೩೦೬

ಸೂತ್ರಂ ೬೮

ಪೊ[೬]ಯೆ ಬಯೆ ಮತ್ತಾರಯೆ ಗೆಯೆ
ಸಯೆಯೆಂದು[೬] ವಿಕಲ್ಪದಿಂ ಯ ಸಂಯೋಗದೊಳಾ
ಶ್ರಯಿಸಿಕ್ಕುರ್ಗಂ ಗುರುಲಘುಗತಿ[೭]
ನಿಯಮ[೮]ಮದೇದೋದ್ದ್ವಯಕ್ಕಮಕ್ಕುಂ ಪ್ರಾಯಂ ೩೦೭

ಪ್ರಯೋಗಂ :

೧ ನಡೆ ಕೋಲ್ವ[೯]ರಮುಂದಂಬುರ
ದೆಡೆಯುಂ ಪು[೧೦]ಣ್ಗೂರ್ತು ಕಾಳವಟ್ಟದ ಕೊಪ್ಪಂ[೧೧]
ಪಿಡಿದು ನೆಱಲ್ದರ್ಕಸುತಂ
ಗಿಡಿಗಂ ಪೊಯೆ ನೊಂದ ಭುಜಗನಿರ್ಪಂತಿರ್ದಂ ೩೦೮

೨ ಮೆಯ್ಯ ಮುಸಿ ಕೊರಲ ಬಕ್ಕಳೆ[೧೨]
ಪೊಯ್ಯೆ ಪುಗಿ[೧೩]ಲ್ಗರೆವ ಕೆಯ್ಯ ಕಂಕರಿಕೆ ಕರಂ
ರಯ್ಯಮೆನೆ ಪಾಡುತಿರ್ದ[೧೪]ಳ
ನೊಯ್ಯನೆ ಕಡೆಗಣ್ಣೊಳಡರೆ[೧೫] ಚಪ್ಪರಿಸುತ್ತುಂ ೩೦೯

೧-೧ ವೊಲೆಯ್ದೆ (ಮ) ೨ ವರೆಗಂ (ಕಾ) ೩-೩ ಸ್ಥಲೋ/ಚ್ಛ್ವಸಿತಾ (ಕಾ) ೪ ಸೈರಿಪ್ಪೆನೇ (ಮ, ಮೈ) ೫ ಣ ಕಾರಕ್ಕೆ (ನ) ೬-೬ ಯ್ ಬಯ್ ಮತ್ತಾರಯ್ ಗೆಯ್/ಸಯ್ಯೆಂದು (ಕಾ) ೭ ತತಿ (ನ) ೮ ನಿಯತ (ನ) ೯ ಕೊಲ್ವ (ಮ) ೧೦ ಪೂ (ನ) ೧೧ ಕೊಳ್ಪಂ (ಮೈ, ನ) ೧೨ ಬಕ್ಕಂ (ನ) ೧೩ ಘುರಿ (ದರ್ಪಣ) ೧೪ ತಿರ್ಪ (ಮ) ೧೫ ಡರಿ (ಮ)

ದ್ರುತವಿಲಂಬಿತವೃತ್ತಂ

೩ ಪಿಡಿದು ಮಚ್ಚದೆಗ[೧] ನೋವದೆ ಪೆಂಡಿರಂ
ಜಡಿ[೨]ಯೆಯುಂ ಬಯೆಯುಂ[೨] ಬಲಗರ್ವದಿಂ
ಮಿಡುಕಲಣ್ಮದೆ ನೋಡಿದ ಸಾಸಿಗಂ[೩]
ನುಡಿಯದಿರ್ಕುಮೆ ಬೀರಮನಾರೊಳಂ ೩೧೦

೪ ಸುಯ್ಯ[೪]ನಿಡುಪುಡುಗ[೪]ದಿರೆಯುಂ
ಮೆ[೫]ಯ್ಯರೆ ಮುಟ್ಟಿದೆಯುಮಿಂತು ಸಂದಂದಿನಿಬರ್[೫]
ಬಯ್ಯಲೆ ಪೊಯ್ಯಲೆ ಕುರುಳಂ[೬]
ಕೊಯ್ಯಲೆ ಪೋಯ್ತಿಂತು[೭] ವಿನಯವತಿಗಂ ಪತಿಗಂ ೩೧೧

೫ ಆರಯೆ ಜಡನಾದೊಡಮುಧಿ
ಕಾರಿಯ ಮಾಡಿದುದೆ ಪವಣದಂತಿಂತೆನವೇ
ಡೂರೂರೊಳುಱುಗನಾದೊಡ
ಮೂರಡಿ[೮] ಪವಣೆಂಬುದಲ್ತೆ ನಾಣ್ಣುಡಿ ಜಗದೊಳ್ ೩೧೨

೬ ಆರಯ್ಯೆ ಸರ್ವಭೂತಾ
ಧಾರಂ ಮುಱಿಯುಂ ನೃಪೇಂದ್ರನುಂ ಮುಱಿಗಾಲಂ
ಬಾರದೊಡಂ ನಿರ್ವಹಿಸುವ
ರಾರುಂ ನೃಪನಿಲ್ಲದಂದು ನಿರ್ವಹಿಸುವರೇ ೩೧೩

ಸ್ವಾಗತವೃತ್ತಂ

೭ ಏಳಿದಂಗೆಯುಲಿಮಿಾಗಡೆ ನಮ್ಮೊ
ಳ್ಳಾಳನೊಳ್ಗುದುರೆಯುಂ ರಥಕಟ್ಯ್ಯಾ[೯]
ವ್ಯಾಳದಂತಿಕುಲಮುಂ ಸಮುಕಟ್ಟಂ
ಕಾಳೆಗಕ್ಕೆ ತಡೆದಪುರ್ದ[೧೦]ಯುಕ್ತಂ ೩೧೪

೧ ದ (ನ) ೨–೨ ಯಱುಂ ಬಯಲುಂ (ನ) ೩ ಸಾಸಿರಂ (ಮೈ) ೪–೪ ನಿಡುಪಡಗ (ಮು, ಮೈ, ನ); ಮಿಡುಪುಡುಗ (ಪ) ೫–೫ ಯ್ಯುರಿ ಮುಟ್ಟಿದೆಯುಮಿಂತು ಸಂದದಿನಿಬರ್ (ಮು); ಯ್ಯಡಗಡನಾಗಿ ಮುಟ್ಟಿ ಸಂದಂದನಿಬರ್ (ನ); ಯ್ಯರೆಮುಟ್ಟಿದೆಯುಮುಂತೆಲುಂ ದದಿನಿರುಳೊಳ್ (ಪ) ೬ ತಲೆಯಂ (ಮು, ಮೈ, ನ) ೭ ಬೆಳಗಾಯ್ತು (ಪ) ೮ ಮೂಱಡಿ (ನ) ೯ ಪತ್ತಿ (ನ) ೧೦ ದಿರ್ಪುದ (ಮು)

೮ ನಿಮ್ಮಿಂ ಪಿಂಬಡಿನೊಳದೇ
ಸಮ್ಮದಮೆಮಗಂ ಧರಿತ್ರಿಗಂ ರಾಜ್ಯದ ಮೋ
ಹಮ್ಮಱಿದುಮೊಂದದೆಮ್ನೊಳ್
ಕೆಮ್ಮನೆ ನೀಮಿನಿತುಮಾಗ್ರಹಂಗೆಯ್ಯದಿರಿಂ ೩೧೫

೯ ಆಯತಿ ನಿಮಿರ್ವಂತು ಗುಣಾ
ಮ್ನಾಯಮುನೊಳಕೊಂಡು ಬಱದ್ದೊಡದು[೧] ಬಾಱನಿಕುಂ
ನ್ಯಾಯಮುನೊಕ್ಕಳೆ ಪೞವಿನ
ಮಾಯಂ ಸಯೆ[೨] ಬಱ್ದುದೊಂದು ಬಾೞುಂ ಬಾೞೇ ೩೧೬

೧೦ ಕಾಯದೆ ಚಲಮಂ ಪಲರುಂ
ಚೀ[೩]ಯೆನೆ ಪತಿ ಸಾಯೆ ಸಯ್ಯ[೪]ಲಂಜಿದ ನಾಯಂ
ನಾಯೆಂಬೆ[೫]ನಾಳ್ದನಂ ಕಾ
ದಾ[೫]ಯತಿ ನಿಲೆ ಸತ್ತ ನಾಯನಾಂ ನಾಯೆಂಬೆಂ ೩೧೭

ಏ ಕಾರಕ್ಕೆ :

ಮತ್ತೇಭವಿಕ್ರೀಡಿತಂ

೧೧ ಕುಡಿದಂಭೋಧಿಗಳೇೞುಮಂ ತವಿಪುದೇ ಗೋತ್ರಾದ್ರಿ[೬]ಸಂಘಾತಮಂ
ಪಿಡಿದೇಂ ಕೀೞ್ವುದೆ ದಿಗ್ಗಜೇಂದ್ರಚಯಮಂ ಮಾರ್ಪೊ[೭]ಯ್ವುದೇ ಕಟ್ಟೆ ನಿ
ಮ್ಮಡಿಗೊಪ್ಪಿಪ್ಪುದೇ ಲೋಕಪಾಲಕರನಾ ಬ್ರಹ್ಮಾಂಡಮಂ ಚಂಚುವಿಂ
ದೊಡೆದೀಡಾಡುವುದೇ ವಿಹಂಗಮುಮಿದೆಂದೇಕಬ್ಬ ನೀಮೋಳಿಪಿರ್ ೩೧೮

ಓ ಕಾರಕ್ಕೆ :

ಉತ್ಪಲಮಾಲೆ

೧೨ ತಂದೆಯ ನನ್ನಿಗಿತ್ತನನುಜಂಗೆಳೆಯಂ ರಘುವಂಶನೆಂದು ಜೀ
ಯೆಂದಪುದೀ ಜಗಜ್ಜನಮಿದಂ ಸಿರಿ[೮]ಗೆಂಬುದೊ ಲೋಭಮೆಂಬುದೋ
ಪಂದೆತನಕ್ಕೆ ಮೊತ್ತಮೊದಲೆಂಬುದೊ ಮತ್ತಿನನೆಂಬೊಡೂನ್[೯]ನೆಂ
ಗುಂ ದೊರೆವೆತ್ತನೆಂಗುಮೊ ಕುಲೋದ್ಗತನೆಂಗುಮೊ ತಕ್ಕನೆಂಗುಮೋ ೩೧೯

೧ ಬಾಱ್ವುದದು (ನ) ೨ ಸಯ್ಯೆ (ಮೈ) ೩ ಜೀ (ಮೈ) ೪ ಸಾಯ (ಮು, ಮೈ, ನ) ೫-೫ ನಾಳ್ವನಂ ಕೊಂ।ದಾ (ಮು); ನಾಳ್ವನಂ ಕೊಂ।ಡಾ (ನ) ೬ ಗೋತ್ರಾದಿ (ಮು) ೭ ಮಾರ್ಪಾ (ನ) ೮ ಸೆರ (ನ) ೯ ನೆಂಬುದೂನ (ಮು, ನ)

ಪ್ರಾಯೋಗ್ರಹಣಕ್ಕೆ :

೧೩ ಎಲೆವಳ್ಳಿಯ ತಳ್ಪಿಂದೇ
ಱಿಲೆವಾಱಿಯ ಪರೆಪಿನಿಂದಶೋಕೆಯ ಪೊದಱಿಂ
ಮಲೆವಾಯ್ವ ಲತೆಯ ಪುದುವಿಂ
ತೊಲಗದು ಬನದೊಳಗೆ ಬಳೆದ[೧] ಕೞ್ತಲೆ ಪಗಲುಂ ೩೨೦

೧೪ ಓಲೆಯನೋಲೆಯೊಳಿಕ್ಕಿದ
ನಾಲೀಢಮನಿಟ್ಟು ಬೇಱೆ ನುಡಿ[೨]ದಟ್ಟಿದನೇಂ
ಚೋಳನೆ ಕೇರಳಧಾತ್ರೀ
ಪಾಲಂ ನುಡಿದಂತೆ ನಾಳೆ ನಿಲ್ಕಾಹವದೊಳ್ ೩೨೧

ಇದು ಶಬ್ದಸ್ಮೃತಿಯೊಳ್ ಸಮಾಸಪ್ರಕರಣಂ ಸಮಾಪ್ತಂ

೧ ಬಳೆವ (ಮ); ಪೊಳೆವ (ನ) ೨ ನಡು (ನ)

೫ ತದ್ಧಿತಪ್ರಕರಣಂ

ಸೂತ್ರಂ ೬೯

ಇವು ಪಣ್ಯಮಿವರ್ಗೆ ಮೇಣಿಂ
ತಿವು ಶಿಲ್ಪಂ ಮೇಣ್ ನಿಯೋಗಮಿವನಱಿವಂ ಮೇ
ಣಿವನಾಚರಿಸುವನೆಂದಿಂ
ತಿವಱೊಳಿಗಪ್ರತ್ಯಯಂ ಯಥೋಕ್ತಿಯಿನಕ್ಕುಂ ೩೨೨

ಪ್ರಯೋಗಂ: (‘ ಇಗ ’ ಪ್ರತ್ಯಯಕ್ಕೆ) :

೧ ಗಂದಿಗನೆರವ[೧]ಣಿಗಂ ಸರ
ವಂದಿಗನಾ ಪಟ್ಟಸಾಲಿಗಂ ಬಾಣಸಿಗಂ
ಮಾಂದರಿಗಂ[೨] ಜೋಯಿಸಿಗಂ
ಸಂದಱಿಕೆಯ ಕಬ್ಬಿಗಂ ಸಮಂಜಸನೊಳನೇ ೩೨೩

ಸೂತ್ರಂ ೭೦

ಇದಱೊಳಿವಂ ವ್ಯಾಪೃತ[೩]ನೆನೆ
ತದಗ್ರದೊಳ್ ಕಾಱಶಬ್ದಮಕ್ಕುಂ ಕೆಯ್ಯೊಂ
ಡಿದನೀತಂ ನಡೆಯಿಪನೆನೆ
ತೊದಳೇಂ ವಳ[೪]ಮೆಂದು ವಳ್ಳ[೫]ಮೆಂದಿವು ನೆಗೞ್ಗುಂ ೩೨೪

ಪ್ರಯೋಗಂ: (‘ ಕಾಱ ’ ಪ್ರತ್ಯಯಕ್ಕೆ) :

೧ ನಗೆವಡಿಕಾಱಂ ನೀಱಂ
ಬಗೆಕಾಱಂ ಪಾಟಕಾಱನೊಳ್ಪಡಿಕಾಱಂ[೬]
ಪಗೆಕಾಱನಾಗಿಯುಂ ಕೆಯ್
ಮಿಗೆ ತಕ್ಕಂ ಕೆಯ್ದುಕಾಱನೆನಿಸಲ್ಕಾಱಂ ೩೨೫

(‘ ವಳ - ವಳ್ಳ ’ ಪ್ರತ್ಯಯಕ್ಕೆ) :

೨ [೭]ಅಡಪವಳಂ ಪಡೆವಳ್ಳಂ
ಮಡಿವಳ್ಳಂ[೭] ಸೆಜ್ಜೆವಳ್ಳನಜ್ಜಂ ಬೆಜ್ಜಂ
ಅಡುವಳ[೮]ನೆಂದಿಂತಿವರಂ
ಕಡಂಗಿ ಬಿಡೆ ಜಡಿಯದಿರ್ಕೆ ನಯಮಱಿವರಸಂ ೩೨೬

೧ ನೇರ (ಮ) ೨ ಮಂದರಿಗಂ (ಮೈ); ಮಾಂದುರಿಗಂ (ಮಂ, ದರ್ಪಣ, ಪ) ೩ ವೃತ (ಮ) ೪ ಬಳ (ಮೈ) ೫ ಬಳ್ಳ (ಮೈ) ೬ ನೊಳ್ಪಗೆಗಾಱಂ (ಮ); ನೊಳ್ಪಗೆಕಾಱಂ (ಮೈ, ನ) ೭–೭ ಮಡಿವಳ್ಳ ಮಡಪವಳ್ಳಂ|ಪಡೆವಳ್ಳಂ (ದರ್ಪಣ) ೮ ಆಡುಬಳ (ಮೈ); ಆಡಬಳ, ಆಡೆಬಳ (ನ)

ಸೂತ್ರಂ ೭೧

ಇದನೀತಂ ಮಾೞ್ಪನೆನಿ
ಪ್ಪುದಱೊಳ್ ಗಾಱಪ್ರಯೋಗಮಕ್ಕುಮಪಭ್ರಂ
ಶದೊಳಮದೆ ವರ್ತಿಕುಂ ಮ
ತ್ತದರ್ಕೆ ಕರ್ಮಾದಿಯಾದೊಡಾದಿಗೆ ಲೋಪಂ ೩೨೭

ಪ್ರಯೋಗಂ: ('ಗಾಱ' ಪ್ರತ್ಯಯಕ್ಕೆ):
೧ ಅಣಿಯರಮೆಸೆದೊಪ್ಪಿರ್ಪುವು
ಮಣಿಗಾಱರ ಕಂಚಗಾಱರೊಱೆಗಾಱರ ತಿಂ
ತಿಣಿಯೆನಿಪ ಮಾಲೆಗಾಱರ
ಗಣನಾತೀತಂಗಳಾಪಣಂಗಳೆ ಪೊೞಲೊಳ್ ೩೨೮

('ಗಾಱ' ಪ್ರತ್ಯಯದ) ಆದಿವರ್ಣಲೋಪಕ್ಕೆ:
೨ ಅಱಿದು ನರನೊವಜರೆನ್ನಂ[೧]
ಕುಱಿ [ಗೋಣ್]ಗೊಱೆದಱಿದನದಱಿನೊಡ್ಡಿಸಿದಂ ಕ
ಮ್ಮಱನಂಬು ಕಮ್ಮಱಂಗೆಂ
ದಱಿಯದೆ ನುಡಿವಂತು ನಾಡವರ್ ಗಾವಿಲರೇ ೩೨೯

ಸೂತ್ರಂ ೭೨

ಈ ಪೇೞ್ದನಿತುಂ ಶಬ್ದಕ
ಳಾಪಂ ಸ್ತ್ರೀವಿಷಯಮಾದೊಡಿತಿ[೨] ಪರಮಕ್ಕುಂ
ರೂಪಾನ್ಯತ್ವದೊಳಾದಿಗೆ
ಲೋಪಂ ತತ್ಪ್ರತ್ಯಯಕ್ಕೆ ಸಂಭವಿಸಿರ್ಕುಂ ೩೩೦

ಪ್ರಯೋಗಂ: ('ಇತಿ' ಪ್ರತ್ಯಯಕ್ಕಂ, ಅದಱೊಳ್ ಆದಿವರ್ಣಲೋಪಕ್ಕಂ):
೧ ಮಡಿಯಂ ಮಡಿವಳ್ತಿಯವೋಲ್
ಬಿಡದಮೃತಾನ್ನಮನೊಱಲ್ದು ಬಾಣಸಿಗಿತಿವೋಲ್
ಕುಡುತಿರ್ದಳ್[೩] ಪೂಮಾಲೆಯ
ನೆಡೆಯುಡುಗದೆ ಮಾಲೆಗಾರ್ತಿವೋಲ್ ಮತ್ತೊರ್ವಳ್ ೩೩೧

೧ ನೋದಜನ್ನಂ (ನ) ೨ ದೊಡಂ (ನ) ೩ ತಿರ್ಪಳ್ (ನ)

ಸೂತ್ರಂ ೨೩

ಇಂತಿದು ವಿಭಾಷೆಯಿಂ ವ
ರ್ಣಾಂತರದೊಳಮಕ್ಕುಮುೞಿದ ಗುಣವಚನಮು[೧]ಕಾ
ರಾಂತಮುಳಂತಂ[೨] ಸ್ತ್ರೈಣದೊ
ಳಂತವಱಿಂ ಪೆಱವು ಪುಂಸ್ತ್ವದೊಳ್ ಸಮ[೩]ರೂಪಂ ೩೩೨

ಪ್ರಯೋಗಂ :

೧ ಒಕ್ಕಲಿತಿ ಜೋಡೆಯಾದಂ
ತಕ್ಕುಮವಳ್[೪] ಸಿತಗೆ ಪತಿಗೆ ಮಿಗೆ ಕಾಯ್ವಳ್ ಸೋ
ಟಕ್ಕೆ ಕಡುಸೊಂದಿ[೫] ನಾಣಿಲಿ
ಬಕ್ಕಂಬಯಲೊಳಮದಾರುಮಂ ಬಂಚಿ[೬]ಸುವಳ್ ೩೩೩

ಸೂತ್ರಂ ೨೪

ಅಲ್ಲಿಯೆ ಪುಟ್ಟಿದನಿಂತಿವ
ನಲ್ಲಿಯೆ ತಾಂ ಬಳೆದನೆಂದು ಪೇೞ್ವರ್ಥದೊಳಂ
ತೆಲ್ಲಮಿಚಪ್ರತ್ಯಯಮಿಂ
ತಲ್ಲಿ ಯಥಾಲಕ್ಷ್ಯಮಾದಿಗಕ್ಕುಂ ಹ್ರಸ್ವಂ ೩೩೪

ಪ್ರಯೋಗಂ : (‘ಇಚ’ ಪ್ರತ್ಯಯಕ್ಕೆ) :

೧ ಪೊೞಲಿಂದ್ರಪುರಂ ಕಾಲೂರ್
ಪೊೞಲಿಂದ್ರರ್ ಪೊೞಲ ಮಾನಸರ್[೭] ಕಾಲುರಿಚರ್
ಪೊೞಲಿಚರೆನೆ ಸೊಗಯಿಸುವುದು
ಪೊೞಲಿಂ ಕಾಲೂರ್ಗಳಿಂದಮಂತಾ ವಿಷಯಂ ೩೩೫

ಸೂತ್ರಂ ೨೫

ಅಲ್ಲಿ ಇದುಂಟೆಂಬರ್ಥದೊ
ಳೆಲ್ಲಿಯುಮುಳ್ಳೊಡೆಯು ವಂತ ಶಬ್ದಮವಕ್ಕುಂ[೮]
ಎಲ್ಲಂದದೊಳಂ ಪೋಲಿಸು
ವಲ್ಲಿ ಗುಣಾಧಿಕರೊ[೯]ಳಂತೆ[೧೦]ವೋಲ್ ತಾನಕ್ಕುಂ[೧೦] ೩೩೬

೧ ವಚನಮ (ಮ) ೨ ಮದಂತಂ (ನ) ೩ ಸ್ತ್ರೀ (ನ) ೪ ದವಳ್ (ನ) ೫ ಸಾದು (ಮೈ)
೬ ವಂಚಿ (ಮ); ಭಂಜಿ (ಮಂ. ದರ್ಪಣ, ನ) ೭ ವರ್ (ಮ) ೮ ಶಬ್ದಮುಮಕ್ಕುಂ (ನ)
೯ ಗುಣಾಧಿಕದೊ (ನ) ೧೦–೧೦ ವೋಳೆನಲಕ್ಕುಂ (ನ)

ಪ್ರಯೋಗಂ : ('ಒಡೆಯು-ಉಳ್ಳ-ವಂತ' ಪ್ರತ್ಯಯಗಳ್ಗೆ) :

೧ ಸಿರಿಯೊಡೆಯಂ ಸಿರಿಯುಳ್ಳಂ
ಸರೂಪಿ[೧] ಗುಣವಂತನಧಿಕದಾನಿ ಮಹೇಚ್ಛಂ[೨]
ನರರೊಳಿವನೆನಿಸಿ ಬಾಳ್ವುದು[೩]
ಪುರಾತನೋದಾತ್ತಪುಣ್ಯಪರಿಪಾಕಫಲಂ ೩೩೭

ಅಪರಾರ್ಧಕ್ಕೆ : ('ಅಂತೆ' ಎಂಬುದಕ್ಕೆ) :

ಚಂಪಕಮಾಲೆ

೨ ಸುರಪತಿಯಂತೆ ವಿಸ್ಫುರಿತನೇತ್ರಸಹಸ್ರವಿರಾಜಿತಂ ನರೇ
ಶ್ವರಭವನಾಗ್ರದಂತೆ ದೃಢವೇತ್ರ[೪]ಲತಾಶತದುಷ್ಪ್ರವೇಶ[೫]ಮಂ
ಬರತಳದಂತೆ ಋಕ್ಷಮೃಗಲುಬ್ಧಕಸಂಗತ[೬]ಮಂಬುರಾಶಿಯಂ
[೭]ತಿರೆ ತತವಿದ್ರುಮ[೭]ದ್ಯುತಿ ನಿರಂತರಮೊಪ್ಪುಗುಮಾ ವನಾಂತರಂ

('ವೋಲ್' ಎಂಬುದಕ್ಕೆ) :

೩ ಕರಿವೋಲ್ ಭದ್ರಗುಣಂ ಕೇ
ಸರಿವೋಲ್ ನಿರ್ವ್ಯಾಜಶೌರ್ಯನಂಭೋನಿಧಿವೋಲ್
ಶರಣಾಗತರಕ್ಷಣಪಟು
ಗಿರಿವೋಲ್ ನಿಷ್ಕಂಪಚಿತ್ತನಾ ನೃಪತುಂಗಂ[೮] ೩೩೯

ಸೂತ್ರಂ ೭೬

ಅವಱೊಳ್ ವೋಲ್ಗಕ್ಕುಂ ಹ್ರ
ಸ್ವವಿಧಾನಂ ಪಾಕ್ಷಿಕಂ ಮಕಾರಾಗಮದಿಂ
ವ್ಯವಧಾನಮುವರ್ಣಕ್ಕ
ಕ್ಕುವಲ್ಲಿ ಬಶ್ರುತಿ ವಕಾರದೊಳ್ ನೆಲೆಗೊಳ್ಗುಂ ೩೪೦

ಪ್ರಯೋಗಂ : ಪೂರ್ವಾರ್ಧಕ್ಕೆ ('ವೊಲ್' ಎಂಬ ರೂಪಕ್ಕೆ) :

ಮಣಿವಿಭೂಷಣವೃತ್ತಂ

೧ ಶ್ರೀಯ ಜವ್ವನ[ದ] ರೂಪಿನ ಗಾಡಿಯ ಪೆಂಪಿನೊಂ
ದಾಯ[೯]ರ್ ತಾನೆ ನಡೆತರ್ಪವೊಲೊಪ್ಪಿರೆ ಬಂದಭಿ
ಪ್ರಾಯಸಿದ್ಧಿ[೧೦]ಯನೆ ಚಿಂತಿಸುತುಂ ಮನದೊಳ್ ಜಯ
ಶ್ರೀಯ ದೂದವಿವೊಲಾ ಸತಿ ಕಂಡು ಶಿಖಂಡಿಯಂ ೩೪೧

೧ ಸುರೂಪಿ (ನ); ಸ್ವರೂಪಿ (ಮ) ೨ ಮಹಚ್ಚಿಂ (ಮ); ಮಹಾಂತಂ (ನ) ೩ ಬಾಳ್ವುದೆ (ಮ) ೪ ಪರಿವೇತ್ರ (ಪ) ೫ ಸತತಪ್ರವೇಶ (ಪ); ಶತದುಷ್ಟ್ರದೇಶ (ಮ) ೬ ಸಂಕುಲ (ಶ) ೭-೭ ತಿರೆ ನವವಿದ್ರುಮ (ಪ); ತುರುತರವಿದ್ರುಮ (ಪಾ) ೮ ನೃಪಪುತ್ರಂ (ಮ, ನ) ೯ ದಾಯ (ನ) ೧೦ ಬ್ರಾಯುಸಿದ್ಧಿ (ಮ)

ಅಪರಾರ್ಥಕ್ಕೆ : (‘ ವೊಲ್ ’ ಬಿಂದುವೆರಸು ‘ ಬೊಲ್ ’
ಎಂದಾದುದಕ್ಕೆ) :

ಮತ್ತೇಭವಿಕ್ರೀಡಿತಂ

೨ ನಿಗಳಂಬೊಲ್ ತೊಡರ್ದಿರ್ದ ಮೋಹನಿಗಳಂ ನಿರ್ವ್ಯಾಕುಳಂ ಪಿಂಗೆ ಮ
ತ್ತಗಜೇಂದ್ರಂಬೊಲಲರ್ಗಳಂ ವನಮು[೧]ನಂದಾನಂದದಿಂ ಪೊಕ್ಕನಾ
ವಗಮಾದಕ್ಕಱುರ್ಕೆಯಿಂ ಮಕುಟಬದ್ಧರ್ ನೂರ್ವರಂತಲ್ಲಿ ದೀ
ಕ್ಷೆಗೊಳಲ್ ತನ್ನೊಡವೋಗೆ ನಿಶ್ಚಿತಮನಂ ಶ್ರೀಚಂದ್ರಭೂವಲ್ಲಭಂ ೩೪೨

ಸೂತ್ರಂ ೭೭

ತನಮಿಕೆಯುಮೆಂಬಿವುಂ ಚೇ
ತನಭಾವದೊಳಕ್ಕುಮುಱಿದ ಭಾವಾರ್ಥದೊಳಂ
ತನಿತಱೊಳಂ ಪು ಕೆಯೆಂಬಿವು
ಜನಿಯಿಕುಮಂತಲ್ಲಿ ಕ ದ್ವಿರುಕ್ತಿ ವಿಕಲ್ಪಂ ೩೪೩

ಪ್ರಯೋಗಂ : (‘ ತನ - ಇಕೆ ’ ಪ್ರತ್ಯಯಗಳ್ಗೆ) :

೧ ಕಡುಗಲಿತನಮಂ ಚಾಗದ
ಪೊಡರ್ಪುಮೊಳ್ನುಡಿ[೨]ಯೊಳಾದ ಮಾನಸಿಕೆಯುಮು
ಕ್ಕಡುಗದ ಶೌಚಮುಮಾಯದ
ಪಡೆವಾತುಂ ಪೆರ್ಮೆವಡೆದುವವಸಿಂ[೩]ದಿಳೆಯೊಳ್ ೩೪೪

ಅಪರಾರ್ಥಕ್ಕೆ : (‘ ಪು ’ ಪ್ರತ್ಯಯಕ್ಕೆ) :

೨ ವಾರಿಧಿಯದೊಂದು[೪] ಗುಣ್ಪುಂ
ಧಾರಿಣಿಯ ಪೊಗಲ್ತೆವೆತ್ತ ಪೆಂಪಿನ ತಿಣ್ಪುಂ
ಮೇರುವಿನ ಬಿಣ್ಪುಮಾ ನೃಪ
ಧೀರನೊಳೊಂದಾಗಿ ನಿಂದುವೆನ್ನದರೊಳರೇ ೩೪೫

(‘ ಕೆ ’ ಪ್ರತ್ಯಯಕ್ಕೆ) :

೩ ನಮಿತಾರಿಗೆ ದಮಿತಾರಿಗೆ
ಸಮಸ್ತಧಾತ್ರೀವಿಭಾಗದೊಳ್ ಭಾವಿಸೆ ವಿ
ಕ್ರಮದ ನಿಮಿರ್ಕೆಗಮಾಯತಿ
ಯಮರ್ಕೆಗಂ ಪೇೞ ಪೋಲ್ಕೆ[೫]ಗಾವಂ ಬರ್ಪಂ ೩೪೬

೧ ಪರಮು (ಮ, ಮೈ, ನ) ೨ ಮೊರ್ನುಡಿ (ನ) ೩ ವಡಗುಮುವಸಿಂ (ನ) ೪ ವಾರಿಧಿಗಿದೊಂದು (ಮೈ); ವಾರಿನಿಧಿಯೊಂದು (ನ) ೫ ಪೇೞಿನ್ ಪೊಣರ್ಕೆ (ಮ, ನ)

ಕ ಕಾರ ದ್ವಿತ್ವಕ್ಕೆ :

೪ ಬೇಸಱದಾಸಱದೆ ವನಾ
ವಾಸಂಗಳೊಳುನ್ನತಿಕ್ಕೆ ನಿಲೆ[೧] ನಮೆದ[೨]ವರೊಳ್
ನೇ[೩]ಸನ್ನಿಕೆಯಿಂ ಕುರುಪತಿ
ಬೀಸರಮಂ ನುಡಿಯದೊಳ್ಕಿತಂ ನುಡಿದಪನೇ ೩೪೭

ಸೂತ್ರಂ ೭೮

ಒಂದೆರಡು ಮೂಱು ನಾಲ್ಕ
ಯ್ದೆಂದಿನಿತರ್ಕಂ[೪] ಬಹುತ್ವವಾಚಿಯೊಳ[೫]ಮರ್ದಂ
ತೊಂದಿ[೫] ನೆಗೞ್ಗುಂ ವಿಕಲ್ಪಂ
ಸಂದಿಸಿ ನೆಲಸಿರೆ ಮೆಯೆಂಬುದಕ್ಕುಂ ಸೂೞಿೊಳ್ ೩೪೮

ಪ್ರಯೋಗಂ : ('ಮೆ' ಪ್ರತ್ಯಯಕ್ಕೆ) :

ಮತ್ತೇಭವಿಕ್ರೀಡಿತಂ

೧ ಶಯುದಂಷ್ಟ್ರಾವಿಷದಂಶವೊಂದೆ ಜತುಗೇಹೋದ್ದೀಪನಂ ತಾನದೊಂ
ದೆ ಯಥೇಷ್ಟ[೬]ಪ್ರಕೃತಂ ದುರೋದರಜಯಂ ಮತ್ತೊಂದೆ ಕಷ್ಟಪ್ರತಿ
ಕ್ರಿಯೆಯಪ್ಪಾ[೭] ವಿಷದೂಷಿತಾಶನಮದಂತೇನೊಂದೆ ಪೇಱ[೮]ವ್ಗಳೊ
ರ್ಮೆಯೊ ಮೇಣಿ[೯]ರ್ಮೆಯೊ ಮೂರ್ಮೆಯೋ ಕುರುಕುಳಪ್ರಾರಬ್ಧದುರ್ವೃತ್ತಕಂ

೨ ನೂರ್ಮೆ ಪಶು ಕಱೆವುದಂ ತಾ
ನೊರ್ಮೆಯೆ ಕಱೆವೆರ್ಮೆಯಲ್ಲದಱಯೆರ್ಮೆಗಳೀ
ಯೆರ್ಮೆಗಳೊಳಗಿಲ್ಲೆನಿಸಿ
ದೆರ್ಮೆಯ ಪಿಂಡುಗಳಿನೊಪ್ಪುಗುಂ ಕೆಲವೆಡೆಯೊಳ್ ೩೫೦

ವಿಕಲ್ಪಕ್ಕೆ :

ಮತ್ತೇಭವಿಕ್ರೀಡಿತಂ

೩ ತನಗಿಂಬಪ್ಪುದನಾಯ್ದು ನೋಡಿ ಪಲವುಂ ಬಿಲ್ವಿಲ್ಗಳೊಳ್ ಬಿಲ್ಲನೊಂ
ದನೆ ಕೊಂಡೇಱಿಸಿ ನೀವಿ ಜೇವೊಡೆದಡುತ್ತೊಂದಂಬಿನಿಂ[೧೦] ದೊಂದು ಸೂ
ೞ್ವನೆ[೧೦]ಯುಂ ಪಾವಿನ ಬೆನ್ನೊಳಾದುವನತಿಪ್ರಾರಂಭದಿಂದೇಱುವುಂ
ಜನಕಾಧೀಶತನೂಜೆಯಾಣ್ಮನಿಸುವಂತೆಚ್ಚಂ ಮಹೇಂದ್ರಾಂತಕಂ[೧೧] ೩೫೧

೧ ಗಿಡೆ (ನ) ೨ ಸಮೆದ (ಮ) ೩ ನೀ (ನ) ೪ ತರ್ಕಾ (ಮೈ) ೫-೫ ಮರ್ದ|ತ್ತೊಂದಿ (ನ) ೬ ಯಥೇಷ್ಟಂ (ನ) ೭ ಕ್ರಿಯಮಪ್ಪಾ (ನ) ೮ ಪೇಱ (ನ) ೯ ದುಱಿದೆರ್ಮೆ (ಮೈ) ೧೦-೧೦ ದೊಂದೆಸೂ|ೞನೆಯುಂ (ನ) ೧೧ ಮಹೇಂದ್ರಾತ್ಮಕಂ (ನ)

ಸೂತ್ರಂ ೭೯

ಆಳಿಪ್ರತ್ಯಯಮಕ್ಕುಂ
ಶೀಳಾದ್ಯರ್ಥಂಗಳಂ ವಿವಕ್ಷಿಸೆ ಪೇಱುತೊಂ
ದಾಳಾಪಮಂತದೇನೊ ಯ
ಥಾಳೋಕನಿರೂಪಿತೋಕ್ತಿಗಳ್ಗನುಸಾರಂ ೩೫೨

ಪ್ರಯೋಗಂ : (' ಆಳಿ ' ಪ್ರತ್ಯಯಕ್ಕೆ) ;

೧ ಮಾಱಾಳಿಯುಮೋದಾಳಿಯು
ಮೇಱಾಳಿಯುಮಪ್ಪನಾಗಿ ಪಡೆ[೧]ಪಾಳಿಯೆ ಕೇಳ್
ನೀಱಂ ಜೂದಾಳಿ ಕರಂ
ನೀಱಂ[೨] ಮಾತಾಳಿ ಕರೆಯೆ[೩] ಸಿಗ್ಗಾಳಿಯಿವಳ್[೪] ೩೫೩

ಸೂತ್ರಂ ೮೦

ಅದುವಿದುವುದುವೆಂಬಿಂತೀ[೫]
ವಿದಿತಾರ್ಥದ ಸರ್ವನಾಮಶಬ್ದಕ್ಕಕ್ಕುಂ
ತದುಪಾಧಿವಿಹಿತ[೬]ಪರಿಮಾ
ಣ[೬]ದೊಳನಿತಿನಿತೆನಿತೆನಿಪ್ಪ ರೂಪನಿಪಾತಂ ೩೫೪

ಪ್ರಯೋಗಂ : (' ಅನಿತು-ಇನಿತು ' ಗಳ್ಗೆ) :

ಮತ್ತೇಭವಿಕ್ರೀಡಿತಂ

೧ ಅನಿತೊಂದಣ್ಮನಿತೊಂದು ದರ್ಪಮನಿತೊಂದೌದ್ಧತ್ಯಮುಂ ಮುನ್ನ[೭]ಮಾ
ದನೊಳಿನ್ನಪ್ಪ[೭]ನೊಳುಂಟೆ ದಾನವರೊ[೮]ಳೆಂಬುದ್ವೃತ್ತನಂ ನಾರಸಿಂ
ಹನ ರೂಪಿಂ ನಖದೊಳ್ ವಿದಾರಿಸಿ ಕುಸುಂಭಾರಕ್ತಮಂ ಪಟ್ಟಗಾ
ಱನೆ ಪಾಸಂ ತರ್ವೆ ತೋಡುವಂತೆ ಕರುಳಂ ನೀಂ ತೋಡಿದಯ್ ದೈತ್ಯನಾ

೨ ಇನಿತಱಲುಮಿನಿತು ಮಱುಕಮು
ಮಿನಿತು ಮನಃಕ್ಷತಮುಮಾವನಿಂದಾದುದವಂ
ಗಿನಿತಱಲನಿನಿತು ಮಱುಕಮ
ನಿನಿತು ಮನಃಕ್ಷತಮನಬ್ಬ[೧೦] ಮಾಡದೆ ಮಾಣೆಂ ೩೫೬

೧ ಪಡ (ನ) ೨ ನೀಱಿಗೆ (ಸಾ. ದರ್ಪಣ, ಪ) ೩ ಕಳೆಯೆ (ಸಾ. ದರ್ಪಣ, ಪ) ೪ ಯವಂ (ಮ, ಮೈ); ಯಿವಂ (ಸಾ. ದರ್ಪಣ, ನ) ೫ ತಿವು (ನ) ೬-೬ ಪರಿಣಾ। ಮ (ನ) ೭-೭ ಮಾ। ರನೊಳಿಂತಪ್ಪ (ಮೈ) ೮ ದಾನವನೊ (ಮ) ೯ ತನೆ, ತಸೆ (ನ) ೧೦ ನಚ್ಚಿ (ನ)

೩ ಜನನೀಜನಕಸಹೋದರ
ವನಿತಾಸುತಪೌತ್ರಮಿತ್ರ[೧]ಸಂಬಂಧಮದೆಂ
ತೆನಿತೆನಿತು ಭವದೊಳಾಯ್ತಿ
ಲ್ಲೆನಿತೆನಿತಂ ನೆನೆವುದೆನಿತನವಧರಿಸುವುದೋ ೩೫೭

(ಪಂಪನ ಆದಿಪುರಾಣ ೯,೫೪)

ಇವರ್ಕೆ ದ್ವಿತ್ವಪ್ರಯೋಗಮುಂ ಸೂತ್ರನಿರ್ದೇಶದೊಳ್ ಜ್ಞಾಪಕ
ಸ್ಥಿತಿ[೨]ಮುಕ್ಕುಂ :

ಮಲ್ಲಿಕಾಮಾಲೆ

೪ ಕಾಯಲುಂ ಬಲಗರ್ವದಿಂ ನೆಲನೆಲ್ಲಮಂ ನೆಲಕೆಲ್ಲಮಾ
ತೀರ್ಯಲುಂ ತನಗಾ ಚತುರ್ಭುಜಮುಂ ಭುಜದ್ವಯಮಾದನಿ
ತ್ತಾಯದಾಯತಿ ತೋಳೊಳೊಪ್ಪಿರೆ ಮಿಕ್ಕ ಪೆಂಪಿನ ಕೀರ್ತಿನಾ
ರಾಯಣಂ ದಯೆಗೆಯ್ಗೆ ಚಾಗಿ[೩]ಚತುರ್ಭುಜಂ ಗರುಡಧ್ವಜಂ ೩೫೮

ವಂಶಸ್ಥವೃತ್ತಂ

೫ ಎನಿತ್ತೆನಿತ್ತಂಬುಜಪತ್ರನೇತ್ರೆಯಾ
ಘನಸ್ತನಂಗಳ್ ಬಳೆಗುಂ ಕಿರಾತೆಯಾ
ಆನಿತ್ತನಿತ್ತಂ ವನದೊಳ್ ವನೇಚರಂ
ತನತ್ತು[೪] ಬಿಲ್ಲಾನದನಂತು[೫] ಕೀಸುಗುಂ[೬] ೩೫೯

ಸೂತ್ರಂ ೮೧

**ಮತ್ತಮವರ್ಕಕ್ಕುಂ ಸಮು
ಪಾತ್ತ ನ ಕಾರಂ ಪ್ರಕಾರಕಾಲಾರ್ಥಂ ಮೆಯ್-
ವೆತ್ತಿರೆ ತುದುವೆಂಬಿವು ವಿ
ದ್ಯೋ[೭]ತ್ತಮರೀ ತೆಱದಿನಱಗೆ ಪೆಱವುಮನಿದ[೮]ಱೊಳ್** ೩೬೦

ಪ್ರಯೋಗಂ : ಪ್ರಕಾರಾರ್ಥಕ್ಕೆ[೯] :

ಸ್ವಾಗತವೃತ್ತಂ

೧ ಅಂತು ಕಾಡುಗುಮೆ ಲೋಕಮನಿಂದ್ರಂ
ಗಂತು ಮಾಡುಗುಮೆ ಬನ್ನಮನೋವೋ
ಅಂತು[೧೦] ಸೂಡುಗುಮೆ ಕೇಸುರಿಯಂ ಪೇ
ೞಂತು ಕೂಡು[೧೧]ಗುಮೆ ಬೀರಮುದಾರ್ಗಂ[೧೨] ೩೬೧

೧ ಮಿತ್ರಪುತ್ರ (ಮೈ); ಪುತ್ರಮಿತ್ರ (ಪಾ) ೨ ಸಿದ್ಧ (ನ) ೩ ಭಾಗ (ನ) ೪ ತನಿತ್ತು (ಮೈ)
೫ ನಂತೆ (ಮು,ಪ) ನೆತ್ತೆ, ನೊತ್ತಿ (ಪ) ೬ ಕೀಸುವಂ (ಮು,ಮೈ,ನ,ದರ್ಪಣ) ೭ ದ್ವ (ನ)
೮ ಮಿವ (ಮೈ); ನಿವ (ನ) ೯ ಪ್ರಕಾರಕಾಲಾರ್ಥಕ್ಕೆ (ಮು); ಅಲ್ಲಿ ಪ್ರಕಾರಾರ್ಥಕ್ಕೆ (ಮೈ)
೧೦ ವಂತು (ಮೈ) ೧೧ ಸೂಡು (ಮೈ) ೧೨ ಸಾಹಸಮಾರ್ಗಂ (ಮು,ಮೈ,ನ)

೨ ಇಂತಿಂತೆ ಪಲಬರುಂ ತತ್
ಸಂತತಿಯೊಳೆ ಕಱಿದು ಪೋಗೆ ಜನಿಯಿಸಿದಂ ದು
ಷ್ಯಂತಂ ದುಷ್ಯಂತ[೧]ಂಗಮ
ನಂತಗುಣಂ ಭರತರಾಜನೆಂಬಂ[೨] ತನಯಂ ೩೬೨

೩ ಎಂತೆಡಱಿದ[೩]ಯೆಂತುರ್ಕಿದ[೩]
ಯೆಂತೊದವಿದ[೩]ಯೆಂತು ಮಗುೞ್ದ[೪]ಯೆಂತೊದಱಿದ[೩]ಯಾ
ಯ್ತೆಂತೆನಗಿದಿರ್ಚಿದಯ್ ಮಗು
ೞ್ದಿಂ[೫] ತೊಡರದಿರೆನೆ ಸಿತಾಶ್ವನೆಂದಂ ಕರ್ಣಂ ೩೬೩

ಕಾಲಾರ್ಥಕ್ಕೆ :

ಮಹಾಸ್ರಗ್ಧರೆ

೪ ಮುನಿಸಿಂ ಮೇಲೆತ್ತಿ ಬರ್ಪಂದಿನ ವಿಪುಳಶಿಳಾಸ್ತಂಭಮಂ ಕೀಱಿ ಕೀೞ್ವಂ
ದಿನ ಬೆಂಕೊಂಡಟ್ಟಿ ಕೊಲ್ವಂದಿನ ತಿರಿಪಿ ಕಪಿತ್ಥಾವನೀಜಾತದಿಂದಂ
ಬನದೊಳ್ ಮೆಯ್ವೆರ್ಚಿ ಪೊಯ್ವ[೬]ಂದಿನ ನಿಜಭುಜವಿಕ್ರಾಂತಮೇನಾದುದಿಂತೀ
ಜನಮೆಲ್ಲಂ ನೋಡೆ ಚೌವಟ್ಟದ ಬಿಸುವುಡಿಯೊಳ್ ಬಿೞ್ದು ಸಾವಂತುಟಾಯ್ತೇ

ಮಲ್ಲಿಕಾಮಾಲೆ

೫ ಇಂದು ಪಿಂಗಿದುವೆಮ್ಮ ಪೀಡೆ[೭]ಗಳಿಂದು ಸಾರ್ದುವು ಸಯ್ಪು ತಾ
ವಿಂದಮೋಘಫಲಂಗಳಾದುವು[೮] ಯಜ್ಞದಾನಸಮಾಧಿಗಳ್
ಇಂದು ನಂಬಿದೆವಾಮುಮೆಮ್ಮ ನೆಗೞ್ತಿಯೊಳ್ಪನದಲ್ಲದೆ
ಮ್ಮಿಂದುವಂಶಮುಮಿಂದು ನಿರ್ಮಳಮಾದುದಿಂದುಧರೋಪಮಾ ೩೬೪

೬ ಎಂದಮರರನರೆಯಟ್ಟುವೆ
ನೆಂದಮರಾವತಿಯನೀೞ್ದುಕೊೞ್ವೆಂ ಶಕ್ರಂ
ಗೆಂದಭಿಭವಮಂ ಮಾಡುವೆ
ನೆಂದಲ್ಲಿ[೯] ಪಲುಂಬಿ ಚಿಂತಿಕುಂ ದನುತನಯಂ ೩೬೫

೧ ದೌಷ್ಯಂತ (ಮೈ) ೨ ನಾದಂ (ಕಾ) ೩ ದೆ (ಮ,ಮೈ) ೪ ೞ್ದೆ (ಮ,ಮೈ) ೫ ೞ್ದಂ (ನ) ೬ ಪೊಯ್ದು (ಮ) ೭ ಸೇದೆ (ನ); ದೇಸಿ (ಮ) ೮ ವೆ (ಮ) ೯ ನೆಂದೆಂದು (ಮೈ,ನ)

ಅಲ್ಲಿ ಪೆಱವು ಗ್ರಹಣಕ್ಕೆ :

ಚಂಪಕಮಾಲೆ

೭ ವಿರಹದೊಳಾದ ವೇದನೆಯನಾಱಿಸಲಾ ಮರನೊಳ್ಳಿತೆಂದು ಮಾ-
ಮರದ ನೆೞಲ್ಗೆ ಪೋಪೆ ಗಡ ಕಾಮನ ಡಾಮರಮಲ್ಲಿ[1] ಕೋಕಿಲೋ
ತ್ಕರರವಮಲ್ಲಿ[2] ಚಾವಳಿಪ ರಾಜಶುಕವ್ರಜಮಲ್ಲಿ ಕಾಯ್ದು ಪಲ್-
ವೊರೆವ ಮದಾಳಿ[3]ಯಲ್ಲಿ ಸಖಿ ಸಾರದಿರಾ ಮರನಂ ವಸಂತದೊಳ್ ೩೬೭

ಸೂತ್ರಂ ೮೨

ಗಣನಾವಿಶೇಷಪರಿಪೂ
ರಣದೊಳಮನಿತಿನಿತೆನಿತ್ತು ಶಬ್ದಂಗಳ ಪೂ
ರಣದೊಳಮನೆಯ ಪ್ರತ್ಯಯ
ವೊಣರ್ದು ಸಮಂತೊಂದಿ ತೋಱುಗುಂ ತದ್ಧಿತದೊಳ್ ೩೬೮

ಪ್ರಯೋಗಂ :

೧ ಜಿನಮದನರೊಳಗೆ ಪದಿನಾ
ಱನೆಯಂ ತತ್ಸಕಲಚಕ್ರವರ್ತಿಗಳೊಳಗ
ಯ್ದನೆಯನೆನೆ ಪುಣ್ಯಪುಂಜಾ
ರ್ಜನಕ್ಕೆ ಶಾಂತೀಶ[4]ನಂತು ನೋಂತರುಮೊಳರೇ[5] ೩೬೯

(ಪೊನ್ನನ ಶಾಂತಿಪುರಾಣಂ ೧,೧೩)

೨ ಇನಿತನೆಯ ಭವದೊಳಿಂತಾ
ಯ್ತಿನಿತನೆಯ ಭವಾಂತರಂಗಳೊಳ್ ಮತ್ತಂ ಮೇ
ಲಿನಿತು[6] ಸುಖದುಃಖಫಲಮುಂ
ಜನಿಯಿಕುಮೆಂದಱಿವುದರಿದು ಸಂಸೃತಿಗತಿಯೊಳ್ ೩೭೦

ಸೂತ್ರಂ ೮೩

ಇರೆ ತದ್ಧಿತಪ್ರಯೋಗಂ
ಪರದೊಳ್ ಚರಮಸ್ವರಕ್ಕೆ ಲೋಪಮುದಕ್ಕುಂ
ನಿರವಿಸಿ ಮುನ್ನೆ ಸಮಾಸಾಂ
ತರದೊಳ್ ಪೇೞ್ದೊಂದು ಕಾರ್ಯಮುಂ ಬಂದಿರ್ಕುಂ ೩೭೧

೧ ದಲ್ಲಿ (ಮ) ೨ ದುಲಿಪಲ್ಲಿ (ನ) ೩ ವಳಿಮಾಲೆ (ನ) ೪ ಶಾಂತೇಶ (ನ) ೫ ನೋಂತವ ರೊಳರೇ (ಮ, ಮೈ, ನ) ೬ ಗಿನಿತು (ನ)

ಪ್ರಯೋಗಂ :

ಮಣಿವಿಭೂಷಣವೃತ್ತಂ

೧ ತೊಟ್ಟು ತೀವಿ ಬಳೆಯಂ ನಿಡುದೋಳ್ಗಳೊಳೊಂದುವಂ
ತುಟ್ಟು ಪೆಣ್ಣುಡೆಯನಾಡಿಸಿ[೧] ಬಾಳ್ವ ಶಿಖಂಡಿ ಮುಂ
ನೆಟ್ಟನರ್ಜುನನ ಸಾರಥಿಯೆಂಬುದನೀಗಳೀ
ಘಟ್ಟವಳ್ತಿ ನುಡಿದಳ್ ತಿಳಿವಂತೆಮಗೆಲ್ಲಮುಂ ೩೭೨

ರಥೋದ್ಧತವೃತ್ತಂ

೨ ಒರ್ಮೆ ಪೋಗಿ ಮೃಗಯಾನಿಮಿತ್ತದಿಂ
ಧರ್ಮಮಂ ಮಱೆದು ನೋಡ[೨]. ಬೇಡಿದೊಂ
ಪೆರ್ಮೆಗೆಟ್ಟು ಜಮದಗ್ನಿಯಂ ನೃಪಂ
ದುರ್ಮದಂ ಸುರಭಿಯಂ ವಿಮೋಹದಿಂ ೩೭೩

ಇದು ಶಬ್ದಸ್ಮೃತಿಯೊಳ್ ತದ್ಧಿತಪ್ರಕರಣಂ ಸಮಾಪ್ತಂ

೧ ನಾಟಿಸಿ (ನ) ೨ ನೋಡಿ (ಮ,ನ)

೬ ಆಖ್ಯಾತಪ್ರಕರಣಂ

ಸೂತ್ರಂ ೮೪

ಭೂತವತಿ ವರ್ತಮಾನಂ
ಖ್ಯಾತಭವಿಷ್ಯಂತಿ ಸರ್ವಸಾಧನಿಯೆಂಬಾ[1]
ಖ್ಯಾತವಿಭಕ್ತಿಗಳಕ್ಕುಮು
ತೀತಭವದ್ಭಾವಿಕಾಲವಿಧ್ಯಾದಿಗಳೊಳ್ ೩೭೪

ಪ್ರಯೋಗಂ :

ಚಂಪಕಮಾಲೆ

೧ ತ್ರಿಭುವನರಾಜ್ಯಪಟ್ಟದೊಡವುಟ್ಟಿದನಾ ವಿಭು ಪುಟ್ಟೆ[2]ದಂತೆ ತಾಂ[2]
ರಭಸದೆ ಸಿಂಹವಿಷ್ಟರಮನೇಱದನೆತ್ತದೆ ತಾಮೆ ಮುಂದೆ ಬಂ
ದಭಿಮತಮಪ್ಪ ಬೆಳ್ಗೊಡೆಗಳುಂ ನೆಗೆದೊಪ್ಪಿದುವಿಂತೆ[3] ದಲ್ ಜಗತ್-
ಪ್ರಭುತೆ ಜಗತ್ತ್ರಯಂಗಳೊಳಗಗ್ಗಳಮಾದುದು ದೈತ್ಯರಾಜನಾ ೩೭೫

ವರ್ತಮಾನಕ್ಕೆ :

೨ ಎಸಗಿದುದೀಗಳೀಗಳಿನಿಸೊಯ್ಯನೆ ತೆಂಕಣಗಾಳಿ ಕೋರಕ
ಪ್ರಸರದಿನೀ[4]ಗಳೀಗಳೆಸೆದಪ್ಪುದು[5] ಚೂತಮಹೀಜಮೆಯ್ದೆ ರಾ
ಗಿಸಿ ದೆಸೆಗೀಗಳೀಗಳುಲಿದಪ್ಪುದು ಕೋಗಿಲೆ ಕಂತು ಬಿಲ್ಲನೇ
ಱಸಿದಪನೀಗಳೀಗಳೆಲೆ ಸುಗ್ಗಿಯದೊಂದು ಪೊಡರ್ಪಿದಾಗದೇ ೩೭೬

ಭವಿಷ್ಯಂತಿಗೆ :

ಮಹಾಸ್ರಗ್ಧರೆ

೩ ಕಡುಕೆಯ್ದಾಂತನ್ಯಸೈನ್ಯಂಗಳನಳಱೆ[6] ಭರಂಗೆಯ್ದು ನಿಮ್ಮೊಂದೆ ಮೆಯ್ಯೊಳ್
ಕಿಡಿಸಲ್ ಸಾಲ್ವಿರ್[7] ಸಮಾಸಾದಿತರಣರಸಿಕರ್ ನಿಮ್ಮ ಮುಂದಾದಮಣ್ಮಂ
ನುಡಿವಾಗಳ್ ನಾಡೆ[8] ಲಜ್ಜಾಕರಮದಱನದಂತಿರ್ಕೆ ಜೀಯೆಂಬಿನಂ ಮಾ
ರ್ಪಡೆಗೆನ್ನೀ ಬಾಳಕೇಳೀವಿಳಸನ್ಮನದಂ ಯುದ್ಧದೊಳ್ ನಾಳೆ ತೋರ್ಪೆಂ

ವಿಧ್ಯಾದಿಗೆ :

೪ ಮರ್ಚದಿರು[10] ಬಸನಮಂ ಗಿಳಿ
ಗರ್ಚದಿರು[11] ಖಳಸ್ವಭಾವಮಂ[12] ಮನೆಯತ್ತಲ್
ಸಾರ್ಚುರ್ ಹಿತರಪ್ಪರಂ ಸಲೆ
ಪೆರ್ಚಿಸು ತಳವರ್ಗಮಂ ಮನಂಗೊಳೆ ಮಗನೇ ೩೭೮

೧ ಯೆಂದಾ (ನ) ೨ - ೨ ದಂತಿರಾ (ಮೈ,ನ) ೩ ವಿಂತು (ಮ) ೪ ದೊಳೀ (ಮ,ನ) ೫ ದಿರ್ದುದು (ನ) ೬ ನಳುಱೆ (ಮೈ) ೭ ಸಾರ್ವಿರ್ (ನ) ೮ ನೋಡೆ (ನ) ೯ ವಿಳಿಸಿತ (ಮ,ನ) ೧೦ ರಿಸು (ಮ,ನ) ೧೧ ದಿರ (ಮ) ೧೨ ದೊಳ್ (ಮೈ,ನ); ದಿಂ (ಮ)

ಸೂತ್ರಂ ೮೫

ಕವದಿನಮುರಯಿರೆನೆವೆನಿ
ಪ್ಪುವು ವರ್ತಿಕುಮನ್ಯಯುಷ್ಮದಸ್ಮದ್ವಿಷಯ
ವ್ಯವಹೃತಿಗಳ್ಗೇಕಾ[1]ನೇ
ಕವಚನದಿಂ ಪ್ರತಿವಿಭಕ್ತಿಪುರುಷಾಖ್ಯಂಗಳ್ ೩೭೯

ಪ್ರಯೋಗಂ : ಪ್ರಥಮಪುರುಷಕ್ಕೆ :

೧ ತೊಟ್ಟಂ[2] ಸಂಮೋಹನಮಂ
ತೊ[3]ಟ್ಟನೆ ಭುಜವಿಜಯಶಾಲಿ ಫಲ್ಗುಣನಾಗಳ್
ಪುಟ್ಟಿದ ನಿದ್ರಾ[4]ಭರದಿಂ
ದೊಟ್ಟಯ್ಸಿ[4] ವಿರೋಧಿಭೂಭುಜರ್ ಮೆಯ್ಮಱೆದರ್ ೩೮೦

ಮಧ್ಯಮಪುರುಷಕ್ಕೆ :

೨ ನುಡಿದಯ್ ಪೊಚ್ಚಜಮಾತಂ[5]
ಬಿಡದೆನ್ನೊಳ್[6] ಜಱುಚುತಿರ್ಪುದಾವುದು ಗಂಡು
ಳ್ಳೊಡೆ ಮೊನೆಗಿದಿರ್ಚಿ ಬರವೇಱಿಂ
ತೊಡರ್ದಾಗಳ್[7] ಕಾಣ್ಬೆರೆಮ್ಮ ನಿಮ್ಮೊಂದಳವಂ ೩೮೧

ಉತ್ತಮಪುರುಷಕ್ಕೆ :

೩ ಅಸುರಹರಂ ತೇರಂ ಸ
ಯ್ತೆಸಗುವನಾಂ ಕೇಱಿ ನಿಂದು ಬಿಲ್ಗೊಳ್ವೆನೆನಲ್
ವಿಸಸನಮದಾವುದರಿದ
ರ್ಕಸೂನುವಂ ಕೊಂದೆವೆಂದು ನಿಶ್ಚಿಂತಮಿರಿಂ ೩೮೨

ಸೂತ್ರಂ ೮೬

ಮಿಗದಾ ಸ್ವಾರ್ಥದೊಳಂತವು
ನೆಗೞ್ಗುಂ ತಂತಮ್ಮ ಸಾಧನಂಗಳೊಳನಿತುಂ
ಯುಗಪತ್ಪ್ರಯೋಗಮಾದಂ
ದು ಗಣನೆಯೊಳ್ ಮುಂದೆ ನಿಂದುದಾವುದದಕ್ಕುಂ[8] ೩೮೩

೧ ಗಳಿಸೇಕಾ (ಮ) ೨ ತೊಟ್ಟರೆ (ಮ) ೩ ನೆ (ಮ, ಸ) ೪-೪ ಭರವಿರ!ದೊಟ್ಟೈಸೆ (ನ)
೫ ಮಾತನೆ (ಮ) ೬ ದೆಮ್ಮೊಳ್ (ಮೈ) ೭ ತೊಡದರ್ಾಗಡೆ (ನ) ೮ ದಕ್ಕಂ (ಮೈ)

ಪ್ರಯೋಗಂ : **ಸ್ವಾರ್ಥಕ್ಕೆ :**

ಶಾರ್ದೂಲವಿಕ್ರೀಡಿತಂ

೧ ಎಂದಿಂತಾತನನಂದು ನಂಬಿಸಿದೊಡಾ ಮತ್ಸ್ಯಾತ್ಮಜಂ ನಂಬಿ ಸಾ
ನಂದಂ ಬಂದು ಸುರೇಂದ್ರಸೂನುಗೆ ತುೞಿಲ್ಗೆಯ್ದಂದನಾನಿನ್ನೆಗಂ
ಬಂದಯ್ ನೀಂ ದಯೆಯಿಂದಮಾನಱಿದೆನಿಲ್ಲೀಗಳ್ ಮನಂದಂದೆನಿ
ನ್ನೊಂದುಂ ಸಂದೆಯಮಿಲ್ಲ ತೇರನೆಸಪೆಂ ನೀಂ ಕಾದಿ ಗೆಲ್ ಫಲ್ಗುನಾ ೩೮೪

ಯುಗಪತ್ಪ್ರಯೋಗಕ್ಕೆ :

೨ ಆಮುಂ ದ್ರೋಣರು[೧]ಮಶ್ವ
ತ್ಥಾಮನುಮಂಗಾಧಿರಾಜನುಂ ಕೃಪನುಂ ಸಂ
ಗ್ರಾಮದೊಳಾಂಪೆವರಾತಿಯ
ನೇಮಾತಡಿಯೆತ್ತು ತಡೆಯದಿರ್ ಭುವನಪತೀ ೩೮೫

ಸೂತ್ರಂ ೮೭

ದದಪವಕಾರಂಗಳ್ ಮೂ
ಲದೊಳಕ್ಕುಂ ಭೂತವರ್ತಮಾನಭವಿಷ್ಯದ್
ವಿದಿತವಿಭಕ್ತಿತ್ರಿತಯ
ಕ್ಕದೆಲ್ಲವಚನಂಗಳೊಳಮಿದಾಗೆ[೨]ಮುಮಕ್ಕುಂ ೩೮೬.

ಪ್ರಯೋಗಂ : **ಭೂತವತಿಗೆ :**

ಉತ್ಪಲಮಾಲೆ

೧ ಆಡಿದನಿಂದ್ರನಿಂದ್ರಗಣಿಕಾಗಣ[೩]ಮುಟ್ಕಱೊಳೊಲ್ದು ಮಂಗಳಂ
ಬಾಡಿದುದಬ್ಜಜಂ ಪರಸಿ ಸೇಸೆಯನಿಕ್ಕಿದನದ್ರಿ ತಾನೆ ಮುಂ
ಡಾಡಿ ವಿಭೂತಿಯಿಂದೊಸಗೆ ಮಾಡಿದನಂಗಜನಂಗಲಕ್ಷ್ಮಿಯೊಳ್
ಕೂಡಿದನೆಂದೊಡೇವೊಗೞ್ವುದೋ ಭವಶೈಲಭವಾವಿವಾಹಮುಂ ೩೮೭

ವರ್ತಮಾನಕ್ಕೆ :

೨ ಮಾಡಿದಪಂ ಖಳಸಮಿತಿಗೆ
ಕೇಡಂ ತಕ್ಕರನುದಾತ್ತಮಹಿಮೋನ್ನತಿಯೊಳ್
ಕೂಡಿದಪಂ ನೀಡಿಲ್ಲದೆ
ನೀಡಿದಪಂ ಬೇೞ್ಪವಂಗೆ ಬೇೞ್ಪುದನಿಂದ್ರಂ ೩೮೮

೧ ನು (ಮ, ಮೈ) ೨ ಗಿದಾಗ (ನ); ಮದಾಗ (ಮೈ) ೩ ಜನ (ನ)

ಭವಿಷ್ಯಂತಿಗೆ :

ಉತ್ಪಲಮಾಲೆ

೩. ಬರ್ಪಿನ[೧]ಮೋಘಮುಬ್ದ ಸಮಯಕ್ಕೆ ಪಲುಂಬದೆ ಪಾರುತಿರ್ಪುದಾಂ
ಬರ್ಪುದನೆಂದು ಪೋದನಿನಿಯಂ ಜಲದಾಳಿಗಳಿಂತಿವೀಗಳೇ
ಬರ್ಪುವೆ ಬಂದನಿಲ್ಲ ತಡೆದಂ ಪರದೇಶದೊಳಾದ ಮರ್ಚಿನಿಂ
ಕೂರ್ಪೊಡೆ[೨] ಬರ್ಪರಿಲ್ಲ[೩]ದೊಡೆ ಬರ್ಪರೆ ಕಲ್ಲೆರ್ದೆಯುಪ್ಪ[೪] ಮಾನಸರ್ ೩೮೯

ಸೂತ್ರಂ ೮೮

ಭಾವಿಭವತ್ಕಾಲಂಗಳೊ
ಳಾ ವಿಹಿತವಿಭಕ್ತಿಯಾದಿ[೫]ಗಳೊಳಾಗಮದಿಂ
ತಾಮೊಲ್ವರ್ ಕೆಲಬರ್ ಭಾ
ಷಾವಿದರುದ್ವಾದಿಯಕ್ಕುಮದುವುಂ ಪ್ರಾಯಂ ೩೯೦

ಸೂತ್ರಂ ೮೯

ಅವಱ[೬]ೊಳಗೆ ನಪುಂಸಕಲಿಂ
ಗವಿಷಯಮಾದಲ್ಲಿ ಮೊದಲ ಪುರುಷಂಗುದುಮೆಂ
ಬುವೆ ದಲ್ ಸಮನಿಸುಗುಂ ಸ್ತ್ರೀ
ವಿವಕ್ಷೆಯೊಳ್ ನೆಗಱ್ಗಮೇಕವಚನಮುಳಂತಂ ೩೯೧

ಪ್ರಯೋಗಂ :

೧ ಊದಿದುದು ತಣ್ಣೆಲರ್ ಕಳ
ನಾದಂ ಸಾದರ[೬]ದೊಳೊಂದಿ ನೆಗಱ್ದುದು ಪದ್ಮಾ
ಮೋದಮಿನಿಸುಂ[೭] ತೊವರ್ ತೊವ
ರಾದುದು ಕೂಗಿದುವು ತಾಮ್ರಚೂಡಕುಳಂಗಳ್ ೩೯೨

೨ ಅಱಿವಳ್ ಪಾಂಡುತನೂಜರ
ತೆಱನೆಲ್ಲಮನೀಕೆ ನುಡಿವಳಲ್ಲಳ್ ತಪ್ಪಂ
ಮಱಸಿ ಪುಸಿನುಡಿವ ಜಱುಚರ
ತೆಱನಂ ಕಂಡಱಿಯುದಂತು ಕುಳಿಯರುಮೊಳರೇ ೩೯೩

೧ ಬರ್ಪಿನ (ಮ) ೨ ಕೂರ್ಪರೆ (ಮ, ಮೈ) ೩ ಪರ್ಬರಲ್ಲ (ಕಾ) ೪ ಕಲ್ಲೆರ್ದೆಯಾದ (ಮ)
೫ ಯಾದ (ನ) ೬ ಗಾಂಧರ (ಮ, ಮೈ); ಗಾಂದರ (ನ) ೭ ಸಂ (ನ)

ಸೂತ್ರಂ ೯೦

ಅರೆಬರ್ ತದೇಕವಚನಾಂ
ತರಂ ನಪುಂಸಕದೊಳಾಗೆ ತುತ್ತ್ವನ್ಯತರಂ
ದೊರೆಕೊಳ್ಗುಮೆಂಬರವು ಮುಂ
ತಿರೆ [1]ಪೊರ್ದುಗುಮುಮುರ್ದಿಕಾರಮಕ್ಕೆಯುಕಾರಂ[1] ೩೯೪

ಪ್ರಯೋಗಂ :

೧ ಮುಟ್ಟಿತು ಮುಟ್ಟಿದು ದಿವಮುಂ
ಮೆಟ್ಟಿತು ಮೆಟ್ಟಿದು ರಸಾತಳಾಗ್ರ[2]ಮನೆಂಬೊ
ಳ್ಪಿಟ್ಟಳವಾಗಿರೆ ದಿವಿಜರ
ದಿಟ್ಟಿಗೆ ಸೊಗಯಿಸಿತು[3] ಮುಂದೆ ಮಂದರಶೈಲಂ ೩೯೫

ಹರಿಣೀವೃತ್ತಂ

೨ ಉರಗರಗಿದರ್ ದೈತ್ಯರ್ ಬೆಳ್ಕುತ್ತರಳ್ಕಿದನಿಂದ್ರನೀ
ಶ್ವರನ ಮನಮುಳ್ಕಾಡಿ[4]ತ್ತೋಡಿತ್ತು[5] ಕಿನ್ನರಸೈನ್ಯಮಾ
ಸರಲ ಬರಮಂ ಕಂಡಿಂ ಕೆಟ್ಟತ್ತು ಭಾರತಮೆಂದು ತಾ
ವರೆಯೆಲೆಯ ನೀರಂತಾಯ್ತೆತ್ತಂ ಸುರಾಸುರಮಂಡಲಂ ೩೯೬

ಸೂತ್ರಂ ೯೧

ಅವಿಶಿಷ್ಟಲಿಂಗವಚನ
ವ್ಯವಸ್ಥೆಯಿಂದೊಂದಿ ಗುಂ ಕುಮಾದೇಶಂಗಳ್
ಬವರಿಸುಗುಂ ಸಂಪ್ರತಿಗಂ
ಭವಿಷ್ಯದರ್ಥದೊಳಮನ್ಯವಚನೋಕ್ತಿಗಳೊಳ್ ೩೯೭

ಪ್ರಯೋಗಂ :

ಉತ್ಪಲಮಾಲೆ

೧ ಮಿಾಱುಗುಮಲ್ಲಿ ದೇವರೆಡೆವೊಕ್ಕಡಮಾತ್ಮಭುಜಪ್ರತಾಪಮಂ
ತೋಱುಗುಮುರ್ಕಿದನ್ಯ[6]ನೃಪನಂದನರಂ ತವೆ ಕೊಂದು ನಾಯ್ಗಳಂ[7]
ತೀಱುಗುಮಾಗಳಲ್ಲಿ[8] ತೊಡರ್ದಾರುಮನುಗ್ರಪತತ್ರಿಭಾರಮಂ
ಪೇಱುಗುಮಂತುಮಾಂತೊಡವರಂ ಬಡಿಯೊಳ್ ಪುಡಿಗುಟ್ಟಿ ತೂಱುಗುಂ ೩೯೮

೧-೧ ಪೊರ್ದುಗೆಯುಮುರ್ದಕಾರಮುಕ್ಕುಮಿಕಾರಂ (ನ) ೨ ತಳಾಂತ (ನ) ೩ ಯಿಪುದು
ದರ್ಪಣ) ೪ ಮುಳ್ಪಾಡಿ (ಮೈ,ನ) ೫ ತ್ತೊತ್ತಿತ್ತು (ನ) ೬ ಮುರ್ಕಿದಂದು (ನ) ೭ ಕಾಯ್ಗಳಂ
ಮು); ಗಾಯ್ಗಳಂ (ಮೈ) ೮ ಮಲ್ಲಿ (ನ)

೨ ಅರ್ಕೇಂದುಗಳಂ ತವೆ ನುಂ
ಗಿರ್ಕುಂ ಕಲ್ತ್ತಲೆ ಸಿಡಿಲ್ಗಳೆಱಗುಗುಮಂತುಂ[1]
ಬರ್ಕುಂ ನಿನ್ನೋಪಳ್ ಭಯ
ವಿರ್ಕಮೆ ನೀನಿರ್ಪ ಮನದೊಳುಗ್ರತುಳಾ[2]ರ್ಕಾ ೩೯೯

ಸೂತ್ರಂ ೯೨

ಉಗೆ ಕೆ[3] ವಿಕಲ್ಪಿತಮನ್ವಾ
ರ್ಥಗತಿಯೊಳುತ್ವೇತ್ವ[4]ಯುಕ್ತಿ[5] ಯುಷ್ಮತ್-ಸಂಜ್ಞೋ
ಕ್ತಿಗಳೊಳಮ[6]ಸ್ಮದ್-ಬಹುವಚ
ನಗತಿಯೊಳಂ ನೆಗಳ್ದ ಸರ್ವಸಾಧನಿಗಕ್ಕುಂ ೪೦೦

ಪ್ರಯೋಗಂ : ಅನ್ವರ್ಥಗತಿಗೆ :

ಉತ್ಪಲಮಾಲೆ

೧ ಮೇದಿನಿ ಸಾಗರಾಂತಮದು ನಿನ್ನನೆ ಪತ್ತುಗೆ ನಿನ್ನ ವಕ್ಷದೊಳ್
ಶ್ರೀ ದೊರೆಕೊಂಡು ಪೆರ್ಚು[7] ವೆರಸಿರ್ಕೆ ಸಮಂತು[8] ನವಗ್ರಹಂಗಳೇ
ಕಾದಶಮಕ್ಕೆ ಕೀರ್ತಿ ಪರೆದಿರ್ಕೆ ಜಯಾಂಗನೆ ಕೂರ್ಕೆ[9] ನಿಚ್ಚಲುಂ
ವೇದದೊಳೋದಿ[10]ದಾಯು ನಿನಗಕ್ಕೆ ಚಿರಂ[11] ಕಲಿಕಾಲಸೂದನಾ[12] ೪೦೧

ಯುಷ್ಮತ್-ಸಂಜ್ಞೋಕ್ತಿಗೆ :

೨ ವಾಯಸದಂತೆ ನೋಡು ಬಕನಂತಿರೆ ಮೆಲ್ಲನೆ ಮೆಟ್ಟು ಕಚ್ಛಪೋ
ಪಾಯದಡಂಗು[13] ನಿಲ್ ಭ್ರಮರಿವೊಲ್[14] ಭ್ರಮಿಯಂತಿರೆ ಬೆಚ್ಚರಾಗು ಖ
ಲ್ಗಾಯುಧಚಾಪಮಂ[15] ಪೊಳೆವ ಮಿಂಚನೆ ಪೋಲ್ತಿರೆ[16] ಬೀಸು ನೀಂ ಖಳ
ನ್ಯಾಯದಿ[17]ನೆಲ್ಲಮಂ ನೆಱೆಯೆ ಕಲ್ತುಪದೇಶಕನಾಗು ಲೋಕದೊಳ್ ೪೦೨

೧ ಮೆಂತುಂ (ಸಾ. ದರ್ಪಣ); ಮತ್ತಂ (ಮಂ. ದರ್ಪಣ) ೨ ತಳಾ (ಮೈ, ನ) ೩ ಗೆ (ಮೈ) ೪ ಯೊಳಂ ತತ್ವ (ಮೈ) ೫ ಯುಕ್ತ (ಮೈ, ನ) ೬ ಗಳೆಂದ (ಮೈ) ೭ ಪರ್ಚು (ನ) ೮ ಸಮಸ್ತ (ಮ, ಮೈ) ೯ ಕೂರ್ಗೆ (ನ) ೧೦ ಳೊಂದಿ (ನ, ದರ್ಪಣ) ೧೧ ಸೊಗಂ (ದರ್ಪಣ) ೧೨ ಸಾಧನಾ (ನ) ೧೩ ಡಂಗಿ (ಕಾ, ಮಂ. ದರ್ಪಣ) ೧೪ ಯೊಳ್ (ಕಾ) ೧೫ ಚಾಮರಂ (ಮ, ಕಾ, ದರ್ಪಣ) ೧೬ ಪೊತ್ತಿರೆ (ನ) ೧೭ ನ್ಯಾಯಮ (ಮೈ, ನ)

೩ ಹರಿ ನುಡಿಯೆ ನುಡಿಯಿಮುಲಿಯಲಿ
ಮಿರಿಮುಸಿರಲಿಮುತ್ತ ಸಾರಿಮೆಲೆ ಮಿಡುಕದಿರಿಂ
ಪಿರಿದುಂ ಗಲಪಲಿ[೧]ಮೆಡೆಗೊಂ
ಡಿರದಿ[೧]ರಿಮೆನುತಿರೆ ಕಡಂಗಿ ಪಡಿಯಱರೆತ್ತಂ ೪೦೩

ಅಸ್ಮದ್-ಬಹುವಚನಗತಿಗೆ :

೪ ನೆನೆಯದೆ ಕಜ್ಜದ ಬಿಣ್ಪಂ
ಮುನಿವಯ್ ನೀನೊರ್ವನೆಂಬ ಹರಿಗಮಸಾಧ್ಯಂ
ಮನುಜಪ್ರಾಕಾರಾಂಕ[೨]ನೊ
ೞನಿಬರುಮೊಂದಾಗಿ ತಾಗುವಂ ಫಲ್ಗುಣನೊಳ್ ೪೦೪

ಸೂತ್ರಂ ೯೩

ತದುಪಗತಮಧ್ಯಮೈಕ
ತ್ವದೊಳಕ್ಕುಂ ಪ್ರಾಯದಿಂದಿಕಾರಮುಕಾರಂ
ವಿದಿತಸ್ವರೂಪಲೋಪಮು
ಮದಂತೆ ಪೆಱವುೞಿಯೊಳಂ ಪ್ರಕೃತ್ಯಂತದೊಳಂ[೩] ೪೦೫

ಪ್ರಯೋಗಂ :

ಚಂಪಕಮಾಲೆ

೧ ಬಿಗಿ ಪುಗು [೪]ಬಿಟ್ಟು ಕೂಡು[೪] ಜಡಿ ಬಗ್ಗಿಸು [೫]ಪ್ರೊಯ್ ನೆಲೆ[೫] ನೋಡು ಸಾಯೆ[೬] ಸಾ
ರ್ದುಗಿ ಕೊಳೆ ನೂಂಕು[೭] ಸಾರ್ಚು ಕಡೆ[೮] ದೋಱು [೯]ತೊಡ್ ಸಂದಿಸು ಸಾರ್ದು ದಂಡೆ[೧೦]ಗೊಳ್
ಪುಗದೆಡೆಮಾಡು ಚಪ್ಪರಿಸು ರೂಪಿಡು ಕೂಪಿಡು[೧೧] ಕೂರ್ಪು[೧೨] ದೋಱು ಪಾ
ಱಗಿಯದೆ ಕೂರ್ಮೆ ಮಿಕ್ಕು ತೆಗೆ[೧೩] ತೊಂಗಲನಿಂಬೆನೆ ನೂಂಕು ಯುದ್ಧಮಂ[೧೪]

೧-೧ ಮೊಡೆಗುಡ|ದಿರಿಮಿ (ಮ) ೨ ರಾಂತ (ನ) ೩ ತರದೊಳ್ (ನ) ೪-೪ ಬಿಟ್ಟು ಕೂಡೆ (ನ) ೫-೫ ನೆಯ್ ನಿಲೆ (ನ) ೬ ಪಾಯಿ, ಸಾಯಿ (ನ) ೭ ನೂಂಕಿ (ಹ್ಮೈ, ನ) ೮ ಕಡಿ (ಮೈ) ೯ ಱತೊಡೆ (ಮೈ) ೧೦ ಡಂಗೆ (ಮೈ, ನ) ೧೧ ಕಾಪಿಡು (ಮ, ಮೈ, ನ) ೧೨ ನೇರ್ಪು (ಮ, ಮೈ); ನೋರ್ಪು (ನ) ೧೩ ನೆಗೆ (ಮ, ಮೈ, ನ) ೧೪ ಬಿರ್ದನಂ (ಮ, ಮೈ, ನ)

ಸೂತ್ರಂ ೯೪

ಕ್ರಿಯೆ ತಾಂ ಕ್ರಿಯಾರ್ಥಮಪ್ಪ
ಲ್ಲಿಯಲಕ್ಕುಂ ವರ್ತಮಾನಗತಿಗುತ್ತುಮುತುಂ
ದ್ವಯಮುಕ್ಕುಂ ಪೂರ್ವಭವ
ಕ್ರಿಯೆಯೊಳಿದುತ್ ಪ್ರತ್ಯಯಂಗಳಕ್ಕುಂ ಪೀನಂ ೪೦೭

ಪ್ರಯೋಗಂ :

೧ ತಿಂಗಳನಪ್ಪಿಕೊಳಲ್ ಪಾ[೧]
ವಿಂಗಂ ಬೆಲೆಯಿಕ್ಕ[೨]ಲಮರಗಿರಿಶಿಖರಕ್ಕಂ
ಲಂಗಿಸಲೊಡರಿಸುವರ್ ಪ
ರ್ವಂಗಳ್ ಪತ್ತೆಂಟು ದೆವಸಮೆನೆ ಬೆಲೆವೆಣ್ಗಳ್ ೪೦೮

ಮತ್ತೇಭವಿಕ್ರೀಡಿತಂ

೨ ಕೆದಱುತ್ತುಂ ಮಣಲಂ ತೆಮಳ್ದಿ ಕೊಳುತುಂ ಭೂರೇಣುವಂ ಸೂಸುತುಂ
ನದನದ್ಯಚ್ಛಜಲಂಗಳಂ ಮುಱಿಯುತುಂ ಭೂಜಂಗಳಂ ನುರ್ಗುತುಂ
ಪೊದಱಂ ಸೀಳುತುಮೆಯ್ದೆ ವಂಶವನಮಂ ಕಾಡಾನೆಯಂ ಪೋಲ್ತು ಪೊ
ಕ್ಕುದು ಬೀಡಂ ಲಯಕಾಲಕಾಲವಿಚಲ[೩]ದ್ಭೀಮಾರುತಂ ಮಾರುತಂ ೪೦೯

೩ ನಡುಗಿ ತಡವರಿಸಿ[೪] ಬೆಂಕೆಯ
ಕಡುಗಾಯ್ಪಿಂಗಗಿದು ಜೆಡೆಗಳಿಡುವಿನೊಳಹಿಗಳ್[೫]
ತೊಡರ್ದು ನುಸುಳ್ದೋಡಿ[೬] ಗಂಗೆಯ
ಮಡುಗಳನಡಹಡಿಸಿ[೭] ಪುಗುವಿನಂ ಭಯವಶದಿಂ ೪೧೦

ಸೂತ್ರಂ ೯೫

ಪ್ರತಿಷೇಧದೊಳಂ ಕೆಲಬರ
ಮತದಿಂದಲ್ ವರ್ತಿಕುಂ ಪದಾಂತರದಿಂ ಸಂ
ಗತಿ[೮]ಯಾಗಲ್ ಲೋಪಂ[೮] ಮೇಣ್
ಚತುರ್ಥಿ ಸಮಸಲ್ಗುಮೆಂಬರದಱ[೯]ೊಳ್ ಕೆಲಬರ್ ೪೧೧

೧ ಸಾ (ಸ) ೨ ಬೇಟಿಕ್ಕ (ನ) ೩ ವಿಲಸ (ಮ, ಮ್ಮೈ, ನ) ೪ ದಡಿಸಿ (ಮ, ಮ್ಮೈ, ನ) ೫ ಳಹಿತರ್ (ಮ, ಮ್ಮೈ) ೬ ನುಸುಳ್ದೋಡೆ (ಮ್ಮೈ) ೭ ಮಡುವಿನೊಳಟಲಟಿಸಿ (ನ) ೮-೮ ಯಾಗೆ ಲೋಪಮುಂ (ಮ, ಮ್ಮೈ)

ಪ್ರಯೋಗಂ :

೧ ನಗೆಯೊಳುಮಪ್ಪೊಡಮಿಂತೀ
ತೆಗಟ ದುರುಕ್ತಿಗಳನೆಮ್ಮೊಳಿಂ ನುಡಿಯಲ್ ನೀಂ
ಬಗೆಯೊಳ್ ಬೇಱೊಂದನಣಂ
ಬಗೆಯಲ್ ಗಡ ನಿನಗೆ ಸುಮತಿ ಬೇಱಾಂ ಬೇಱೇ ೪೧೨

ಅಪರಾರ್ಥಕ್ಕೆ :

೨ ತರವೇೞ್ ಮದವಾರಣಮಂ
ಬರವೇೞ್ ಸನ್ನದ್ಧವಾಜಿಸಾಧನಮಂ ಬಿ
ತ್ತರಿಸಲ್ಕೆ[೧] ವೇೞ್ ವರೂಥೋ
ತ್ಕರಮಂ ಬಲಿದೊಡ್ಡವೇೞ್ ಪದಾತಿಯನೀಗಳ್ ೪೧೩

ಸೂತ್ರಂ ೯೬

ಎಸೆಗುಂ ಭಾವದೊ[೨]ಳಮರ್ದೇ
ಕಸಂಜ್ಞ[೨]ವಚನಂ ಕ್ರಿಯಾಸಮಭಿಹಾರಂ ವ
ರ್ತಿಸುತಿರೆ ತಾನಕ್ಕುಂ ಸ
ರ್ವಸಾಧನೀಮಧ್ಯಮೈಕವಚನಮದೆಂದುಂ[೩] ೪೧೪

ಪ್ರಯೋಗಂ : ಭಾವಾರ್ಥಕ್ಕೆ :

೧ ಸಿಡಿಲಂ ಪೊಸೆ[೪]ವುದು ಶೇಷನ
ಪೆಡೆಯೊಳ್ ಪಟ್ಟಿರ್ಪುದೆಂಟು[೫]ಮಾನೆಯ ಕೋಡಂ
[೬]ಪಿಡಿದೊತ್ತಿ ಕೀಳ್ವ[೬]ದೇಱುಂ
ಕಡಲೊಳಗೋಲಾಡುತಿರ್ಪುದವನ ವಿನೋದಂ ೪೧೫

ಕ್ರಿಯಾಸಮಭಿಹಾರಕ್ಕೆ :

೨ ಕೊಳ್ಕೊಳ್ಳೆಂದೊಡನೊಡನೆಯೆ
ತುಳ್ಕುವ ಯುವತಿಯರ ಕರಪರಿಚ್ಯುತಸಲಿಲಂ
ಗಳ್ಕೊಳೆ ಬಿಡೆ ಕೆದಱುವ ಕಿಂ
ಜಳ್ಕದಿನಾದುದು ಸರೋವರಂ ಕಪಿಶಜಳಂ* ೪೧೬

೧ ತ್ತರಿಸಿ ಬರ (ಮೈ, ನ) ೨–೨ ಳವಟಿಕೆ।ಕಸಂಖ್ಯೆ (ಮೈ, ನ) ೩ ದೊಂದುಂ (ಮ)
೪ ಪೊಱೆ (ಮ) ೫ ದೆಂಪು (ಮೈ) ೬–೬ ಪಿಡಿದುಡಿದುಕೊಳ್ವ (ನ)
* ಈ ಪದ್ಯವು 'ಮ' ಪ್ರತಿಯಲ್ಲಿ ಇಲ್ಲ.

ಸೂತ್ರಂ ೯೭

ಧಾತುಗನೇಕಾಕ್ಷರಕಾ
ಖ್ಯಾತವಿಭಕ್ತಿಗಳ ಮೊದಲೊಳಿಸು ತಾನಕ್ಕುಂ
ಹೇತುಪ್ರಯೋಗದೊಳ್ ತ
ಜ್ಜಾತಿಯೆ ಕರ್ಣಾಟಧಾತುಗಳ್ಗಮದಿರ್ಕುಂ[೧] ೪೧೭

ಪ್ರಯೋಗಂ :

ಮಹಾಸ್ರಗ್ಧರೆ

೧ ಎಸೆಗುಂ ಋಜ್ವಾಗತಂ ಕಣ್ಗೊಳಿಸುಗುಮಳವಟ್ಟರ್ಥ[೨]ಋಜ್ವಾಗತಂ [೩]ಶೋ
ಭಿಸು[೩]ಗಂ ಪಾಶ್ವಾರ್ಗತಂ ನೋೞ್ಪರನೆಱಗಿಸುಗುಂ ಸಾಚಿ ತದ್ವಿದ್ಯರಂ [೪]ರಂ
ಜಿಸು[೪]ಗುಂ ದ್ವ್ಯರ್ಥಾಕ್ಷಿಯೆಂ[೫]ಬಂತೆವೊಲಿರೆ ನೆಗಲ್ದ[೬]ದರ್ಂಗನಾಭಂಗಿಯಂ ಚಿ
ತ್ರಿಸಿ ಚಿತ್ರಕ್ಕಾಯುವೊಯ್ದಂ ಮದನನೆನೆ[೭] ಕರಂ ಕಾಂತೆ ಕಣ್ಗೊಪ್ಪಿ ತೋರ್ಕುಂ[೭]

(ರನ್ನನ ಅಜಿತತೀರ್ಥಕರಪುರಾಣತಿಲಕಂ ೨,೪೮)

ಇಲ್ಲಿ ಉಪಾಂತಕ್ಕೆ ಲಘ್ವೇಕಾಕ್ಷರಕ್ಕೆ ಇದಂತ-ಪ್ರಯೋಗಂ :

೨ ಸುರರೊಸೆಯೆ ಸಕಳ...ಮ
ಸುರನಿಕರಮತರ್ಕ್ಯಮಪ್ಪ ವಿಕ್ರಮಗುಣಮಂ
ಧರಿಯಿಸಿ ಸಂದಿರ್ದಂ ಭಾ
ಸುರತೇಜನುದಾತ್ತ[೮]ಕೀರ್ತಿನಿಳಯಂ ಕೃಷ್ಣಂ ೪೧೯

ಪ್ರಕೃತಿಗಳಂ ಧಾತ್ವರ್ಥದ
ವಿಕಲ್ಪದಿಂದಱಿದು ಸಮಱಕೊಳ್ವುದು ಬಹುರೂ
ಪರ್[೯]ಮನದಂ ಪೇೞಲ್ಕಾ[೯]
ಸಕಳಂ ವಾಕ್ಪತಿಯುಮಾಱನುೞಿದವರಳವೇ ೪೨೦

೧ ಮುವಕ್ಕುಂ (ಮೈ, ನ); ನುವಕ್ಕುಂ (ಮು) ೨ ವಟ್ಟಿರ್ದ (ಪಾ, ದರ್ಪಣ) ೩-೩ ರಂ|ಜಿಸು (ಪಾ) ೪-೪ ಮೊ|ಚ್ಚಿಸು (ಪಾ) ೫ ದ್ಯಶ್ವಕ್ಷಮೆಂ (ಮು, ಮೈ, ನ); ವ್ಯರ್ಥಾಕ್ಷಮೆಂ (ನ); ದ್ವ್ಯರ್ಥಾಕ್ಷಮೆಂ (ಪಾ) ೬ ಬರೆದಿ (ನ) ೭-೭ ಮಹಾದೇವಿ ಕಣ್ಗೊಪ್ಪಿ ತೋರ್ಪಳ್ (ಪಾ) ೮ ದಾರ (ಮು) ೯-೯ ಮನವಳಂಬಿಸಲ್ಕಾ (ನ)

ಪ್ರತಿಬುದ್ಧರಂ ಕುಱಿತ್ತೀ
ಸ್ಥಿತಿಯಿಂದಂ ಕಿಱಿದು ಮಾರ್ಗಸೂಚನೆಗೆಯ್ದಂ
ಮತಿವಂತರಱಿದು ಪೇೞ್ವುದು
ವಿತರ್ಕದಿಂ ಮತ್ತಮುಕ್ತಶೇಷಮನಿದಱೊಳ್ ೪೨೧

ಇದು ಶಬ್ದಸ್ಮೃತಿಯೊಳ್ ಆಖ್ಯಾತಪ್ರಕರಣಂ ಸಮಾಪ್ತಂ

ೀತಿಕೆ :

ಇಂತಿರೆ ಶಬ್ದಂ ಸಂದೇಹ
ಧ್ವಾಂತೌಘಂ ಪಿಂಗಿರೆ ಜಲಕನಾಗೆ ಬುಧ
ಸಂತತಿಗಪ್ಪಂತು ಪೇೞ್ದನಿದಂ
ಶಾಂತಮನಂ ಕವಿತಾಗುಣೋದಯಂ ೪೨೨

ಚಂಪಕಮಾಲೆ
ಅಭಿಮತಶಬ್ದಸಂಸ್ಮರ[1]ಣದಿಂ ಜನಮಂ ತಿಳಿವಂತು ಮಾಡಿ ವಾ
ಗ್ವಿಭವಮದಪ್ರತರ್ಕ್ಯಮೆನೆ ಸಂದೆಸಕಂ ದೆಸೆಯಂತನೆಯ್ದೆ ತತ್-
ಸಭೆಗಳೊಳಗ್ರ[2]ಪೂಜೆವಡೆದೊಂದು ಮಹಾಮಹಿಮಾನುಭಾವದಿಂ
ದಭಿನವಶರ್ವವರ್ಮನಿವನೆಂದಪುದುರ್ವರೆ ನಾಗವರ್ಮನಂ ೪೨೩

ಇದು ಸಕಳಸುಕವಿಜನಮನಸ್ಸರೋಜಿನೀರಾಜಹಂಸಾಯಮಾನಾನೂನಕವಿತಾ
ಗುಣೋದಯಂ ಶ್ರೀನಾಗವರ್ಮಪ್ರಣೀತಮಪ್ಪ ಕಾವ್ಯಾವಲೋಕನದೊಳ್

ಶಬ್ದಸ್ಮೃತಿಯೆಂಬುದು ಪ್ರಥಮಾಧಿಕರಣಂ ಸಮಾಪ್ತಂ

೧ ಸಂಸ್ಕರ (ಮ) ೨ ಯೊಳಗಗ್ರ (ನ)

೨ ಕಾವ್ಯಮಲವ್ಯಾವೃತ್ಯಧಿಕರಣಂ

ಮಹಾಸ್ರಗ್ಧರೆ

ಪ್ರತಿಭಾನಂ[೧] ಕಾವ್ಯವಿದ್ಯಾಪ್ರಚಯಪರಿಚಯಂ ವೃದ್ಧಸೇವಾನುರಾಗಂ
ಸತತಾಭ್ಯಾಸಪ್ರಯತ್ನಂ ಕವಿತೆಗೆ ನಿಯತಂ ಕಾರಣಂ ಪೇೞ್ವೊಡಂತಾ
ಪ್ರತಿಭಾನಂ[೨] ಶಕ್ತಿ ಲೋಕಾಗಮಸಕಲಕಲಾವೇದನಂ ವಿದ್ಯೆ ಶಾಸ್ತ್ರ
ಸ್ಥಿತನಪ್ಪಂ ವೃದ್ಧನಾಲಸ್ಯಮನುೞಿದೆಸಪುದ್ಯೋಗಮಭ್ಯಾಸಕರ್ಮಂ ೪೨೪

೧ ಪದ-ಪದಾರ್ಥ-ಸಂಧಿದೋಷವಿನಿಶ್ಚಯ-ಪ್ರಕರಣಂ

ಶ್ರುತವಾರಿನಿಧಿಯ ಪಾರಮ
ನತಿಪ್ರಬಂಧಾಭಿಯೋಗಿ[೩]ರಾರೆಯ್ದಿದೊಡಂ
ಕೃತಪುಣ್ಯಂಗಲ್ಲದೆ ವಿ
ಶ್ರುತಕವಿತಾರತ್ನಮಲ್ಲಿ ಸಂಭವಿಸುಗಮೇ ೪೨೫

ಮದವಿಲ್ಲದಿಭಂ ಮಧುವಿ
ಲ್ಲದ ಕುಸುಮಂ ಚಂದ್ರನಿಲ್ಲ[೪]ದೊಂದಿರುಳಾರ್ಪಿ[೪]
ಲ್ಲದ ನೃಪತಿ ಕವಿತೆಯಿಲ್ಲದ
ವಿದಗ್ಧತಾಗುಣಮದೇಂ ಮನಂಗೊಳಿಸುಗುಮೇ ೪೨೬

ಪರಮಪ್ರೀತಿನಿಮಿತ್ತಂ
ನಿರತಿಶಯಯಶೋಸಿ[೫]ದಾನಮಪ್ಪುದಱಿನಿಹಂ
ಪರಮೆಂಬೆರಡರ್ಕಂ ಬಂ
ಧುರಕಾವ್ಯ[೬]ನಿಬಂಧದಿಂ ಹಿತಂ ಪೆಱತುಂಟೇ ೪೨೭

ಕೃತಿಸತಿಯ ಮೆಯ್ಯೊಳೆಳ್ಳನಿ
ತು ತಾನದೊಂದಱಿಯೆ ದೋಷಮಾಗೆ ತದಾವ
ರ್ಜಿತಮಪ್ಪ ಕೀರ್ತಿಯುಂ ನಿಂ
ದಿತಮಕ್ಕುಂ ದರ್ಪಣಾರ್ಪಿತಚ್ಛಾಯೆಯವೋಲ್ ೪೨೮

೧ ಭಾವಂ (ಮ,ಮೈ,) ೨ ಭಾಗಂ (ಮ,ಮೈ) ೩ ನುರಾಗ (ನ) ೪-೪ ದಿರುಳಾಳಾರ್ಪಿ (ಕಾ) ೫ ವಿಧಾನ (ನ,ಮೈ) ೬ ವಾಕ್ಯ (ಮ,ನ)

ಅದಱಿಂದುಪೇಕ್ಷೆಗೆಯ್ಯದೆ
ಸದಭಿಮತೋದಾತ್ತಕೀರ್ತಿಯಂ ಬಯಸುವವಂ
ಪದವಾಕ್ಯಾರ್ಥಂಗಳೊಳೊಂ
ದದಂತು ಪಿಂಗಿಸುಗೆ ದೋಷಮಂ ಕೃತಿಯಿಂ[1]ದಂ ೪೨೯

ಪ್ರಯೋಜನ[2]ಸ್ಥಾಪನಂ :

ಸೂತ್ರಂ ೯೮

ಇರೆ ಶಬ್ದಾರ್ಥಂಗಳ್ ತ
ತ್ಪರತೆಯಿನದು ಕಾವ್ಯಮದಱೊಳುಚಿತೈಕಾರ್ಥಂ
ತರವಾಚಿ ಶಬ್ದಮವ[3]ಭಾ
ಸರೂಪಮಾಹ್ಲಾದಕಾರಿಯಪ್ಪುದದರ್ಥಂ ೪೩೦

ಸೂತ್ರಂ ೯೯

ಪ್ರಕರಣದಿಂ ಶಬ್ದಾಂತರ
ದ ಕೂಟದಿಂದಭಿನಯಂಗಳಿಂದಿಷ್ಟಾರ್ಥ
ಪ್ರಕಟನಮಕ್ಕುಮನೇಕ
ಪ್ರಕಾರಮರ್ಥಂ ಪದಕ್ಕೆ ಸಂಭವಿಸುವೊಡಂ ೪೩೧

ಉದಾಹರಣೆ: ಪ್ರಕರಣಕ್ಕೆ :

೧ ಏನೇನುಂ[4] ಮದನುಜರೆನ
ಗಾನತರಣಮಾಗದಿರ್ದರುಂ[5] ಮದಮ[6]ವರ್ಗಂ
ತೇನೇ[6]ತಱೊಳಾಯ್ತು ದ[7]ನಿನಿ
ಸಾನುಂ ಬೇಗದೊಳೆ ಕಳೆದು ತೋಱಿ[8]ನೆ ರಣದೊಳ್ ೪೩೨
(ಪಂಪನ ಆದಿಪುರಾಣ ೧೪, ೨೫)

ಶಬ್ದಾಂತರಸಂಸರ್ಗಕ್ಕೆ :

೨ ಹರಿ ಪೊಯ್ಯೆ ಬಿರಿದ ಮದವತ್-
ಕರಿಕುಂಭದಿನಗದೊಳೊಕ್ಕ ರಕ್ತಾರಕ್ತ
ಸ್ಫುರಿತನವಮೌಕ್ತಿಕಂಗಳ
ನರೆ ಉಱಿಲೆ ವನಚರಿಯರೆರೆದ ಪಣ್ಗೆತ್ತಾಯ್ದರ್ ೪೩೩

೧ ಕ್ರಮದಿಂ (ಮ,ನ) ೨ ಪ್ರಯೋಗ (ನ) ೩ ಮದ (ಮ,ನ) ೪ ನೋ (ಪ) ೫ ರಾ (ಪ)
೬-೬ ವರ್ಗ।ನೇನೇ (ಪ) ೭ ಳಾದುದ (ಪ) ೮ ಉಗಿ (ಮ)

ಅಭಿನಯಕ್ಕೆ :

ಇನಿವಿರಿಯುವಪ್ಪ ಮೊಲೆಯುವ
ಳಿನಿವಿರಿಯುವೆನಿಪ್ಪ ಕಣ್ಗಳಾಕೆ ಮನಂಗೆ
ಟ್ಟೆನಿತು ದೆವಸಂಗಳಂ ತ
ನ್ನಿನಿಯನನಗಲ್ದಿಂ ಬಱಿಕ್ಕಮಿಂತಿಂತಾ[೧]ದಳ್ ೪೩೪

ಸೂತ್ರಂ ೧೦೦

ಅಸಮರ್ಥಮಪ್ರತೀತಂ
ವಿಸಂಧಿ ವಿಪರೀತಕಲ್ಪನಂ ಕಷ್ಟಂ ನೀ
ರಸಮೆಂದು ದೋಷಮಿವು ಸಮ
ನಿಸುಗುಂ ಪದದೊಳ್ ಪದಾಗಮಜ್ಞರ ಮತದಿಂ ೪೩೫

ಸೂತ್ರಂ ೧೦೧

ತೆಱೆದಿರೆ ತದ್ವಾಚಕತೆಯ
ನಱಿಪಲ್ ನೆಱೆಯದುದೆ ಕೃತಿಯೊಳಸಮರ್ಥಪದಂ
ಪೆಱತೇಂ ಪ್ರತೀತಿ ಬಗೆಗೇ
ತಱೊಳಂ ತೋಱದುದದಪ್ರತೀತಂ ಗೂಢಂ ೪೩೬

ಅಸಮರ್ಥಕ್ಕೆ :

೧ ಉರಗಾಳಿ[೨] ನಂದನಾವಳಿ
ತರತರದಿಂದೆಱಗಿ ಜಳಭೃದಂತಿಕದೊಳ್ ಮಾ
ಣ್ದಿರದೆ ಕುಡಿದುಪ್ಪುನೀರಂ
ಧರೆಗಿನಿದಂ ಕಱೆವುದಿಂತಿದೇಂ ವಿಸ್ಮಯಮೋ ೪೩೭

ಅಪ್ರತೀತಕ್ಕೆ :

೨ ಅಸಿತರ್ಥಿ[೩] ವಯಸ್ಯಾಧ್ವದೊ
ಳೆಸೆವ ನವಾಬ್ಜನ್ಮಶೋಭೆ ಮೇಚಕದೂಷ್ಯ
ಪ್ರಸರದ ಮೆಯ್ಯೊಳ್ ಪರ್ವಿರೆ[೪]
ಪಸರಿಸಿದ ಗುಣಂಗಳವನ[೫]ನೇನಿಱಿಸಿದುವೋ[೬] ೪೩೮

೧ ನಿಂತಿಂತಾ (ಮ) ೨ ಗಾದಿ (ನ) ೩ ತರ್ತಿ (ನ) ೪ ಪರ್ಚಂ (ನ) ೫ ಳಳವ (ನ)
೬ ದುದೋ (ಮ)

ಸೂತ್ರಂ ೧೦೨

ಅವಿಹಿ[೧]ತಸಂಹಿತೆ ಮೇಣ್ ಸಂ
ಧಿವಿರೂಪಂ ಬಗೆಯೆ ತಾಂ ವಿಸಂಧಿಯೆನಿಕ್ಕುಂ
ಸ್ವವಿಕಲ್ಪಿತ[೨]ದೊಳನಿಷ್ಟಾ
ರ್ಥವಾಗೆ ವಿಪರೀತಕಲ್ಪನಂ ತಾನಕ್ಕುಂ ೪೩೯

ಉದಾಹರಣೆ : ವಿಸಂಧಿಗೆ :

೧ ಅಸಿಯ ಒಱೆ[೩]ಬೆಸದ ಪೆ[೩]ಟ್ಟಿಗೆ
ಮಿಸುಗುವ ಆರಂ ತೊಳಪ್ಪ ಕನ್ನವುರಂ ಚೆ
ಲ್ವೆಸೆದಿರೆ ಬಲವರ್ಷ ಏಟ[೪]ರ್
ಕುಸುಮೇಷುವ ಮೇಳದವರ್ಗಳೆನಿಸಿದರವಱೊ[೫]ಳ್ ೪೪೦

ವಿರೂಪಸಂಧಿಗೆ :

೨ [೬]ಪಸುರಂ ಬಿಡದೆಸೆಪ ಮಳೀ
ಮಸರ್ಗೆಂ[೬]ದುದಿತೋಡುರಾಜನಂ ನಯದಿಂ ಕ
ಲ್ಪಿಸಿ ಜಲಧಿ ನುಡಿವ ಮಾಱ್ಕೆಯಿ
ನೆಸೆದತ್ತುಲ್ಲೋಲಬಹುಲಕಲ್ಲೋಲರವಂ ೪೪೧

ವಿಪರೀತಕಲ್ಪನಕ್ಕೆ :

೩ ಬಳವದರಿಭೂಪದಾವಾ
ನಳಂ ಕಳಿಂಗಾಧಿರಾಜ ನಿನ್ನುಗ್ರಶರಾ
ವಳಿಪಿಳಸಿತೋರುಧಾರಾ
ಜಳ[೭]ಸಿತಕರನಿಂದ[೭]ಮೆಯ್ದೆ ಮಱ್ಗಿಗೆ ಧುರದೊಳ್[೮] ೪೪೨

ಸೂತ್ರಂ ೧೦೩

ಶ್ರುತಿವಿರಸಪದಕ್ಷೇಪ
ಸ್ಥಿತಿ ಕಷ್ಟಂ ಗ್ರಾಮ್ಯಶಬ್ದಸಂದರ್ಭಸಮು
ನ್ನಿತಮುಮಸಭ್ಯಾರ್ಥಕೃತಿ
ಸ್ಮೃತಿಯುಂ ನೀರಸಮೆನಿಪ್ಪುದಕ್ಕುಂ ದೋಷಂ ೪೪೩

೧ ಅವಿದಿ (ನ) ೨ ಕಲ್ಪನ (ನ) ೩-೩ ಬೆಸದ ಪ (ಕಾ); ಬೆಸದ ಕ (ನ); ಬೆಸದ ಪೆ (ಮಂ. ದರ್ಪಣ) ೪ ಜನ (ಮಂ. ದರ್ಪಣ) ೫ ರವರೊ (ಮಂ. ದರ್ಪಣ, ನ) ೬-೬ ಪಸರಂಗು ಡದೆಸಗುವಮುವ|ಳಿಸರ್ಗಂ (ಮ, ಮೈ, ನ) ೭-೭ ಸಿತಕರದಿಂದ (ಮ, ಮೈ) ; ಸೀಕರದಿಂದ (ನ) ೮ ಧರೆಯೊಳ್ (ಮ, ಮೈ, ನ)

ಉದಾಹರಣೆ : ಕಷ್ಟಕ್ಕೆ :

೧ ಇದಿರ್ವರ್ಪರ್ವೊಲಾಯ್ತು ಪವನ
ವಿದಳ[೧]ತ್ತ್ವರ್ವಾದ್ವಿಪೋಥ[೧]ಪುಷ್ಪರಜಸ್ಸ
ಕ್ತದಿನೊದವಿ ಮಾರುತಂ ಭ್ರಾ
ಮ್ಯವತ್ಯುದಗ್ರಾಳಿಝುಂಕೃತೋಚ್ಚೈರ್ಧ್ವಾರ್ನಂ ೪೪೪

ನೀರಸಕ್ಕೆ :

೨ ಅಂಗನೆಯೊಳ್ ಕಳ್ದಿರ್ಪು[೨]ದ
ನಂಗಾಹಿಯನಱಿದು[೩]ಪೇೞ್ದ ಪೊಡೆಯಂ ಕಡುಪಿ[೩]
ನ್ನಂಗಂ ದೊರೆಕೊಂಡಿರೆ ಕೊಂ
ಡಂ ಗಡಮೆಲೆ[೪]ತೈಗಹುಲಿಲದೇಂ[೪] ಚೋಜಿಗಮೋ ೪೪೫

೩ ತಲೆಮುಟ್ಟೆ ಪಾ[೫]ಯ್ದು[೬]ವೀಯರ್ಾ
ವ[೬]ಲೇಪದಿಂದಿಱಿದು ಬಿೞ್ದುಮೆೞ್ದಂ ಮತ್ತಂ
ಚಲ[೭]ಚಲದಿಂ[೮]ದೊಡನಿಕ್ಕಿದ
ನೊಲೆದಿದಿರೊಳೆ ಮಣಿಯುದಾಂತ ಪರವಾಹಿನಿಯಂ ೪೪೬

ಸೂತ್ರಂ ೧೦೪

ಮಱಸುಂದು ಸೂಟಸುಂದೆನೆ
[೯]ಪಿಱಿತಿನಿಯೆನೆ ಪೂಱಿಯೆನೆ[೯]ಪದಾಂತರದಿಂದಂ
ನೆಱಿದು ನಿಲೆ ದುಷ್ಪ್ರತೀತಿಯ
ನಱಿಪುವ ಪೆಱಪೆಱವುಮಿನ್ನವೇ ಗ್ರಾಮ್ಯಂಗಳ್ ೪೪೭

ಅದೆಂತೆನೆ :

೧ ನೆಱಿಗೊಂಡು ತೊನೆವ ಸರಲಿಂ
ನೆಱಲ್ದು ರಥದೊಳಗೆ ಬಿೞ್ದು ಚಕ್ರಧರಂ ಮೆಯ್-
ಮಱಿದು ಗುಹಾಂತರದೊಳ್ ಮಿಗೆ
ಮಱಸುಂದಿದ ಪುಲಿಯನಾಗಳಿನಿಸಂ ಪೋಲ್ತಂ ೪೪೮

೧-೧ ತ್ತ್ವರ್ವಾದ್ವಿಪೋದ (ನ) ೨ ಕರ್ದಿರ್ಪು (ಮ) ೩-೩ ಪೊರ್ದುಪೊಡೆಯುಂ ಕುಱುಪಿ (ನ) ೪-೪ ತೈಗಹುಯಿಲದೇಂ (ಮೈ); ತೈಗುಹುಃಯದೇಂ (ನ) ೫ ಪೊ (ನ) ೬-೬ ನಿಯರ್ಾ!ಸ (ನ) ೭ ಚಲಿ (ಮ) ೮ ನಿಂ (ನ) ೯-೯ ಪೆಱತೆನಿಸೆನೆ ಪಿಱುಯದೆನೆ (ಮೈ)

೨ ಮಚ್ಚರದ ಸೂೞಸುಂದಿನ[1]
ಪೊಚ್ಚರನಾಂತಿರ್ದು[2] ಬಿರುದಿನೆಸಕದ ಪೆಱವುಂ
ಕಚ್ಚಕಳಿ[3]ಗಳ ತೊಡರ್ಪಿನ
ಮೆಚ್ಚವಣಿಗೆಯಂಕಮಂ ಮಹೀಶಂ ನೋೞ್ಕಂ ೪೪೯

೩ ಕೊಱೆ[4]ವಲ್ ಬತ್ತಿ[4]ದ ಕಾಲ್ [5]ಪಿಂ
ಬಱಿ[5]ಗೇಸಂ ನೆಕ್ಕ ಕದಪು ಪೊ[6]ಕ್ಕಿರ್ದ ಬಸಿಱ್
ತೆಱೆದ ಮುಖಕುಹರವ[7]ರ್ಬಿಸೆ
ಪಿಱಿತಿನಿಗಳ ಬಳಗಮೆಯ್ದೆ ತಂದುಡು[8] ಮುನಿಯಂ ೪೫೦

ಉತ್ಪಲಮಾಲೆ

೪ ಮ[9]ತ್ತರುಡಂಗೆಗೊಂಡು ಬಡಿಯಲ್ ಚಲದಿಂದೆನಸುಂ ದುರಾಗ್ರಹಂ
ಚಿತ್ತದೊಳಾಗೆ ನಿನ್ನ ಬಲೆಯಂ ಬರಲೀಮುಳಿಸೇಂಟ[10]ಮಾಳದಿಂ
ಸುತ್ತುವರ್ಗಲ್ಲದೊಲ್ಲೆ ಬಿಡು ನೀನೆನಗಿಲ್ಲಳ [11]ಪೂಱಿ ತೋಱಿ[11] ಪೇ
ೞುತ್ತಿರಲಾಸೆಯಂ ಬಿಸುಟು ನೀಂ [12]ಕಳಿ ಪಾಂಟಿಮತಕ್ಕೆ[12] ಸ್ವೈರಿಸೆಂ ೪೫೧

ಇಂತೀ ಪೇೞ್ದುವುಮನಱಿದು ಪೆಱಪೆಱವುಮನಱಿದುಕೊಳ್ವುದು

ಸೂತ್ರಂ ೧೦೫

ಅನುಕರಣದೊಳೊಂ[13]ದಿದ ಮಾ
ತಿನಲ್ಲಿ ನಿರ್ದೋಷಮಾಗೆ ಸಲ್ಗುಂ ಪೇೞ್ದಿಂ
ತಿನಿತುಂ ಸ್ವರೂಪಕಥನದೊ
ಳನುವಾದಂ ಭಿನ್ನಶಬ್ದಮಪ್ಪುದಱಿಂದಂ ೪೫೨

ಇದು ಕಾವ್ಯಮಲವ್ಯಾವೃತ್ತಿಯೊಳ್
ಪದ-ಪದಾರ್ಥ-ಸಂಧಿದೋಷವಿನಿಶ್ಚಯ ಪ್ರಕರಣಂ ಸಮಾಪ್ತಂ

೧ ಸುಂದಿದ (ನ) ೨ ನಾಂತಿರ್ದ (ಮೈ); ಕಾಂತಿರ್ದ (ನ) ೩ ನರ್ಚಿ ಕಳೆ (ಮೈ); ನಚ್ಚಿ ಕಳೆ (ಸ) ೪-೪ ಪಲ್ ಪತ್ತಿ (ಮು, ನ) ೫-೫ ಸಿಂ। ಪಿಱಿ (ಮು, ಮೈ, ನ) ೬ ಸೊ (ಮು) ೭ ಮು (ನ) ೮ ಬಂದುವು (ಮು, ಮೈ, ನ) ೯ ಪೆ (ಮೈ, ನ); ಪಿ (ಮು) ೧೦ ಸಿಂತ (ನ) ೧೧-೧೧ ಪೂಱಿ ತೋೞು (ಮು); ಪೂರಿ ತೋಱಿ (ನ) ೧೨-೧೨ ಕಳಿ ಪಾಂಡಿಮುಕಕ್ಕೆ (ಮು); ಕಱಿ ಪಾಂಟಿಮ ತಕ್ಕೆ (ನ) ೧೩ ದಿನೊಂ (ನ)

೨ ವಾಕ್ಯ-ವಾಕ್ಯಾರ್ಥ-ದೋಷಾನುಕೀರ್ತನ ಪ್ರಕರಣಂ

ಸೂತ್ರಂ ೧೦೬

ವಿದಿತಾರ್ಥಂ ಕ್ಷೋದಕ್ಷಮ
ಮುದಾತ್ತಶಬ್ದಂ ಪರಸ್ಪರಂ ಸಾಪೇಕ್ಷಂ
ಪದಸಮುದಾಯಂ [೧]ವಾಕ್ಯಂ
ವ್ಯುದಸ್ತ[೧]ಕಾಂಕ್ಷಂ ತದೇಕವಸ್ತುನಿಬದ್ಧಂ ೪೫೩

ಲಕ್ಷ್ಯಂ:

೧ ಅಸವಸದಿಂ ಪಱಿಗೆಯ್ಯಂ
ಕಸಮಂ ಸೋದಿಸದೆ ಬಿತ್ತಿದೊಕ್ಕಲಿಗನವೊಲ್
ಸಸಿಯುಂ ನೋಡಿ ತಳೋದರಿ
ಬಿಸುಸುಯ್ಗುಂ ಬಯ್ಗುಮಂತೆ[೨] ಮಾಡಿದ ಬಿದಿಯುಂ ೪೫೪

ಸೂತ್ರಂ ೧೦೭

ವ್ಯವಹಿತಮೇಕಾರ್ಥಂ ವ್ಯ
ರ್ಥವಪಕ್ರಮಮನು[೩]ಖಿಳಲೋಕಶಾಸ್ತ್ರವಿರುದ್ಧಂ
ಸುವಿದಿತ ಯತಿಭಂಗಂ ಭಿ
ನ್ನವೃತ್ತಮೆಂ[೪]ದಿಂತು ವಾಕ್ಯದೋಷಮಿವಕ್ಕುಂ ೪೫೫

ಸೂತ್ರಂ ೧೦೮

ವ್ಯತಿಕೀರ್ಣಪದಕ್ರಮಮನು
ಚಿತಾನ್ವಯಂ ವ್ಯವಹಿತಾಹ್ವಯಂ ತಾನದು ದಲ್
ಮತಿಸಮ್ಮೋಹ[೫]ಮುನಿದಿರವ
ಗೆರ್[೫] ತೊಡರ್ಚಲ್ ಪೇೞ್ವೊಡಲ್ಲಿಗಲ್ಲದು[೬] ದೋಷಂ ೪೫೬

ಅವರ್ಕೆ ಲಕ್ಷ್ಯಂ:

೧ ಒಳಕೊಳ್ ಮುಂ ನಿನಗಿಲ್ಲದ
ಮುಳಿಸಂ ಕಾಲ್ಗೆಱಗಿದೋಪನಂ ತೊಱೆ ದಯೆಯಿಂ
ತಳಮುಳಗುತ್ತ[೭]ನುನಯದಿಂ
ತಿಳಿಪಲ್ಕೆಂದೆಱಗದನ್ನಮೆನ್ನರುಮುಱುಗುಂ ೪೫೭

೧-೧ ವಾಕ್ಯಾ|ಭ್ಯುದಸ್ತ (ಮ) ೨ ಮಿಂತೆ (ಮ, ಮೈ,); ಮಿಂತು (ನ, ಸಾ. ದರ್ಪಣ) ೩ ಮನ ... ಮೈ) ೪ ವೃತ್ತಿಯೆಂ (ನ) ೫-೫ ಮಂ ನಿಡಿದ|ಗೆರ್ (ಮೈ) ೬ ಗಲ್ಲಂ (ನ) ೭ ಮುಳುಕುತ್ತ (ನ)

೨ ಪತ್ರಂ ಭುಜಂಗಸಮಿತಿ ಕ
ಳತ್ರಂ ದಳ್ಛುರಿ ವಿಭೂಷಣಾವಳಿ ಭೂಭೃತ್-
ಪುತ್ರಿ ಗವಾಧಿಪನಜಿನಂ
ನೇತ್ರಂ ನಿವಸನಮೆನಿಪ್ಪನೊಸೆಗೆಮಗಭವಂ ೪೫೮

ಸೂತ್ರಂ ೧೧೯

ಅವಧಾರಿಸದುಕ್ತಾರ್ಥಮ
ನವಿಶೇಷದೆ ಮಗುೞ್ದು ನುಡಿದೊಡೇಕಾರ್ಥಂ ಕ್ರೋ
ಧ ವಿಷಾದ ಖೇದ ಭಯ ಹ
ರ್ಷ ವಿಸ್ಮಯಾದಿಗಳೊಳಿನ್ನವಿಷ್ಟಮದುಷ್ಟಂ ೪೫೯

ಪ್ರಯೋಗಂ: **ಅಲ್ಲಿ ಪೂರ್ವಾರ್ಧಕ್ಕೆ :**

೧ ಉನ್ಮನಮೆ ಮಾಱ್ಕುಮುತ್ಕೆಯು[೨]
ನ್ನುನ್ಮದಬರ್ಹಿಣಶಿಖಂಡಿಕೇಕಾವಿರುತಂ
ತನ್ಮಧುರಧ್ವನಿಯುಂ ಜಳ[೩]
ಭೃನ್ಮೇಘನಿನಾದಮೊದವೆ ದೆಸೆದೆಸೆ[೪]ಗೆಸೆಗುಂ ೪೬೦

ಅಪರಾರ್ಧಕ್ಕೆ : ವಿಶೇಷಗ್ರಹಣಕ್ಕೆ :

ಮತ್ತೇಭವಿಕ್ರೀಡಿತಂ

೨ ಗಗನಾಧ್ವರ್ ಶರಣಾಗಿಮಾಗಿಮುಮರರ್ ನಿಂದಾನಿಮಾನಿಂ[೫] ದಿಶಾ
ಳಿಗಧೀಶರ್ ನೆರೆಹೊಡ್ಡಿಮೊಡ್ಡಿಮುರಗರ್ ಬಂ[೬]ದೆಯ್ದಿಮೆಯ್ದಿಂ ಮನ
ಸ್ವಿಗಳೀ ದೈತ್ಯನನಿಕ್ಕಿಮಿಕ್ಕಿಮುದಟರ್ ಪೂಣ್ದಣ್ಮಿಮಣ್ಮಿಂ ಯಶೋ
ರ್ಥಿಗಳೆನ್ನಂ[೭] ನೆಲೆಗುಯ್ಯಿಮುಯ್ಯಿಮೆನುತುಂ ತನ್ನಂಗಿ ಪುಯ್ಯಲ್ಚಿದಳ್ ೪೬೧

ಸೂತ್ರಂ ೧೧೦

ಕರಿಕಳಭಮೆನೆ ಶಿರಶ್ಮೀ
ಖರಮೆನೆ ನವಪುಷ್ಪಮಾಲೆಯೆನೆ ಮೌಕ್ತಿಕಲ್ ಭಾ
ಸುರಲ್ ಹಾರಯಷ್ಟಿಯೆನೆ ಪೌ
ನರುಕ್ತ್ಯಮಾಗದು ವಿಶೇಷಸಂಭಾವನೆಯೊಳ್ ೪೬೨

೧-೧ ಱ್ದುಮಿಡುವುದೇ (ಮೈ, ನ); ಱ್ದು ಬಿಡುವುದೇ (ನ) ೨ ಮುತ್ತೆಯು (ಮೈ) ೩ ಜನ (ಮೈ) ೪ ದಶದಿಶೆ (ಮ, ನ) ೫ ದಾಗಿಮಾಗಿಂ (ನ) ೬ ಬಂ (ಮೈ) ೭ ಳೇನೆಂ (ಮೈ) ೮-೮ ಬಂಧುರ (ನ)

೧ ಆರಾಜಶಿರಃಶೇಖರ
ನಾರಿಂದಂ ಪಿರಿಯನಳವಿಯೊಳ್ ಬಳವದಹಂ
ಕಾರದೆ [1]ಬರೆ ತಗೆವಂ[1] ಸ್ತಂ
ಭೇರಮಕಳಭಮನುಪಾತ್ತ[2]ವಾಲಧಿಮೂಲಂ ೪೬೩

೨ ನವಕುಸುಮಮಾಲೆ ಮೌಕ್ತಿಕ
ವಿವಿಕ್ತಹಾರಾನುಕಾರಿ ಕರ[3]ಮೊಪ್ಪಿರ್ಕುಂ
ಸವಿಲಾಸದಸ್ಯುವನಿತಾ
ನಿವಹಘನಸ್ತನತಟಾಂತರವ್ಯಾಲಗ್ನಂ ೪೬೪

ಸೂತ್ರಂ ೧೧೧

ವ್ಯರ್ಥಂ ಪೂರ್ವಾಪರವಿಹ
ತಾರ್ಥ[4]ವ್ಯಾಘಾತದಿಂ ವಿರುದ್ಧಾರ್ಥಪದಂ
ಸಾರ್ಥ[5]ಕಮುಕ್ಕುಮನರ್ಥಕ
ದರ್ಥಿತಜನದುಕ್ತಿವಿಷಯದೊಳ್ ಮತ್ತದುವುಂ ೪೬೫

ಆಯೆರಡರ್ಕಂ ಲಕ್ಷ್ಯಂ :

೧ ಎಱಗಿಸು ಭುಜವಿಜಯದಿನಣ
ಮುಱಿದೆ ಬಿಗುರ್ತಿರ್ಪರಾತಿನೃಪರಂ ಧರ್ಮ[6]
ಕ್ಕೈಜವಟ್ಟಾಗಿರ್ದಯ್ ನೀಂ
ಪೆಱರಾರುಂ ನಿನಗೆ ಪಗೆವರೆಂಬರುಮೊಳರೇ ೪೬೬

೨ ಪರದಾರಗಮನಮಾರ್ಯಾ
[7]ಚರಿತಂಗೆನ[7]ಗೆಂತು ಯುಕ್ತಮುಕ್ಕುಂ ತತ್ ಸುಂ
ದರರುಚಿರಮಧುರ[8]ವನಿತಾ[8]
ಧರಪಾನಂ[9] ತಾನದೆಂತು ಪೇೞ್ ಕೂಡು[10]ಗುಮೇ ೪೬೭

೧-೧ ನಿಲೆ ತೆಗೆದಂ (ಮೈ,ನ) ೨ ನುದಾತ್ತ (ಮ,ನ) ೩ ಕಳ (ಮ,ಮೈ,ನ) ೪ ತಾರ್ಥಂ (ನ) ೫ ಸ್ವಾರ್ಥ (ಮ,ನ) ೬ ಭರ್ಮ (ಮ,ಮೈ,ನ) ೭-೭ ಚರಿತಂ ನಿನ (ಮೈ,ನ) ೮-೮ ವೃತ್ತಾ (ಮ,ಮೈ,ನ) ೯ ಪಾರಂ (ಮೈ) ೧೦ ಮೂಡು (ನ)

ಸೂತ್ರಂ ೧೧೨

ಮೊದಲೊಳ್ ಮುಂಪೇೞ್ದುದ್ದೇ
ಶದಂದಮನುದೇಶವಾಗದಂದಕ್ರಮಮಿ
ನ್ನದುವುಂ ಸಂಬಂಧಕ್ಕಾ
ವುದಾನುಮನು[1]ಬೋಧಹೇತುವಾದೊಡ[2]ದೋಷಂ ೪೬೮

ಲಕ್ಷ್ಯಂ :

ಉತ್ಪಲಮಾಲೆ

೧ ಸತ್ತ್ವರಜಸ್ತಮೋಗುಣವಿಭಾಗದಿನೀ ತ್ರಿಜಗಕ್ಕೆ ತಾನೆ ಕ
ರ್ತೃತ್ವದೊಳೊಂದಿಯುಂ ನೆ[3]ಱೆ[3]ಯೆ ಸಂಹರಿಸಲ್ ನೆ[4]ಱೆ[3]ದುಂ ಸಮಂತು ನಿ
ತ್ಯತ್ವಮನಾಂತುವಿನಾಶನಜನಚ್ಯುತನೆಂಬಿನೆಗಂ ವಿಭಿನ್ನಮೂ
ರ್ತಿತ್ವಮನಪ್ಪುಕೆಯ್ದು[5] ಪರಮೇಶ್ವರನೀಗೆಮಗಾಪ್ತತತ್ತ್ವಮಂ ೪೬೯

೨ ವಾತಂ ಪಿತ್ತಂ ಕಫಮೆಂ
ಬೀ ತೆಱದಿಂ ಮೂಱು ದೋಷಮಾದ್ಯಂತಸಮಾ
ಖ್ಯಾತಂಗಳವುಷ್ಣದಿನತಿ
ಶೀತದಿನುಪಶಮಿಕುಮಲ್ಲಿ ಮಧ್ಯಮಮೊಂದುಂ ೪೭೦

ಸೂತ್ರಂ ೧೧೩

ಕಾಳಸ್ವಭಾವದೇಶಸ
ಮಾಳಕ್ಷಿತ ವಸ್ತುರೂಪವಿಪರೀತಮ[6]ದಂ
ತಾ[6]ಳೋಕ[7]ವಿರುದ್ಧಂ ಗುಣ
ದೋಳಿಗೆ ವಂದಿರ್ಕುಮರಮ[7] ಕವಿಕೌಶಲದಿಂ ೪೭೧

ಅನಿತರ್ಕಂ ಲಕ್ಷ್ಯಂ :

ಮತ್ತೇಭವಿಕ್ರೀಡಿತಂ

೧ ವಿಕಚಾಂಭೋರುಹಷಂಡಮುನ್ಮದಮರಾಳಾನೀಕಮುತ್ಫುಲ್ಲಚಂ
ಪಕಮಾಕಂದಮಹೀಜಮುಜ್ವಳವಿಯದ್ಭೃಂಗಂ ಸ್ಫುಟತ್ಕೋಕಿಲ
ಪ್ರಕಟಾರಾವಪರಂಪರಾಪರಿಗತಾಶಾಕುಂಜಮುಕ್ಷೀಬಕೇ
ಕಿಕದಂಬಂ ಜಗತೀಜನಕ್ಕೆ ಪಡೆದತ್ತಭ್ರಾಗಮಂ ರಾಗಮಂ ೪೭೨

– ಇದು ಕಾಲವಿರುದ್ಧಂ

೧ ಮಪ (ಮೈ) ೨ ದೊಷೆ (ಮ) ೩ ಜೆ (ಮ,ನ) ೪ ಮೆ (ನ) ೫ ಕೆಯ್ವ (ಮ) ೬-೬ ಡಿಂ|ನಾ (ಮ,ಮೈ,ನ) ೭-೭ ವಿರುದ್ಧಂ ಗುಣ|ಲಾಳಸದೊಳ್ ಮಿಸುಗಿವಕ್ಕು (ಮ,ನ) ; ವಿರುದ್ಧ ಗುಣಂ|ಲಾಳಸದೊಳ್ ಮಧುರವಕ್ಕು (ಮೈ)

೨ ಕೋಡುಳ್ಳ ತುರಂಗಂ ಬಂ
ಡಾಡುವ[1] ನವಕರ್ಣಿಕಾರಮತಿಮಧುರತೆಯೊಳ್
ಕೂಡಿದ ನಿಂಬಾರಾಮಂ
ನಾಡೊಳಗೊಳವೆಂದೊಡಿನ್ನದೇವಣ್ಣಿಪುದೋ ೪೭೩

– ಇದು ಸ್ವಭಾವವಿರುದ್ಧಂ

ಶ್ಲೋಕ :

೩ ಕರ್ಪೂರಭೂರುಹಾರಾಮೋತ್
ಸರ್ಪದ್ಧೂಳೀ(ಳಿ)ಧೂಸರಂ
ತೋಱಿಪುರ್ದಾತಿಥ್ಯಮಂ[2] ಮಾಡಲ್
ಬರ್ಪಂತೀ ಮಲಯಾನಿಲಂ ೪೭೪

– ಇದು ದೇಶವಿರುದ್ಧಂ

೪ ಬೇಱೊಂದದ್ಭುತರಸಮಂ
ಬೀಱುತ್ತಮನೇಕವಿವಿಧಫಲಪರಿಣತಿಯಿಂ
ದಾಱುಂ ಋತುಗಳುಮೊಡನೆಯೆ
ತೋಱಿದುವು ತಪಃಪ್ರಭಾವದಿಂ ಮುನಿಪತಿ[3]ಯಾ ೪೭೫

– ಇದು ಕವಿಕೌಶಲಂ

ಸೂತ್ರಂ ೧೧೪

ನ್ಯಾಯಾಗಮನೃಪವಿದ್ಯಾ
ವ್ಯಾಯುಕಲಾಕಾಮತಂತ್ರವಿಷಯವಿರೋಧ
ಪ್ರಾಯಂ ಶಾಸ್ತ್ರವಿರುದ್ಧಂ
ಶ್ರೇಯಮುದಂತೆಲ್ಲಿಯಾನುಮುಕ್ತಿಕ್ರಮದಿಂ ೪೭೬

ಉದಾಹರಣೆ :

೧ ಅವಿನಶ್ವರಗತಿಸಂಸ್ಕಾ[4]
ರವೆಂಬ ಸುಗತೋಕ್ತಿ[5] ಸತ್ಯಮಂತಲ್ಲದೊಡಾ
ನವನೀಲನೀರಜಾಕ್ಷಿಯ
ಸವಿಲಾಸಾಲೋಕಮಿನ್ನುಮಿರ್ಕುಮೆ ಮನದೊಳ್ ೪೭೭

೧ ಡೋಡಿದ (ಮ,ನ) ೨ ತೋಱಿಪಾರ್ತಿಥ್ಯಮನೇ (ಮ) ೩ ತನ್ಮುನಿ (ನ) ೪ ಸಂಸಾ (ನ)
೫ ಸಂಗೋಕ್ತಿ (ಮ,ನ)

೩ ಉಪನಯನಂಗೆಯ್ಯದೆಯುಂ
ಸ್ವಪೂರ್ವವಾಸನೆಯ ಬಲದಿನಿಂತೀತಂ ವೇ
ದಪುರಾಣವೇದಿಯಾದಂ
ವ್ಯಪೇಕ್ಷೆಗೆಯ್ಯುಮೆ ವಿಶುದ್ಧಮಣಿ ಸಂಸ್ಕೃತಿ[೧]ಯುಂ ೪೭೮

ಉಟುದುವರ್ಕವಿಶಾ ತೆಜದಿನಜುದುಕೊಟ್ಟು ದು

ಸೂತ್ರಂ ೧೧೫

ನಿಯತ[೨]ಸ್ಥಾನಂ ಪದವಿಸೃ
ತಿಯೊಳಾದ ವಿರಾಮಮಱಿಗೆ ಯತಿಯಕ್ಕುಮುದ
[೩]ಕರ್ಣಯಥಾಗತಿ ಯತಿ[೩]ಭಂಗಂ
ಪ್ರಯುಕ್ತಸಮಭರವಿಭಾಗದೊಳ್ ನಿರ್ದೋಷಂ[೪] ೪೭೯

ಲಕ್ಷ್ಯಂ : ಯತಿಭಂಗಕ್ಕೆ :

೧ ಅತಿಮೃದುವನಿಱಿಸುಗುಂ ಮ
ತ್ತತಿತೀವ್ರನನಣಮೆ ಜನಮುದೆಳಸವದೆಂತುಂ
ಮತಿವಂತನಂತಱಿಂದೀ[೫]
ಕ್ಷಿತಿಯಂ ಬಸದಾ[೬]ಗಿ ಮಾೞ್ಕೆ ಮಧ್ಯಮಗತಿಯಿಂ ೪೮೦

ಮಂದಾಕ್ರಾಂತವೃತ್ತಂ

೨ ಇಂತೀಪೇೞ್ದ ನೃಪಗುಣವಿಭೇದಂಗಳಂ ತಾಳ್ದಿ ನಿಂದಾ
ತಂ ತನ್ನೊಳ್ ತಾಳ್ದುಗುಮಖಿಳಲೋಕೈಕಸಾಮ್ರಾಜ್ಯಮಂ ವಿ
ಭ್ರಾಂತೇಂ ಭೂಮ್ಯಂ[೭]ತರರಿಪುಗಳಂ ಗೆಲ್ದು ವಿಕ್ರಾಂತದಿಂ ಕ
ಲ್ಪಾಂತಸ್ಥಾಯಿಪ್ರಕಟವಿಹಟತ್ಕೀರ್ತಿಗಂ ಕಾಂತನಕ್ಕುಂ ೪೮೧

ಸೂತ್ರಂ ೧೧೬

ಗುರುಲಘುರಚನೆಗೆ ನಿರ್ದಿ
ಷ್ಟರೂಪಹೀನಾಧಿಕಾಕ್ಷರಂ ಛಂದದೊಳೊಂ
ದಿರೆ ಭಿನ್ನವೃತ್ತಮೆಂಬುದು
ದುರುಕ್ತಮತ್ಯಂತದೋಷಮಕ್ಕುಂ ಕೃತಿಯೊಳ್ ೪೮೨

೧ ಸಂಸ್ಕೃತಿ (ಮ); ಸಂಶೃತಿ (ಮೈ); ಸತ್ಕ್ರಿಯೆ (ನ) ೨ ನಿಯಮ (ನ) ೩–೩ ಕರ್ಣಯಥಾರ್ಥಗತಿಯ (ಮೈ,ನ) ೪ ನಿರ್ದಿಷ್ಟಂ (ಮ); ನಿರ್ದುಷ್ಟಂ (ನ) ೫ ಮತಿಮಂತರಱಿಪಿದಿಂತೀ (ಮೈ); ಮತಿವಂತರದಱಿನಿಂತೀ (ನ) ೬ ವಶಮಾ (ನ) ೭ ಭೂಮ್ಯಂ (ನ)

ಆವರ್ಕೆ ಲಕ್ಷ್ಯಂ :

೧ ಜೀಮೂತಕೇತುಗಣ್ಣಂ
ಗೆ ಮೇಘವಾಹನನದೆಂತು ಮುಂಬೆಸಕೆಯ್ದಂ
ನಿಮ್ಮಣ್ಣಂಗೆ ಮತಂಗಂ
ಗಾವಮಾಱ್ಕೆಯೆ ವಿನಯದಿಂದೆ ನೀಂ ಬೆಸಕೆಯ್ಯಂ ೪೮೩

ವೃತ್ತಂ

೨ ಪಣವಮನೀಯಸಂ[1] ಪ್ರಿಯಂ ನುಡಿದೆಂತುಂ
ಮಾಣೆ ಮತ್ತವನ ಪಂಬಲನೆಂತುಂ
ಕೇಣಕಾಱನನದೇಕೆ [2]ಗಣಿಕೆವೈ[2]
ನಾಣಪುತ್ತನಗೆಯಂ ನೀಂ ಬಗೆಯೆಯ್[3] ೪೮೪

ಸೂತ್ರಂ ೧೧೭

ಮಿಗೆ ದಲ್ ವಲಂ ವೆಱಂ ಮ
ತ್ತೆ ಗಡಂ ಗಳ ಕೆನ್ನಮೆಂಬನರ್ಥಕಪದಮುಂ
ಸೊಗಯಿಸೆ ವಾಕ್ಯಾ[4]ಲಂಕೃತಿ
ನೆಗೞ್ದಿಡೆಯೊಳ್ ಪೇೞ್ಗೆ ಪೇೞದಿರ್ಕುೞಿದೆಡೆಯೊಳ್ ೪೮೫

ಪ್ರಯೋಗಂ :

ಚಂಪಕಮಾಲೆ

೧ ವಿರಹಿ ಮೃಗಂ [5]ದಲಂಜಿಸುವವಂ ಮಧುದಲ್[5] ಬಲೆಗಳ್ ಲತಾಳಿ ದಲ್
ಕರಿಕು ಕನಲ್ದು ಕಾಯ್ದು ವಿರಹಾಗ್ನಿ ದಲೊಪ್ಪುವ ಕೆಯ್ಕೊಳಂ[6] ದಲಾ
[7]ಗುರಿ ಪವನಂ[7] ದಲೆಂಬಿನ[8]ಮನಂಗನ ಬೇಂಟೆಯ [9]ಬಿಂದದಂತೆ ಬಂ
ದಿರ್ದ್ಪೊಸಸುಗ್ಗಿ ಕೆಯ್ಗಱಿಯೆ ಕಣ್ಗೆಸೆದಿರ್ದುವು ನಂದನಾಳಿಗಳ್ ೪೮೬

(ಪೊನ್ನನ ಶಾಂತಿಪುರಾಣಂ ೭, ೧೨೪)

೨ ಮಾವಿನ ಕೊನೆ ಮಾವಿನ ಸನೆ
ಮಾವಿನ ಪೂ ಮಾವಿನೆಳೆಯ ಮಿಡಿ ಮಾವಿನ ಕಾಯ್
ಮಾವಿನ ಪಣ್ಣೆಂದು ಜನಂ
ಭಾವಿಸೆ ಸರ್ವಾಂಗಸುಂದರಂ ಮಾವೆ ವಲಂ ೪೮೭

೧ ನೀಯನೇಂ (ಮ): ನೀಯನೆಂ (ನ) ೨-೨ ಗ ಕಾವ್ಯೆ (ಕಾ); ಗಕೇವ್ವೆ (ನ) ೩ ಬಗಯಾ (ಮ) ೪ ಕಾವ್ಯಾ (ಮ, ನ) ೫-೫ ದಲಾಟಿಸುವವಂ ಮುದನಂ (ಮ, ನ); ದಲಾ ಡಿಸುವವಂ ಮುದನು (ಮೈ, ನ); ದಲೊಡ್ಡಿಸುವವಂ ಮಧು ದಲ್ (ಪ) ೬ ಕೆಯ್ಬಸಂ (ಪ) ೭-೭ ನುರಿಪ ನಲಂ (ನ) ೮ ವ (ಮೈ) ೯-೯ ಬೀಜದಂದದಿಂ|ಬರೆ (ಮ, ಮೈ, ನ); ಬಿಂದದಂದದಿಂ|ದಿರೆ (ಪ)

ಉತ್ಪಲಮಾಲೆ

೩ ವಿಕ್ರಮವಹ್ನಿ ಮುನ್ನಳುರ್ದುಕೊಂಡು[1]ದು ತನ್ಮನಿಯಂ ಗಡಶ್ವಮೇ
ಧಕ್ರತು ಧೂಮ[2]ವಾದುದು ಗಡಂ ಬೞಿಯಂ ಶಿಖಿ ಧೂಮಯೋನಿಯೆಂ
ಬೀ ಕ್ರಮಮೆಂತು ಪೇೞಿಮೆನೆ ವಿಕ್ರಮಯಜ್ಞವಿ[3]ಧಾನಮಂ ಧರಾ
ಚಕ್ರಮೆ ಮೆಚ್ಚಿ ಬಣ್ಣಿಸೆ ಜಸಂಬಡೆದಂ ಪೊಲಕೇಶಿವಲ್ಲಭಂ ೪೮೮

ದ್ರುತವಿಳಂಬಿತವೃತ್ತಂ

೪ ತೊಳಗೆ ಪೊನ್ನರಥಂ ರಥವಾಜಿಗಳ್[4]
ಕಿಳಿಱೆ ವೀರರಸಂ ಕರೆಗಣ್ಮೆ ಕಂ
ಟಳಿಸೆ ಮೆಯ್-ನವಿರಗ್ಗಳನೊಪ್ಪಿದಂ
ಗಳ ಸರಿತ್-ಸುತನಾಹವಲಂಪಟಂ ೪೮೯

ಉತ್ಪಲಮಾಲೆ

೫ ಅಂಕುರದಿಂ ಪ್ರವಾಳಚಯದಿಂ ನವಕುಟ್ಮಲಶೋಭೆಯಿಂ ಬೆಡಂ
ಗಂ ಕುಡುತಿರ್ಪ ಪುಷ್ಪರುಚಿಯಿಂ ವಿಳಸತ್ಫಳಸಂಕುಳಂಗಳಿಂ
ಪಂಕರುಹಾಸನಂ ಬರೆದು ಬರ್ಚಿಸಿ[5]ದಂತಿರೆ ನೋೞ್ಪೊಡೆತ್ತಲುಂ
ತಾಂ ಕರವೊಪ್ಪಿ ತೋಱುವುದು ಬಂದ ಬಸಂತ[6]ಮೊಳೊಂದು ಮಾಮರಂ[6]

೬ ಪಗಲೊಪ್ಪದು ಶಶಿ ನಿಶೆಯೊಳ್
ಸೊಗಯಿಸದರವಿಂದಮುದಱಿನಂತೆರಡುಮನೆಂ
ತು ಗಡ ಸಮನೆಂಬೆನಾ ಶಿಶು
ಮೃಗನಯನೆಯ ಪಗಲುಮಿರುಳುಮೊಪ್ಪುವ ಮೊಗಮಂ ೪೯೧

ರಥೋದ್ಧತವೃತ್ತಂ

೭ ಕೀಱಿ ಪೌರುಷಮನಾತ್ಮಪುಣ್ಯದಿಂ
ಬೀಱಿ ಮಾಡದೆಸಪೊಂ[7] ವಿರೋಧಿಯಂ
ಮೀಱುಗುಂ[8] ಪೆಱಮೆಱಂಕೆಯೊಂದಱಿಂ
ಪಾಱಲಾರ್ಕುಮೆ ಪತತ್ರಿರಾಜನುಂ ೪೯೨

೧ ಕೊಂದು (ನ) ೨ ಧೂತ, ಮಾತು (ನ) ೩ ನಿ (ಮು, ನ) ೪ ಯೊಳ್ (ಮ್ಯೈ, ನ) ೫ ಚಿತ್ರಿಸಿ (ನ) ೬-೬ ದ ನಂದನಾಳಿಗಳ್ (ಮು, ಮ್ಯೈ, ನ) ೭ ದೆಸೆಪಂ (ನ) ೮ ತುಂ (ನ)

೮ ಆ ಕಥೆ ಮತ್ತೆಂತೆಂದೊಡೆ
ಭೀಕರಕರಿಮಕರನಿಕರಭಿನ್ನತರಂಗಾ
ನೀಕಲವಣಾಂಬುರಾಶಿ[1]ವೃ
ತಾಕೃತಿ[1]ಕಮನೀಯಮುಂಟು ಜಂಬೂದ್ವೀಪಂ ೪೯೩

ಪೊನ್ನನ ಶಾಂತಿಪುರಾಣಂ ೧,೫೬

ಉತ್ಪಲಮಾಲೆ

೯ ಬಿಚ್ಚತಮಿರ್ದು ಕಣ್ಣ ಪಸಮೋಡುವಿನಂ ಸಲೆ ನೀನೆ ನೋಡ ಪೆರ್-
ಮುಚ್ಚರನಿಕ್ಕಲೆನ್ನ ಭುಜದಂಡಮೆ ಸಾಲದೆ ಕೆನ್ನಮೆಲ್ಲಿಯುಂ
ಮುಚ್ಚದೊನಿಲ್ಲ[2] ನಿನ್ನ[3]ವನಿನ್ನ[4]ದಱಿಂ ಗಳ ನೀನೆ[4]ಯಾನಕ
ವ್ಯಚ್ಚಿ[5]ತನಯರ್ ತ್ರಿಶಕ್ತಿಯುತನಯರ್ ವಿಜಗೀಷುವಯಸ್ತ್ರವೈರಿಯಯರ್ ೪೯೪

(ಉಱಿದುವರ್ಕಮಿಾ ತೆಱದಿಂ ನೋಡಿಕೊಳ್ವುದು)

ಇದು ಕಾವ್ಯಮಲವ್ಯಾವೃತ್ತಿಯೊಳ್

ವಾಕ್ಯ-ವಾಕ್ಯಾರ್ಥದೋಷಾನುಕೀರ್ತನಪ್ರಕರಣಂ ಸಮಾಪ್ತಂ

ಗೀತಿಕೆ

ಈ ಪೇಳ್ದ ಮಾಱ್ಕೆಯಿಂ ದೋಷಾ
ಲೇಪಂ ಪೊರ್ದದಂತಿರೆ ಸನ್ನಿಬಂಧ
ವ್ಯಾಪೃತನಕ್ಕೆ ಗುಣವದರ್ಥಂ
ವ್ಯಾಪಕಮಾಗೆ ಕವಿತ್ವತತ್ತ್ವದೊಳ್ ೪೯೫

ಪುಷ್ಪಿತಾಗ್ರವೃತ್ತಂ

ಸಮುಚಿತತಕೃತಿದೋಷದೂಷ್ಯಮಾರ್ಗ
ಕ್ರಮಪರಿಭಾವಿತಚಿತ್ತವೃತ್ತಿಯಪ್ಪೊಂ
ಗಮಳಿನಕವಿತಾಗುಣೋದಯಶ್ರೀ
ಸಮನಿಸುಗುಂ ಸತತಾಭಿಯೋಗದಿಂದಂ ೪೯೬

೧-೧ ವೃ।ತಾಕೃತ,ಕೃ।ತಾಕೃತ (ನ) ೨ ನಲ್ಲ (ಮು, ಮೈ, ನ) ೩ ನೀಸ (ಮೈ) ೪-೪ ಯಾನಕಾ।
ಬ್ಯಚ್ಯು (ನ) ೫ ಮುದಿ (ನ)

ಉತ್ಪಲಮಾಲೆ

ಸಾರವಿಚಾರಬಂಧುರಮತಿಪ್ರಸರಂ ಪರಿಪಕ್ವಶಾಸ್ತ್ರಸಂ
ಸ್ಕಾರಸುಪೇತಕೌತುಕರಸಂ ವಿದಿತಾಗಮಲೋಕವೃತ್ತಸು
ತ್ಸಾರಿತಮತ್ಸರಂ ಸುಜನವತ್ಸಲನೆಲ್ಲಿಯುಮಾತನೆಂದು ಕೆ
ಯ್ವಾರದೆ ಬಣ್ಣಿಕುಂ ವಿಬುಧಮಂಡಳಿ ಪಂಡಿತ ನಾಗವರ್ಮನಂ ೪೯೭

ಇದು ಸಕಳಸುಕವಿಜನಮನಸ್ಸರೋಜನೀರಾಜಹಂಸಾಯಮಾನಾನೂನ
ಕವಿತಾಗುಣೋದಯಂ ಶ್ರೀನಾಗವರ್ಮಪ್ರಣೀತಮಪ್ಪ
ಕಾವ್ಯಾವಲೋಕನದೊಳ್

ಕಾವ್ಯಮಲವ್ಯಾವೃತ್ತಿಯೆಂಬುದು ದ್ವಿತೀಯಾಧಿಕರಣಂ ಸಮಾಪ್ತಂ

೩ ಗುಣವಿವೇಕಾಧಿಕರಣಂ

ಮತ್ತೇಭವಿಕ್ರೀಡಿತಂ

ಇದು ಸೌಂದರ್ಯಗುಣಪ್ರಕಾಶವಿದು ತಾನಗ್ರಾಮ್ಯತಾಧಾನದಿಂ
ತಿದು ಭಾಸ್ವತ್ಪರಭಾಗರಮ್ಯವಿದು ಬಂಧಾಶ್ಲೇಷ[೧]ವಿಚ್ಛಿತ್ತಿಗಾ
ಸ್ಪದಮೆಂದಿಂತು[೨]ಚಿತಪ್ರಯೋಗ[೩]ವಿಧಿಯಿಂ ಸಯ್ತುಪ್ಪಿನಂ[೩] ತಿರ್ದಿ ಪೇ
ಳ್ವುದು ಪೂಮಾಲೆಯುನಿಂಬಿನಿಂ ಸಮೆವವೊಲ್ ಸತ್ಕಾವ್ಯಮಂ ಕಬ್ಬಿಗಂ ೪೯೮

೧ ಮಾರ್ಗವಿಭಾಗದರ್ಶನಪ್ರಕರಣಂ

ಸೂತ್ರಂ ೧೧೮

ನಿರತಿಶಯಕಾವ್ಯಶೋಭಾ
ಕರಂಗಳಾಗಿರ್ಪ ಧರ್ಮಮವು ಗುಣಮಕ್ಕುಂ
ಪರಮಪುರಾಣಕವೀಶ್ವರ
ನಿರೂಪಿತಂಗಳ್ ವಿಚಿತ್ರಮಾರ್ಗಯುತಂಗಳ್ ೪೯೯

ಸೂತ್ರಂ ೧೧೯

ಸಮಸಂಶ್ಲಿಷ್ಟಾರ್ಥವ್ಯ
ಕ್ತಿ ಮಧುರ ಕಾಂತ ಪ್ರಸನ್ನ ಸುಕುಮಾರೌಜಃ
ಸಮಭಿಮತೋದಾರಾಹ್ವಯ
ಸಮಾಧಿಗಳ್ ಕೃತಿಗುಣಂಗಳೀರಯ್ದುಕ್ಕುಂ ೫೦೦

ಅದೆಂತೆನೆ:

ಸೂತ್ರಂ ೧೨೦

ಸಮಮೆಂಬುದು ಬಂಧದೊಳವಿ[೪]
ಷಮಂ ಮೃದುಸ್ಫುಟವಿಮಿಶ್ರ[೫]ವಿನ್ಯಾಸಪದ[೫]
ಕ್ರಮದಿಂ ಮೂಱು ತೆಱಂ ಬಂ
ಧಮುಂ ಯಥಾರ್ಥಾನುವೃತ್ತಿಯಿಂ ವರ್ತಿಸುಗುಂ ೫೦೧

೧ ಬಂದಾಶೇಷ (ನ) ೨ ದೆಂದು (ಮೈ, ನ) ೩-೩ ವಿಧಿಯಂ ಸಯ್ತಿರ್ಪಿನಂ (ನ) ೪ ದೊಳ್ ವಿ (ಮೈ) ೫-೫ ವರ್ಣೋದಾತ್ತ (ಮು, ಮೈ, ನ)

ಉದಾಹರಣೆ : ಮೃದುಬಂಧಕ್ಕೆ :

೧ ಶರದದೊಳೊನಲ್ದು ಬಿಡುತುಂ
ಧರೇಂದ್ರಗಿರಿ[೧]ಕರಿಗಳುಡಿಯೆ ಪಾಯ್ದುವು ಕಾಯ್ಪಿಂ
ಕರಟತಟಗಳಿತಮದಜಳ
ಪರಿಮಳಸಮವಿದಳದಳಿಕುಳಂ ನಗಕುಳಮಂ ೫೦೨

ಸ್ಫುಟಬಂಧಕ್ಕೆ :

೨ ಅಂಭೋನಿಧಿಗಂಭೀರಂ
ಶುಂಭ[೨]ದ್ಭುಜಗೇಂದ್ರಭೋಗನಿಭಭುಜಪರಿಘಂ
ಜಂಭಾರಿವೈಭವಂ ವಿ
ಶ್ವಂಭರೆಗಧಿ[೩]ನಾಥನಶ್ವಕಂಠಂ ಖಚರಂ ೫೦೩

ಮಿಶ್ರಬಂಧಕ್ಕೆ :

೩ ಹಸ್ತಾವಚಯದಿನುರು[೪]ಪು
ಷ್ಪಸ್ತಬಕಮನುನ್ಮದಭ್ರಮದ್ಭ್ರಮರಪರಿ
ತ್ರಸ್ತಮತಿ ಮೆಲ್ಲನೆಱಗಿ ಘ
ನಸ್ತನವತಿ ಕೊಯ್ದಳಾಮ್ರಶಾಖೆಯೊಳೊರ್ವಳ್ ೫೦೪

ಸೂತ್ರಂ ೧೨೧

ಅಶಿಥಿಲಪದಚಯರಚನಾ
ತಿಶಯಂ ಸಂಶ್ಲಿಷ್ಟಮೆಂಬುದಕ್ಕುಮನೇ[೫]ಯಂ
ವಿಶದಾರ್ಥಂ ಶಬ್ದಾನ್ವಯ
ವಶ[೬]ಮರ್ಥವ್ಯಕ್ತಿಯೆಂದು ಪೇೞಲ್ಪಡೆ[೭]ಗುಂ ೫೦೫

ಉದಾಹರಣೆ : ಸಂಶ್ಲಿಷ್ಟಕ್ಕೆ :

೧ ಅದಿರದಿದಿರಿದಿರ[೮]ನೆಯ್ತಂ
ದೊದಱುತ್ತುಂ ಪೊಕ್ಕು ಪಟುಪವಿಪ್ರತಿಮಭುಜಂ
ಕೆದಱೆ ಮೆಱೆದೋವದೆಚ್ಚಂ
ಕದನದೆ ವಿದ್ವಿಡ್ಬಳಪ್ರಧಾನರನಿಂದ್ರಂ ೫೦೬

೧ ದುರುಗಿಂಚರ (ಮೈ,ನ) ೨ ಕುಂಭ (ಮ) ೩ ಭಿ (ಮ) ೪ ಹಸ್ತಾವನಿಚಯಮಂ (ಮೈ,ನ); ಹಸ್ತಾವಶಿಚಯಮಂ (ನ) ೫ ಮೇ (ನ) ೬ ಮಸ (ಮೈ,ನ) ೭ ಪಡು (ಮೈ) ೮ ದಿರದಿದಿರ (ಮೈ)

ಅರ್ಥವ್ಯಕ್ತಿಗೆ :

೨ ಓರಂತೆ ಪರೆದ ನವಸಂ
ಧ್ಯಾರುಚಿಯಿಂದಪರದಿಗ್ವಿಭಾಗದೊಳಿನಿಸೊಂ
ದಾರಕ್ತವಾಗಿ ನೇಱಲ
ದೋರೆಯನನುಕರಿಪುದಾದುದಾಗಸಮಾಗಳ್ ೫೦೭

ನೇಯಕ್ಕೆ :

೩ ಆರಕ್ತವಾಗಿ ನೇಱಲ
ದೋರೆಯನನುಕರಿಪುದಾದುದಾಗಸಮೆನೆ ಸಂ
ಧ್ಯಾರುಚಿಯಿನಕ್ಕುಮೆಂದವ
ಧಾರಿಸಿ ನೆಱೆಯಱಿದು ಕೊಳ್ವುದಿದು ನೇಯಾರ್ಥಂ ೫೦೮

ಸೂತ್ರಂ ೧೨೨

ಅಗ್ರಾಮ್ಯವಚನವೃತ್ತಿ ಸ
[1]ಮಗ್ರರಸಾಪೂರ್ಣಮಪ್ಪುದದು ಮಧುರಂ[1] ನಿ
ರ್ವ್ಯಗ್ರಪದ[2]ವಿಸ್ಮೃತಿ ಪರಚಿ
ತ್ತ[2]ಗ್ರಹಣಸಮರ್ಥಮಪ್ಪುದಂತದು ಕಾಂತಂ ೫೦೯

ಉದಾಹರಣೆ : ಮಧುರಕ್ಕೆ :

೧ ಅಳಿಕುಳರುತಿಗಳಿನವನತ
ಫಳತರುಗಳಿನುಚಿತಕುಸುಮಗಂಧದಿನಬಳಾ
ವಿಳಸನದಿಂದೀವುದು ಗಂ
ಧಿಳವಿಷಯಂ ಸಕಳವಿಷಯರಸರಸಿಕತೆಯಂ ೫೧೦

(ಪಂಪನ ಆದಿಪುರಾಣ ೧,೫೭)

ಕಾಂತಕ್ಕೆ :

೨ ಅರಸಾಳ್ತನಮೆನ್ನದೆ ಕೇಳ್
ಪರಮಾರ್ಥಮನೀಗಳೆನಗೆ[3] ಸಾಮ್ರಾಜ್ಯಪದಂ
ದೊರೆಕೊಂಡಂತಾದುದು ಪೋ
ಲ್ತಿರೆ ದೇವರ ಬರವೆ ದೇವದೇವರ ಬರವಂ ೫೧೧

೧–೧ ಮಗ್ರತೆ ಸಂಪೂರ್ಣಮಪ್ಪ ಮಧುರತರಂ (ಮೈ) ೨–೨ ಸ್ಥಿತಿರಚಿತೋ।ಪ (ನ) ೩ ಳೆಮ್ಮ (ನ)

ಸೂತ್ರಂ ೧೨೩

ಅತಿರೂ[1]ಢಾರ್ಥಮುಗೂಢಂ
ಪ್ರತೀತಿ[2]ಸುಭಗಂ ಪ್ರಸನ್ನಮೆನೆ ಪಡೆಗುಮುಪಾ
ಕೃತನಿಷ್ಠುರಾಕ್ಷರಂ ಲಾ
ಲಿತಲಲಿತಪದಪ್ರಕಾರಮದು ಸುಕುಮಾರಂ ೫೧೨

ಅವರ್ಕನುಕ್ರಮುಪ್ರಯೋಗಂ :

೧ ಮಡು[3]ಗಳೊಳಗಲರ್ದ ನೆಯ್ದಲ
ಕಡುಗಂಪುಮನಿವಱ ಕಂಪೆ[4] ಗೆಲ್ದುವು ಸಾಸಿರ್ಮ-
ಮಡಿಯೆನೆ ಪೊಂಬಣ್ಣದ ಕೆಂ
ಪಿಡಿದಿರೆ ಸೊಗಯಿಪುವು ಗಂಧಶಾಲಿವನಂಗಳ್ ೫೧೩
(ಪಂಪನ ಆದಿಪುರಾಣ ೧,೬೦)

೨ ಮಣಿಭವನಂಗಳ ರುಚಿಗಳ್[5]
ಪೆಣೆದು ನಭೋಂಗಣದೊಳಮರಚಾಪವಿಳಾಸ
ಕ್ಕೆಣೆಯಾಗಿರೆ ಬಹುವಿಧದಿಂ
ಕುಣಿವುವು ಕಾರ್ಗೆತ್ತು ಕೇಗಿ ಸೋಗೆನವಿಲ್ಗಳ್ ೫೧೪

ಸೂತ್ರಂ ೧೨೪

ಪಿರಿದುಂ ಸಮಾಸಮಾಗಿರೆ
ವಿರಚಿಸುವುದು ತಾನದೋಜಮುಕ್ಕುಂ ಲೋಕೋ
ತ್ತರವರ್ಣನಂ ವಿಶೇಷಣ
ಪರಪ್ರಕರ್ಷೋಕ್ತಿಯುಕ್ತಮಪ್ಪುದುದಾರಂ ೫೧೫

ಉದಾಹರಣೆ : ಓಜಕ್ಕೆ :

೧ ಬಕಕುರರಪಕ್ಷವಿ[6]ಕ್ಷಿ
ಪ್ತಕಂಜಕಿಂಜಲ್ಕಪುಂಜಪಿಂಜರಿತಾಚ್ಛೋ-
ದಕಪರಿಪೂರ್ಣತಟಾಕ
ಪ್ರಕರಸರೋನಿಕರರಂಜಿತಾಶಾವಳಯಂ ೫೧೬
(ಪಂಪನ ಆದಿಪುರಾಣ ೧,೫೮)

೧ ಗೂ (ಮ) ೨ ತ (ಮ, ಮೈ, ನ) ೩ ಮುಡಿ (ಪ) ೪ ಕಂಪು (ಹಾ, ನ) ೫ ಗಳ (ಮೈ)
೬ ನಿ (ನ)

ಉದಾರಕ್ಕೆ :

೨ ಬಹುಪೋಷಣದಿಂ ಮಾವಿನ
ಸಹಕಾರದ ಸೊನೆಯ ಸೋನೆ ಬೆಳೆಯಿಸೆ ಬೆಳೆಗುಂ
ಮಹಿಯೆನೆ ಬಣ್ಣಿಸುವ ಪಿತಾ
ಮಹಂಗಮರಿದೆಗ್ಗ ಮೊಗ್ಗೆ ನಿನಗಮದೆನಗಂ ೫೧೭

(ಪೊನ್ನನ ಶಾಂತಿಪುರಾಣ ೧,೬೧)

ಮತ್ತಮಲ್ಲಿ ಶ್ಲಾಘ್ಯವಿಶೇಷಣಕ್ಕೆ :

೩ ಮನೆಮನೆದಪ್ಪದೆಯುಂ ಪಳಿ
ಕಿನ ಕೇರ್ಗಳ್ ಪವಳದೆಸೆವ ಕಂಬಂ ಕರ್ಕೇ
ತನದ ತೊಲೆ ಪೊನ್ನ ಪೊಸಜಂ
ತೆ ನೀಲದಡಿಗಲ್ಗಳೆಂದೊಡೇವಣ್ಣಿಪುದೋ ೫೧೮

ಸೂತ್ರಂ ೧೨೫

ಪೆಱವಱ ಧರ್ಮಂಗಳನೇ
ತೆಱದಿಂದಂ ತಂದು ಪೆಱವಱೊಳ್ ಪತ್ತಿಸಿ ಕ
ಣ್ದೆಱೆಯೆ ಚತುರೋಕ್ತಿ ಕೃತಿಯೊಳ್
ನೆಱೆದಿರೆ ಪೇಳ್ವುದು ಸಮಾಧಿಯೆನೆ ಪೆಸರ್ವಡೆಗುಂ ೫೧೯

೧ ವಿನಿಮೀಲಿತನೀಲಾಂಬುಜ
ವನಮುನ್ಮೀಲಿತನವೀನಕಮಲವನಂ ತದ್-
ದಿನಮುಖದೊಳ್ ಮಧುಪಾಳಿಗೆ
ಜನಿಯಿಸಿದುವು ಪಟೆಯ ಸುಸಿಲ ಪೊಸಸುಸಿಲಿಂಪಂ ೫೨೦

ಸೂತ್ರಂ ೧೨೬

ಇವು ನಿಯತಂ ದಕ್ಷಿಣದೇ
ಶವರ್ತಿ ಕವಿರಾಜಮಾರ್ಗದೊಳ್ ನೆಗಳ್ಗುಂ ಮ
ತ್ತವಱ ವಿಪರ್ಯಯವೃತ್ತಿಯೆ
ಬವರಿಸುಗುಮುದೀಚ್ಯಮಾರ್ಗದೊಳ್ ಪ್ರಚುರತೆಯಿಂ ೫೨೧

೧ ದೋಷಮುನಿಂ (ಮ, ಮೈ); ಘೋಷಮುನಿಂ, ವರ್ಷಮುನಿಂ (ನ) ೨-೨ ಜಂ। ತಿನಿಂದಡರೆಕ (ಮ)

ಸೂತ್ರಂ ೧೨೭

ವೈದರ್ಭಗೌಡಮಾರ್ಗವಿ
ಭೇದಂ ಬಗೆವೊಡೆ ಗತಾನುಗತಿಕವಿದೆಂದೊ
ಲ್ದಾದರಿಪರ್ ಕೆಲಬರ್ ಸಂ
ವಾದದೊಳೆರಡುಂ ಸಮರ್ಥ[1]ಮಪ್ಪುದಱಿಂದಂ ೫೨೨

ಇದು ಗುಣವಿವೇಕದೊಳ್ ಮಾರ್ಗವಿಭಾಗದರ್ಶನಪ್ರಕರಣಂ ಸಮಾಪ್ತಂ

೧ ಸದರ್ಥ (ನ)

೨ ಶಬ್ದಾಲಂಕಾರನಿರ್ಣಯಪ್ರಕರಣಂ

ಸೂತ್ರಂ ೧೨೮

ನಿಜದಿಂದಂ ಚೆಲ್ವೆಗೆ ವಿಬು
ಧಜನ[೧]ಪ್ರಿಯೆಗಖಿಳಲೋಕವಿನುತ[೧]ಪ್ರಮದಾ
ಗ್ರಜೆಗೆ ಕೃತಿಸತಿಗೆ[೨] ಶಬ್ದಾ
ರ್ಥಜಾತಮಂತೆರಡು ತೆಱದಲಂಕೃತಿಯಕ್ಕುಂ ೫೨೩

ಸೂತ್ರಂ ೧೨೯

ಅವಱೊಳ್ ಶಬ್ದಾಲಂಕಾ
ರವಿಭಾಗಂ ಯಮಕಮೆಸೆವನುಪ್ರಾಸಂ ಚಿ
ತ್ರವಿಚಿತ್ರಭಿತ್ತಿ ವಕ್ರೋ
ಕ್ತಿವಿಶೇಷಮುಮೆನೆ ಚತುರ್ವಿಧಂ ತಾನಕ್ಕುಂ ೫೨೪

ಅವಱೊಳಗೆ: **ಸೂತ್ರಂ ೧೩೦**

ಪದವರ್ಣವ್ಯಾವೃತ್ತಿ ದ
ಲದು[೩] ಯಮಕಂ ವ್ಯವಹಿತಾವ್ಯ[೪]ಪೇತಾತ್ಮಂ ಮ
ತ್ತದು ಪಾದದಾದಿಮಧ್ಯಾಂ
ತದೊಳಕ್ಕುಮನೇಕಭೇದನಿಯತಸ್ಥಿತಿಯಿಂ ೫೨೫

ಲಕ್ಷ್ಯಂ: ಅಲ್ಲಿ ವ್ಯವಹಿತಕ್ಕೆ :

೧ ಮಾಣಿಕದಂತೊಪ್ಪಿದನೀ
ಮಾಣಿ ಕರಂ ಕಱು[೫]ಯೆ ಚೆಲ್ವುವಡೆದೆಂಬಿನೆಗಂ
ಕ್ಷೋಣಿಯನಳೆಯಲ್ ಮುನ್ನಂ
ಕ್ಷೋಣಿಮನಂ[೬] [೭]ವಿಷ್ಣು ತಾನೆ[೭] ವಾಮನನಾದಂ ೫೨೬

೨ ತಿಂದು ಕಪೀನ[೮]ಫಲಂಗಳ
ನೊಂದೊಂದೆಡೆಗಳೊಳಲಂಪು ಪೋಪನ್ನೆವರಂ
ತಿಂದು ಕಪೀನ[೮]ಕುಳಂ ಪ್ರತಿ
ಯಂದದಿನಿರ್ಪುದು[೯] ನಿಯುಕ್ತವನ್ಯಾಶನದಿಂ ೫೨೭

೧–೧ ಸ್ತುತೆಗಭಿವಿನೂತಕೀರ್ತಿ (ನ); ಪ್ರಿಯೆಗಭಿವಿನೂತಕೀರ್ತಿ (ಮೈ) ೨ ಕೃತಿ ನಮಗೆ (ನ) ೩ ಲದೆ (ಮ,ಮೈ,ನ) ೪ ತವ್ಯ (ನ) ೫ ಕಳೆ (ನ) ೬ ಕ್ಷೂಣಮನಂ (ಮೈ,ನ); ಕ್ಷೋಣಿವರಂ (ನ) ೭–೭ ತಾನೆ ವಿಷ್ಣು (ಮ) ೮–೮ ಕಪಿನವ (ಮೈ) ೯ ನಿರ್ಪುವು (ಮ)

೩ ಫಲಸಾರಸನಮವಂತೆ
ತ್ತಲುಮೊದವಿರೆ ಕುಳಿರ್ವ ಪುೞಿಲೊಳಿರ್ದೆಗೊಳ್ವಿನೆಗಂ
ಕಲರುತಿಯಂ ಪಾಡಿದುದು
ತ್ಪಲಸಾರಸನಂ ಪುಳಿಂದಲಲನಾನಿಕರಂ ೫೨೮

೪ ಆಲೋಚಂ ಸಾಲದೆ ಶಿಶು
ಪಾಲನನುಱದಿಕ್ಕಿ ಮಿಕ್ಕ ಭುವನಸ್ಥಿತಿಯಂ
ಪಾಲಿಸು ನೀಂ ನಿನಗೆ ಜಗತ್-
ಪಾಲನವಿಜ್ಞಾನಮಂ ಪೆಱರ್ ಪ್ರಕಟಿಪರೇ ೫೨೯

೫ ಸರಭಸದೆ ಕಾಲ[೧]ಯಮುಸಾ
ಲ್ವ ರುಕ್ಮಿ[೧]ಬಾಣದ್ರುಮಾದಿಗಳ್ ವೆರಸಖಿಲಾ
ಸುರಚಕ್ರಂ ನಿನ್ನ ವಿಭಾ
ಸುರಚಕ್ರದ ಬಾಯ್ಗೆ ಬಾರದಿರದು ಮುರಾರೀ ೫೩೦

೬ ತಱಿ[೩]ಸಂದಿಸೆ ಕರಿಘಟೆಯಂ
ತುಱು[೨]ಗಿರೆ ಪಾಯ್ದುವು ಶಿಲೀಮುಖಂ ಪುಷ್ಕರದೊಳ್
ಗಜಱಿ[೩] ಸಂದಿಸೆ ಮೊರೆದೊರ್ಮೊದ
ಲಿಱುಗುವ ತೆಱದಿಂ ಶಿಲೀಮುಖಂ ಪುಷ್ಕರದೊಳ್ ೫೩೧

೭ ನೆಯ್ದಲೆಸಳಿವಱ ಪೋಲ್ವೆಯ
ನೆಯ್ದಲೆ ದಲ್ ಪಡೆದುವಿಲ್ಲ ಲೋಕಮನಲೆಯ
ಲ್ಕಯ್ದು ಮಲರ್ಗಣೆಗ[೪]ಳಿರ್ಕೆಮ
ಕಯ್ದು[೪]ಮನೋಜಂಗೆನಿಪ್ಪವಾಕೆಯ ಕಣ್ಗಳ್ ೫೩೨

೮ ಮಲರೆ ತಮದೊಡ್ಡು ಪಂಕಜ
ಮಲರೆ ವಿನೀಲೋತ್ಪಲಾಳಿ ಮುಗಿಯೆ ಖಲರ್ ಸಂ
ಚಲಿಸುತ್ತುಮುಗಿಯೆ ಜಗತೀ
ವಿಲೋಚನಂ ಮೂಡಿದಂ ವಿಲೋಚನನಾಗಳ್ ೫೩೩

೧-೧ ಯಮುನುಂ|ಸುರುಚಿರ (ಮು, ಮೈ, ನ) ೨ ಮುಱು (ನ) ೩ ತಱಿ, ಕಱಿ (ನ) ೪-೪ ಳಿರ್ಕೆಯ್|ಗೆಯ್ದು (ಮೈ)

೯ ಅಮಳ್ಗಳ್ ನಯವಿಕ್ರಮಗುಣ
ದಮಳ್ಗಳ್ ನೃಪಶಾಸ್ತ್ರಶಸ್ತ್ರಪರಿಣತರವರಂ[೧]
ಸಮರದೊಳುವಗ್ರಶೌರ್ಯ್ಯಂ
ಸಮರಸ[೨]ಸಂಪನ್ನನಾವನುಱದಾಂಪನ್ನಂ ೫೩೪

೧೦ ಮಂತಣಕಂ ಚದುರರ್ ಗಡ
ಮಂತಣಕಂ ನೆಗೞ್ತೆ ಬಂದರೆನಿಸಿರ್ದ್ದುಂ ತಾಂ[೩]
ಮಂತಣಮುಸಿರದೆ ಕೆಲರಾ[೪]
ಮಂತಣಮುಂಡಂತೆ ಪೆಱರ ನಯದೊಳೆ ತಣಿವರ್ ೫೩೫

೧೧ ಈ ಧರೆಯ ಪೆಂಡಿರುದ್ಧ್ರುಪ
ಯೋಧರೆಯ ಮನೋಜರಾಗರಸಪೂರಿತಬಿಂ
ಬಾಧರೆಯ ಕಂಬುಕಮ್ರಶಿ
ರೋಧರೆಯ ಬೆಡಂಗನಾರುಮೇನೆಯ್ದುವರೇ ೫೩೬

ಉತ್ಪಲಮಾಲೆ (ಪಂಪನ ಆದಿಪುರಾಣ ೪, ೪೬)

೧೨ ಪನ್ನಗಕನ್ಯೆಯೊರ್ವಳುಪದೇಶಮನಿತ್ತಳೊ ನಾಗಬಂಧಮುಂ[೫]
ಪನ್ನಗಕನ್ಯೆಯೋ ಜಿತೆಯೊ ಮೆಯ್ಯೆರಡಿಲ್ಲೆನಿಪಪ್ಪುಗಳ್ಗೆ [೬]ತತ್-
ಪ[೬]ನ್ನಗಕನ್ಯೆಯಪ್ಪುಗಳೆ ಮುಪ್ಪುರಿಗೂಡಿದುವೆಂಬ ಮಾತು ಮೆ
ಲ್ಪನ್ನಗ[೭]ಕನ್ಯೆಗಳ್ಪುಗು[೭]ಮಿವರ್ಕೆರ್ೞವಜರ್ ನಿನಗಾರೊ ನಲ್ಲಳೇ ೫೩೭

ಪಾದಾದಿಯಮಕಕ್ಕೆ :

೧೩ ಉಪದಾತ್ತನುತೋನ್ನತಮಂ
ದ್ವಿಪಮದಪರಿಪೂರ್ಣಗಿರಿಸರಿತ್‌ಸಂತತಿ[೮]ಯಂ
ಉಪ[೮]ದಾತ್ತನುತೋನ್ನತಮುಂ[೯]
ತಪನಕರೋತ್ತಪನತಪ್ತತಪನೋಪಲಮುಂ ೫೩೮

೧ ರವರುಂ (ಮ, ನ) ೨ ಸಮರದ (ನ) ೩ ತಾ (ನ) ೪ ಕೆಲರುಂ (ಮ, ಮೈ, ನ) ೫ ಬಂಧಧಾ (ಮ, ಮೈ, ನ) ೬-೬ ತಾ|ಪ್ಪ (ಮ) ೭-೭ ಕನ್ಯೆ ಪೆರ್ಚುಗು (ನ) ೮-೮ ಯು|ನ್ನುಪ (ಮೈ, ನ); ಯಂ|ದುಪ (ನ) ೯ ನುಂ (ಮ, ಮೈ)

ಮಧ್ಯಾಂತಯಮಕಕ್ಕೆ :

೧೪ ನಾನಾಶಶಮೃಗಧರಮಂ[1]
ಸಾನುಜತರು[2]ಶಿಖರಲಗ್ನಶಶಮೃಗಧರಮಂ[3]
ಪೀನಸರೋಜಾಲಯಮಂ
ಮಾನೇಚರಯುವತಿಜಿತಸರೋಜಾಲಯಮಂ ೫೩೯

ಅಂತ್ಯಯಮಕಕ್ಕೆ :

ಶ್ಲೋಕ

೧೫ ಸಂದ ಸರ್ವಗತಂ[4] ಧರ್ಮ
ನಂದನಾಧ್ವರತೋಷಿತಂ
ನಿಂದು ಯಾತ್ರೇಚ್ಛೆಯೊಳ್ ಧರ್ಮ
ನಂದನಾಧ್ವರತೋಷಿತಂ ೫೪೦

ಅವ್ಯ[5]ಪೇತಕ್ಕೆ :

ವಂಶಸ್ಥವೃತ್ತಂ

೧೬ ಸರಂ ಸರಂ ಕಂತುವ ಮನ್ಮಥಾಂಬುಜಾ
ಕರಂ ಕರಂ ನೋಡೆ ಮೊಗಂ ವಳಿತ್ರಯಾಂ
ತರಂ ತರಂಗಂ ಸ್ಮರಸಿಂಧುಗಾಲತಾಂ
ಕುರಂ ಕುರಂಗಾಕ್ಷಿಯ ಮೆಯ್ಯ[6] ಮನೋಜನಾ ೫೪೧

೧೭ ಸುರರಮಣೀರಮಣೀಯ
ಸ್ವರೂಪಮತಿತರಳತರಳವಿಲಸದ್ವಿದ್ಯುತ್-
ಸ್ಫುರಿತಮೆನೆ ಪೋಲ್ತು ಕರಗಿದು
ದರಗಿದು ದಹನೋಪತಪ್ತಮೆನೆ ತತ್ಕ್ಷಣದೊಳ್ ೫೪೨

ಶ್ಲೋಕ

೧೮ ನಿನ್ನ ವಾಕ್ಯಾರ್ಥಮೆಂಬೊಂದು
ರನ್ನಕಂ[7] ಬೆಗಡಂ ಗಡಂ
ತನ್ನುಕ್ತಿಯಾಗೆ ತದ್ವಿದ್ಯ
ನನ್ನನಾದಂ ಬಲಂ ಬಲಂ ೫೪೩

೧ ನುಂ (ಮೈ,ನ) ೨ ತನು (ಮ) ೩ ಮುಂ (ಮೈ); ನುಂ (ನ) ೪ ರತಂ (ಮೈ,ನ)
೫ ಅಂತ್ಯ (ಮ) ೬ ಕಣ್ (ಕಾ) ೭ ರನ್ನಕ್ಕಂ (ಮೈ)

ವ್ಯಪೇತಾವ್ಯಪೇತಕ್ಕೆ :

೧೯ ಸಬಳಿಕೆಯಿಂ ಪಾಟಿ[೧]ಯನೊ
ಕ್ಕು ಬೇರನಂ[೨]ತಾ ಕುಬೇರನಾಯಕನತಿ ವಿ
ಕ್ಲಬಚಿತ್ತಂ ತೊಟ್ಟಗೆ ತಾ
ಗಿ ಬಾಗಿದಂ ತಾಗಿಬಾಗಿದಂ ನರನಡಿಯೊಳ್ ೫೪೪

ವರ್ಣಾವೃತ್ತಿಯಮಕಕ್ಕೆ :

ಸ್ರಗ್ಧರಾವೃತ್ತಂ

೨೦ ಚಾರೂರೂರೂಧ್ವರೂರೂ[೩]ರುರುಭುಜಶಿಖರೋದ್ಭಾಸಮಾನಾವಲೋಕಂ
ಕ್ರೂರಾರಾರಾತಿ[೪]ರಾರಾಚಮುಪಡಿ[೫]ಸುಡಿಯುತ್ತುಂ ಮುರಧ್ವಂಸಿಯೊಳ್ ಸ
ದ್ಧಾರಾರಾರಾಜಿರಾರಾಜಿತಭುಜನೊಳವಷ್ಟಂಭದಿಂ ಚೆಲ್ವ ಕೆಯ್ಮಿ
ಕ್ಕಾರಾರಾರಾಧ್ಯರಾರಾರವರವರವರ್ಗಂತೊಪ್ಪಿದಂ ನೀಲಕಂಠಂ ೫೪೫

ಸೂತ್ರಂ ೧೩೧

ಪರಿವೃತ್ತಂ ಸಂದಷ್ಟಂ
ನಿರಂತರಾವಳಿ ಸಮುದ್ಗಮೆಂಬಿವು ಮೊದಲಾ
ಗಿರೆ ಯಮಕಭೇದಮನಿತುಂ
ಪರಿಭಾವಿಸೆ ತತ್ಪ್ರಪಂಚದೊಳ್ ಪೊಕ್ಕಿರ್ಕುಂ ೫೪೬

ಉದಾಹರಣೆ : ಪರಿವೃತ್ತಕ್ಕೆ :

ಮಂದಾಕ್ರಾಂತವೃತ್ತಂ

೧ ತಾರಾತಾರಾಮಳಿನಗುಳಿಕಾಹಾರನೀಹಾರನೀಕಾ
ಶೋರುಸ್ಫೂರ್ಜತ್ಪ್ರವಿತತ[೬]ಯಶೋರಂಜಿತಾಶೇಷಲೋಕಂ
ಸಾರಾಸಾರಾದ್ಯನುಗತವಿಚಾರೋಚಿತಾತ್ಮೀಯಚಿತ್ತೋ
ದಾರಪ್ರಜ್ಞಂ ನೆಗಳ್ದನವನೀಭಾಗದೊಳ್ ನಾಗವರ್ಮಂ ೫೪೭

ಸಂದಷ್ಟಕ್ಕೆ :

ಪ್ರಹರ್ಷಣವೃತ್ತಂ

೨ ಓರೊರ್ವರ್ ಸೆಣಸಿ ತಗುಳ್ದನೇಕವಾರಂ
ವಾರಸ್ತ್ರೀಜನಮಿದಿರೊಳ್ ತುಳುಂಕೆ ನೀರಂ
ನೀರಂಧ್ರಸ್ತನತಟದೊಳ್ ಕೃತೋಪಹಾರಂ
ಹಾರಶ್ರೀಗೆಣೆಯೆನಿಸಿತ್ತು ವಾಸ್ಕಣೌಘಂ ೫೪೮

೧ ಶಾಳಿ (ಮು,ಮೈ,ನ) ೨ ದಂ (ಮು,ಮೈ,ನ) ೩ ರುಧ್ವರೋರೂ (ನ) ೪ ರಾತ್ರಿ (ನ)
೫ ಮೈಚಾನನಪಟು (ಮು,ಮೈ,ನ); ರೇರೇಚಮುಪಡಿ (ನ) ೬ ಪ್ರಕಟಿತ (ನ)

ಆವಳಿಗೆ :

೩ ಶ್ರೇಯಂ ಶ್ರೇಯಂ ದ್ವಿಷ[1]ದವ
ಸಾಯಕಸಾಯಕಪರಂಪರಂ ಲಲಿತಯುವ
ತ್ಯಾಯತನತ್ಯಾಯತನಂ
ಗೇಯೋದ್ಗಾಯತ್ಸಕಳಕಳಂ ಸಕಳಕಳಂ ೫೪೯

ಸಮುದ್ಗಕ್ಕೆ :

ಶ್ಲೋಕ
೪ ಹರಿದಾಂತಂ[2] ಬಲಂಬೆರ್ಚೆ
ಸುರಾಸುರಸಭಾಜನಂ
ಹರಿದಾಂತಂ[2] ಬಲಂಬೆರ್ಚೆ
ಸುರಾಸುರಸಭಾಜನಂ ೫೫೦

ಸೂತ್ರಂ ೧೩೨

ಬ ವ ಕಾರಂಗಳ್ ಪ ಹ ವ
ರ್ಣವೆರಡುಮವಿಭೇದದಿಂದೆ ಸಲ್ಗುಂ ಸಂಯೋ
ಗವಿಶಿಷ್ಟಮುಂ [3]ಸ್ವರೂಪಮು
ಮು[3]ವಿಕಲ್ಪದೊಳೊಂದಿ ನೆಗಟ್ಟುಮವು ದುಷ್ಕರದೊಳ್ ೫೫೧

ಲಕ್ಷ್ಯಂ : ಈ ಕಾರಾರ್ಥವ್ಯಾವೃತ್ತಿಗ್ರಹಣಮುದಕ್ಕಂ :

೧ ನವಲಕ್ಕಂ[4] ಕಟಕದೊಳಿ
ನ್ನವಲಕ್ಕಂ[4] ನಿಜ[5]ಮೆ ಪಿರಿ[6]ದು ವಿಬುಧನಿಕಾಯ
ಕ್ಕವ[7]ಳಂಬನಮಪ್ಪದರಿ
ತ್ರವಳಂ ಬಚ[7]ನೈಕಸಾರಮೆಂಬೀ ನುಡಿಯಂ ೫೫೨

೨ ಪಿಂಗಿದುದಿಲ್ಲಿನ್ನುಂ ಮನ
ದಿಂ ಗೋವರ ಗಡಣದೊಳ್ ದನಂಗಾಹಿತನಂ
ನೀಂ ಗಳದೆ[8]ತ್ತಱುವಿರ್ ಬ
ರ್ಣಂಗಂ ಬಗೆದಱುವುದರಿದನಂಗಾಹಿತನಂ ೫೫೩

೧ ದ್ವಿಪ (ನ) ೨ ದಾಂತ (ನ) ೩-೩ ಸ್ವರೂಪ।ಸ್ವ (ನ) ೪ ಲಕ್ಷ್ಯಂ (ವ್ಯೆ, ನ) ೫ ಜನ (ವ್ಯೆ, ನ) ೬ ಹರಿ (ನ) ೭-೭ ಳನ್ಯುಮನರ್ಕವಳಂ।ಬವಚ ಬವಚ (ನ) ೮ ಗೆ (ವ್ಯೆ)

೩ ಆ ಗಿರಿಯ ನಿತಂಬಂ ಶೋ
ಭಾಗುಣಮಂ ತಳೆದುದಪ್ಸರಃಕುಲಲಲಿತಂ
ಮೇಗಣ ಶಿಖರಾಗ್ರಮುಮಿಂ[೧]
ಬಾಗಿ ಮನಕ್ಕೆಸೆವುದಪ್ಸರಃಕುಲಲಲಿತಂ ೫೫೪

ಸೂತ್ರಂ ೧೩೩

ಸದೃಶಾಕ್ಷರವಿನ್ಯಾಸಂ
ಪದದೊಳ್ ಪಾದಂಗಳೊಳ್ ಪೊದಟ್ಟಿಸೆದಿರೆ ಪೇ
ೞ್ವುದನುಪ್ರಾಸಂ ನಿಯಮದಿ
ನದನಾದ್ಯಂತಂ ವಿಭಾಷೆಯಿಂ ವಿರಚಿಸುವರ್[೨] ೫೫೫

ಪ್ರಯೋಗಂ :

೧ ಚರ್ಚಲ್ ಶಶಿಶಿಶುವಂ ಕಱಿ
ಗರ್ಚಲ್ ಘನಘಟೆಯನುರ್ಚಲಮರದ್ರುಮಮಂ
ಸಾರ್ಚಲಿನನೆಂಬ ಸೊಡರನೊ
ಡರ್ಚಿದುವೆನೆ ನೀಳ್ದುವಿದಱ ಶಿಖರಕರಂಗಳ್ ೫೫೬

ಮಂದಾಕ್ರಾಂತವೃತ್ತಂ

೨ ಸೋಡಂಬಾಡಂ ಕರಿಯ ಮುಗಿಲಂ ದಂತಿಗಳ್ಗೆತ್ತು ಮಿಂಚಂ
ನೋಡಲ್ ನೀಡುಂ ಪೊಳೆವ ನಿಶಿತಾಸ್ತ್ರಾಳಿಗೆತ್ತೆತ್ತಮೆತ್ತಂ[೩]
ಕಾಡುಂ ಕೋಡುಂ ಹಯಮಯಮೆಗೆತ್ತುದ್ಘಗೇಹಂಗಳೊಳ್[೪] ಸಂ
ವ್ರೀಡಾಪೀಡಂ ವಿರಹಿಜನಮುಂದಳ್ಕಿಬೆಳ್ಕುತ್ತು[೫]ದೆತ್ತಂ ೫೫೭

ಮಾಲಿನೀವೃತ್ತಂ

೩ ಕೆಳರೆ ವಿರಹಿವೃಂದಂ ಪುಷ್ಪಿತಾಶೋಕದಿಂದಂ
ತಳರೆ[೬] ಕುಸುಮಜಾಳಂ ಬಾಳಚೂತಪ್ರವಾಳಂ
ಪೊಳೆಯೆ ಪುೞಿಲ ತಣ್ಪಂ ನೊಳ್ಳಿ ತಟ್ಟೈಸಿ ಬಿಣ್ಪಂ
ಬಳೆಯೆ ಮದನ[೭]ದಾಹಂ ಬೀಸುಗುಂ ಗಂಧವಾಹಂ ೫೫೮

೧ ಮನಿಂ (ನ) ೨ ವೆಂ (ಮ, ಮೈ) ೩ ಲಿತ್ತಂ (ನ) ೪ ವಾಹಂಗಳಂ (ನ) ೫ ತ್ತ (ಮ)
೬ ಕಳಲಿ (ನ) ೭ ವಿ (ಮ)

ಚಂಪಕಮಾಲೆ

೪ ಖಗತತಿ[೧] ಸಾರೆ ಶಾ[೨]ಕಿನಿಯರಾರೆ ನಿಶಾಚರಕೋಟಿ ಪಾರೆ ಬ
ಳ್ಳುಗಳೆಡೆಯಾಡೆ ಭೂತಗಣಮಾ[೩]ಡೆ ಮರುಳ್ವಡೆ ಪಾಡೆ ಸಾಹಸಂ
ನೆಗಳ್ದ ಮುಕುಂದನಸ್ತ್ರರಿಪುವೃಂದನಗುರ್ವಿಸೆ ಕೊಂದನಾಜಿಗ
ಲ್ತಿಗನೆನೆ ಚಕ್ರವರ್ತಿಯನನಿಂದಿತಕೀರ್ತಿಯನಿಂದ್ರಮೂರ್ತಿಯಂ ೫೫೯

ಸೂತ್ರಂ ೧೩೪

ಬೆರಸಿರೆ[೪] ಶ ಷ ಸ ಹ ವರ್ಣಂ[೪]
ಸರೇಫಸಂಯೋಗವೊಂದಿ [೫]ಕೂಡಿದ ವರ್ಗಾ[೫]
ಕ್ಷರಮಲ್ಲಿಗಲ್ಲಿಗೆಡೆಗೊಂ
ಡಿರೆ ಪ[೬]ರುಷಾನಾಮವೃತ್ತಿ ವರ್ತಿಕುಮದ[೭]ರೊಳ್ ೫೬೦

ಲಕ್ಷ್ಯಂ :

೧ ಶಿಖಿಬರ್ಹಂ ಸರ್ಷಪಮಾ
ಜಖುರಂ ರಾಮಠಮಹೇಂದ್ರನಿರ್ಮೋಕಂ ಶ್ವೇ
ತಖರಾಂಗಲೋಮಮಿವು ದು
ರ್ಮುಖದುಷ್ಟಗ್ರಹವಿನಾಶನಂ[೨] ಕಟುಧೂಪಂ ೫೬೧

ಸೂತ್ರಂ ೧೩೫

ತಂತಮ್ಮ ವರ್ಗದಂತ್ಯದೊ
ಳಂತಾವರ್ಗಂಗಳಮಳ್ಗಳಾಗಿರೆ ಮೇಣ
[೮]ತ್ಯಂತಸ್ವರೂಪ[೮]ಸಂಯೋ
ಗಾಂತರಮುಮದೊದವೆ ಮಧುರೆಯೆಂಬುದರ್ಕ್ಕಂ ೫೬೨

೧ ಒಸಗೆ ಮರುಳ್ಗೊಂಡಾಡುವ
ವಸುಧಾಧಿಪನಂತವುರದ ಕಾಂತೆಯರ ಸಮು
ಲ್ಲಸಿತಪದಕಮಲದೊಳ್ ರಂ
ಜಿಸಿದುದು[೧೦] ಸಿಂಜಾನುಮಂಜುಮಂಜೀರರವಂ ೫೬೩

– ಉಪನಾಗರಿಕೆಯೆಂದೊಡಮಿದುವೆ

೧ ರುಚಿ (ನ) ೨ ಡಾ (ನ) ೩ ಕೂ (ಮೈ) ೪-೪ ಹಷವರ್ಗಂಗಳ್ (ಮೈ) ; ಶಷವರ್ಣಂಗಳ್ (ನ) ೫-೫ ಕೂಡಿಯವರ್ಗಾ (ನ) ೬ ಪು (ನ) ೭ ಕಂ (ಮು) ೮-೮ ತ್ಯಂತಂ ಸರೇಫ (ಮು, ಮೈ, ನ) ೯ ದುಮು (ಮು, ನ) ೧೦ ದೊ (ನ)

ಸೂತ್ರಂ ೧೩೬

ಅವಿಶೇಷವರ್ಣರಚನಾ
ವಿವಿಕ್ತಗತಿ ಮುಕ್ತಭೂರಿಸಂಯೋಗಂ ಸೌ
ಷ್ಠವಗುಣಸಮನ್ವಿತಂ ಲಲಿ
ತವೃತ್ತಿಯಿಂ ಲಲಿ[೧]ತೆಯೆಂಬ ವೃತ್ತಿಯು[೧]ದಕ್ಕುಂ ೫೬೪

ಪ್ರಯೋಗಂ :

೧ ಮದನನೃಪಾದೇಶದಿನ
ಲ್ಲದೆ ಬಿರಯಿಗಳುಂತೆ ಪೋ ಪುಗಲ್ ಪುಗಲೆಂಬಂ
ತೊದವಿದುದು ಬನದೊಳೆತ್ತಂ
ಮದಕಳಕಳಕಂಠಕಳಕಳಪ್ರಧ್ವಾನಂ ೫೬೫

— ಗ್ರಾಮ್ಯೆಯೆಂಬುದು ಮಿದುವೆ

ಸೂತ್ರಂ ೧೩೭

ಸ್ಥಾ[೨]ಸಂ ಕ್ರಿ[೨]ಯೆಯೆಂಬಿವಱ[೩]ೊಳ
ನೂನಸಮಾನಾಕ್ಷರಾದಿಪದಸಾನ್ನಿಧ್ಯಂ
ತಾನಕ್ಕುಂ ಮಾಧುರ್ಯಾ
ಧೀನಮನುಪ್ರಾಸಮೆಂದು ಪೇೞ್ವರ್ ಕೆಲಬರ್ ೫೬೬

ಅವರ್ಕೆ ಲಕ್ಷ್ಯಂ :

೧ ಎಳಲತೆಯ ಜೊಂಪ[೩]ದೊಳ್ ತ
ಳ್ತಿ[೩]ಳಸಿ ತಗುಳ್ದಿರ್ಪ ವಿರಹಕಾತರದಿಂ ಕಣ್-
ಗೊಳಿಸುಗುಮಾ ಪುರವರಮುಂ
ಬಳಸಿದ ನಂದನವನಂಗಳೆನಿತೊಳವನಿತುಂ ೫೬೭

ಸೂತ್ರಂ ೧೩೮

ಏನಾನುಮನೊಂದಂ ಸಂ
ಸ್ಥಾನದಿನನುಕರಿಸುವಂತು ಭಂಗ್ಯಂತರದಿಂ
ಪೀನವೊಡಂಬಡೆ ವಿರಚಿಸೆ
ನಾನಾವಿಚ್ಛಿತ್ತಿ ಚಿತ್ರಮೆನಿಕುಂ ಪೆಸರಿಂ ೫೬೮

೧-೧ ತವೃತ್ತಿಯೆಂಬುದ (ನ) ೨-೨ ಸಕ್ರಿ (ನ) ೩-೩ ದೊಳಗು|ಳ್ಳೈ (ಮೈ, ನ)

ಸೂತ್ರಂ ೧೩೯

ಶರ ಶೂಲ ಚಾಪ[1] ಚಕ್ರಾ
ಸಿರೂಪಮಿಭ ರಥ ತುರಂಗಪದಗತಪಾಠಂ
ಮುರಜಂ ಗೋಮೂತ್ರಿಕೆ ಪು
ಷ್ಕರಮರ್ಧಭ್ರಮಣ ಸರ್ವತೋಭದ್ರಂಗಳ್ ೫೬೯

ಸೂತ್ರಂ ೧೪೦

ಅಕ್ಷರಬಿಂದುಚ್ಯುತ[2]ಕಂ
ದ್ವ್ಯಕ್ಷರಿಯೇ[2]ಕಾಕ್ಷರಂ ನಿರೋಷ್ಠ್ಯಮತಾಲ
ವ್ಯಾಕ್ಷರಮೆನೆ ನಿಜನಾಮಸ
ದೃಕ್ಷಂ ಲಕ್ಷಣಮುದಾಗೆ ನೆಗಳ್ಗುಂ ಪಲವುಂ ೫೭೦

ಆವರ್ತಮನುಕ್ರಮಪ್ರಯೋಗಂ :

ಶರಂ :

ಶ್ಲೋಕ

೧ ಸುಂದರಾಕಾರಸಂಪನ್ನ
ನೆಂದುಮಿಾ ನೃಪನಂದನಂ
ನಂದನಂ ಬುಧಕೀರಾಳಿ
ವೃಂದಕ್ಕೆ ಸಕಲತರ್ಕಕಂ ೫೭೧

ಶೂಲಂ :

೨ ವೀರಶ್ರೀಕಾಂತೆಯಂ ತಾಳೆ[3]
ಚರಾಚರಜನಸ್ತುತಾ
ತಾರತಾತಾರತಾರೇಶ
ಶರೇತಾರಾಜಿತಾಜಿರಾ[4] ೫೭೨

ಚಾಪಂ :

೩ ಸಂಸಾರವಿಷಮವಾರಿಧಿ
ಸಂ[5]ಸರ್ಪಣದುಃಖವೀಚಿಯೊಂದು[5]ಲ್ಲಾಸಂ
ಸಂಸಕ್ತಮಾಗದಂತು ಜಿ
ನಂ ಸುವ್ರತನಾಮ[6]ನೆಮಗೆ ಕರುಣಿಸುಗಿನಸಂ ೫೭೩

೧ ವಾಸ (ಮೈ) ೨-೨ ಸಂ|ಧ್ಯಕ್ಷರಮೇ (ನ) ೩ ನಾಳೆ (ಮೈ,ನ) ೪ ಶರೇತಾರಾಜಿರಾಜತಾ (ಮೈ); ಶರತಾರಾಜರಾಜತಾ, ಶರೀರಾಜಿತ ರಾಜಿತಾ (ನ) ೫-೫ ಸರ್ವರ್ ದುಷ್ಟನಿಭಂ ಲೋ (ಮೈ) ೬ ನಾಥ (ಮೈ,ನ)

ಚಕ್ರಂ :

ಶ್ಲೋಕ

೪ ತನ್ನ ಸಂತತಿ ಮುನ್ನೀತಂ
ತಂನ್ನೀತಂ ಮುನಿಸನ್ನುತಂ
ತನ್ನನುರ್ಕಿನೊಳಿನ್ನಾತಂ
ತನ್ನೊಳಿಂದಿನಿಸನ್ನಿತಂ ೫೭೪

ಖಡ್ಗಂ :

೫ ಕಂಸಾಸುರಹರಂ ದೈತ್ಯ
ಧ್ವಂಸಿ ಬಾಣಮದಾಪಹಂ
ಹಂಸಾಸನಸಮಾರಬ್ಧಾ
ಶಂಸನಂ ನರಕಾಂತಕಂ ೫೭೫

೬ ಕಂಜನಾಭಂ ಸುರದ್ರೋಹಿ
ಭಂಜನಂ ಲೋಕಪಾಲಕಂ
ಕಂಜಾಕ್ಷಂ ಕಂಟಕಾಕಂಪಂ
ಮುಂಜಕೇಶಿ ಧರಾಧರಂ ೫೭೬

ಗಜ ರಥ ತುರಂಗಪದಗತಪಾಶಂಗಳ್ಗಂ ಲಕ್ಷ್ಯಮಂ ನೋಡಿಕೊಳ್ವುದು

ಮುರಜಂ :

೭ ಅಜಾತಶಂಖಂ ತಾನಾಪ್ತ
ನಜಂಗಮನಸೂಯನಂ
ಗಜಾಂಕುಶಂ ಗತಾಪ್ರಾಪ್ತ
ವಿಜಯಂ ಮಧುಸೂದನಂ ೫೭೭

– ಮುರಜಂ ಅರ್ಧಪ್ರಸ್ತಾರದಿಂ ಗೋಮೂತ್ರಿಕೆಯುಕ್ಕುಂ

ಗೋಮೂತ್ರಿಕೆ :

೮ ಉರುತರಸಿತಕೀರ್ತಿಗುಣಾ
ಕರಂ ಪದಾನತವಿರೋಧಿವರ್ಗಂ ನೆಗಳ್ದಂ
ಸುರುಚಿರನುತಮೂರ್ತಿಘೃಣಾ
ಪರಂ ಸದಾಹಿತಕರೋಕ್ತಿ ದುರ್ಗಂ ಜಗದೊಳ್ ೫೭೮

೧ ಮು (ನ) ೨ ಸನ್ನು (ನ) ೩ ಹ (ಮೈ,ನ) ೪ ತನು (ಮು)

ಪದ್ಮಂ :

ಶ್ಲೋಕ
೯ ಮಂದರಾಗಂ[೧] ಗುಣೋದ್ದಾಮಂ
ವಂದಿತಂ [೨]ಸದಯಾದವಂ[೨]
ಮಂದರಾದ್ರಿನಿಭಂ ಭೀಮಂ
ಮಂದಿ[೩]ಯೊಳ್ ಪೇೞ್ಗಮಾಯಮಂ ೫೭೯

ಅರ್ಧಭ್ರಮಣಂ :

೧೦ ಶ್ರೀರಾಮಾಧಾಮನಾಮಂ ತಾ[೪]
ರಾರಾರಾರಾಸಮಾಸಮಂ
ಮಾರಾರಿ ನಿನ್ನೊಳ್ ಸಮಾನಾ
ಧಾರಾ ನಿನ್ನೊ[೫]ತನೊಳ್ ಸಮಂ * ೫೮೦

ಸರ್ವತೋಭದ್ರಕಂ ಲಕ್ಷ್ಯಮನಱಿದುಕೊಳ್ವುದು

ಅಕ್ಷರಚ್ಯುತಕಂ :

೧೧ ಕುಲಜನಭಿಮಾನಿ ತಕ್ಕಂ
ಚಲಮುಱಿವಂ ನೆಗೞನಾತನಿಂತಿದನೆಂತುಂ
ಜಲಜಾಯತಾಕ್ಷಿ [೬]ಕೆಲನುಂ
ನೆಲನುಂ[೬] ನಗುವಂತು ಪೊ[೭]ಲ್ಲ[೮]ಕೆಯ್ಗುಮೆ ಚೋ[೮]ರಂ ೫೮೧

ಬಿಂದುಚ್ಯುತಕಂ :

ಶ್ಲೋಕ
೧೨ ಇಂದು ನೋಡಿದು ಬೇಱಂದ
ಮೆಂದಿನಂದಮುದಲ್ತಣಂ
ಮಂದಮಂದಂ ಕರಸ್ಪರ್ಶಂ
ತಂದಪ್ಪುದುಪತಾಪಮಂ ೫೮೨

೧ ದಾರಗಂ (ಮೈ,ನ); ದಾರಾಂಗಂ,ದಾರಾಗಂ (ನ) ೨–೨ ಸಂದಯಾದವಂ (ಮೈ,ನ); ಸ್ಕಂದಯಾರವಂ,ಸ್ಕಂದಯಾಪರಂ (ನ) ೩ ದೆ (ಮೈ,ನ) ೪ ತಾಂ (ನ) ೫ ನಿನ್ನೋ (ನ) ೬–೬ ನೆಲಮಂ।ಕೆಲಮಂ (ಮ); ನೆಲನುಂ ಕೆಲನುಂ (ಮೈ) ೭ ಕೊ (ಮ) ೮–೮ ಗೆಯ್ಯುಂ ಬಾ (ನ)

* ಈ ಪದ್ಯದ ಮುಂದೆ ಕುಸುಮುಮನೋಹರಂ। ಕುಸುಮುಮನೋಹರಂ ॥
ಕುಸುಮುಮನೋಹರಂ। ಕುಸುಮುಮನೋಹರಂ ॥
ಎಂದು ಕೆಲವು ಪ್ರತಿಗಳಲ್ಲಿ ಬರೆದಿದೆ (ನ)

ದ್ವ್ಯಕ್ಷರಿ :

ಶ್ಲೋಕ

೧೩ ನಿಂದಾನಂದದದೊಂದೂನಂ
ನಿಂದಂದೇನಿಂದಿನಂದದಿಂ
ನಂದನಂದನ ನಿನ್ನಿಂದಂ
ನಂದನುಂ[೧] ದನುನಂದನಂ ೫೮೩

ಏಕಾಕ್ಷರಂ :

೧೪ ನಿನ್ನಿನೇನಿನ್ನನಾನನ್ನ
ನಿನ್ನನೆನ್ನನನೂನನಂ
ನುನ್ನನೈನನ್ನನೈನೇನೇ
ನೆನ್ನಿನ್ನಂ ನಿನ್ನೆನಾನುನಂ[೨] * ೫೮೪

ನಿರೋಷ್ಠ್ಯಂ :

೧೫ ನೆಗಟ್ಟೆ ಯತಿ[೩]ಸ್ಥಿತಿ ಚಿತ್ತದಿ
ನಗಲೆ ಕರಂ ನಿಜದೆ ತನ್ನ ತ[೪]ರಳತೆ ಕೆಲದಿಂ
ದಗಲದೆ ನಾಳೀಜಂಘಂ
ನಗಿಸಿತ್ತಾ ನಗದ ನಗದ ಋಷಿಸಂಹ[೫]ತಿಯಂ ೫೮೫

ಅತಾಲವ್ಯಂ :

ಶ್ಲೋಕ

೧೬ ರೂಪುಂ ಸೊಬಗುಮಣ್ಮುಂ ನಾಣ್-
ಗಾಪುಮಾರ್ಪುಂ ಪ್ರಭುತ್ವಮುಂ
ಕೋಪಮುಂ[೬] ಮಾೞ್ಪುದುಂ ತನ್ನೊಳ್
ಭೂಪಂ ತಾಂ ಕೊಲ್ಲು ಮಾತನಂ ೫೮೬

ಸೂತ್ರಂ ೧೪೧

ಚ್ಯುತದತ್ತಾಕ್ಷರಮುಂ ಗೋ
ಪಿತಕ್ರಿಯಾಕಾರಕಂ ನಿಗೂಢಚತುರ್ಥಂ
ಪ್ರತಿನಿಯತಗತಪ್ರತ್ಯಾ
ಗತಂ ದಲೆಂದಿಂತು ಪೇೞ್ವುವುಮುಕ್ಕುಂ ಚಿತ್ರಂ ೫೮೭

೧ ನಂ (ಮ,ನ) ; ನೆಂ (ನ) ೨ ನೇ (ಮ) ೩ ಯುತಿ (ಕಾ,ಮೈ) ೪ ಸ (ನ) ೫ ತ (ನ)
೬ ಮುಂ (ನ)

* ಈ ಪದ್ಯದ ಮುಂದೆ ೧ ಪ್ರತಿಯಲ್ಲಿ: ನೀನಾನುನಿನ್ನನಾನೆಂ । ನಾನಿಂನನ್ನಿನ್ನನಿನ್ನನಾನಾನೂನಂ ॥
ನೂನಂನನ್ನೆನನೋನ್ನೈ । ನೀನೇನ್ನೈನಾನುನೀನುನೀನೇ
ಎಂಬ ಕಂದವು ದೊರೆಯುತ್ತದೆ. (ನ) [ನೋನ್ನೈ ॥

ಪ್ರಯೋಗಂ : ಚ್ಯುತದತ್ತಾಕ್ಷರಂ :

ಶ್ಲೋಕ

೧ ಸೀತಾರಾಮಸವಿಾಪಸ್ಥಂ
ಧೌತ[1]ಶೀಲಸಿತ[1]ಪ್ರಭಂ
ವೀತತ್ರಾಸಂ ಮನಂಗೊಳ್ಗಂ
ಪ್ರೀತಿಯಿಂದೊಂದಿ ಲಕ್ಷಣಂ[2] ೫೮೮

ಕ್ರಿಯಾಕಾರಕಗೋಪಂಗಳ್ :

೨ ಪರಿವರ್ಜಿತದೋಷನನಾ
ದರದಿಂ ದೇವಾದಿದೇವ[3]ನೆಂದಿರ[3]ದರೆಬರ್
ದುರಘಾವಿಲಿಪ್ತರಂ ದೇ
ವರೆಂದು ಬಗೆ ಬೆದಱಿ ದೆಸೆಗೆ ದಿಙ್ಮೂಢತೆಯಿಂ ೫೮೯

ಶ್ಲೋಕ

೩ ಏನನೇನಂ ಮಹಾಘೋರಂ
ನಾನಾಜನ್ಮಾಂತರಂಗಳೊಳ್
ತಾನಾಗಿಸದು ಸಂಸಾರಿ
ಗಾ ನಿರ್ವಾಣಪದಂಬರಂ ೫೯೦

ಗೂಢಚತುರ್ಥಂ :

೪ ಆತನಲ್ಲದನಂ ಮೆಚ್ಚಿಂ
ಮಾತೇಂ ತಾಂ ಮಾರನಾದೊಡಂ
ಕೇತನಂ ರತಿರಾಗಕ್ಕೆ
ಕೇತನಂ ತಾರ ನಲ್ಲನಂ ೫೯೧

ಗತಪ್ರತ್ಯಾಗತಂ :

೫ ತಾರವೀವೀರತಾಸಾರ
ನೀರಸಾಕಾರನಾರಕಾ
ತಾರನಾನಾರತಾಕಾರ
ಕಾರತಾತಾರಕಾ . . ೫೯೨

೧-೧ ಶೀಲಂ ಶಿತ (ನ) ೨ ಲಕ್ಷ್ಮಣಂ (ನ) ೩-೩ ನೆಂದಿಂ (ನ)

ಸೂತ್ರಂ ೧೪೨

ಸುಕವಿಪ್ರಕರಕ್ಕೆ ವಿನೋ
ದಕೇಳಿಗುಪಯೋಗಹೇತುಗಳ್ ಪ್ರಚ್ಛನ್ನ
ಪ್ರಕಟಾರ್ಥಂಗಳನೇಕ
ಪ್ರಕಾರದಿಂದೊಂದಿ ವರ್ತಿಕುಂ ಪೇೞಿಕೆಗಳ್ ೫೯೩

ಸೂತ್ರಂ ೧೪೩

ನುಸುಳೊರ್ನುಡಿ ಭಾಮೆ[೧] ಮನ
ಕ್ಕೆಸೆವಸ್ಪಷ್ಟಾರ್ಥಮುಱಿವು ನಾಮಾಂತರಿತಂ
ಕುಸುರಿ[೨]ಯ ನುಡಿಯೆಂಬಿವು ಭಾ
ವಿಸೆ ಪೇೞಿಕೆಗಳೊಳೆ ಪೇೞ್ವ ಭೇದಮುವಕ್ಕುಂ ೫೯೪

ಅಂತವಱೊಳ್ : ನುಸುಳ್ಗೆ :

೧ ತಿರಿವುದು ಬೈಕಂಗೊಳ್ವುದು
ಮೊರೆವುದು ಮುಱಿದುಂಬಿಯಲ್ತು [೩]ಕತ್ತರಿಗಾಳಂ[೩]
ಬೆರ[೪]ಸಿ ತನು[೪]ಗೊಂದಿ ದೊರೆಕೊಂ
ಡಿರೆಯುಂ ಕೆಸಱಂಕಮಲ್ಲಿದಾವುದೊ ಪೇೞಿಂ ೫೯೫

ಒರ್ನುಡಿಗೆ :

೨ ಒಂದು[೫] ಗಱಿಗೆಯೊಳೆ ಸಂಪುಟ
ದಂದದೆ ಮಡಿದಿರ್ಪರಹಿತರೆರೆದ ನರರ್ ಕೊಂ
ಡೊಂದಱೊಳೆ ಮೆಱೆದು ಗಣಪತಿ
ಯಂದದಿನೊಸೆದಿರ್ಪರಿದಿರ್ಗೆ ವಂದಿಂದರನಾ[೬] ೫೯೬

ಭಾಮೆಗೆ :

ಶ್ಲೋಕ
೩ ಈ ನವೀನಸಿತಾಂ[೭]ಭೋಜಾ
ನೂನಪೀತಾವತಂಸಕಂ
ತಾನದೇವುದೊ [೮]ಕರ್ಣಾಂತ
ವ್ಯಾ[೮]ನತಾಯತಲೋಚನೇ ೫೯೭

೧ ಭಾವ್ಯ (ನ) ೨ ರೆ (ನ) ೩–೩ ಕರ್ತರಿಘಾಯಂ (ವ್ಮೈ, ನ) ೪–೪ ಸು ತನ, ಸಿ ತನು (ನ)
೫ ದೆ (ನ) ೬ ದಂದಿಂಪರನಾ (ವ್ಮೈ); ವಂದಿಂದಿರನೊಳ್ (ನ) ೭ ರಸಾಂ (ವ್ಮೈ, ನ)
೮–೮ ಕರ್ಣಸ|ದ್ಯಾ (ನ)

(ಸ್ಪಷ್ಟಾ) ಸ್ಪಷ್ಟಾರ್ಥಕ್ಕೆ :

ವೃತ್ತಂ

೪ ದಂಡಿತಾರಾತಿಭೂಭೃತ್-
ಕಾಂಡಂ ಮೆಚ್ಚಿದಂ ಕರಂ[1]
ಗಾಂಡೀವಧನ್ವಂ ಮುಂದೆ
ಕಂಡಂ ಭಯಾಕರಮುಂ ೫೯೮

ಉಟಿಽವಿಂಗೆ :

೫ ಉಮೆಗೆ ಮಹೀಜೆಗೆ [2]ಸುಮನೋ[2]
ರಮಣಿ (ೕಮಣಿ) ನಚ್ಚಿನಾ ತಿಳೋತ್ತಮೆಗೊಳ್ಪಿಂ
ಸಮನೆನಿಸುವ ಮಂದಾಕಿನಿ
ಯಮುನಾನದಿಸಿಂಧುಸಂಕರಂ ಕಣ್ಗೆಸೆಗುಂ ೫೯೯

ನಾಮಾಂತರಿತಕ್ಕೆ :

೬ ಮೊದಲೊಳೆ ವಿಕಾರಿ ನಾಕಾ
ರದರ್ಶನೀಯಂ ವಿರಾಮದೊಳ್ ಸಾಯಕಮುಂ
ತದು ತಾಂ ವಿನಿಂದ್ಯಮಲ್ತಾ
ದಿದೇವಪುಱತ್ರಂ ಸದಾನವಾರಿಪ್ರಮುಖಂ ೬೦೦

ಕುಸುರಿ ಮೊದಲಾದ ಪ್ರಶ್ನೋತ್ತರಪ್ರಕಾರಂಗಳ್ಗಮಿಲ್ಲಿ
ಪ್ರಯೋಗಮುಂ ಕಂಡುಕೊಳ್ವುದು

ಸೂತ್ರಂ ೧೪೪

ನುಡಿದುದದೆಱ ಪದವಿಭಂಗಱತೆ
ಗೊಱಡಂಬಡಂ ಪಡೆಯೆ ಮಗುಳ್ದುಮರ್ಥಾಂತರದೊಳ್
ತೊಡರ್ದು ನಿಲೆ ನುಡಿವ ನುಡಿ ಚೆ
ಲ್ವೊಡರಿಪ ವಕ್ರೋಕ್ತಿ ನಿಯತಕಾಕುಶ್ಲೇಷಂ ೬೦೧

ಪ್ರಯೋಗಂ :

೧ [5]ಮುತ್ತಯ್ಯ ಚದುರಿದೇನೆನೆ[5]
ಮುತ್ತಲ್ಲದುದುಂಟೆ ವಸ್ತು ಪೇಱತೆನೆ ಸತಿ[6]ನೀ
ಮಿತ್ತಿರಿಮೆನೆ[6] ಕರಮೊಳ್ಳಿ
ತ್ತಿತ್ತಾಗಡೆ ನಿಮ್ಮೊಳಿರ್ಪವೆನೆ ವೃದ್ಧವಿಟಂ ೬೦೨

೧ ನರಂ (ನ) ೨–೨ ಮಣಿಯಗೆ (ಮೈ, ನ) ೩ ದನೆ (ಮೈ, ನ) ; ದೆನೆ (ನ) ೪ ದಿ|ನೋ (ನ) ೫ ಮುತ್ತಯ್ದೆ ಚದುರಿದೇನೆನೆ (ಮೈ) ; ಮುತ್ತಯ್ದೇವುದು ಚದುರೆಗೆ (ನ) ೬–೬ ಕೊ|ರ್ತಿತ್ತರಿಯೆನೆ (ಮೈ)

೨ ಮುನ್ನಿನ ಕಡನಂ ನೀಂ ಕುಡು
ಮುನ್ನಿಲ್ಲದ ಕಡನನೆಂತು ಪಿಡಿಯೆಂದೀವೆಂ
ನಿನ್ನೀ ಪಿಡಿಯೆನೆ ಕುಡು ಕಡ
ನೆನ್ನಂ ಪಿಡಿಯುಳ್ಳೊಡಾನೆಯಿಾಯೆನೆ ಕೆನ್ನಂ ೬೦೩

ಕಾಕುವಕ್ರೋಕ್ತಿಗೆ :

೩ ದಾರುಣಮುಂ ಶರಶಲ್ಯಮ
ನೋರಂತಿರೆ ಪುಣ್ಣೊಳುಡಿದು[೧] ಬಿಡದುಬ್ಬುವುದಂ[೨]
ಸೈರಿಸುವರುಮೊಳರೆ ಕೆಲರ್
ಸೈರಿಸುವರುಮೊಳರೆ ಖಳರ ಕಟುಕೋಕ್ತಿಗಳಂ ೬೦೪

ಇದು ಗುಣವಿವೇಕದೊಳ್

ಶಬ್ದಾಲಂಕಾರನಿರ್ಣಯಪ್ರಕರಣಂ ಸಮಾಪ್ತಂ

೧ ಳಿಡಿದು (ನ) ೨ ವುದುಂ (ನ)

೩ ಅರ್ಥಾಲಂಕಾರಪ್ರಕರಣಂ

ಅರ್ಥಾಲಂಕಾರಭಾಗಂಗಳ್ :

ಸೂತ್ರಂ ೧೪೫

ಪ್ರವರಾರ್ಥಾಲಂಕಾರಂ
ವಿವಿಧವಿಕಲ್ಪಪ್ರಪಂಚಿತಂ ಕ್ರಮದಿಂ ವಾ
ಸ್ತವಮುಪಮೆಯತಿಶಯಂ [1]ಶ್ಲೇ
ಷ[1]ವೆಂದು ನಾಲ್ಕುಂ ಪ್ರಕಾರದಿಂ ನೆಱೆ[3]ದಿರ್ಕುಂ ೬೦೫

ಮತ್ತಮಲ್ಲಿ ವಾಸ್ತವಂ :

ಸೂತ್ರಂ ೧೪೬

ವಸ್ತುಸ್ವಭಾವಕಥನಂ
ವಾಸ್ತವಮುಪಮಾದ್ಯಶೇಷವಕ್ರೋಕ್ತಿ ವಿಪ
ರ್ಯಸ್ತಂ[2] ಸಮಸ್ತಲೋಕಮ
ನಸ್ತೋಭನಕಾರಿ ಚಾರುತರಪುರುಷಾರ್ಥಂ ೬೦೬

ವಾಸ್ತವಭೇದಂಗಳ್ :

ಸೂತ್ರಂ ೧೪೭

ಉತ್ಪಲಮಾಲೆ

ಜಾತಿ ಸಹೋಕ್ತಿ ಭಾವ ಪರಿವೃತ್ತಿ ಯಥಾಕ್ರಮ ಪರ್ಯಯಾವಳೀ
ಹೇತು ಸಮುಚ್ಚಯಾನುಮಿತಿ ಸೂಕ್ಷ್ಮ ಲವ ವ್ಯತಿರೇಕ ದೀಪಕಾ
ಖ್ಯಾತಿ ಸಮಾಹಿತಾವೃತಿ ಪರಸ್ಪರ ಸಾರ ನಿಮಿಾಲನಂಗಳೆಂ
ದೀ[4] ತೆಱದಿಂದಮೊಂದಿ[5] ನೆಗಱ್ಗುಂ ನೆಱೆ[3]ದಿ ವಾಸ್ತವಭೇದವೃತ್ತಿಗಳ್ ೬

ಜಾತಿ : ಸೂತ್ರಂ ೧೪೮

ಜಾತಿಯೆನಿಕುಂ ಸ್ವಭಾವಾ
ಖ್ಯಾತಿ ಯಥಾವಸ್ಥಿತಾರ್ಥವಿಷಯಾರ್ಥಕೃತೋ
ದ್ಯೋತನಮುನ್ಮೈಪರೀತ್ಯಂ
ಜಾತಿ ದ್ರವ್ಯ ಕ್ರಿಯಾ ಗುಣಪ್ರತಿಬದ್ಧಂ[7] ೬೦೮

೧-೧ ಶ್ಲಿ।ಷ್ಟ (ಮೈ,ನ) ೨ ರ್ಯಾಸ್ತಂ (ಮೈ) ೩ ಬೀ (ನ) ೪ ಮಿಂತು (ಹೈ,ನ) ೫ ಸಲೆ (ನ) ೬ ಯೊಳ್ (ನ) ೭ ಬಂಧಂ (ನ)

ಲಕ್ಷ್ಯಂ : ಜಾತಿಸ್ವಭಾವಾಖ್ಯಾನಕ್ಕೆ :

ಚಂಪಕಮಾಲೆ

೧ ಸೊಗಯಿಸಿ ತೋರ್ಪ ಸೋಗೆ ಕೊರಲೊಳ್ ಪೊಗರ್ವಟ್ಟೆಸೆದಿರ್ಪ ಕರ್ಪು ಕೆಯ್-
ಮಿಗೆ ಕಡೆಗಣ್ಗಳೊಳ್ ಪೊಳೆವ ಬೆಳ್ಪು ಶಿಖಾಗ್ರದೊಳೊಂದಿದೊಳ್ಪು ೧ಮೆ
ಲ್ಪೊಗೆ೧ದಿರೆ ಕೇಗುವಿಂಚರದ ಸುಣ್ಪು ಮನಂಗೊಳೆ ಚೆಲ್ವನಾಳ್ದು ದೀ
ನಗವನರಾಜಿಯೊಳ್ ಸುೞಿಯುತಿರ್ಪ ವಿಚಿತ್ರಶಿಖಂಡಿಮಂಡಳಂ ೬೦೯

ದ್ರವ್ಯಸ್ವಭಾವಾಖ್ಯಾನಕ್ಕೆ :

೨ ಕಱೆ ಕೊರಲೊಳ್ ಕಣ್ ನೊಸಲೊಳ್
ಪೆಱೆ ಮಕುಟದೊಳಹಿವಿಭೂಷಣಾವಳಿ೨ ತೋಳೊಳ್
ನೆಱೆದಿರೆ ಕರಮೆಸೆದಂ ಪಲ
ತೆಱದ ಮರುಳ್ವಡೆಯ ನಡುವುಮಾಪತಿರುದ್ರಂ ೬೧೦

ಕ್ರಿಯಾಸ್ವಭಾವಾಖ್ಯಾನಕ್ಕೆ :

ಮಾಲಿನೀವೃತ್ತಂ

೩ ವಳಿಗಳೞಿಯೆ ಬಿಂಕಂಬೆತ್ತ ವೃತ್ತಸ್ತನಂ ಕಣ್-
ಗೊಳಿಸೆ ತೊಳಗೆ ಬಾಹಾಮೂಲಮೂರುದ್ವಯಂ ಸಂ
ಚಳಿಸೆ ನಿಜಪದಾಂಗುಷ್ಠಾಗ್ರದಿಂ ನಿಂದು ಕಣ್ಗಳ್
ಪೊಳೆಯೆ ಮಿಳಿರ್ವ ಕೊಂಬಂ ನಿಳ್ಕಿ ಪೂಗೊಯ್ದಳೊರ್ವಳ್ ೬೧೧

ಗುಣಸ್ವಭಾವಾಖ್ಯಾನಕ್ಕೆ :

೪ ಮನದೊಳ್ ಮುದಮಂ ಕೋಮಳ
ತನುವಿನೊಳತ್ಯಂತ೪ರೋಮಹರ್ಷಣಮಂ ಕ
ಣ್ಗೆ ನಿಸಿನಿಸಾಮಿ೪ಳನಮಂ
ಜನಿಯಿಸುತಂ ಪ್ರಿಯೆಯ೫ ಸೊಂಕು ಪಡೆದುದಲಂಪಂ ೬೧೨

ಸಹೋಕ್ತಿ-ಭಾವಂ : ಸೂತ್ರಂ ೧೪೯

ಸಮಕಾಲಮಪ್ಪವೆರಡ
ರ್ಥಮನೊಡನೆಯೆ ಪೇೞ್ವುದ೬ದು ಸಹೋಕ್ತಿವಿತರ್ಕ
ಕ್ರಮದಿಂದರ್ಥಾಂತರಮಂ
ಸಮನಿಸುವೊಂದುಕ್ತಿ ಭಾವಮೆನೆ ಪೆಸರ್ವಡೆಗುಂ ೬೧೩

೧-೧ ಮೆ।ಲ್ಪುಗಿ (ಪ) ೨ ಣಂ ನಳಿ (ನ) ೩ ಳಂತಂತೆ (ಮೈ,ನ) ೪ ಸುನ್ಮೀ (ನ) ೫ ಪ್ರಿಯನ (ನ) ೬ ಪೇೞ್ವೊಡ (ನ)

ಲಕ್ಷ್ಯಂ : ಸಹೋಕ್ತಿಗೆ :

೧ ಅಲರ್ದುವೊಡನೊಡನೆ ಕುವಲಯ
ಕುಲಮುಂ ಕುಲಟಾಮುಖಂಗಳುಂ ಮುಗಿದುವು ನಿ
ಶ್ಚಲಯೋಗನಿರತಸಂಧ್ಯಾಂ
ಜಲಿಯುಂ ಸರಸಿರುಹವನಮುಮೊಡನೊಡನಾಗಳ್ ೬೧೪

೨ ಬಿರಯಿಗಳ ಸುಯ್ಗಳೊಡನೆಯೆ
ಪಿರಿಯವು ದಿವಸಂಗಳಾದುವವಱವಱ ಪರಿ
ಸ್ಫುರಿತಂಗಳೊಡನೆ ಕುಂದಿದು
ವಿರುಳ್ಗಳುಂ ಮುಂಚಿ[೧] ಬಂದ ಜಳದಾಗಮದೊಳ್ ೬೧೫

ಭಾವಕ್ಕೆ :

ಮತ್ತೇಭವಿಕ್ರೀಡಿತಂ

೩ ಪಡುವಳ್ ಕೀಲಱೊಳೆಮ್ಮ ತೊಟ್ಟು ಪಡುವಳ್ ಮುತ್ತಜ್ಜಿಯಾ ಕೋಣೆಯೊಳ್
ಪಡುವಂ ಶಕ್ತಿವಿಹೀನನಂಧಬಧಿರಂ ಕೇಳಜ್ಜನೀ ಬಾಗಿಲೊಳ್
ಪಡುವೆಂ ಬಾಲಿಯೆನೊರ್ವಳಿಲ್ಲಿ[೨]ಮನೆಯಾಣ್ಮಂ ಪೋದನಿಂದೂರ್ಗೆ[೩] ನೀಂ
ಪಡಲೆಂದೆಂತೆಡೆವೇಡುವಯ್ ಪಥಿಕ ಮತ್ತೀ ಪೊಟ್ಟುಱೊಳ್ ಗಾಂಪನೇ[೪] ೬೧೬

ಪರಿವೃತ್ತಿ-ಯಥಾಕ್ರಮಂ :

ಸೂತ್ರಂ ೧೫೦

ಒಂದಂ ಕೊಟ್ಟೊಂದಂ[೫] ಕೊ
ಳ್ವಂದಂ[೫] ಪರಿವೃತ್ತಿಯೆಂಬುದಕ್ಕುಂ ತರದಿಂ
ದೊಂದಿರೆ ನಿರ್ದೇಶಸ್ಥಿತಿ
ಯಿಂದಂ ಪೇೞ್ವುದು ಯಥಾಕ್ರಮಂ ಮುನಿಮತದಿಂ ೬೧೭

ಲಕ್ಷ್ಯಂ : ಪರಿವೃತ್ತಿಗೆ :

೧ ಬಿಳಿಯಲರ್ಗಣ್ಗಳ್ ಬೆಳ್ಪಂ
ಲಳನಾಜನದಧರಮಣಿ[೬]ಗೆ ಕೊಟ್ಟದಱ ಪುದುಂ
ಗೊಳಿಸಿದ ಕೆಂಪಂ ನೀವೋರ್
ಕುಳಿಯೊಳ್ ಮಾಱಾಡಿ ಕೊಂಡ ತೆಜದಿಂ ತೋರ್ಕುಂ ೬೧೮

೧ ಮುಂಚೆ (ನ) ೨ ಲಕಿಯೊ (ನ) ೩ ರಿಲ್ಲ (ಪ) ೪ ಗಾಂಪನೇಂ (ಮೈ) ; ಗಾಂಪನಿಂ (ನ)
೫-೫ ಕೊಳ್ವಂದದು (ನ) ೬ ರುಚಿ (ನ)

ಯಥಾಕ್ರಮಕ್ಕೆ :

ಮತ್ತೇಭವಿಕ್ರೀಡಿತಂ

೨ ಇದು ನಿನ್ನರ್ಜಿಸಿದಿಕ್ಷುಚಾಪಮಿದು ನಿನ್ನೀ ಲೋಕಮಂ ಕೆಯ್ಗೆ ಮಾ
ಡಿದ ಪುಷ್ಪಾಸ್ತ್ರಮಿದಲ್ತೆ ನಿನ್ನ ವಿಜಯಪ್ರಾರಂಭದೊಳ್ ತೋರ್ಕೆಗೆ
ತ್ತಿದ ಜೈತ್ರಧ್ವಜಮೆಂದು ತೋರ್ಪ ತೆಱದಿಂ ಭ್ರೂಲಾಸ್ಯಮಂ ನೀಳ್ದ ಪಾಂ
ಗದ ಬೆಳ್ಪಿಂಗಳನೆಡ್ಡಮಪ್ಪ ಕಬರೀವಿಸ್ತಾರಮಂ ತೋಱದಳ್ ೬೧೯

(ಪಂಪನ ಆದಿಪುರಾಣ ೧೧,೧೭)

ಲಕ್ಷ್ಯಂ : ಎರಡಱಿೊಳ್ ಬಹುಳನಿಶ್ಚಯಶಬ್ದಮದಕ್ಕೆ : *

ಚಂಪಕಮಾಲೆ

೩ ಅವಿಹಿತವೇಗಮೇಟಗ್ಗಿಯ ಜವಂ ವ್ರಣಮಕ್ಷತಕಾಯಮೆತ್ತಿ ಕ
ಟ್ಟುವ ಮದಮುಣ್ಮಿ ಸೋರ್ವ ಸೊನೆ ಬೀಳ್ವ ಗಜಧ್ವಜಮಂಬರಕ್ಕೆ ನಿ
ಳ್ಕುವ ಜಯಕೇತು ಸಂದೆಯದೆ ದಂಡುಗಮಂ ಕಿಡಿಸಿತ್ತು ಮುಂದಣೋ
ಡುವ ರಿಪುದಂತಿಗಂ ಪೆಱಗಣಟ್ಟುವ ಙಟ್ಟರ ಮೇರುದಂತಿಗಂ ೬೨೦

ಇಲ್ಲಿ ಕೆಲರ್ ವ್ಯುತ್ಕ್ರಮಗಣನೆಯಿಂದೆ ನಿಂದಿತಕ್ರಮಮೆಂದು ಪೇಳ್ವರ್

ಪರ್ಯಾಯಂ-ಆವಳಿ : ಸೂತ್ರಂ ೧೫೧

ನುಡಿಯದೆ ಮನದರ್ಥಮನದು
ನುಡಿದಂತಿರೆ ನುಡಿದ ನುಡಿಯೆ ಪರ್ಯಾಯಂ ಮ
ತ್ತಡಕಿಲ್ಗೊಳೆ ಪಲವುಮನೊಂ
ದೆಡೆಯೊಳ್ ಸಮಗೊಳಿಸಿ ಪೇಳ್ವುದಾವಳಿ ಪೆಸರಿಂ ೬೨೧

ಲಕ್ಷ್ಯಂ : ಪರ್ಯಾಯಕ್ಕೆ :

೧ ಬನದೊಳಗೆ ನೋಡಿ[10] ಪೊಸವೂ[11]
ವಿನ ಗೊಂಚಲನಕ್ಕ ನಿನಗೆ ತಂದಪ್ಪೆಂ ನೀ
ನಿನಿತೊಂದು ಬೇಗಮಂ[12] ನಿ
ನ್ನಿನಿಯನ ಪಟಕ್ಕಿಯೊ[13]ಳಿರೆಂದು ಸಖಿ ತೊಲಗುವುದುಂ ೬೨೨

೧ ನೀನ (ನ) ೨ ಮೀನ (ನ) ೩ ಸೇಕ (ನ) ; ಶೀತ (ಮೈ, ನ) ೪ ಕ್ಷರ (ಮೈ) ೫ ಪೋರ್ವ (ಮೈ) ೬ ಬಲ್ದು (ಮೈ) ೭ ಬಿಡಿ (ನ) ೮ ರಟ್ಟದ (ನ) ೯ ವ (ನ) ೧೦ ಪೋಗಿ (ದರ್ಪಣ, ನ) ೧೧ ಮಾ (ದರ್ಪಣ, ನ) ೧೨ ದಿಂ (ದರ್ಪಣ, ನ) ೧೩ ಪಕ್ಕದೊ (ಕಾ)

* ಎರಡಱೊಳಂ ಬಹುಳನಿಬಂಧಂ ಸಮುದಿತಕ್ಕೆ (ನ)

ಆವಳಿಗೆ :

೨ ಕೊಳಗಳ್ ದಳಿತಾಬ್ಜಂಗಳ್
ದಳಿತಾಬ್ಜಂಗಳ್ ಸಮೃದ್ಧಮಧುಗಗಳ್ ಮಧುಗಗಳ್
ಚಳದಳಿಕುಳಾಕುಳಂಗಳ್
ವಿಳಸದಳಿಪ್ರಕರ[೨]ಮಧುರವಿರುತಿಯೆ ಬನದೊಳ್ ೬೨೩

ಆವಳ್ಯಪೋಹಕ್ಕೆ :

೩ ಕಳರುತಿಯಿಲ್ಲದ ಮಧುಪಾ
ವಳಿ ಮಧುಕರನಿಕರಮಿಲ್ಲದಂಬುರುಹವನಂ
ಜಳರುಹಮಿಲ್ಲದ ತಿಳಿಗೊಳ
ನಲರ್ದ ಸರಃಪ್ರಸ[೩]ರಮಿಲ್ಲದೂರಿಲ್ಲದಱ[೧]ೊಳ್ ೬೨೪

ಹೇತು-ಸಮುಚ್ಚಯಂ :

ಸೂತ್ರಂ ೧೫೨

ಹೇತುಮದಾಖ್ಯಾನಂ ಸಹ
ಹೇತುಕಮದು ಹೇತುವೆಂಬಲಂಕೃತಿಯಕ್ಕುಂ
ಮಾತೇಂ ಬಹುಸಂಕಥನಂ
ಜಾತಿದ್ರವ್ಯಾದಿಕಂ ಸಮುಚ್ಚಯ[೪]ಮಕ್ಕುಂ[೪] ೬೨೫

ಲಕ್ಷ್ಯಂ : **ಜ್ಞಾಪಕಹೇತುಗೆ :**

ಅನವದ್ಯವೃತ್ತಂ

೧ ತಿವಳಿಯೊಳ್ ಮಿಡುಕಾಱದ ಮಣ್ಣಿಂದಿಕ್ಕಿದ ಲಂಡದ ಬೆಂಕೆಯಿಂ
ಕವಿವ ಕೀಟ್ಮದದೊಳ್ವೊನಲೊಳ್ ಸುಯ್ಯಾರದ ಪೆರ್ಮೊ[೫]ರೆಯಿಂ ತಗು
ಳ್ದ ವಿಹತಾಂಬುವ ಬಳ್ವೊನಲಿಂದಿರ್ಪಾಱದ ಬಟ್ಟೆಯೊಳೊಕ್ಕ ಪ
ಲ್ಲವನಿಕಾಯದಿನಂದಱಿದಂ ಕಾಡಾನೆಗಳಾಗಡೆ ಪೋದುದಂ ೬೨೬

ಕಾರಕಹೇತುಗೆ :

ಮಣಿವಿಭೂಷಣವೃತ್ತಂ

೨ ಪಂದಿಯಿಂ ಕೆದಱಿದುತ್ಪಳ[೬]ಮುಂ ವನದಂತಿಯಿಂ
ನೊಂದು ಸೂಸಿದ ಸರೋಜಮುಮೊಯ್ಯನೆ ನೀರುಣಲ್
ಬಂದು ಪೋದ ಮೃಗದಗ್ರಖುರಚ್ಯುತವಾರಿಯಿಂ
ನಾಂದೆರಲ್ತುಡಿಯುಮಿಂಬು ತದಗ್ರಿಮಭಾಗದೊಳ್ ೬೨೭

೧ ಡು (ಮೈ) ೨ ಪ್ರತತಿ (ನ) ೩ ಕ (ಮೈ, ನ) ೪-೪ ಮೊನಿಕುಂ (ನ) ೫ ಪೊನ್ನೊ (ನ)
೬ ದುಪ್ಪಳ (ನ)

ಪರಂಪರಿತಹೇತುಗೆ :

ಚಂಪಕಮಾಲೆ

೩ ವಿನಯಮನಿತ್ತುದಿಂದ್ರಿಯಜಯಂ ವಿನಯಂ ಗುಣಸಂಪದಂಗಳಂ
ಜನಿಯಿಸಿದತ್ತು ಸದ್ಗುಣಗಣಂ ಪಡೆದತ್ತು ಜನಾನುರಾಗಮಂ
ಜನದನುರಾಗಮಾಗಿಸಿದುದಾವಗಮಿದ್ಧ[೧]ವಿಶುದ್ಧಕೀರ್ತಿಯಂ
ತನಗೆನೆ ರಾಜ್ಯಲಕ್ಷ್ಮಿಯನನುಷ್ಠಿಸಿದಂ ನಯದಿಂ ಯುಧಿಷ್ಠಿರಂ ೬೨೮

ಅಭಾವಹೇತುಗೆ :

೪ ಅವಿನಯದಿನನಿಂದ್ರಿಯವ
ರ್ಗವಿಜಯ[೨]ದಿನಬುಧವಿಶಿಷ್ಟ[೨]ಸಂಭಾವನೆಯಿಂ
ವಿವಿಧವ್ಯಸನಂಗಳ್ ಸಂ
ಭವಿಸುಗುಮಾರ್ಗಂ ವಿಶಿಷ್ಟವಿದ್ವಿಷ್ಟಂಗಳ್ ೬೨೯

ಸಮುಚ್ಚಯಕ್ಕೆ :

ಹರಿಣೀವೃತ್ತಂ

೫ ನೃಪನ ದಯೆಯುಂ ನಚ್ಚುಂ ತನ್ನಣ್ಮುಮಾರ್ಪ[೩]ದುಮಾಂತ ಭೂ
ಮಿಪನ ಮನದೊಂದುರ್ಕುಂ ಸೊರ್ಕುಂ ಬಿಗುರ್ತಿರವುಂ ನಿಜ
ದ್ವಿಪಹಯರಥಾನೀಕಾನೇಕಪ್ರಧಾನರ ಸಾವುಮಾ
ತಪನತನಯಂಗಾಗಳ್ ಕಾಯ್ಪಂ ನಿಮಿರ್ಚಿದುವಾ[೪]ಜಿಯೊಳ್ ೬೩೦

೬ ಕೃತ[೫]ಮಣಿವಿ[೫]ಭೂಷಣಂಗಳ
ನತಿಶಯಿಸಿದುವವರ ಕೊರಲೊಳಂ ತೋಳೊಳ್[೬]ಮು
ತ್ಥಿ[೬]ತಮಾಗಿ ಭೂಷಣಂಗಳ್
ನಿತಂಬಮಂಡಳದೊಳಂ ಕುಚಾಭೋಗದೊಳಂ ೬೩೧

ಚಂಪಕಮಾಲೆ

೭ ಕೊಡೆ ಗುಡಿ ತೋರಣಂ ದಧಿ[೭] ಮಧುದ್ರವಮುಚ್ಚಗಬುಂಕೆ ಲಾಜೆ[೮] ಸಂ
ಗಡಮ[೯]ಲರಕ್ಷತಂ ಬಿಳಿಯ ಸಾಸವೆ ಪೊಂಗೊಡವ[೧೦]ಷ್ಟಶೋಭೆ ಕ
ನ್ನಡಿಕಡೆ ವರ್ಧಮಾನಪಟ[೧೧]ಹಂ ತಿ[೧೧]ಚಿಮಂಗಳಗೀತನಾದಮೆ
ಲ್ಲೆಡೆಗಳೊಳಲ್ಲಿಗಲ್ಲಿಗಧಿಕಂ ಪಡೆದತ್ತು ಜನಾನುರಾಗಮಂ ೬೩೨

೧ ಮಿಂತು (ಮೈ, ನ) ೨–೨ ದಿಂ ಬುಧವಿತರ್ಕ (ಮೈ, ನ) ೩ ಮಾರ್ಪುರ್, ಮಾಱ್ಪು (ನ)
೪ ದಾ (ಮೈ) ೫–೫ ವಾಣಿ (ಮೈ) ೬–೬ ಮು।ದ್ಧ (ನ) ೭ ಘನ (ನ) ೮ ಸತ್ತಿ (ಮೈ, ನ)
೯ ಗಡಿಯು, ಗಡಿಮು (ನ) ೧೦ ನ (ಕಾ) ೧೧–೧೧ ಹಾರಿ (ನ)

ಶಾರ್ದೂಲವಿಕ್ರೀಡಿತಂ

೮ ಆಟಂ ಬಾಜನೆ ಗಾಡಿಗಳ್ ಪಸದನಂ ಬೆಳ್ದಿಂಗಳೊಳ್ಪಾತು ಕೊಂ
ಡಾಟಂ ಕತ್ತುರಿ ಕಪ್ಪುರಂ ನಗೆ ತೆಗಱ್ ಪಾಟಂ ಬಿಯಂ ಜವ್ವನಂ
ನೋಟಂ ತಂಬುಲಮಿಂಪು ಕಂಪು ವಿಭವಂ ಮೆಯ್ಮೋಳಮೆಂದಿಂತಿವಂ[1]
ಬೇಟಕ್ಕಾಗರಮೆಂಬೆನೆಣ್ಣ ಸುಸಿಲೇಂ ಪೇಱ್ ಪಾಗದೊಳ್ ತೀರದೇ ೬೩೩

ಅನುಮಿತಿ-ಸೂಕ್ಷ್ಮಂ :

ಸೂತ್ರಂ ೧೫೪

ಸಾಧನಮಂ ಸಾಧ್ಯಕ್ಕವಿ
ರೋಧಿಯನಱಿದೂಹೆಗೆಯ್ವುದನುಮಿ[2]ತಿಯೆನಿಕುಂ
ಸಾಧುಸಮಾಧಿಪರೇಂಗಿತ
ಬೋಧಂ ನಿರ್ಬಾ[3]ಧಮಪ್ಪುದಂತದು ಸೂಕ್ಷ್ಮಂ ೬೩೪

ಲಕ್ಷ್ಯಂ : **ಅನುಮಿ[4]ತಿಗೆ :**

ಮಹಾಸ್ರಗ್ಧರೆ

೧ ಎಳಮಿಂಚಿಲ್ಲಕ್ಕುಮಾಖಂಡಲಲಲಿತಧನುರ್ದಂಡಮಿಲ್ಲಕ್ಕುಮಭ್ರಾ
ವಳಿಯಿಲ್ಲಕ್ಕುಂ ಕದಂಬಾನಿಲ[5]ನ ಸುಱಿ[5]ವ[5]ದಿಲ್ಲಕ್ಕುಮುದ್ಯನ್ಮಯೂರೀ
ಕುಳಲೀಲಾತಾಂಡವಾಡಂಬರವಿಳಸನಮಿಲ್ಲಕ್ಕುಮಿಂತಾ ಮಹೀಮಂ
ಡಳದತ್ತಲ್ ನಲ್ಲನಂತಲ್ಲದೊಡೆ ತಡೆದದೇಕಿರ್ಪನಿಂದಲ್ತೆ ಬರ್ಪಂ ೬೩೫

ಅಲ್ಲದೆಯುಂ :

೨ ಬೆಸೆದಿರೆ ನಿನ್ನೋಪಳ ಕಾ
ಲ್ಗಸವಸದಿಂದೆಱಗಿ ತಿಳಿಪಿದಯ್ ನಿರ್ವ್ಯಾಜಂ
ನೊಸಲೊಳ್ ನಿಸದಮಲಕ್ತಕ
ರಸತಿಲಕಮದಿ[6]ಲ್ಲದಂದದೇಕಿಂತಕ್ಕುಂ ೬೩೬

ಸೂಕ್ಷ್ಮಕ್ಕೆ :

೩ ಏ[7]ಗಳ್ ನಮಗಕ್ಕುಂ ಸಂ
ಯೋಗಮೆನಲ್ ಬಗೆವ ನಲ್ಲನಂ ಕುಱಿತು ಮನೋ
ರಾಗದಿನೊಡರಿಸಿದಳ್ ಚೆ
ಲ್ವಾಗಿರೆ ಪೆಱಳೊರ್ವಳಬ್ಜದಳಮುಕುಳನಮಂ ೬೩೭

೧ ಬಿಂತಿವುಂ (ನ) ೨ ಮ (ಮ್ಮೈ) ೩ ನಿರ್ಬಾಧ (ನ) ೪ ಮ (ಮ್ಮೈ) ೫-೫ ನ ಸೊಗಡ (ಮ್ಮೈ); ನೆಸಗುವು (ನ) ೬ ದ (ನ) ೭ ಆ (ಮ್ಮೈ)

ಅಂತುಮಲ್ಲದೆಯುಂ :

೪ ವಿನಯೋಪಚಾರವಚನಮು
ಮನುಕೂಲಾಚರಣಮುಂ ವಿಭಿನ್ನಾಸನಮುಂ
ಮನದೊಳಗೆ ಪುದಿದು ಪೊಣ್ಮಿದ
ಮುನಿಸಂ ಕನ್ನಡಿಪುವಾಗೆ[೧] ಬಗೆವೆಂ ಪ್ರಿಯೆಯೊಳ್ ೬೩೮

ಲೇಶಂ (ಅಥವಾ ಲವಂ)-ನಿಗೂಹನಂ :

ಸೂತ್ರಂ ೧೫೪

ಗುಣಮನೆ ತರ್ಪುದು ದೋಷದ
ಗಣನೆಗೆ ದೋಷಮುಮನಿನಿಸು ಗುಣಗಣನೆಗೆ ತಂ
ದೊಣರ್ಪುದು ಲೇಶಂ ವಿಬುಧಾ
ಗ್ರಣಿಗಳ್ ಕೆಲಬರ್ ನಿಗೂಹನಂ[೨] ಲವಮೆಂಬರ್ ೬೩೯

ಲಕ್ಷ್ಯಂ : ಲೇಶಕ್ಕೆ :

೧ ಒಡನಿರ್ದಗಲ್ಕೆಯಾದೊಂ
ದೆಡೆಯೊಳ್ ದುಃಖಮನಸಹ್ಯಮಂ ಮಾಱ್ಪುದಱಿಂ
ಸುಡು ಸುಡು ಸಜ್ಜನರಪ್ಪವ
ರೊಡಗೂಟಮನಕ್ಕ[೩] ಖಳರಕೂಟಮೆ ಸುಖದಂ ೬೪೦

ನಿಗೂಹನಕ್ಕೆ :

ಚಂಪಕಮಾಲೆ
೨ ಪರಿವಿಡಿಗೆಯ್ಯೆ ಸೊಂದಿಗಿಳಿ ತಂದೆಯ ತಾಯ ಸಮೀಪದೊಳ್ ತನೂ
ದರಿಯ ರತೋಪಯುಕ್ತರುತಿಯಂ ವಿನತಾನನೆ ನಾಣ್ಚಿ[೪]ತಾಳತ
ತ್ವರ[೪]ಶಿಶುನರ್ತನಪ್ರಹತಕಂಕಣಝುಂಕೃತಹಸ್ತತೂರ್ಯ[೫]ನಿ
ರ್ಭರ[೫]ರವದಿಂದದಂ ಮಱಸಿದಳ್ ಗಡ ಮುಗ್ಧೆ[೬]ಯದೇಂ ವಿದಗ್ಧೆಯೋ[೬] ೬೪೧
(ಪೊನ್ನನ ಶಾಂತಿಪುರಾಣ ೮, ೮೫)

ವ್ಯತಿರೇಕಂ-ದೀಪಕಂ : ಸೂತ್ರಂ ೧೫೫

ವ್ಯತಿರೇಕಮುಭಯಸಾಮ್ಯ
ಪ್ರತೀತಿಯಂ ತೋಱಿ ಭೇದಮಂ ಮಾಱ್ಪುದು ಸಂ
ಗತಿ[೭]ಯಿಂದಂ ಮಧ್ಯಾಂತ[೭]
ಸ್ಥಿತಮಾಗಿ ಬೆಳಪ್ಪುದಱಿಗೆ ದೀಪಕಮುಕ್ಕುಂ ೬೪೨

೧ ಗಿ (ನ) ೨ ಮುಂ (ನ) ೩ ನಕ್ಕೆ (ನ) ೪-೪ ಕಾಮತ।ತ್ಪರೆ (ಮ್ಯ, ನ) ; ತೋಳತ।ಳ್ಪದ (ನ, ಪ) ೫-೫ ಸುಂ।ದರ (ಪಾ) ೬-೬ ಕರಂ ವಿದಗ್ಧೆವೋಲ್ (ಪ) ೭-೭ ಯಾದಿಮಧ್ಯಮಂತ (ನ)

ಲಕ್ಷ್ಯಂ : ವ್ಯತಿರೇಕಕ್ಕೆ :

೧ ಗಂಭೀರಮಮಳಲಕ್ಷ್ಮೀ
ಸಂಭವಪದಮಧಿಕಸತ್ತ್ವಮಾಗಿಯುಮೆಯ್ದ
ಲ್ಕಂಭೋಧಿ ನೆಱೆದುದಿಲ್ಲವ
ನಂ ಭಾಸುರನಿಶಿತಮತಿಯನತಿಕಲುಷಜಡಂ ೬೪೩

ಚಂಪಕಮಾಲೆ

೨ ವಸುಧೆಗೆ ಸಂದಹೀನರಿಪುವರ್ಗಮನೋಡಿಸಿ ಚಕ್ರಿ ಮೆಚ್ಚಿ ಬ
ಣ್ಣಿಸೆ ಪತಿಭಕ್ತಿಯಂ ಮೆಱೆದು ಮಂತ್ರಪದಕ್ಕಧಿನಾಥನಾಗಿ ಪೆಂ
ಪೆಸೆವಿನಮಾರೊಳಂ ವಿಮುಖವೃತ್ತಿಯೊಳೊಂದದ ಪಕ್ಷಪಾತದಿಂ
ದೆಸೆಗದ ವೈನತೇಯನಿವನೆಂಬುದು ಸಾಹಸವೈನತೇಯನಂ ೬೪೪

೩ ವಾರಿಜಗಂಧಿ ವಿಭಾತಸ
ಮೀರಂ ನಿಜಸುರಭಿ ನಿನ್ನ [1]ಸುಯ್ಯಿದಱೊಳದಂ[1]
ತೋರಗೆಯಕ್ಕುಮೆ[2] ಪರಗುಣ
ಹಾರಿಗೆ ನಿಜಗುಣ[3]ಮದೇಕೆ[3] ಸಮನಿಸಿದಪುದೋ ೬೪೫

(ಪೊನ್ನನ ಶಾಂತಿಪುರಾಣ ೫, ೮೫)

ಕಾರಕದೀಪಕಕ್ಕೆ :

೪ ನವಜಳದಾಗಮಮಿಂತೀ
ಭುವನಜನಕ್ಕೆಲ್ಲಮೆಯ್ದೆ ಮಾಡಿದುದ[4]ಧಿಕೋ
ತ್ಸವಮಂ ಮತ್ತಂತದೆ ತಾಂ
ಪ್ರವಾಸಿಗಳ್ಗೆರ್ದೆಯೊಳೊದವಿಸಿತ್ತದ[5]ವಲಲಂ ೬೪೬

೫ ಓಸರಿಸಿದ ಜವನಿಕೆಯೊಡ
ನೋಸರಿಸಿದನಿಸಲೆ ಕಂತುಪುಷ್ಪಾಂ[6]ಜಳಿಯಂ
ಸೂಸಿದ ಪದದೊಳ್[7] ಸಭೆಗಂ
ಸೂಸಿದನೊಡನೊಡನೆ[8] ನನೆಯ ಮೊನೆಯಂಬುಗಳಂ ೬೪೭

(ಪಂಪನ ಆದಿಪುರಾಣ ೯, ೨೧)

೧-೧ ಸುಯ್ಯುದಱೊಳಗಂ (ನ) ೨ ತೋರಂತಕ್ಕುಮೊ (ಪಾ) ೩-೩ ನೊಳಕ್ಕೆ, ದೊಳಂತೆ (ನ) ೪ ದನ (ಮೈ) ೫ ಡ (ಮೈ) ೬ ಕುಸುಮಾಂ (ಕಾ) ೭ ಪದದೊಳ್ (ಕಾ) ೮ ನೊರ್ಮೊ ದಲೆ (ನ)

೬ ಆವರಿಸಿತ್ತೊ ನಭೋಂತ
ರ್ಭೂವಿವರಮನಮರ್ದಿನೆಸಕಮೆನೆ ಬಿರಯಿ[1]ಗಳೋ
ವೋವಿದು ಮದನನ ಸೋದನ
ದೀವಿಗೆಯೆನೆ ತೊಳಗಿ ಬೆಳಗಿದಂ ತುಹಿನಕರಂ ೬೪೮
(ಪಂಪನ ವಿಕ್ರಮಾರ್ಜುನವಿಜಯ ೪,೫೨)

ಕ್ರಿಯಾದೀಪಕಕ್ಕೆ :

೭ ಸೊಗಯಿಸಿದುದು ಕಾರ್ಗಾಲದ
ಪುಗಿಲೊಳ್ ಜಲಜಲನೆ ಪರಿಯುತಿರ್ಪೊಳ್ಳೊನಲುಂ
ಮುಗಿಲ ಪೊರೆವೊರೆಗಳೊಳ್ ಪೊಳೆ
ದೊಗೆವ ಚಳಚ್ಚಟುಳತರತಟಿದ್ವಿಳಸನಮುಂ[2] ೬೪೯

೮ ಧರೆಯಂ ಮೆಟ್ಟದೆ ಮೆಟ್ಟುವ
ಸುರಲಲನಾನೃತ್ತ[3]ಮಿತ್ತಲಭವನ ಸಭೆಯೊಳ್
ಕರಮೆಸೆದುದು ವಾರ[4]ಸ್ತ್ರೀ
ಪರಿನರ್ತನಮತ್ತಲಧಿಕವಿಭವನ[5] ಸಭೆಯೊಳ್ ೬೫೦
(ಪಂಪನ ಆದಿಪುರಾಣ ೯,೭೧)

೯ ಕುಳಿರ್ವೆಲರುಮಾಲಿನೀರುಂ
ತಳಿರ್ವಾಸುಂ ಚಂದ್ರಕಾಂತಮುಂ ಚಂದನಮುಂ
ಕೊಳನುಂ ನಂದನವನಮುಂ
[6]ಕಳೆಯವೆ ಬೇಸಗೆಯೊಳೆನ್ನ[6] ಬೇಟದ ಸೂಡಂ ೬೫೧

ಸಮಾಹಿತಂ-ಆವೃತ್ತಿ :

ಸೂತ್ರಂ ೧೫೬

ಸಮನಿಸಿ ಬಿದಿವಸದಿಂದಂ
ಸಮಾಹಿತಂ ಬರ್ಪೊಡದು ಸಮಾಹಿತಮೆನಿಕುಂ
ಸಮಗೊಂಡರ್ಥಪದಾವೃ
ತ್ತಿ ಮತ್ತದಾವೃತ್ತಿಯೆಂಬ ಪೆಸರಂ ಪಡೆಗುಂ ೬೫೨

೧ ವಿರಹಿ (ಪಾ) ೨ ಮಂ (ಮೈ) ೩ ನೃತ್ಯ (ಮೈ, ಕಾ) ೪ ದೇವ(ಮೈ, ನ) ೫ ಲಾ ಮಹೀಶನ (ಕಾ, ಮೈ) ೬-೬ ಕಳೆಯುವು ಬೇಸಗೆಯೊಳೆನಗೆ (ನ)

ಲಕ್ಷ್ಯಂ : ಸಮಾಹಿತಕ್ಕೆ :

೧ ಕಡುಗಟ್ಟಲೆಯೊಳ್ ಪ್ರಿಯನಿ
ರ್ದೆಡೆಗಾಗಿಯೆ[1] ಪೋಗಲೆಂದು ಮನೆಯಂ ಪೊಱಮ
ಟ್ಟಡಿಯಿಡಲಱಿಯದೆ ಮಱುಗುವ
ಮಡದಿಗೆ ಬಗೆ ತೀರೆ ಮಿಂಚು ಮಿಂಚಿದುದಾಗಳ್ ೬೫೩

೨ ಮುಳಿದಿರೆ ನಿಜವಲ್ಲಭೆಯಂ
ತಿಳಿಪಲ್ ಕಾಲ್ಗೆಱಗಲಿನಿಯನಿರ್ಪವಸರದೊಳ್
ಜಳಧರನಿನದಂ ನೆಗೆದುದು[2]
ತಳಮಳಗುತ್ತಾಕೆ[3] ತಾನೆ ಬಿಗಿಯಪ್ಪುವಿನಂ ೬೫೪

ಆವೃತ್ತಿಗೆ :

ಮಾಲಿನೀವೃತ್ತಂ

೩ ಅಲರ್ದುವು ಕುಟಜಂಗಳ್ಪೂತುವಿಂಬಪ್ಪಿನಂ ಕಂ
ದಲಿ[4] ಕುಸುಮಿಸಿದತ್ತುದ್ದಾಮನೀಪಾವನೀಜಾ
ವಲಿ ಬಿರಿದುವೆ ಜಾತೀಯೂಥಿಕಾಕೇತಕೀ ಸಂ
ಕುಲಮವಿರಲಗಂಧಾಮೋದಿತಾಶಾಂತರಾಲಂ ೬೫೫

೪ ಪಡೆಗುಂ ಮಹಿಮೋನ್ನತಿಯಂ
ಪಡೆಗುಂ ಸನ್ಮಾರ್ಗ[5]ದೆಸಕಮಂ ಗುಣದೊಳ್ಪಂ
ಪಡೆಗುಂ ನಿರ್ಮಳಯಶಮಂ
ಪಡೆಗುಂ ಪಡೆಗುಂ ವಿಭುತ್ವಮಂ ಬುಧಸಂಗಂ ೬೫೬

ಮಹಾಸ್ರಗ್ಧರೆ

೫ ಕಲಿ ಪಾರ್ಥಂ ಪಾರ್ಥನಿಂದಂ ಕಲಿ ರವಿತನಯಂ ಪಾರ್ಥನಿಂ ಕರ್ಣನಿಂದಂ
ಕಲಿ ಭೀಮಂ ಪಾರ್ಥನಿಂ ಕರ್ಣನಿನನಿಲಜನಿಂ ರಾಘವಾಧೀಶಭೃತ್ಯಂ
ಕಲಿ ಶಕ್ರಾಪತ್ಯನಿಂ ಕರ್ಣನಿನನಿಲಜನಿಂದಂಜನಾಪುತ್ರನಿಂದಂ
ಕಲಿ ಧಾತ್ರೀಚಕ್ರದೊಳ್ ವಿಕ್ರಮಗುಣನಿಳಯಂ ವೀರಮಾರ್ತಾಂಡದೇವಂ

೧ ಗಾಗಿರೆ (ಮೈ, ನ) ೨ ನೆಗಬ್ದಿದು (ನ) ೩ ಗಾದಾಕೆ, ಗಾಗಾಕೆ (ನ) ೪ ಟಲಿ, ಡಲಿ (ನ)
೫ ಸನ್ಮಾನ (ನ)

ಪರಸ್ಪರಂ-ಸಾರಂ : **ಸೂತ್ರಂ ೧೫೭**

ಇತರೇತರಕಾರಕಸಂ
ಪ್ರತಿಪತ್ತಿ ಪರಸ್ಪರಂ ಸಮೂಹದೊಳೆಸೆವೊಂ
ದತಿಶಯಗುಣದಿಂ ನಿರ್ಧಾ
ರಿತಮಪ್ಪುದು ಸಾರಮೆಂಬ ಸದಲಂಕಾರಂ ೬೫೮

ಲಕ್ಷ್ಯಂ : ಪರಸ್ಪರಕ್ಕೆ :

೧ ಸರಿಗೆಗೆ ಕೊರಲ್ ಕೊರಲ್ಗಂ
ಸರಿಗೆ[೧]ಯಲಂಕರಿಸೆ[೧] ಸರಿಗೆ ವಂಧುದು ಮುಯ್-ಮು
ಟ್ಟಿರಡಱ ಬೆಡಂಗುವೆಂಬಂ
ತಿರೆ ಕರವೊಪ್ಪಿದು[೨]ದು ಕೊರಲಗೇಂದ್ರಾತ್ಮಜೆಯಾ ೬೫೯

ಸಾರಕ್ಕೆ :

೨ ಸಾರಂ ಸಂಸಾರದೊಳಬ
ಲಾರತ್ನಂ ಸಾರಮಲ್ಲಿ ಜವ್ವನಮದಱೊಳ್
ಸಾರಂ ಮಧುರಾಕಾರಂ
ಸಾರಂ ಮತ್ತಂತದಕ್ಕುಮನು[೩]ಕೂಲರಸಂ ೬೬೦

ನಿವಿಾಳನಂ : **ಸೂತ್ರಂ ೧೫೮**

ಪ್ರಕೃತಿಯಿನಲ್ಲದೊಡಾಗಂ
ತುಕಹೇತುವಿನಿಂ ಪ್ರಕೋಪರಾಗಾದಿಮನೋ
ವಿಕೃತಿಯನುಪಲಕ್ಷಿಸಿ ತಿಳಿ
ಯೆ ಕಾಣದಿರಲದು[೪] ನಿವಿಾಳನಂ ಪೆಸರಿಂದಂ ೬೬೧

ಲಕ್ಷ್ಯಂ :

೧ ಸರಳತರಧವಳಸುಸ್ನಿ
ಗ್ಧರೂಪವಾ ನೃಪನ[೫] ದೃಷ್ಟಿ ಸಾಜದೊಳದಱಿಂ
ದೊರೆಕೊಂಡುದೊಂದು ಚೇತೋ
ನುರಾಗಮಱಿಯಲ್ಕೆ ಬರ್ಪುದಲ್ತಣವಾರ್ಗಂ ೬೬೨

೧-೧ ವಲಂ ಸರಿಗೆ (ನ) ೨ ವೊಪ್ಪುವು (ನ) ೩ ದರ್ಕೆಯನು (ಮೈ, ನ) ; ದಕ್ಕಮನು (ನ)
೪ ಕಾಣಲಾದುದು (ನ) ೫ ನೃಪರ (ನ)

೨ ಮದಿರಾಮದಭರಪಾಟಲ
ವದನೆಯ ಮನದೊಳ್ ಪೊದಟ್ದ ಕೋಪಂ ತಾನಂ
ತದು ಲಕ್ಷಿಸಲ್ಕೆ ಬಂದಿ
ರ್ದುದಿಲ್ಲ ಕೃತದೋಷನಾ¹ಗಿಯುಂ ಕಾಮುಕನಿಂ ೬೬೩

– ಇವು ವಾಸ್ತವಭೇದಂಗಳ್

ಔಪಮ್ಯಂ : ಸೂತ್ರಂ ೧೫೯

ಏನಾನುಮೊಂದು ತೆಱದಿಂ
ನಾನಾವಿಧವಸ್ತುರೂಪದೊಳ್ ಸಾದೃಶ್ಯಂ
ತಾನೆನಿಸಿ ತೋರ್ಪುದದು ಬುಧ
ಮಾನಿತಮೌಪಮ್ಯಮೆಂಬಲಂಕೃತಿಯಕ್ಕುಂ ೬೬೪

ಉಪಮಾಭೇದಂಗಳ್ :

ಸೂತ್ರಂ ೧೬೦

ಮತ್ತೇಭವಿಕ್ರೀಡಿತಂ
ಉಪಮಾನ ಪ್ರತಿವಸ್ತು ರೂಪಕ ಸಮಾಸೋಕ್ತಿ ಕ್ರಮಾಕ್ಷೇಪ ಸಾ
ಮ್ಯ ಪರಾಖ್ಯಾನ ನಿದರ್ಶನೋತ್ತರ ಸಸಂದೇಹ ಭ್ರಮಾಪಹ್ನುತಿ
ವ್ಯಪದೇಶ ಸ್ಮರಣ ಪ್ರತೀಪಸಮಯೋಗಾಪ್ರಸ್ತುತಸ್ತೋತ್ರಮೆಂ
ದುಪಮಾಭೇದಮಿವಕ್ಕುಮಂತೆ ದೊರೆವೆತ್ತರ್ಥಾಂತರನ್ಯಾಸಮುಂ ೬೬೫

ಅಂತವಱೊಳಗೆ:

ಉಪಮೆ : ಸೂತ್ರಂ ೧೬೧

ಉಪಮೇಯಂ ಗುಣಲೇಶದಿ
ನುಪಮಾನಕ್ಕೆಣೆಗೆ ಮರ್ೊಡುಪಮೆಯೆನಿಕ್ಕುಂ
ವ್ಯ²ಪಸರ್ಗವಿಷಯರೂಪ
³ಪ್ರಪಂಚಿತಮನೇಕಭೇದಮದು ತಾನಕ್ಕುಂ³ ೬೬೬

ಲಕ್ಷ್ಯಂ : ಧರ್ಮೋಪಮೆಗೆ :

೧ ಜಲನಿಧಿವೋಲ್ ಗಂಭೀರಂ
ಬಲವೈರಿಯವೋಲ್ ಸಮಗ್ರವಿಭವಸನಾಥಂ
ಕುಲಗಿರಿವೋಲ್ ನಿಷ್ಕಂಪಂ
ಬಲಿಯಂತೆವೊಲಧಿಕದಾನಿ ದಾನವಿನೋದಂ ೬೬೭

೧ ಮಾ (ನ) ೨ ವ್ಯ (ನ) ೩–೩ ಪ್ರಪಂಚಿತಂ ತಾನನೇಕಭೇದಮೆನಿಕ್ಕುಂ (ನ)

ಹೇತೂಪಮೆಗೆ :

೨ ಪರಿವೃತ್ತತೆಯಿಂ ನುಣ್ಪಿಂ
ಶರಕಾಂಡ[೧]ಪ್ರತಿಮಚಾರುಗೌರಚ್ಛವಿಯಿಂ
ಪರಿಪಕ್ವತಾಳಫಳದೊಳ್
ದೊರೆಯೆನಿಸುಗಮವಳ ಘನಪಯೋಧರಯುಗಳಂ ೬೬೮

ವಸ್ತೂಪಮೆಗೆ :

೩ ಅಳಿಕುಳದಂತಳಕಚಯಂ
ದಳಿತಾಂಬುಜದಂತೆ ನಗೆಮೊಗಂ ಲಲಿತಾಂಗಂ
ಮಿಳಿರ್ವ ಲತೆಯಂತೆ ತಳಮುಂ
ತಳಿರಂತೆ ಬೆಡಂಗುವೆತ್ತು ತೋರ್ಕುಂ ಸತಿಯಾ ೬೬೯

ಶ್ಲೇಷೋಪಮೆಗೆ :

೪ ಸಮವೃತ್ತ[೨]ಸಂಧಿಲಕ್ಷಣ
ಸಮನ್ವಿತಂ ಜಾತ್ಯಲಂಕೃತಿಭ್ರಾಜಿತಮು
ತ್ತಮಕಾವ್ಯಬಂಧದಂತಾ[೩]
ದಮಿತಾರಿಗೆ ಸಾಜಮೊಪ್ಪುಗುಂ ಕಿಱುದೊಡೆಗಳ್[೪] ೬೭೦

ಅನ್ಯೋನ್ಯೋಪಮೆಗೆ : (ಪೊನ್ನನ ಶಾಂತಿಪುರಾಣ ೩, ೪೬)

ಮತ್ತೇಭವಿಕ್ರೀಡಿತಂ

೫ ತಳಮುಂ ಕೆಂದಳಿರುಂ ಕುಚದ್ವಿತಯಮುಂ ಪೂಗೊಂಚಲುಂ ತೋಳ್ಗಳುಂ
ಸೆಳೆಗೊಂಬುಂ ಕುರುಳೋಳಿಯುಂ ಚಳದಳಿವ್ರಾತಂಗಳುಂ ಕೋಮಳಾಂ
ಗುಳಿಯುಂ ತತ್ಕಳಿಕಾವಳೀರುಚಿಯುಮಂತೊಂದೊಂದಱೊಳ್ ಪೋಲ್ವೆಯಾ
ಗೆ ಳತಾಕೋಮಳೆ ಸಾರ್ದಶೋಕಲತೆಯಂ ಪೂಗೊಯ್ದಳಂತ[೫]ಟ್ತಿಯಿಂ ೬೭೧

ವಿಪರ್ಯಾಸೋಪಮೆಗೆ :

ಮತ್ತೇಭವಿಕ್ರೀಡಿತಂ

೬ ಮೊಗಮಂ ತಾವರೆ ಕಣ್ಣನುತ್ಪಳದಳಂ ಧಮ್ಮಿಲ್ಲಮಂ ಸೋಗೆ ಸೆ
ಳ್ಪುಗುರಂ ಕೇದಗೆ ಪುರ್ಬನಂಗಜನ ಬಿಲ್ ದಂತಾಳಿಯಂ ಮುತ್ತು ಕೆಯ್-
ಮುಗಿದಾರಾಧಿಸಿ ಪೋಲ್ತುವೆನ್ನದೆ ಸರೋಜಾತಾದಿನಿಸ್ಸಾರವ
ಸ್ತುಗಳೊಳ್[೬] ಪೋಲಿ[೭]ಸುವಂತುಟಾಂ ಮರುಳನೇ[೭] ರೂಪಂ ವಿಚಿತ್ರಾಂಗಿಯಾ

(ಪಂಪನ ಆದಿಪುರಾಣ ೬,೮೫)

೧ ಶರಕಂಥಾ,ಸ್ಮರಕಾಂಡ (ನ) ೨ ವೃತ್ತಿ (ನ) ೩ ದಂದಂ (ನ) ೪ ಕಿಱುದೆಡೆಯೊಳ್ (ನ)
೫ ಳಂದ (ನ) ೬ ಗಳಂ (ನ) ೭-೭ ಸುವಂತುಟೇಂ ಮರುಳನೇ (ವ್ಯೈ,ಪಾ) ; ಪರಂತದೇಂ
ಮರುಳರೋ (ಕಾ)

ಬಹೂಪಮೆಗೆ :

೭ ಶರದಂಬುದಮಂ ಗಂಗಾ
ತರಂಗಮಂ ಸಿಂಧುವಾರಕುಸುಮಶ್ರೀಯಂ
ಹರಹಾಸವಿಳಾಸಮನನು
ಕರಿಸುವುದತಿವಿಶದಕೀರ್ತಿ ತೋಳ್ಗೊಪ್ಪುವನಾ ೬೭೩

ಮಾಲೋಪಮೆಗೆ :

ಸುಂದರವೃತ್ತಂ

೮ ಎಂತು ಬಸಂತಮದರ್ಕೆ ತೆಂಬೆಲರೆಂತದ
ರ್ಕೆಂತು ತಳಿರ್ ತಳಿರ್ಗೆಂತಲರ್ ಕುಸುಮೋತ್ಕರ
ಕ್ಕೆಂತಳಿ [೧]ಮತ್ತೆ ಮದಾ[೧]ಳಿಗೆಂತು ನಿನಾದಮಂ
ತಂತೆ ತರಂತರಮೊಪ್ಪಿ ತೋಱಿದಳಗ್ಗಳಂ ೬೭೪

ಕಲ್ಪಿತೋಪಮೆಗೆ :

ಪ್ರಭಾತವೃತ್ತಂ

೯ ಮೃಗಮದಕಲ್ಪಿತಪತ್ರಭಂಗರಮ್ಯಂ
ನಗೆಮೊಗಮುಜ್ವಳಕಾಂತಿ ನಾಡೆ ಸೌಮ್ಯಂ
ಸೊಗಯಿಸುಗುಂ ಮೃಗಲಾಂಛನಾಭಿರಾಮಂ
ಮೃಗಧರಬಿಂಬಮಿದೆಂಬಿನಂ ನಿಕಾಮಂ ೬೭೫

ವಾಕ್ಯೋಪಮೆಗೆ :

೧೦ ಪರಮನೊಳಗೊಳಗದೊಂದಂ
ಪರಿಜಪನಂ[೨]ಗೆಯ್ಯೆ[೩]ನೆಗಟ್ದ ಸೂಕ್ತ್ಯವ್ಯಕ್ತಾ[೩]
ಕ್ಷರದಿಂ ನಿಗೂಢತರನಿ
ರ್ಝರರವಗುಂಜದ್ಗುಹಾತಳ[೪]ಕ್ಕೆಣೆಯಾದಂ ೬೭೬
(ಪಂಪನ ಆದಿಪುರಾಣ ೯,೮೬)

ಪ್ರತ್ಯಯೋಪಮೆಗೆ :

೧೧ ಜಲಜಾಯಮಾನಮುಲರ್ಗಣ್
ಪುಲಿನಂ ಮನ್ಯಂ ನಿತಂಬಮಳಿದೇಶೀಯಂ
ಜಲದಳಕಪ್ರತತಿ ಮೃಣಾ
ಳಲತಾಕಲ್ಪಂಗಳಾ ಲತಾಂಗಿಯು[೫] ತೋಳ್ಗಳ್ ೬೭೭

೧-೧ ಮತ್ತಮದಾ (ನ) ೨ ಪಮಂ (ನ) ೩-೩ ಯುಂ ನೆಗಟ್ದವ್ಯಕ್ತಾ (ಪಾ); ನೆಗಟ್ದ ಸೂಕ್ತಿವ್ಯಕ್ತಾ (ಮೈ, ನ) ೪ ಚಳ (ಮೈ, ಕಾ) ೫ ನತಾಂಶಯ (ನ)

ಸಮಾಸೋಪಮೆಗೆ :

ಹರಿಣೀವೃತ್ತಂ

೧೨ ಕಮಲನಯನಂ ಕಂಬುಗ್ರೀವಂ ಘನಸ್ತನಮಂಡಳಂ
ಭ್ರಮರರುಚಿಮತ್ಕೇಶಂ ಬಿಂಬಾಧರಂ ನಳಿತೋಳ್ ಬೆಡಂ
ಗಮರ್ದುದು[1] ಮೊಗಂ ರಂಭಾಸ್ತಂಭೋರು ತೆಳ್ವಸಿಱೊಪ್ಪೆ ವಿ
ಭ್ರಮ[2]ದ ಕಣ[2]ಯಂ ಪೋಲ್ತರ್ ಸಿಲ್ತಲ್ಲಿ ಬೇಡಿತಿಯರ್ ಕೆಲರ್

ಉಪಮಾದೋಷಂಗಳ್ :

ಸೂತ್ರಂ ೧೬೨

ಲಿಂಗವಚೋವಿಹಿತವಿಭೇ
ದಂಗಳ್ ನ್ಯೂನಾಧಿಕಂಗಳುಂ[3] ಸದೃಶತೆಯಿಂ
ಸಂ[4]ಗತಮಲ್ಲದುವುಂ [4]ದೋ
ಷಂಗಳವುಪಮೆಗೆ ಯಥಾಜನೋದ್ವೇಜನದಿಂ[5] ೬೭೯

ಲಕ್ಷ್ಯಂ : ಲಿಂಗವಚನಭೇದಂಗಳ್ಗೆ :

೧ ನಿರವದ್ಯಂ ಗತದುರಿತಂ
ಪರಿಪೂತಂ ಜಗದೊಳಿಂತಿವಂ ಗಂಗೆಯವೋಲ್
ಸುರುಚಿರತೇಜಂ ಭಾಸುರ
ತರಸ್ವರಂ ಶಿಖಿಶಿಖಾಕಲಾಪಂಗಳವೋಲ್ ೬೮೦

ಹೀನೋಪಮೆಗೆ :

೨ ಎರಲೆಯ ಪಿಂಡುಗಳಂ ದೆಸೆ
ವರಿವರಿವಿನಮುಳಱೆ ತಗುಳ್ವ ನಾಯಂತೆ ರಣಾ
ಜಿರದೊಳಿದಿರ್ಚಿದ ಬಲವದ್-
ವಿರೋಧಿಸೈನಿಕಮನಾ ನೃಪಂ ಬೆಂಕೊಂಡಂ ೬೮೧

ಅಧಿಕೋಪಮೆಗೆ :

೩ ಮುಂಬಿಟ್ಟು ಪರೆದ ಕಲ್ತಲೆ
ಯಂ ಬೆದಱೆ ತೆರಳ್ಚಿ ಬೆಳಪ ಬೆಳಗಿಂದೆಸದಿ
ರ್ಪಂಬುಜಸಖನಂತಿರೆ ವಿಾ
ಸಂಬುಟು ಬೆಳಗಿದಪುದಖಿಳಗಗನಾಂತರಮಂ ೬೮೨

೧ ಗಮರ್ದುರೆ,ಗಮರ್ದುಟಿ (ನ) ೨-೨ ಧರಣಿ (ನ) ೩ ಕಂಗಳವು (ನ) ೪-೪ ಗತಮು ಮಲ್ಲದುವು (ನ) ೫ ದೊಳ್ (ಮ್ಯ,ನ)

ಅಸಾದೃಶ್ಯಕ್ಕೆ :

ವಸಂತತಿಲಕವೃತ್ತಂ

೪ ದಾನಾಂಬುಚುಂಬಿತಕಪೋಲತಲಂ ಮದೇಭಂ
ತಾನೊಪ್ಪುವಂತೆ ಸೊಗಯಿಪ್ಪುದು ನೋಡೆ ಪೀನಂ
ನಾನಾರುಚಿಪ್ರಚುರಚಾಪಕಳಾಪಕಾಂತಂ
ಸಾನುಪ್ರದೇಶದೊಳುಪಾಗತಮಿಾ ಮಯೂರಂ * ೬೮೩

೫ ಲತೆಯೊಳ್ ನಳಿತೋಳ್ ಪಲ್ಲವ
ತತಿಗಳೊಳಧರಂ ಕಱುಂಕೆಯೊಳ್ ಮೆಯ್ವಣ್ಣಂ
ವಿತತಾಂಶುವಪ್ಪ ಹಿಮದೀ
ಧಿತಿಯೊಳ್ ಮೊಗಮುಪಮೆ೧ವೆತ್ತು ತೊಳಗುವುದವಳಾ೧ ‡ ೬೮೪

ಪ್ರತಿವಸ್ತೂಪಮೆ-ರೂಪಕಂ :

ಸೂತ್ರಂ ೧೬೩

ಪ್ರತಿವಸ್ತೂಪಮೆ ಸಾಮ್ಯ
ಪ್ರತೀತಿಯಿಂದಂ ಸಮಾನವಸ್ತುನ್ಯಸನಂ
ಪ್ರತಿಪಾದಿಸುವುದಭೇದಾ
ತ್ಮತೆಯಿಂದುಪಮೆಯುನದಲ್ತೆ ರೂಪಕಮಕ್ಕುಂ ೨ ೬೮೫

ಲಕ್ಷ್ಯಂ : ಪ್ರತಿವಸ್ತೂಪಮೆಗೆ :

೧ ನಿನ್ನನ್ನನೊರ್ವನುಂ೩ ಸಂ
ಪನ್ನಗುಣಂ ಪುಟ್ಟಲರಿಯನಿನ್ನುಂ ಮುನ್ನುಂ೪
ಸನ್ನುತನಮೇರುಭೂರುಹ
ದನ್ನವು ಪೆಱತಾವ೫ ಮಱನುಮೇಂ ಪುಟ್ಟುಗುಮೇ ೬೮೬

ಅಸಮಸ್ತರೂಪಕಕ್ಕೆ :

ಚಂಪಕಮಾಲೆ

೨ ನೆಲೆಮೊಲೆ ಪೊನ್ನ ಸೊನ್ನಲಿಗೆ೬ಯಾಗೆ ಮೊಗಂ ಸರಸೀಜಮಾಗೆ ಕಣ್
ಮಲರಲರಾಗೆ ಕೆಂದಳಮೆ ಕೆಂದಳಿರಾಗೆ ಕನತ್ಕಪೋಳಮು
ಜ್ವಲಮುಕುರಂಗಳಾಗೆ ದರಹಾಸಮೆ ಸೂಸುವ ಲಾಜೆಯಾಗೆ ಕೋ
ಮಲಲಲಿತಾಂಗಿಯರ್ ನೆರೆದು ನೋಡಿದಿರಂದಿದಿರ್ಗೊಳ್ವ ಮಾಱ್ಕೆಯಿಂ ೬೮೭

೧-೧ ಗೆತ್ತು ತೋಱುಪುವಿವಳಾ (ನ) ೨ ಭೇದಂ (ನ) ೩ ನಿನ್ನವೊಲಿನ್ನೊರ್ವಂ (ನ) ೪ ಮುನ್ನಂ (ನ) ೫ ತಾದ (ನ) ೬ ಸೊನ್ನರಿಗೆ, ಸನ್ನತಿಗೆ (ನ)

* ಈ ಪದ್ಯವು 'ಮೈ' ಪ್ರತಿಯಲ್ಲಿ ಇಲ್ಲ.

‡ ಈ ಪದ್ಯದ ಹಿಂದೆ ೧ ಪ್ರತಿಯಲ್ಲಿ 'ಅಲ್ಲಿಯಾನುದ್ವಯಕ್ಕೆ' ಎಂದಿದೆ (ನ)

ಸಮಸ್ತರೂಪಕಕ್ಕೆ :

ಮತ್ತೇಭವಿಕ್ರೀಡಿತಂ

೩ ವದನಾಬ್ಜಂ ಕರಪಲ್ಲವೋಪನಿ[1]ಹಿತಂ ಬಾಷ್ಪಾಂಬುವಿಪ್ಲಾವಿತಂ[2]
ವಿವಳನ್ನೇತ್ರವಿನೀಲನೀರರುಹಮುಷ್ಣೋಚ್ಛ್ವಾಸದಿಂದಂ ಕಱಂ
ಗಿದ ವೃತ್ತಾಧರವಿದ್ರುಮಪ್ರತತಿ ಚಿಂತಾಂಭೋಧಿಮಗ್ನಂ ಕರಂ
ಕುದಿಯುತ್ತಿರ್ಪೆರ್ದೆ ಸೂಚಿಕುಂ ವಿರಹದುಃಖಾಕ್ರಾಂತಿಯಂ ಕಾಂತೆಯೊಳ್

ವಿಭಕ್ತಿರೂಪಕಕ್ಕೆ :

ಉತ್ಪಲಮಾಲೆ

೪ ಅಂಬುಜಸೂತ್ರಮೆಂಬ ಪೆಣೆದಾವಣೆ[3]ಯಂ ಪಱಿದಾವಲೆಂಬ ಬಾ
ಲ್ಗಂಬಮನೊತ್ತಿ ಕಿಱ್ತು ಲತೆಯೆಂಬ ತುರಂಗಮುಮಂ ಪೊರಳ್ಚಿ ಧೌ
ತಾಂಬುತರಂಗಮೆಂಬ ಪರಿಕಾಱನನಟ್ಟೆ ಮದಾಳಿಯೆಂಬ ಗುಂ[4]
ಡಂ ಬಱಿಯಟ್ಟೆ ಸೋವುದು[5] ಸಮೀರಣವಾರಣಮಾ ಪ್ರದೇಶದೊಳ್ ೬೮೯

ಸಾವಯವರೂಪಕಕ್ಕೆ :

೫ ಪರಿಲುಳಿತಘರ್ಮಜಲಮಂ
ಜರಿ ವಿಚಲದ್ಭ್ರೂಪತಾಕಮತಿತರಳತರ
ಸ್ಫುರಿತಾಧರಪಲ್ಲವಮಿವ
ಳ ರೋಷಮಂ ವಕ್ತ್ರ[6]ಮಿದೆ ವಲಂ ಕನ್ನಡಿಕುಂ ೬೯೦

ನಿರವಯವರೂಪಕಕ್ಕೆ :

೬ ಆರಕ್ತಕಪೋಲಂ ಮದಿ
ರಾರಸಕೃತಸುರಭಿ ಘೂರ್ಣಿತೇಕ್ಷಣಮುದ್ಯದ್-
ಭ್ರೂರಮ್ಯಲಾಸ್ಯಮಾಸ್ಯಾಂ
ಭೋರುಹಮಿಾ ಸುದತಿಗಿಂತಿದೇನೊಪ್ಪಿದುದೋ ೬೯೧

ಸಕಲರೂಪಕಕ್ಕೆ :

ಮಲ್ಲಿಕಾಮಾಲೆ

೭ ವಾರಿಜಂ ವದನಂ ಬೃಹತ್ಪುಲಿನಂ ನಿತಂಬತಲಂ ಚಲ
ಚ್ಚಾರುಲೋಚನಕಾಂತಿ ಬಾಳೆಗಳೋಳಿ ಹಾರಮೆ ಫೇನವಿ
ಸ್ತಾರಮಂಚಿತಕುಂಚಿತಾಳಕಮುನ್ಮದಾಳಿಗಳಾಗೆ ಶೃಂ
ಗಾರದೇವನದೀಪ್ರವಾಹಮಿ[7]ದೊಂದೆ ದಲ್[7] ಪೊಸತೆಂಬಿನಂ ೬೯೨

೧ ವಿ (ನ) ೨ ಲಿಪ್ತಾವಿಲಂ (ನ) ೩ ದಾನಣೆ (ಮೈ); ದಾಣಣೆ (ನ) ೪ ನಾ (ನ) ೫ ಪಾಯ್ವುದು (ನ) ೬ ವಕ್ರ (ಮೈ) ೭-೭ ದೊಂದೆನಲ್ (ನ)

ಹೇತುರೂಪಕಕ್ಕೆ :

೮ ಮೃಗರಾಜಂ ವಿಕ್ರಮದಿಂ
ಖಗರಾಜಂ ಸ್ವಾಮಿಭಕ್ತಿಯಿಂ ನಗರಾಜಂ
ಮಿಗಿಲಾದ ಪೆಂಪಿನಿಂ ಪ
ನ್ನಗರಾಜಂ ಧೈರ್ಯಗುಣದಿನಾಹವಸಿಂಹಂ ೬೯೩

ರೂಪಕರೂಪಕಕ್ಕೆ :

೯ ತರುಣಿಯ[1] ಮುಖೇಂದುಕಮಲಾ
ಕರದೊಳ್ ದೃಗ್ಗೋಳಕಾಂಕ[2]ನೀಳಾಬ್ಜಮಳಂ
ಕರಿಸೆ ವಿಟರಾಹುಭೃಂಗಂ
ಬರೆ[3] ಪೀರ್ದತ್ತಧರಚಂದ್ರಿಕಾಪರಿಮಳಮಂ ೬೯೪

ಮಾಲಾರೂಪಕಕ್ಕೆ :

ಸ್ರಗ್ಧರೆ

೧೦ ಸಂಸಾರಕ್ಕೇಕಸಾರಂ ಬಿದಿಯ ಕುಲಧನಂ ಲೋಕದಾಲೋಕಮಾಧಾ
ರಂ ಸಯ್ಪಿಂಗಕ್ಷಿಗಳ್ಗುತ್ಸವಮೆರ್ದೆಗಮೃತಂ ಕಾಮಸಾಮ್ರಾಜ್ಯಸರ್ವ
ಸ್ವಂ [4]ಸೌಂದರ್ಯಕ್ಕೆ ಗೇಹಂ[4] ಮಹಿತಳತಿಳಕಂ ಜಾಣಮೆಯ್ ನಾಣ ಜೀವಂ
ಮಾಂಸಾಶೀ ನಿರ್ನೆರಿಂತಪ್ಪೆಳೆಯಳನಿಱಿಯಲ್ಕೆಂತು[5] ನೀನೆತ್ತಿಕೊಂಡಯ್[6]

ವಿಶೇಷಗುಣರೂಪಕಕ್ಕೆ :

ಮತ್ತೇಭವಿಕ್ರೀಡಿತಂ

೧೧ ಜಗದಾಲೋಕನದರ್ಪಣಂ ಪ್ರಥಮದಿಕ್ಕಾಂತಾನನಂ ಕಂತುರಾ
ಜಗಜೋದ್ದೀಪನಪಿಂಡಮಂಬರಸರಸ್ಯುತ್ತುಂಸ[7]ಹಂಸಂ ವಿಯೋ
ಗಿಗಣಾಕೂತಕುರಂಗಪೋತಭಯಕೃ[8]ತ್ಕಂಠೀರವಂ ಚೆಲ್ವುವೆ
ತ್ತೊಗೆದತ್ತಂಬುಧಿ[9]ವೀಚಿನರ್ತನನಭಂ[10] ಬಿಂಬಂ ಸುಧಾಸೂತಿಯಾ ೬೯೬

(ರನ್ನನ ಅಜಿತತೀರ್ಥಕರಪುರಾಣತಿಲಕಂ ೬,೪೨)

೧ ತರುಣೀ (ನ) ೨ ಕಾಂತಿ (ನ) ೩ ಪರಿ (ನ) ೪-೪ ಸೌಂದಯ್ಯೈಕಗೇಹಂ (ನ) ೫ ನಱಿಯುತ್ತಿಂತು (ಮೈ, ನ); ನಱಿಯಲ್ಕೆಂತು (ನ) ೬ ಕೊಂಡಾ (ನ) ೭ ಸರಸ್ಸುತ್ತುಂಗ (ಮೈ, ನ) ೮ ಭೃ (ನ) ೯ ದತ್ತಾರ್ಣವ (ಪಾ) ೧೦ ನರ್ತನನಟಾ (ಮೈ); ನರ್ತಕಿನಟಂ (ನ)

ಸಮಾಸೋಕ್ತಿ-ಆಕ್ಷೇಪಂ :

ಸೂತ್ರಂ ೧೬೪

ಉಪಮಾನಕಥನವೊಂದಱಿ
ನುಪಮೇಯಮನಱಿವುದದು ಸಮಾಸೋಕ್ತಿ ನಿಷೇ
ಧಪರಂ ತಾನೆಂಬಂತಾ
ಗೆ ಪೇಳ್ವುದಾಕ್ಷೇಪಮುಕ್ಕುಮದು ಬಹುರೂಪಂ ೬೯೭

ಲಕ್ಷ್ಯಂ : ಸಮಾಸೋಕ್ತಿಗೆ :

೧ ಫಳತರುಗಳ್ ಪಲವುಂ ಬನ
ದೊಳಗೆ ಸುರೋರ್ವೀರುಹಪ್ರಕಾಶಂಗಳ್[1] ತಾ
ಮೊಳವಾದೊಡಮೆಂತುಂ ಬಗೆ
ಗೊಳಿಸಿದಪುದಿದೊಂದೆ ನೂತ್ನಚೂತಕುಜಾತಂ ೬೯೮

ಆಕ್ಷೇಪಕ್ಕೆ :

೨ ಒಡನಮೃತಂ ಜನಿಯಿಸೆ ಪಾ
ಲ್ಗಡಲೊಳ್ ವಿಧು ಪುಟ್ಟಿದಂ ಕಳಾಮಯನೆಂಬೀ
ನುಡಿ ಪುಸಿ ಜಡಾತ್ಮಕಂ ವಿಷ
ದೊಡನೆ ವಿಷಾಕರದೊಳೊಗೆದನೆಂಬುದೆ[2] ತಥ್ಯಂ[3] ೬೯೯

ಅಂತುಮಲ್ಲದೆಯುಂ :

೩ ಪೊಗಟಲ್ಕಾ ನೃಪನಂ ನಾ
ಲಗೆಯೊಂದಱ ಮನುಜರಿರ್ಕೆ ನೆಱೆಯನಣಂ ವಾ
ಸುಗಿಯುಂ ಪವನಾಧ್ವಮನಾ
ವಗಮಾವಂ ವ್ಯಾಸದಿಂದಮಳೆಯಲ್ ನೆಱೆವಂ ೭೦೦

ಸಾಮ್ಯಂ-ಪರಾಖ್ಯಾನಂ :

ಸೂತ್ರಂ ೧೬೫

ಪೊಸಯಿಸುವರ್ಥಂ ಕ್ರಿಯೆಯಿಂ[4]
ಪ್ರಸಿದ್ಧವಸ್ತುವಿನ ದೊರೆ[5]ಗೆ ವರೆ[5] ಸಾಮ್ಯಂ ಮ
ತ್ತಸಮಾನ[6]ವಿಶೇಷಣಗುಣ
ಲಸಿತಂ ಸಮವೃತ್ತಮಪ್ಪುದು ಪರಾಖ್ಯಾನಂ ೭೦೧

೧ ಸುರಾವನಿರುಹಪ್ರಕಾಶಂಗಳೆ (ಮೈ, ನ) ೨ ಬಿದೆ (ನ) ೩ ಪಥ್ಯಂ (ಮೈ) ೪ ಕ್ರಿಯೆಯುಂ, ಕ್ರಿಯೆಯಂ (ನ) ೫-೫ ವರಲ್ (ಮೈ) ೬ ಸಮಾಸ (ಮೈ)

ಲಕ್ಷ್ಯಂ : ಸಾಮ್ಯಕ್ಕೆ :

೧ ಸಕಲಾರ್ಥಿಮನೋರಥದಾ
ಯಕಂ ಮಹೋದಾತ್ತಮೂರ್ತಿಸಾಂದ್ರಚ್ಛಾಯಂ
ಸುಕರಾಭಿಗಮುಂ[1] ನರಪಾ
ಲಕನಿರೆ ಕಲ್ಪಾವನೀಜಮೇಗೆಯ್ದಪುದೋ ೨೦೨

ಪರಾಖ್ಯಾನಕ್ಕೆ :

೨ ವಿಕಚಸರಸೀರುಹಂ ಕೋ
ಕಕುಳವ್ಯಾಭಾಸಿ ಪೂಗೊಳಂ ತಾನಿರೆಯುಂ
ಬಕನಿಕರಲುಳಿತಕಲುಷೋ
ದಕವಿರಳದೊಳಂಜಿ ಬೆಂಚೆಯೊಳ್ ವಸಿಯುಕುಮೇ ೨೦೩

ದೃಷ್ಟಾಂತಂ-ಉತ್ತರಂ :

ಸೂತ್ರಂ ೧೬೬

ಎಂತುಟು ಮುನ್ನಂ ಪೇಳ್ದ
ರ್ಥಾಂತರಮಂತುಟನೆ ಬಱಿಕೆ ತೋಱುವುದದು ದೃ
ಷ್ಟಾಂತಂ ಪ್ರಶ್ನಾರ್ಥದೊಳೋ
ರಂತನುಗುಣಮಾಗೆ ಪೇಳ್ವುದುತ್ತರಮೆನಿಕುಂ ೨೦೪

ಲಕ್ಷ್ಯಂ : ದೃಷ್ಟಾಂತಕ್ಕೆ :

೧ ಭವದಾಲೋಕನದಿಂದಾ
ಯ್ತವಳ್ಗೆ ಪಿರಿದುಂ ಮನೋವಿಕಾಸಮುದೀಗಳ್[2]
ಕುವಲಯಬಂಧುವಿನಾಲೋ
[3]ಕನೆ ಮಾಡುವುದಲ್ತೆ[3] ಕುಮುದವನವಿಕಸನಮಂ ೨೦೫

ಮತ್ತೇಭವಿಕ್ರೀಡಿತಂ

೨ ಪತಿಯಿಂ ಪಿಂಬಡಿನೊಳ್ ಪತಿವ್ರತೆಗೆ ಬೇಱೊಂದುಂಟೆ ಕೃತ್ಯಂ ವಿರಾ
ಗತೆಯುಂ[4] ಮೇಣ್ ತದನುಪ್ರಯಾಣವಿಧಿ[5]ಯುಂ ತಾವಲ್ಲದೆಂ[5]ದಿಂತಿದಂ
ಕ್ಷಿತಿಗೆಲ್ಲಂ ತಿಳಿವಾಗೆ ತೋರ್ಪ ತೆಱದಿಂ ರಾಗೋದಯಂ ಪಿಂಗೆ ಸಂ
ಗತೆ[6] ಸಂಧ್ಯಾಂಗನೆ ಪೋದಳಾದೊ[7]ಲವಿನಿಂ ಬೆನ್ನೊಳ್ ದಿನಾಧೀಶನಾ ೨೦೬

೧ ಶುಕರಾಜಿಗಮುಂ (ಮೈ, ನ) ೨ ವಿಕಾರಮುದಾಗಳ್ (ಮೈ, ನ) ೩-೩ ಕವಲ್ತೆ ಮಾಡುವುದು (ನ) ೪ ಯಿಂ (ನ) ೫-೫ ಯಿಂ ತಾವಾವವೆಂ (ನ) ೬ ತಿ (ನ) ೭ ಳೊಂದೊ (ನ)

ಉತ್ತರಕ್ಕೆ :

ಚಂಪಕಮಾಲೆ

೩ ಮರಣವೆನಿಪ್ಪುದಾವುದು ದರಿದ್ರತೆ ಪತ್ತಿದ ಕುತ್ತಮಾವುದಂ
ತರಿಸದೆ ನಿಂದ ಚಿಂತೆ ಸುಖಮಾವುದು ಪುತ್ರಮುಖಾವಲೋಕನಂ
ನರಕದ ದುಃಖಮಾ⁴ಗಿವುದವಿನೀತಕಲತ್ರಮುದಾತ್ತಮಪ್ಪಲಂ
ಕರಣಮುದಾವುದಗ್ಗಳಿಕೆವೆತ್ತ ²ಗುಣಂಗಳೆ ಭೂತಳಾಗ್ರದೊಳ್³ ೭೦೭

ಸಂಶಯಂ-ಭ್ರಮಂ-ಅಪಹ್ನುತಿ :

ಸೂತ್ರಂ ೧೬೭

ಮಾತೇನೊ ಸಂಶಯಂ ಸಂ
ಶೀತಿ³ಪರಂ ಚಿತ್ತಮೋಹನಂ ಭ್ರಮಮುಕ್ಕುಂ
ಭೂತಾರ್ಥಾಪಹ್ನವಸಂ
ಭೂತ⁴ಮುದನ್ಯಾರ್ಥದೃಷ್ಟ್ಯಪಹ್ನುತಿನಾಮಂ ೭೦೮

ಲಕ್ಷ್ಯಂ : ಸಂಶಯಕ್ಕೆ :

ಚಂಪಕಮಾಲೆ

೧ ಅಳಿಗಳೊ ನೀಳ್ದ ಕರ್ಬೊಗೆಯೊ ಕೆಂದಳಿರೋಳಿಯೊ ಸುತ್ತುಗೊಂಡು ತ
ಳ್ತುಳುರ್ವುರಿಮಾಲೆಯೋ ಸರಸಪಕ್ವಫಲಂಗಳೊ ವಿಸ್ಫುಲಿಂಗಸಂ
ಕುಳಮೊ ಮನಕ್ಕೆ ಸಂದೆಯಮುಗುಂದಲೆಯಾಗಿರೆ ನೋಡಿ ನೋಡಿ ಕಂ
ಟಳಿಸುವುದೆನ್ನ ಮೆಯ್ ಕೆಳದಿ ಪೇೞುದು⁵ ಮಾಮರನೋ ದವಾಗ್ನಿಯೋ ೭೦೯

ಭ್ರಮಕ್ಕೆ :

೨ ಮಣಿಭವನಂಗಳ ರುಚಿಗಳ್
ಪೆಣೆದು ನಭೋಂಗಣದೊ⁶ಳಿಂದ್ರ⁶ಚಾಪವಿಳಾಸ
ಕ್ಕೆಣೆಯಾಗಿರೆ ಬಹುವಿಧದಿಂ
ಕುಣಿವುವು ಕಾರ್ಗೆತ್ತು ಕೇಗಿ ಸೋಗೆನವಿಲ್ಗಳ್ ೭೧೦

೧ ಬಟ್ಟೆಯಾ (ಅ) ೨-೨ ಗುಣಂ ಸುಜನೈಕಬಾಂಧವಾ (ನ) ೩ ಭೀತ (ಮೈ,ನ); ಭೀತಿ (ನ) ೪ ಪೂತ (ಮೈ,ನ); ಘಾತ (ನ) ೫ ಕೇಳಿದು (ನ) ೬-೬ ಳಮರ (ನ)

ಮತ್ತಂ :

ಚಂಪಕಮಾಲೆ

೩ ಕವಿವ ಕುಬೇರಧೂಪದ ಕವಿಲ್ವೊಗೆಯಂ ನವಮೇಘಮಾಲಿಕಾ
ನಿವಹಮೆ ಗೆತ್ತು ತೋರ್ಪ ಮಣಿದೀಧಿತಿಯಂ ಕುಡುಮಿಂಚೆ ಗೆತ್ತು ಪೊ
ಣ್ಮುವ ಪಟಹಪ್ರಣಾದಮನೆ[1] ಮೇಘನಿನಾದಮೆ ಗೆತ್ತಕಾಲತಾಂ
ಡವಮನೊಡರ್ಚುಗುಂ ಶಿಖಿಕುಳಂ ಕನಕಾಯತಕೂಟಕೋಟಿಯೊಳ್ ೭೧೧

ಅಪಹ್ನುತಿಗೆ :

೪ ಉನ್ಮದಮಧುಕರಕುಳರಸ
ವನ್ಮೃದು[2] ಝುಂಕಾರನಿನದಮಲ್ತಿದು ಪೀನಂ
ಮನ್ಮಥಚಾಪವಿಮುಕ್ತೋ
ದ್ಯನ್ಮಾರ್ಗಣಭೀಂಕೃತಿ[3]ಸ್ವನಂ ತಾನಕ್ಕುಂ ೭೧೨

ವ್ಯಪದೇಶಂ-ಸ್ಮರಣಂ :

ಸೂತ್ರಂ ೧೬೪

ಉಪಮೇಯಮನ್ಯಗ್ಭಾವೋ[4]
ಪಪನ್ನ[5]ಮುಪಮಾನಮಾಗೆ ಮುಖ್ಯಮದಕ್ಕುಂ
ವ್ಯಪದೇಶಂ ಮುಂ ಪೋದುದ
ನಪೂರ್ವಮಂ ಕಂಡು ನೆನೆವುದದು ತಾಂ ಸ್ಮರಣಂ ೭೧೩

ಲಕ್ಷ್ಯಂ : ವ್ಯಪದೇಶಕ್ಕೆ :

೧ ಕುಚಯುಗಳಚ್ಛಲದಿಂದೊಂ
ದಿ ಚಕ್ರವಾಕದ್ವಯಂ ಭುಜವ್ಯಾಜಲತಾ
ರುಚಿಗಳೊಳಿರ್ದಪ್ಪುವು ನಾ
ಡೆ ಚೆಲ್ವುವೆತ್ತಾಸ್ಯಮಿಷಸರಃಪರಿಸರದೊಳ್ ೭೧೪

ಸ್ಮರಣಕ್ಕೆ :

೨ ಮನಕಂ ಪಕ್ಕಲ್ಲದೆ[6] ನೆಲ
ನಿನಿಸಾನುಂ ಮೆಚ್ಚೆ[6] ಕರ್ಣನಂ ನೋಡಿ ನರಂ
ನೆನೆದಂ ತನ್ನೊಳ್ ತಾಗಿದ
ಪಿನಾಕಪಾಣಿಯ ಕಿರಾತತನುಸೌಷ್ಠವಮಂ ೭೧೫

೧ ಮೆನೆ (ಮೈ) ೨ ವನ್ಮಧು (ನ) ೩ ಕೃತ (ಮೈ) ೪ ಮೆಯುನನ್ಯದ್ಭಾವೋ (ನ) ೫ ದ್ಯುಪನ್ನ (ನ) ೬-೬ ನೆಲೆ|ಗಿನಿಸಾನುಂ ಮೆಚ್ಚಿ (ಅ,ನ)

ಪೃಥ್ವೀವೃತ್ತಂ

೩ ವಿಶಾಳಮಳಿನೋಗ್ರತುಂಗಗಿರಿಕುಂಜಸಂಜಾತಮ
ಪ್ಪಶೋಕವನದಲ್ಲಿ ಧಾತುಜಳನಿರ್ಝರಂ ಪಾಯೆ ಮಾಂ
ಸಶೋಣಿತಮಯಂಬೊಲಾಗಿ ಕಿಱಿದಂತರಂ ತೋಱಿ ಕಂ
ಡು ಶಾರ್ಙ್ಗ ನೆನೆದಂ ಹಿರಣ್ಯಕನದೊಂದು ಬಿಲ್ದಂದಮಂ ೭೧೬

ಪ್ರತೀಪಂ-ಸಮಯೋಗಂ :

ಸೂತ್ರಂ ೧೬೯

ಅನುಕಂಪೆಯಕ್ಕೆ[1] ಮೇಣ್ [2]ಕು
ತ್ಸ[2]ನಮುಪಮೇಯಸ್ಥಿತಂ ಪ್ರತೀಪಂ[3] ಗೆಡೆಗೊಂ
ಡನುಗತ[4]ಮಾಗಿರೆ ಗುಣದೋ
ಷನಿರೂಪಣದಿಂ ವಿಭಾಗಮದು ಸಮಯೋಗಂ ೭೧೭

ಲಕ್ಷ್ಯಂ : ಪ್ರತೀಪಕ್ಕೆ :

೧ ಅಮಲಿನಮಾಗಿಯುಮಿಾ ನಿ
ನ್ನ ಮೊಗಂ ಮೃಗಲಕ್ಷ್ಮನೆಣೆಗೆ ವಂದಪುದಿನಿಸಂ[5]
ಕಮಲಾಯತಾಕ್ಷಿ ಕಜ್ಜಲ
ವಿಮಿಶ್ರಿತಾಶ್ರೂದಬಿಂದುಮಲಿನಕಪೋಲಂ ೭೧೮

೨ ಅಸಿತೋತ್ಪಳದಳಶೋಭೆಯ
ನೆಸೆಯೆ[6] ಕಟಾಕ್ಷದೊಳೆ ತಳೆದ[7] ಮುದದಿಂದಾಲೋ
ಕಿಸದಿರು ಮುಯ್ವಂ[8] ಮಾನಿನಿ
ದೆಸೆದೆಸೆಗಳೊಳೊಳವು ಕುವಲಯಾಕರಮೆನಿತುಂ ೭೧೯

ಸಮಯೋಗಕ್ಕೆ :

೩ ಮೃಗನಯನೆಯರೊಲವುಂ ಬ
ಳ್ಳಿಗೊಂಡು ತಳ್ತಡರೆ ಪೊಳೆದು ಮಿಂಚುವ ಮಿಂಚುಂ
ಬಗೆವಾಗಳ್ ನಿಲ್ಲವದೊಂ
ದು ಗಱಗೆಯುಂ ಘನನಿಬದ್ಧಮೆನೆ ಸಂದಿರ್ದುಂ ೭೨೦

೧ ಕಂಪಮುಕ್ಕೆ (ಅ,ನ) ೨–೨ ಕೃ!ಚ್ಛ (ಮೈ) ೩ ಪ್ರದೀಪಂ (ಮೈ) ೪ ಮತ (ನ) ೫ ದಿನಿಸುಂ (ಅ) ೬ ವ (ಮೈ,ಅ,ನ) ೭ ದು (ಮೈ,ನ) ೮ ಮುಯ್ಸಂ (ಅ)

ಅಪ್ರಸ್ತುತಪ್ರಶಂಸೆ-ಅರ್ಥಾಂತರನ್ಯಾಸಂ :

ಸೂತ್ರಂ ೧೭೦

ಬಗೆದಿರ್ದು ಬೇಱದೊಂದಂ
ಪೊಗಟ್ಟಂದಪ್ರಸ್ತುತಪ್ರಶಂಸೆಯೆನಿಕ್ಕುಂ
ನೆಗಟ್ಟೆ ನುಡಿವುದನೆ ಸಾಧಿಸಿ
ನಿಗದಿಪುದರ್ಥಾಂತರಪ್ರಸಂಗನ್ಯಾಸಂ ೭೨೧

ಲಕ್ಷ್ಯಂ : ಅಪ್ರಸ್ತುತಪ್ರಶಂಸೆಗೆ :

ಚಂಪಕಮಾಲೆ

೧ ಮೃದುಹರಿತಪ್ರವಾಳನವಶಾಡ್ವಲರಾಜಿಯನಾಯ್ದು ಮೇದು ತ
ಣ್ಪೊದವಿದ ನಿರ್ಝರಾಂಬುಗಳನೊಯ್ಯನೆ ಪೀರ್ದು ನಿಜಾಂತರಂಗದೊಳ್
ಪುದಿದನುರಾಗದಿಂದೆಳಸಿ ಪುಲ್ಲೆಗಳಾರೊಳಮೆಂದು ದೈನ್ಯವಿ
ಲ್ಲದೆ ಸುಖಮಿರ್ಪುವೀ[1] ವನನಿಕುಂಜವಿಭಾಗದೊಳೇಣಸಂಕುಳಂ ೭೨೨

ಅರ್ಥಾಂತರನ್ಯಾಸಕ್ಕೆ :

ತರಳವೃತ್ತಂ

೨ ಜಗದೊಳುಳ್ಳ ನದೀಪ್ರವಾಹಜಲಂಗಳೊಟ್ಟುಡಿ[2]ದಾವಗಂ
ಪುಗೆಯುಮೊತ್ತದು ಮೇರೆಯಂ ಬಡಬಾನಳಂ ಬಿಡದಾಗಳುಂ
ತಗುಳೆ ಪೀರೆಯುಮಂತದೆಳ್ಳನಿತಪ್ಪೊಡಂ ತವವಂತೆವೋಲ್
ಬಗೆದು ನೋಡೆ ಮಹಾತ್ಮರಪ್ಪವರೇಕರೂಪರದೆಲ್ಲಿಯುಂ ೭೨೩

೩ ರೂಪರ್ದನಾರಿಯಾಯ್ತು ವಿ
ರೂಪಾಕ್ಷಂಗೆಂತು ಶಾಂತರೌದ್ರಾತ್ಮಕವಿಾ
ರೂಪು ನಿನಗಾದುದಂತೆ[3] ಮ
ಹಾಪುರುಷರ ಚರಿತಮಪರತಂತ್ರಮಚಿಂತ್ಯಂ ೭೨೪

– ಇವು ಉಪಮಾಭೇದಂಗಳ್

ಅತಿಶಯಂ : ಸೂತ್ರಂ ೧೭೧

ನಾಡಾಡಿಗಳಿಂವಿನಂ[4] ಕೆ
ಯ್ಗೂಡಿದ ವಸ್ತೂಪವರ್ಣನಂ ವಿಸ್ಮಯಮುಂ
ಮಾಡುವೊಡತಿಶಯಮುಕ್ಕುಂ
ನಾಡೆಯುಮಿದಱಂದಮಾವುದುಂ ಬಗೆಗೊಳಿಕುಂ ೭೨೫

೧ ದೀ (ಅ) ೨ ಳೊಳ್ಪುದಿ (ನ) ೩ ದೆಂತು (ನ) ೪ ಗಳೆವಿನಂ (ಮೈ)

ಅತಿಶಯಭೇದಂಗಳ್ :

ಸೂತ್ರಂ ೧೭೨

ವಂಶಸ್ಥವೃತ್ತಂ

ವಿರೋಧಮುತ್ಪ್ರೇಕ್ಷೆ ವಿಭಾವನಾಹ್ವಯಂ
ತಿರೋಹಿತಂ ಪೂರ್ವಮಹೇತು ತದ್ಗುಣಂ
ಪರಸ್ಪರಾಸಂಗತಿಕಂ ವಿಶೇಷಮುಂ[1]
ನಿರೂಪ್ಯಮಾಣಾತಿಶಯಪ್ರಭೇದಮುಂ ೭೨೬

ವಿರೋಧಂ-ಉತ್ಪ್ರೇಕ್ಷೆ :

ಸೂತ್ರಂ ೧೭೩

ಅನ್ಯೋನ್ಯವಿರುದ್ಧಪದಾ
ರ್ಥನ್ಯಾಸಮೆ ತಾಂ ವಿರೋಧಮವಿವಕ್ಷಿತಸಾ
ಮಾನ್ಯಮ[2] ತದ್ಗುಣಯೋಗದಿ
ನನ್ಯತ್ವಾರೋಪಮಪ್ಪುದುತ್ಪ್ರೇಕ್ಷೆ ಮಲಂ ೭೨೭

ಲಕ್ಷ್ಯಂ : ವಿರೋಧಕ್ಕೆ :

೧ ಮರದುಱುಗಲ ಕಟ್ಟಲೆಯುಂ
ಪರಿಕಲಿಸಿ ಪೊದಲ್ದ ಶೋಣಮಣಿದೀಧಿತಿಯುಂ
ನೆರೆದಿರ್ದುವೊಂದನೊಂದೊ
ತ್ತರಿಸಲ್ ನೆಱೆ ನೆಱೆಯವೀ ಮಹೀಧರತಟದೊಳ್ ೭೨೮

ಮತ್ತಂ :

೨ ಘನಜಘನಂ ತನುತನು ನಿ
ಮ್ನನಾಭಿ ತುಂಗಸ್ತನಂ ವಿನೀಲಿಮಕೇಶಂ
ಕನದರುಣದಂತ[3]ವಸನಂ
ಮನದೊಳ್[4] ಭಾವಿಸೆ ವಿರುದ್ಧಮಿವಳಾಕಾರಂ ೭೨೯

ಚಂಪಕಮಾಲೆ

೩ ದಶರಥನಾಗಿಯುಂ ದಶಸಹಸ್ರರಥಂ ರವಿವಂಶನಾಗಿಯುಂ
ಶಶಧರಕೀರ್ತಿರೂಪನಿನನಾಗಿಯುಮಸ್ತಮಯಾಪವರ್ಜಿ ಕ
ರ್ಕಶಬಲನಾಗಿಯುಂ ಮೃದುವಪುಃಪ್ರಸರಂ ಮತಿತೀವ್ರನಾಗಿಯುಂ
ಪ್ರಶಮಿತಚಿತ್ತನೆಂತುಮವಿರುದ್ಧಗುಣಂ ಗುಣವಜ್ಜನಸ್ತುತಂ ೭೩೦

೧ ವಿಶೇಷ್ಯಮಂ (ಮೈ,ನ); ವಿಶೇಷ್ಯಮಂ (ನ) ೨ ಮೆ (ಮೈ,ಅ) ೩ ದಶನ (ಕಾ)
೪ ಮನಕ್ಕೆ (ನ)

ಮತ್ತೇಭವಿಕ್ರೀಡಿತಂ
೪ ಅತಿಸೂಕ್ಷ್ಮೇಕ್ಷಣನೆಂತುಮಂಧನಸತೀಸೌಂದರ್ಯದೊಳ್ ಸತ್ಕ್ರಮಾ[೧]
ನ್ವಿತನೆಂತುಂ ಪೆಱವಂ ಮಹಾಜಿಮುಖದೊಳ್ ನಿರ್ಣೀತ[೨]ಸಮ್ಯಗ್ಬಹು
ಶ್ರುತನೆಂತುಂ ಬಧಿರಂ ಕರಂ ಪರಪರೀವಾದಂಗಳೊಳ್ ನೋೞ್ಪೊಡ
ದ್ಭುತಮಾಶ್ಚರ್ಯಮಭೂತಪೂರ್ವಮೆಸಕಂ ಶ್ರೀಗಂಡಮಾರ್ತಂಡನಾ ೭೩೧

ಉತ್ಪ್ರೇಕ್ಷೆಗೆ :

ಚಂಪಕಮಾಲೆ
೫ ಇರದೆ ನಿತಂಬಮೆಂಬಹಿನಿವಾಸದಿನೀ[೩]ಕೆಯ ರೋಮರಾಜಿಯೆಂ
ಬುರಗನಳುರ್ಕೆಯಿಂ ಮೊಗಮನೊಪ್ಪುವ ಚಂದ್ರನೆಗೆತ್ತು ಕೋಪದಿಂ
ಬರೆ ಬರಲೀಯದತ್ತ ಮೊಲೆಗಳ್ ತಡೆದಿರ್ಪುವೆಂದು ಪರ್ಚುವಂ
ತಿರೆ ಕಿವಿಯೊಳ್ ಬೆಡಂಗಿಡಿದು ತೋರ್ಕುಮಪಾಂಗದ ನೋಟಮಾಕೆಯಾ ೭೩೨

೬ ಎಳೆಯುಳ ಮೊಗದ ನೆಲಲ್ ತ
ಮ್ಮೊಳಗಿರೆ ಸಂತಸದೆ ಬೀಗಿದಂತಿರ್ದ ಕುಚಂ
ಗಳ ಮಱೆಯೊಳ್ ಕಾಣದೆ ಮೊಗ
ದಳವಂ ನಡು ನೆನೆದು ಬಡಬಡಾದಂತಿರ್ಕುಂ ೭೩೩

೭ ವಾಸರಪತಿ ಬಿಸುಗದಿರಿಂ
ಪೇಸದೆ ತವೆ ಪೀರ್ಗುಮೆಂಬ ಮುಳಿಕದಿನಂಭೋ
ಜಾಸನನಂಬುಜವನಮಂ
ಬಾಸಣಿಸಿದನೆನಿಪುವೆಸೆವ ತಾವರೆಯೆಲೆಗಳ್ * ೭೩೪

೮ ನೀಲಿಯ ರಸದೊಳ್[೪] ಕರಡಿಯ
ತೋಲಂ ತೊಯ್ದುಱ್ದಿ[೫] ಮಸಿಯೊಳವಱೊಳ್ ಪುದಿದ
ತ್ತೀ ಲೋಕಮಕ್ಕುಮೆನಿಸಿ
ತ್ತಾಲೋಕವಿರೋಧಿ ಬಹುಳತಮಸಂ ತಮಸಂ ೭೩೫

೧ ವಿಕ್ರಮಾ (ನ) ೨ ನಿರ್ಣಿಕ್ತ (ನ) ೩ ದೊಳೀ (ಅ,ನ) ೪ ರಸದಿಂ (ನ) ೫ ತೊಯ್ದುಱ್ದ (ನ)
* ಈ ಪದ್ಯವು 'ಮೈ' ಪ್ರತಿಯಲ್ಲಿ ಇಲ್ಲ.

ವಿಭಾವನೆ-ತಿರೋಹಿತಂ :

ಸೂತ್ರಂ ೧೭೪

ಕ್ರಿಯೆಯಂ ಪ್ರತಿಷೇಧಂ ಗೆಯೆ
ನಿಯತಫಳ[೧]ವ್ಯಕ್ತಿಯದು ವಿಭಾವನೆಯೇಕಾ
ಶ್ರಯಮನದೊಂದಂ ಗುಣದತಿ
ಶಯಂ ತಿರೋಹಿಸೆ ತಿರೋಹಿತಂ ತಾನಕ್ಕುಂ ೭೩೬

ಲಕ್ಷ್ಯಂ : ವಿಭಾವನೆಗೆ :

ಚಂಪಕಮಾಲೆ

೧ ಸಮಜಿದೆ ಕೊಂಕಿ ನೀಳ್ದಸಿಯ ಪುರ್ವುಗಳೆಚ್ಚದೆ ನಾಡೆಯುಂ ಬೆಡಂ
ಗಮರ್ದಸಿತಾಕ್ಷಿಯುಗ್ಮಮಡಿಯೂಡದೆ ಕೆಂಪಸೆದಿರ್ದ ಕೆಂದಳಂ
ಭ್ರಮರಕುಳಪ್ರಭಾಸಿ[೨] ಕುಟಿಲಾಲಕಮೊತ್ತದೆಯುಂ ನಿಸರ್ಗದಿಂ
ತಮಗೆನೆ ಗಾಡಿ ಕೆಯ್ಗಱಿಯೆ[೩] ಬರ್ಪ ಲತಾಂಗಿಯರಾದಮೊಪ್ಪಿದರ್ ೭೩೭

೨ [೪]ಅಕುಪಿತಕಲುಷಿ[೪]ಜಲ[೫]ಮಪಾ
ನಕಪ್ರಮತ್ತಂ ಶಿಖಂಡಿಸಂತಾನಮಹೇ
ತುಕಸುರಭಿ ನೀಪವಿಪಿನಂ
ಸಕಳಮಹೀತಳದೊಳಾದುದಂದೊರ್ವ್ವದಲೊಳ್ ೭೩೮

ತಿರೋಹಿತಕ್ಕೆ :

೩ ಇನಿಯನ ವಿಯೋಗದಿಂದಾ
ದ ನಿನ್ನ ಬಡತನಮನಱಿಯಲಾಗದದಿನಿಸುಂ[೬]
ಘನತರಚಂದ್ರಕಲಾಭಿಷ
ವನಿಕಾಶಸ್ವತನುಕಾಂತಿಯಿಂ ತರಲಾಕ್ಷೀ ೭೩೯

೪ ಕಾಲಿಂದಿ[೭]ಯಸಿತಜಲದೊಳ್[೭]
ಗೋಲಾಡುವ ಕೃಷ್ಣನಂ ಸವರ್ಣತೆಯಿಂ ಗೋ
ಪಾಲಕುಮಾರರ್ ನೋಡಿಯು
ಮಾಲೋಲಮನಸ್ಕರಱಿಯದಾ[೮]ಕುಲಮುತ್ತರ್[೯] ೭೪೦

೧ ಪದ (ಮೈ, ನ) ೨ ಪ್ರಹಾಸಿ (ನ) ೩ ಕೈಗಿಳಿಯೆ (ಮೈ) ೪-೪ ಅಕುಟಿತಕಲುಷಿ (ಮೈ, ನ); ಅಕುಟಿಲಕಲುಷ (ನ) ೫ ಜನ (ಮೈ) ೬ ದೆನಸುಂ (ನ) ೭-೭ ಯ ನಡುನೀರೊಳ (ಅ, ನ) ೮ ರಾ (ನ) ೯ ಕುಳರಾದರ್ (ಅ)

ಪೂರ್ವಂ-ಅಹೇತುಕಂ :

ಸೂತ್ರಂ ೧೭೫

ಜನಿಯಿಸೆ ಮುನ್ನಂ ಜನ್ಯಂ
ಜನಕದಿನದು ಪೂರ್ವಮೆಂಬುದಕ್ಕುಂ ಮತ್ತಂ
ಸ್ವನಿಮಿತ್ತದೊಳಂ ಕಾರ್ಯಂ
ಜನಿಯಿಸದಿರ್ಪಿರವಹೇತುಕಂ ಪೆಸರಕ್ಕುಂ ೭೪೧

ಲಕ್ಷ್ಯಂ : **ಪೂರ್ವಕ್ಕೆ :**

೧ ಸಂದಿಸೆ ಗಱಿ ಸಂದಿಸೆ ರಘು
ನಂದನನೆಡೆಗಿಱದು ಕವಿದ[೧] ಕಣೆಯಿಂ ಮುನ್ನಂ
ಬಂದುದು ನೆಲಕ್ಕೆ ರಿಪುಭಟ
ವೃಂದಂ ಬಱಿಯುಂ ನಿಶಾತವಿಶಿಖಪ್ರಸ[೨]ರಂ ೭೪೨

೨ ಸ್ಮರನ ಶರಂಗಳಿವೆನೆ ತರ
ತರದಿಂ ಪೊರೆಸೆಗೆದು ಮೆಲ್ಲಮೆಲ್ಲನೆ ಬಱಿಯುಂ
ಬಿರಿದುವು ಮಲ್ಲಿಗೆ ಮುನ್ನಮೆ[೩]
ಬಿರಿದುವು ಬಿಬ್ಬರನೆ ಬಿರಯಿಜನದಳ್ಳೆರ್ದೆಗಳ್ ೭೪೩

ಅಹೇತುಕಕ್ಕೆ :

೩ ಪೆತ್ತುಂ ತೆಳ್ಪಱಿಯದ ನಡು
ಮುತ್ತುಂ ಬೀಱದ ಪಯೋಧರಂ ಮುನಿದುಂ ಚೆ
ಲ್ವೊತ್ತಱಿಪ ನಗೆಮೊಗಂ ಮೆ
ಯ್ವೆತ್ತಿರೆ ಕರಮೊಪ್ಪಿದಪ್ಪರಲ್ಲಿಯ ಪೆಂಡಿರ್ ೭೪೪

೪ ಸಕಲುಷವಿಕೃತಾಶಯರೊಳ
ಮಕೋಪನಂ ಕುಟಿಲವೃತ್ತರೊಳಮತಿಋಜು ದೂ
ಷಕರೊಳಮರೂಕ್ಷವಚನಂ
ಸಕಳಮಹೀವಳಯತಿಳಕನೀ ಬುಧತಿಳಕಂ ೭೪೫

೧ ಕವಿವ (ಅ) ೨ ಕ (ನ) ೩ ಮುನ್ನವೆ (ಅ); ಮುನ್ನಂ (ನ)

ತದ್ಗುಣಂ-ಪರಸ್ಪರಾಸಂಗತಿಕಂ :

ಸೂತ್ರಂ ೧೭೬

ಅತಿಬಹುಲಸ್ಥಿತಿಯಿಂ ಸಂ
ಗತಗುಣಮವಿಭೇದಿಯಾಗೆ ತದ್ಗುಣಮೆನಿಕುಂ
ಕೃತಕಾರ್ಯಕಾರಣಂ ವಿ
ಪ್ರತಿಷಿದ್ಧಮದೆನೆ ಪರಸ್ಪರಾಸಂಗತಿಕಂ ೭೪೬

ಲಕ್ಷ್ಯಂ : ತದ್ಗುಣಕ್ಕೆ :

೧ ಯಮುನಾಪಗೆ ಸುರನದಿಯಂ
ಕಮಳೋದರನಿಂದುಮೌಲಿಯಂ ನೀಲನಗಂ
ಹಿಮಗಿರಿಯಂ ಪೋಲ್ತಿರ್ಪಿನ
ಮಮಲಯಶೋರುಚಿ ಪೊದಲ್ದುದಿಳೆಗಿಂದರನಾ ೭೪೭

೨ ಇದು ಕಿಱಿದಿದು ಪಿರಿದಿದು ಕುೞಿ
ಯಿದು ತೆವರಿದು ಬಕ್ಕಬಯಲಿದಾಶ್ರಯಮಿದು ಗೆಂ
ಟಿದು ಸಾರೆಯೆಂಬ ನಿರ್ಣಯ
ಮದಾವುದಿಲ್ಲೊದವಿ ಪುದಿದ ಮರ್ಬಿನೊಳಾರ್ಗಂ ೭೪೮

ಪರಸ್ಪರಾಸಂಗತಿಕಕ್ಕೆ :

೩ ಹಿಮಕುಮುದಕುಂದಶಶಿಧವ
ಲಮೆನಿಪ ನಿಜಕೀರ್ತಿಯೆಸಕದಿಂದಮಿಳಾಲೋ
ಕಮನೆಯ್ದೆ ರಕ್ತಮಪ್ಪಂ
ತುಮಾಡಿದಂ ಕೃಷ್ಣನಿಂತಿದೇನಚ್ಚರಿಯೋ ೭೪೯

ವಿಶೇಷೋಕ್ತಿ : ಸೂತ್ರಂ ೧೭೭

ಒದವಿದ ಸಾಮಗ್ರಿಯೊಳೇ
ಕದೇಶವೈಕಲ್ಯಮಾಗೆಯುಂ ಮತ್ತಂ ತತ್-
ಸದೃಶಫಲಸಿದ್ಧಿಯಂ ತೋ
ರ್ಪುದದು ವಿಶೇಷೋಕ್ತಿಯೆಂಬಲಂಕೃತಿಯಕ್ಕುಂ ೭೫೦

ಲಕ್ಷ್ಯಂ :

೧ ರಥವೊಂದೆ[1] ಗಾಲಿಯದು ಸಾ
ರಥಿಯುಪ್ಪೊಡೆ ಪೆಱವನಸವುಮಶ್ವಮವೆಂತುಂ
ಪ್ರಥಿತಪ್ರತಾಪದಿಂದಂ
ಮಥಿತಪ್ರತಿಪಕ್ಷನುದಯಿಯಾದಂ[2] ದಿನಪಂ ೭೫೧

ಮತ್ತೇಭವಿಕ್ರೀಡಿತಂ

೨ ಧನುವುಂ ಕರ್ಬಿನ ಬಿಲ್ ಗಡಂ ಗೊಣೆ[3]ಯುಮುಂ ಸೀರೇಜಸೂತ್ರಂ ಗಡಂ
ನನೆಗಳ್ ಬಾಣಚಯಂ ಗಡಂತತನು ತಾಂ ಮತ್ತಂ ಮನಂ[4]ನೊಂದು ನಿ
ರ್ಬನಿ[4]ಪಂತಾರ್ದಿಸುತಿರ್ಪನುರ್ಚಿದೆರ್ದೆಯೊಳ್ [5]ಪುಣ್ಣೆತ್ತರೆಂದಿಂತಿದಿ
ಲ್ಲನಿಸುಂ[5] ಮನ್ಮಥಶಸ್ತ್ರಕಲ್ಪಮಿದು ದಲ್ ಬೇಱೊಂದು ಶಿಕ್ಷಾಕ್ರಮಂ ೭೫೨

– **ಇವು ಅತಿಶಯಭೇದಂಗಳ್**

ಅರ್ಥಶ್ಲೇಷಂ-ಶಬ್ದಶ್ಲೇಷಂ :

ಸೂತ್ರಂ ೧೭೮

ಎರಡರ್ಥವೊಂದೆ ಶಬ್ದಾಂ
ತರದೊಳ್ ನೆಗಳ್ವಂತು ಪೇಳ್ವುದರ್ಥಶ್ಲೇಷಂ
ದೊರೆಕೊಳೆ ಶಬ್ದಾವಯವದೊ
ಳೆರಡಭಿಮತಶಬ್ದಮಱಿಗೆ ಶಬ್ದಶ್ಲೇಷಂ ೭೫೩

ಶ್ಲೇಷಭೇದಂಗಳ್ : ಸೂತ್ರಂ ೧೭೯

ಮಂದಾಕ್ರಾಂತವೃತ್ತಂ

ತತ್ವಂ ವ್ಯಾಜಸ್ತುತಿಯುವಯುವಸ್ಥಂ[6] ವಿರೋಧಾ[7]ವಭಾಸಾ
ರ್ಥತ್ವಂ ಮಿಕ್ಕಿರ್ದಧಿಕವಿವಿಶೇಷಾತ್ಮಕಂ ವಸ್ತ್ವಸಂಭಾ[8]
ವ್ಯತ್ವಂ ವಕ್ರೋಕ್ತ್ಯನುಗತಮುಮೆಂದಿಂತು ತಾತ್ಪರ್ಯದಿಂದಂ
ತತ್ವಜ್ಞರ್ ವಿಸ್ತರಿಸೆ ನೆಗಳ್ಗುಂ ಶ್ಲೇಷಭಾಗ[9]ಪ್ರಭೇದಂ ೭೫೪

೧ ದು (ನ) ೨ ದಯುವಾದಂ (ನ) ೩ ಗೊನೆ, ಗೊಲೆ (ನ) ೪-೪ ದೊಂದು ನಿ।ರ್ಬನಿ (ವ್ಮೈ); ಮೊಂದು ನಿ।ರ್ಬಿನಿ (ನ) ೫-೫ ಪುಣ್ಪೆತ್ತದೆಂದಿಂತಿವೆ।ಲ್ಲೆನಸುಂ (ವ್ಮೈ, ನ) ೬ ವಿತ್ವಂ (ಅ, ನ) ೭ ವಿರುದ್ಧಾ (ಅ, ನ) ೮ ವಸ್ತುಸಂಭಾ (ವ್ಮೈ, ನ) ೯ ಭೇದ (ವ್ಮೈ, ನ)

ಅಲ್ಲಿ : ತತ್ತ್ವಂ-ವ್ಯಾಜಸ್ತುತಿ :

ಸೂತ್ರಂ ೧೮೦

[೧]ಬಗೆ ಪೆಱತುಮರ್ಥ[೧]ವೊಂದಂ
ನೆಗೞ್ಚುತುಂ ನೆಗೞ್ವ ತತ್ತ್ವವರ್ಣನೆ ತತ್ತ್ವಂ
ತಗುೞ[೩] ಪೞಿವಂತೆ[೨] ಕೆಯ್ಮಿಗೆ
ಪೊಗೞ್ವುದು ತಾಂ ವ್ಯಾಜಸಂಸ್ತವಾಖ್ಯಮೆನಿಕ್ಕುಂ ೭೫೫

ಲಕ್ಷ್ಯಂ : ತತ್ತ್ವಕ್ಕೆ :

ಮತ್ತೇಭವಿಕ್ರೀಡಿತಂ

೧ ವರಗೋಮೇದಕವಿಸ್ಫುರದ್ವಸನ[೩]ಸುದ್ಯತ್ಪದ್ಮರಾಗೋಲ್ಲಸ
ಚ್ಚರಣಂ ನೀಲರುಚಿ[೪]ಪ್ರವಾಲಸಿತನೀಷಲ್ಲೋಹಿತಾಕ್ಷಂ ಮನೋ
ಹರಮುಕ್ತಾಮಯವಜ್ರಸಂಹನನ[೫]ನೇಮಾತೀ[೫] ಮಹಾತ್ಮಂ ನೃಪೇ
ಶ್ವರರತ್ನಂ ವಿಲಸತ್ಸುವರ್ಣದೊರೆವೆತ್ತಿರ್ಕುಂ ಭವತ್ಸಂಗದಿಂ ೭೫೬

ವ್ಯಾಜಸ್ತುತಿಗೆ :

೨ ವಾತಿ ಪರವೆಣ್ಗೆ ಶರಣಾ
ಯಾತಂಗ[೬]ಸುರಂ ಬಿಯ[೭]ಕ್ಕೆ ಗುಪ್ತಂ ರಿಪು ಸಂ
ಘಾತಕ್ಕೆ ಪರಾಕ್ರಮನೆನೆ[೮]
ಭೂತಲಮೇನೆಂದು ಕೇಶಿಯಂ ಬಣ್ಣಿಪುದೋ ೭೫೭

೩ ಜೋಡೆ ಕರಮಡಿಯರ್[೯]ಳಾರೊಡ
ಗೂಡಿಯುಮವರ್ಗಲ್ಲೆನಿಪ ವಸುಧಾಂಗನೆಯಂ
ಕೋಡೊಳೆ ತಳೆದುಂ ಸೊಬಗಿನ
ಗಾಡಿಗೆ ಮುಯ್ವಾಂತ[೧೦] ಸೊಬಗಿದಾವುದೊ[೧೧] ಗಜೆಗಾ ೭೫೮

ಅವಯವಂ-ವಿರೋಧಾಭಾಸಂ :

ಸೂತ್ರಂ ೧೮೧

ಅವಯವಮುಖದಿಂ ಸಮುದಾ
ಯವಿಶೇಷಣಮನ್ಯವಸ್ತುಗಮಕ[೧೨]ಮುದಾದಂ[೧೨]
ದವಯವಮವಿರುದ್ಧಂ ನೋ
ಡೆ ವಿರುದ್ಧಸ್ಥಿತಿಯೊಳಿರೆ ವಿರುದ್ಧಾಭಾಸಂ ೭೫೯

೧-೧ ಬಗೆಗೆ ಪೆಱತರ್ಥ (ಕಾ) ೨ ವನಿತೆ (ಮೈ, ನ) ೩ ದಶನ (ಅ, ನ) ೪ ಮಣಿ (ನ) ೫-೫ ಮಾತೇನೀ (ಮೈ) ೬ ಯಾತಕ್ಕ (ನ) ೭ ವ್ಯಯ (ಮೈ, ನ) ೮ ಮಮೆನೆ (ನ) ೯ ಮಡಿಯೊ (ಅ, ನ) ೧೦ ಮುಯ್ಯಾಂತ (ಅ, ನ) ೧೧ ದು (ಕಾ) ೧೨-೧೨ ದೊಳಮುರ್ದಂ (ನ)

ಲಕ್ಷ್ಯಂ : ಅವಯುವಕ್ಕೆ :

೧ ಬಳಭದ್ರಂ ಭುಜದೊಳುರಃ
ಸ್ಥಳದೊಳ್ ಪೃಥು ವಿತತಯಶದೊಳರ್ಜುನನೀತಂ
ಕಳಿಕಾಲದೊಳಂ ತನ್ನೊಳ್
ತಳೆದಿರ್ದಂ ಪೂರ್ವಭೂಮಿಪಾಲಸ್ಥಿತಿಯಂ ೭೬೦

ವಿರೋಧಾಭಾಸಕ್ಕೆ :

೨ ಅನುಗತಕರ್ಣಂ ಕೃಷ್ಣಾ
ರ್ಜುನಾನುರಕ್ತಂ[೧] ವಿಲೋಚನಂ ದೋರ್ದಂಡಂ
ಘನದೃಢಬಲಂ ಪ್ರಲಂಬಂ
ತನಗೆನೆ ಪಿರಿದುಂ ವಿರುದ್ಧವಿಾ ನೃಪನಂದಂ ೭೬೧

ಅಧಿಕಂ-ಅವಿಶೇಷಂ :

ಸೂತ್ರಂ ೧೮೨

ಆರಬ್ಧಕ್ಕಧಿಕಮಸಾ
ಧಾರಣಗುಣಮಧಿಕಮೆಂಬುದಕ್ಕುಂ ಸದೃಶಾ
ಕಾರವಿಶೇಷಣಮರ್ಥವು
ದಾರಂ ಬೇಱೊಂದು ತೋರ್ಪೊಡವಿಶೇಷಾಖ್ಯಂ ೭೬೨

ಲಕ್ಷ್ಯಂ : ಅಧಿಕಕ್ಕೆ :

೧ ಅಂಗುಳೊಳಡಸಿದ ವಿಷಮುಂ
ಭಂಗುರತರ[೨] ವಿಷಮುದೃಷ್ಟಿಯುಂ ವ್ಯಾಳಸಮಾ
ಸಂಗಮುಮದರ್ದಿರೆ ಮದನಹ
ರಂಗೆಣೆಯೆನಿಪ್ಪುದಱೊಸೆಮಗೆ ಖಳರಭಿವಂದ್ಯರ್[೩] ೭೬೩

ಅವಿಶೇಷಕ್ಕೆ :

೨ ಗುರುಪರಿಣಾಹಂಗಳ್ ಪೀ
ವರಂಗಳುನ್ನತಿಯುತಂಗಳುರ್ವರೆಗೆ ಮನೋ
ಹರಕುಚಮಂಡಳದಂತಿರೆ
ಕರಮೆಸೆವುವು ವಿಮಳ[೪]ದರ್ದುರಾದ್ರಿಗಳೆರಡುಂ ೭೬೪

೧ ನೀತಂ (ವ್ಯೈ) ೨ ಕರ (ಅ) ೩ ಖಳರುಂ ವಂದ್ಯರ್ (ಪ) ೪ ಮಲಯ (ಅ)

ಅಸಂಭವಂ-ವಕ್ರೋಕ್ತಿ :

ಸೂತ್ರಂ ೧೮೩

ಪೆಸರೊಳಸಂಭವಮೆನಿಸುಗು
ಮಸಂಭವಂ ತದ್ವಿಶೇಷಣಂ ಪೃಥಗರ್ಥಂ
ಪೊಸಯಿಸೆ ಭಿನ್ನರಸಂ ಸು
ಪ್ರಸಿದ್ಧವಾಚ್ಯದೊಳದಲ್ತೆ ವಕ್ರೋಕ್ತಿ ಕರಂ ೭೬೫

ಲಕ್ಷ್ಯಂ : ಅಸಂಭವಕ್ಕೆ :

೧ ಅವೃಷಚ್ಛೇದನನತಿಧವ
ಳವರ್ಣನುತ್ಸಾರಿತಾರಿ ಬೇಱೊರ್ವಂ ದಾ
ನವಮಥನಸಿತನೆನಿಸಿದ
ನವನಿಗೆ ಪುರುಷೋತ್ತಮಾನುಭಾವಂ ಕೃಷ್ಣಂ ೭೬೬

ವಕ್ರೋಕ್ತಿಗೆ :

೨ ವೀರರಸಪ್ರದಚಾ[1]ರಣ
ಮಾರಣಸಂಪ್ರಾಪ್ತಕೌಶಲಂ ಭಾವಿಸೆ[2] ರಂ
ಭೋರು ನರೇಂದ್ರತೆಯುಂ ವಿ
ಸ್ತಾರಿಸಿದಪನಂಗನಂಗಸಿದ್ಧಿಯೊಳೀತಂ ೭೬೭

ಭಂಗಶ್ಲೇಷಂ : ಸೂತ್ರಂ ೧೮೪

ಪದವರ್ಣವಿಭಕ್ತಿವಿಭಾ
ಗದಿಂ ದ್ವಿಧಾರೂಪಮಿಷ್ಟಮುಕ್ಲಿಷ್ಟಂ[3] ಶ
ಬ್ದದೊಳಾಗಿ ತೋಱುವಂದಂ[4]
ತದು ಭಂಗಶ್ಲೇಷಮೆಂದು ಪೇಟಲ್ಪಡೆಗುಂ ೭೬೮

ಲಕ್ಷ್ಯಂ :

೧ ಸ್ವಗತಾನಲಸನ್ಮಣಿರ
ಶ್ಮಿಗಾಢಮಗಣಿತಜಲ[5]ದ್ವಿಪಾವಳಿ ಕಡಲಂ
ಮಿಗೆ ವಂದಮುರಗಜೇಂದ್ರಂ
ಸೊಗಯಿಸುವುದು ದಾನವಾರಿಲೇಖಾನುಗತಂ ೭೬೯

೧ ಪ್ರವಿದಾ (ಅ,ಸ) ೨ ಭಾವಿಸು (ಅ) ೩ ಮಾಕ್ಲಿಷ್ಟಂ (ಮೈ) ; ಮಾಶ್ಲಿಷ್ಟಂ (ಅ,ಸು)
೪ ತೋರ್ಪ್ಪ ಶೆಱನಂ (ನ) ೫ ಜಗ (ಮೈ,ನ)

ಸಂಶ್ಲೇಷಂ : **ಸೂತ್ರಂ ೧೮೫**

ಯೋಗಂ ಪಲವುಮಲಂಕೃತಿ
ಗಾಗಿರೆ ಸಂಶ್ಲೇಷಮೆಂಬುದನ್ವರ್ಥಗತಂ
ಯೋಗಮುಮಂಗಾಂಗಿಪ್ರವಿ
ಭಾಗಂ ಸಮಕಕ್ಷಮೆಂದೆರಟಿತ್ತಿಱನಕ್ಕುಂ ೭೭೦

ಲಕ್ಷ್ಯಂ :

ವಂಶಸ್ಥವೃತ್ತಂ

೧ ಸ್ವಭಾವಗಂಭೀರನಲಂಘ್ಯವೈಭವಂ
ಪ್ರಭೂತರತ್ನಂ ನೃಪನಂಬುರಾಶಿವೋಲ್
ವಿಭೀಷಣಗ್ರಾಹಮವೃಷ್ಯಮರ್ಣವಂ
ಪ್ರಭೂತಸಾರಂ ಸುಖಸೇವ್ಯನೀ ನೃಪಂ ೭೭೧

ಪ್ರೇಯಂ-ಊರ್ಜಸ್ವಿ-ಆಶಿ :

ಸೂತ್ರಂ ೧೮೬

ಪ್ರೇಯಂ ಪ್ರಿಯತರವಚನಾ
ಖ್ಯೇಯಮಹಂಕಾರಗರಿಮ[1]ಮೂರ್ಜಸ್ವಿ ಶುಭ
ಪ್ರಾಯಾರ್ಥಾಶಂ[2] ಸಾಭಿ
ಪ್ರಾಯಮಲಂಕಾರಮಾಶಿಯೆಂಬರ್ ಕೆಲಬರ್ ೭೭೨

ಲಕ್ಷ್ಯಂ : **ಪ್ರೇಯಕ್ಕೆ :**

೧ ನೆಲನನವಯವದೆ ತಳರದೆ
ನಿಲೆ ತಾಳ್ದಿದ ಮೆಯ್ಗ ಮೆಲ್ಲಮಾನಲ್ಕರಿದಾ
ಯ್ತುಲಘುಪ್ರಸಾದದಿಂ ನೀ
ನೊಲಿದೆಟ್ಟರೆ ಮನೆಗೆ[3] ಮನದೊಳಾದನುರಾಗಂ ೭೭೩

ಊರ್ಜಸ್ವಿಗೆ :

೨ ಕೆಳದೀ[4] ಬಿಲ್ಲುಮನಂಬುಮ
ನಳೀಕಭಟವಿಕಟವೇಷಮುಂ ಬಿಸುಟೇಗಳ್
ಮುಳಿಯಿಸದೆನ್ನಂ ಮಗುಳ್ದುಂ
ಬಳೆದೊಟ್ಟೊಡೆ ಗೆಲ್ವಯುಂಬುದೊಟ್ಟೊಡೆ ಗೆಲ್ಲಯ್ ೭೭೪

೧ ಗತಿಯು (ವೈ) ೨ ಯಾರ್ಥಾಂಶಂ (ನ) ೩ ಮನಕೆ (ವೈ, ಅ, ನ) ೪ ಕಳಲದೆ (ಅ, ನ)

ಆಶೀಃ :

೩ ನೆಲೆಗೊಳ್ಗೆ ನಿಜಭುಜಾಸಿಯೊ
ಳೊಲಿದು ಜಯಾಂಗನೆ ವಿರೋಧಿವಂಶಾ[1]ವಳಿಯಂ
ನೆಲೆಗಿಡಿಸಿ ನಿನ್ನ ತೇಜೋ
ಜ್ವಲನಂ ತಳ್ತುಱ್ವಿಕೊಳ್ಗೆ ವಿಕ್ರಮತುಂಗಾ ೭೭೫

ಭಾವಿಕಂ : **ಸೂತ್ರಂ ೧೮೭**

ಭಾವಿಕಮೆಂದರೆಬರ್ ಕವಿ
ಭಾವಗತಾರ್ಥಮನೆ[2] ತಾಮಲಂಕೃತಿಗಳೊಳುದ್-[3]
ಭಾವಿಸಿ ಪೇೞ್ವರ್ ಶಕ್ತಿಸ
ಮಾವಿರ್ಭೂತಪ್ರಬಂಧವಿಷಯಮದಕ್ಕುಂ ೭೭೬

ಸೂತ್ರಂ ೧೮೮

ಸ್ಥಾನೋಪವರ್ಣನಂ ಶ
ಬ್ದಾನಾಕುಳಭಾವಮದ್ಭುತಾರ್ಥತ್ವಂ ಸ್ವಾ
ಧೀನರಸವೃತ್ತಿ ಸಂಬಂ
ಧಾನುಗಮಂ ಭಾವಿಕಕ್ಕೆ ಭಾವಮಿವಕ್ಕುಂ ೭೭೭

ಇದು ಗುಣವಿವೇಕದೊಳ್

ಅರ್ಥಾಲಂಕಾರಪ್ರಕರಣಂ ಸಮಾಪ್ತಂ

ಗೀತಿಕೆ :

ಈ ತೆಱದಿಂದರ್ಥಾಲಂಕೃತಿ
ಯೋ ೆತು[4] ವಿಭೇದಮನಾದಮೆಲ್ಲಮಂ
ನೂತನಮಾರ್ಗಮೆಸೆಯೆ ಪೇೞ್ದಂ[5]
ಖ್ಯಾತಯಶಂ ಕವಿತಾಗುಣೋದಯಂ ೭೭೮

೧ ವಂತಂ (ಮೈ) ೨ ಮೆನೆ (ನ) ೩ ಯೊಳಗುದ್ (ನ) ೪ ಯಾಂತು (ಮೈ) ೫ ಪೇೞ್ದಿಂ (ನ)

ಮತ್ತೇಭವಿಕ್ರೀಡಿತಂ
ಶ್ರುತದೇವೀಮುಕರಂದಕಲ್ಪಲಪನಂ ವಾಕ್‌ಶ್ರೀನಿವಾಸಾಂಬುಜಾ
ಯಿ[೧]ತವಕ್ತ್ರಂ ರಸಭಾವಭಾಸುರಸಮುದ್ಯದ್‌ಭಾರತೀನರ್ತನೋ
ಚಿತರಂಗ[೨]ಪ್ರತಿಮಾನನಂ ಪ್ರವಿಲಸದ್‌ವಾಕ್ಸುಂದರೀಕುಂಕುಮಾಂ
ಕಿತಕೇಳೀಭವನಾಜಿರೋಪಮಮುಖಂ ಭೂಭಾಗದೊಳ್ ನಾಕಿಗಂ ೭೭೯

ಇದು ಸಕಲಸುಕವಿಜನಮನಸ್ಸರೋಜಿನೀರಾಜಹಂಸಾಯಮಾನಾನೂನ
ಕವಿತಾಗುಣೋದಯಂ ಶ್ರೀನಾಗವರ್ಮವಿರಚಿತಮಪ್ಪ
ಕಾವ್ಯಾವಲೋಕನದೊಳ್

[೩]ಗುಣವಿವೇಕಮೆಂಬುದು[೩] ತೃತೀಯಾಧಿಕರಣಂ ಸಮಾಪ್ತಂ

೧ ಯ (ನೆ) ೨ ರಂಗಂ (ಮೈ) ೩-೩ ಗುಣವಿವೇಕವರ್ಣನಮೆಂಬುದು (ಮೈ)

೪ ರೀತಿಕ್ರಮರಸನಿರೂಪಣಾಧಿಕರಣಂ

ಸೂತ್ರಂ ೧೮೯

ಉತ್ಪಲಮಾಲೆ

ರೀತಿ ವಿನೂತವಸ್ತುಕೃತಿಗೊಪ್ಪುವ ಮೆಯ್ ರಸಭಾವವೃತ್ತಿನಿ
ರ್ಣೀತಿಯೆ ಜೀವಮಂತದಱಿನನ್ವಿತನಪ್ಪ[೧] ಕವೀಶ್ವರಂ ಬುಧ
ವ್ರಾತವೊಱಲ್ದು ಬಿಚ್ಚಟಿಸಿ[೨] ನಚ್ಚುವಳಂಕೃತಿ ಕೂಡದಿರ್ದೊಡಂ
ರೀತಿಯೊಳೊಂದೆ[೩] ಪೇೞ್ವುದು ರಸಂಬಿಡೆ ಬಂಧುರಕಾವ್ಯಬಂಧಮಂ ೭೮೦

೧ ರೀತಿಪ್ರಕರಣಂ

ರೀತಿ : **ಸೂತ್ರಂ ೧೯೦**

ಪದರಚನಾತಿಶಯಂ ರೀ
ತಿ ದಲದುವುಂ ನಿಯತವರ್ಣಗುಂಫನಗುಣದೊಂ
ದೊದವಿಂ[೪] ಮೂದೆಱನಕ್ಕುಂ
ವಿದರ್ಭ ಪಾಂಚಾಲ ಗೌಡವಿಷಯನಿಬದ್ಧಂ ೭೮೧

ವೈದರ್ಭರೀತಿ : **ಸೂತ್ರಂ ೧೯೧**

ಅಸಮಸ್ತಪದನ್ಯಾಸಂ
ಪ್ರಸಾದಮಾಧುರ್ಯಗುಣಸಮಗ್ರಮುದಾರಂ
ರಸಭಾವಭಾವಿತೋಕ್ತಿ
ಪ್ರಸರಂ ವೈದರ್ಭರೀತಿಯೆನೆ ಪೆಸರ್ವಡೆಗುಂ ೭೮೨

ಲಕ್ಷ್ಯಂ :

ಮತ್ತೇಭವಿಕ್ರೀಡಿತಂ

೧ ಮನಮೊಲ್ದಾತನ ಗಾಡಿಯಂ ದರವುರಂಗಂಡಾಕೆಗಳ್ ಪೂವಿನಂ
ಬಿನ ಕೋಳ್ಗಂ ಕುಳಿರ್ವಾಲಿ[೫] ನೀರ್ಗಮಲರ್ವಾಸಿಂಗಂ ಕುಳಿರ್ಕೊೞ್ಪ ನಂ
ದನಕಂ ಚಂದನಕಂ ಪಸುರ್ಪೆಸೆವ ಬಾಳ್ಜೊಂಪಕ್ಕಮೊಂದೊಂದೆ ತ
ಣ್ಬನಿಯೊಳ್ ಕೋಡಿಸುತಿರ್ಪ ಬಿಜ್ಜಣಿಗೆಗಂ ಪಕ್ಕಾಗದೇಂ ಪೋಪರೇ ೭೮೩

(ಪಂಪನ ಆದಿಪುರಾಣ ೧,೭೫)

೧ ಮಪ್ಪ (ನ) ೨ ಬಿಚ್ಚಟಿಸೆ (ನ) ೩ ಳೊಂದಿ (ನ) ೪ ದೊದವಿದ (ಮೈ, ನ) ೫ ತಳಿವಾಲಿ (ಪ, ಪಾ)

ಪಾಂಚಾಲರೀತಿ : ಸೂತ್ರಂ ೧೯೨

ದ್ವಿತ್ರಿಪದರಚಿತವೃತ್ತಿ ವಿ
ಚಿತ್ರೌಪಮ್ಯಾದ್ಯಲಂಕ್ರಿಯಾಸಮುಪೇತಂ
ಶ್ರೋತ್ರಸುಖಲಲಿತಮೃದುಪದ
ಪಾತ್ರಂ ಪಾಂಚಾಲರೀತಿ[೧]ಯೆನೆ ಪೆಸರ್ವಡೆಗುಂ[೧] ೭೮೪

ಲಕ್ಷ್ಯಂ :

ಚಂಪಕಮಾಲೆ

೧ ಇನಿಯನ ಕೆಂದಳಂ ತಳಮನೊಯ್ಯನೆ ಸೊಂಕೆ ಪೊದಟ್ದ[೨] ನಾಣ ಪೆಂ
ಪಿನೊಳೊಗೆತರ್ಪ ಘರ್ಮಜಲಬಿಂದುಗಳಿಂ ನಮಿತಾನನಾಬ್ಜೆ [೩]ಬೆ
ಚ್ಚನೆ ಬಸಿವಿಂದುಕಾಂತ[೩]ಕರಸಂಕುಳಮೊಯ್ಯನವುಂಕಿ ಸೊಂಕೆ ಸೊಂ
ಕಿನೊಳೊಱ[೩]ವಿಂದುಕಾಂತಮಣಿಪುತ್ರಿಕೆಯಂದದಿ[೪]ನೊಪ್ಪಿ ತೋಱಿದಳ್[೪]

(ಪಂಪನ ಆದಿಪುರಾಣ ೪,೪೯)

ಗೌಡರೀತಿ : ಸೂತ್ರಂ ೧೯೩

ಅತಿದೀರ್ಘಸಮಾಸಾಂಚಿತ
ಗತಿ ಶಬ್ದಾಡಂಬರಾನುವಿದ್ಧಂ[೫] [೬]ಕ್ರೋಧಾ
ದ್ಭುತ[೬]ರೌದ್ರವೀರರಸಸಂ
ಗತಮಂತದು ಗೌಡರೀತಿ ಪ[೭]ರುಷಪ್ರಾಯಂ ೭೮೬

ಲಕ್ಷ್ಯಂ :

ಶಾರ್ದೂಲವಿಕ್ರೀಡಿತಂ

೧ ವಂಗಾಂಗಾಂಧ್ರ[೮] ಕಳಿಂಗ ಕೊಂಗ ವಿಸರತ್[೯] ಪಾದಾತಪಾಠೀನಮುದ್-
ರಂಗತ್ತುಂಗತುರಂಗಭಂಗುರತರಂಗಾಕೀರ್ಣಮುಚ್ಛೃಂಖಳೋ
ತ್ತುಂಗೋನ್ಮತ್ತಮತಂಗಜಪ್ರಕರಯಾದಸ್ಸಂಕುಳಂ ಕೂಡೆ ನೋ
ಟ್ಪಂಗಂದದ್ಭುತಮಾಗಿ ತೋಱಿ ಮಸಗಿತ್ತುರ್ವೀಶಸೈನ್ಯಾರ್ಣವಂ ೭೮೭

೧-೧ ಯೆಂಬುದದಕ್ಕುಂ (ನ) ೨ ಪೊದಱ್ದ (ಪ) ೩-೩ ಬ/ಚ್ಚನೆ ಬಸಿಯುತ್ತುಮಿಂದು (ಕಾ) ೪-೪ ನಾದಮೊಪ್ಪಿದಳ್ (ಕಾ) ೫ ರಾನಿರುದ್ಧಂ (ಮೈ) ೬-೬ ಕ್ರೋಧೋದ್ಧತ (ನ) ೭ ಪು (ನ) ೮ ವೆಂಗೀವಂಗ (ಮೈ, ನ) ೯ ವಿಳಸತ್ (ನ)

ಸೂತ್ರಂ ೧೯೪

ಕಾರುಣ್ಯಂ ಹಾಸ್ಯಂ ಶೃಂ
ಗಾರಮಿವಿನಿತಱೊಳ[1]ಮಕ್ಕೆ ವೈದರ್ಭಿ[1] ಮನೋ
ಹಾರಿ ಪ್ರಳಯಾದ್ಭುತರಸ
ವೀರರಸಂ[2]ಗಳ್ಗೆ ಪೇೞ್ಗೆ ಪಾಂಚಾಳಿಕೆಯಂ ೭೮೮

ಸೂತ್ರಂ ೧೯೫

ಎಸೆಗುಂ ರೌದ್ರಭಯಾನಕ
ರಸಬೀಭತ್ಸೋಕ್ತಿ ಗೌಡರೀತಿಯಿನದಱೊಳ್
ಪೊಸಯಿಸುಗುಂ ಮೇಣ್ ನಿಸದಂ
ರಸವತ್ವಮತಿಪ್ರತೀತಿ ವೃ[3]ತ್ಯಾಶ್ರಯದಿಂ ೭೮೯

ಸೂತ್ರಂ ೧೯೬

ಅರೆಬರ್ ದೀರ್ಘಸಮಾಸಂ
ಬೆರಸಿರೆ ಶೃಂಗಾರರಸಮುಮಂ ಪೇೞ್ವರ್ ಬಿ
ತ್ತರಿಸುವರಸಮಾಸಪದಾಂ
ತರಂಗಳೊಳಗುಚಿತಮಾಗಿ ರೌದ್ರಾದಿಯುಮಂ ೭೯೦

ಲಕ್ಷ್ಯಂ : ಶೃಂಗಾರರಸಕ್ಕೆ :

ಮತ್ತೇಭವಿಕ್ರೀಡಿತಂ

೧ ಅವತಂಸೋತ್ಪಲತಾಡನಂ ಕನಕಕಾಂಚೀಬಂಧನಂ ನೂಪುರಾ
ರವಝುಂಕಾರಿತಚಾರುವಾಮಚರಣಾಘಾತಂ ಚಳದ್ಭ್ರೂಲತಾ
ಗ್ರವಿಭಾಗೋತ್ಕಟತರ್ಜನಂ ತರಳ[4]ತಾತಾಮ್ರಾಧರಂ ಚಕ್ರಿಗಿ
ತ್ತುವಲಂಪಂ ಪ್ರಣಯಪ್ರಕೋಪಸುರತ[5]ಪ್ರಾರಂಭದೊಳ್ ಕಾಂತೆಯಾ ೭೯೧
(ಪಂಪನ ಆದಿಪುರಾಣ ೧೨,೪೮)

೧-೧ ಮರ್ಕೆ ವೈದರ್ಭ (ನ)
೨ ವೀರಾಖ್ಯಂ (ಮೈ,ನ)
೩ ನೃ (ನ)
೪ ತರಳ (ಕಾ) ೫ ಸಮಯ (ದರ್ಪಣ)

ರೌದ್ರಾದಿಗೆ :

ಮಹಾಸ್ರಗ್ಧರೆ

೨ ಇರದೆಂಟುಂ ದಿಗ್ಗಜಂಗಳ್[೧] ನೆರೆದಿದಿರಿದಿರೊಳ್[೧] ತಾಗೆಯುಂ ಮಂದರಕ್ಷ್ಮಾ
ಧರದೊಳ್ ಕೆಯ್ಗ್ಗುಡಿ ಗೋತ್ರಾದ್ರಿ[೨]ಗಳೆ ಗಜಘಟಾರೂಪದಿಂ ತಾಗೆಯುಂ ಮತ್
ಕರಿ ತಾಂಗಲ್ ತಾನೆ ಸಾಲ್ಗುಂ ಮನುಜಗಜ[೩]ಘಟಾಬಂಧಮೇ ಬಂಧ[೪]
ಮೆಂಬೊಂ
ದು ರಣೋತ್ಸಾಹಂ ಮನಕ್ಕುಬ್ಬರಿಸಿರೆ [೫]ಸಮರೋತ್ಸಾಹಸಂಪನ್ನನಾದಂ[೫] ೭೯೨

(ಪಂಪನ ಆದಿಪುರಾಣ ೧೪,೯೧)

ಇದು ರೀತಿಕ್ರಮರಸನಿರೂಪಣದೊಳ್ ರೀತಿಪ್ರಕರಣಂ ಸಮಾಪ್ತಂ

೧–೧ ನೆರೆದಿರದಿದಿರಂ (ಕಾ) ೨ ಗೋತ್ರಾದಿ (ಮೈ) ೩ ಪೆಱಪೆಱವು (ಕಾ) ೪ ಭಂಡ (ಕಾ)
೫–೫ ಸುಮರಾಟೋಪಮುಂ ತಾಳ್ದಿ ನಿಂದಂ (ಕಾ)

೨ ರಸಪ್ರಕರಣಂ

ಸೂತ್ರಂ ೧೯೭

ಶೃಂಗಾರಾದಿಗಳಪ್ಪ ರ
ಸಂಗಳ್ ವರ್ತಿಸುಗು[೧]ಮಂತವೆಂಟ[೧] ವಲಂ ಕಾ
ವ್ಯಾಂಗಕ್ಕೆ ಸತ್-ಕ್ರಿಯಾರೂ
ಪಂಗಳ್ ರತ್ಯಾದಿಭಾವಸಂಪನ್ನಂಗಳ್ ೭೯೩

ಸ್ಥಾಯಿಭಾವಂ : ಸೂತ್ರಂ ೧೯೮

ರತಿ ಪರಿಹಾಸಂ ಶೋಕೋ
ದ್ಗತಮುತ್ಸಾಹಂ ಭಯಂ ಪ್ರಕೋಪಂ ವಿಜುಗು
ಪ್ಸತೆ ವಿಸ್ಮಯಾಶಯತ್ವಂ
ಪ್ರತಿನಿಯತಸ್ಥಾಯಿಭಾವಮಿವು ತಾಮಕ್ಕುಂ ೭೯೪

ಸಂಚಾರಿಭಾವಂ : ಸೂತ್ರಂ ೧೯೯

ಮಹಾಸ್ರಗ್ಧರೆ

ಮತಿ ನಿರ್ವೇದಾವಹಿತ್ಥ ಶ್ರಮ ಮದ ಜಡತಾ ಗ್ಲಾನಿ ಚಿಂತೋಗ್ರತೇರ್ಷ್ಯಾ
ಧೃತಿ ನಿದ್ರಾವೇಗ[೨] ಶಂಕಾ ತ್ರಸನ ಚಪಲತಾಲಸ್ಯ ಸುಪ್ತಾವ[೩]ಬೋಧ
ಸ್ಮೃತಿ ಗರ್ವಾಮರ್ಷ ದೈನ್ಯೋತ್ಸುಕ ರತಿ ಮುದಪಸ್ಮಾರ ಲಜ್ಜಾ ವಿಷಾದ
ಸ್ಥಿತಿ ಚಿತ್ತಭ್ರಂಶ ಮೋಹಾಮಯ ಮೃತಿಗಳಿವಿಂತೆಯ್ದೆ ಸಂಚಾರಿಭಾವಂ ೭೯೫

ಸಾತ್ತ್ವಿಕಭಾವಂ : ಸೂತ್ರಂ ೨೦೦

ಸ್ವೇದಂ ವೈವರ್ಣ್ಯಂ ಸ್ವರ
ಭೇದಂ ರೋಮಾಂಚನಂ ಪ್ರಕಂಪನಮಶ್ರೂದ್-
ಭೇದಂ ಸ್ತಂಭಂ ಲಯಮೆಂ
ದಾದುವಿವೆಂಟುಂ ರಸಕ್ಕೆ ಸಾತ್ತ್ವಿಕಭಾವಂ ೭೯೬

ಸೂತ್ರಂ ೨೦೧

ಭಾವಂ ಬಹಿರರ್ಥಸಮುದ್-
ಭಾವಿತಮನುಭವಭವಂ ವಿಭಾವಂ ರಸಸದ್-
ಭಾವವಿಹಿತಾಭಿನಯಮನು
ಭಾವಂ ಸಂಚಾರಿಭಾವಮನವಸ್ಥಿತಿ[೪]ಕಂ ೭೯೭

೧-೧ ಮೆತ್ತನೆಂಟು (ನ) ೨ ವೇಶ (ನ) ೩ ಸುಪ್ತೋವ (ನ); ಸುಪ್ತೋಹ (ಮೈ, ನ)
೪ ಸ್ಥಿತ (ನ)

ಸೂತ್ರಂ ೨೦೨

ಭಾವಂ ವಿಭಾವಮೆಸೆವನು
ಭಾವಂ ಸಂಚಾರಿಭಾವಮೊಂದಿಂತಿವಱಿಂ
ದಾವಿಷ್ಕೃತಮಕ್ಕುಂ ರಸ
ಮಾವುದುಮೆಂದಱಿಗೆ ಭರತಶಾಸ್ತ್ರಕ್ರಮದಿಂ ೭೯೮

ಶೃಂಗಾರಂ : ಸೂತ್ರಂ ೨೦೩

ಸ್ತ್ರೀಪುಂಸರತಿಸಮುತ್ಥ
ವ್ಯಾಪಾರಂ ತಾನದಲ್ತೆ ಶೃಂಗಾರಂ ಮೇ
ಳಾಪದಿನಗಲ್ಕೆ[1]ಯಿಂ ಸುನಿ[1]
ರೂಪಿತಸಂಭೋಗ ವಿಪ್ರಲಂಭಸಮಾಖ್ಯಂ ೭೯೯

ಲಕ್ಷ್ಯಂ : ಸಂಭೋಗಶೃಂಗಾರಕ್ಕೆ :

ಚಂಪಕಮಾಲೆ

೧ ಪದೆಯಿಸಿ[2] ಸೊಂಕಿ ಸಂಕೆಗಿಡೆ[3] ಪೇಳಿಸಿ [4]ಮೆಯ್ವಿಡೆ ತಳ್ತು[4] ತೋಳ ತ
ಳ್ಪಿದಿರ್ಗೊಳೆ ಪೆಲ್ಲಸಪ್ಪಿ ಮೊಗಮಿತ್ತಿರೆ[5] ಚುಂಬಿಸಿ ಸೋಲ್ತು ನಾಣನೊ
ಕ್ಕುದನಱಿದಿಚ್ಚೆಕಾರ್ತನದ ಲಲ್ಲೆಗಳಂ ನುಡಿದಂತಲಂಪಿ[6]ನು
ಬ್ಬದಿ[7]ಗಮನಾ ಲತಾಂಗಿಗೆ ನೃಪಂ ಪಡೆದಂ ನವಸಂಪ್ರಯೋಗದೊಳ್ ೮೦೦

– ಇದು ಮುಗ್ಧೆ[7]ಸಮಾಗಮಂ

ಮತ್ತೇಭವಿಕ್ರೀಡಿತಂ

೨ ಬಗೆಯೊಳ್ ಪೊಣ್ಮಿಮಲಂಪು ಕಾತರತೆ[8]ಯುಂ ತಂದೀಯೆ ಮೆಯ್ ಮೆಯ್ಗೆ ಸಂ
ದುಗಳೇರ್ನ್ಪೊಡಮಿಲ್ಲದಂತಮು[10]ರ್ಗಿನಂ ತಳ್ತಪ್ಪಿ ಬಾಯ್ಗೂಟದೊಳ್
ಮಿಗೆ ಪೀರ್ವಂತೆ ಮನೋಜ[11]ರಾಗರಸ[12]ಮುಂ ಮೆಯ್ವೆರ್ಚೆ ಕಾದಲ್ಮೆ ಕೆಯ್-
ಮಿಗುವನ್ನಂ ನೆರೆದರ್[13]ಮನಂ ತಣಿವಿನಂ[13] ನಾನಾರತಪ್ರೌಢಿಯಿಂ[14] ೮೦೧

– ಇದು ಮಧ್ಯಸಮಾಗಮಂ

೧-೧ ಯಿನಿಸು ನಿ (ಮೈ) ೨ ಸೆ (ಮೈ) ೩ ಸಂಕಿಸದೆ (ಮೈ, ನ) ೪-೪ ಮೆಯ್ಮಿಡಿತಕ್ಕ (ಮೈ) ೫ ಮಿತ್ತದೆ (ಮೈ, ನ) ; ಮಿತ್ತರೆ, ಮಿತ್ತಿದೆ (ನ) ೬-೬ ಮ|ಭ್ಯುದಿ (ಮೈ) ೭ ಮುಗ್ಧಾ (ನ) ೮ ಕಾತರಿಕೆ (ಮೈ, ನ) ೯ ವ (ಮೈ) ೧೦ ದು (ಮೈ) ೧೧ ಮನೋನು (ನ) ೧೨ ರಾಗಸುಖ (ಮೈ) ; ರಾಜಸುಖ (ನ) ೧೩-೧೩ ಮನಃಪ್ರಿಯತಮರ್ (ನ) ೧೪ ಪ್ರೌಢಿಯುಂ (ಮೈ), ಕ್ರೀಡೆಯಿಂ (ನ)

ಮಹಾಸ್ರಗ್ಧರೆ

೩ ಕುಟಿಲಾನೀಲಾಳಕಂಗಳ್ ನಿಮಿರ್ದಿರೆ ಬೆಳರ್ವಾಯ್ ನಾಡೆಯುಂ ಬೀಗೆ ರೋಷೋ[1]
ತ್ಕಟದೇಹಂ ರಾಗದಿಂ ಪಿಳ್ಳನೆ ಪಿಱಿದವೊಲಿಂಬಾಗೆ ನೀಳ್ದಾಳ[2]ವಾಳಂ
ವಿಟವೃತ್ತಂ ಮೆಯ್ಯೊಳೆತ್ತಂ ಪಸರಿಸಿರೆ ವಿಟಂ ಬೀಸೆ ನಿಂದಿರ್ದಳೊರ್ವಳ್
ಸ್ಫುಟತೋರೋಮಧ್ಯೆ ಛಿನ್ನಾವಟುತಟವಿಹಟದ್ಗ್ರಂಥಿನಿರ್ಗ್ರಂಥದಿಂದಂ ೮೦೨

– ಇದು ಪ್ರೌಢಸಮಾಗಮಂ

ಮತ್ತೇಭವಿಕ್ರೀಡಿತಂ

೪ ಕಡೆಗಣ್ಣಿಂ ಕಡೆಗೋಡಿವೋಗೆ ಪಿರಿದುಂ ಚಲ್ಲಂ ಕುಚದ್ವಂದ್ವದಿ
ಟ್ಟೆಡೆಯಿಂ ಸ್ವೇದಜಲಂ ತುಳುಂಕೆ ಜಘನಾಂತರ್ದೇಶದಿಂದಾವಗಂ
ಬಿಡಮುಣ್ಮುತ್ತಿರೆ ಮನ್ಮಥದ್ರವಮನಂಗಾವೇಶದಿಂ ಕಾಲ್ತಡಂ
ಬಡೆ ಬಂದಾಟಿಸಿ ನೋಡಿದಳ್ ಪದೆಪಿನಿಂ ಶ್ರೀವಿಪ್ರ[3]ಮಾರ್ತಂಡನಂ ೮೦೩

– ಇದು ಅಭಿಲಾಷೆ

ಖಚರಪ್ಲುತವೃತ್ತಂ

೫ ಪಿಂಗೆ ಪೂಸಿದ ಭಸ್ಮಪರಾಗಂ ಪೊಣ್ಮುವ ಘರ್ಮಜಲಂಗಳಾ
ಪಾಂಗು ಗಂಗೆಯ ಶೀಕರಮೆಂಬಂತಾಗಿರೆ ಕಂಡುಮೆ ಶಂಭುವಂ
ಗಂಗೆ ದಲ್ ಬಿಗಿದಪ್ಪಿದಳೆಂಬಾ[4]ಶಂಕೆಗೆ ಭೋಂಕನೆ ವೋದೆ ಮು
ದ್ದಿಂಗೊಱಲ್ದು ಮರ್ದಪ್ಪಿದನೀಶಂ ನಲ್ಲಳನಲ್ಲಿ ರತಾಂತ[5]ದೊಳ್ ೮೦೪

– ಇದು ಈರ್ಷೆ

ವಿಪ್ರಲಂಭಶೃಂಗಾರಕ್ಕೆ :

ಮತ್ತೇಭವಿಕ್ರೀಡಿತಂ

೬ ಪದ[6]ವೆತ್ತಿರ್ವರ ಜೀವಮೊಂದೊಡಲೆ ಬೇಱೆಂಬಂ[7]ತುಟಂ ಮಾಡಿದಂ
ಮದನಂಗಾವುದು ದೋಷಮುಂತೆ[8] ನುಡಿಯಲ್ಕೇಂ ಬರ್ಕುಮೇ ಪಾಪಮಂ
ಬಿದಿಯೆಂಬಾಱಡಿಗಳ್ಕೆ[9]ನಿಂದಮುಱಿವಾಯ್ತಿರ್ವರ್ಗಮಿನ್ನೊರ್ಮೆ ದೈ
ವದಿನೆತ್ತಾನುಮದಿಂದುಬಿಂಬಮುಖಿಯಂ ಕಾಣ್ಬೊಂದು ಸಯ್ಪಕ್ಕುಮೇ ೮೦೫

– ಇದು ಪೂರ್ವಾನುರಾಗಂ

೧ ರಾಗೋ (ನ) ೨ ನೀರಾಳ (ನ) ೩ ಚಕ್ರ (ನ) ೪ ಳೆಂದಾ (ಕಾ) ೫ ರತಾಂತ್ಯ (ಮೈ)
೬ ಪದೆ (ಮೈ) ೭ ಬೇಱಿರ್ಪಂ (ಮೈ, ನ) ೮ ಮುಂಟೆ (ನ) ೯ ಗಕ್ಕ (ನ)

ಚಂಪಕಮಾಲೆ

೭ ಅಱಿಯದೆ ಗೆಯ್ದ ನಬ್ಜಮುಖಿ ನೀನಿದನೊರ್ಮೆಗೆ ಸೈರಿಸೆಂದು ಕಾ
ಲ್ಗೆಱಗಿರೆಯುಂ ಪ್ರಿಯಂ ಸುಡು ಸುಡೇಂ ಗಡ ಸೈರಿಪುದೆಂದು ಕೋಪದಿಂ
ಪಱಪಡೆ ಪೋಗೆ ನೂಂಕಿ ಕಳೆದಂದಿನ ದುಷ್ಕೃತಮೆನ್ನನಾವಗಂ
ಮಱುಗಿಸಿ ಮುಚ್ಚಿ ಸುಟ್ಟಪುವು ನೋಡಿರೆ ಶೀತಮರೀಚಿಮಾಲೆಗಳ್ ೮೦೬

– ಇದು ಮಾನಾಖ್ಯಂ

ಚಂಪಕಮಾಲೆ

೮ ಇನಿಯನಗಲ್ದು ಪೋಗಿ ಪರದೇಶದೊಳಿರ್ದಪನಾನುಮಿಲ್ಲಿ ಮಾ
ವಿನ ತಳಿರ್ವಾಸಿನೊಳ್ ಪೊರಳುತಿರ್ದಪೆನಾಗಳು[೧]ಮಿಂತೆ ನೀನುಮೆ
ನ್ನನೆ[೧] ನಡೆನೋಡುತುಂ ನಭದೊಳಿರ್ದಪೆಯಪ್ಪುದಱಿಂದೆ ನಿನ್ನನಾ
ನನುವಿಪೆ[೨]ನೆನ್ನ ಮೆಯ್ ಬಡವೊ ನಲ್ಲನ ಮೆಯ್ ಬಡವೋ ನಿಶಾಕರಾ ೮೦೭

(ಪಂಪನ ಆದಿಪುರಾಣ ೧೨,೪೨)

– ಇದು ಪ್ರವಾಸಂ

ಮಹಾಸ್ರಗ್ಧರೆ

೯ ಪ್ರತಕೆಂತಾ[೩]ಯಿನ್ತಾಗಳಿಂತೀ ತನು ತನುಲತೆಯಿಾ ಮಾಗಿಯಿಂದೀ ಹಿಮಾ[೪]ನೀ
ಪ[೪]ತನಕ್ಕೆಂತಾರ್ತೆ[೫] ಮೆಯ್ಯಂ ವನಜವದನೆ ಕೇಳ್ ಗ್ರೀಷ್ಮದೊಳ್ ನಿಚ್ಚಮೆತ್ತಂ
ಸತಿ ತಟ್ಟುತ್ತಿರ್ಪೆ[೬] ಕಾಯ್ಪಿಂದುರಿವ ಬಿಸಿಲೊಳಾ ಮೇಘವಿಸ್ಫೂರ್ಜಿತಾರ್ಣಃ
ಪತಧಾರಾಭೀಕರಾಡಂಬರಜಳಸಮುಯಂ ಬಂದೊಡೆಂತಕ್ಕದಿರ್ಪಯ್ ೮೦೮

– ಇದು ಕರುಣಾತ್ಮಕಂ

ಹಾಸ್ಯಂ–ಕರುಣಂ : ಸೂತ್ರಂ ೨೦೪

ವಿಕೃತಾಂಗವೇಷಭಾಷಾ
ಪ್ರಕಾರಕೃತಹಾಸಹೇತುಕಂ ಹಾಸ್ಯಮತಿ
ಪ್ರಕಟತರಶೋಕಭಾವ
ಪ್ರಕೃತಿಪರಂ ಕರುಣಮಾರ್ತಜನತಾವಿಷಯಂ ೮೦೯

೧–೧ ಮಂತೆ ನೀನೆ ಕೆ।ಮ್ಮನೆ (ಪ) ೨ ನನುಮಿಸೆ (ನ) ೩ ವೃತಕೇನಾ (ನ) ೪–೪ ವಾ।ತರ್ಣ (ಮೈ) ೫ ತಾರ್ಥ, ತಾರ್ಥ (ನ) ೬ ತಟ್ಟಾಂತಿರ್ಪೊ (ನ)

ಲಕ್ಷ್ಯಂ : ಹಾಸ್ಯಕ್ಕೆ :

ಶಾರ್ದೂಲವಿಕ್ರೀಡಿತಂ

೧ ಶ್ರೀ [೧]ತನ್ನೆಂದಿನ ರೂಪೆ[೧] ಕೌಸ್ತುಭದೊಳಚ್ಚೊತ್ತಿರ್ದವೋಲ್ ತೋಱೆ[೨] ಕಂ
ಡೇ[೨]ತರ್ಕಿಕೆ ಮದೀಯವಾಸಗೃಹಮಂ [೩]ತಾಂ ಪೊಕ್ಕ[೩]ಳೆಂದೇವದಿಂ
ದಾ ತಾಮ್ರಾಕ್ಷಿ[೪]ಯನೀ[೪]ಕ್ಷಿಸುತ್ತುಮಿರೆ ತನ್ಮುಗ್ಧತ್ವಮಂ ಕಂಡು ಸಂ
ಜಾತಾಂತಃಸ್ಮಿತನಾದ ಕೃಷ್ಣನೆಮಗೀಗಾನಂದಸಂದೋಹಮಂ ೮೧೦

(ಶ್ರೀರಂಗಪಟ್ಟಣದ ೬೪ನೆಯ ಶಾಸನ)

– ಇದು ಉತ್ತಮಪಾತ್ರಂ

ಮತ್ತೇಭವಿಕ್ರೀಡಿತಂ

೨ ಸೊಗಯಿಪ್ಪೊಳ್ದೊಡೆ ನೋಯೆ ನೇ[೫]ತ್ರದೆಱೆ[೬]ವೋಲ್ ನೀಳ್ದಿರ್ದ ಬಾರಂತೆ ತೋ[೭]
ರ್ಪುಗಿಯಂ ಪುಣ್ಮಯಮಾಗಿ ಮಾಡಿ ಬಿದಿ ಮುಂ ಜಂಘಾಪ್ರಮಾಣಕ್ಕೆ ನೂ
ಲ್ದಿಗೆದಂತಿರ್ಪ ನಖವ್ರಣಾವಳಿಗಳಂ ನಲ್ಲಂಗೆಕಣ್ಗೆತ್ತುತುಂ
ನಗುತುಂ [೮]ಸಾರ್ದು ಸವಂಗಮಂ ಕಳೆ[೮]ಯಿಸುತ್ತಿರ್ಪಾಕೆ ಕಣ್ಗೊಪ್ಪಿದಳ್ ೮೧೧

– ಇದು ಮಧ್ಯಮಪಾತ್ರಂ

ಪೃಥ್ವೀವೃತ್ತಂ

೩ ಪ್ಲವಂಗಮಕುಳಂಗಳಲ್ಲಿ ಕಿಸುಗಲ್ಲ ಶೃಂಗಂಗಳಂ
ದವಾಗ್ನಿಶಿಖೆಗೆತ್ತು ಬೆರ್ಚಿ ಮದದಂತಿಯಂ ನಿರ್ಝರ
ಪ್ರವಾಹನಗಮೆಂದೆ ಗೆ[೯]ತ್ತದಱ ಬೆಂಗೆ ವಂದಾಗಳಾ
ದವಸ್ಥೆ ತಱಿ[೯]ಸಲ್ವಿನಂ ನಗಿಕುಮಪ್ಸರೋಬೃಂದಮಂ ೮೧೨

೪ ಕುಳ್ಳಿರ್ದು [೧೦]ಕುಳಿರ್ವ ಮೞೆಯೊಳ್
ಪ[೧೦]ಳ್ಳದ ಕೇದಗೆಗೆ ಪಾಯ್ದು ಪತ್ತಿದ ಕೆಯ್ಯಂ
ಮುಳ್ಳುರ್ಚೆ ತೆಱೆದು ಪಲ್ಲಂ
ಘೊ[೧೧]ಳ್ಳನೆ ನಗಿ[೧೨]ಸಿದುದು[೧೨] ಕಟಕಮಂ ಮರ್ಕಟಕಂ ೮೧೩

– ಇದು ಜಘನ್ಯಪಾತ್ರಂ

೧-೧ ತನ್ನಂದದ ರೂಪು (ನ) ೨-೨ ಪೇ।ಟಿೀ (ನ) ೩-೩ ಪೊಕ್ಕಿರ್ದ (ನ) ೪-೪ ನಿರೀ (ನ) ೫ ಸೂ (ನ) ೬ ತೀ (ನ) ೭-೭ ತೋಱಿ ಸಮಾಗಮಕ್ಕಿಳ (ನ) ೮ ಮು (ಮೈ, ನ) ೯ ತೆಱ (ನ) ೧೦-೧೦ ಕುಮುರೆಯೊಳ್ ಕುಳು।ವ (ಮೈ, ನ) ೧೧ ಕೊ (ಮೈ, ನ) ೧೨-೧೨ ಸಿತ್ತು (ನ)

ಕರುಣಕ್ಕೆ[1] :

ಮಹಾಸ್ರಗ್ಧರೆ

೫ ಬಗೆಗೀಗಳ್ ನಿಶ್ಚಯಂ ಪುಟ್ಟಿದುದಱಿದೆನಿದಂ ಪನ್ನಗಂ ಶಂಖಚೂಳಂ
ಮಗನಿಂತೀ ವೃದ್ಧೆಗೀತಂ ತಡೆದಿರದೊಡಗೊಂಡುಯ್ದುವಂ ಕಿಂಕರಂ ಪ
ನ್ನಗರಾಜಂಗೀತನಂ ವಾಸುಗಿ ಗರುಡನ ತೀಂಗೊ[2]ಡ್ಡಿದಂ ತಪ್ಪದಾಹಾ
ವಿಗಳದ್ಬಾಷ್ಪಾಂಬುದೀನಾನನೆ ಜನನಿ ಮಗಂ ಪೋಗೆ ಪುಯ್ಯಲ್ಚಿದಪ್ಪಳ್

ಅಂತುಮಲ್ಲದೆಯುಂ :

ಹರಿಣೀವೃತ್ತಂ

೬ ಅೞಲನೆರ್ದೆಯೊಳ್ ತಿಣ್ಣಂ ತೞ್ಕೈಸಿ ಪುತ್ರವಿಮೋಹದಿಂ
ದೞಿವಿ ತನುವಂ ಹಾ ಹಾ ಹಾ ವತ್ಸಯೆಂದಮರ್ದಪ್ಪಿಕೊಂ
ಡೞುತುಮೞುತುಂ ನಟ್ಟೆರ್ದಂಬಂ ಮುನೀಶನಿಳೇಶನಿಂ
ಕಿೞಿಸೆ ಸರಲಿಂ ಮುನ್ನಂ ತದ್ದ್ವಾರದಿಂದಸು ಪೋಪುದುಂ ೮೧೫

ವೀರಂ-ರೌದ್ರಂ : ಸೂತ್ರಂ ೨೦೫

ವೀರರಸಂ ಬವರಿಸುಗುಮು
ದಾರೋತ್ಸಾಹಪ್ರವೃತ್ತಿ[3]ಕಾರಣಕಾರ್ಯಂ
ದಾರುಣರೋಷಾವೇಶವಿ
ಕಾರಭವಂ ರೌದ್ರಮೆಂಬ ರಸಮುದು ನೆಗೞ್ಗುಂ ೮೧೬

ಲಕ್ಷ್ಯಂ : ವೀರಕ್ಕೆ :

ಮತ್ತೇಭವಿಕ್ರೀಡಿತಂ

೧ ತ್ರಿದಶೇಂದ್ರಾರ್ಜಿತಶೌರ್ಯಮೊರ್ಮೆ ಕಿೞಿ ಪೋಯ್ತಾಭೀಳದಿಕ್ಪಾಲರೊ
ಡ್ಡಿದ ಸೈನ್ಯೋದ್ಧತಿ ಮತ್ತಮೊರ್ಮೆ ಕಿೞಿ ಕೇಳ್ ನಿರ್ಮೂಲಮಾಯ್ತಿನ್ನುಮೊ
ರ್ಮೆ ದಲೆನ್ನೊಳ್ ಸಮನಪ್ಪವಂ ಪೊಣರೆ ಕಿಲ್ವಂದೊಪ್ಪುಗುಂ ಬೆಂಗಿಯೇ
ಮುಮುವರ್ದೇ ನಿನಗೆಂತು ಕಿೞ್ವಿನತು[4]ಳಶ್ರೀಚಂದ್ರಹಾಸಾಸಿಯುಂ ೮೧೭

ಅಂತುಮಲ್ಲದೆಯುಂ :

ಚಂಪಕಮಾಲೆ

೨ ಕ್ಷಿತಿಯೊಳರಾತಿಭೂಪತಿಗಳಂ ತವೆ ಕೊಂದು ಸಮಂತು ವಿಪ್ರಸಂ
ತತಿಗಖಿಳಾವನೀತಳಮನಿತ್ತು ನೆಗೞ್ಚಿದನಲ್ತೆ ವಿಕ್ರಮೋ
ನ್ನತಿಯೊಡನೊಂದು ದಾನಗುಣದುನ್ನತಿಯುಂ ಭುವನಕ್ಕೆ ಭಸ್ಮಸಾತ್-
ಕೃತರಿಪು ಪಾತ್ರಸಾತ್ಕೃತಜಗದ್ವಲಯಂ ಜಮದಗ್ನಿನಂದನಂ ೮೧೮

೧ ಕರುಣರಸಕ್ಕೆ (ಮೈ) ೨ ದೊ (ಮೈ) ೩ ಪ್ರವರ್ತಿ (ನ) ೪ ಮ (ನ)

ರೌದ್ರಕ್ಕೆ :

ಮಹಾಸ್ರಗ್ಧರೆ

೩ ಕುಡಿವೆಂ ದುಃಶಾಸನನೋರಃಸ್ಥಳಮನಗಲೆ ಪೋೞ್ದುರ್ಚಿ ಕೆನ್ನೆ[೧]ತ್ತರಂ ಪೊ
ಕ್ಕುಡಿವೆಂ ಪಿಂಗಾಕ್ಷನೂರುದ್ವಯಮನುರುಗದಾಘಾತದಿಂ ನುಚ್ಚುನೂಱಾ
ಗೊಡೆವೆಂ ತದ್‌ರತ್ನರಶ್ಮಿಪ್ರಕಟಮುಕುಟಮುಂ ನಂಬು ನಂಬೆನ್ನ ಕಣ್ಣಿಂ
ಕಿಡಿಯುಂ ಕೆಂಡಂಗಳುಂ ಸೂಸಿದಪುವಹಿತರಂ ನೋಡಿ ಪಂಕೇಜವಕ್ತ್ರೇ ೮೧೯

(ಪಂಪನ ವಿಕ್ರಮಾರ್ಜುನವಿಜಯ ೭,೧೩)

೪ ಅಱಿಪಿದುದು ರೌದ್ರರಸಮಂ
ಕಿ[೨]ಱುಪಿದ ಕುಡುವುರ್ವ ಕರ್ಚಿದೌಡುರ್ಚಿದ ಬಾಳ್
ಇಱಿಯಲನುಗೆಯ್ದ[೩] ಕೆಯ್ ಬೆ
ಳ್ಕುಱೆ[೩] ಬೆಚ್ಚನೆ[೪] ಬಿಟ್ಟ [೫]ಕಣ್ ಹಯಾ[೫]ರೋಹಕರಾ ೮೨೦

(ರನ್ನನ ಗದಾಯುದ್ಧ ೪,೨೭)

ಭಯಾನಕಂ-ಬೀಭತ್ಸಂ-ಅದ್ಭುತಂ :

ಸೂತ್ರಂ ೨೦೬

ಭಯಹೇತುಸಮುದ್ಭೂತಂ
ಭಯಾನಕಂ ಕೃತಜುಗುಪ್ಸನಂ ಬೀಭತ್ಸಂ
ನಿಯತಂ ವಿಸ್ಮಯಭಾವಾ[೬]
ಶ್ರಯಮುದ್ಭುತರಸಮೆ[೭]ನಿಪ್ಪ ಪೆಸರಂ ಪಡೆಗುಂ[೭] ೮೨೧

ಲಕ್ಷ್ಯಂ : ಭಯಾನಕಕ್ಕೆ :

ಮತ್ತೇಭವಿಕ್ರೀಡಿತಂ

೧ ಮಕರಂ ಬಾಯ್ದೆಱೆದಂದದಿಂ ತೆಱೆ[೮]ದ ಬಾಯ್ ಪೀ[೯]ಱಿರ್ದ ಕೂರ್ದಾಡೆ ನೆ
ಕ್ಕ ಕದಂಪೆತ್ತಿದ ಪುರ್ವು ಪತ್ತಿದ ಬಸಿಱ್ ಪೋತಂದ ಕಣ್ ಮೇಘಘೋ
ಷಕಠೋರ[೧೦]ಧ್ವನಿ ನೀಳ್ದ ಕೇಸುರಿವೊಲಿರ್ಪ ಭೀಳಕೇಶಾಳಿ ಸ
ರ್ಪಕ[೧೧]ನದ್ಭೂಷಣಭೀಷ[೧೧]ಣಂ ಭಯದಮಾಯ್ತಾ ರಾಕ್ಷಸೀರೂಪಕಂ ೮೨೨

೧ ಕರ್ನೆ (ಕಾ); ಕನ್ನೆ (ನ) ೨ ನಿ (ಪಾ); ತಿ (ನ) ೩ ಗೆಯ್ವ (ಮೈ) ೪ ಬಿಟ್ಟನೆ (ಪಾ); ಬಿಚ್ಚನೆ (ನ) ೫-೫ ಕಣ್ಗಳಾ (ಪಾ) ೬ ಭಾರಾ (ನ) ೭-೭ ನಿಪ್ಪುದಕ್ಕುಂ ಪೆಸರಿಂ (ಮೈ, ನ) ೮ ಗೆ (ಮೈ, ನ) ೯ ಪೇ (ನ) ೧೦ ಘೋರ (ನ) ೧೧-೧೧ ವದ್ಭೀಷಣಭೂಷ (ನ)

ಉತ್ಪಲಮಾಲೆ

೨ ಸೋರ್ಮುಡಿ ಸೋರ್ದು[1] ಪಿಂದಲೆಯೆ ಪಚ್ಚಳಿ[2]ಮಂ ನಿಜಮಾರ್ಗಮಂ ಬಿಸು
ಟ್ಟೋರ್ಮೆಯೆ ಕೞ್ತಿ ಚಮ್ಮಟಿಗೆ ಮುಟ್ಟಿದವೋಲ್ ನಸುಬೆರ್ಚಿ ತಾನದ
ಕಿರ್ಮುಡಿ ಬೆರ್ಚಿ ಪೆರ್ಚಿ ನಡುಕಂ ಪೆಱಗೇಱುದಳೊರ್ವಳೋಪನಂ
ಪೆರ್ಮೊಲೆ ಬೆನ್ನನುರ್ಚಿದಪುವೆಂಬಿನಮಪ್ಪಿದ[3]ಳಾದಮೊಪ್ಪಿದಳ್[3] ೮೨೩

೩ ಬೆರಲಂ ಕರ್ಚುವ ಪುತ್ತ್ರಂ
ಪರಿದೇಱುವ ಕೆಯ್ದು[4]ವಿಕ್ಕಿ[4] ಪೊಡೆಮಡುವ ಭಯ
ಜ್ವರದಿಂ ನಡುಗುವ ಭೀರುಗ
ಳರೆಬರ್ ಕನ್ನಡಿಸಿದರ್ ಭಯಾನಕರಸಮಂ ೮೨೪

(ರನ್ನನ ಗದಾಯುದ್ಧ ೪,೨೮)

ಬೀಭತ್ಸಕ್ಕೆ :

ಮಣಿವಿಭೂಷಣವೃತ್ತಂ

೪ ನೆತ್ತರಂ ಕುಡಿದು ಸೀನೆಣದೊಳ್ಪಿಡಿ[5]ಖಂಡಮಂ
ಪತ್ತೆ ತೊಯ್ದು[6] ನೆಣ[7]ದೊಟ್ಟಿದ ಪಾರೆಯುಮೀರೆಯುಂ
ತುತ್ತಿ ನುಂಗಿ ಮಿದುಳಂ[8] ತಣಿವಿಂ ಪುಳಿದೇಗುದೇ
ಗುತ್ತುಮಿರ್ಪುವರ್[9]ಱಕೊಳ್ ರಜನೀಚರಕೋಟಿಗಳ್ ೮೨೫

ಅದ್ಭುತಕ್ಕೆ :

ಚಂಪಕಮಾಲೆ

೫ ಪಯವುಲಿಗಳ್ ಮೊಲೆಯೂಡಿದುವಾ ಹರಿಣಂಗಳಂ . . . .
ನಯಮೊಳೆ ನೋಡಿದುವಾನೆಗಳಂ ಹರಿಗಳ್ ನಿಜೋಜ್ವಲಕೇಸರಾ
ಳಿಯನ[10]ಗಿಯುತ್ತಿರೆಯುಂ ಕುಟಿಲಾಹಿಗಳುಂ ನವಿಲ್ಗಳನೆತ್ತಮಾ
ಶ್ರಯಿಸಿದುವಿಂತಿನಿತದ್ಭುತಮಾಯ್ತು ತಪೋಮಹತ್ವದಿನಾಕೆಯಾ ೮೨೬

೬ ತನಗಿಲ್ಲದ ಭಯಮಂ ತೈ
ಲನಾಂತ ರಿಪುನೃಪರ್ಗೆ ಕುಡುವನವರ್ಗಿಲ್ಲದುದಂ
ವಿನುತಜಯ[11]ಶ್ಲಾಘ್ಯಯಶೋ
ಧನಮಂ ತಾನೀೞ್ದುಕೊಳ್ವನೇನಚ್ಚರಿಯೋ ೮೨೭

೧ ಜೋಲ್ದು (ನ) ೨ ಪಶ್ಚಿಮ (ನ) ೩-೩ ಳಾಗಳಾತರ್ದಿಂ (ಮೈ, ನ) ೪-೪ ವಿರಿಸಿ (ಪಾ) ೫ ದೊರ್ಪಿಡಿ (ಮೈ, ನ) ೬ ತೊಯ್ದು, ಕೊಯ್ದು (ನ) ೭ ನೆಗೆ (ನ) ೮ ಳಿಂ (ನ) ೯ ವವ (ನ) ೧೦ ನು (ನ) ೧೧ ನಜ (ಮೈ); ನಯು (ನ)

ಶಾಂತಂ : ಸೂತ್ರಂ ೨೦೭

ಸಮಭಾವಪ್ರಭವಂ ಶಾಂ
ತಮಕ್ಕುಮಂತಾ ಸಮತ್ವಮುಂ ವರ್ತಿಸುಗುಂ
ಸಮನಿಸಿ ಸಮ್ಯಗ್[೧]ಜ್ಞಾನಂ
ತಮಮುಂ ರಾಗಮುಮನಲೆದು ತೊಲಗಿಸೆ ಮನದಿಂ ೮೨೮

ಲಕ್ಷ್ಯಂ :

ಮತ್ತೇಭವಿಕ್ರೀಡಿತಂ

೧ ಬಗೆಯಂ ತಾರದೆ ತಾಪಸಾಶ್ರಮಪದಕ್ಕಜ್ಞಾನದಿಂ ಮೂರ್ಖರೇ
ಕೆ ಗಡಂ ಮಾಣ್ಬರೊ ಮುಪ್ಪಲಿಲ್ ಬಡತನಂ ರೋಗಂ ವಿಯೋಗಂಗಳಿ[೨]
ನ್ನಿಗಮಿಕ್ಕಿರ್ದೊಡಲಂ[೩] ಬಿಸುಟ್ಟು ಪೆಱದಂ[೪] ಕೆಯ್ಕೊಂಡು ಸಂಸಾರದೊಳ್
ಮ[೫]ಗುಟ್ಟಿಂ ಪುಟ್ಟುವರೆಂಬ ಗಾಂಪಿದೆ ವಲಂ ಧೀ[೬]ರಂಗೆ ಲಜ್ಜಾಕರಂ ೮೨೯

೨ ಧರೆಯೊಳ್ ಧರ್ಮಪಥಕ್ರಮಂಗಳೆಸೆಗುಂ ಮತ್ಕೀರ್ತನಂಗಳ್ ಜಯೋ
ದ್ಧುರಮುಂಟರ್ಥ[೭]ಫಲೋಪಮಾನಮೆಮಗೀ ಹಸ್ತ್ಯಶ್ವತಂತ್ರಂ ಕುಳಾ
ಭ[೮]ರಣಂ ಕಾಮಫಲೋಪಮಂ ಬಳೆದಪಂ ಮನ್ನಂದನಂ ಸಾಲ್ವ[೯]ದಿ
ನ್ನಿರವೇಂ[೯] ಮೋಕ್ಷಮಹಾಮಹೀರುಹಫಲೈಕಾಸ್ವಾದನಂ[೧೦] ನೋಡುವೆಂ ೮೩೦

(ಪರಸ್ಪರನಿರೋಧಕರಸಂಗಳ್ :)

ಸೂತ್ರಂ ೨೦೮

ಕರುಣಾರಸಕ್ಕೆ ಮಿಗೆ ಹಾ
ಸ್ಯರಸಂ ಶೃಂಗಾರರಸಕೆ ಬೀಭತ್ಸಂ ರೌ
ದ್ರರಸಕ್ಕಮದ್ಭುತಂ[೧೧] ವೀ
ರರಸಕ್ಕೆ ಭಯಾನಕಂ ನಿರೋಧಕಮಕ್ಕುಂ[೧೨] ೮೩೧

ಲಕ್ಷ್ಯಂ :

೧ ಕರಜಕ್ಷತಗಳಿ[೧೩]ತಾಸ್ಥಾ
ನು[೧೩]ರಕ್ತಕರ್ದಮಿತವಿಗ್ರಹಂ ಸು[೧೪]ವ್ರಣಿತಾ
ಧರಜಾತಿಪೂತಿಗಂಧಂ
ತರುಣೀಮುಖಮೆನಗೆ ಪಡೆದುದೊದವಿದಲಂಪಂ ೮೩೨

೧ ದಿವ್ಯ (ನ) ೨ ಗಳ (ಮ್ಯೆ,ನ) ೩ ದಂ (ನ) ೪ ಪೆಱದಿಂ (ಮ್ಯೆ,ನ); ದೆಱರಿಂ,ಪಸಮಂ (ನ) ೫ ತ (ನ) ೬ ವೀ (ನ) ೭ ಮುಂಟಾರ್ತ (ನ) ೮ ಚ (ನ) ೯-೯ ದೆ।ನ್ನಿರವೆಂ, ದೆ। ನ್ನಿರದೇಂ (ನ) ೧೦ ಸ್ವಾದಮಂ (ಕಾ); ಸಾರಮಂ (ನ) ೧೧ ಸೋಕ್ತಿಗದ್ಭುತಂ ೧೨ ವಿರೋಧಿಗಳಕ್ಕುಂ (ನ) ೧೩-೧೩ ತಸ್ಥಾ।ನು,ತುಸ್ಥೂ।ವ (ನ) ೧೪ ಸ (ನ)

ಸೂತ್ರಂ ೨೦೯

ಎರಡುಂ ವಿರುದ್ಧರಸವೊಡ
ವೆರಸಿರೆ ತದವಾಂತರಸ್ಥವೊಂದನ್ಯರಸಂ
ಪರಿಪುಷ್ಟವಾಗೆಯುಂ ವ್ಯತಿ
ಕರಣಂ ಮೇಣ್ ತಾನುವಾಗೆಯುಂ ನಿರ್ದೋಷಂ ೮೩೩

ಲಕ್ಷ್ಯಂ :

ಚಂಪಕಮಾಲೆ

೧ ಅರುಣಜಳಾವಲಿಪ್ತಿ[೧] ಪೊಸಗುಂಕುಮ[೨]ದಂತಿರೆ ಕರ್ಣಲಗ್ನತೋ
ಮರಮವತಂಸದಂತಿರೆ ನವವ್ರಣ[೩]ರಾಜಿ ವಿಭೂಷಣಾಳಿಯಂ
ತಿರೆ ಮಿದುಳುಣ್ಮೆ ಪುಷ್ಪಕೃತಶೇಖರದಂತಿರೆ ಕೊಂಡು ಪೋದರ
ಚ್ಚರಸೆಯರಣ್ಮಿ ಬಿದ್ದ[೪] ಭಟರಂ ಕೊನೆವಾಸೆಯ ಚೆನ್ನಪೊಂಗರಂ[೫] ೮೩೪

(ರನ್ನನ ಗದಾಯುದ್ಧ ೪,೨೨)

ಮತ್ತೇಭವಿಕ್ರೀಡಿತಂ

೨ ಭಯದಿಂ ಕರ್ಚಿದು[೬]ದೊಂದು ಪುಲ್ ಮುಗಿದ ಕೆಯ್ ಬಿಟ್ಟಿರ್ದ ಕೇಶಂಗಳುಂ
ನಯನಾಂಭಃಪ್ಲವಮೋಡುವಲ್ಲಿ ಪಿರಿದುಂ ಕಾರುಣ್ಯಮಂ ಮಾಡೆ ವೈ
ರಿಯನಾಗಳ್ ನಗುವಂತಿರಿರ್ದುದು ಕನತ್‌ಖಡ್ಗಂ ವಿನಿರ್ಭಿನ್ನಕುಂ
ಭಯುಗೋದ್ಯದ್‌ದ್ವಿಪಮೌಕ್ತಿಕಾಳಿಕಳಿತಂ ಶ್ರೀವಿಪ್ರಮಾರ್ತಾಂಡನಾ ೮೩೫

ಸೂತ್ರಂ ೨೧೦

ವೀರಂ ಗೌರಂ ರೌದ್ರಮ
ದಾರಕ್ತಂ ಪೀತಮದ್ಭುತಂ ಶ್ಯಾಮಂ[೭] ಶೃಂ
ಗಾರಂ ಶ್ವೇತಂ ಹಾಸ್ಯಂ
ಕಾರುಣ್ಯಂ ಧೂಮ್ರಮಸಿತಮುಚಿದುವವೆರಡುಂ * ೮೩೬

ವೃತ್ತಿಭೇದಂಗಳ್ : ಸೂತ್ರಂ ೨೧೧

ಭಾರತಿಯ ಕೊಂಕು ಸತ್ತ್ವೋ
ದಾರತೆ ಸರಸಾರ್ಥಮುದ್ಧತಲ್‌ಸ್ಥಿತಿಯಿವಱಿಂ
ಭಾರತಿ ಸಾತ್ವತಿ ಕೈಶಿಕಿ
ಯಾರಭಟಿಯೆನಿಪ್ಪ ವೃತ್ತಿಗಳ್ ನಾಲ್ಕಕ್ಕುಂ ೮೩೭

೧ ಲಿಪ್ತ (ಮ್ಯೈ,ನ,ಪಾ) ೨ ನವಕರ್ದಮ (ಮ್ಯೈ,ನ); ನರಕರ್ದಮ (ನ) ೩ ನವಗ್ರಹ (ಮ್ಯೈ); ನಖಕ್ಷತ (ಪಾ) ೪ ಸತ್ತ (ಪ,ಪಾ) ೫ ಗಂಡರಂ (ಪ,ಪಾ) ೬ ದ (ನ) ೭ ಶಾಂತಂ (ನ) ೮ ಮುದ್ಧುರ (ಮ್ಯೈ,ನ)

* ಈ ಪದ್ಯವಾದಮೇಲೆ 'ಮ್ಯೈ' ಪ್ರತಿಯಲ್ಲಿ 'ರಸವಿಭಾಗಂ' ಎಂದು ಇರುವುದು.

ಸೂತ್ರಂ ೨೧೨

ವಿದ್ವಜ್ಜನಹೃದಯಂಗಮ
ಸದ್ವಕ್ರೋಕ್ತಿ[1]ಪ್ರಕಾಶಮದ್ಭುತಹಾಸ್ಯೋ
ದ್ಯದ್ವಸ್ತುವೃತ್ತಿ ಸಲೆ ರಸ
ವದ್ವಚನದೊಳೆಸೆಯೆ ಪೇಟ್ಟಿ ಭಾರತಿಯಿಂದಂ ೮೩೮

ಸೂತ್ರಂ ೨೧೩

ಚಾಗಂ ಬೀರಂ ಸೊಬಗೆಂ
ಬೀ ಗುಣಮುಂ ಶಾಂತವೃತ್ತಿಯುಂ ಸಾಹಸದು
ದ್ಯೋಗಮುಮತಿಲಲಿತಸದಾ
ಭೋಗ[2]ದೊಳಿಂಬಾಗೆ ರಂಜಿಕುಂ ಸಾತ್ವತಿಯೊಳ್ ೮೩೯

ಸೂತ್ರಂ ೨೧೪

ನಗರಾದಿವರ್ಣನಂ ನೃ
ತ್ಯಗೀತವಾದ್ಯಪ್ರಯೋಗಮಬಳಾವಿಷಯೋ
ಪಗಮವ್ಯವಹೃತಿಯೆಂಬಿವು
ನೆಗಟ್ಟುಂ ಮೃದುಮಧುರರಚನೆಯಿಂ ಕೈಶಿಕಿಯೊಳ್ ೮೪೦

ಸೂತ್ರಂ ೨೧೫

ಕ್ರೂರಾಸ್ತ್ರಪಾತ ಚಿತ್ರಮು
ಹಾರಣ ಮಾಹೇಂದ್ರಜಾಲ ರೌದ್ರಾದಿರಸಂ
ಚಾರುತರಸ್ಫುಟಬಂಧದೊ
ಳಾರಭಟೀವೃತ್ತಿಯಿಂದಭಿವ್ಯಂಜಿಸುಗುಂ ೮೪೧

ಇದು ರೀತಿಕ್ರಮರಸನಿರೂಪಣದೊಳ್
ರಸಪ್ರಕರಣಂ ಸಮಾಪ್ತಂ

೧ ಸದ್ವಕ್ರೋಕ್ತಿ, ಸದ್ವರ್ಣೋಕ್ತಿ (ನ) ೨ ಭಾಗ (ನ)

ಗೀತಿಕೆ :

ರೀತಿಯಂ ರಸವಿಭಾಗಮುಮಂ ವಿ
ಖ್ಯಾತಿಯನಾಂತ ವೃತ್ತಿಗಳಂ ಪ್ರಾ
ತೀತಿಕವಾಗೆ ತಿಳಿಯೆ ಪೇೞ್ದನಿಂತೀ
ಭೂತಳದೊಳ್ ಸಲೆ ನಾಗವರ್ಮಂ * ೮೪೨

ಮತ್ತೇಭವಿಕ್ರೀಡಿತಂ

ಧರೆಯೆಂತಂತೆ ರಸಾಶ್ರಯಂ ಜಲಧಿಯೆಂತಂತಾತ್ತ[1]ಗಾಂಭೀರ್ಯಮಂ
ಬರಮೆಂತಂತೆ ಸದಾವೃತಂ ದೆಸೆಗಳೆಂತಂತೂರ್ಜಿತಂ ಸಂದ ಮಂ
ದರಮೆಂತಂತೆ ಸುವರ್ಣಭಾಸಿ ಶಶಿ[2]ಯೆಂತಂತುಜ್ವಳೋದ್ಯತ್ಕಳಾ
ಸ್ಫುರಿತಂ ಭಾವಿಸೆ ನಾಗವರ್ಮರಚಿತೋದಾತ್ತಪ್ರಬಂಧಾನ್ವಯಂ ೮೪೩

ಗದ್ಯ

ಇದು ಸಕಳಸುಕವಿಜನಮನಸ್ಸರೋಜಿನೀರಾಜಹಂಸಾಯಮಾನಾನೂನ
ಕವಿತಾಗುಣೋದಯಂ ಶ್ರೀನಾಗ[3]ವರ್ಮವಿರಚಿತಮಪ್ಪ
ಕಾವ್ಯಾವಲೋಕನದೊಳ್

ರೀತಿಕ್ರಮರಸನಿರೂಪಣಮೆಂಬುದು ಚತುರ್ಥಾಧಿಕರಣಂ ಸಮಾಪ್ತಂ

೧ ತಾಪ್ತ (ನ) ೨ ರವಿ (ಮೈ, ನ) ೩ ಶ್ರೀಮನ್ನಾಗ (ಮೈ)

* ಈ ಪದ್ಯದ ಬದಲಾಗಿ:

ರೀತಿರಸಭಾಗಮುಮಂ ವಿ। ಖ್ಯಾತಿಯನಾಂತಮುಳವೃತ್ತಿ ವೃತ್ತಂಗಳುಮಂ ॥
ಪ್ರಾತಿಕಮಾಗಿರೆಪೇೞ್ದಂ। ಭೂತಳದೊಳಗೆಸೆಯೆ ನಾಗವರ್ಮಕವೀಂದ್ರಂ ॥

ಎಂದು ಇದೆ.

೫ ಕವಿಸಮಯಾಧಿಕರಣಂ

ಸೂತ್ರಂ ೨೧೬

ಉತ್ಪಲಮಾಲೆ

ಆವುದಶೇಷಲೋಕವಿಷಯಸ್ಥಿತಿಯಲ್ತ[೧] ಖಿಳಾಗಮಾರ್ಥಮುಂ
ಭಾವಿಪೊಡಲ್ತು ಸತ್ಕವಿಪರಂಪರೆಯಿಂ ಪರಿಗೀತಮಾಗಿ ನಿಷ್-
ಕೇವಳಮಾದ[೨] ರೂಢಿವಶದಿಂ ಸಲೆ ಸಲ್ವುದಿದಲ್ತೆ ಶಿಷ್ಟಸಂ
ಭಾವಿತಮಪ್ಪ ಕಾವ್ಯಸಮಯಂ ಭುವನತ್ರಯವಸ್ತುಗೋಚರಂ ೮೪೪

ಸೂತ್ರಂ ೨೧೭

ಆತತಸತ್ಕವಿಸಮಯಂ
ಜಾತಿ ದ್ರವ್ಯ ಕ್ರಿಯಾ ಗುಣಾಶ್ರಯಮಸದಾ
ಖ್ಯಾತಿ ಸದಕೀರ್ತನಂ ನಿ
ರ್ಣೀತಂ ನಿಯಮಾರ್ಥಮೈಕ್ಯಮೆನೆ ನಾಲ್ಕು ತೆಱಂ * ೮೪೫

೧ ಅಸದಾಖ್ಯಾತಿಪ್ರಕರಣಂ

ಸೂತ್ರಂ ೨೧೮

ಸಲಿಲಾಶ್ರಯಮಾತ್ರದೊಳಂ
ಕಲಹಂಸಪ್ರಭೃತಿ ನದಿಗಳೊಳ್ ಕಮಲಸಿತೋ
ತ್ಪಲಕುವಲಯಾದಿ ಶೈಲಾ
ವಲಿಯೊಳ್ ರತ್ನಾದಿಯುಂ[೩] ಪ್ರಯೋಗಿಸೆ ಪಡೆಗುಂ ೮೪೬

ಲಕ್ಷ್ಯಂ : ಜಲಾಶ್ರಯಮಾತ್ರದೊಳ್ ಹಂಸಾದಿಗಳ್ಗೆ :

ವೀರವೃತ್ತಂ

೧ ಜಕ್ಕವಕ್ಕಿಗಳಿಂ ಕಳಹಂಸೆಯಿಂ
ಮಿಕ್ಕ ಸಾರಸದಿಂ ಕುರರಂಗಳಿಂ
ಮೊಕ್ಕಳಂ ಸೊಗಯಿಪ್ಪುದು ನೋಡ[೪] ನೋ
ಟಕ್ಕೆ ಚೆಲ್ವೆಸೆದಿಲ್ಲಿಯ ಪೂಗೊಳಂ ೮೪೭

೧ ಯಲ್ ನಿ (ಮೈ) ೨ ಮಾಗಿ (ನ) ೩ ರತ್ನಾಳಿಯುಂ (ಮೈ,ನ); ರತ್ನಾದಿಕಂ (ನ)
೪ ನಾಡೆ (ನ)

* ಈ ಪದ್ಯದನಂತರ 'ಮೈ' ಪ್ರತಿಯಲ್ಲಿ "ಅವಱೊಳ್ ಸನ್ನಿಂಬಂಧನಮದೆಂತೆನೆ" ಎಂದು ಇರುವುದು.

ನದಿಯೊಳ್ ಕಮಲಾದಿಗಳ್ಗೆ :

ಮತ್ತೇಭವಿಕ್ರೀಡಿತಂ

೨ ಸರಯೂನದ್ಯರವಿಂದಮಂದಮಕರಂದಸ್ಯಂದಿ ಗಂಗಾಂಬುಶೀ
ಕರಸಂಸಂಗಿ ಲತಾಭಿರಾಮಲಲನಾ[1]ಲಾಸ್ಯೈಕ[1]ಶೈಲೂಷನ
ದ್ರಿರುಹಕ್ರೋಡನಿಪಾತಿ[2] ಮಾಲ್ಯವದನು[3]ಪ್ರಸ್ಥೋತ್ಥಿತಂ ಯಾಮುನೋ
ದರಕುಂಜಸ್ಥಿತಿ ಮೆಲ್ಲನಲ್ಲಿ ಸುೞಿಗುಂ ಬಂದೊಂದು ಮಂದಾನಿಳಂ ೮೪೮

೩ ಕುವಲಯವನರುಚಿಯಿಂ ಜಾ
ಹ್ನವಿಯ ಜಳಂ ಕರಮೆ ಕೞ್ಗಿ[4]ತೋಱಿದುದಂತಾ
ಪ್ಲವಗಧ್ವಜಂಗೆ ಯಮುನಾ
ಪ್ರವಾಹಸಂಭೇದಮಾದ ತೆಱದಿಂದಾಗಳ್ ೮೪೯

ಶೈಲಾದಿಯೊಳ್ ರತ್ನಾದಿಗಳ್ಗೆ :

ಮತ್ತೇಭವಿಕ್ರೀಡಿತಂ

೪ ಕಳಧೌತೋಚ್ಚಶಿಲೋದ್ಗತಾಂಶು ವಿಲಸತ್ಪಾದಂ ಸ್ಫುಟಸ್ಫಾಟಿಕೋ
ಪಳಧಾಮೋ[5]ಜ್ವಳಮಧ್ಯಮಂಬುರುಹರಾಗೋದಗ್ರಪಾಷಾಣಭಾ
ವಳಯೋದ್ಭಾಸಿ ನಿಜೋಪಕಂಠಮುಸಿತ[6]ಚ್ಛಾಯಾಂತರತ್ನಪ್ರಭಾ
ವಿಳಮೂರ್ಧಂ ನಡೆ ನೋಡೆ ಪೋಲ್ತುದು ನಗಾಧೀಶಂ ಖಗಾಧೀಶನಂ ೮೫೦

೫ ಮರಕತದ ಕಲ್ಲ ಕವಿ[7]ಗಳೊ
[8]ಳೆರಡಱಿಯದೆ ಕೂರ್ತ ಧೂರ್ತ[8]ಸುರಮಿಥುನಂಗಳ್
ನೆರೆದಳಸುಗಲಿಸೆ ಗಿಳಿಯುಂ
ಪುರುಳಿಯುಮಳಸುವುವು ದೇವಭಾಷೆಗಳಳಸಂ ೮೫೧

೬ ಅಂತಲ್ಲದೆಯುಂ ಧನದನ
ಗಂ ತನಗಟ್ಟಿದೊಡೆ ರಾಯಭಾರಿತ[9]ನಂ ಬಂ
ದಂತಿಪರ್ವಿದಱ ಕುಂಜೋ
ಪಾಂತದ[10]ಂ ತೞತೞಿಸಿ[11] ಪೊಳೆವ[12] ಕುಳಿಶಾಶ್ಮಂಗಳ್[13] ೮೫೨

(ಪೊನ್ನನ ಶಾಂತಿಪುರಾಣ ೨,೧೧೫)

– ಇದು ಜಾತಿ

೧ ಲಾಸ್ಯೋಪ,ಳಿಸ್ಸೈಕ (ನ) ೨ ನಿಪಾಲಿ (ಮೈ) ೩ ಪಾಳವವಧೂ (ನ) ೪ ಕರ್ಗಿ (ಮೈ) ೫ ದಲ್ಯೋ (ಮೈ,ನ) ೬ ಮಹಿತ (ಮೈ,ನ) ೭ ಕಣೆ (ಸ) ೮-೮ ಳೆರಡಿಲ್ಲದೆ ಕೂಡಿ ಕೂರ್ತು (ನ) ೯ ಚಾರಿಕ (ಪ) ೧೦ ಪಾಂತಂ (ಪ) ೧೧ ತಳದಳಿಸಿ (ನ); ಥಳಥಳಿಸಿ (ಪಾ) ೧೨ ಬೆಳಗೆ (ಪ,ಪಾ) ೧೩ ಕುಳಿಶಾಸ್ತ್ರಂಗಳ್ (ನ)

ಸೂತ್ರಂ ೨೧೯

ತಮುದೊಡ್ಡು ಮುಷ್ಟಿಸಂಗ್ರಾ
ಹ್ಯಮುಭೇದ್ಯಂ ಸೂಜಿಗಪ್ಪೊಡಂ ತಾನೆನೆಯುಂ
ಕುಮುದಪ್ರಿಯಾತಪಂ ನಾ
ವ್ಯಮಂಜಳಿಗ್ರಾಹ್ಯಮೆನೆಯುಮಿಷ್ಟಮಿವಕ್ಕುಂ ೪೫೩

ಲಕ್ಷ್ಯಂ : ತಮುಕ್ಕೆ :

ಹರಿಣೀವೃತ್ತಂ

೧ ಪೊದೆದ ಮದವನ್ಮಾತಂಗೇಂದ್ರಾಜಿನಾಂಬರಮಂ ನಿಮಿ
ರ್ಚಿದಪನಭವಂ ತಾನೆಂಬಂತಾಗೆ ಪೆರ್ಚಿದಗುರ್ವಿನೊಳ್
ಪುದಿದೊದವಿನಿಂ ಸೂಚೀನಿರ್ಭೇದ್ಯಮಪ್ಪಿನಮೆಯ್ದೆ ಪ
ರ್ವಿದುದಸದಳಂ ಮುಷ್ಟಿಗ್ರಾಹ್ಯಂ ತಮಂ ಭುವನಾಂತಮಂ. ೪೫೪

ಚಂದ್ರಾತಪಕ್ಕೆ :

ಚಂಪಕಮಾಲೆ

೨ ಬೆಲಗಸೆ[೧]ದೀವಿಕೊಂಡು ಕುಡಿಯಲ್ ಮೊಗೆಯಲ್ ಕೊಡಗೊಂಡು ತಿರ್ದಿ[೨]ಬ
ಚ್ಚಲನೆಳ[೩]ದೋಂಟದೊಳ್ ಪರಿಯಿಸಲ್ ಪಜುಗೋಲ್ಗಳನಿಕ್ಕಿ ಪಾಯಿಸಲ್
ನೆಲೆಯಿನಿಸೆಂದು[೪] ನೋಡಲೊಳಪೊಕ್ಕು ದುಡುಂಮಿಱಿ[೫]ದಾಡಲೀಸ[೫]ಲ
ಗ್ಗಲಿಸಿ[೫]ದಲಂಪಿ[೬]ನಿಂ ಬಗೆದುದಂದು[೭] ಜನಂ ಘನಚಂದ್ರಿಕಾಂಬುವಂ[೮] ೪೫೫

(ರನ್ನನ ಅಜಿತತೀರ್ಥಕರಪುರಾಣತಿಲಕ ೬,೪೫)

– ಇದು ದ್ರವ್ಯಂ

ಸೂತ್ರಂ ೨೨೦

ಇರುಳೊಳ್ ಚಕ್ರಾಹ್ವಯಯುಗ್
ವಿರಹಾರ್ತಿ ಚಕೋರಚಂದ್ರಿಕಾಪಾನಮಿವಿಂ
ತೆರಡುಂ ಕ್ರಿಯಾತ್ಮಕಂಗಳ್
ವಿರಚಿಸೆ ಪಡೆಗುಂ ಪ್ರಯೋಗಗತಿಲಕ್ಷ್ಯಂಗಳ್ ೪೫೬

೧ ಬೆಲಸಗೆ (ನ) ೨–೩ ಬಾಚ್ಚಲನೆಲ (ನ) ೨–೪ ಬಾಚ್ಚಲಪರಿನೀರಿನೊಳ್ ಪರಿಯಲೋಳಿಯಿಸಲ್ ಪರಿಗೋಲನಿಕ್ಕಿ ಪಾಯ್ಸಲೆ ನೆಲೆಯೆಂದು (ಪಾ) ೫–೫ ಲಾಲ್ಗಲಿಸಿ (ಕಾ) ೬–೭ ನಿಂ ಬಗೆಗೆದಂದು (ಪಾ) ೬–೮ ನಿಂದೆಳಸಿದರ್ ಘನಚಂದ್ರಿಕೆಯಂ ಲತಾಂಗಿಯರ್ (ಮೈ, ನ) ೯–೯ ದ್ವಯ (ನ)

ಲಕ್ಷ್ಯಂ : ಪ್ರಥಮಕ್ಕೆ :

ಮತ್ತೇಭವಿಕ್ರೀಡಿತಂ

೧ ನೆರೆವನ್ನಂ ರವಿ ನಿಲ್ಲದ[೧]ಸ್ತಗಿರಿಯಂ ಸಾರ್ದಂ ಪ್ರಿಯಂ ಪೋಗಲಾ
ತುರಸಾಗಿರ್ದನೆಸುತ್ತುಮತ್ತಿನನನಿತ್ತಾ[೨]ತ್ಮೇಶನಂ ನೋಡಿ ಕೋ
ಪರಸಾವೇಶ[೩]ಮನೊಂ[೪]ದು ಶೋಕರಸಮಂ ಮತ್ತೊಂದು ಕಣ್ ಕೆಯ್ಕೊಳು
ತ್ತಿರೆ ಕೆಯ್ಕೊಂಡುದು[೫] ಚಕ್ರವಾಕವಧು[೬] ಕಣ್ಗೆತ್ತಂ ನದೀ[೭]ಲೀಲೆಯಂ[೮] ೮೫೭

ಮಾಲಿನೀವೃತ್ತಂ

೨ ಬಿಸರುಹಸಖನಸ್ತಾದ್ರೀಂದ್ರಮಂ ಪೊರ್ದೆ ಪೋದಯ್
ಬಿಸುಟನಿಯನೆ ನೀನುಂ ನಿನ್ನ ಬೆನ್‌ಬೆನ್ನೊಳಿನ್ನೀ
ಯಸುವುಮಿರದೆ ಪೋಗಲ್ಕಿರ್ದೆದೆಂದಿಂತೊನಲ್ಗುಂ
ಕುಸುಮಶರಶಲಾಕಾಕೀಲಿತಾಂಗಂ ರಥಾಂಗಂ ೮೫೮

೩ ಸರಸಿಜಷಂಡದ ತೆರೆಗಳ್
ತೆರಳ್ವಿನಂ ಕಮಳಪತ್ರಚಯಮೆನಿತನಿತುಂ
ಕೊರಗುವಿನಂ ಬಿಸುಸುಯ್ದೀಂ
ಬಿರಯಿಸಿದುವೊ ಚಕ್ರವಾಕಮಿಥುನಮಪಿರುಳೊಳ್ ೮೫೯

ದ್ವಿತೀಯಕ್ಕೆ :

ಚಂಪಕಮಾಲೆ

೪ ಮನಮುನೊ[೯]ರ್ಲ್ಚುವಂ ಕಿರಣಜಾಲದಿನಂತವು ಪೋಗೆ ಮುಂದು[೧೦]ಂಗೆ
ಟ್ಟನಿತಱೊಳಬ್ದಡಂಗಿದಪನಂತ[೧೧]ದಱಿಂದೆರೆದಪ್ಪೆನೇಣಲಾಂ
ಛನನ ಕರಂಗಳುಳ್ಳನಿತುಮಂ ತವೆ ಪೀರೆನುತುಂ ಚಕೋರಲೋ
ಚನೆ [೧೨]ಪಿರಿದಪ್ಪ ನಲ್ಮೆ[೧೨]ವೆರಸಳ್ಕಱೊಳಂದೆರೆದಳ್ ಚಕೋರಮಂ ೮೬೦

– ಇದು ಕ್ರಿಯೆ

೧ ನ (ನ) ೨ ನಿಂತಾ (ಮ್ಯ, ನ) ೩ ಗ (ಮ್ಯ, ನ) ೪ ದೊಂ (ನ) ೫ ರು (ನ) ೬ ನದು (ನ) ೭ ನಟೀ (ಕಾ) ೮ ಯಿಂ (ನ) ೯ ನೊಱ (ನ) ೧೦ ಮುಟ್ಟು (ಮ್ಯ, ನ) ೧೧ ಸವನಂತ, ಸನುಮಂತ (ನ) ೧೨–೧೨ ಪಿರಿದೊಂದು ಸಲ್ಗೆ (ಮ್ಯ, ನ)

ಸೂತ್ರಂ ೨೨೧

ಹಸಿತಯಶಃಪ್ರಭೃತಿ[1]ಯೊಳು
ಲ್ಲಸಿತಂ ಸಿತಭಾವಮಯಶದೊಳ್ ಪಾಪದೊ[2]ಳಂ
ತ[2]ಸಿತರುಚಿ ಕೋಪರಾಗ
ಪ್ರಸರದೊಳಾರಕ್ತವರ್ಣ[3]ಮುಭಿವರ್ಣಿಸುಗುಂ[3] ೮೬೧

ಲಕ್ಷ್ಯಂ : ಹಸಿತಯಶಃಪ್ರಭೃತಿಗೆ :

೧ ಬೆಳಪ ಮುಖಚಂದ್ರನೊಳ್ ತಳ
ತಳಿಸುತ್ತುಂ ತೊಳಗಿ ಪೊಳೆವ[4] ಬೆಳ್ದಿಂಗಳದೊಂ[5]
ದಳವನಳವಡಿಸಿ ಕರಮು
ಜ್ಜಳಿಪ ಮುಗುಳ್ನಗೆ ಬೆಡಂಗು ನೃಪನಂದನೆಯಾ ೮೬೨

ಮತ್ತೇಭವಿಕ್ರೀಡಿತಂ

೨ ಹರಹಾಸದ್ಯುತಿಯಂ ನಿರಾಕರಿಸಿ ಗಂಗಾಸಿಂಧುಕಲ್ಲೋಲಶೀ
ಕರಮಂ ನಿಂದಿಸಿ ಸಿಂಧುವಾರಕುಸುಮಶ್ರೀಯಂ ಪಳಂ[6]ಚಾಡಿ ಭಾ[6]
ಸುರಚಂದ್ರಾಂಶುವಿಕಾ[7]ಸಮಂ ತೆಗಟ್ಟಿ ಮುಕ್ತಾಹಾರವಿಸ್ತಾರಡಂ
ಬರಮಂ ಮಿಕ್ಕು ಬೆಳಪ್ಪುದುಜ್ವಳಯಶಂ ಶ್ರೀಗಂಡಮಾರ್ತಂಡನಾ ೮೬೩

೩ ನಂದನನೊಸಗೆಯುಮಾ ಮ[8]ಕ
ರಂದ[8]ಕನೆಳಸಿರದೆ[9]ಬಿಟ್ಟು ಪೋದೊಂದಟಲುಂ[9]
ಕುಂದದೊಡನಲೆ[10]ಯೆ ಸತಿ ಕಾ
ಳಿಂದಿಯ ಸುರನದಿಯ ಕೂಡಲಂ ಪೋಲ್ತಿರ್ದರ್ ೮೬೪

ಅಯಶಃಪಾಪಂಗಳ್ಗೆ :

೪ ವಿಳಸದಮೃತಾಂಶುಮಂಡಲ
[11]ದೊಳೆ ಕಱೆಯೆಂತಂತೆ[11] ನೆಗಟ[12] ದುರ್ಯಶದಿಂದಂ
ಖಳನಾ ನೃಪಾತ್ಮಜಂ ನಿ
ರ್ಮಳನಿಜವಂಶಕ್ಕೆ ಮಾಡಿದಂ ಮಳಿನತೆಯಂ ೮೬೫

೧ ಪ್ರಸರ (ನ) ೨-೨ ಳಾತ್ಯ (ನ) ೩-೩ ಮದು ವರ್ಣೇಯಂ, ಮದು ನಿರ್ಣೇತಂ (ನ) ೪ ಬೆಳಪ (ನ) ೫ ಗೊಂ (ನ) ೬-೬ ಚಲ್ ವಿಭಾ (ಮೈ, ನ) ೭ ಳಾ (ನ) ೮-೮ ರ।ಕಂದ (ಮೈ, ನ) ೯-೯ ಬಿಸುಟು ಪೋದೊಡೆಯಟಲುಂ (ಮೈ, ನ) ೧೦ ವಳೆ (ಮೈ, ನ) ೧೧-೧೧ ದೊಳಗಣ ಕಱೆಯಂತೆ (ನ) ೧೨ ನೆಗಟ್ಗೆ (ಮೈ)

೫ ದೊರೆಕೊಂಡ[1] ಪಾಪಲೇಶ್ಯಾ[2]
ಪರಿಣಾಮಮೆ ಕೃಷ್ಣವರ್ಣಮಂ[3] ಪುಟ್ಟಿಸಿದಂ
ತಿರೆ [4]ಕಡುಗಲಿಯರವಂದಿರ್[4]
ಪ[5]ರುಷಸ್ವರಪ[5]ರುಷನಯನಪರುಷ[6]ಶರೀರರ್ ೮೬೬
(ಆದಿಪುರಾಣ ೫,೯೧)

ಕೋಪರಾಗಂಗಳ್ಗೆ :

೬ ಅವತಂಸಾಶೋಕನವ[7]
ಪ್ರವಾಳರುಚಿ ಮುಳಿಸೆ ರೂಪುಗೊಂಡವೊಲ್[8]ಎರಡುಂ
ಕಿವಿಗಳೊಳವೂರ್ಯ[9]ಮುಂ ಪ
ರ್ಚುವ ಕಲ್ಪಿ[10]ಯ[11] ತೆಱದಿನೆಸೆದುದಾಸ್ಥಾಯಿಕೆಯೊಳ್ ೮೬೭
(ಪೊನ್ನನ ಶಾಂತಿಪುರಾಣ ೩,೬೭)

೭ ಕುಂಕುಮದ ಕದಡು[11]ಗಿನೀರಂ
ಭೋಂಕೆನೆ ಮೇಲೊತ್ತೆ ನೃಪತಿ[12] ಮೆಯ್ಯಿಂ ರಾಗಂ
ತಾಂ ಕರಮೆ ತೀವಿ ಪೊಱಗೆ ತು
ಳುಂಕುವವೋಲ್ ತೋಱೆ ನೀಱೆ ಕಣ್ಗೆಸೆದಿರ್ದಳ್ ೮೬೮
– ಇದು ಗುಣಂ

ಇದು ಕವಿಸಮಯದೊಳ್ ಅಸದಾಖ್ಯಾತಿಪ್ರಕರಣಂ ಸಮಾಪ್ತಂ

೧ ಡು (ನ) ೨ ಕೃಷ್ಣಲೇಶ್ಯಾ (ಪಾ,ಪ); ಪಾಪಲೇಪ್ಯಾ (ನ) ೩ ಪಾಪರೂಪಮುಂ (ಮೈ,ನ)
೪-೪ ಕರಿಕರ್ ಪೇಡಿಗಳತಿ (ಪ,ಪಾ) ೫ ಪು (ನ) ೬ ಪುರುಷ,ಪಕ್ಷ (ನ) ೭ ಮುನಂ (ನ)
೮ ವನೆ (ಮೈ,ನ) ೯ ಮೂಂಸೆ (ಮೈ,ನ) ೧೦ ಕಲ್ಪಿಪ (ನ); ಕಳ್ಪಿಪ (ಪಾ) ೧೧ ಕಡುಕು (ನ)
೧೨ ನೃಪನ (ಮೈ,ನ)

೨ ಸದಕೀರ್ತನಪ್ರಕರಣಂ

ಸೂತ್ರಂ ೨೨೨

ಅಸುಕೆಯ ಕುಜದೊಳ್ ಫಳಮಂ
ವಸಂತದೊಳ್ ಜಾತಿಕುಸುಮಮುಂ ಚಂದನದೊಳ್
ಕುಸುಮಫಲಮೆಂಬಿವಂ ಬ೧
ಣ್ಣಿಸದಿರ್ಪುದು ತಾಮವಲ್ಲಿ ಸಂಭವಿಸುವೊಡಂ ೮೬೯

ಲಕ್ಷ್ಯಂ :

೧ ಕುಸುಮಕಿಸಲಯಮೆ ಲೋಕ
ಕ್ಕೆಸೆವುತ್ತಂಸಾವತಂಸಮೆನೆ ಸಾಲದೆ ಸಂ
ದಸುಕೆಗೆ ನಿಸ್ಸಾರಫಲ
ಪ್ರಸೂತಿ ಮತ್ತಂತದಾದೊಡೇನಾಗದೊಡೇಂ ೮೭೦

೨ ಎನಿತು ಸುಮನಸ್ಸಮುನ್ನತಿ
ತನಗಾದೊಡಮಭಿವಿನೂತಜಾತಿವಿಕಾಸ
ಕ್ಕೆನಿತೆಡೆಗುಡದುದೞಂ ಕುಲ
ಜನದ ವಿಭೂತಿಯನೆ ಸುರಭಿಸಮಯಂ ಪೋಲ್ಕುಂ ೮೭೧

೩ ಬಿದಿವಸದೆ ಕುಸುಮಫಲಮಿ
ಲ್ಲದಿರ್ದೊಡಂ ತನ್ನದೊಂದು ಮೆಯ್ಯಿಂದಂ ಲೋ
ಕೞದ ಸೇದೆಯೆಲ್ಲಮಂ೨ ಕಿಡಿ
ಸಿದಪುದು ಚಂದನಮೆ ವಂದ್ಯಜನ್ಮಂ ಕುಜದೊಳ್ ೮೭೨

– ಇದು ಜಾತಿ

ಸೂತ್ರಂ ೨೨೩

ಸಿತಪಕ್ಷದೊಳುಳ್ಳೊಡಮಂ
ಧತಮಸಮಂ ಕೃಷ್ಣಪಕ್ಷದೊಳ್ ಚಂದ್ರಿಕೆಯಂ
ಕೃತಮತಿಗಳ್ ಕವಿಮಾರ್ಗಾ
ಶ್ರಿತಗತಿಗಳ್ ಪೇೞದಿರ್ಕೆದೆಂತುಂ೩ ಕೃತಿಯೊಳ್ ೮೭೩

೧ ಪ (ನ) ೨-೨ ದೊಳಾದ ಸೇದೆಯಂ (ನ) ೩ ದೆಂದುಂ (ಮೈ,ನ)

ಲಕ್ಷ್ಯಂ :

೧ ಇಡಿದಿರೆ ಗುಹಾಂಧಕಾರಂ
ಪ್ರೊಡರ್ದೆಸೆದಿರೆ ಚಂದ್ರಕಾಂತರುಚಿ ನಗದೋರೊಂ[1]
ದೆಡೆಗಳ್ ಪೋಲ್ತೊಪ್ಪುವು[2]ದೊಂ
ದೆಡೆಯೊಳ್ ನೆಲಸಿರ್ದ ಕಾಳಮುಂ ಜೊನ್ನಮುಮಂ ೮೭೪

(ರನ್ನನ ಅಜಿತತೀರ್ಥಕರಪುರಾಣತಿಲಕ ೯,೨೧)

– ಇದು ದ್ರವ್ಯಂ

ಸೂತ್ರಂ ೨೨೪

ದಿವಸದೊಳಸಿತಾಬ್ಜವಿಕಾ
ಸವುಮಂ ಶೇಫಾಳಿಕಾಶ್ರುಬಿಂದುಪರಿಭ್ರಂ
ಶವುಮಂ ಪೇಟಲ್ಕಾಗದು
ಸವಪಾಯುಂ ಸಮನಿಸಿರ್ಪೊಡಂ ಸತ್ಕೃತಿಯೊಳ್ ೮೭೫

ಲಕ್ಷ್ಯಂ :

ವಂಶಸ್ಥವೃತ್ತಂ

೧ ಪಗಲ್ ರತಾರಂಭದೊಳಿರ್ದಿರುಳ್ ಕನ
ಲ್ವಗಲ್ವ ಚಕ್ರಾಹ್ವಯುಗಂಗಳಲ್ಕಜಿಂ
ಮೊಗಕ್ಕೆ ತರ್ಪಂತಲರಲ್ ತಗುಳ್ದುವೆ[3]
ಲ್ಲಿಗಂ ರಜಂ ಪೊಣ್ಮೆ ಮಹೋತ್ಪಳಾದಿಗಳ್ ೮೭೬

೨ ಸಸಿಯೆಲ್ತುರಮುಂ ಕಂಡೊಂ[4]
ದೊಸಗೆ ಮನಕ್ಕಧಿಕಮಾಗೆ ಶೇಫಾಳಿಕೆ ಸಂ
ತಸದಿಂದಿಕ್ಕಿದ ಬಾಷ್ಪ
ಪ್ರಸರಮನಿಱಿಸಿದುವು ನಿಶೆ[5]ಯೊಳಲ್ಲೊಕ್ಕಲರ್ಗಳ್ * ೮೭೭

– **ಇದು ಕ್ರಿಯೆ**

೧ ದೊಂದೊಂ (ಪಾ) ೨ ಪೋಲ್ತಪ್ಪವ (ಕಾ); ಪೋಲಪ್ಪುವ (ಪಾ) ೩ ಮ (ಮೈ) ೪ ಕಂಡೊಗೆ (ನ) ೫ ನಿಶಿ (ನ)

* ಈ ಪದ್ಯವಾದಮೇಲೆ ಒಂದು ಪ್ರತಿಯಲ್ಲಿ ಮಾತ್ರ ಕೆಳಗೆ ಬರೆದಿರುವ ಸೂತ್ರವು ದೊರೆಯುತ್ತದೆ:— ಆನೆ ಬಿದಿರ್ ಪಂದಿ ಮುಗಿಲ್।ಮೀನಂಬುಧಿ ಪಾವು ಶಂಖಮೆಂಬೀಯೆಂಟುಂ ॥
ಸ್ಥಾನಂಗಳಲ್ಲಿ ಪುಟ್ಟುಗು।ಮೇನಚ್ಚರಿ ತಿಳಿದು ನೋಡೆ ಮೌಕ್ತಿಕರತ್ನಂ ॥ (ನ)

ಸೂತ್ರಂ ೨೨೫

ತತದಶನದ್ಯುತಿಯೊಳರ
ಕ್ತತೆಯನೆ ವಿಕಸತ್ಪ್ರಿಯಂಗು[೧]ಸುಮನಸದೊಳ[೧]ಪೀ
ತತೆಯನೆ ಪಂಕಜಮುಕುಳ
ಪ್ರತತಿ[೨]ಯೊಳಹರಿತ್ತ್ವ[೩]ವೃತ್ತಿಯನೆ ಪೇೞ್ಗೆ ಬುಧರ್[೪] ೮೭೮

ಲಕ್ಷ್ಯಂ : ದಶನಾರಕ್ತತೆಗೆ :

ತರಳವೃತ್ತಂ

೧ ತೊಳಪ ದಂತಮರೀಚಿಸಂತತಿ ಪರ್ವಿ ಬಳ್ವಳನೀಳ್ದು[೫] ಗೊಂ
ದಳಿಸಿ ಬಾಳಮೃಗಾಂಕದೀಧಿತಿಜಾಳಮಂಜರಿಗಳ್ ಜಗದ್-
ವಳಯಮಂ ಬೆಳಪಂತೆ ಬಂದು ಸಭಾಂತರಾಳಮನೆಲ್ಲಮಂ
ಬೆಳಗೆ ಭೂವಳಯಾಧಿಪಂ ನುಡಿಗುಂ ಸ್ವಚಿತ್ತಗತಾರ್ಥಮಂ ೮೭೯

೨ ಕುಂದದಳಧವಳನೃಪದಶ
ನೇಂದುಜ್ಯೋತ್ಸ್ನಾಮೃತಾಚ್ಛಜಲಪರಿಷೇಕಂ
ಮಾಂದಿಸುವಂತಾದುದು ನೃಪ
ನಂದನೆಯೆರ್ದೆಯೊಳಗೆ ಬಳೆದ ಶೋಕಾನಳನಂ ೮೮೦

(ಪಂಪನ ಆದಿಪುರಾಣ ೩,೪೯)

ಪ್ರಿಯಂಗುಕುಸುಮಾಪೀತತ್ವಕ್ಕೆ :

೩ ಇವಳೀ ಪ್ರಿಯಂಗುಕುಸುಮ
ಚ್ಛವಿಲಸಿತಶ್ಯಾಮಕುಚತಟಾಂತದೊಳೊಪ್ಪಿ
ರ್ಪುವು ತಾರಹಾರರುಚಿ ನೀ
ಳವೇದಿಕಾಂತರದೊಳೆಸೆವ ಪೂವಲಿಗಳವೋಲ್ ೮೮೧

೧-೧ ಕುಸುಮದೊಳತಿ (ಮೈ, ನ)
೨-೩ ಯೊಳೀಹರಿತ (ನ)
೨-೪ ಯೊಳೆಹರಿತ್ವವೃತ್ತಿಪೇೞ್ಗೆಬುಧರ್ಕಳ್ (ಮೈ) ; ಯೊಳಿ ಹರಿಯ
ವೃತ್ತಿ ಪೇೞ್ಗೆ ಬುಧರ್ಕಳ್ (ನ)
೫ ನಿರ್ದು (ಮೈ)

ಪದ್ಮಕುಟ್ಮಳಾಹರಿತತ್ವಕ್ಕೆ[೧] :

ಮತ್ತಕೋಕಿಲವೃತ್ತಂ

೪ ತೆರೆಯ ಪೊಯ್ಲೊಳೆ ತೆರಳ್ದು ಬರ್ಪ ವಿ
ಸ್ಫುರಿತಶಂಖನಿವಹಂ ಪಯೋಧಿಯೊಳ್
ಕರಮೆ ಚೆಲ್ವೆಸೆದು ಕಣ್ಗೆ ತೋರ್ಕುಮಂ
ಬುರುಹಕುಟ್ಮಳಕುಳಂಗಳಂತೆವೋಲ್ ೮೮೨

— ಇದು ಗುಣಂ

ಇದು ಕವಿಸಮಯದೊಳ್ ಸದಕೀರ್ತನಪ್ರಕರಣಂ ಸಮಾಪ್ತಂ

೧ ಹರೀತಕಕ್ಕೆ (ವೈ)

೩ ನಿಯಮಾರ್ಥಪ್ರಕರಣಂ

ಸೂತ್ರಂ ೨೨೬

ಜಳಧಿಯೊಳೆ ತಿಮಿತಿಮಿಂಗಿಳ
ಗಿಳಮಕರಪ್ರಕರಶಂಖಸಂಭವಮಕ್ಕುಂ
ಮಳರಹಿತತಾಮ್ರಪರ್ಣೀ
ಜಳದೊಳೆ ಶುಕ್ತಿಜಮಣಿಪ್ರಕಾಂಡಪ್ರಭವಂ * ೮೮೩

ಲಕ್ಷ್ಯಂ : **ತಿಮಿತಿಮಿಂಗಿಳಾದಿಗಳ್ಗೆ :**

ಚಂಪಕಮಾಲೆ

೧ ಮಿಳಿರ್ವರುಣಧ್ವಜಂಗಳ ನೆಬಿಲ್ಗಳನೊಂದೆರೆಗೆತ್ತು ವಾರ್ಧಿಯೊಳ್
ಪೊಳೆವೆಳವಾಳೆಗಳ್ ಕರ್ದುಕೆ ಬಾಳೆಗಳಂ ತಿಮಿ ನುಂಗೆ ನುಂಗಿದಾ
ಗಳೆ ತಿಮಿಯಂ ತಿಮಿಂಗಿಳನಡಂಗುವಿನಂ ತವೆ ನುಂಗೆ ತತ್ತಿಮಿಂ
ಗಿಳಮುಮನಾ ತಿಮಿಂಗಿಳಗಿಳಂ ತವೆ ನುಂಗಿದುದೊಂದು ತಾಣದೊಳ್ ೮೮೪

೨ ಕರಿಮಕರಂಗಳುಚ್ಚಳಿತಭಂಗುರತುಂಗತರಂಗಮಾಲೆಯಂ
ಕರರದನಾಗ್ರದಿಂದಿಱಿಯೆ ಮುತ್ತುಗಳಂತಿರೆ ಸೂಸಿ ಪಾಯ್ವ ಶೀ
ಕರದೊಳೆ ನಾಂದು ಸೇಡುಗೊಳುತುಂ ಸುೞಿದೂಡುವ ಗಾಳಿ ಬರ್ಪ ದೇ
ವರ ವರಕಾಂತೆಯರ್ಕಳ ಪರಿಶ್ರಮಮಂ ಕಳೆದತ್ತು ವಾರ್ಧಿಯೊಳ್ ೮೮೫

ತರಳವೃತ್ತಂ

೩ ನೊರೆಯಿವಲ್ಲವು ತಳ್ತ ಶಂಖದ ಬಳ್ಳಿಗಳ್ ಬಡಬಾನಲಾಂ
ಕುರಮಿವಲ್ಲವು ರತ್ನದೀಧಿತಿಗಳ್ ತರಂಗಮಿವಲ್ಲ[೧]ವು
ದ್ಧುರ[೧]ಕುಳಾಚಳಪಂಕ್ತಿಗಳ್ ಜಳಶೀಕರಂಗಳಿವಲ್ಲವಾ
ಪರೆದ ಮುತ್ತುಗಳೆಂಬ ಶಂಕೆಯನಾಗಿಕುಂ ಮಕರಾಕರಂ[೨] ೮೮೬

ತಾಮ್ರಪರ್ಣಿಯೊಳ್ ಶುಕ್ತಿಜಕ್ಕೆ :

೪ ಜಿನರಾಜಶಿಶುಗೆ ಧರೆಯೊಳ್
ಜನಿಯಿಸಲಂತಾ ನರೇಂದ್ರಪತ್ನಿಯೆ[೩] ದೊರೆ ನೂ
ತನಶುಕ್ತಿಜಕ್ಕೆ ತಾಯ್ವನೆ
ಯೆನಿಸಲ್ ದೊರೆ ತಾಮ್ರಪರ್ಣಿ ತಾನೊಂದೆ ವಲಂ ೮೮೭

— ಇದು ಜಾತಿ

೧–೧ ಮು|ದ್ಧುರ (ಮೈ); ಮಿಂ|ದುರು (ಪ) ೨ ಸಲೆ ಸಾಗರಂ (ಪ) ೩ ಸತಿಯೇ (ನ)
* ಈ ಸೂತ್ರ-ಪದ್ಯದ ಹಿಂದೆ 'ಮೈ' ಪ್ರತಿಯಲ್ಲಿ 'ನಿಯಮವ್ಯವಸ್ಥೆಯುಮೆಂತೆಂದೊಡೆ' ಎಂದು ಇರುವುದು.

ಸೂತ್ರಂ ೨೨೭

ಹಿಮವದಗೇಂದ್ರಮೆ ಭೂರ್ಜ
ದ್ರುಮರಾಜಿಗೆ ಜನ್ಮಭೂಮಿ ಮಲಯಾದ್ರಿಯೆ ಬಂ
ಹಿಮವಚ್ಚಂದನಮಹಿರುಹ
ಸಮಿತಿಗೆ ಕುಲಗೇಹಮಿತರದೊಳ್ ಪುಟ್ಟುವೊಡಂ ೮೮

ಲಕ್ಷ್ಯಂ : ಪ್ರಥಮಕ್ಕೆ :

೧ ಪೆರೆಸುಲಿವ ಹಿಮವದವನೀ
ಧರಮೆಂಬುರಗಾಧಿಪತಿಯ ನಿರ್ಮೋಕದೊಳೇಂ
ದೊರೆಯಾದುವೊ ವಿದ್ರುತ[೧]ಜ
ರ್ಝರಭೂರ್ಜದ್ರುಮವನಂಗಳಿಂದಚಳಂಗಳ್ ೮೯

ದ್ವಿತೀಯಕ್ಕೆ :

ಚಂಪಕಮಾಲೆ

೨ ಇದು ಮಳಯಾಚಳಂ ಮಳಯಜಂ ಮಳಯಾನಿಳನೆಂದು ಪೆಂಪುವೆ
ತ್ತುದು ಸಿರಿಕಂಡ[೨]ಮುಂ ಪಡೆದು[೩] ತೀಡುವ ಗಾಳಿಯುಮಿಲ್ಲಿ [೪]ಪುಟ್ಟಿ ಪೋ[೪]
ಗದು ಪೊಸಸುಗ್ಗಿ ಮೂಗುವಡದಿಲ್ಲಿಯ ಕೋಗಿಲೆ ಬಂದ ಮಾವು ಬೀ
ಯದು ಕುಸುಮಾಸ್ತ್ರನಾಜ್ಞೆ ತವದೆಲ್ಲಿಯುಮಿಲ್ಲಿಯ ನಂದನಂಗಳೊಳ್ ೯೦

(ಪಂಪನ ವಿಕ್ರಮಾರ್ಜುನವಿಜಯ ೪.೨೧)
– ಇದು ಪ್ರವ್ಯಂ

ಸೂತ್ರಂ ೨೨೮

ಸುರಭಿಸಮಯದೊಳೆ ಕೋಕಿಳ
ವಿರುತಿ[೫]ನಿಬಂಧನಮನಬ್ದ[೬]ಕಾಲದೊಳೆ ಮದೋ
ದ್ಧುರಕೇಕಿಮಧುರಕೇಕಾ
ವಿರುತಿಯನಭಿಯುಕ್ತರಱಿದು ಪೇಳ್ವುದು ಕೃತಿಯೊಳ್ ೯೧

ಲಕ್ಷ್ಯಂ :

೧ ಸುಗ್ಗಿಯ ಪುಗಿಲೊಳ್ ಮುಂಕೊಂ
ಡುಗ್ಗಿಯನುಜ್ಜವಿಸಿ[೭]ದಂತೆ ಮೋನಮನುೞಿದೇಂ
ಬಗ್ಗಿಸಿದುವೊ ಕೋಗಿಲೆಗಳ್
ಮೊಗ್ಗಪ್ಪ ವಿಯೋಗಿಯಂ ಪುಗಲ್ ಪುಗಲೆ[೮]ನುತುಂ ೯೨

೧ ವಿದ್ರುಮ (ಮೈ,ನ) ೨ ಖಂಡ (ಮೈ) ೩ ಪಡೆದು (ಮೈ,ನ); ಪರೆದು (ಪಾ) ೪–೪ ಪುಟ್ಟಿವೋ (ಪಾ); ಪುಲ್ಲಿವೋ (ಪ,ಪಾ) ೫ ವಿರುತ (ನ) ೬ ನಬುದ (ಮೈ) ೭ ನುಜ್ಜವಿಸ, ನುಜ್ಜೃಸಿ (ನ) ೮ ಪುಗಿಲ್ ಪುಗಿಲೆ (ನ)

೨ ಘನಸಮಯದೊಳಿರ್ದು ಶಿಲಾ
ಸನದೊಳ್ ಶೈಳೇಯಸುರಭಿತಳದೊಳ್ ಗೋವ
ರ್ಧನಕಂದರದೊಳ್ ¹ಶಿಖಿನ
ರ್ತನಂಗಳಂ ನೋಡು ಮದನಮದಗಜಗಮನೇ¹ ೪೯೩

(ಪೊನ್ನನ ಶಾಂತಿಪುರಾಣ ೫,೧೩೧)

– ಇದು ಕ್ರಿಯೆ

ಸೂತ್ರಂ ೨೨೯

ಅವಿಶೇಷದಿನುದ್ಗಮದೊಳ್
ಧವಳತೆ ಮಾಣಿಕ್ಯನಿಕರದೊಳ್ ಶೋಣತೆ ಮೇ
ಘವಿತಾನದೊಳ್ ವಿನೀಳತೆ
ವಿವಿಕ್ತವರ್ಣವ್ಯವಸ್ಥೆಯಿಂದೊಂದಿರ್ಕುಂ ೪೯೪

ಲಕ್ಷ್ಯಂ: **ಪುಷ್ಪಶೌಕ್ಲ್ಯಕ್ಕೆ :**

ಮಂಗಳವೃತ್ತಂ

೧ ತಳಿರ ಮೇಗಣಲರೋಳಿಗಳೋ ಪೊಸಮುತ್ತುಗಳ್
ತೊಳಪುವೋ² ಪವಳದಂಕುರದೊಳ್ ಪುದಿದಿಂ³ತು ತ
ಮ್ಮೊಳೆ ವಿಚಾರಿಸಿ ಜನಂ ಕರಮೊಪ್ಪುವುದಾಯ್ತು ಪ
ಲ್ಲಳ ಮುಗುಳ್ನಗೆಯ ಬಾಯ ಬೆಡಂಗು ಲತಾಂಗಿಯಾ ೪೯೫

ಮಾಣಿಕ್ಯಶೋಣತ್ವಕ್ಕೆ :

ಉತ್ಪಲಮಾಲೆ

೨ ತುಂಗವಿಚಿತ್ರಕೂಟನಿವಹಂಗಳೊಳೊಪ್ಪುವ ರತ್ನದಂಶುಜಾ
ಳಂಗಳ⁴ ಕೆಂಪು ತಳ್ತು ನಿಲೆ ಚೆ⁵ಚ್ಚರದಿಂ ಗಿರಿಗಳ್ಗಧೀಶ್ವರಂ
ತಾಂ ಗಡಮೆಂದು ಮೇರುನಗದೊಳ್ ಪೊಣರ್ದೆಕ್ಕತುಳಕ್ಕೆ ವಂದು ನಾ
ರಂಗದ ತೊಂಗಲೇಱಿಸಿದ ಮಾಟಕ್ಕೆಯೊಳಿರ್ದುದು ವಿಂಧ್ಯಪರ್ವತಂ ೪೯೬

೧–೧ ಶಿಖಿನರ್ತನಮುಂ ನೀಂ ನೋಡ ಲಲಿತಕೇಕಾನ್ವಿತಮುಂ (ಕಾ)
೨ ವಾ (ಮೈ,ನ)
೩ ದೆಂ (ನ)
೪ ಳೊ (ನ)
೫ ಚೆ,ಮು (ನ)

ಮೇಘಕೃಷ್ಣತ್ವಕ್ಕೆ:

೩ ಈ ಪುರುಷೋತ್ತಮನವ॑ನೀ
ಳೋಪಳಸಚ್ಛಾಯಕಾಯದೊಳ್ ಪೆಣೆದು ಘನ
ವ್ಯಾಪಿತಗಭೀರರುಚಿಗನು
ರೂಪಂ ತಾನಕ್ಕೆ ನಿನ್ನ ತನು ತನುಮಧ್ಯೇ ೮೯೭

– ಇದು ಗುಣಂ

ಇದು ಕವಿಸಮಯದೊಳ್ ನಿಯಮಾರ್ಥಪ್ರಕರಣಂ ಸಮಾಪ್ತಂ

೪ ಐಕ್ಯಪ್ರಕರಣಂ

ಸೂತ್ರಂ ೨೩೦

ದಾನವ ದೈತ್ಯಾಸುರಸಂ
ತಾನಕ್ಕಂ ನಾಗ ಸರ್ಪಸಂಹತಿ[೧]ಗಳ್ಗಂ
ತಾನೇಕತ್ವಂ ಸಮಯಾ
ಧೀನಮುದಕ್ಕುಂ ರಸಾತಳಪ್ರತಿಬದ್ಧಂ * ೮೯೮

ಲಕ್ಷ್ಯಂ : (ದಾನವದೈತ್ಯಾಸುರಸಂತಾನಕ್ಕೆ) :

ಚಂಪಕಮಾಲೆ

೧ ದನುಜರನಾ ಮುರಾರಿ ಗೆಲೆ ಕಾದುವ ಕಾಲದೊಳಾನದೇಕೆ [೨]ಪು
ಟ್ಟಿನೊ[೨] ಗಡಮುಂದು ಪುಟ್ಟಿದೊಡೆ ದೈತ್ಯಕುಳಕ್ಕೆ ಕಳಂಕಮಾಗಲೀ
ವೆನೆ ದನುಜಾರಿಯೆಂಬ ಬಿರುದಂ[೩] ಸಲಲೀವೆನೆ ಕಾದಿ ಪೋಗಲೀ
ವೆನೆ ತಲೆದೋಱಲೀವೆನೆ ಮುಕುಂದನನೆಂದೊಲೆ[೪]ವಂ ಖ[೫]ಳಾಸುರಂ ೮೯೯

ಸರ್ಪನಾಗಂಗಳ್ಗೆ :

ಮಹಾಸ್ರಗ್ಧರೆ

೨ ಫಣಿರಾಜಂ ಬಾರಿಯಿಟ್ಟಟ್ಟಿದೊಡನುದಿನದಿಂ ಬರ್ಪ ಸರ್ಪಂಗಳಂ ಬ
ಲ್ಕಣಿ ತಾರ್ಕ್ಷ್ಯಂ ಭಕ್ಷಿಸುತ್ತುಂ ಮಳಯಗಿರಿಯೊಳಿರ್ಪಂ ಬಲಂ ಕೇಳಿರೇ ನೀ
ಮೊಣರಿರ್ ಮತ್ತೆಮ್ಮ ಮಾತಂ ಗರುಡನಖಮುಖೋತ್ಪಾತದಿಂ ನಾಗಚೂಡಾ
ಮಣಿಗಳ್ ಬಂದಲ್ಲಿ ನಿಚ್ಚಂ ಸಿಡಿವುವಱಿವೆನೇಕಿಂತು ವಿಭ್ರಾಂತರಪ್ಪಿರ್[೬] ೯೦೦

ಸೂತ್ರಂ ೨೩೧

ಶಶಧರ ಲಕ್ಷ್ಮದೊಳಕ್ಕುಂ
ಶಶಹರಿಣಂಗಳ್ಗನನ್ಯಭಾವಂ ಸುಮನೋ
ವಿಶಿಖಧ್ವಜಾಂಕದೊಳ್ ನಿ
ರ್ವಿಶೇಷದಿಂ ಮತ್ಸ್ಯಮಕರಯುಗಳಕ್ಕೈಕ್ಯಂ ೯೦೧

೧ ಸಂತತಿ (ನ) ೨–೨ ಪು|ಟ್ಟಿನೆ, ಪು|ಟ್ಟನೆ (ನ) ೩ ಪೆಸರಂ (ನ) ೪ ದಲೆವಂ (ನ) ೫ ಬ (ಮೈ, ನ) ೬ ರಪ್ಪರ್ (ನ)

* ಈ ಸೂತ್ರ–ಪದ್ಯದ ಹಿಂದೆ ‘ ಮೈ’ ಪ್ರತಿಯಲ್ಲಿ ‘ ಇಲ್ಲಿ ಐಕ್ಯವೃತ್ತಿ ಚಿಂತೆಗೆ ಎಂತೆನೆ’ ಎಂದು ಇರುವುದು.

ಲಕ್ಷ್ಯಂ : **ಶಶಹರಿಣಂಗಳ್ಗೆ :**

ಚಂಪಕಮಾಲೆ

೧ ಉದಯಗಿರೀಂದ್ರರುಂದ್ರತಟದಿಂದೊಗೆತಂದ[1] ಶಶಾಂಕನೆಂಬ ಸೊಂ[2]
ಕದ ಮೃಗವೈರಿ ಕೂಡೆ ಪರಿದರ್ಬಿಸಿ ಪರ್ಬಿದ ದುಸ್ತಮ[3]ಸ್ತಮೋ
ನ್ಮದಕರಿಯೂಥಮಂ ಪೆಳಱಿ ಪೋೞಿ ಪಿಸುಳ್ದ ತದುತ್ತಮಾಂಗದಿಂ
ಕೆದಱಿದ ಮೌಕ್ತಿಕಾವಳಿವೊಲಾದುವು ಮೂಡಣ[4] ತಾರಕಾಳಿಗಳ್ ೯೦೨

೨ ಕೊಳನಂ ಗಗನಂ ನೀರ್ವೂ
ಗಳನುಡುತತಿ ನೀರನಚ್ಚವೆಳ್ದಿಂಗಳ ಬೆ[5]
ಳ್ಪಿಱಿಸೆ ಹರಿಣಾಂಕಮಂಡಲ
ಮಿಱಿಸಿದುದಳಿ ಪಾಯ್ದ ಬಿಳಿಯ ತಾವರೆಯಲರಂ ೯೦೩

(ರನ್ನನ ಅಜಿತತೀರ್ಥಕರಪುರಾಣತಿಲಕ ೬,೪೪)

ಮತ್ಸ್ಯಮಕರಂಗಳ್ಗೆ :

ಉತ್ಪಲಮಾಲೆ

೩ ಚಿತ್ತಜನಿಕ್ಷುಚಾಪದಳವಂ ಮಿಗೆ ಕೊಂಕಿದ ಪುರ್ವು ಕಣ್ಣ ಬೆ
ಳ್ಪಿತ್ತಮನಂಗರಾಜನರಲಂಬಿನ ಲೀಲೆಯನಾಳೆ ಕಾಮನಾ
ದೆತ್ತಿದ ಮೀನಕೇತನಮನೊತ್ತರಿಸುತ್ತಿರೆ ಕೇಶಹಸ್ತಮು
ನ್ಮತ್ತಮರಾಳಗಾಮಿನಿ ಪೆಱಳ್ ರತಿಯಂ ಗೆಲೆವಂದು ನೋಡಿದಳ್ ೯೦೪

ಮಹಾಸ್ರಗ್ಧರೆ

೪ ಧನು ಕಾಮಂಗಿಕ್ಷುದಂಡಂ ಪೞಯಿಗೆ ಮಕರಂ ಬಾಣಸಂಘಾತಮು[6]ಚ್ಚಂ
ನನೆಯೆಂಬೀ ಚಿಹ್ನಮಿಲ್ಲೆಂಬಿ[7]ನಿತೆ ಮನಸಿಜಾಕಾರಮಾಕಾರಮೇಂ[8] ಜಾ
ಣನೊ ಧಾತ್ರಂ ರೂಪನಿಷ್ಪಾದನವಿಧಿಯೊಳಿವಂ ಮುನ್ನಮೇಂ ನೋಂಪಿಯಂ ನೋಂ
ತನೊ ಪೇೞಿಂಬಂತು[9] ಬಂದಂ ಸುಕವಿಜನಮನೋಮಾನಸೋತ್ತಂಸಹಂಸಂ

(ಪಂಪನ ಆದಿಪುರಾಣ ೩,೯೧)

– ಇದು ಜಾತಿ

೧ ದಂದೆ (ನ) ೨ ನಾ (ನ) ೩ ಮೋ (ನ) ೪ ಮೂಡುವ (ನ) ೫ ತೆ (ಕಾ) ೬ ದು (ಮೈ,ನ) ೭ ಬ (ಪ,ಪಾ) ೮ ಮಾಗಿರ್ದನೇಂ (ಮೈ,ನ) ೯ ಬಂತೆ (ಪ,ಪಾ)

ಸೂತ್ರಂ ೨೩೨

ಕ್ಷಾರಕ್ಷೀರಾಂಬುಧಿಗಂ
ಕ್ಷೀರೋದಭವಾತ್ರಿಜೇಂದುಗಳ್ಗಂ ಮುರಜಿ
ನ್ನಾರಾಯಣರ್ಗಂ ಸಿರಿಗಂ
ಶ್ರೀರಾಮಗಮತನುಗಂ ಭವಾರಿಗಮೈಕ್ಯಂ ೯೦೬

ಕ್ಷಾರಕ್ಷೀರಾಂಬುಧಿಗಳ್ಗೆ :

ಮಹಾಸ್ರಗ್ಧರೆ

೧ ಇವಱೊಳ್ ಗರ್ಭಂಗಳಂ ಕಟ್ಟುವುವಿನಕಿರಣಶ್ರೇಣಿಗಳ್ ಪಂಚರತ್ನ
ಕ್ಕಿದು ದಲ್ ತಾನಾಕರಂ ನೀರ್ ತನಗೆ ಸವಿದೆಯಾದಗ್ನಿಯಂ ತಾಳ್ದಿ ಪೆರ್ಚಿ
ರ್ದುದು ಚಂದ್ರಂ ಪುಟ್ಟಿದಂ ಮತ್ತಿದಱೊಳೆ ಸುರರುತ್ಪತ್ತಿ ಕೇಳಿಲ್ಲಿ ಶಕ್ರಂ
ಗದಿರ್ದೆಯ್ತಂದದ್ರಿಗಳ್ಗಾಶ್ರಯಮಿದಱೊಳದಭ್ರಾಭ್ರವೃಂದಂಗಳಿರ್ಕುಂ ೯೦೭

ಉತ್ಪಲಮಾಲೆ

೨ ಮೇರು ಕಲಂಕೆಯುಂ ಕದಡಿತೋ ಬಡಬಾನಳನಟ್ಟಿ ಕಾಯ್ದುದೋ
ಮಾರುತಿ ಕಟ್ಟಿ ಮೇಣ್ ಪಱಿದುದೋ ಗಿರಿಗಳ್ ಬರೆ ವಜ್ರಿಗಳ್ಕಿತೋ
ಸಾರಸಮಸ್ತವಸ್ತುಗಳನಾರ್ಕೊಳೆ ತಪ್ಪುದೊ ಮತ್ತಮಂತೆ ಗಂ
ಭೀರತೆ ಸಂದುದೆಂದು ಹರಿ ಮೆಚ್ಚಿ ಕರಂ ಪೊಗೞ್ದಂ ಸಮುದ್ರಮಂ ೯೦೮

ಕ್ಷೀರೋದಭವಾತ್ರಿಜೇಂದುಗಳ್ಗೆ :

೩ ಅತ್ರಿಯ ಪಿರಿಯ ಮಗಂ ಭುವ
ನತ್ರಯಸಂಸ್ತುತ್ಯಕೀರ್ತಿ ಸೋಮಂ ಸಕಲ
ಕ್ಷತ್ರಕುಲಪೂಜ್ಯನಮಲಚ
ರಿತ್ರಂ ಪ್ರೋದ್ದಾಮಸೋಮವಂಶಲಲಾಮಂ ೯೦೯

(ಪಂಪನ ವಿಕ್ರಮಾರ್ಜುನವಿಜಯ ೧,೬೧)

ಮಂದಾಕ್ರಾಂತವೃತ್ತಂ

೪ ಪಾರಾವಾರಂ ತುಹಿನಕಿರಣಂ ಕುಂದೆ ಕುಂದಿತ್ತು ಮತ್ತಂ
ತೋರ್ಪೊಂದೋರೊಂದಮೃತಕಳೆಯುಂ ಪೆರ್ಚೆ ಪೆರ್ಚಲ್ ತಗುಳ್ದ
ತ್ತಾರುಂ ಮಕ್ಕಳ್ಗೆ ಉಗುವನಿತಂ ಬಂಧುಗಳ್ಗೋಯರೊಳ್ ಪೊ
ಕ್ಕಾರಯ್ವಾಗಳ್ ತನಯಜನಿತಸ್ನೇಹಮಾರ್ಗಂ ಬಲಸ್ಥಂ ೯೧೦

೧-೧ ಶಂಬರಾರಿ (ನ) ೨-೨ ಸಂಬ!ಕ್ಕದಿರ್ದೆಟ್ಟಿಂದಗ್ನಿ (ಮೈ,ನ) ೩ ಕಲಂಕೆ ಮೇಣ್ (ಪ) ೪-೪ ಣಂ ಕೊಳೆ ತಪ್ಪುದೊ (ನ); ನಾಂತೊಳಕಾದುದೊ (ಪ) ೫ ಸನ್ನಿಹಿತ (ಪ); ಸಂಗೀತ (ಪಾ) ೬ ಮಣಿ (ಪ,ಪಾ) ೭-೭ ರಂ ದೋರಂ (ನ)

ನಾರಾಯಣಮುರಾರಿಗಳ್ಗೆ :

ಮತ್ತೇಭವಿಕ್ರೀಡಿತಂ

೫ ಉರದೊಳ್ ಕೌಸ್ತುಭರತ್ನಮುಂ ಕಮಳೆಯುಂ ಶ್ರೀವತ್ಸಮುಂ ತೋಳ್ಗಳೊಳ್
ಕರ[1]ವಾಳ್ ಬಿಲ್[1] ಗದೆ ಚಕ್ರಮುಲ್ಲಿಯೆ ಮಲಂಗಿರ್ಪರ್ಪಳ್ ಜಯಶ್ರೀ ನಿಜೋ
ದರದೊಳ್ ನೀರಜಗರ್ಭನುಂ ತ್ರಿಜಗಮುಂ ಪೊಕ್ಕಿರ್ಪುವೆಂದಂದಹೀ
ಶ್ವರತಲ್ಪಂ ಯದುವಂಶ[2]ನಲ್ಲದೆ ಪೆಱಂ ಪೆಂಪಿಂಗೆ ಮುಯ್ವಾಂ[3]ಪನೇ ೯೧೧

ಶ್ರೀರಾಮಾವಿಭೂತಿಗಳ್ಗೆ :

ಚಂಪಕಮಾಲೆ

೬ ಅಮೃತಪಯೋಧಿಮಂಥನದೆ [4]ಪುಟ್ಟಿದ ಪದ್ಮವನಾಂ[4]ತರಾಳದೊಳ್
ರಮಿಯಿಪ ಪದ್ಮನಾಭನುರದೊಳ್ ನೆಲಸಿರ್ಪ ಮಹಾನುಭಾವೆಯೆಂ[5]
ಕಮಳೆಯೆನಿನ್ನೆಗಂ ಕುರುಮಹೀಪತಿಯೊಳ್ ನೆಲಸಿರ್ದೆನೀಗಳು
ತ್ತಮಪುರುಷೋತ್ತಮಂ ಬೆಸಸೆ[6] ಪಾಂಡವರೊಳ್ ನೆಲಸಲ್ಕೆ[7] ಪೋದಪೆಂ ೯೧೨

(ರನ್ನನಗದಾಯುದ್ಧ ೯,೪)

ಮನೋಜಶಂಕರಾರಿಗಳ್ಗೆ :

೭ ಸುರಭಿಶರಂ[8]ಗಳಂ ನಯನದೊಳ್ ಕುಡುವುರ್ವಿನೊಳಿಕ್ಷುಚಾಪಮಂ
ಪರಿಚಿತಮಾನಕೇತನಮನಾವಗಮೊಪ್ಪುವ ಕೇಶಹಸ್ತದೊಳ್
ನಿರವಿಸಿ ಬಯ್ತು ಮೆಯ್ಗರೆದು ಶೂಲಧರಂಗಗಿದಿರ್ಪರ್[9]ನಲ್ಲ ಪೆಂ
ಡಿರ ಮಱಿಯೊಳ್ ಮನೋಜನೆನೆ ಚೆಲ್ವೆಸೆವರ್ ಕಡುಗಾಡಿಕಾರ್ತಿಯರ್ ೯೧೩

– ಇದು ಪ್ರವ್ಯಂ

ಸೂತ್ರಂ ೨೩೩

ಮುಕುಳನನಿಮೀಳನಂಗಳ್
ವಿಕಾಸಹಾಸಪ್ರಬೋಧನೋನ್ಮೇಷಂಗಳ್
ಪ್ರಕಟಿಸುಗುಮೈಕ್ಯಮಂ ನಿ
ರ್ವಿಕಲ್ಪದಿಂ ಗೌಣಮುಖ್ಯವೃತ್ತಿಕೃತಂಗಳ್ ೯೧೪

೧–೧ ವಾಲಂ, ವಾಳುಂ (ನ) ೨ ವಿಷಚಿಹ್ನ (ಮೈ, ನ) ೩ ಮುಯ್ಯಾಂ (ನ) ೪–೪ ಪುಟ್ಟದೆ ನಬ್ಜಭವಾಂ (ಪಾ) ೫ ಯೂಂ (ಪಾ, ನ) ೬ ಬೆರಸು, ಬೆರಸಿ (ನ) ೭ ನೆರೆಯಲ್ಕೆ (ನ) ೮ ಶಯಂ (ನ) ೯ ಗಿದಿರ್ವರ್ಪ (ನ)

ಲಕ್ಷ್ಯಂ : ಮುಕುಳನನಿಮೀಳನಂಗಳ್ಗೆ :

೧ ಮುಕುಲಿತವಿಲೋಚನಂ ಕಂ
ಟಕಿತಾಂಗಂ ಸ್ವೇದಬಿಂದುದಂತುರಿತಮುಖಂ
ಪ್ರಕಟಶ್ವಸಿತೋತ್ಕಂಪಂ
ನಿಕಾಮಕಮನೀಯಮಾದುದಿಂತು ರತಾಂತಂ ೯೧೫

೨ ವಿನಿಮೀಳನ್ನೀಳಾಂಬುಜ
ವನಮಾಷದ್ವಿಕಸದರುಣಸರಸಿರುಹವನಂ
ದಿನಮುಖಮಳಿಸಂತತಿಗೇಂ
ಜನಿಯಿಸಿದುದೊ ಭಿನ್ನರುಚಿಗಳಂ ಪರಿಮಳದೊಳ್ ೯೧೬

ವಿಕಾಸಹಾಸಂಗಳ್ಗೆ :

ನವನಳಿನವೃತ್ತಂ

೩ ಪೊಸವಿಸಿಲೊಳ್ ಮುಗುಳ್ಗಳ್ ಸಡಿಲ್ದು ಸಿರ್ವಂತೆಸಳ್
ಮುಸಗಿ ಮುಗುಳ್ನಗೆ ನಕ್ಕು ತೋಱೆ ಮದಾಳಿಗಳ್
ನುಸುಳೆ ತೊವರ್ತಿರೆ ಕಂಪಲರ್ಚುವನಂಬುಜ
ಪ್ರಸರಮನಾಳೆ ಬೆಳಪ್ಪನೀಗೆ ವರಂಗಳಂ ೯೧೭

ಅದಲ್ಲದೆಯುಂ :

ಮತ್ತೇಭವಿಕ್ರೀಡಿತಂ

೪ ನಗೆಯುಂ ಬಲ್ಮುಗುಳ್ಗಳ್ಗೆ ಕಂಪನಳಿಗಳ್ಗಾನಂದಮುಂ ಕೋಕಿಳಾ
ಳಿಗೆ ಸೊರ್ಕಂ ಗಿಳಿಗಳ್ಗೆ ಬೀರಸಿರಿಯುಂ ಕಾಮಂಗೆ ಬೆರ್ಚಂ ವಿಯೋ
ಗಿಗೆ ಪೆರ್ಚಂ ಪ್ರಿಯರ್ಗೆಯ್ದೆ ಮಾಡಿ ವಿದಳತ್ಪುಷ್ಪಾಳಿ ತೆಂಗಾಳಿ ತೀ
ಡುಗುಮಳ್ಕಾಡೆ ಸಮಸ್ತದಂಪತಿರತಿಕ್ರೀಡಾಪರಿಶ್ರಾಂತಿಗಳ್ ೯೧೮

೫ ಅಲರ್ದ ಮೊಗಂ ಕಿಱಿದಾದುದು
ನೆಲಸಿದುದಲಲರ್ದೆಯೊಳಪ್ಪು ಕಣಿಸಿರ್ದುವು ಚಾ
ಪಲನಯನಕುವಲಯಂ ಸು
ಯ್ಯೆಲರಾದಂ ಬಿಸಿಯುಮಾದುವಾ ಸತಿಗಾಗಳ್ ೯೧೯

೧ ವಿಗ (ನ) ೨-೨ ಕುಳಕ್ಕಂ ಕಾಂತಿಗಳ್ ಶಾಂತಿ (ನ)

ತೃಷ್ಣಾಭಿಲಾಷಂ[೧]ಗಳ್ಗೆ :

೬ ದೂರಾವತೀರ್ಣಪಂಪಾ[೨]
ವಾರಿಯು[೩]ನಿದನಱಿತು[೩] ಕಱು[೪]ತು ತಳಮೆಯ್ದುವಿನಂ
ನೀರಡಿಸಿ ನೀರಜಾನನೆ
ಪೀರಲ್ ಬಗೆದಪ್ಪುವೆನ್ನ ಕಣ್ಣುಂ ಮನಮುಂ ೯೨೦

– ಇದು ಕ್ರಿಯೆ

ಸೂತ್ರಂ ೨೩೫

ಹರಿತಾಸಿತ ನೀಳ ಶ್ಯಾ
ಮರೋಚಿಗಂ ಪೀತ ರಕ್ತವರ್ಣಂಗಳ್ಗಂ
ದೊರೆಕೊಳ್ಗುಂ ಗೌರ ಶ್ವೇ
ತರುಚಿಗಮಿತರೇತರಾಶ್ರಯಂ ವರ್ಣೈಕ್ಯಂ[೫] ೯೨೧

ಲಕ್ಷ್ಯಂ : ಕೃಷ್ಣ ಹರಿತಂಗಳ್ಗೆ :

ದ್ರುತವಿಲಂಬಿತವೃತ್ತಂ

೧ ಮರಕತತ್ವಿಷಮಾ ಯಮುನಾಜಳಂ
ಸ್ಫುರದುರುಸ್ಫಟಿಕೋಪಳಕಾಂತಿಯೊಳ್
ಬೆರಸಿ[೬] ಗಂಗೆಯ ವಾರಿಯೊಳೊಪ್ಪುಗುಂ
ಹರಿಹರದ್ವಯಸಂಗಮದಂದದಿಂ ೯೨೨

ನೀಲಶ್ಯಾಮಂಗಳ್ಗೆ :

ಮಹಾಸ್ರಗ್ಧರೆ

೨ ಪದಧೂಳೀಕ್ಷೋಭದಿಂ ದಿಗ್ಯುವತಿವದನಮಂ ಶ್ಯಾಮಳಂ ಮಾಡಿ ಮಾಣ್ದಿ
ರ್ದುದೆ ಕೋಪೋದ್ಭಿನ್ನಗಂಡಸ್ಥಳಕರಟಿಘಟಾವ್ಯೂಹನೀಲಾಂಬುದಾಟೋ
ಪದಿನತ್ಯು[೭]ಗ್ರಾಸ್ತ್ರಶಸ್ತ್ರಪ್ರಕರಕಿರಣಸಂಘಾತತೀವ್ರಾತಪೋದ್ಯೋ
ತದಿನರ್ಧಶ್ಯಾಮಳಂ ಮಾಡಿದುದು ದಿವ[೮]ಮುಮಂ ಕೂಡೆ ರಾಜೇಂದ್ರಸೈನ್ಯಂ

(ಪಂಪನ ಆದಿಪುರಾಣ ೧೪,೮೮)

೧ ತೃಷಾಭಿಲಾಷಾದಿ (ನ) ೨ ದೂರವತೀರಂ ಗಂಗಾ (ನ) ೩-೩ ನಿದನಱಿತು, ನೀರಱಿತು (ನ) ೪ ಕಱಿ, ಕುಱು (ನ) ೫ ತಾನಕ್ಕುಂ (ನ) ೬ ಪೊರಸಿ (ನ) ೭ ಪದೆ ಪ್ರತ್ಯ (ನ) ೮ ದಿನ (ನ)

ಪೀತರಕ್ತಂಗಳ್ಗೆ :

ಮತ್ತೇಭವಿಕ್ರೀಡಿತಂ

೩ ಪ್ರವಿರಾಜತ್ಕಳಧೌತಪಿಂಗರುಚಿಮದ್ದಂಷ್ಟ್ರಾಗ್ರ[೧]ದಿಂದಿಕ್ಕಿ ದಾ
ನವರಂ[೨] ಧಾತ್ರಿಗೆ ರಾಗಮಾಗೆ ನೆಗೞ್ದ[೩]ದಿಕ್ಕ್ರೀಡನಾಕಾರದಿಂ
ತವೆ ಬೆಂಕೊಂಡು ತಮಸ್ತಮಪ್ರಕರಮಂ ಬಾಳಪ್ರವಾಳಾಂಕುರ
ಚ್ಛವಿಯಿಂ ಚಂದ್ರನುದಂಶುಲೇಖೆಯಿನದೊಂ[೩]ದಾನಂದಮಂ ಮಾಡಿದಂ[೩] ೯೨೪

ಅಂತುಮಲ್ಲದೆಯುಂ :

೪ ವಿದಳತ್ಕಿಂಶುಕಕಿಂಕಿರಾತಸುಮನಃಕಾಶ್ಮೀರಸಂಧ್ಯೋದ್ಗತಾಂ
ಬುದಪೀತಾಂಬರ[೪]ನಿಂಪ್ರನೀಲವಿಲ[೫]ಸನ್ನೀಲಾತಸೀನೀಲನೀ
ರದನೀಲಾಂಬುಜವರ್ಣನರ್ಣವಯುಶಂ ಕೃಷ್ಣಂ ಧರಾದೇವಿಗೊ
ಪ್ಪಿದನಂತರ್ಜ್ವಲದೌರ್ವವಹ್ನಿಲವಣಾಂಭೋರಾಶಿಲೀಲಾವಹಂ ೯೨೫

ಗೌರಶ್ವೇತಂಗಳ್ಗೆ :

೫ ಹಿಮವದ್ಗಿರಿಕಟಕ[೬]ದಿನೊಗೆ
ವ[೭]ಮರಸರಿತ್ಸ್ರೋತಮೆಂಬ ಮಾತಂ ಪಡೆದೇಂ
ಹಿಮಗೌರಹಾರಮೆಸೆದುದೊ
ಹಿಮಶೈಲ[೮]ಶಿಲಾವಿಶಾಲ[೮]ವಕ್ಷಃಸ್ಥಲದೊಳ್ ೯೨೬

(ಪಂಪನ ಆದಿಪುರಾಣ ೪,೩೮)

ಸೂತ್ರಂ ೨೩೫

ನಯನಾದಿವಿವಿಧವರ್ಣಾ
ಶ್ರಯಂಗಳೊಳ್ ಬೇಱೆವೇಱೆ ಬೇಱೊಂದನೆ ನಿ
ರ್ಣಯಮಪ್ಪ ವರ್ಣಮಂ ಸಮು
ದಯದಿಂದಂ ಪೇೞ್ಗೆ ಮೇಣ್ ಯಥಾಸಂಭವಮಂ ೯೨೭

ಲಕ್ಷ್ಯಂ :

೧ ಎವೆಯಿಕ್ಕದೆ ಪದೆಪಿಂ ನೋ
ಡುವ ಪುರಲಲನೆಯರ ಬಿಳಿಯ ಕಣ್ಗಳ ಬೆಳಗಿಂ
ಧವಳಿಸಿದಂತೆವೊಲಾದುವು
ಗವಾಕ್ಷಜಾಳಂಗಳಮರತನಯಂಗಾಗಳ್ ೯೨೮

೧ ಮುದ್ದಾಷ್ಟಾಂಗ (ನ) ೨ ನವನಂ (ನ) ೩-೩ ದಾಕಾರಮ ತಾಳ್ದಿದಂ (ನ) ೪ ನೀಲಾಂಬರ (ನ) ೫ ಕ (ನ) ೬ ನಿಕಟ (ನ) ೭ ದ (ಕಾ) ೮-೮ ಶಿಖಾವಿಶಾಲ (ಕಾ); ಶಿಖಾವಿಳಾಸ, ಶಿರೋವಿಳಾಸ (ನ)

ಚಂಪಕಮಾಲೆ

೨ ಒದವಿದ ಬೇಟದತ್ತಳಗದೊಳ್ ಮುಳಿಸಂ ಪುರುಡುಂಟುಮಾಡೆ ಜ
ರ್ವಿದ ಕಡೆಗಣ್ಣ ಜರ್ವುಗಳೊ ವೋದಿದ[1] [2]ನೀಳಸರೋಜ[2]ಮಾಳೆಯಿಂ
[3]ದುದಿರ್ದು ಮದಂಗದೊಳ್[3] ತೊಡರ್ದು ತೋರ್ಪ ದಳಂಗಳೊ ಪೇ[4]ಮಾವುದೆಂ
ಬು[5]ದನೆನೆ [6]ಕಾದಿ ವೋದಿದ[6]ವಿನಾಣಮು[7]ದಿಲ್ಲಿ ದಲಿಲ್ಲ[7] ನಲ್ಲಳಾ ೯೨೯

(ಪಂಪನ ಆದಿಪುರಾಣ ೪,೧೦)

ಮಿಶ್ರವರ್ಣಂಗಳ್ಗೆ :

ಮತ್ತೇಭವಿಕ್ರೀಡಿತಂ

೩ ವದನಾಬ್ಜಾಸವಗಂಧಲಂಪಟರಟದ್ಭೃಂಗಂಗಳಂ ಸೋವಲೆ[8]
ತ್ತಿದ ನೀಳೋತ್ಪಳಮಾಳೆಯಂ ದ್ವಿಗುಣಿಸಲ್ಕಾರ್ತತ್ತು ಕರ್ಣಾಂತಗಾ
ಮಿ ದಳತ್ಪಂಕಜಪತ್ರಶೋಭಿ ಕುಮುದಜ್ಯೋತ್ಸ್ನಾವದಾತಪ್ರಭಂ
ಮದನೋತ್ತೇಜಿತ[9]ಬಾಣವಿಭ್ರಮಮಪಾಂಗಾಳೋಕನಂ ನಲ್ಲಳಾ[10] ೯೩೦

(ರನ್ನನ ಅಜಿತತೀರ್ಥಕರಪುರಾಣತಿಲಕ ೯,೩೯)

ಮಾಲಿನೀವೃತ್ತಂ

೪ ಗಣಿಕೆಯರ ವಿಳಾಸಾಗಾರದೊಳ್ ಜಾಳಮಾರ್ಗ
ಪ್ರಣಯಿನಿಯತಪಾಂಗಶ್ರೇಣಿಯೊಳ್[11] ಮೂಱು ಬಣ್ಣಂ
ಪೆಣೆದೊದವೆ ಗವಾಕ್ಷಸ್ಥೇಂದುಕಾಂತೇಂದ್ರನೀಲಾ
ರುಣಮಣಿಕಿರಣಂಗಳ್ ಪೊಣ್ಮುವಂತಾದುವಾಗಳ್ ೯೩೧

(ಪಂಪನ ಆದಿಪುರಾಣ ೧೧,೨೩)

— ಇದು ಗುಣಂ

ಸೂತ್ರಂ ೨೩೭

ಅನುಗತಮಪ್ಪಂತಿರೆ ಚೇ
ತನಧರ್ಮಂಗಳನಚೇತನಾರ್ಥಂಗಳೊಳಂ
ಸ್ತನನಯನಾದಿಯೊಳಂ ದ್ವಿ
ತ್ವನಿಷ್ಕಮುಂ ಜಾತಿಯುಂ ವಿವರ್ಣಿಪರರೆಬರ್ ೯೩೨

೧ ನೋಡಿದ (ನ) ೨-೨ ನೆಯ್ದಿಲ ನೀಳ್ದ (ಕಾ) ೩-೩ ದುದಿರ್ದ ಮದಂಗಳೊಳ್ (ಕಾ) ೪ ಬಿ (ನ) ೫-೫ ಕಾಡಿ ವೋಡಿದ, ಕಾಡೆ ಮೂಡಿದ (ನ) ೬-೬ ದಿಲ್ಲದದೆಲ್ಲಿ (ಕಾ); ದಿಲ್ಲಿ ದಲೆಲ್ಲಿ, ದಿಲ್ಲ ದಲಲ್ಲಿ (ನ) ೭ ಸೋಯಲೆ (ಕಾ, ಪಾ) ೮ ದಳನ್ನೀಲಸರೋಜರೋಚಿ (ಕಾ) ೯ ಮದನೋತ್ತೇರಿತ (ನ) ೧೦ ನಲ್ಲಳಂ (ಪಾ) ೧೧ ಗಳ್ (ಕಾ)

ಲಕ್ಷ್ಯಂ : ಪೂರ್ವಾರ್ಧಕ್ಕೆ :

ಖಚರಪ್ಲುತವೃತ್ತಂ

೧ ತೋಳ ಘಟ್ಟಣೆಗುಚ್ಚಳಿಸುತ್ತುಂ ಸೂಸುವ ಶೀಕರವಾರಿ ಮು
ಕ್ತಾಳಿಯಿಂದಭಿಷೇಕಮೆ ಗೆಯ್ವಂತೊಪ್ಪೆ ಕಳಿಂದಜೆಯುಂ ಮನೋ
ಲೀಳೆಯಿಂ ಪುಗೆ ತನ್ನದಿ ಕೃಷ್ಣಂಗಾಟಿಸಿದಂತಿರೆ ಲೋಲಕ
ಲ್ಲೋಳಕೋಮಲಹಸ್ತದೆ ಪೊಯ್ದಳ್ ಮುಂದಲೆಯಂ ಕಮಲಾಕ್ಷನಾ ೯೩೩

ಉತ್ತರಾರ್ಧಕ್ಕೆ :

ಚಂಪಕಮಾಲೆ

೨ ಕಡೆದವೊಲಿರ್ಪ[1] ಪೆರ್ಮೊಲೆ ತೊದಳ್ನುಡಿ ಮೆಲ್ನಡೆ ಚೆಲ್ವನಪ್ಪ ತೆಳ್-
ನಡು ನಳಿತೋಳ್ ಪೊದಳ್ದಧರವೊತ್ತದೆಯುಂ ನಿಱಿಗೊಂಡ ಚುಂಚು ಸೋ
ರ್ಮುಡಿ ಕಡುನುಣ್ಪುವೆತ್ತ ತೊಡೆ ತುಂಬಿದ ಪೀನನಿತಂಬಬಿಂಬ[2]ಮೊ
ರ್ಕುಡಿತೆಯೆನಿಪ್ಪ ಕಣ್ ಕರಮೆ ರಂಜಿಸೆ ಬಂದರಿಳೇಶಕಾಂತೆಯರ್ ೯೩೪

ಸೂತ್ರಂ ೨೩೭

ಪದದೊಳ್ ಮಾಟ್ಪಂತಿರೆ ಮಾ
ಟ್ಪುದು ನಿತ್ಯಂ ಪಾದದೆಡೆಗಳೊಳ್ ಸಂಹಿತೆಯಂ
ತುದಿಯೊಳಮರ್ಧದೊಳಂ ಮಾ[3]
ಡದಿರ್ಕೆ ಮೇಣ್ ಮಾಟ್ಕೆ ತಾನದೆಲ್ಲಿ ಯಥೇಷ್ಟಂ ೯೩೫

ಲಕ್ಷ್ಯಂ :

ಚಂಪಕಮಾಲೆ

೧ ಮೃಡನುಡುರಾಜಪನ್ನಗವಿರಾಜಿಜಟಾಮುಕುಟಂ ಕಪರ್ದಿ ನೂ
ರ್ಮಡಿ ಧವಳಂ ಸುರಾಸುರಕದಂಬಕಸೇವ್ಯಪದಾಂಬುಜದ್ವಯಂ
ಅಡರೆ ಮೃಡಾನಿಗನ್ಯಕುಳಶೈಳಕುಳಂಗಳ ನಾಡೆ ರಯ್ಯಮ
ಪ್ಪೆಡೆಗಳನೆಲ್ಲಮಂ ನೆಱೆಯೆ ತೋರ್ಪುದು ಬೇಳ್ಕೆಯೆ ಬಂದನೀಶ್ವರಂ ೯೩೬

೨ ಆತಂ[4] ಪುರೋಹಿತಂ ಬೆರ
ಸಾತತತಿಮಿರಪ್ರಭೇದನೋಪಾಯಮಿದೆಂ
ದಾ ತಮಮಂ ಕಿಡಿಸಲ್ ಸಂ
ಜಾತನಯಂ [5]ಬಗೆದು ತದ್ಗುಹಾ[5]ಭಿತ್ತಿಗಳೊಳ್ ೯೩೭

(ಪಂಪನ ಆದಿಪುರಾಣ ೧೩,೪೮)

೧ ಲಪ್ಪ (ನ) ೨ ಮೆತ್ತ (ನ) ೩ ಕೂ (ನ) ೪ ಸೋತಂ (ಕಾ) ೫-೫ ಬರೆದು ತದ್ಗುಹಾ, ಬೆರದು ತಂದು ಗೃಹ (ನ)

೩ ಇಲ್ಲಿಯೆ ಪೇಱಿಂದು ಮಹೀ
ವಲ್ಲಭದೂತಂಗೆ ನುಡಿಯೆ[1] ದಶನಾಂಶುಗಳಂ[2]
ಮೆಲ್ಲನೆ ದಂತ[3]ಚ್ಛದಮೃದು
ಪಲ್ಲವ[4]ದೊಳ್ ನಿಱಿಸಿ ಮರಳೆ[4] ದೂತಂ ನುಡಿದಂ ೯೩೮

೪ ಅರಸುಗಳೆಲ್ಲಂ ಬಾಯ್ಕೇ
ಳ್ದರೆಂದುಮಾಶಾಂತರಂಗಳಕ್ಕಿದುವೆಂದುಂ[5]
ಧರಣಿತಳಂ ಕೀರ್ತಿಸೆ[6] ಕೇ
ಳ್ದು ರಾಗಿಸುತ್ತಿರ್ಪ[7]ವಿನ್ನುಮೇಂ ತೊದಳುಂಟೇ ೯೩೯
(ಪಂಪನ ಆದಿಪುರಾಣ ೧೪,೪೯)

೫ ಎರಡಱೊಳಂ ಚಂದ್ರಾದಿ
ತ್ಯರನಾಗಳ್ ಬರೆದು ಕಾಕಿಣೀರತ್ನದೊಳಂ
ಸ್ಫುರಿತಮಣಿರತ್ನದೊಳಮಂ
ತರಿಸುತ್ತುಂ ಯೋ[2]ಜನಕ್ಕೆ ಬರೆದೊಂದೊಂದಂ[2] ೯೪೦
(ಪಂಪನ ಆದಿಪುರಾಣ ೧೩,೪೯)

ಸೂತ್ರಂ ೨೩೮

ಸಂಬಂಧದ ಸಂಬಂಧದೊ
ಳಂ ಬಹುಳಂ ಷಷ್ಠಿಯಕ್ಕುಮೊಂದಿರೆ ನೆಗಱ್ಗಂ
ಬಿಂಬಾಧರಾದಿಶಬ್ದಮೊ
ಡಂಬಟ್ಟರೆ ಮಧ್ಯಪದವಿಲೋಪಿ[8]ಸಮಾಸಂ ೯೪೧

ಲಕ್ಷ್ಯಂ :

೧ ಕಮಳದ ಕೋಮಳಕಂದಾ
ಗ್ರಿಮಾಂಕುರಾಸ್ವಾದಮಾದಮೋ[9]ದವಿಸೆ ಮುದಮಂ
ಕಮಳಾಕರದೊಳೆ ಹಂಸಂ
ರಮಿಯಿಸುಗುಂ ಪದ್ಮಿನೀರಜೋರುಣಿತಾಂಗಂ ೯೪೨

೧ ದು (ನ) ೨ ಳಿಂ (ನ) ೩ ದಶನ (ನ) ೪-೪ ದೊಳೆ ಮುಱಿಸಿ ಮಾಣೆ (ನ) ೫ ವೆಂಟುಂ (ನ) ೬ ಬಣ್ಣಿಸೆ (ಕಾ) ೭-೭ ಜನಕ್ಕಮುಂತೊಂದೊಂದಂ (ಕಾ) ೮ ಲೋಪ (ನ) ೯ ಮಾಗಳೊ (ನ)

೨ ಬಿಂಬಾಧರಕಾಂತಿಪ್ರತಿ
ಬಿಂಬಂ ಸುಲಿವಲ್ಲೊ[೧]ಳಿಸೆಯೆ[೧] ಪಲ್ ಸುಲಿಯುವೆಗೆ
ತ್ತೇಂ ಬಾಲೆ ಮುಗ್ಧೆಯೋ ಮ
ತ್ತಂ ಬಿಡವಡಿಗಡಿಗೆ ನೋಡುವಳ್ ಕನ್ನಡಿಯಂ ೯೪೩

ಸೂತ್ರಂ ೨೩೯

ಭಂಗುರಭಿದುರಚ್ಛಿದುರಪ
ದಂಗಳ್ ಸಲೆ ಕರ್ಮಕರ್ತೃ[೨]ವೊಳ್ ಕರ್ತೃವೊಳಂ[೨]
ಸಂಗತಿವೆತ್ತಿರ್ಕುಂ ಕವಿ
ಪುಂಗವಸಮಯವ್ಯವಸ್ಥೆಯಿಂದಂ ಕೃತಿಯೊಳ್ ೯೪೪

ಲಕ್ಷ್ಯಂ :

ಉತ್ಪಲಮಾಲೆ

೧ ಭಂಗುರಕೇಶಿ ನಲ್ಲನ ತಳಂಗಳೊಳೊಯ್ಯನೆ ಮೆಯ್ಯನಿಕ್ಕಿ [೩]ನಿಂ
ಚಿಂಗೆಣೆ[೩]ಯಾಗಿ ತಳ್ತು ಕೊರಲಂ ಬಿಗಿಯಪ್ಪಿ ಕಟಿಪ್ರದೇಶಮಂ
ಪಿಂಗದಿಱುಂಕಿ ತನ್ನೆರಡುಮೂರುಗಳಿಂ[೪] ಪಡೆದಳ್ ನಿಜಾಂಗಸಂ[೫]
ಸಂಗದಿನಾ ಲತಾಂಗಿ ತನಗಂ ಖಚ[೬]ರಂಗಮನಂಗರಾಗಮಂ[೭] ೯೪೫

೨ ಸಂಗತನಿಜಹಸ್ತಕ[೮]ನಿ
ಷ್ಠಾಂಗುಲಿಧೃತಮಂ ಪ್ರಿಯಾಮನಃಖೇದಲತಾ
ಭಂಗುರಮಂ ರವಿಮಂಡಳ
ದುಂಗುರಮಂ ರಘುಜನಿತ್ತನಣುವನ ಕೆಯ್ಯೊಳ್ ೯೪೬

ಶಾರ್ದೂಲವಿಕ್ರೀಡಿತಂ

೩ ಪ್ರಾಲೇಯಾದ್ರಿನವಪ್ರಸೂನಭಿದುರಂ ಗಂಗಾಸರಿಲ್ಲೋಲಕ
ಲ್ಲೋಲಾಂಭೋಲವ[೯]ಶೀಕರಂ ಚಿರರತಿಶ್ರಾಂತಾಮರ[೧೦]ಸ್ತ್ರೀಕುಚ
ವ್ಯಾಲಿಪ್ತಾಗರುಕುಂಕುಮದ್ರವಹರಂ ಮಾದ್ಯತ್ಪಿಕಾಲಾಪ[೧೧]ವಾ
ಚಾಲಂ ಮಾರುತನೊಯ್ಯನೂದಿ [೧೨]ಕಳೆದತ್ತಾ ದಂಪತಿ[೧೨]ಶ್ರಾಂತಿಯಂ ೯೪೭

೧-೧ ಳಿಯೆದ್ದು (ನ) ೨-೨ ವುಂ ಕರ್ತೃವೊಳಂ, ವೇಕಾರ್ಥದೊಳಂ (ನ) ೩-೩ ನಿಂ।ನಿಂಗೆಣೆ (ನ) ೪ ಳಂ (ನ) ೫ ನಿಜೇಶನುತ್ (ನ) ೬ ಸುಖ (ನ) ೭ ದಿಂ (ನ) ೮ ಸಂಗತಿನಿಜಮಸ್ತಕ (ನ) ೯ ರವ (ನ) ೧೦ ಶಾಂತಾದರ (ನ) ೧೧ ಮಾಂದ್ಯತ್ಪಿಕಾಲೋಕ (ನ) ೧೨-೧೨ ಕಳೆದತ್ತಾದಂ ಪರಿ (ನ)

ದ್ರುತವಿಲಂಬಿತವೃತ್ತಂ

೪ ಅದಱನೀತನನಾತನೆ ಕೊಂದು ವಿ
ಚ್ಛಿದುರಸಂಗರನಕ್ಕೆಮ ಕೊಲ್ಲೆನೆಂ
ದೊದಱ[1] ಗಾಂಡಿವಿ ಖಂಡಿಸಿದಂ ಮಹಾ
ಸ್ತ್ರದಿನರಾತಿಯ ಕೆಯ್ದುಗಳೆಲ್ಲಮಂ ೯೪೮

– ಮತ್ತಮುಱಂದೆಡೆಗಂ ನೋಡಿಕೊಳ್ವುದು

ಸೂತ್ರಂ ೨೪೦

ಗದ್ಯಮುಯುಂ ಪದ್ಯಮುಯುಂ
ತದ್ಯಮಳ[2] ವಿಮಿಶ್ರಮೆಂದು ಕೃತಿ ಮೂಱು ತೆಱಂ
ಗದ್ಯದೊಳೆ ಸಮೆದುಮಂತಪು[3]
ಹೃದ್ಯವಚಃಪ್ರೌಢಿಗಳ್[4] ಕಥಾಖ್ಯಾಯಿಕೆಗಳ್ ೯೪೯

ಸೂತ್ರಂ ೨೪೧

ದೊರೆವೆತ್ತ ಪದ್ಯದಿಂದಂ[5]
ವಿರಚಿಸಿದುದು ಸರ್ಗಬಂಧಮುಕ್ಕುಂ ಕಾವ್ಯಂ
ಬೆರಸಿ ಬರೆ ಗದ್ಯಪದ್ಯಮ
ವೆರಡುಂ ಕೃತಿ ಚಂಪುವೆಂಬ ಪೆಸರಂ ಪಡೆಗುಂ ೯೫೦

ಸೂತ್ರಂ ೨೪೨

ಇಡುಕುಂಗಬ್ಬಂ ಮುಕ್ತಕ
ಮೊಡಂಬಡಲ್[6] ನೆಗಟ್ ಪಲವುಮೇಕಕ್ರಿಯೆಯೊಳ್
ಪಡೆಗುಂ ಕುಳಕಾಖ್ಯೆಯನೆಡೆ
ಮಡಗದನೇಕಾರ್ಥವಸ್ತುಕಥನಂ ಕೋಶಂ ೯೫೧

ಸೂತ್ರಂ ೨೪೩

ಸಂದಿಸಿರೆ ಕಂದಮುಂ ಪೆಱ
ತೊಂದಱಕೆಯ ವೃತ್ತಜಾತಿಯುಂ ಪದಮುವು ತ
ಳ್ತೊಂದಿರೆ ಪನ್ನೆರಡುವರಂ
ಸಂದು[7]ದು ಮೆಲ್ವಾಡೆ[7] ನಿಕ್ಕುಮುದು ಕನ್ನಡದೊಳ್ ೯೫೨

೧ ಱಿ (ನ) ೨ ಕ (ನ) ೩ ದಂತಮ (ನ) ೪ ಯೊಳ್ (ನ) ೫ ವೃತ್ತಬಂಧದ (ನ)
೬ ಬಡಂ (ನ) ೭-೭ ದಮೊಳ್ವಾಡೆ, ಗುಮೇಲ್ಪೋಡೆ (ನ)

ಸೂತ್ರಂ ೨೪೪

ಪದಿನಯ್ದುವಿರ್ಪತಯ್ದುಂ
ಪದಂ ಯಥಾಸಂಭವಂ ಪ್ರಬಂಧದ ಮೆಯ್ಯೊಳ್
ಪುದಿದೊದವಿ ನೆಗಟ್ಟೊಂಡಂತದು
ಸದಲಂಕಾರಂ ರಸಾಸ್ಪದಂ ಪಾಡಕ್ಕುಂ ೯೫೩

ಸೂತ್ರಂ ೨೪೫

ಪಾಡುಗಳಿಂದಂ ತಱಿಸಲೆ
ಮಾಡಿದುದಂ ಪಾಡುಗಬ್ಬಮೆಂದು ಬುಧರ್ ಕೊಂ
ಡಾಡುವರಿರದಱಿಂ ದಲ್ ಇಮೆ
ಲ್ಪಾಡುಂ ರೂಢಿಯ ಬೆದಂಡೆಗಬ್ಬಮುಮಕ್ಕುಂ ೯೫೪

ಸೂತ್ರಂ ೨೪೬

ಪಲತೆಱದ ಪದ್ಯದಿಂದಂ
ಲಲಿತವಚೋರಚನನಿಚಯಪದ್ಧತಿಕೆಗಳಿಂ
ಸಲೆ ನಿಲೆ ಸಮೆದುದು ಸರಸಾ
ಖಿಲವರ್ಣನಮಾದೊಡದುವೆ ಚಾಜನೆಗಬ್ಬಂ ೯೫೫

ಸೂತ್ರಂ ೨೪೭

ನಗರಾರ್ಣವ ಸರಿದಟವೀ
ನಗ ಚಂದ್ರಾರ್ಕೋದಯರ್ತು ಸಲಿಲಕ್ರೀಡಾ
ದಿಗಳಾದಿಯಾಗೆ ಸರಸೋ
ಕ್ತಿಗಳಿಂ ವರ್ಣಿಸುಗೆ ವರ್ಣಕಂಗಳನದಱೊಳ್ ೯೫೬

ಸೂತ್ರಂ ೨೪೮

ಸವಸಂದ ಮುಖಂ ಪ್ರತಿಮುಖ
ಮುವಮರ್ಶಂ ಗರ್ಭಮಂತೆ ನಿರ್ವಹಣಮೆನಿ
ಪ್ಪುವವೆಯ್ದು ಸಂಧಿಯಕ್ಕುಂ
ಸುವಿಹಿತಕವಿಮಹಿತವಿತತಕೃತಿಪದ್ಧತಿಯೊಳ್ ೯೫೭

೧ ನಿಲ್ವೊ (ನ) ೨-೨ ರಿನ್ನದು (ನ) ೩-೩ ಮೇ।ಲ್ಪಾಡುಂ, ಮೊ।ಳ್ಪಾಡುಂ (ನ) ೪ ಗದ್ಯ (ನ)
೫ ವಚೋರಚಿತ, ವಚೋರನ್ನ (ನ) ೬ ದುದ (ನ) ೭ ಸಂಭೋಗಂ (ನ) ೮-೮ ಳಿಗೆ ಮಧುರ
ತರ (ನ) ೯ ನಿದ, ನವ (ನ) ೧೦ ಮುವರ್ಷಕಂ (ನ) ೧೧ ವುಮಯ್ದು (ನ)

ಸೂತ್ರಂ ೨೪೯

ಉಪಯೋಗದೆ ಬೀಜಂ ಬಿಂ
ದು [೧]ಪತಾಕೆ ಪ್ರಕರಿ[೧] ಕಾರ್ಯಮೆನೆ ಪಂಚವಿಧಂ
ನಿಪುಣಕವಿರಚನೆಯೊಳ್ ಸ[೨]
ಪ್ರಪಂಚದಿಂದೊಂದಿ ತೋಱುಗುಂ ಸಂಧ್ಯಂಗಂ[೩] ೯೫೮

ಇದು ಕವಿಸಮಯದೊಳ್ ಐಕ್ಯಪ್ರಕರಣಂ ಸಮಾಪ್ತಂ

ಗೀತಿಕೆ :

ಇಂತು ಕವೀಂದ್ರಸಮಯಮಂ ಚೈ
ರಂತನಮಾರ್ಗದೊಳೊಂದೆ ತಿಳಿಯೆ ಪೇೞ್ದಂ
ಭ್ರಾಂತಿನಿಸುಂ ಪೊರ್ದದಲ್ಲಿ ತಾನೆಂ
ಬಂತಿರೆ ತಿರ್ದಿ ವಿವೇಕಿ ನಾಕಿಗಂ* ೯೫೯

ಮತ್ತೇಭವಿಕ್ರೀಡಿತಂ

ದ್ವಿಜವಂಶಾರ್ಣವಪಾರಿಜಾತಕುಜದೇ[೪]ಶೀಯಂ ಜಿನೇಂದ್ರಕ್ರಮಾಂ
ಬುಜಚಂಚನ್ನವಚಂಚರೀಕಯುವ[೫]ಲೀಲೋದ್ದಾಮನ್ಯೈದಂ ಯುಗೀ
ನಜನೋದಾಹರ[೬]ಣಪ್ರಸಾಧಿತ[೬]ಧರಿತ್ರೀಮಂಡಲಂ ಸತ್ಕವಿ
ವ್ರಜಚೂಡಾಮಣಿ ನಾಗವರ್ಮನಿದನುರ್ವೀಸಂಸ್ತುತಂ ಮಾಡಿದಂ ೯೬೦

ವಾಮನನುಂ ರುದ್ರಟನುಂ
ಭಾಮಹನುಂ ದಂಡಿಯುಂ ಮನಂಗೊಳೆ ಪೇೞ್ದಂ
ತೀ ಮಹಿಗೆ ನೆಗೞ[೭] ಪೇೞ್ದಂ
ದಾಮೋದರತನಯನೀ ವಚೋಲಂಕೃತಿಯಂ ೯೬೧

ಚಂಪಕಮಾಲೆ

ಸಕಲಕಲಾವಿದಂ ಮದವಿದೂರನುದಾರನಮತ್ಸರಂ ಗುಣಾ
ಧಿಕನಭಿಮಾನ[೭]ತುಂಗನವದಾತಯಶಂ ವಿಬುಧೈಕವತ್ಸಲಂ
ಸುಕವಿ ಸರಸ್ವತೀವದನಮಂಗಳದರ್ಪಣನೆಂದು ಕೂರ್ತು[೮] ಕೀ
ರ್ತಿಕುಮನುರಾಗದಿಂ ವಸುಮತೀವಳಯಂ ಕವಿನಾಗವರ್ಮನಂ‡ ೯೬೨

೧-೧ ಪತಾಕಪ್ರಕರ (ನ) ೨ ಸು (ನ) ೩ ಸಾಧ್ಯಂಗಳ್ (ನ) ೪ ಕೇ (ನ) ೫ ನತಿ (ನ)
೬-೬ ೞಂ ಪ್ರಸಾಧಕ (ನ) ೭ ನಿ (ನ) ೮ ನಾಡೆ (ನ)

* ೨ ಪ್ರತಿಗಳಲ್ಲಿ ಈ ಪದ್ಯದೊಡನೆ ಗ್ರಂಥ ಸಮಾಪ್ತಿಯಾಗಿದೆ. (ನ)

‡ ೧ ಪ್ರತಿಯಲ್ಲಿ ಈ ಪದ್ಯದೊಡನೆ ಗ್ರಂಥ ಸಮಾಪ್ತಿಯಾಗಿದೆ. (ನ)

ಹರಿಣೀವೃತ್ತಂ

ಸರಭಸತೆಯಿಂ ಮತ್ತೊಂದಜ್ಞಾನದಿಂದುಚಿತೋಕ್ತಿಯೊಳ್
ಪೊರೆಯದಿದು ತಾನಿನ್ನೊಂದೇನಾನುವಾದೊಡಮಿಲ್ಲಿ ಮ
ತ್ಸರವಿರಹಿತರ್ ಪೌರೋಭಾಗ್ಯವ್ಯಪೇತಮನಸ್ಕರ
ಕ್ಕರಿಗರಧಿಕಪ್ರಜ್ಞರ್ ಕೆಯ್ಕೊಂಡು ತಿರ್ದುಗೆ ದೋಷಮಂ ೯೬೩

ಉತ್ಪಲಮಾಲೆ

ಮಂದರಶೈಲದಂತೆ ದಿವಿಜಾಪಗೆಯಂತೆ ಪಯೋಧಿಯಂತೆ ಪೆಂ
ಪಿಂ ದೊರೆವೆತ್ತ ದೇವಕುಲದಂತೆ ದಿಶಾಗಜರಾಜಿಯಂತೆ ಸೂ
ರ್ಯೇಂದುಗಳಂತೆ ತಾರಗೆಗಳಂತೆ[೧] ಸನಾತನವೇದದಂತೆ ನಿ
ಲ್ಕೆಂದುಮವಿಘ್ನತಾಪ್ರಸರಮಿಂತಿದು ಕೂರ್ತು[೨] ಸಮಸ್ತಧಾತ್ರಿಯೊಳ್ ೯೬೪

ಛಂದೋವಿಚಿತಿಯಲಂಕೃತಿ
ಸಂದಭಿಧಾನ . . . . ಕೋಶಮೆಂಬಿವು ವಾಕ್ಛ್ರೀ
ಸುಂದರಿಗೆ ರತ್ನಮಂಡನ
ದಂದದೊಳಿರ್ದಪುವು ನಾಗವರ್ಮನ ಕೃತಿಗಳ್ ೯೬೫

ಗದ್ಯ

ಇದು ಸಕಲಸುಕವಿಜನಮನಸ್ಸರೋಜಿನೀರಾಜಹಂಸಾಯಮಾನಾನೂನ ಕವಿತಾಗುಣೋದಯಶ್ರೀಮನ್ನಾಗವರ್ಮಪ್ರಣೀತಮಪ್ಪ ಕಾವ್ಯಾವಲೋಕನದೊಳ್

ಕವಿಸಮಯಮೆಂಬುದು ಪಂಚಮಾಧಿಕರಣಂ ಸಮಾಪ್ತಂ

★

ಕಾವ್ಯಾವಲೋಕನಂ ಸಮಾಪ್ತಂ

೧ ತಿರೆಗಣದಂತೆ (ಪ) ೨ ಕೂಡೆ (ಪ)

ಟಿಪ್ಪಣಿಗಳು

ಟಿಪ್ಪಣಿಯಲ್ಲಿ ಉಪಯೋಗಿಸಿದ
ಸಂಕ್ಷಿಪ್ತ ಸಂಜ್ಞೆಗಳು

ಇದೇ	–	ಪ್ರಸ್ತುತ ಗ್ರಂಥವಾದ ಕಾವ್ಯಾವಲೋಕನ
ಉದಾ.	–	ಉದಾಹರಣೆ
ಉದ್ಭಟ	–	ಉದ್ಭಟನ ಕಾವ್ಯಾಲಂಕಾರಸಾರಸಂಗ್ರಹ
ಕವಿಕಾಮ	–	ಕವಿಕಾಮನ ಶೃಂಗಾರರತ್ನಾಕರ
ಕುವಲಯ	–	ಅಪ್ಪಯದೀಕ್ಷಿತನ ಕುವಲಯಾನಂದ (ನಿರ್ಣಯಸಾಗರ ಪ್ರತಿ)
ಜಗನ್ನಾಥ	–	ಜಗನ್ನಾಥಪಂಡಿತನ ರಸಗಂಗಾಧರ (ಕಾವ್ಯಮಾಲಾ ಪ್ರತಿ)
ದಂಡಿ	–	ದಂಡಿಯ ಕಾವ್ಯಾದರ್ಶ
ದರ್ಪಣ	–	ಕೇಶಿರಾಜನ ಶಬ್ದಮಣಿದರ್ಪಣ
ನೋ.	–	ನೋಡಿರಿ
ಭರತ	–	ಭರತಮುನಿಯ ನಾಟ್ಯಶಾಸ್ತ್ರ
ಭಾಮಹ	–	ಭಾಮಹನ ಅಲಂಕಾರ
ಭೂಷಣ	–	ನಾಗವರ್ಮನ ಭಾಷಾಭೂಷಣ
ಮಮ್ಮಟ	–	ಮಮ್ಮಟನ ಕಾವ್ಯಪ್ರಕಾಶ
ಮಾರ್ಗ	–	ನೃಪತುಂಗನ ಕವಿರಾಜಮಾರ್ಗ
ರಾಜಶೇಖರ	–	ರಾಜಶೇಖರನ ಕಾವ್ಯಮೀಮಾಂಸೆ
ರುದ್ರಟ	–	ರುದ್ರಟನ ಕಾವ್ಯಾಲಂಕಾರ
ರುಯ್ಯಕ	–	ರುಯ್ಯಕನ ಅಲಂಕಾರಸೂತ್ರ
ವಾಮನ	–	ವಾಮನನ ಕಾವ್ಯಾಲಂಕಾರಸೂತ್ರ
ವಿಶ್ವನಾಥ	–	ವಿಶ್ವನಾಥನ ಸಾಹಿತ್ಯದರ್ಪಣ
ಶಾಸನ	–	ಭಟ್ಟಾಕಳಂಕನ ಶಬ್ದಾನುಶಾಸನ
ಸೂ.	–	ಸೂತ್ರ
ಹೇಮಚಂದ್ರ	–	ಹೇಮಚಂದ್ರನ ಕಾವ್ಯಾನುಶಾಸನ
ಹೋ.	–	ಹೋಲಿಸಿ ನೋಡಿರಿ

ಸೂಚನೆ:— ಹೆಸರುಗಳ ಮುಂದೆ ಸಂಖ್ಯೆಗಳನ್ನು ಕೊಟ್ಟಲ್ಲಿ ಆಯಾ ಗ್ರಂಥಗಳಲ್ಲಿ ಸೂತ್ರಸಂಖ್ಯೆಯಿದ್ದರೆ ಸೂತ್ರಸಂಖ್ಯೆಯೆಂತಲೂ ಇಲ್ಲದಲ್ಲಿ ಪುಟಸಂಖ್ಯೆಯೆಂತಲೂ ತಿಳಿದುಕೊಳ್ಳಬೇಕು. ಬರಿಯ ಸಂಖ್ಯೆ ಹಾಕಿದಲ್ಲಿ ಕಾವ್ಯಾವಲೋಕನದ ಪದ್ಯಸಂಖ್ಯೆಯೆಂದು ತಿಳಿದುಕೊಳ್ಳಬೇಕು. ಸುಲಭವಾಗಿ ತಿಳಿಯಬಹುದಾದ ಸಂಕ್ಷಿಪ್ತರೂಪಗಳನ್ನು ಇಲ್ಲಿ ಕೊಟ್ಟಿಲ್ಲ.

ಟಿಪ್ಪಣಿಗಳು

ಜೈನಸಂಪ್ರದಾಯದಂತೆ ಕವಿಯು ಮೊದಲನೆಯ ಪದ್ಯದಲ್ಲಿ ಶ್ರೀವರ್ಧಮಾನ ಜಿನನ ಮತ್ತು ಎರಡನೆಯ ಪದ್ಯದಲ್ಲಿ ' ಪರಮಜಿನೇಂದ್ರವಾಣಿಯೆ ' ಆದ ಸರಸ್ವತಿಯ ಪ್ರಾರ್ಥನೆಯನ್ನು ಮಾಡಿ, ಮೂರನೆಯದರಲ್ಲಿ ಕನ್ನಡದಲ್ಲಿ ಕಾವ್ಯಾವಲೋಕನವನ್ನು ರಚಿಸುವುದಾಗಿ ' ಪ್ರತಿಜ್ಞೆ ' ಮಾಡಿ, ನಾಲ್ಕನೆಯದರಲ್ಲಿ ಈ ಕೃತಿಯು ಕವಿಗಳಿಗೆ ಕೆಯ್ಗನ್ನಡಿಯೂ ಕವಿತೆಗೆ ಬಾಳ ಮೊದಲೂ ಆಗುವುದೆಂದು ಆಶಿಸಿ, ಐದನೆಯದರಲ್ಲಿ ಈ ಕೃತಿಯಲ್ಲಿ (೧) ಶಬ್ದಸ್ಮೃತಿ (೨) ಕಾವ್ಯಮಲವ್ಯಾವೃತ್ತಿ (೩) ಗುಣವಿವೇಕ (೪) ರೀತಿಕ್ರಮರಸನಿರೂಪಣ ಮತ್ತು (೫) ಕವಿಸಮಯಗಳೆಂಬ ಅಧಿಕರಣಗಳಿರುವುವೆಂದು ಹೇಳಿರುವನು.

ಶಬ್ದಸ್ಮೃತ್ಯಧಿಕರಣ

ಈ ಅಧಿಕರಣದಲ್ಲಿ ಕವಿಯು ಕನ್ನಡನುಡಿಯ ವ್ಯಾಕರಣವನ್ನು ಕನ್ನಡದಲ್ಲಿ ಸಂಕ್ಷಿಪ್ತವಾಗಿ ಹೇಳಿದ್ದಾನೆ. ಇದೇ ವಿಷಯವನ್ನು ತನ್ನ ಭಾಷಾಭೂಷಣದಲ್ಲಿ ಸಂಸ್ಕೃತದಲ್ಲಿ ಹೆಚ್ಚು ವಿಸ್ತಾರವಾಗಿ ಪ್ರತಿಪಾದಿಸಿದ್ದಾನೆ. ಕೇಶಿರಾಜನ ಶಬ್ದಮಣಿದರ್ಪಣಕ್ಕೆ ಇವನ ಇವೆರಡು ಕೃತಿಗಳೂ ಆಧಾರಗಳಾಗಿವೆ.

೬ — ಈ ಅಧಿಕರಣದಲ್ಲಿ ಮೊದಲು ಸಂಜ್ಞಾಪ್ರಕರಣವಾದ ಮೇಲೆ (೧) ಸಂಧಿ (೨) ನಾಮ (೩) ಸಮಾಸ (೪) ತದ್ಧಿತ (೫) ಆಖ್ಯಾತಗಳೆಂಬ ಪ್ರಕರಣಗಳಿವೆಯೆಂದು ಇಲ್ಲಿ ಹೇಳಿದೆ.

ಪೇಟೆಪಟ್ಟುದರ್ — ಹಳಗನ್ನಡದಲ್ಲಿ ಕರ್ಮಣಿಪ್ರಯೋಗವು ಕ್ವಚಿತ್ತಾಗಿಯಾದರೂ ಇದ್ದಿತೆಂಬುದಕ್ಕೆ ಈ ಉದಾಹರಣೆಯು ಸಾಕ್ಷಿಯಾಗಿರುವುದು. ಇದರಂತೆ ದರ್ಪಣದಲ್ಲಿಯೂ ಹಲವು ಉದಾಹರಣೆಗಳು ದೊರೆಯುವುವು. (ಸೂ. ೭೫, ೧೨೭ ರಿಂದ ೧೨೮ ಇವುಗಳ ವೃತ್ತಿ ನೋಡುವುದು.) ಕರ್ಮಣಿ ಪ್ರಯೋಗವನ್ನು ಮಾಡುವುದಕ್ಕೆ ' ಪಡೆ ' ಅಥವಾ ' ಪಡು ' ಎಂಬ ' ಸಹಾಯಕಾರಿ ' ಕ್ರಿಯಾಪದವನ್ನು ಉಪಯೋಗಿಸುತ್ತಿದ್ದರೆನ್ನಬಹುದು. ದರ್ಪಣದ ಹಾಗೂ ಈ ಗ್ರಂಥದ ಹಸ್ತಲಿಖಿತ ಪ್ರತಿಗಳಲ್ಲಿ ' ಪಡೆ ' ಎಂದು ಕೆಲವಲ್ಲಿ, ' ಪಡು ' ಎಂದು ಬೇರೆಯವುಗಳಲ್ಲಿ ಪಾಠಾಂತರಗಳು ದೊರೆಯುವುವು. ಎರಡೂ ಪ್ರಯೋಗಗಳು ಬಳಕೆಯಲ್ಲಿದ್ದಿರಬಹುದು. ಆದರೆ ಈ ಕವಿಯು ' ಪಡು ' ಎಂಬುದನ್ನು ಬಳಸಿದ್ದನೆಂಬುದಕ್ಕೆ ಈ ಪ್ರಯೋಗವು ಆಧಾರವಾಗಿದೆ.

ಸಂಜ್ಞಾಪ್ರಕರಣ

ವ್ಯಾಕರಣ ಮುಂತಾದ ಶಾಸ್ತ್ರಗಳ ನಿಯಮಗಳನ್ನು ಸೂತ್ರರೂಪವಾಗಿ ಬರೆಯುವ ಪದ್ಧತಿಯನ್ನು ಸಂಸ್ಕೃತದಲ್ಲಿ ಪಾಣಿನಿ ಮೊದಲಾದವರು ಬಳಕೆಯಲ್ಲಿ ತಂದರು. ಸಂಸ್ಕೃತಸಾಹಿತ್ಯದಲ್ಲಿ ಸೂತ್ರಗಳ ಕಾಲವೆಂಬುದೊಂದುಂಟು. ಆ ಕಾಲದಲ್ಲಿ ಎಲ್ಲ ಶಾಸ್ತ್ರಗಳು ಸೂತ್ರಬದ್ಧವಾಗಿ ಮಾಡಲ್ಪಟ್ಟುವೆಂದು ತಿಳಿದುಬರುತ್ತದೆ. ಅದಕ್ಕೆ ಒಂದು ಕಾರಣವೂ ಉಂಟು.

> ಅಲ್ಪಾಕ್ಷರಮಸಂದಿಗ್ಧಂ ಸಾರವದ್ ವಿಶ್ವತೋಮುಖಮ್
> ಅಸ್ತೋಭಮನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ

ಎಂಬಂತೆ ಸೂತ್ರಗಳು ಆದಷ್ಟು ಕಡಿಮೆ ಅಕ್ಷರಗಳಲ್ಲಿಯೂ ಸಂದೇಹವಿಲ್ಲದಂತೆಯೂ ಸಾರರೂಪವಾಗಿಯೂ ನಿಯಮಗಳನ್ನು ರಚಿಸಲಿಕ್ಕೆ ಅನುಕೂಲವಾಗಿರುವುವು. ಕನ್ನಡ ಲಾಕ್ಷಣಿಕರು ಇದೇ ಪದ್ಧತಿಯನ್ನನುಸರಿಸಿರುವರು. ಬರೆಹದ ಮತ್ತು ಮುದ್ರಣದ ಪ್ರಚಾರವು ಇಲ್ಲದ ಆ ಕಾಲದಲ್ಲಿ ಸೂತ್ರರೂಪವಾಗಿ ವಿಷಯಗಳನ್ನು ನೆನಪಿಡುವುದು ಸುಲಭವಾಗಿತ್ತೆಂದು ಬೇರೆ ಹೇಳುವ ಕಾರಣವಿಲ್ಲ. ಆದರೆ ಸೂತ್ರದ ಕಟ್ಟಿಗೆ ಬಿದ್ದು ಪಾಣಿನಿ ಮೊದಲಾದ ಶಾಸ್ತ್ರಕಾರರು ಶಾಸ್ತ್ರಗಳನ್ನೆಲ್ಲಾ ನೀರಸವಾಗಿಯೂ ಕಠಿಣವಾಗಿಯೂ ಹಲವುಸಾರೆ ಸಂದಿಗ್ಧವಾಗುವಂತೆಯೂ ಮಾಡಿಬಿಟ್ಟಿದ್ದಾರೆ. ಅದಕ್ಕಾಗಿಯೇ ಸೂತ್ರದ ಆಶಯವನ್ನು ಹೇಳುವುದಕ್ಕಾಗಿ ಅವರೇ ಆಗಲೀ ಅವರ ಅನುಯಾಯಿಗಳಾಗಲೀ ಸೂತ್ರಗಳಿಗೆ ವೃತ್ತಿಗಳನ್ನೋ ವ್ಯಾಖ್ಯಾನಗಳನ್ನೋ ಬರೆಯಬೇಕಾಯಿತು. ಇದರಿಂದ ಭಿನ್ನಾಭಿಪ್ರಾಯಗಳಿಗೂ ಎಡೆಯುಂಟಾಯಿತು. ಆದರೆ ಕನ್ನಡ ಲಾಕ್ಷಣಿಕರು ಸೂತ್ರವೆಂದು ಕರೆದಾಗ್ಯೂ ಅವುಗಳನ್ನು ಅಷ್ಟೊಂದು ಗಡಚಾಗಿ ಮಾಡಿಲ್ಲ. ಆದರೂ ಅವುಗಳನ್ನು ಪದ್ಯರೂಪವಾಗಿ ಬರೆದಿರುವುದರಿಂದ ದರ್ಪಣಕಾರನು —

> ಪ್ರಾಸಚ್ಛಂದೋನ್ವಯವಿ
> ನ್ಯಾಸದಿನಂತಿಂತು ಶಬ್ದಮಿರ್ಕುಂ ವೃತ್ತಿ
> ವ್ಯಾಸಂ ತದ್ವ್ಯಾಕುಳಮಂ
> ದಾ ಸೂತ್ರಕ್ಕರ್ಥವೃತ್ತಿ ವರ್ತಿಸೆ ಬರೆದೆಂ

ಎಂದು ಒಪ್ಪಿಕೊಂಡಿರುವಂತೆ ಇವರಿಗಾದರೂ ವೃತ್ತಿಗಳನ್ನು ಬರೆಯುವ ಅಗತ್ಯವುಂಟಾಯಿತು. ಆದರೆ ಈ ಗ್ರಂಥದಲ್ಲಿ ಕವಿಯು 'ಭ್ರಾಂತಿನಿಸುಂ ಪೊರ್ದದಲ್ಲಿ ತಾನೆಂಬಂತಿರೆ' ವೃತ್ತಿಯಿಲ್ಲದೆಯೇ ಸೂತ್ರಗಳನ್ನು ಹೇಳಿರುವುದೊಂದು ವಿಶೇಷ.

ಸೂತ್ರ ೧-೬

ಇವುಗಳಲ್ಲಿ ಕವಿಯು ಕನ್ನಡದ ವರ್ಣಮಾಲೆಯನ್ನು ಕುರಿತು ಹೇಳಿರುವನು. ಕನ್ನಡದಲ್ಲಿ ಬಳಕೆಯಲ್ಲಿರುವ ವರ್ಣಮಾಲೆಯು ಕನ್ನಡ ಮತ್ತು ಸಂಸ್ಕೃತ ಶಬ್ದಗಳ ಬರೆವಣಿಗೆಗೆ ಅನುಕೂಲವಾಗುವಂತೆ ರಚಿತವಾಗಿರುವುದು. ದರ್ಪಣಕಾರನು ಈ ವರ್ಣಮಾಲೆಯಲ್ಲಿ ಅ ಕಾರದಿಂದ ಳ ಕಾರದ ವರೆಗೆ ೪೮ ಅಕ್ಷರಗಳಿರುವುವೆಂದು ಹೇಳಿರುವನು. (ಇವುಗಳಲ್ಲದೆ ಸಂಸ್ಕೃತದಿಂದ ಬಂದ 'ಅನುಸ್ವಾರ, ವಿಸರ್ಗ, ಜಿಹ್ವಾಮೂಲೀಯ, ಉಪಧ್ಮಾನೀಯ'ಗಳೆಂಬ ನಾಲ್ಕು ಯೋಗವಾಹಗಳನ್ನೂ ಹೇಳಿರುವನು.) ನಾಗವರ್ಮನು 'ಕ್ಷಳ' ವನ್ನು ಬಿಟ್ಟು ೪೭ ವರ್ಣ (ಸ್ವರ ೧೪+ವ್ಯಂಜನ ೩೩) ಗಳನ್ನು ಹೇಳಿರುವನು. ಕೇವಲ ಸಂಸ್ಕೃತ ಶಬ್ದಗಳಿಗೆ ಬೇಕಾಗುವ ಋ ೠ ಌ ೡ, ಶ, ಷ ಇವುಗಳನ್ನು ಬಿಟ್ಟು ಅಚ್ಚಗನ್ನಡ ಶಬ್ದಗಳಿಗೆ ಬೇಕಾಗುವ ದೇಶೀಯಗಳಾದ ಎ, ಒ, ಱ, ೞ, ಳ (ಕುಳ) ಇವುಗಳನ್ನು ಕೂಡಿಸಿ ಬಿಂದುವಿನೊಡನೆ ಕನ್ನಡಕ್ಕೆ ೪೭ ಶುದ್ಧಗೆಗಳೆಂದು ದರ್ಪಣಕಾರನು ಗ್ರಹಿಸಿರುತ್ತಾನೆ. ಶಬ್ದಾನುಶಾಸನಕಾರನು ಅ, ಇ, ಉ, ಋ, ಌ, ಎ, ಒ ಈ ಸ್ವರಗಳ ಹ್ರಸ್ವ, ದೀರ್ಘ, ಪ್ಲುತ ರೂಪಗಳನ್ನೂ ಐ, ಔ ಸ್ವರಗಳ ದೀರ್ಘ, ಪ್ಲುತ ರೂಪಗಳನ್ನೂ ಕೂಡಿ ೨೫ ಸ್ವರಗಳನ್ನೂ ಸಂಸ್ಕೃತದಂತೆ ೨೫ ವರ್ಗಾಕ್ಷರಗಳನ್ನೂ ಯ ರ ಲ ವ ಶ ಷ ಸ ಹ, ಱ, ಳ ಈ ೧೦ ಅವರ್ಗೀಯಗಳನ್ನೂ ೪ ಯೋಗವಾಹಗಳನ್ನೂ ಸೇರಿಸಿ ೬೪ ಅಕ್ಷರಗಳೆಂದೂ ಇವುಗಳಿಗೆ ೞ ಮತ್ತು ಕ್ಷಳ ಗಳನ್ನು ಕೂಡಿಸಿದರೆ ೬೬ ಆಗುವುದಾದರೂ ೞ, ಕುಳ, ಕ್ಷಳಗಳನ್ನು ಬೇರೆಬೇರೆಯಾಗಿ ಎಣಿಸಬಾರದೆಂದೂ ಅಭಿಪ್ರಾಯ ಪಡುತ್ತಾನೆ. ಕುಳವು ಸಂಸ್ಕೃತ ಲ ಕಾರದ ಪ್ರತಿಯಾಗಿ ಉಪಯೋಗವಾದಾಗ ಕ್ಷಳವಾಗುವುದೆಂದೂ ಸಂಸ್ಕೃತ ಡ ಕಾರದ ನೆಲೆಗೆ ನಿಂತಾಗ ೞವಾಗುವುದೆಂದೂ ಮೂಲತಃ ಅದು ಒಂದೇ ಅಕ್ಷರವೆಂದೂ ಶಾಸನಕಾರನ ಅಭಿಪ್ರಾಯ. ಆದರೆ ಕನ್ನಡದಲ್ಲಿ ಮೊತ್ತಮೊದಲು ಅ ಆ ಇ ಈ ಉ ಊ, ಎ ಏ ಐ ಒ ಓ ಔ, ಎಂಬ ೧೨ ಸ್ವರಗಳೂ ಕ, ಗ, ಙ, ಚ, ಜ, ಞ, ಟ, ಡ, ಣ, ತ, ದ, ನ, ಪ, ಬ, ಮ, ಯ ರ ಲ ವ, ಸ ಹ, ಱ, ೞ, ಳ ಎಂಬ ೨೪ ವ್ಯಂಜನಗಳೂ ಮಾತ್ರ ಇದ್ದಂತೆ ಕಂಡುಬರುತ್ತದೆ. ಭಾಷಾಭೂಷಣದ ೨ನೆಯ ಸೂತ್ರದ ಟಿಪ್ಪಣಿಯಲ್ಲಿ ಮ॥ ರೈಸ್ ಸಾಹೇಬರು ಇವುಗಳೊಡನೆ ಅನುಸ್ವಾರ-ವಿಸರ್ಗಗಳನ್ನೂ ಸೇರಿಸಿರುವರಾದರೂ ಅವು ಮೂಲತಃ ಕನ್ನಡದಲ್ಲಿ ಇದ್ದಿರಲಿಕ್ಕಿಲ್ಲವೆಂದು ತೋರುತ್ತದೆ. ಕೆಲವರು ಐ, ಔ ಎಂಬ ಸಂಯುಕ್ತ ಸ್ವರಗಳನ್ನು ಕನ್ನಡದಲ್ಲಿ ಅಯ್, ಅವ್ ಎಂದು ಬರೆಯಬಹುದಾದುದರಿಂದ ಅವೂ ಕನ್ನಡ ಮೂಲವರ್ಣಮಾಲೆಗೆ ಸೇರತಕ್ಕುವಲ್ಲವೆಂದು ಅಭಿಪ್ರಾಯಪಡುತ್ತಾರೆ.

ಮನುಷ್ಯನ ಕಂಠನಾಳ–ಮುಖವಿವರ–ನಾಸಿಕೆಗಳಲ್ಲಿ ಹಾಯ್ದು ಓಡಾಡುವ ಶ್ವಾಸವಾಯುವೇ (ವರ್ಣಾತ್ಮಕಾಧ್ವನಿ ಅಥವಾ) ' ಶಬ್ದ 'ವನ್ನು ಉಂಟುಮಾಡು ವುದು. ಮುಖವಿವರದಲ್ಲಿಯ ಬೇರೆ ಬೇರೆ ಭಾಗಗಳನ್ನು ನಾಲಗೆಯು ಸ್ಪರ್ಶಿಸುವುದ ರಿಂದಲೂ ಕಂಠನಾಳದಲ್ಲಿರುವ ಘೋಷತಂತ್ರಿ (vocal chord)ಯ ನಿಯಂತ್ರಣ ದಿಂದಲೂ ಶ್ವಾಸವನ್ನು ಬೇಕಾದಾಗ ತಡೆದು ಬೇಕಾದಾಗ ಬಿಡುವುದರಿಂದಲೂ ಉಚ್ಚಾರಭೇದಗಳುಂಟಾಗಿ ಭಿನ್ನಭಿನ್ನಾಕ್ಷರಗಳು ಜನಿಸುವುವು. ಹೀಗೆ ಹುಟ್ಟುವ ಧ್ವನಿವಿಶೇಷಗಳೆಲ್ಲವೂ ಒಂದೇ ವರ್ಣಮಾಲೆಯಲ್ಲಿರಬೇಕೆಂಬ ನಿಯಮವಿಲ್ಲ. ಒಂದೊಂದು ಭಾಷೆಯ ವರ್ಣಮಾಲೆಯಲ್ಲಿ ಕೆಲವು ವರ್ಣಗಳು ಹೆಚ್ಚಾಗಿರುವುದಕ್ಕೂ ಕೆಲವು ಇಲ್ಲದೆ ಇರುವುದಕ್ಕೂ ಇದೇ ಮುಖ್ಯ ಕಾರಣವೆನ್ನಬಹುದು. ಸಂಸ್ಕೃತ ಶಿಕ್ಷಾ (Phonetics) ಶಾಸ್ತ್ರಕಾರರು ಇವೆಲ್ಲ ವಿಚಾರಗಳನ್ನು ಆಧುನಿಕರಿಗೂ ಆಶ್ಚರ್ಯ ವಾಗುವ ರೀತಿಯಲ್ಲಿ ವಿಶದವಾಗಿ ವಿವರಿಸಿದ್ದಾರೆ. ಕನ್ನಡ ವ್ಯಾಕರಣಕಾರರು ಈ ವಿಚಾರಗಳನ್ನು ಸ್ಪಷ್ಟವಾಗಿ ಹೇಳಿಲ್ಲವಾದರೂ ಸಂಸ್ಕೃತ ಶಾಸ್ತ್ರವನ್ನೇ ಅಂಗೀಕರಿಸಿ ದ್ದಾರೆಂಬುದು ದರ್ಪಣ (೩೦, ೩೪) ದಿಂದ ತಿಳಿದು ಬರುತ್ತದೆ.

ಕಂಠ, ತಾಲು, ಶಿರ, ದಂತ, ಓಷ್ಠ, ನಾಸಿಕೆ, ಜಿಹ್ವಾಮೂಲ, ಉರ, ಎಂದು ೮ ವರ್ಣೋತ್ಪತ್ತಿಸ್ಥಾನಗಳಿರುವುವು. ಶ್ವಾಸವಾಯುವನ್ನು ನಾಲಗೆ-ಘೋಷತಂತ್ರಿ ಗಳಿಂದ ಹೆಚ್ಚುಕಡಿಮೆ ಮಾಡುವುದಕ್ಕೆ ಬೇಕಾಗುವ ಪ್ರಯತ್ನಗಳು – ಅಭ್ಯಂತರ (ವರ್ಣಗಳು ಹುಟ್ಟುವ ಪೂರ್ವದಲ್ಲಿ ಮಾಡಬೇಕಾದುವು), ಬಾಹ್ಯ (ವರ್ಣೋತ್ಪತ್ತಿ ಯನಂತರದವು)–ಎಂದು ಎರಡು ವಿಧ. ಅಭ್ಯಂತರದಲ್ಲಿ ಸ್ಪೃಷ್ಟ, ಈಷತ್-ಸ್ಪೃಷ್ಟ ವಿವೃತ, ಈಷದ್‌ವಿವೃತ, ಸಂವೃತ ಎಂದೂ ಬಾಹ್ಯದಲ್ಲಿ ವಿವಾರ, ಸಂವಾರ, ಶ್ವಾಸ, ನಾದ, ಘೋಷ, ಅಘೋಷ, ಅಲ್ಪಪ್ರಾಣ, ಮಹಾಪ್ರಾಣ ಎಂದೂ ಭೇದಗಳುಂಟು. ಒಂದು ಸ್ಥಾನದಲ್ಲಿ ಹುಟ್ಟುವ ಸ್ವರಗಳಿಗೂ ಅದರಂತೆ ವ್ಯಂಜನಗಳಿಗೂ ಪರಸ್ಪರ ' ಸವರ್ಣ ' ಗಳೆಂದು ಹೆಸರು. ಆದರೆ ಅದೇ ಸ್ಥಾನದಲ್ಲಿ ಹುಟ್ಟಿದ ಸ್ವರ–ವ್ಯಂಜನಗಳಿಗೆ ಪರಸ್ಪರ ಸವರ್ಣತ್ವವಿಲ್ಲ. ಇವೆಲ್ಲದರ ವಿವರಣೆಗಾಗಿ ಮುಂದಿನ ಪಟ್ಟಿಯನ್ನು ನೋಡುವುದು.

ಸಂಸ್ಕೃತದಲ್ಲಿಲ್ಲದ ಕನ್ನಡ ಮೊದಲಾದ ದ್ರಾವಿಡಭಾಷೆಗಳಲ್ಲಿ ಬಳಕೆಯಲ್ಲಿರುವ ಱ–ೞ ಗಳು ರ–ಡ ಗಳನ್ನು ' ಬೆಟ್ಟಿತ್ತಾಗಿ ' ಉಚ್ಚರಿಸುವುದರಿಂದ ಹುಟ್ಟುವುವೆಂದು ಕೇಶಿರಾಜನು ಹೇಳಿರುವುದರಿಂದ ಅವು ಮೂರ್ಧನ್ಯ (ಶಿರದಲ್ಲಿ ಹುಟ್ಟುವುವು) ಗಳಲ್ಲಿ ಸೇರತಕ್ಕುವು. ಚ–ಜ ಗಳನ್ನು ದ್ರಾವಿಡಭಾಷೆಗಳಲ್ಲಿ ಸಂಸ್ಕೃತದಲ್ಲಿರುವಂತೆ ತಾಲವ್ಯ ಗಳಾಗಿ ಉಚ್ಚರಿಸುವುದಲ್ಲದೆ ದಂತ್ಯಗಳಾಗಿಯೂ ಉಚ್ಚರಿಸುವುದುಂಟು. ಈ ಉಚ್ಚಾರವು ' ಅ ಆ, ಉ ಊ, ಒ ಓ ಔ ' ಈ ಸ್ವರಗಳಿಂದ ಕೂಡಿದ ಚ–ಜ ಗಳಲ್ಲಿ ಹೆಚ್ಚು ಸ್ಪಷ್ಟವಾಗಿ ಪ್ರಕಟವಾಗುತ್ತದೆ.

ಆಭ್ಯಂತರ ಪ್ರಯತ್ನಗಳು	ವ್ಯಂಜನ							ಸ್ವರ	
	ಸ್ಪೃಷ್ಟ (ವರ್ಗೀಯಗಳು)					ಈಷತ್ ಸ್ಪೃಷ್ಟ	ಈಷತ್ ವಿವೃತ		
ವರ್ಣಗಳ ಉತ್ಪತ್ತಿ ಸ್ಥಾನಗಳು	ಸ್ಪರ್ಶವರ್ಣಗಳು					ಅಂತಸ್ಥಗಳು	ಊಷ್ಮಗಳು	ವಿವೃತ	ಸಂವೃತ
	ಕರ್ಕಶ		ಮೃದು						
	೧	೨	೩	೪	೫ ಅನುನಾಸಿಕ				
ಕಂಠ	ಕ್	ಖ್	ಗ್	ಘ್	ಙ್	ಹ್	ಃ(೨)	ಅ(ವರ್ಣ)	ಪ್ರಯೋಗಾವಸ್ಥೆಯಲ್ಲಿಯ 'ಅ'
ತಾಲು	ಚ್	ಛ್	ಜ್	ಝ್	ಞ್	ಯ್	ಶ್	{ ಇ ,, ಎ (೫)	
ಶಿರಸ್ಸು	ಟ್	ಠ್	ಡ್	ಢ್	ಣ್	ರ್	ಷ್	ಋ ,,	
ದಂತ	ತ್	ಥ್	ದ್	ಧ್	ನ್	ಲ್	ಸ್	ಌ ,,	
ಓಷ್ಠ	ಪ್	ಫ್	ಬ್	ಭ್	ಮ್(೧)	ವ್ (೪)	ಃ(೩)	{ ಉ ,, ಒ (೫)	
ಬಾಹ್ಯ ಪ್ರಯತ್ನಗಳು	ಅಲ್ಪಪ್ರಾಣ	ಮಹಾಪ್ರಾಣ	ಅಲ್ಪಪ್ರಾಣ	ಮಹಾಪ್ರಾಣ	ಅಲ್ಪಪ್ರಾಣ		ಮಹಾಪ್ರಾಣ	ಅಲ್ಪಪ್ರಾಣ	
	ವಿವಾರ		ಸಂವಾರ				ವಿವಾರ	ಸಂವಾರ	
	ಶ್ವಾಸ		ನಾದ				ಶ್ವಾಸ	ನಾದ	
	ಅಘೋಷ		ಘೋಷ				ಅಘೋಷ	ಘೋಷ	

ವಿಶೇಷ ಸಂಗತಿಗಳು :—

(೧) 'ಅನುಸ್ವಾರ'ವನ್ನು ಅನುನಾಸಿಕೆಯೆಂದೆ ಗಣಿಸುವರು.

(೨) ಈ (ಃ) ಚಿಹ್ನದಲ್ಲಿ 'ವಿಸರ್ಗ', 'ಜಿಹ್ವಾಮೂಲೀಯ' ಗಳೆರಡೂ ಸಮಾವೇಶವಾಗುತ್ತವೆ. (ಜಿಹ್ವಾಮೂಲೀಯವೆಂದರೆ ಕ ಕಾರದ ಮೊದಲು ಬರುವ ವಿಸರ್ಗ. ಉದಾಹರಣೆ: 'ಅಂತಃಕರಣ')

(೩) ಇದು 'ಉಪಧ್ಮಾನೀಯ'ವು (ಎಂದರೆ ಪ ಕಾರದ ಮೊದಲು ಬರುವ ವಿಸರ್ಗ. ಉದಾಹರಣೆ: 'ಅಂತಃಪುರ')

(೪) ವ ಕಾರವು ದಂತೌಷ್ಠ್ಯವೆಂದು ಗ್ರಹಿಸುತ್ತಾರೆ.

(೫) ಎ ವರ್ಣವು ಕಂಠತಾಲುಸ್ಥಾನದಲ್ಲಿ ಜನಿಸುವುದೆಂದೂ ಒ ವರ್ಣವು ಕಂಠೋಷ್ಠದಲ್ಲಿ ಜನಿಸುವುದೆಂದೂ ಸಂಸ್ಕೃತ ವ್ಯಾಕರಣಕಾರರು ಗ್ರಹಿಸುವರು.

ಸೂತ್ರ ೧-೨

ಸೂ. ೧ ಕ್ಕೆ ಭೂಷಣ ೩, ೬; ದರ್ಪಣ ೬, ೧೩; ಶಾಸನ ೨
ಸೂ. ೨ ಕ್ಕೆ ಭೂಷಣ ೪; ದರ್ಪಣ ೭, ೧೦; ಶಾಸನ ೩, ೪

ಸ್ವರ — 'ಸ್ವಯಂ ರಾಜಂತೇ ಸ್ಪಷ್ಟೋಚ್ಚಾರಣೇನ ಪ್ರಕಾಶಂತೇ ಇತಿ ಸ್ವರಾಃ' ಎಂಬ ವ್ಯುತ್ಪತ್ತಿಯಿಂದ ಸ್ವರಗಳೆಂದರೆ ಬೇರೆ ವರ್ಣಗಳ ಸಹಾಯವಿಲ್ಲದೆ ಉಚ್ಚರಿಸಲಿಕ್ಕೆ ಬರುವ ವರ್ಣಗಳು ಎಂದು ಅರ್ಥವಾಗುವುದು.

ವ್ಯಂಜನ —'ವ್ಯಂಜಂತಿ ಪ್ರಕಾಶಂತೇ ಸ್ವರಸಹಾಯೇಣ ಇತಿ ವ್ಯಂಜನಾನಿ' ಎಂಬ ವ್ಯುತ್ಪತ್ತಿಯಿಂದ ವ್ಯಂಜನಗಳು ಸ್ವರಸಹಾಯವಿಲ್ಲದೆ ಉಚ್ಚರಿಸಲಿಕ್ಕೆ ಬಾರದ ವರ್ಣಗಳೆಂದು ತಿಳಿಯುವುದು.

ಅರೆಮಾತ್ರಿಕೆಗಳ್ — ಒಂದು ಹ್ರಸ್ವಸ್ವರವನ್ನು ಉಚ್ಚರಿಸಲಿಕ್ಕೆ ಬೇಕಾಗುವಷ್ಟು ಕಾಲಪ್ರಮಾಣಕ್ಕೆ ಒಂದು ಮಾತ್ರೆಯೆಂದೂ ದೀರ್ಘಸ್ವರಕ್ಕೆ ಎರಡು ಮಾತ್ರೆಯೆಂದೂ ಪ್ಲುತಕ್ಕೆ ಮೂರು ಮಾತ್ರೆಯೆಂದೂ ವ್ಯಾಕರಣಕಾರರು ಗ್ರಹಿಸಿರುವರು. ದರ್ಪಣಕಾರನು ೧೦ನೆಯ ಸೂತ್ರದ ವೃತ್ತಿಯಲ್ಲಿ 'ಎರಡು ವ್ಯಂಜನಮನುಚ್ಚರಿಸುವನಿತುಕಾಲಂ ಮಾತ್ರೆಯೆಂಬುದು' ಎಂದು ಹೇಳಿದ್ದಾನೆ. ವ್ಯಂಜನಗಳ ಸ್ಪಷ್ಟೋಚ್ಚಾರವನ್ನು ಮಾಡುವುದಕ್ಕಾಗಿ ಅವುಗಳಿಗೆ ಅ ಕಾರವನ್ನು ಸೇರಿಸುವುದು ರೂಢಿಯಾಗಿದೆ. ಆದರೆ ಹಳಗನ್ನಡ ಮತ್ತು ಇತರ ದ್ರಾವಿಡಭಾಷೆಗಳ ಸಂಧಿನಿಯಮಗಳನ್ನು ಪರಿಶೀಲಿಸಿದಲ್ಲಿ ಕೆಲವುಕಡೆ ಲೋಪವಾಗುತ್ತಿರುವ ಉ ಕಾರವು ಇದೇ ಕಾರ್ಯವನ್ನು ಮಾಡುತ್ತಿತ್ತೆಂದು ತೋರುತ್ತದೆ. ಈಗಲಾದರೂ ಇಂಗ್ಲಿಷು ಮೊದಲಾದ ಪರಭಾಷೆಗಳ ಶಬ್ದಗಳನ್ನು ಕನ್ನಡಕ್ಕೆ ತೆಗೆದುಕೊಂಡಾಗ ಕೊನೆಯ ವ್ಯಂಜನಕ್ಕೆ ಉ ಕಾರವನ್ನು ಸೇರಿಸುವ ರೂಢಿಯುಂಟು. ಈ ಉ ಕಾರಕ್ಕೆ ತಮಿಳಿನಲ್ಲಿ 'ಕುಱ್ಱಿಯಲುಕರಂ' (ಕಿರಿಯ ಉ ಕಾರ) ಎನ್ನುತ್ತಾರೆ. ಹಳಗನ್ನಡದಲ್ಲಿ ವ್ಯಂಜನಾಂತಗಳಾದ ಶಬ್ದಗಳಿಗೆ ಉ ಕಾರವನ್ನು ಕೂಡಿಸುವುದರಿಂದ ಹೊಸಗನ್ನಡ ರೂಪಗಳು ಸಾಧಿತವಾಗಿವೆ.

೮, ೯ — ಈ ಉದಾಹರಣೆಗಳು ಸ್ವರ ಮತ್ತು ವ್ಯಂಜನಗಳ ಸಂಖ್ಯೆಯನ್ನು ಮಾತ್ರ ತಿಳಿಸುತ್ತವೆ. ಹಾಗೆಯೇ ೧೩, ೧೪, ೧೬ನೆಯ ಪದ್ಯಗಳಲ್ಲಿಯೂ ಸಂಖ್ಯೆಗಳನ್ನಷ್ಟೇ ಗ್ರಹಿಸತಕ್ಕದ್ದು.

೧೧ — ದರ್ಪಣ ೧೦, ಭೂಷಣ ೧೦. ಹೋ : ಉದ್ಭಟಕಾವ್ಯ ೧೦-೧೧೪:

ತೆಕ್ಕನೆ ತೀವಿದ ಹರ್ಷಂ
ಮಿಕ್ಕುಪವಲ್ಲಭರೊಳೊಲ್ದು ಕುಲಟಾತತಿ ಸ
ವ್ಯಕ್ತಾಮಕ್ರೀಡೆಯಿನಿರೆ
ಕುಕ್ಕೂಕೋ ಎಂದು ಕೋೞಿ ಕೂಗಿದುವಾಗಳ್

ಇಲ್ಲಿ ' ಕೋ ' ಎಂಬುದನ್ನು ಪ್ಲುತಕ್ಕೆ ಉದಾಹರಣೆಯಾಗಿ ಕೊಟ್ಟಿದ್ದರೂ ಛಂದಸ್ಸಿನ ದೃಷ್ಟಿಯಿಂದ ಅದು ಗುರು (೨ ಮಾತ್ರೆ) ಎಂದೇ ಗಣಿಸಲ್ಪಡುತ್ತದೆ.

ಸೂತ್ರ ೩

ದರ್ಪಣ ೯, ೧೦

ಸ್ವರಗಳಲ್ಲಿ ಅ ಆ ಕಾರಗಳನ್ನು ಬಿಟ್ಟು ಉಳಿದುವುಗಳಿಗೆ ' ನಾಮಿ 'ಯೆಂದು ಹೆಸರು. ನಾಮಿ ಎಂದರೆ ತ ವರ್ಗ ಮುಂತಾದ ದಂತ್ಯಗಳನ್ನು ಟ ವರ್ಗ ಮುಂತಾದ ಮೂರ್ಧನ್ಯಗಳನ್ನಾಗಿ ಮಾಡುವ ಶಕ್ತಿಯುಳ್ಳುವು ಎಂದರ್ಥ. (ಉದಾಹರಣೆ : ಮೌಲಿ+ಸ್ಥ = ಮೌಲಿಷ್ಠ; ಆದರೆ ಪದ+ಸ್ಥ = ಪದಸ್ಥ)

' ಏ, ಐ, ಓ, ಔ ' ಗಳು ಕ್ರಮವಾಗಿ ಅ+ಇ, ಅ+ಏ, ಅ+ಉ, ಅ+ಓ ಇವುಗಳು ಗುಣಸಂಧಿ ನಿಯಮದಿಂದ ಕೂಡಿ ಆಗುತ್ತವೆಂದು ಗ್ರಹಿಸಿ ಸಂಸ್ಕೃತ ವ್ಯಾಕರಣಕಾರರು ಅವುಗಳನ್ನು ಸಂಧ್ಯಕ್ಷರಗಳೆಂದು ಕರೆದಿರುತ್ತಾರೆ. ಆದರೆ ಕಿಟ್ಟೆಲ್ ಸಾಹೇಬರು(Grammar of Kannada Language p. 185) ಕನ್ನಡ ಸಂಧಿ ನಿಯಮದಂತೆ ಐ, ಔ ಗಳನ್ನು ಒಂದು ವೇಳೆ ಸಂಧ್ಯಕ್ಷರಗಳೆಂದು ಕರೆಯಬಹುದಾದರೂ ' ಏ, ಓ ' ಗಳು ಕನ್ನಡಕ್ಕೆ ' ಎ, ಒ ' ಗಳಂತೆ ಸಹಜವಾದುವುಗಳು ಎಂದು ಹೇಳುತ್ತಾರೆ. (ನೋ: ದರ್ಪಣ ೮)

೧೩ — ದರ್ಪಣ ೯, ೧೦

೧೪ — ದರ್ಪಣ ೧೦; ಶಾಸನ ೪೩

ಸೂತ್ರ ೪

ಭೂಷಣ ೬, ೭; ದರ್ಪಣ ೧೩; ಶಾಸನ ೬, ೭

೧೫ — ದರ್ಪಣ ೧೫; ಶಾಸನ ೮೦

ಸೂತ್ರ ೫

ಭೂಷಣ ೮, ೯; ದರ್ಪಣ ೧೫, ೧೬

ಇಲ್ಲಿ ' ಯ, ವ, ಲ ' ಗಳು ಅನುನಾಸಿಕಗಳೂ ನಿರನುನಾಸಿಕಗಳೂ ಎಂದು ಹೇಳಿರುವುದು ಸಂಸ್ಕೃತ ವ್ಯಾಕರಣಾನುಸಾರವಾಗಿಯೂ(Kielhorn's Sanskrit

Grammar p.5) ಕನ್ನಡದ ರೂಢಿಗನುಸಾರವಾಗಿಯೂ ಇರುತ್ತದೆ. ಕನ್ನಡದ ಮಟ್ಟಿಗೆ ಇವುಗಳೊಡನೆ ರ ಳ ಕಾರವನ್ನು ಕೂಡಿಸಿಕೊಳ್ಳಬಹುದೆಂದು ತೋರುತ್ತದೆ. ಈ ವ್ಯಂಜನಗಳಿಂದ ಅಂತ್ಯವಾಗುವ ಕೆಲವು ಧಾತುಗಳ ಭೂತಕಾಲದ ರೂಪದಲ್ಲಿ ಈ ಅನುನಾಸಿಕತ್ವವು ಚೆನ್ನಾಗಿ ವ್ಯಕ್ತವಾಗುವುದು.* [ಉದಾಹರಣೆ: 'ಬಂದಂ, ಆಟಂದು, ನಿಂದಂ, ಕೊಂದಂ, ಕೊಂಡಂ, ಉಂಟು' ಇತ್ಯಾದಿ.] 'ಮಿಾ, ಬೇ' ಧಾತುಗಳ ಭೂತಕಾಲರೂಪಗಳು 'ಮಿಂದಂ, ಬೆಂದಂ' ಎಂದಾಗುವುದರಿಂದ ಇವು 'ಮಿಯ್, ಬೆಯ್' ಎಂದೇ ಒಂದು ಕಾಲಕ್ಕೆ ಇದ್ದಿರಬಹುದೆಂದು ತೋರುತ್ತದೆ. ಕನ್ನಡದಲ್ಲಿ 'ಬೆಳ್ಳಿ' ಎಂಬುದೇ ತೆಲುಗಿನಲ್ಲಿ 'ವೆಂಡಿ' ಎಂದು ಬೇರೆ ರೂಪವನ್ನು ತಾಳಿರುವುದು ಈ ಅನುನಾಸಿಕತ್ವದ ಪರಿಣಾಮವೆಂದೇ ಹೇಳಬಹುದು.

೧೯, ೨೦, ೨೧ — ೧೯ನೆಯ ಪದ್ಯದ ಪ್ರಾಸಸ್ಥಾನದ ಯ ಕಾರ, ೨೦ನೆಯ ಪದ್ಯದ ೪ನೆಯ ಪಾದದಲ್ಲಿರುವ 'ಸೇವೆ' ಶಬ್ದದ ವ ಕಾರ, ೨೧ನೆಯ ಪದ್ಯದ ಪ್ರಾಸಸ್ಥಾನದ ಲ ಕಾರಗಳು ಅನುನಾಸಿಕಗಳೆಂದು ತಿಳಿಯಬೇಕು. (ಹೆಚ್ಚಿನ ಉದಾಹರಣೆಗಳನ್ನು ದರ್ಪಣ ಸೂ. ೧೬ರ ಕೆಳಗೆ ನೋಡುವುದು.)

ಸೂತ್ರ ೬

ಭೂಷಣ ೧೦, ೧೧; ದರ್ಪಣ ೧೪, ೧೫; ಶಾಸನ ೧೮ ವೃತ್ತಿ; ಇದೇ ೧೩

ಕನ್ನಡದಲ್ಲಿ ಮಹಾಪ್ರಾಣಗಳು ಸಂಖ್ಯೆ ಮತ್ತು ಅನುಕರಣವಾಚಕ ಶಬ್ದಗಳಲ್ಲಿ ಇರುವುವೆಂದು ಇಲ್ಲಿ ಹೇಳಿದೆ. ದರ್ಪಣಕಾರನು ಸೂ. ೧೫ ರಲ್ಲಿ ಇದನ್ನು ಸಮರ್ಥಿಸಿರುವನಲ್ಲದೆ —

ಒಳವು ಮಹಾಪ್ರಾಣಂಗಳ್
ವಿಳಸತ್ ಕರ್ಣಾಟಭಾಷೆಯೊಳ್ ಕೆಲವು ನಿಜೋ
ಜ್ವಳವಾಗಿ ... .

ಎಂದು ಹೇಳಿ ವೃತ್ತಿಯಲ್ಲಿ ಅನೇಕ ಉದಾಹರಣೆಗಳನ್ನು ಕೊಟ್ಟಿರುವನು. ಆದರೆ ಈ ಉದಾಹರಣೆಗಳಲ್ಲಿ ಅಚ್ಚಗನ್ನಡ ಶಬ್ದಗಳು ಒಂದೂ ಇಲ್ಲವೆಂದೂ ಇವುಗಳಲ್ಲಿಯ ಮಹಾಪ್ರಾಣಗಳು ಸಂಸ್ಕೃತ ಅಥವಾ ಪ್ರಾಕೃತ ಭಾಷೆಗಳ ಪ್ರಭಾವದಿಂದ ಬಂದಿರಬೇಕೆಂದೂ ಕೆಲವರು ಅಭಿಪ್ರಾಯಪಡುತ್ತಾರೆ. ಅನುಕರಣವಾಚಕ ಶಬ್ದಗಳಲ್ಲಿ ಕಂಡುಬರುವ ಮಹಾಪ್ರಾಣಗಳ ಬದಲಾಗಿ ಅಲ್ಪಪ್ರಾಣಗಳ ಪ್ರಯೋಗಗಳು ಕೈಬರೆಹದ ಪ್ರತಿಗಳಲ್ಲಿ ಕಂಡುಬರುತ್ತವೆ. ನಾಗವರ್ಮ-ಕೇಶಿರಾಜರು ಸಂಖ್ಯೆಯಲ್ಲಿ ಮಹಾಪ್ರಾಣಗಳು ಬರುತ್ತವೆಂಬುದಕ್ಕೆ ಕೊಟ್ಟ ಉದಾಹರಣೆಗಳಲ್ಲಿ ಕೇವಲ 'ಸಾಸಿರ' ಶಬ್ದದ ಮೊದಲ ಸ ಕಾರವು ಛ ಕಾರವಾದ ಉದಾಹರಣೆಗಳೆ ಸಿಕ್ಕುತ್ತವೆ. 'ಸಾಸಿರ' ವಾದರೂ ಅಚ್ಚಗನ್ನಡ ಶಬ್ದವಲ್ಲ. ಅಚ್ಚಗನ್ನಡಗಳಾದ 'ಒಚ್ಚೇರೆ' (ಒರ್+ಸೇರೆ),

‘ ಮುಚ್ಚಾಲು ’ (ಮೂಱು+ಸಾಲು) ಎಂಬಲ್ಲಿ ಹೀಗೆ ಅಲ್ಪಪ್ರಾಣಪ್ರಯೋಗವೇ ಕಂಡುಬಱುವುದರಿಂದ ಮಹಾಪ್ರಾಣಪ್ರಯೋಗಗಳು ಅಚ್ಚಗನ್ನಡದಲ್ಲಿ ಅಗತ್ಯವಲ್ಲ ವೆಂದು ಹೇಳಬಹುದು.

೨೩ — ದರ್ಪಣ ೧೯

೨೪ — ಇದು ಕೆಳಗಿನ ಪದ್ಯದ ಅನುವಾದ :

ದರ್ಶಯಂತಿ ಶರನ್ನದ್ಯಃ । ಪುಲಿನಾನಿ ಶನೈಶ್ಶನೈಃ ॥
ನವಸಂಗಮಸವ್ರೀಡಾ । ಜಘನಾನೀವ ಯೋಷಿತಃ ॥

ವಾಲ್ಮೀಕಿ ರಾಮಾಯಣ

೨೪, ೨೫ — ದರ್ಪಣ (೧೯) ದಲ್ಲಿ ರ-ಱ, ಳ-ೞ-ಡ ಗಳನ್ನು ಕುರಿತು ಕೊಟ್ಟ–
“ ಇವು ವರ್ಣಾವೃತ್ತಿಗೆ ಸ
ಲ್ಲುವು ಸಂದು ಪ್ರಾಸದೆಡೆಗೆ ಸಲ್ಲವು ಯಮುಕ
ವ್ಯವಹೃತಿಗಾಗವು .... ”
ಎಂಬ ನಿಯಮಕ್ಕೆ ಈ ಪದ್ಯಗಳು ಒಳ್ಳೆಯ ಉದಾಹರಣೆಗಳಾಗಿವೆ.

೨೬ — ದರ್ಪಣ ೧೯

ಸೂತ್ರ ೭

ಭೂಷಣ ೧೬; ದರ್ಪಣ ೩೫, ೪೯; ಶಾಸನ ೧೪, ೩೪

ಶಬ್ದಾನುಶಾಸನಕಾರನು ಪಾಣಿನಿಯ ೧-೪-೧೪ನೆಯ ಸೂತ್ರವಾದ ‘ **ಸುಪ್ ತಿಙನ್ತಂ ಪದಂ** ’ ಎಂಬುದನ್ನೆ ತನ್ನ ಸೂತ್ರವನ್ನಾಗಿ ಮಾಡಿಕೊಂಡು ‘ ಪದ ’ ದ ಲಕ್ಷಣವನ್ನು ಹೇಳಿದ್ದಾನೆ. ‘ ಸುಪ್ ’ ಎಂಬುದು ಲಿಂಗ ಅಥವಾ ನಾಮಪದಗಳಿಗೆ ಹತ್ತುವ ಕಾರಕಪ್ರತ್ಯಯಗಳ ಸಂಜ್ಞೆಯು. ‘ ತಿಙ್ ’ ಎಂಬುದು ಧಾತುಗಳಿಗೆ ಹತ್ತುವ ಆಖ್ಯಾತಪ್ರತ್ಯಯಗಳ ಸಂಕೇತವು. ಇದರಿಂದ–ಅಂತ್ಯದಲ್ಲಿ ಈ ಪ್ರತ್ಯಯ ಗಳನ್ನುಳ್ಳ ಶಬ್ದಗಳಿಗೆ ‘ ಪದ ’ವೆಂದು ತಿಳಿಯುವುದು. ಪ್ರತ್ಯಯದ ಹಿಂದಿನ ಮುಖ್ಯ ಶಬ್ದಕ್ಕೆ ‘ ಪ್ರಕೃತಿ ’ಯೆಂದು ಹೆಸರು. ಈ ವಿಚಾರವನ್ನು ಕೇಶಿರಾಜನು ದರ್ಪಣದ ೩೫ನೆಯ ಸೂತ್ರದ ವೃತ್ತಿಯಲ್ಲಿ ಸ್ಪಷ್ಟಪಡಿಸಿದ್ದಾನೆ.

ಪಾಣಿನಿಯ ೧-೪-೧೦೯ನೆಯ ಸೂತ್ರವಾದ ‘ **ಪರಃ ಸನ್ನಿಕರ್ಷಃ ಸಂಹಿತಾ** ’ ಎಂಬುದರ ಅರ್ಥವನ್ನೇ ಈ ಸೂತ್ರದ ಉತ್ತರಾರ್ಧವು ಹೇಳುತ್ತದೆ. ಪತಂಜಲಿ ಭಾಷ್ಯಕಾರರು ಪಾಣಿನಿಯ ಈ ಸೂತ್ರಕ್ಕೆ ‘ ಒಂದು ವರ್ಣವನ್ನು ಉಚ್ಚಾರಮಾಡಿ ಇನ್ನೊಂದನ್ನು ಉಚ್ಚಾರಮಾಡುವುದಕ್ಕೆ ಅವಶ್ಯವಾಗಿ ಬೇಕಾದ ಅರ್ಧಮಾತ್ರೆಯ ಕಾಲವನ್ನು ಬಿಡದೆ ಕೂಡಿಸಿಯೇ ಉಚ್ಚರಿಸುವುದು ಸಂಹಿತೆ ’ ಎಂದು ವ್ಯಾಖ್ಯಾನ ಮಾಡಿರುವರು. ಇಂತಹ ಸಂದರ್ಭಗಳಲ್ಲಿ ‘ ಲೋಪ, ಆಗಮ, ಆದೇಶ ’ ಗಳೆಂಬ ಸಂಧಿಕಾರ್ಯಗಳು ಆಗುತ್ತವೆ. ಈ ಸಂಧಿಕಾರ್ಯಗಳ ಸ್ವರೂಪವನ್ನು ವಿವರಿಸುವ ಪ್ರಸಂಗದಲ್ಲಿ ಕೆಳಗಿನ ಶ್ಲೋಕವನ್ನು ವ್ಯಾಕರಣಕಾರರು ಉದಾಹರಿಸುತ್ತಾರೆ:–

ಸ್ಥಾನೇ ಶತ್ರುವದಾದೇಶಃ ಫಾಲೇ ಪುಂಡ್ರವದಾಗಮಃ
ದಂತಾನಾಮಿವ ಲೋಪಃ ಸ್ಯಾಚ್ಛತ್ರವತ್ ಪ್ರತ್ಯಯಾಃ ಪರೇ

ಎಂದರೆ ಒಬ್ಬನನ್ನು ನಾಶಮಾಡಿ ಅವನ ಸ್ಥಾನದಲ್ಲಿ ತಾನೇ ಬರುವ ಶತ್ರುವಿನಂತೆ ಆದೇಶದ ಕಾರ್ಯವೆಂದೂ ಹಣೆಯ ಮೇಲಿನ ವಿಭೂತಿಯಂತೆ ಆಗಮದ ಕಾರ್ಯವೆಂದೂ ಕಳಚಿಹೋಗುವ ಹಲ್ಲುಗಳಂತೆ ಲೋಪದ ಕಾರ್ಯವೆಂದೂ ಕೊಡೆಯಂತೆ ಮುಂದೆಯೇ ಇರುವುದು ಪ್ರತ್ಯಯದ ಕಾರ್ಯವೆಂದೂ ಅವುಗಳ ಭೇದಗಳನ್ನು ತಿಳಿದುಕೊಳ್ಳತಕ್ಕದ್ದು.

ಸಂಧಿಪ್ರಕರಣ

ಪದೇ ತು ಸಂಹಿತಾ ನಿತ್ಯಾ ನಿತ್ಯಾ ಧಾತೂಪಸರ್ಗಯೋಃ
ನಿತ್ಯಾ ಸಮಾಸೇ ವಾಕ್ಯೇ ತು ಸಾ ವಿವಕ್ಷಾಮುಪೇಕ್ಷತೇ

ಎಂಬ ಶ್ಲೋಕದಲ್ಲಿ ಹೇಳಿರುವಂತೆ (೧) ಪ್ರಕೃತಿ-ಪ್ರತ್ಯಯಗಳು ಕೂಡುವಲ್ಲಿ (೨) ಧಾತು ಮತ್ತು ಉಪಸರ್ಗಗಳು ಕೂಡುವಲ್ಲಿ (೩) ಸಮಾಸಗಳಲ್ಲಿ ಸಂಧಿಯು ನಿತ್ಯವೆಂದೂ ವಾಕ್ಯದಲ್ಲಿ ಅದು ಐಚ್ಛಿಕವೆಂದೂ ಸಂಸ್ಕೃತವ್ಯಾಕರಣದ ನಿಯಮ. ಇದನ್ನೇ ಕನ್ನಡ ವ್ಯಾಕರಣಕಾರರು ಅಂಗೀಕರಿಸಿದ್ದಾರೆ. ಆದರೆ ಕನ್ನಡದಲ್ಲಿ ಉಪಸರ್ಗಯುಕ್ತವಾದ ಧಾತುಗಳು ಇಲ್ಲ. ಪ್ರಕೃತಿಪ್ರತ್ಯಯ ಸಂಧಿಯನ್ನು ಪದಮಧ್ಯಸಂಧಿಯೆಂದೂ ಸಮಾಸಗಳಾಗುವಾಗ ನಡೆಯುವ ಸಂಧಿಕಾರ್ಯವನ್ನೂ ಉಳಿದೆಡೆಗಳಲ್ಲಾಗುವ ಸಂಧಿ ವಿಷಯವನ್ನೂ ಪದಾಂತಸಂಧಿಯೆಂದೂ ಕನ್ನಡ ವ್ಯಾಕರಣಕಾರರು ಹೇಳಿರುವರು (ದರ್ಪಣ ೫೦). ಕನ್ನಡದಲ್ಲಿ ಗಮುಕಸಮಾಸದಲ್ಲಿ ಸಂಧಿಯು ನಿತ್ಯವಲ್ಲ. ವಾಕ್ಯದಲ್ಲಿ ಸಂಧಿಯು ಐಚ್ಛಿಕವೆಂದು ಗ್ರಹಿಕೆಯಿದ್ದರೂ ಸಂಧಿಯನ್ನು ಮಾಡಲಿಕ್ಕೆ ಬರುವೆಡೆಗಳಲ್ಲಿ ಹಾಗೆ ಮಾಡದೆ ಬಿಡುವುದು 'ವಿಸಂಧಿದೋಷ' ವೆಂದು ನಾಗವರ್ಮ-ಕೇಶಿರಾಜರಿಬ್ಬರೂ ಹೇಳಿರುತ್ತಾರೆ. (ನೋ: ಇದೇ ೧೦೨, ದರ್ಪಣ ೬೨.) ಇದು ಸಂಸ್ಕೃತ ಆಲಂಕಾರಿಕರು ದೋಷಪ್ರಕರಣದಲ್ಲಿ ಹೇಳಿರುವುದನ್ನು ಹೋಲುತ್ತದೆ.

ಸೂತ್ರ ೮

ಭೂಷಣ ೧೯, ೨೦, ೨೧; ದರ್ಪಣ ೫೨; ಶಾಸನ ೩೬

ಸಾಮಾನ್ಯವಾಗಿ ಸ್ವರದ ಮುಂದೆ ಸ್ವರವು ಬಂದಾಗ ಪೂರ್ವಸ್ವರಕ್ಕೆ ಲೋಪವಾಗುವುದು. ಪ್ರಕೃತಿಯ ಕೊನೆಯ ಉ, ಎ ಕಾರಗಳಿಗೆ ಸ್ವರಪರವಾದರೆ ಪೂರ್ವಸ್ವರಕ್ಕೆ ಲೋಪ. ಹೀಗೆ ಸಂಧಿ ಮಾಡುವಾಗ 'ನಾಮರೂಢಿಯು ಅಳಿಯುವ' ಪಕ್ಷದಲ್ಲಿ ಲೋಪವಿಲ್ಲ.

ನಾಮರೂಢಿಯು ಅಳಿಯುವುದೆಂದರೆ ಲೋಪಸಂಧಿಯನ್ನು ಮಾಡಿದಾಗ ಪೂರ್ವಪದದ ಮೂಲರೂಪದ ಬಗ್ಗೆ ಸಂದೇಹವುಂಟಾಗುವ ಸ್ಥಿತಿ. ಉದಾಹರಣೆ: 'ವಿಧು+ ಇದು' ಎಂಬುದನ್ನು 'ವಿಧಿದು' ಎಂದು ಕೂಡಿಸಿದರೆ ಪೂರ್ವಪದವು 'ವಿಧು' ಎಂದೋ ' ವಿಧಿ ' ಎಂದೋ ಎಂಬ ಸಂದೇಹವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಲೋಪಸಂಧಿಯನ್ನು ಮಾಡದೆ ಆಗಮಸಂಧಿಯನ್ನು ಮಾಡಬೇಕಾಗುತ್ತದೆ. ಉದಾ: ' ವಿಧುವಿದು, ಪಟುವೇಕವಾಕ್ಯಂ, ಪಡೆಯಿದು ' ಇತ್ಯಾದಿ.

ಸೂತ್ರ ೯

ಭೂಷಣ ೨೨, ೨೩, ೨೪; ದರ್ಪಣ ೫೩, ೫೫; ಶಾಸನ ೩೭, ೪೫

' ವರ್ಣಗ್ರಹಣೇ ಸವರ್ಣಗ್ರಹಣಂ ಕಾರಗ್ರಹಣೇ ಕೇವಲಗ್ರಹಣಂ ಇತಿ ವಿವೇಕಃ ' ಎಂಬಂತೆ ' ವರ್ಣ ' ಎಂದು ಹೇಳಿದಾಗ ' ಸವರ್ಣಸ್ವರ ' ವೆಂದರೆ ಅದೇ ಸ್ವರದ ಹ್ರಸ್ವ-ದೀರ್ಘಗಳೆರಡನ್ನೂ ' ಕಾರ ' ವೆಂದಾಗ ನಿರ್ದಿಷ್ಟವಾದ ಅಕ್ಷರ ವೊಂದನ್ನು ಮಾತ್ರ ತಿಳಿದುಕೊಳ್ಳಬೇಕು.

ಇಲ್ಲಿ ಅ, ಇ, ಈ, ಎ ಅಕ್ಷರಗಳ ಮುಂದೆ ಯ ಕಾರವೂ ಉ, ಊ, ಋ, ೠ (=ವೃವರ್ಣ) ಗಳ ಮುಂದೆ ವ ಕಾರವೂ ಬರುವುವೆಂದು ಹೇಳಿದೆ. ದರ್ಪಣಕಾರನು ಏ,ಐ,ಓ ಅಕ್ಷರಗಳ ಮುಂದೆ ಯ ಕಾರವೂ (ತೇಯಿಸಿದಂ, ಏಯೆಂದಂ, ದೈಯೆಂದಂ, ಜೋಯೆಂದು, ತೋಯಲುಂ) ಓ ಔಗಳ ಮುಂದೆ ವ ಕಾರವೂ (ಉದಾ : ಗೋವಿನ, ಗ್ಲೌವಂ) ಬರುವುವೆಂದೂ ' ಇ, ಈ ಎಂಬಕ್ಕರಂಗಳನನುಕರಿಸಿ ತೋರುವಲ್ಲಿಯುಂ ನಡುವೆ ವತ್ವಂ '(ಉದಾ: ಈವಿವು) ಎಂದೂ ಹೇಳಿರುವನು.

ಈ ಸೂತ್ರದ ಕಡೆಯಲ್ಲಿ ' ಯಥೇಷ್ಟಂ ' ಎಂದು ಹೇಳಿರುವುದನ್ನೇ ದರ್ಪಣಕಾರನು (೫೫ ವೃತ್ತಿ) ' ಕನ್ನಡದೊಳ್ ಯತ್ವವತ್ವಂಗಳ್ಗೆ ಬಹುಳತೆಯಿಂ ಲೋಪಮುಂಟು ' ಎಂದು ಸ್ಪಷ್ಟಮಾಡಿದ್ದಾನೆ. ಆದರೆ ಸಂಸ್ಕೃತ ಶಬ್ದಗಳಲ್ಲಿ ಈ ಆಗಮಗಳು ನಿತ್ಯವೆಂದು ಹೇಳಿರುವನು. ಉದಾ: ' ನದಿಯೆಲ್ಲಂ ಸುರಸಿಂಧುವೆ, ವಿಧು ವಿಲ್ಲದಿರುಳ್. '

ದರ್ಪಣಕಾರನು (೫೩) ಅವಧಾರಣೆಯ ' ಎ ' ಎಂಬುದು ಷಷ್ಠಿಯ ಅ ಕಾರದೊಡನೆ ಸಂಧಿಯಾದಾಗ ನಡುವೆ ಯ ಕಾರಾಗಮವಾಗುವುದೆಂದು ಹೇಳಿರು ವನು. ಉದಾ: ' ಆತನಯೆ ತೋರದೊಡೆಗಳ್ ' (೪೩).

೩೮— ದರ್ಪಣ ೫೩, ೧೦೪; ೪೦— ದರ್ಪಣ ೫೩; ೪೧— ದರ್ಪಣ ೫೫
೪೨— ,, ೫೫, ,, ಇದು ಕೆಳಗಿನ ಪದ್ಯದ ಅನುವಾದವಾಗಿದೆ:

ಅಸ್ಯಾಸ್ಸರ್ಗವಿಧೌ ಪ್ರಜಾಪತಿರಭೂಚ್ಚಂದ್ರೋ ನು ಕಾಂತಿಪ್ರದಃ
ಶೃಂಗಾರೈಕರಸಃ ಸ್ವಯಂ ನು ಮದನೋ ಮಾಸೋ ನು ಪುಷ್ಪಾಕರಃ
ವೇದಾಭ್ಯಾಸಜಡಃ ಕಥಂ ನು ವಿಷಯವ್ಯಾವೃತ್ತಕೌತೂಹಲೋ
ನಿರ್ಮಾತುಂ ಪ್ರಭವೇನ್ಮನೋಹರಮಿದಂ ರೂಪಂ ಪುರಾಣೋ ಮುನಿಃ

ವಿಕ್ರಮೋರ್ವಶೀಯಂ: ಅಂಕ ೧

ಇದರೊಡನೆ ಕೆಳಗಿನ ಪದ್ಯವನ್ನೂ ಹೋಲಿಸಿರಿ —

ಜಗಮಂ ಮಾಡಿದ ಪದ್ಮಜಂ ಪಡೆದನಿಲ್ಲೀ ಕನ್ನೆಯಂ ಮಾಡುವ
ಲ್ಲಿಗೆ ಚಂದ್ರಂ ಮಳಯಾನಿಳಂ ಮಳಯಜಂ ನೀರೇಜಮಿಮ್ಮಾವು ಮ
ಲ್ಲಿಗೆಯೆಂದಿಂತಿವನಟ್ಟಿಱಿಂದಮರ್ದಿನೊಳ್ ತಾನಱ್ತಿಯಿಂ ತೊಯ್ದು ಮೆ
ಲ್ಲಗೆ ಸಂದಂಗಜನೆಂಬಜಂ ಪಡೆದನಂತಾ ಕಾಂತೆಗೀ ಕಾಂತಿಯಂ

ಪಂಪಭಾರತ: ೪-೭೫

ಸೂತ್ರ ೧೦

ಭೂಷಣ ೨೫, ೨೬; ದರ್ಪಣ ೫೬; ಶಾಸನ ೪೪

ಇಲ್ಲಿ ಯಾವ ಸಂಧಿಕಾರ್ಯವನ್ನೂ ಮಾಡಬಾರದ ಸ್ಥಳಗಳನ್ನು ಹೇಳಿದೆ. ಇದಕ್ಕೆ 'ಪ್ರಕೃತಿಸಂಧಿ' ಯೆಂದು ಹೆಸರು. ದರ್ಪಣಕಾರನು ಪ್ಲುತದ ಮುಂದೆಯೂ ಸಂಧಿಯನ್ನು ನಿಷೇಧಿಸಿದ್ದಾನೆ. ಉದಾ:'ಹಾ ರಾಮಾ‌ಽ ಎಂದು; ಕುಕ್ಕುಕೂ‌ಽ ಎಂದು'.

೪೭, ೫೦ — ಭೂಷಣ ೨೫; ದರ್ಪಣ ೫೬
೪೮ — ದರ್ಪಣ ೫೬, ೨೪೨
೫೨ — ,, ,, ೧೫೨
೫೩ — ,, ೮, ೫೬, ೧೦೪, ೧೧೨
೪೯, ೫೧ — ದರ್ಪಣ ೫೬

೫೩, ೮೦ ನೆಯ ಪದ್ಯಗಳು ಭರ್ತೃಹರಿಯ ಕೆಳಗಿನ ಪದ್ಯದ ಅನುವಾದವಾಗಿವೆ.

ಯಸ್ಯಾಸ್ತಿ ವಿತ್ತಂ ಸ ನರಃ ಕುಲೀನಃ । ಸ ಪಂಡಿತಃ ಸ ಶ್ರುತವಾನ್ ಗುಣಜ್ಞಃ
ಸ ಏವ ವಕ್ತಾ ಸ ಚ ದರ್ಶನೀಯಃ । ಸರ್ವೇ ಗುಣಾಃ ಕಾಂಚನಮಾಶ್ರಯಂತಿ

ಶಾರ್ಙ್ಗಧರಪದ್ಧತಿ: ೩೩೩

ಸೂತ್ರ ೧೧

ಭೂಷಣ ೨೮ ರಿಂದ ೩೦; ದರ್ಪಣ ೬೬, ೬೭; ಶಾಸನ ೪೯, ೯೦

ಈ ಸೂತ್ರದಲ್ಲಿ ಪದವಿಧಿ (ಸಮಾಸ)ಯಲ್ಲಿ ಉತ್ತರಪದದಾದಿಯ ಕ, ತ, ಪ ಗಳಿಗೆ ಕ್ರಮವಾಗಿ ಗ, ದ, ಬ ಗಳು ಆದೇಶವಾಗುತ್ತವೆ; ಚ, ಟ ಗಳು ಹಾಗೆಯೇ

ಉಳಿಯುತ್ತವೆ ಎಂದು ಹೇಳಿದೆ. ತಮಿಳಿನಲ್ಲಿ ಪದದಾದಿಯಲ್ಲಿ ಕ, ಚ, ಟ, ತ, ಪ ಗಳನ್ನು ವರ್ಗಪ್ರಥಮದಂತೆಯೂ ಉಳಿದೆಡೆಗಳಲ್ಲಿ ವರ್ಗತೃತೀಯದಂತೆಯೂ ಉಚ್ಚರಿಸುತ್ತಾರೆ. ಆದುದರಿಂದ ಎರಡು ಶಬ್ದಗಳು ಸಮಸ್ತಪದವಾಗುವಾಗ ಪರಪದದ ಆದಿಯ ವರ್ಗಪ್ರಥಮವು ವರ್ಗತೃತೀಯವಾಗುವುದು. ತೆಲುಗಿನಲ್ಲಿ ಸಮಾಸದಲ್ಲಿ ಮಾತ್ರವಲ್ಲದೆ ವಾಕ್ಯದಲ್ಲಿಯೂ ಈ ನಿಯಮವನ್ನು ಪಾಲಿಸುತ್ತಾರೆ. ಕನ್ನಡದಲ್ಲಿ ಶಬ್ದಗಳ ಮಟ್ಟಿಗೆ ವರ್ಗಪ್ರಥಮ-ತೃತೀಯಗಳು ಬೇಕಾದೆಡೆ ಬರಬಹುದಾದರೂ ಸಮಾಸಗಳಲ್ಲಿ ಕ, ತ, ಪ ಗಳ ವಿಷಯದಲ್ಲಿ ದ್ರಾವಿಡಭಾಷೆಗಳಿಗೆ ಸಾಮಾನ್ಯವಾದ ಈ ರೂಢಿಯನ್ನು ಅಂಗೀಕರಿಸಿದ್ದಾರೆ. ಆದರೆ ಈ ನಿಯಮಕ್ಕೂ ಅಪವಾದಗಳುಂಟು. ದರ್ಪಣಕಾರನು (೬೬) 'ಒಂದು, ಎರಡು' ಶಬ್ದಗಳಿಗೆ ಸಮಾಸವಾಗುವಲ್ಲಿ ಆದೇಶವಾಗಿ ಬರುವ 'ಒರ್,ಇರ್' ರೂಪಗಳ ಮುಂದೆಯೂ ೞ್ ದ ಮುಂದೆಯೂ ಡ ಕಾರಕ್ಕಾದೇಶವಾದ ಬ್ ದ ಮುಂದೆಯೂ ಕ, ತ, ಪ ಗಳಿಗೆ ತೃತೀಯತ್ವವಿಲ್ಲವೆಂದೂ ಅದರಂತೆ 'ಬೆಸೆಕೋಲಾದಿ' ಶಬ್ದಗಳಲ್ಲಿ ವರ್ಗಪ್ರಥಮಗಳಿಗೆ ತೃತೀಯತ್ವವಿಲ್ಲವೆಂದೂ ಹೇಳಿದ್ದಾನೆ. ಬೆಸೆಕೋಲಾದಿ ಶಬ್ದಗಳಲ್ಲಿ ಕಂಡುಬರುವ ಈ ಅಪವಾದವನ್ನು ಸಮರ್ಥಿಸಿ ಶಾಸನಕಾರನು ಅಂತಹ ಶಬ್ದಗಳ ಒಂದು ಪಟ್ಟಿಯನ್ನೇ ಕೊಟ್ಟಿರುವನು (೧೦೧). ಹಳಗನ್ನಡ ಗ್ರಂಥಗಳ ಹಸ್ತಪ್ರತಿಗಳಲ್ಲಿ ಒಂದೇ ಸಮಾಸದ ರೂಪಗಳಲ್ಲಿ ವರ್ಗಪ್ರಥಮವನ್ನೂ ವರ್ಗತೃತೀಯವನ್ನೂ ಉಪಯೋಗಿಸಿದುದೂ ಕಂಡುಬರುತ್ತದೆ.

೫೫, ೫೭ — ದರ್ಪಣ ೬೫
೫೬ — ಕಾವ್ಯಸಾರ ೫೩೨
೫೮, ೫೯ — ದರ್ಪಣ ೬೬

ಸೂತ್ರ ೧೨

ಭೂಪಣ ೩೧; ದರ್ಪಣ ೬೭; ಶಾಸನ ೯೧, ೯೨

ಅರೆ ಉೞಿ ವಾಕ್ಯದೊಳಂ = ಕೆಲವೆಡೆ ವಾಕ್ಯದಲ್ಲಿಯೂ.

ದರ್ಪಣಕಾರನು ಆದೇಶವ್ಯಂಜನಗಳ ಮುಂದೆ ಪ ವರ್ಗಕ್ಕೆ ವತ್ವವಿಲ್ಲವೆಂದು ಹೇಳಿ ಮುಂದಿನ ಉದಾಹರಣೆಗಳನ್ನು ಕೊಟ್ಟಿದ್ದಾನೆ. ('ಕೆಳಗು' ವಿಗೆ ಆದೇಶವಾದ) 'ಕಿೞ್+ಪೊಡೆ, ಇರ್+ಮಡಿ, ಇರ್+ಬಾಳ್'. ಇದಲ್ಲದೆ ಪ ವರ್ಗವು ವ ಕಾರವಾಗುವುದು ನಿತ್ಯವಲ್ಲ, ಬಹುಳವೆಂದು ವೃತ್ತಿಯಲ್ಲಿ ಹೇಳಿ, 'ಕೆಯ್+ಪೞಿ, ಪೂ+ಪುಣುಂಬು, ಪಲ್+ಪೞಿ, ಕಣ್+ಬೇಟ, ಕರ್+ಬೇಡ, ಸುಡು+ಬಾಡು, ಬಾಳ್+ಮೊನೆ, ಪಾೞ್+ಮನೆ' ಇತ್ಯಾದಿಗಳಲ್ಲಿ 'ಪ-ಬ'ಗಳು 'ವ' ಆಗುವುದಿಲ್ಲವೆಂದು ಹೇಳಿದ್ದಾನೆ.

ಒಟ್ಟಿನಲ್ಲಿ ಪ ವರ್ಗಕ್ಕೆ ವ ಆದೇಶವು ಬಹುಳವೆಂದೇ ಹೇಳಬಹುದು. ಒಂದೇ ಸಮಾಸದ ಭಿನ್ನರೂಪಗಳೂ ಕಂಡುಬರುತ್ತವೆ. ಉದಾಹರಣಾರ್ಥವಾಗಿ ದರ್ಪಣ ಕಾರನು ಆದೇಶವ್ಯಂಜನದ ಮುಂದೆ ಬತ್ವಕ್ಕೆ ವತ್ವವಿಲ್ಲವೆಂದು ಉದಾಹರಿಸಿದ 'ಇಬರ್ಾಳ್' ಎಂಬುದರ 'ಇವರ್ಾಳ್' ಎಂಬ ರೂಪವು ಇದೇ ೨೦೭ ರಲ್ಲಿ ಇರುವುದು.

ಇತರ ದ್ರಾವಿಡ ಭಾಷೆಗಳಲ್ಲಿ ವ ಕಾರದಿಂದ ಆರಂಭವಾಗುವ ಶಬ್ದಗಳು ಕನ್ನಡದಲ್ಲಿ ಬ ಕಾರದಿಂದ ಆರಂಭವಾಗುತ್ತವೆ. ಅವು ಸಮಾಸದಲ್ಲಿ ತಮ್ಮ ಮೂಲ ರೂಪವನ್ನು ಹೊಂದುವುದೇ ಈ ಅಕ್ಷರಪಲ್ಲಟಕ್ಕೆ ಒಂದು ಕಾರಣವಾಗಿರಲೂ ಬಹುದು.

೬೪, ೬೫, ೬೭, ೭೦, ೭೨ — ದರ್ಪಣ ೬೭, ೬೫, ೧೧೮, ೬೭, ೬೭ ಕ್ರಮವಾಗಿ.

ವಾಕ್ಯದಲ್ಲಿಯ ಸಂಧಿಗೆ ಉದಾ: 'ತಮರೂರ್ಗೆ ಪೋಪ' (೭೨). ಇದರಂತೆಯೇ ಇದೇ ಪದ್ಯ ೭೫ರಲ್ಲಿ 'ಎಣೆಗೆ ವರ್ಪೊಡಂ, ಕೀಲ್ಸರಿಗೆ ವಾರನಹಿತಕೃತಾಂತಂ' ಈ ಪ್ರಯೋಗಗಳನ್ನೂ ನೋಡಬಹುದು.

ಸೂತ್ರ ೧೩

ಭೂಷಣ ೩೨, ೩೩; ದರ್ಪಣ ೬೮; ಶಾಸನ ೯೩, ೯೪

ಅನೇಕ ಭಾಷೆಗಳಲ್ಲಿ ಸ, ಚ, ಕ ಕಾರಗಳು ಒಂದೇ ಅಕ್ಷರದ ಬೇರೆ ಬೇರೆ ರೂಪಗಳೆಂದು ತೋರುತ್ತವೆ. ಈ ಮಾತು ದ್ರಾವಿಡಭಾಷೆಗಳಿಗೂ ಬಹ್ವಂಶದಿಂದ ಅನ್ವಯಿಸುತ್ತದೆ. ಆರಂಭದಲ್ಲಿ ಅಭೇದಗಳಾಗಿದ್ದ ಈ ಅಕ್ಷರಗಳು ಭಾಷೆಗಳು ಬಳೆ ದಂತೆ ಸ್ವತಂತ್ರರೂಪಗಳನ್ನು ತಾಳಿರಬಹುದು. ತಮಿಳಿನಲ್ಲಿ ಸ ಕಾರವಾಗಿದ್ದುದೇ ಕನ್ನಡದಲ್ಲಿ ಕ ಕಾರವಾಗಿಯೂ ತೆಲುಗಿನಲ್ಲಿ ಚ ಕಾರವಾಗಿಯೂ ವ್ಯವಹೃತವಾಗಿರು ವುದು ಕಂಡುಬರುತ್ತದೆ. ಕೆಲವುಸಾರಿ ಎರಡು ಭಾಷೆಗಳಲ್ಲಿ ಒಂದು ವಿಧವಾಗಿಯೂ ಮತ್ತೊಂದು ಭಾಷೆಯಲ್ಲಿ ಬೇರೆ ವಿಧವಾಗಿಯೂ ಇರುವುದು ಕಾಣುತ್ತದೆ. ಉದಾ:

ತಮಿಳು	ತೆಲಗು	ಕನ್ನಡ
ಕೈ	ಚೇಯಿ	ಕೆಯ್
ಶೆಯ್	ಚೇಸು	ಗೆಯ್
ಶೆರುಪ್ಪು	ಚೆರ್ಪು	ಕೆರ್ಪು (ಕೆರವು)
ಶೆವಿ	ಚೆವಿ	ಕಿವಿ
ಕಿಳಿ	ಚಿಲುಕ	ಗಿಳಿ

(ನೋ: ರಾ. ಬ. ಆರ್. ನರಸಿಂಹಾಚಾರ್ಯರ History of Kannada Language p. 64.) ಇದರಂತೆ ಐರೋಪ್ಯವರ್ಣಮಾಲೆಯ c ಎಂಬ ಒಂದೇ ವರ್ಣಕ್ಕೆ ಸ, ಚ, ಕ ಎಂಬ ಉಚ್ಚಾರಗಳು ಇರುವುದು ಕಂಡುಬರುತ್ತದೆ.

ಇವರ ಮೇಲಿಂದ ಈ ಸೂತ್ರದಲ್ಲಿ ಹೇಳಿರುವಂತೆ ಸ ಕಾರವು ಚ, ಛ, ಜ ಗಳಾಗುವುವಕ್ಕೆ ಈ ಅಕ್ಷರಗಳೆಲ್ಲ ಮೊದಲು ಒಂದೇ ಅಕ್ಷರದ ಉಚ್ಚಾರಭೇದ ಗಳಾಗಿದ್ದುದೇ ಕಾರಣವಾಗಿರಬಹುದು.

೭೪, ೭೫, ೭೬, ೭೭ — ದರ್ಪಣ ೬೮.

ಸೂತ್ರ ೧೪

ಭೂಷಣ ೩೪, ೩೫, ೩೬; ದರ್ಪಣ ೬೯; ಶಾಸನ ೫೩

ಪೀನಂ = ಬಹುಳತೆಯಿಂದ

ದರ್ಪಣ ಸೂತ್ರ ೪೮ ರಲ್ಲಿ ಣ, ನ, ಯ, ರ, ಱ, ಲ, ಳ, ೞ ಈ ಎಂಟು ಅಕ್ಷರಗಳು ಕನ್ನಡ ಶಬ್ದಗಳ ಕೊನೆಯಲ್ಲಿ ಬಹುತರ ವ್ಯಂಜನಾಂತಗಳಾಗಿರುವುವು ಎಂದು ಹೇಳಿದ್ದಾನೆ. ಇಂತಹ ಶಬ್ದಗಳು ಹ್ರಸ್ವೈಕಾಕ್ಷರದಿಂದ ಆರಂಭವಾದಾಗ ಈ ಸ್ವರರಹಿತವ್ಯಂಜನದಿಂದ ಆ ಅಕ್ಷರಗಳಿಗೆ ಗುರುತ್ವವು ಬಂದಿರುತ್ತದೆ. ಮುಂದೆ ಬಂದ ಸ್ವರಗಳೊಡನೆ ಇಂತಹ ಅಕ್ಷರಗಳ ಸಂಧಿಯನ್ನು ಮಾಡಿದಾಗ ಮೊದಲಿನ ಅಕ್ಷರದ ಗುರುತ್ವವನ್ನು ಪಾಲಿಸುವುದಕ್ಕೆ ಅನೇಕ ಕಡೆ ಈ ವ್ಯಂಜನಗಳನ್ನು ದ್ವಿತ್ವ ಗಳನ್ನಾಗಿ ಮಾಡಬೇಕಾಗುತ್ತದೆಂದು ತೋರುತ್ತದೆ.

ಯ ಕಾರಾಂತ ಧಾತುಗಳಲ್ಲಿ ಕೆಲವೆಡೆ ದ್ವಿತ್ವವಿರುವ ಮತ್ತು ಇಲ್ಲದ ಎರಡೂ ರೂಪಗಳು ಇರುತ್ತವೆಂಬುದನ್ನು ಇದೇ ಸೂತ್ರ ೬೮ರಲ್ಲಿ ಹೇಳಿರುತ್ತದೆ.

ದರ್ಪಣ ೬೯ರಲ್ಲಿ ಅವ್ಯಯಗಳಿಗೆ ಬಹುತರವಾಗಿ ದ್ವಿತ್ವವಿಲ್ಲೆಂದು 'ದಲಿವಂ' (೮೨) ಎಂಬುದನ್ನು ಉದಾಹರಿಸಿದೆ. ಆದರೆ 'ಅವ್ಯಯಕ್ಕೆ ಕೆಲವು ಶಬ್ದಂಗಳೊಳ್ ದ್ವಿತ್ವಮುಂಟು' ಎಂದು ಹೇಳಿದೆ. ಉದಾ: 'ಇನ್ನಾವುದು'

೮೦* — ದರ್ಪಣ ೬೯; ಭೂಷಣ ೩೪

೮೧, ೮೨, ೮೩ — ದರ್ಪಣ ೬೯

* ೫೩ನೆಯ ಪದ್ಯದ ಟಿಪ್ಪಣಿಯನ್ನು ನೋಡಿರಿ.

ನಾಮಪ್ರಕರಣ

ಸೂತ್ರ ೧೫–೧೬

ಮಾರ್ಗ ೧–೧೧೪; ಭೂಷಣ ೩೭ರಿಂದ ೩೯; ದರ್ಪಣ ೭೨, ೯೩; ಶಾಸನ ೮, ೧೬, ೨೦೩

ಸಂಸ್ಕೃತವ್ಯಾಕರಣಕಾರರು 'ಪ್ರಾತಿಪದಿಕ'ವೆಂದು ವ್ಯವಹರಿಸುವ ಅರ್ಥದಲ್ಲಿಯೇ ಕನ್ನಡವ್ಯಾಕರಣಕಾರರು 'ಲಿಂಗ' ಶಬ್ದವನ್ನು ವ್ಯವಹರಿಸುತ್ತಾರೆ. ಕ್ರಿಯಾವಾಚಕಗಳನ್ನು ಬಿಟ್ಟುಳಿದ ಶಬ್ದಗಳ* ಪ್ರಕೃತಿರೂಪಗಳಿಗೆ ಲಿಂಗಗಳೆಂದು ಹೆಸರು. ಇವು ಕೃತ್, ತದ್ಧಿತ, ಸಮಾಸ, ನಾಮಗಳೆಂದು ನಾಲ್ಕುತೆರವೆಂದು ದರ್ಪಣಕಾರನು ಹೇಳುತ್ತಾನೆ. ಸಂಸ್ಕೃತವ್ಯಾಕರಣಕಾರರು '**ನಾಮ ತ್ರಿಪ್ರಕಾರಂ ಭವತಿ ಕೃತ್‌ತದ್ಧಿತಸಮಾಸಸಂಜ್ಞಾಭೇದೇನ**' ಎಂದು ಹೇಳುತ್ತಾರೆ. ಸಂಸ್ಕೃತದಲ್ಲಿ ಅವ್ಯುತ್ಪನ್ನ (ದಿಟದ) ನಾಮಗಳು ವಿರಳವಾಗಿ ಇರುವುದೇ ಈ ಮತಭೇದಕ್ಕೆ ಕಾರಣವಾಗಿದೆ. ಕನ್ನಡದಲ್ಲಿ 'ದಿಟದ ನಾಮಂ ಸಮಾಸಮಿಲ್ಲದೊಂದಕ್ಕರಂ ಮೊದಲಾಗಿ ಅಯ್ದುಕ್ಕರಂ ಬರಮುಂಟು' ಎಂದು ದರ್ಪಣ (ಸೂತ್ರ ೭೬ರ ವೃತ್ತಿ) ದಲ್ಲಿ ಹೇಳಿಯದೆ. ಲಿಂಗಗಳಿಗೆ ಹತ್ತುವ ಪ್ರತ್ಯಯಗಳಿಗೆ ವಿಭಕ್ತಿಗಳೆಂದೂ ಕಾರಕಪ್ರತ್ಯಯಗಳೆಂದೂ ಹೆಸರು.

ಕಾರಕ :

ಅಪಾದಾನಂ ಸಂಪ್ರದಾನಂ ಕರಣಂ ತದಧೀಃ ಪರಂ
ಕರ್ಮ ಕರ್ತೇತಿ ಷೋಢೈವ ಪಾಣಿನ್ಯುಕ್ತಮನುಕ್ರಮಾತ್

ಎಂಬುದರಿಂದ ಷಷ್ಠಿಯನ್ನು ಬಿಟ್ಟುಳಿದ ಆರು ವಿಭಕ್ತಿಗಳಿಗೆ ಕಾರಕಗಳೆಂದು ಹೆಸರು. ಫಲಕ್ಕೆ ಅನುಕೂಲವಾದ ವ್ಯಾಪಾರ, ವ್ಯಾಪಾರದಿಂದುಂಟಾಗುವ ಫಲ ಇವೆರಡಕ್ಕೂ ಕ್ರಿಯೆಯೆನ್ನಬಹುದು. ಪಚನ (ಅಡಿಗೆ) ಕ್ರಿಯೆಯಲ್ಲಿ ಪಾತ್ರೆಯನ್ನು ಉಪಯೋಗಿಸುವುದಕ್ಕೂ ಉರಿಯನ್ನು ಹಚ್ಚುವುದಕ್ಕೂ ವ್ಯಾಪಾರವೆನ್ನಬಹುದು. ಅಕ್ಕಿಯನ್ನು ಬೇಯಿಸುವುದೇ ಫಲವು. ಗುಣಗಳು ಹೇಗೆ ದ್ರವ್ಯವನ್ನು ಆಶ್ರಯಿಸಿರುವುವೋ ಹಾಗೆಯೇ ಕ್ರಿಯೆಯೂ ದ್ರವ್ಯವನ್ನಾಶ್ರಯಿಸಿರುವುದು. ಕ್ರಿಯೆಯ ಆಶ್ರಯಭೂತವಾದ ದ್ರವ್ಯಕ್ಕೆ ಕಾರಕವೆಂದು ಹೆಸರು. ಆದುದರಿಂದ–ಕ್ರಿಯೆಯನ್ನು ಹುಟ್ಟಿಸುವುದು ಕಾರಕವು-ಎಂದು ಲಕ್ಷಣವನ್ನು ಹೇಳುತ್ತಾರೆ. ವ್ಯಾಪಾರಕ್ಕೆ ಆಶ್ರಯವಾದುದು ಕರ್ತೃ; ಫಲಕ್ಕೆ ಆಶ್ರಯವಾದುದು ಕರ್ಮ; ಕ್ರಿಯಾಸಿದ್ಧಿಗೆ ಸಾಧಕವಾಗಿ ಕರ್ತೃವಿಗೆ ಉಪಕಾರಿಯಾಗುವುದು ಕರಣ; ಕರ್ತೃಕರ್ಮಗಳ ಹೊರತಾಗಿ ಕ್ರಿಯೆಗೆ ಆಧಾರಭೂತ

* ದರ್ಪಣಕಾರನು ಸೂ. ೭೭, ೭೮ ಮತ್ತು ೧೮೦ ಇವುಗಳಲ್ಲಿ ಸಂಖ್ಯಾವಾಚಿ, ಸರ್ವನಾಮ, ಗುಣವಾಚಿ, ಪರಿಮಾಣವಾಚಿ ಇತ್ಯಾದಿ ಶಬ್ದಗಳನ್ನೆಲ್ಲಾ ಲಿಂಗಗಳೆಂದೇ ಹೇಳಿದ್ದಾನೆ.

ನಾಮಮ ಅಧಿಕರಣ ಇತ್ಯಾದಿಯಾಗಿ ಕಾರಕಭೇದಗಳನ್ನು ತಿಳಿದುಕೊಳ್ಳಬೇಕು. ಅಪಾದಾನ-ಸಂಪ್ರದಾನಗಳು ಕ್ರಿಯೆಯ ಹುಟ್ಟುವಿಕೆ-ಮುಟ್ಟುವಿಕೆಗಳನ್ನು ಸೂಚಿಸುವುವು. ಕ್ರಿಯೆಗೆ ಫಲವಿಲ್ಲದಾಗ ಅಕರ್ಮಕವೆಂದೂ ಫಲವಿದ್ದಾಗ ಸಕರ್ಮಕವೆಂದೂ ಧಾತುಗಳನ್ನು ತಿಳಿದುಕೊಳ್ಳಬೇಕು. ಷಷ್ಠಿಯಲ್ಲಿ ಕ್ರಿಯಾಸೂಚನೆಯಿಲ್ಲದಿರುವುದರಿಂದ ಅದನ್ನು ಕಾರಕಗಳಲ್ಲಿ ಎಣಿಸುವುದಿಲ್ಲ. ' ಎಲ್ಲಾ ವಿಭಕ್ತಿಗಳುಂ ಷಷ್ಠೀಗತಮಾದುದಾಗಿ ಸಂಬಂಧಮೆಂಬರ್ ' ಎಂದು ಸೂತ್ರ ೧೩೨ ರ ವೃತ್ತಿಯಲ್ಲಿ ದರ್ಪಣಕಾರನು ಹೇಳಿರುವನು.

ಸೂತ್ರ ೧೭

ಭೂಷಣ, ೪೦, ೪೧; ದರ್ಪಣ ೯೫; ಶಾಸನ ೧೬೬, ೨೩೨, ೨೩೪, ೨೩೫

ದ್ರಾವಿಡಭಾಷೆಗಳಲ್ಲಿ ದ್ವಿವಚನಕ್ಕೆ ಸಂಸ್ಕೃತದಂತೆ ಪ್ರತ್ಯೇಕವಾದ ರೂಪಗಳಿಲ್ಲ. ಕನ್ನಡದಲ್ಲಿ ದ್ವಿವಚನವನ್ನು ಹೇಳುವುದು ಸಂಸ್ಕೃತವ್ಯಾಕರಣದ ಅನುಕರಣ ಮಾತ್ರ. ಸಂಸ್ಕೃತದಲ್ಲಿ ಬಹುವಚನದಲ್ಲಿ ವಿಭಕ್ತಿಪ್ರತ್ಯಯಗಳೇ ಬೇರೆಯಾಗಿರುವುವು. ದ್ರಾವಿಡಭಾಷೆಗಳಲ್ಲಿ ಬಹುವಚನದ ವಿಭಕ್ತಿಪ್ರತ್ಯಯಗಳು ಬೇರೆಯಾಗಿಲ್ಲ; ಆದರೆ ಬಹುತ್ವಸೂಚಕದ ಬೇರೆ ಪ್ರತ್ಯಯಗಳು ವಿಭಕ್ತಿಪ್ರತ್ಯಯಗಳ ಮೊದಲು ಬರುವುವು. ಆದುದರಿಂದಲೇ ದ್ರಾವಿಡಭಾಷೆಗಳಿಗೆ ಸಂಶ್ಲಿಷ್ಟರೂಪಕ (agglutinative) ಭಾಷೆಗಳೆಂದು ಹೆಸರು ಬಂದಿದೆ.

ಸೂತ್ರ ೧೮

ಭೂಷಣ ೪೨, ೪೩; ದರ್ಪಣ ೯೩, ೧೦೧; ಶಾಸನ ೨೩೩, ೨೩೯

೯೪ — ದರ್ಪಣ ೯೭; ಶಾಸನ ೧೮೯.

೯೫ — ದರ್ಪಣ ೯೮

ಸೂತ್ರ ೧೯–೨೨

ಇಲ್ಲಿ ಪ್ರಥಮಾವಿಭಕ್ತಿಯ ಪ್ರತ್ಯಯಗಳನ್ನೂ ಅಲ್ಲಿ ಬರುವ ಆಗಮಗಳನ್ನೂ ಹೇಳಿದೆ. ದ್ರಾವಿಡಭಾಷೆಗಳಲ್ಲಿ ಪ್ರಥಮಾವಿಭಕ್ತಿಗೆ ನಿಜವಾಗಿ ಪ್ರತ್ಯಯಗಳು ಇಲ್ಲೆಂದು ಕಂಡುಬರುತ್ತದೆ. ತಮಿಳುಭಾಷೆಯ ಅತಿಪ್ರಾಚೀನ ವ್ಯಾಕರಣವಾದ ' ತೊಲ್ಕಾಪ್ಪಿಯಮ್ ' ಎಂಬುದರಲ್ಲಿ ಶಬ್ದದ ' ಪೆಯರ್ ' (ಹೆಸರು) ಎಂದರೆ ಪ್ರಕೃತಿರೂಪವೇ ಪ್ರಥಮಾವಿಭಕ್ತಿಯ ರೂಪವೆಂದು ಹೇಳಿರುತ್ತದೆ. ಕನ್ನಡದಲ್ಲಿ ಯಾದರೂ ಅ ಕಾರಾಂತ ಶಬ್ದಗಳನ್ನುಳಿದು ಇತರ ಶಬ್ದಗಳಲ್ಲಿ ಪ್ರಕೃತಿರೂಪಗಳೇ ಪ್ರಥಮಾವಿಭಕ್ತಿಯಲ್ಲಿ ವ್ಯವಹಾರವಾಗುತ್ತವೆ. ಅ ಕಾರಾಂತ ಶಬ್ದಗಳಲ್ಲಿ ಕಂಡು ಬರುವ 'ಮ್' ಎಂಬುದೇ ಪ್ರಥಮಾವಿಭಕ್ತಿಪ್ರತ್ಯಯವೆಂದೂ ಅ ಕಾರಾಂತಗಳಲ್ಲದ

ಶಬ್ದಗಳಲ್ಲಿ ಅದಕ್ಕೆ ಲೋಪವೆಂದೂ ಕನ್ನಡ ವ್ಯಾಕರಣಕಾರರು ಹೇಳುತ್ತಾರೆ. ಆ ಅ ಕಾರಾಂತ ಪುಲ್ಲಿಂಗದಲ್ಲಿ ಬರುವ 'ಮ್' ಎಂಬುದು ಮುಂದೆ ಸ್ವರ ಬಂದಾ 'ನ್' ಎಂದಾಗುವುದರಿಂದ ಇದರ ಮೂಲರೂಪವು 'ಅನ್' ಎಂದು ಇರಬೇಕೆಂದ ಈ ರೂಪವು ಶಾಸನಗಳಲ್ಲಿಯೂ ದೊರೆಯುವುದೆಂದೂ ತಿಳಿಯುತ್ತದೆ. 'ಅನ್' ಎಂಬುದು 'ಅವನ್' ಎಂಬುದರ ಸಂಕ್ಷಿಪ್ತರೂಪವಿದ್ದು ಪುಲ್ಲಿಂಗವಾಚ ವಾಗಿರುವುದು. (ಇದರಂತೆಯೇ ಸ್ತ್ರೀಲಿಂಗಸೂಚವಾದ 'ಅಳ್' ಎಂಬುದ ಬಹುವಚನ ಸೂಚವಾದ 'ಅರ್' ಎಂಬುದೂ 'ಅವಳ್' ಮತ್ತು 'ಅವರ್ ಎಂಬುವುಗಳ ಸಂಕ್ಷಿಪ್ತರೂಪಗಳು.) 'ಅನ್' ಎಂಬುದರಲ್ಲಿ ಕೊನೆಯ 'ನ್ ಎಂಬುದನ್ನೇ ಬಿಂದುವಾಗಿ ಬರೆಯುತ್ತಿದ್ದುದರಿಂದ ಸಂಸ್ಕೃತಪ್ರಭಾವದಿಂದ ಅದನ 'ಮ್' ಉಚ್ಚರಿಸತೊಡಗಿರಬೇಕೆಂದು ಕಾಣುತ್ತದೆ. ಅ ಕಾರಾಂತ ನಪುಂಸ ಲಿಂಗಗಳಲ್ಲಿ ಬರುವ '(ಅ)ಮ್' ಪ್ರತ್ಯಯವು ಸಂಸ್ಕೃತ ಪ್ರಥಮೈಕವಚನ ಅನುಕರಣವಾಗಿರಬೇಕೆಂದು ಕೆಲವರು ಹೇಳುತ್ತಾರೆ. ಆದುದರಿಂದಲೇ ಸಂಸ್ಕೃ ಶಬ್ದಗಳ ಬಹುವಚನವನ್ನು ಮಾಡುವಾಗ 'ಗಳ್' ಪ್ರತ್ಯಯದ ಹಿಂದೆ ಬಿಂದು ನಿತ್ಯವೆಂದು ಕನ್ನಡವ್ಯಾಕರಣಕಾರರು ಹೇಳುತ್ತಾರೆ. ನಪುಂಸಕರೂಪದ ತೋರುವ ಅನುಸ್ವಾರವು ಮುಂದೆ ಸ್ವರವು ಬಂದಾಗ ವಿಕಲ್ಪದಿಂದ 'ಮ್' ಅಥವ 'ನ್' ಆಗುವುದೆಂದು ಹೇಳಿರುವುದು ಸಂಸ್ಕೃತ 'ಮ್' ಮತ್ತು ದ್ರಾವಿಡ 'ನ್ ಇವೆರಡನ್ನೂ ಬಿಂದುವಾಗಿ ಬರೆಯುತ್ತಿದ್ದುದರ ಗೊಂದಲವಾಗಿರಬೇಕು.

ಸೂತ್ರ ೨೨ ರಲ್ಲಿ ನಪುಂಸಕಕ್ಕೆ ಆಗಮವಾಗಿ ಬರುವುದೆಂದು ಹೇಳಿರುವ 'ದ್ ಎಂಬುದು ನಪುಂಸಕಸೂಚಕಗಳಾದ ಅದು, ಇದು, ಉದುಗಳ ಕೊನೆಯ ದ ಕಾರವೇ ಇರಬಹುದು.

ಸೂತ್ರ ೧೯

ಭೂಷಣ ೪೫, ೪೬; ದರ್ಪಣ ೧೦೫; ಶಾಸನ ೨೨೫, ೨೫೧

ಅದಂತ = ಅಕಾರಾಂತ

ಎಲ್ಲಿಯಾದೊಡಂ = ಸಂಸ್ಕೃತ ಕನ್ನಡ ಎರಡೂ ಭಾಷೆಗಳ ಶಬ್ದಗಳಲ್ಲಿ. ಉದಾ: ಅದಂತಕ್ಕೆ: 'ಮರಂ;' ಪ್ರತ್ಯಯಲೋಪಕ್ಕೆ (ಅರ್ಥಾತ್ ಪ್ರಕೃತಿರೂಪಕ್ಕೆ): ಬಳ್ಳಿ, ಪೊದರು, ಬಲ್ಲೆ. (೯೭)

ಸೂತ್ರ ೨೦

ಭೂಷಣ ೪೯, ೫೩; ದರ್ಪಣ ೧೦೩, ೧೦೪; ಶಾಸನ ೭೭, ೨೫೮

ದರ್ಪಣ ಸೂತ್ರ ೧೦೩ ರ ಪ್ರಕಾರ ಅ ಕಾರಾಂತ ಪುಂಸ್ತ್ರೀಲಿಂಗಗಳ ಬಹು ವಚನ ಪ್ರತ್ಯಯಗಳ ಹಿಂದೆ ಬಿಂದುವು ನಿತ್ಯವೆಂದೂ ನಪುಂಸಕಲಿಂಗಗಳಲ್ಲಿ ಅದು

ವಿಕಲ್ಪವೆಂದೂ ಹೇಳಿದೆ. ಉದಾ : ‘ ಅಣ್ಣಂದಿರ್, ಅಣ್ಣಂಗಳ್; ಅಕ್ಕಂದಿರ್, ಅಕ್ಕಂಗಳ್; ಮರಂಗಳ್, ಮರಗಳ್ ’ ಇತ್ಯಾದಿ. ಸಂಸ್ಕೃತ ಅ ಕಾರಾಂತಗಳಿಗೆ ಬಿಂದುವು ನಿತ್ಯ. ಉದಾ : ‘ ವನಂಗಳ್, ಕಮಳಂಗಳ್ ’ ಇತ್ಯಾದಿ.

ಈ ಸೂತ್ರದ ಉತ್ತರಾರ್ಧಲ್ಲಿ ಹೇಳಿರುವ ಬಿಂದುಗಳು ಪ್ರಥಮಾ, ದ್ವಿತೀಯಾ ವಿಭಕ್ತಿಗಳ ಅಂತ್ಯದ ಬಿಂದುಗಳೆಂದು ತಿಳಿಯತಕ್ಕದ್ದು. ಶಾಸನಕಾರನು ಸೂತ್ರ ೭೭ ರಲ್ಲಿ ಈ ನ ಕಾರವು ನಪುಂಸಕಲಿಂಗದಲ್ಲಿ ವಿಕಲ್ಪವೆಂದು ಹೇಳಿ ‘ ಜಿನನೀತಂ, ಅಕ್ಕನೀಕೆ, ನೆಲನಿದು, ನೆಲಮಿದು ’ ಎಂದು ಮುಂತಾಗಿ ಉದಾಹರಣೆಗಳನ್ನು ಕೊಟ್ಟಿದ್ದಾನೆ. ಆದರೆ ನಪುಂಸಕಲಿಂಗದಲ್ಲಿ ಕೆಲವೆಡೆ ನ ಕಾರವಾಗುವುದಿಲ್ಲವೆಂದು ಹೇಳಿ ‘ ವೃಕ್ಷಮಿದು, ಕಾಳಗಮೊಪ್ಪಿತ್ತು, ನೀರ್ದಾಣಮೆಸೆದತ್ತು ’ ಇತ್ಯಾದಿಯಾಗಿ ಉದಾಹರಣೆಗಳನ್ನೂ ಕೊಟ್ಟಿದ್ದಾನೆ. ದ್ವಿತೀಯಾವಿಭಕ್ತಿಯ ಕೊನೆಯ ಅನುಸ್ವಾರವು ಯಾವಾಗಲೂ ನ ಕಾರವೇ ಆಗಬೇಕಾಗುವುದು. ಈ ಬಿಂದುವಿನ ಹಿಂದಿರುವ ಮ ಕಾರವು ಒಮ್ಮೊಮ್ಮೆ ವ ಕಾರವಾಗುವುದೆಂದು ದರ್ಪಣಸೂತ್ರ ೧೦೪ ರಲ್ಲಿ ಹೇಳಿದೆ. ಉದಾ : ‘ ಕುಲಮಂ, ಕುಲವಂ; ನೆಲನಂ, ನೆಲಮಂ, ನೆಲವಂ ’ ಅದರಂತೆ ‘ ನಾಸಿಕಂ+ಅಡ್ಡಂ = ನಾಸಿಕವಡ್ಡಂ ’ ಇತ್ಯಾದಿ.

ಸೂತ್ರ ೨೧

ಭೂಷಣ ೪೭, ೪೮; ದರ್ಪಣ ೯೬, ೯೭; ಶಾಸನ ೨೩೫

‘ ಅದು ’ ಮುಂತಾದ ಸರ್ವನಾಮಗಳಿಗೆ ಬಹುವಚನದಲ್ಲಿ ‘ ಅವು ’ ಎಂಬ ಪ್ರತ್ಯಯವು ವಿಭಕ್ತಿಪ್ರತ್ಯಯಗಳಿಗಿಂತ ಮೊದಲು ಬರುತ್ತದೆ. ಆಗ ಸರ್ವನಾಮಗಳ ಕೊನೆಯ ಅಕ್ಷರಕ್ಕೂ ‘ ಅವು ’ ವಿನ ಮೊದಲಿನ ಅಕ್ಷರಕ್ಕೂ ಲೋಪವಾಗುವುದು. ಉದಾ : ಅದು+ಅವು = ಅವು, ಪೆಱತು+ಅವು = ಪೆಱವು.

ಗುಣೋಕ್ತಿಗಳೆಂದರೆ ವಿಶೇಷಣಗಳೆಂದು ತಿಳಿಯತಕ್ಕದ್ದು.

೧೦೨ — ದರ್ಪಣ ೯೫

‘ ಇನಿದು+ಅವು ’ ಇಲ್ಲಿ ‘ ಇನಿದು ’ ಎಂಬುದರ ‘ ದು ’ ಲೋಪವಾಗಿ ‘ ಅವು ’ ಕೂಡುವಾಗ ಯ ಕಾರಾದೇಶವಾಗಿ ‘ ಇನಿಯವು ’ ಎಂದಾಗಿದೆ. ಈ ಪದ್ಯ ದೊಡನೆ ಕೆಳಗಣವುಗಳನ್ನು ಹೋಲಿಸಿರಿ.

ಇನಿಯವು ಮೊದಲೊಳ್ ನಂಜಿನ । ಪನಿವೊಲ್

ಆದಿಪುರಾಣ: ೧೪–೧೨೮

ಆಪಾತರಮ್ಯಾ ವಿಷಯಾಃ । ಪರ್ಯಂತಪರಿತಾಪಿನಃ

ಕಿರಾತಾರ್ಜುನೀಯ: ೧೧–೧೨

೧೦೩ — ಭಾಷಾಭೂಷಣ ಸೂತ್ರ ೪೭ ರಲ್ಲಿ ಕೆಲವು ಪ್ರತಿಗಳಲ್ಲಿ ' ಇರರಾದಾವಪಿ ಕ್ವಚಿಲ್ಲೋಪೋ ಭವತಿ ' ಎಂದು ಹೇಳಿ ಉದಾಹರಣೆಗೆ ' ಪೆಂಡಿರ್ ' ಎಂದು ಕೊಟ್ಟಿದೆ. ಇಲ್ಲಿ ' ಪೆಂಡತಿ ' ಎಂಬುದಕ್ಕೆ ಬಹುವಚನದ ' ಇರ್ ' ಪ್ರತ್ಯಯವು ಬಂದಾಗ ' ತಿ ' ಲೋಪವಾಗಿ ' ಪೆಂಡಿರ್ ' ಎಂದಾಗಿದೆ.

ಸೂತ್ರ ೨೨

ಭೂಷಣ ೫೦, ೫೧; ದರ್ಪಣ ೧೦೫, ೧೦೬; ಶಾಸನ ೨೬೦, ೨೬೧

ಸ್ವರಾದಿ ವಿಭಕ್ತಿಪ್ರತ್ಯಯಗಳ ಹಿಂದೆ ಅ ಕಾರಾಂತಗಳಿಗೆ ಪುಲ್ಲಿಂಗದಲ್ಲಿ ' ನ್ ' ಆಗಮವೂ ನಪುಂಸಕದಲ್ಲಿ ತೃತೀಯೆಯಿಂದ ಮುಂದೆ 'ದ್' ಆಗಮವೂ ಆಗುವುದು.

ಸೂತ್ರ ೨೩

ಭೂಷಣ ೫೨, ೬೦, ೬೧; ದರ್ಪಣ ೧೦೬, ೧೦೭; ಶಾಸನ ೭೪, ೨೫೯, ೨೭೨, ೨೭೩

ನಿಧನದೊಳಂ = ನಪುಂಸಕದಲ್ಲಿ, ವಿಭಾಷೆಯಿಂ = ಬಹುಳತೆಯಿಂದೆ

' ಬಹುಳದಿಂದ ' ಎಂದು ಹೇಳಿದ ಕಾರ್ಯವು ಕೆಲವು ಲಕ್ಷ್ಯಗಳಲ್ಲಿ ಬರುವುದು, ಕೆಲವುಗಳಲ್ಲಿ ಬಾರದಿರುವುದು, ಕೆಲವುಗಳಲ್ಲಿ ವಿಕಲ್ಪವಾಗಿ ಬರುವುದು, ಕೆಲವುಗಳಲ್ಲಿ ಬೇರೊಂದು ಕಾರ್ಯವು ಬರುವುದು ಹೀಗೆ ನಾಲ್ಕು ವಿಧವಾಗಿರುವುದೆಂದು ಕೆಳಗಣ ಶ್ಲೋಕವು ತಿಳಿಸುತ್ತದೆ:

ಕ್ವಚಿದ್‌ಪ್ರವೃತ್ತಿಃ ಕ್ವಚಿದಪ್ರವೃತ್ತಿಃ ಕ್ವಚಿದ್‌ವಿಭಾಷಾ ಕ್ವಚಿದನ್ಯದೇವ
ವಿಧೇರ್ವಿಧಾನಂ ಬಹುಧಾ ಸಮೀಕ್ಷ್ಯ ಚಾತುರ್ವಿಧಂ ಬಾಹುಲಕಂ ವದಂತಿ

ಅ ಕಾರಾಂತ ನಪುಂಸಕಲಿಂಗದಲ್ಲಿ ದ್ವಿತೀಯೆಯ ' ಅಮ್ ' ಪ್ರತ್ಯಯವು ಹತ್ತುವಾಗ ಅದರ ಹಿಂದೆ ' ನ್ ಅಥವಾ ಮ್ ' ಎಂಬುದು ವಿಕಲ್ಪದಿಂದ ಬರುವುದು. ತೃತೀಯೆಯ ' ಇಂ ' ದ ಮುಂದೆ ' ದಂ ' ಎಂಬುದು ವಿಕಲ್ಪದಿಂದ ಬರುವುದು. ಆ ' ದಂ ' ಎಂಬುದು ವಿಕಲ್ಪದಿಂದ ' ದೆ ' ಎಂದೂ ಆಗುವುದು. ತೃತೀಯೆಯ ಈ ಎಲ್ಲ ಪ್ರತ್ಯಯಗಳ ಬದಲಾಗಿ ' ಎ ' ಎಂಬುದು ಬರುವುದೆಂದೂ ಇಲ್ಲಿ ಹೇಳಿಯದೆ. ದರ್ಪಣ ೧೦೭ ರ ವೃತ್ತಿಯಲ್ಲಿ ' ಇಂ, ಇಂದಂ, ಇಂದೆ ಎಂದು ತೃತೀಯೆ ಮೂದೆ ಱನಾಗಿರ್ಪುದು ಇವಕ್ಕಾದೇಶಮಾಗಿ ಬೇಱೊಂದೆಕಾರಮುಪ್ಪುದು ' ಎಂದು ಸ್ಪಷ್ಟವಾಗುವಂತೆ ಹೇಳಿರುವುದು.

ತೃತೀಯಾವಿಭಕ್ತಿಪ್ರತ್ಯಯಗಳಿಗೆ ಪ್ರತಿಯಾಗಿ ಬರುವ 'ಎ' ಎಂಬುದರ ಹಿಂದೆ ಅ ಕಾರಾಂತ ಲಿಂಗಗಳಲ್ಲಿ ' ದ್ ' ಆಗಮವಾಗುವುದು. ಅ ಕಾರಾಂತವಲ್ಲದ ಶಬ್ದಗಳಲ್ಲಿಯೂ ಈ ' ಎ ' ಎಂಬುದು ಹತ್ತಿದ ಉದಾಹರಣೆಗಳು ದೊರೆಯುವುವು. ಉದಾ: ' ಎನ್ನ ಜೀವ ಮಾಟಕ್ಕಿಯೆ ಪೇೞ್ವೆಂ ' ಪಂಪಭಾರತ ೧-೧೩; ' ಮುನಿಪತಿಯೆ ಪೇೞಿಪಟ್ಟುದು.' (ಶಾಸನ, ೨೭೩)

೧೧೦ — ದರ್ಪಣ ೧೦೭. ೧೧೧ — ಭೂಷಣ ೬೧; ದರ್ಪಣ ೧೦೭

ಸೂತ್ರ ೨೪

ಭೂಷಣ ೫೪, ೫೫; ದರ್ಪಣ ೧೦೮, ೧೧೦; ಶಾಸನ ೨೬೨, ೨೬೫, ೨೬೯

೧೧೩ — ದರ್ಪಣ ೫೫, ೧೦೮ ಮನು+ಅ (ನಡುವೆ ಇನ್ ಆಗಮ) ಪೆಂಪು+ಒಳ್ (ನಡುವೆ ಇನ್ ಆಗಮ) ೧೧೪; ಅದು+ಇಂ (ನಡುವೆ ಅಱ್ ಆಗಮ).

ಸೂತ್ರ ೨೫

ಭೂಷಣ ೬೨, ೬೪; ದರ್ಪಣ ೧೧೩; ಶಾಸನ ೨೫೭, ೨೭೪, ೨೭೬

ಅ ಕಾರಾಂತ ನಪುಂಸಕದಲ್ಲಿ ಚತುರ್ಥಿಪ್ರತ್ಯಯವಾದ ' ಕೆ ' ಎಂಬುದು ವಿಕಲ್ಪದಿಂದ ದ್ವಿತ್ವವಾಗುತ್ತದೆ. ಉಳಿದೆಡೆಗಳಲ್ಲಿ ' ಗೆ ' ಎಂದಾಗುತ್ತದೆ. ಅ ಕಾರಾಂತ ಪುಲ್ಲಿಂಗದಲ್ಲಿ ಆ ' ಗೆ ' ಯ ಹಿಂದೆ ಬಿಂದು ಬರುತ್ತದೆ. ಕೆಲವೆಡೆ ಆ ' ಗೆ ' ಯ ಹಿಂದೆ ಇನ್ ಆಗಮವೂ ಬರುತ್ತದೆ (ಮಾತಿಂಗೆ).

೧೧೬ — ದರ್ಪಣ ೧೧೩.

ಸೂತ್ರ ೨೬

ಭೂಷಣ ೬೩, ೬೮; ದರ್ಪಣ ೧೧೬, ೧೩೫; ಶಾಸನ ೨೩೧

ದ್ರಾವಿಡಭಾಷೆಗಳಲ್ಲಿ ಪಂಚಮಿಗೆ ಬೇರೆ ವಿಭಕ್ತಿಪ್ರತ್ಯಯಗಳಿಲ್ಲವೆಂದೂ ತೃತೀಯೆಯೇ ಅದರ ಕೆಲಸವನ್ನು ಮಾಡುವುದೆಂದೂ ಕೆಲವರು ಅಭಿಪ್ರಾಯಪಡುತ್ತಾರೆ. ಕನ್ನಡದಲ್ಲಿ ತೃತೀಯೆಯ ಪ್ರತ್ಯಯಗಳ ಹಿಂದೆ ' ಅತ್ತಣ್ ' ಎಂಬ ಆಗಮವು ಬರುವುದರಿಂದ ಪಂಚಮೀಪ್ರತ್ಯಯಗಳು ಸಾಧಿತವಾಗುತ್ತವೆ. ಆದರೆ ತೃತೀಯಾ ವಿಭಕ್ತಿಪ್ರತ್ಯಯಗಳಿಗೆ ಆದೇಶವಾಗಿ ಬರುವ ' ಎ ' ಕಾರವನ್ನು ಹಚ್ಚಿ ಪಂಚಮಿಯನ್ನು ಮಾಡಲಾಗದು (ದರ್ಪಣ ೧೧೬).

೧೧೮ — ದರ್ಪಣ ೧೧೬. ೧೧೯ — ದರ್ಪಣ ೧೧೬, ೧೩೫

ಸೂತ್ರ ೨೭

ಭೂಷಣ ೮೫, ೮೮; ದರ್ಪಣ ೧೩೨, ೧೩೪; ಶಾಸನ ೨೨೫, ೨೩೧

ಸ್ವಾಮ್ಯಾದಿ=ಸ್ವಾಮಿ (ಒಡೆಯ), ಜಾತಿ, ಅವಯವ, ಕುಱುಪು, ಸನ್ನಿಧಾನ, ಸಂಸ್ಪರ್ಶ, ಸಂಬಂಧ

ಶಾಸನಕಾರನು ವಿಭಕ್ತಿಪಲ್ಲಟಗಳನ್ನು ಸೂತ್ರ ೨೩೧ ರಲ್ಲಿ ಮುಂದಿನಂತೆ ಸಂಗ್ರಹಿಸಿದ್ದಾನೆ:—

ಪ್ರಥಮೆಗೆ — ದ್ವಿತೀಯೆ, ಷಷ್ಠಿ
ದ್ವಿತೀಯೆಗೆ — ಪ್ರಥಮೆ, ಚತುರ್ಥಿ, ಪಂಚಮಿ, ಷಷ್ಠಿ
ತೃತೀಯೆಗೆ — ದ್ವಿತೀಯೆ, ಪಂಚಮಿ, ಸಪ್ತಮಿ
ಚತುರ್ಥಿಗೆ — ದ್ವಿತೀಯೆ
ಪಂಚಮಿಗೆ — ತೃತೀಯೆ
ಷಷ್ಠಿಗೆ — ಚತುರ್ಥಿ
ಸಪ್ತಮಿಗೆ — ಪ್ರಥಮೆ, ಚತುರ್ಥಿ, ಷಷ್ಠಿ

೧೨೧ — ಭೂಷಣ ೮೮. **೧೨೨** — ದರ್ಪಣ ೧೩೪

೧೨೩ — ದರ್ಪಣ ೧೧೧, ೧೩೬; ಭೂಷಣ ೮೮

ಸೂತ್ರ ೨೮

ಭೂಷಣ ೨೦, ೭೫, ೮೭; ದರ್ಪಣ ೧೨೩, ೧೨೬, ೧೩೩; ಶಾಸನ ೨೨೩, ೨೫೨

ನಿರ್ಧಾರಣೆ=ಜಾತಿ, ಕ್ರಿಯೆ, ಗುಣ, ದ್ರವ್ಯ ಇವುಗಳಿಂದ ವಸ್ತುಗಳನ್ನು ಬೇರೆ ಮಾಡುವುದಕ್ಕೆ ನಿರ್ಧಾರಣೆಯೆಂದು ಹೆಸರು. ಆ ನಿರ್ಧಾರಣೆಯಲ್ಲಿ ಸಪ್ತಮೀವಿಭಕ್ತಿಯಾಗುವುದು (ಭೂಷಣ ೮೭).

ಆದಿಯುದು=ಪ್ರಥಮಾವಿಭಕ್ತಿ

ಇಲ್ಲಿ ಸಪ್ತಮಿಯು ಅಧಿಕರಣಾರ್ಥದಲ್ಲಿ ಉಪಯೋಗವಾಗುವುದಲ್ಲದೆ ನಿರ್ಧಾರಣೆಯಲ್ಲಿಯೂ ಆಗುವುದೆಂದು ಹೇಳಿದೆ. ಆಮಂತ್ರಣ ಅಥವಾ ಸಂಬೋಧನೆಯಲ್ಲಿ ಸಾಮಾನ್ಯವಾಗಿ ಪ್ರಥಮೆಯೇ ಉಪಯೋಗವಾಗುವುದೆಂದೂ ಏಕವಚನದಲ್ಲಿ ಅ ಕಾರಾಂತ ಶಬ್ದಗಳಲ್ಲಿ ಮಾತ್ರ ಬರುವ ಪ್ರತ್ಯಯಲೋಪವೆಂದೂ ಹೇಳಿದೆ. ಉದಾ: ' ಮಾರುತ ಕೇಳ್, ಮಾರುತಮಾರ್ಗ ಕೇಳ್ ' (೧೨೭)

೧೨೯ — ದರ್ಪಣ ೧೨೪. **೧೩೦** — ದರ್ಪಣ ೯೦, ೧೨೫

ಸೂತ್ರ ೨೯, ೩೦

೨೯ಕ್ಕೆ : — ಭೂಷಣ ೭೧, ೭೨; ದರ್ಪಣ ೧೨೪, ೧೨೫; ಶಾಸನ ೨೫೨, ೨೫೩
೩೦ಕ್ಕೆ : — ಭೂಷಣ ೭೩; ದರ್ಪಣ ೧೨೩; ಶಾಸನ ೨೫೧

ಕಾಕು — ' ಕೈ ' ಎಂಬ ಸಂಸ್ಕೃತಧಾತುವಿನಿಂದ (' ಕಾಯತಿ ಅರ್ಥಾಂತರಂ ಇತಿ ಕಾಕುಃ ') 'ಕಾಕು' ಶಬ್ದವು ಹುಟ್ಟಿದೆ. ' ಭಿನ್ನಕಂಠಧ್ವನಿರ್ಧೀರೈಃ ಕಾಕುರಿತ್ಯಭಿಧೀಯತೇ; ' ' ಕಾಕುಸ್ತ್ರಿಯಾಂ ವಿಕಾರೋऽಯಂ ಶೋಕಭೀತ್ಯಾದಿಭಿರ್ಧ್ವನೇಃ ' (ಅಮರಸಿಂಹ) 'ಕಾಕು' ಶಬ್ದಕ್ಕೆ 'ಅತಿಕೊಂಕುನುಡಿ' ಎಂದು ಹೇಳಿ " Stress in peculiar intonation; a significative change of voice " ಎಂದು

ಕಿಟ್ಟೆಲರವರು ಹೇಳಿದ್ದಾರೆ. ಅನೇಕ ಭಾಷೆಗಳಲ್ಲಿ ಸಂಬೋಧನೆಯ ರೂಪವು ಪ್ರಥಮಾವಿಭಕ್ತಿಯ ರೂಪವೇ ಆಗಿರುವುದರಿಂದ ಸಂಬೋಧನೆಯು ಬೇರೊಂದು ವಿಭಕ್ತಿಯಲ್ಲವೆಂದು ಹಲವು ವೈಯಾಕರಣರ ಮತ (Jesperson : Philosophy of Grammar p. 188).

ಈ ಸಂಬೋಧನೆಯ ಕೂಡೆ ಬರತಕ್ಕ ಏಕವಚನದ ಆಖ್ಯಾತಗಳಲ್ಲಿ ಧಾತುವಿನ ಮೂಲರೂಪವೂ ಅದಕ್ಕೆ ವಿಕಲ್ಪದಿಂದ ಅತ್ವವೂ ಉಂಟೆಂದು ದರ್ಪಣದಲ್ಲಿ (೧೨೫, ೨೩೦) ಹೇಳಿದೆ. ಉದಾ : ' ಜಲಧಿ ಕೇಳ್, ಸಪ್ತಾರ್ಚಿ ಕೇಳ್ (೧೨೭), ಕೇಳ ಮಾಧವ ' (೧೩೨).

೧೨೯ — ದರ್ಪಣ ೧೨೪. **೧೩೦** — ದರ್ಪಣ ೯೦, ೧೨೫

೧೩೩ — ದರ್ಪಣ ೧೨೩

ಸೂತ್ರ ೩೧, ೩೨

೩೧ಕ್ಕೆ :— ಮಾರ್ಗ ೨–೧೫; ಭೂಷಣ ೬೮; ದರ್ಪಣ ೧೧೦; ಶಾಸನ ೨೫೬
೩೨ಕ್ಕೆ :— ಮಾರ್ಗ ೨–೧೫; ಭೂಷಣ ೬೭; ದರ್ಪಣ ೧೧೭; ಶಾಸನ ೨೫೫

ಇಲ್ಲಿ ದ್ವಿತೀಯೆಯ ಅನುಸ್ವಾರದ ಹಿಂದಿನ ಅ ಕಾರವೂ ಷಷ್ಠಿಯ ಅ ಕಾರವೂ ವಿಕಲ್ಪದಿಂದ ದೀರ್ಘವಾಗುವುದೆಂದೂ ಖೇದ–ಸಂಭ್ರಮಸೂಚಕಗಳಾದ ಅವ್ಯಯಗಳ ಕೊನೆಯ ಸ್ವರಕ್ಕೆ ವಿಕಲ್ಪದಿಂದ ದೀರ್ಘವುಂಟೆಂದೂ ಹೇಳಿರುವುದು.

೧೩೭, ೧೩೮ — ದರ್ಪಣ ೧೧೭

ಸೂತ್ರ ೩೩

ದರ್ಪಣ ೧೪೦; ಶಾಸನ ೨೩೦

ಕನ್ನಡದಲ್ಲಿ ವಿಶೇಷಣಗಳನ್ನು ಸಂಸ್ಕೃತದಂತೆ ವಿಶೇಷ್ಯದ ವಿಭಕ್ತಿಯಲ್ಲಿಯೇ ಇಡಬಹುದು ಅಥವಾ ಅವುಗಳನ್ನೆಲ್ಲಾ ಪ್ರಥಮಾವಿಭಕ್ತಿಯಲ್ಲಿ ಇಡಬಹುದು.

೧೪೧ — ದರ್ಪಣ ೧೪೦

ಸೂತ್ರ ೩೪

ಮಾರ್ಗ ೧–೧೦೧; ದರ್ಪಣ ೧೪೫

ಕ್ರಿಯೆಯಿಂದ ಕಾರಕವು ತಿಳಿಯುವಂತಿದ್ದರೆ ಕಾರಕವನ್ನೂ ಕಾರಕದಿಂದ ಕ್ರಿಯೆಯು ತಿಳಿಯುವಂತಿದ್ದರೆ ಕ್ರಿಯೆಯನ್ನೂ ಹೇಳದೆ ಬಿಡಬಹುದು. ಆದರೆ ಸಂದಿಗ್ಧವಾಗುವೆಡೆಗಳಲ್ಲಿ ಹೀಗೆ ಅಧ್ಯಾರೋಪ ಮಾಡಿದರೆ 'ನೇಯದ ದೋಷ'ವೆಂದು ವೈಯಾಕರಣರು ಹೇಳುತ್ತಾರೆ (ನೋ. ಇದೇ ಸೂತ್ರ ೧೨೧).

'ವಿಭಕ್ತಿಪರಿಣಾಮ' ವೆಂದರೆ ಆಖ್ಯಾತದಿಂದ ಅಲ್ಲಲ್ಲಿಗೆ ಸರಿಯಾದ ವಿಭಕ್ತಿಗಳನ್ನು ತಿಳಿದುಕೊಳ್ಳುವುದು. 'ಅಸುಹೃತ್‌ಸೇನೆಗೆ ಸಾಲ್ವನೊರ್ವನೆ' ಎಂಬಲ್ಲಿ 'ಆತಂ' ಎಂದು ಪ್ರಥಮೆಯನ್ನೂ 'ನೊಸಲೊಳ್ ಕಣ್ ಗಡ' ಎಂಬಲ್ಲಿ 'ಆತಂಗೆ' ಎಂದು ಚತುರ್ಥಿಯನ್ನೂ 'ನಚ್ಚಿ ಪೊರೆದೆಂ' ಎಂಬಲ್ಲಿ 'ಆತನಂ' ಎಂದು ದ್ವಿತೀಯೆಯನ್ನೂ ಅನ್ವಯಿಸಿಕೊಳ್ಳಬೇಕು (೧೪೬).

೧೪೬ — ದರ್ಪಣ ೯೮

ಸೂತ್ರ ೩೫

ಮಾರ್ಗ ೧–೧೧೮; ಭೂಷಣ ೮೯ರಿಂದ ೯೧; ದರ್ಪಣ ೧೦೨, ೧೩೭ರಿಂದ ೧೩೯, ೧೪೨, ೧೪೪; ಶಾಸನ ೩೨೧, ೩೨೨, ೩೨೪ ರಿಂದ ೩೨೬

ಇಲ್ಲಿ ವಚನಪಲ್ಲಟವನ್ನು ಹೇಳಿದೆ. ವಚನಪಲ್ಲಟಗಳು ಎರಡು ವಿಧ: (೧) ಅರ್ಥದಿಂದ ಏಕವಚನವಿರಬೇಕಾದಲ್ಲಿ ಬಹುವಚನ ಪ್ರಯೋಗ; ಬಹುವಚನವಿರಬೇಕಾದಲ್ಲಿ ಏಕವಚನ ಪ್ರಯೋಗ (೨) ಒಂದೇ ವಾಕ್ಯದಲ್ಲಿ ಭಿನ್ನ ವಚನಗಳ ಪ್ರಯೋಗ. ಉದಾ: ಏಕವಚನಾರ್ಥದಲ್ಲಿ ಬಹುವಚನ: ಸನ್ಮಾನದಲ್ಲಿ 'ಎಮ್ಮ ತಂದೆಗಳ್'; ತಿರಸ್ಕಾರದಲ್ಲಿ 'ಬಡವಾದಿರರಸ' (ದರ್ಪಣ ೧೦೨). ಬಹುವಚನಾರ್ಥದಲ್ಲಿ ಏಕವಚನಕ್ಕೆ 'ಇಂತುಟು ಕುದುರೆ'; 'ಪಾಡಿದುದು ತುಂಬಿ'.

ಎರಡನೆಯ ವಿಧದಲ್ಲಿ 'ಆನೆ ನೂಂಕಿದುವು; ಕರಿಯಿವು; ದೆಸೆ ಪತ್ತು; ಪತ್ತು ಮೂರು; ಕಣ್ಗಳ ಕೂರ್ಪು; ನೇರಿದುವು ಬೆರಲ್' ವಾಕ್ಯಾನ್ವಯದಲ್ಲಿಯೂ ಕೆಲವೆಡೆ ಆಖ್ಯೇಯಕ್ಕೂ ಆಖ್ಯಾತಕ್ಕೂ ವಚನಭೇದವುಂಟು. ಇದೇ ೭೯೧ ರಲ್ಲಿ 'ಚಕ್ರಿಗಿತ್ತುವಲಂಪಂ' ಎಂಬಲ್ಲಿ 'ಇವೆಲ್ಲ' ಎಂಬುದು ಅಧ್ಯಾಹಾರವಾಗಿ ಏಕವಚನ ಆಖ್ಯೇಯಗಳಿಗೆ ಬಹುವಚನ ಆಖ್ಯಾತವು ಸಲ್ಲುವುದು.

ಆಖ್ಯೇಯವು ಬಹುವಚನವಾಗಿದ್ದು ಆಖ್ಯಾತವು ಏಕವಚನವಾಗಿರುವುದಕ್ಕೆ ಉದಾ: 'ವೇದಂಗಳ್ ಪ್ರಮಾಣಂ'

೧೪೮ — ಕಾವ್ಯಸಾರ ೧೦೫೭. **೧೫೦** — ದರ್ಪಣ ೬೭

ಸೂತ್ರ ೩೬

ಭೂಷಣ ೯೨, ೯೩; ದರ್ಪಣ ೧೪೬; ಶಾಸನ ೨೮೪, ೨೬೭, ೨೮೮

ಪುರುಷಾರ್ಥಕ ಸರ್ವನಾಮಗಳು ಪ್ರಥಮೆಯಲ್ಲಿ 'ನೀನ್, ಆನ್, ತಾನ್' ಆಗುವುವೆಂದೂ ಚತುರ್ಥಿಯಲ್ಲಿ 'ನಿನಗೆ, ಎನಗೆ, ತನಗೆ' ಆಗುವುವೆಂದೂ ಮಿಕ್ಕೆಡೆಗಳಲ್ಲಿ 'ನಿನ್, ಎನ್, ತನ್' ಎಂಬ ಪ್ರಕೃತಿರೂಪಗಳಿಗೆ ವಿಭಕ್ತಿಗಳು ಹತ್ತುವುವೆಂದೂ ದರ್ಪಣಕಾರನು ಹೇಳಿದ್ದಾನೆ.

ನಿನ್ನದು ಎಂಬ ಅರ್ಥದಲ್ಲಿ 'ನಿನತು (೧೫೫), ನಿನತ್ತು' ಎಂದೂ ಹಾಗೆಯೇ 'ನಿಮತು, ನಿಮತ್ತು; ಎನತು, ಎನುತ್ತು; ತನತು, ತನತ್ತು' ಇತ್ಯಾದಿ ರೂಪಗಳಾಗುವುವೆಂದೂ ದರ್ಪಣ (೧೪೭) ದಲ್ಲಿ ಹೇಳಿದೆ.

ಸೂತ್ರ ೩೭

ಭೂಷಣ ೯೫ ರಿಂದ ೯೭; ದರ್ಪಣ ೧೫೦, ೧೫೪; ಶಾಸನ ೧೬೨ ರಿಂದ ೧೬೪

ಸೂತ್ರ ೩೮ ರಿಂದ ೪೪

ಸಂಸ್ಕೃತದಿಂದ ಕನ್ನಡಕ್ಕೆ ಶಬ್ದಗಳನ್ನು ತೆಗೆದುಕೊಳ್ಳುವಾಗ ಮೂಲಶಬ್ದದ ಲಿಂಗವೇ ಉಳಿಯಬೇಕೆಂಬ ನಿಯಮವಿಲ್ಲ. ಮೇಲಾಗಿ ಸಂಸ್ಕೃತದಲ್ಲಿ ಲಿಂಗವನ್ನು ಬಹುತರ ಶಬ್ದಗಳ ರೂಪಗಳಿಂದಲೇ ತಿಳಿದುಕೊಳ್ಳಬೇಕಾಗುವುದು. ಉದಾಹರಣೆಗಾಗಿ ಹೆಂಡತಿ ಎಂಬ ಅರ್ಥದಲ್ಲಿ 'ಭಾರ್ಯಾ' ಶಬ್ದವು ಸ್ತ್ರೀಲಿಂಗ, 'ಕಲತ್ರ' ವೆಂಬುದು ನಪುಂಸಕಲಿಂಗ, 'ದಾರ' ಎಂಬುದು (ಬಹುವಚನದಲ್ಲಿ ಮಾತ್ರ) ಪುಲ್ಲಿಂಗವಾಚಕಗಳಾಗಿರುವುವು. ಆದರೆ ಕನ್ನಡದಲ್ಲಿ ದರ್ಪಣ (೯೧) ದಲ್ಲಿ ಹೇಳಿರುವಂತೆ ಪುರುಷರನ್ನು ಹೇಳುವ ಶಬ್ದಗಳು ಪುಲ್ಲಿಂಗಗಳೆಂತಲೂ ಸ್ತ್ರೀಯರನ್ನು ಹೇಳುವ ಶಬ್ದಗಳು ಸ್ತ್ರೀಲಿಂಗಗಳೆಂತಲೂ ಉಳಿದುವೆಲ್ಲಾ ನಪುಂಸಕಲಿಂಗವೆಂತಲೂ ಗ್ರಹಿಸಲ್ಪಡುತ್ತವೆ. ದರ್ಪಣಕಾರನು ಸೂತ್ರ ೮೮ ರಲ್ಲಿ 'ಲಿಂಗವೊಂಬತ್ತು ತೆಱಂ' ಎಂದು ಹೇಳಿರುವನಾದರೂ ಮೇಲಿನ ಮೂರನ್ನು ಬಿಟ್ಟು ಉಳಿದ ಆರು ವಿಧಗಳು ಕ್ವಚಿತ್‌ಪ್ರಯೋಗಗಳೆಂದು ಅವನೇ ಹೇಳಿರುವನು.

ಸಂಸ್ಕೃತಶಬ್ದಗಳು ಕನ್ನಡದಲ್ಲಿ ಲಿಂಗ(ಪ್ರಾತಿಪದಿಕ)ಗಳಾಗುವಾಗ ವ್ಯತ್ಯಾಸವಿಲ್ಲದೆ ಅಥವಾ ಕೊನೆಯಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸವನ್ನು ಹೊಂದಿ ಉಪಯೋಗವಾಗಬಹುದು. ಅಂತಹ ಶಬ್ದಗಳಿಗೆ ದರ್ಪಣಕಾರನು 'ಸಮಸಂಸ್ಕೃತ' ವೆಂದು ಹೆಸರಿಟ್ಟಿರುವನು. ಇವಕ್ಕೆ ಇತ್ತೀಚಿನ ವೈಯ್ಯಾಕರಣರು 'ತತ್ಸಮ' ರೂಪಗಳೆಂದು ಹೇಳುವರು. ಕೊನೆಯಲ್ಲಷ್ಟೇ ಅಲ್ಲದೆ ಉಳಿದೆಡೆಗಳಲ್ಲಿಯೂ ವ್ಯತ್ಯಾಸವನ್ನು ಹೊಂದಿ ಕನ್ನಡದಲ್ಲಿ ಲಿಂಗಗಳಾದರೆ ಅವಕ್ಕೆ 'ತದ್ಭವ' ಗಳೆಂದು ಹೆಸರು. (ಉದಾ: ಸಮಸಂಸ್ಕೃತ: 'ಇಂದ್ರ'; ತದ್ಭವ: 'ಇಂದಿರ, ಇಂದರ') ಈ ಸೂತ್ರದಲ್ಲಿ ಸಮಸಂಸ್ಕೃತರೂಪಗಳನ್ನು ಮಾಡುವಾಗ ಅನುಸರಿಸಬೇಕಾದ ನಿಯಮಗಳನ್ನು ಹೇಳಿದೆ.

೧೫೮ — ಇದರೊಡನೆ ಕೆಳಗಿನ ಶ್ಲೋಕವನ್ನು ಹೋಲಿಸಬಹುದು.

ರತಿಸ್ಮರೌ ನೂನಮಿಮಾವಭೂತಾಂ। ರಾಜ್ಞಾಂ ಸಹಸ್ರೇಷಿ ತಥಾಹಿ ಬಾಲಾ
ಗತೇಯಮಾತ್ಮಪ್ರತಿರೂಪಮೇವ। ಮನೋ ಹಿ ಜನ್ಮಾಂತರಸಂಗತಿಜ್ಞಂ

ರಘುವಂಶ ೭-೧೫

ಸೂತ್ರ ೩೮

ಭೂಷಣ ೯೮, ೯೯; ದರ್ಪಣ ೮೨, ೮೩; ಶಾಸನ ೧೦೫, ೧೧೫, ೧೧೬,೧೨೦

ಇದರಲ್ಲಿ ಕೆಲವು ಸಂಸ್ಕೃತಶಬ್ದಗಳು ಕನ್ನಡದಲ್ಲಿ ಲಿಂಗವ್ಯತ್ಯಾಸಹೊಂದುವು ದನ್ನು ಹೇಳಿದೆ. ಸಂಸ್ಕೃತದಲ್ಲಿ ನಪುಂಸಕಲಿಂಗವಾದ 'ಕಲತ್ರ, ಅಪತ್ಯ' ಸ್ತ್ರೀಲಿಂಗ ವಾದ 'ಕರುಣಾ, ಉಪತ್ಯಕಾ, ಗ್ರೀವಾ' ಪುಲ್ಲಿಂಗವಾದ 'ವಧ, ಅಭಿಲಾಷ' ಇವೆಲ್ಲವೂ ಕನ್ನಡದಲ್ಲಿ ಅ ಕಾರಾಂತ ನಪುಂಸಕಲಿಂಗಗಳಾಗುತ್ತವೆ. ಇವುಗಳಲ್ಲಿ ಕೆಲವು ವಿಕಲ್ಪ ದಿಂದ 'ಎ' ಕಾರಾಂತವಾಗಿ ಪ್ರಯೋಗವಾದ ಉದಾಹರಣೆಗಳು ಇದೇ ೧೬೬, ೧೬೭, ೧೬೯ ಪದ್ಯಗಳಲ್ಲಿ ಕಂಡುಬರುತ್ತವೆ. ಹೀಗೆಯೇ 'ಭಿಕ್ಷಾ' ಶಬ್ದಕ್ಕೂ 'ಭಿಕ್ಷ, ಭಿಕ್ಷೆ' ಎಂಬ ರೂಪಗಳುಂಟು.

ಶಾಸನಕಾರನು ಸೂತ್ರ ೧೦೫ ರಲ್ಲಿ 'ಕಳತ್ರ, ದಾರ, ಗ್ರಹ, ಅಪತ್ಯ, ತೋಕ, ಶಿಶು, ಕೂಸು, ಪಸುಳೆ, ಮಗು' ಇವು ಕಲತ್ರಾದಿಗಣವೆಂದೂ ಸೂತ್ರ ೧೧೬ರಲ್ಲಿ 'ಕರುಣಾ, ಖಟ್ವಾ, ಉಪತ್ಯಕಾ, ಅಧಿಪತ್ಯಕಾ, ದಂಷ್ಟ್ರಾ, ವಾಲುಕಾ, ಕಂಧರಾ, ಮೋಚಾ, ಮಂದುರಾ, ಘೃಣಾ, ಪದ್ಯಾ, ಪಾಟಲಾ' ಇವು ಕರುಣಾದಿಗಣವೆಂದೂ ಹೇಳಿರುವನು.

೧೬೪ — ಇದು ಕೆಳಗಿನ ಪದ್ಯದ ಅನುವಾದವಾಗಿದೆ:

ಅಂಕಾಧಿರೋಪಿತಮೃಗ । ಶ್ಚಂದ್ರಮಾ ಮೃಗಲಾಂಛನಃ
ಕೇಸರೀ ನಿಷ್ಠುರಕ್ಷಿಪ್ತ । ಮೃಗಯೂಥೋ ಮೃಗಾಧಿಪಃ

ಶಿಶುಪಾಲವಧಃ ೨-೫೩.

ಸೂತ್ರ ೩೯

ಭೂಷಣ ೧೦೦ರಿಂದ ೧೦೨; ದರ್ಪಣ ೮೨, ೮೩; ಶಾಸನ ೧೧೫ರಿಂದ ೧೧೮

ಸಂಸ್ಕೃತ ಸ್ತ್ರೀಲಿಂಗ ಆ ಕಾರಾಂತ ಶಬ್ದಗಳು ಕನ್ನಡದಲ್ಲಿ ಬಹುತರವಾಗಿ 'ಎ' ಕಾರಾಂತವಾಗುತ್ತವೆ. ಈ ಕಾರ-ಊ ಕಾರಾಂತಗಳು ಹ್ರಸ್ವಾಂತಗಳಾಗುತ್ತವೆ. ಆದರೆ 'ಜ್ಯಾ, ಮಾ, ಶ್ರೀ, ಭೂ' ಇತ್ಯಾದಿ ಏಕಸ್ವರಶಬ್ದಗಳು ಹಾಗೆಯೇ ಉಳಿಯುತ್ತವೆ.

೧೭೩ — ದರ್ಪಣ ೧೫೬

ಸೂತ್ರ ೪೦, ೪೧

ಸೂತ್ರ ೪೦ಕ್ಕೆ: ಭೂಷಣ ೧೦೩; ದರ್ಪಣ ೮೪; ಶಾಸನ ೧೨೩, ೧೨೪

ಸೂತ್ರ ೪೧ಕ್ಕೆ: ಭೂಷಣ ೧೦೪, ೧೦೫; ದರ್ಪಣ ೮೪, ೮೫; ಶಾಸನ ೧೨೨, ೧೮೪

ದರ್ಪಣಕಾರನು ಸೂತ್ರ ೮೪ರಲ್ಲಿ ಅ, ಇ, ಉ, ಋ ಕಾರಾಂತ ಶಬ್ದಗಳು ವ್ಯತ್ಯಾಸವಿಲ್ಲದೆ ಲಿಂಗಗಳಾಗುವುವು ಎಂದು ಹೇಳಿ ಋ ಕಾರಾಂತ ಶಬ್ದಗಳಲ್ಲಿ

ಮಾತ್ರ ಬಹುಕಗ್ರಹಣವನ್ನು ಹೇಳಿದ್ದಾನೆ. ಎಂದರೆ ಅವುಗಳಲ್ಲಿ ಕೆಲವು 'ಆರ' ಅಂತವಾಗಿಯೂ ಪ್ರಯೋಗವಾಗುವುವು. ಹಾಗೂ 'ವಿಧಾತೃ (ಬ್ರಹ್ಮ) = ವಿಧಾತ್ರ; ದಾತೃ = ದಾತ; ಮಾಂಧಾತೃ = ಮಾಂಧಾತ; ಪಿತೃ (ಸ್ವರ್ಗಸ್ಥ) = ಪಿತರ' ಎಂದಾಗುವುವೆಂದು ಹೇಳಿದ್ದಾನೆ. 'ಭ್ರಾತೃ' ಶಬ್ದಕ್ಕೆ 'ಭ್ರಾತರಂ' ಎಂಮೂ ಉಂಟೆಂದು ಭೂಷಣ ೧೦೫ರಲ್ಲಿ ಹೇಳಿದೆ. 'ದಾತೃ' ಶಬ್ದಕ್ಕೆ 'ದಾತೃ, ದಾತಾರಂ, ದಾತಂ' ಮೂರು ರೂಪಗಳುಂಟೆಂದು ಶಾಸನ (೧೨೫) ದಲ್ಲಿ ಹೇಳಿದೆ.

೧೭೭ — ದರ್ಪಣ ೫೫. ೧೮೧ — ಭೂಷಣ ೧೦೫; ದರ್ಪಣ ೮೫

ಸೂತ್ರ ೪೨

ಭೂಷಣ ೧೦೬ ರಿಂದ ೧೦೯; ದರ್ಪಣ ೮೭; ಶಾಸನ ೧೨೮, ೧೨೯

'ಶ್ವನ್, ಯುವನ್, ಅಧ್ವನ್, ಸಖಿಯನ್, ಶ್ರೇಯಸ್, ವಿದ್ವಸ್' ಎಂಬಿವು ಕ್ರಮವಾಗಿ 'ಶ್ವಾನ, ಯುವಾನ, ಅಧ್ವಾನ, ಸಖಾಯ, ಶ್ರೇಯಾಂಸ, ವಿದ್ವಾಂಸ' ಎಂದಾಗುವುದೆಂದು ಇಲ್ಲಿ ಹೇಳಿಯದೆ. ಈ ರೂಪಗಳು ಸಂಸ್ಕೃತ ಪ್ರಥಮಾಬಹು ವಚನರೂಪಗಳ ಕೊನೆಯ ವಿಸರ್ಗಗಳನ್ನು ಕಳೆಯುವುದರಿಂದ ಸಾಧಿತವಾಗಿ ಕನ್ನಡ ದಲ್ಲಿ ಏಕವಚನಲಿಂಗಗಳಾಗಿರುವುವು (ದರ್ಪಣ ೮೭). 'ಶ್ರೇಯಸ್, ಜ್ಯಾಯಸ್, ಕನೀಯಸ್' ಎಂಬಿವು ವಿಕಲ್ಪದಿಂದ 'ಶ್ರೇಯ, ಜ್ಯಾಯ, ಕನೀಯ' ಎಂದೂ ಆಗುವುವು.

೧೮೭ — ದರ್ಪಣ ೫೩, ೨೩೪

೧೮೯ — ಇದು ಕೆಳಗಿನ ಪದ್ಯದ ಅನುವಾದವಾಗಿದೆ:

ವೃದ್ಧಾ ರಸಾಂ ರಾಜ್ಯಧುರಾಂ ಪ್ರವೋಢುಂ । ಕಥಂ ಕನೀಯಾನಹಮುತ್ಸಹೇಯ ॥
ಮಾ ಮಾಂ ಪ್ರಯುಕ್ಥಾಃ ಕುಲಕೀರ್ತಿಲೋಪೇ । ಪ್ರಾಹಸ್ಮ ರಾಮಂ ಭರತೋಽಪಿ ಧರ್ಮ್ಯಂ ॥
ಭಟ್ಟಿಕಾವ್ಯ : ೩–೫೪

ಸೂತ್ರ ೪೩

ಭೂಷಣ ೧೧೦–೧೧೧; ದರ್ಪಣ ೮೬; ಶಾಸನ ೬೯, ೧೨೯

ವ್ಯಂಜನಾಂತ ಸಂಸ್ಕೃತ ಶಬ್ದಗಳಲ್ಲಿ ಕೆಲವಕ್ಕೆ ಅ ಕಾರಾಂತವೂ ಕೆಲವಕ್ಕೆ ಕೊನೆಯ ವ್ಯಂಜನಲೋಪವೂ ಬೇರೆ ಕೆಲವಕ್ಕೆ ಉ ಕಾರಾಂತದೊಡನೆ ವ್ಯಂಜನಕ್ಕೆ ದ್ವಿತ್ವವೂ ಉಂಟಾಗುವುವು. ಕೆಲವುಗಳಲ್ಲಿ ಎರಡೆರಡು ರೂಪಗಳೂ ಉಂಟು.

ಅ ಕಾರಾಂತಕ್ಕೆ : 'ಪರಿಣತವಯಸ, ಚತುರ, ಪುರ, ದಿವ'

ಲೋಪಕ್ಕೆ : 'ರಾಜ, ಮಘವ, ಕರಿ'

ವ್ಯಂಜನದ್ವಿತ್ವ ಮತ್ತು ಉ ಕಾರಾಂತಕ್ಕೆ : 'ದಿಕ್ಕು, ವಾಕ್ಕು'

ಸ ಕಾರಾಂತದಲ್ಲಿ ಎರಡು ರೂಪಗಳಿಗೆ: 'ವಯ, ವಯಸ್ಸು; ಮನ, ಮನಸ್ಸು; ನಭ, ನಭಸ್ಸು'

ಕೆಲವು ವ್ಯಂಜನಾಂತಗಳಾಗಿಯೂ ಉಳಿಯುವುವು. ಉದಾ : 'ವಾಕ್, ಯುಗಪದ್, ಗೀರ್' ('ಗಿರೆ' ಎಂದೂ ಉಂಟು.)

೧೯೨—ಹೋ :

(೧) ಮರ್ಕಟಸ್ಯ ಸುರಾಪಾನಂ । ತಸ್ಯ ವೃಶ್ಚಿಕದಂಶನಂ
ತನ್ಮಧ್ಯೇ ಭೂತಸಂಚಾರಃ । ಯದ್ವಾ ತದ್ವಾ ಭವಿಷ್ಯತಿ
ಸುಭಾಷಿತರತ್ನಭಾಂಡಾಗಾರ ೨೫೭

(೨) ಕಪಿರಪಿಚ ಕಾಪಿಶಾಯನಮದಮತ್ತೋ ವೃಶ್ಚಿಕೇನ ಸಂದಷ್ಟಃ
ಅಪಿ ಚ ಪಿಶಾಚಗ್ರಸ್ತಃ ಕಿಂ ಬ್ರೂಮೋ ವೈಕೃತಂ ತಸ್ಯ
ಸುಭಾಷಿತರತ್ನಭಾಂಡಾಗಾರ ೩೯೨

ಸೂತ್ರ ೪೪

ಭೂಷಣ ೧೧೨, ೧೧೩; ದರ್ಪಣ ೧೬೧; ಶಾಸನ ೭೯, ೮೦

ಕೃತ್ಸ್ನ=ಎಲ್ಲಾ. ಹೋ. ಇದೇ ಸೂ. ೫

ಸಮಾಸಪ್ರಕರಣ

ಕನ್ನಡದಲ್ಲಿ ಸಂಸ್ಕೃತದಂತೆ ಎರಡು ಅಥವಾ ಹೆಚ್ಚು ಪದಗಳನ್ನು ಕೂಡಿಸಿ ಒಂದೇ (ಸಮಸ್ತ) ಪದವನ್ನಾಗಿ ಮಾಡುವ ರೂಢಿಯುಂಟು. ಆದರೆ ಸಂಸ್ಕೃತದಲ್ಲಿ ಸಮಾಸಗಳು ಉದ್ದವಾದಷ್ಟು ಕನ್ನಡದಲ್ಲಿ ಆಗುವುದು ಕಡಿಮೆ. ಕನ್ನಡದಲ್ಲಿ ಕಂಡು ಬರುವ ದೀರ್ಘಸಮಾಸಗಳೆಲ್ಲಾ ಸಂಸ್ಕೃತದಿಂದಲೇ ಬಂದಿರುವುವೆಂದು ಹೇಳ ಬಹುದು.

ಸಮಾಸಗಳನ್ನು ಮಾಡುವಾಗ ಮೊದಲನೆಯ (ಪೂರ್ವ) ಪದದ ವಿಭಕ್ತಿ ಗಳನ್ನು ಲೋಪಮಾಡುವುದುಂಟು. ಇದು ಸಾಧಾರಣ ನಿಯಮ. ಇದಕ್ಕೆ ಅಪವಾದಗಳೂ ಉಂಟು. ಪ್ರತ್ಯಯಗಳನ್ನು ಲೋಪಮಾಡಿದ ಸಮಾಸಗಳಿಗೆ ಲುಕ್*-ಸಮಾಸಗಳೆಂದೂ ಪ್ರತ್ಯಯಗಳನ್ನು ಇಟ್ಟು ಮಾಡುವ ಸಮಾಸಗಳಿಗೆ ಅಲುಕ್-ಸಮಾಸಗಳೆಂದೂ ಹೇಳಬಹುದು. ಇವಲ್ಲದೆ ಕನ್ನಡವಲ್ಲಿ ವಿಶೇಷವಾಗಿ ಪ್ರಯೋಗದಲ್ಲಿರುವ ಗಮಕಸಮಾಸ (ದರ್ಪಣ ೧೬೮) ವನ್ನು ಮೂರನೆಯ ವಿಧವೆಂದು ಹೇಳಬಹುದು. ಇದರಲ್ಲಿ ಪೂರ್ವಪದವು ಉತ್ತರಪದದಿಂದ ಬೇರೆ ಯಾಗಿದ್ದಂತೆಯೇ ತೋರುವುದು. ಮೇಲಿನ ಸಮಾಸವಿಧಗಳಿಗೆ ಕ್ರಮೋದಾಹರಣೆ: 'ನನೆಮಲ್ಲಿಗೆ, ವನೇಜ, ಬೀಸುವಗಾಳಿ.'

* 'ಲುಕ್' ಎಂಬುದು ಪ್ರತ್ಯಯಗಳ ಲೋಪಕ್ಕೆ ಪಾಣಿನಿಯ ಸಂಕೇತ.

ಕೆಲವರು ಸಮಾಸಗಳನ್ನು ಆರು ವಿಧವೆಂದು ಹೇಳುವರು : ನಾಮ+ನಾಮ; ನಾಮ+ಧಾತು; ಧಾತು+ನಾಮ; ಧಾತು+ಧಾತು; ಗುಣ+ನಾಮ; ಗುಣ+ಧಾತು.

ಸುಪಾಂ ಸುಪಾ ತಿಙಾ ನಾಮ್ನಾ ಧಾತುನಾಥ ತಿಙಾಂ ತಿಙಾ
ಸುಬಂತೇನೇತಿ ಚ ಜ್ಞೇಯಃ ಸಮಾಸಃ ಷಡ್ವಿಧೋ ಬುಧೈಃ

ಇದನ್ನೂ ಹೋಲಿಸಿರಿ.

ಇನ್ನೂ ಕೆಲವರು ಸಮಾಸಗಳನ್ನು (೧) ಪೂರ್ವಪದಪ್ರಧಾನ (ಉದಾ: ಅವ್ಯಯೀಭಾವ) (೨) ಉತ್ತರಪದಪ್ರಧಾನ (ಉದಾ: ತತ್ಪುರುಷ) (೩) ಉಭಯ ಪದಪ್ರಧಾನ (ಉದಾ: ದ್ವಂದ್ವ) (೪) ಅನ್ಯಪದಪ್ರಧಾನ (ಉದಾ: ಬಹುವ್ರೀಹಿ) ಎಂದು ವಿಭಾಗಿಸುತ್ತಾರೆ.

ಸೂತ್ರ ೪೫

ಭೂಷಣ ೧೨೪, ೧೨೫; ದರ್ಪಣ ೧೬೨; ಶಾಸನ ೨೪೮, ೨೯೨

ಸೂತ್ರ ೪೬

ಭೂಷಣ ೧೨೬ರಿಂದ ೧೨೮; ದರ್ಪಣ ೧೬೪; ಶಾಸನ ೩೦೭, ೩೦೯

ತತ್ಪುರುಷ — ಉತ್ತರಪದದರ್ಥವನ್ನು ಪೂರ್ವಪದವು ಪುಷ್ಟಿ(ಅಥವಾ ನಿರ್ಧಾರಣ)ಗೊಳಿಸುವಂತಹ ಸಮಾಸ. ಪೂರ್ವಪದದ ವಿಭಕ್ತಿಗಳಿಗನುಸಾರವಾಗಿ ಆಯಾ ವಿಭಕ್ತಿಗಳನ್ನುಳ್ಳ ತತ್ಪುರುಷಗಳೆಂದು ಆರು ಒಳಭೇದಗಳನ್ನು ಕಲ್ಪಿಸಿದ್ದಾರೆ. ಇಲ್ಲಿ ದ್ವಿತೀಯೆಯಿಂದ ಮುಂದಿನ ವಿಭಕ್ತಿಗಳೆಲ್ಲಾ ಬರುವುವು.

ಕರ್ಮಧಾರಯ — ಇದಕ್ಕೆ ಪಾಣಿನಿಯು ಸಮಾನಾಧಿಕರಣ ತತ್ಪುರುಷ ವೆಂದು ಹೇಳಿರುವನು; ಎಂದರೆ ಸಮಾಸವನ್ನು ವಿಗ್ರಹಮಾಡಿದಾಗ ಇದರೊಳಗಿನ ಎರಡೂ ಶಬ್ದಗಳು ಒಂದೇ ವಿಭಕ್ತಿಯಲ್ಲಿರುವುವು. ಸಂಸ್ಕೃತದಲ್ಲಿ ಇದು ಒಡೆದು ಕಾಣುವಂತೆ ಕನ್ನಡದಲ್ಲಿ ಕಾಣುವುದಿಲ್ಲ. ಆದರೂ ಅರ್ಥದಿಂದ ಅದನ್ನು ಗ್ರಹಿಸ ಬಹುದು. ಉದಾ: ' ಕಿಱುದು+ಕೂಸು=ಕಿಱುಗೂಸು. '

ದ್ವಿಗು — ಕರ್ಮಧಾರಯದ ಪೂರ್ವಪದವು ಸಂಖ್ಯಾವಾಚಕವಾಗಿದ್ದರೆ ಈ ಹೆಸರು. ಉದಾ: ' ಇರ್ವರ್ಾಳ್ ' (೨೦೭).

೨೦೫ — ಸೂಕ್ತಿಸುಧಾರ್ಣವ ೧ – ೬೨. **೨೦೬**—ಕಾವ್ಯಸಾರ ೧೦೮೭. **೨೦೭**—ದರ್ಪಣ ೬೭, ೧೬೪.

ಸೂತ್ರ ೪೭

ಭೂಷಣ ೧೨೯ರಿಂದ ೧೩೧; ದರ್ಪಣ ೧೬೫; ಶಾಸನ ೩೦೬, ೩೧೦, ೩೧೧, ೩೧೪

ಬಹುವ್ರೀಹಿ — ಈ ಸಮಾಸದಲ್ಲಿರುವ ಎರಡು ಅಥವಾ ಹೆಚ್ಚು ಪದಗಳು

ವಿಗ್ರಹಮಾಡಿದಾಗ ಒಂದೇ ವಿಭಕ್ತಿಯಲ್ಲಿರುವುವು. ಇಡಿಯ ಸಮಾಸವು ಬೇರೊಂದು ಪದಕ್ಕೆ ವಿಶೇಷಣದಂತೆ ವರ್ತಿಸುವುದು.

ದ್ವಂದ್ವ — ಇದರ ಎಲ್ಲ ಶಬ್ದಗಳು ಒಂದೇ ವಿಭಕ್ತಿಯಲ್ಲಿರುವುವು. ಇದರಲ್ಲಿರುವ ಶಬ್ದಗಳನ್ನು ಸಮುಚ್ಚಯವಾಗಿ ತಿಳಿದುಕೊಳ್ಳಬೇಕು. ಉದಾ: ' ರಾಮಲಕ್ಷ್ಮಣರು ' ಅಂದರೆ ' ರಾಮನು ಮತ್ತು ಲಕ್ಷ್ಮಣನು ' ಎಂಬರ್ಥ.

ಅವ್ಯಯೀಭಾವ — ಇದರಲ್ಲಿ ಪೂರ್ವಪದಕ್ಕೆ ಪ್ರಾಧಾನ್ಯವು. ಇದನ್ನು ವಿಗ್ರಹಮಾಡಿದಾಗ ಉತ್ತರಪದವು ಷಷ್ಠೀವಿಭಕ್ತಿಯಲ್ಲಿರುವುದು. ಉದಾ : ' ಮುಂಗೈ=ಕೈಯ ಮುಂದು ' ಎಂದರೆ ಕೈಯ ಮುಂದಿನ ಭಾಗ. ಈ ಬಗೆಯ ಸಮಾಸಕ್ಕೂ ಸಂಸ್ಕೃತದ ಅವ್ಯಯೀಭಾವಸಮಾಸಕ್ಕೂ ವ್ಯತ್ಯಾಸವುಂಟು. ಸಂಸ್ಕೃತದಲ್ಲಿ ಪೂರ್ವಪದವು ಅವ್ಯಯ ಉತ್ತರಪದವು ನಾಮಪದಗಳಾಗಿದ್ದು ಸಮಸ್ತಪದವು ಅವ್ಯಯದಂತೆ ವಿಭಕ್ತಿಗಳಿಲ್ಲದೆ ಉಪಯೋಗವಾಗುವುದು. ಆದುದರಿಂದ ಅವ್ಯಯೀಭಾವವೆಂಬ ಹೆಸರು; ಮತ್ತು ಪೂರ್ವಪದಕ್ಕೆ ಪ್ರಾಧಾನ್ಯ. ಕನ್ನಡ ಅವ್ಯಯೀಭಾವ ಸಮಾಸಗಳು ಒಂದು ಇಡಿಯ ಪದಾರ್ಥದ ಭಾಗವನ್ನು ಅಥವಾ ಅಂಶವನ್ನು ಹೇಳುವುದರಿಂದ ಶಾಸನಕಾರನು ಅವನ್ನು ಅಂಶೀಸಮಾಸಗಳೆಂದು ಕರೆದಿರುವನು. ಸಂಸ್ಕೃತ ವ್ಯಾಕರಣಾನುಸಾರವಾಗಿ ಇವು ಷಷ್ಠೀತತ್ಪುರುಷಗಳೇ.

೨೦೯ — ದರ್ಪಣ ೧೮೬. **೨೧೦** — ಭೂಷಣ ೧೯೨

೨೧೧ — ಭೂಷಣ ೬೬

ಸೂತ್ರ ೪೮

ಮಾರ್ಗ ೧–೧೧೭; ಭೂಷಣ ೧೩೩, ೧೩೪; ದರ್ಪಣ ೧೬೭;
ಶಾಸನ ೨೯೮ ರಿಂದ ೩೦೦, ೩೮೧, ೩೮೨

ಮೇಲೆ ಹೇಳಿರುವ ಸಮಾಸಗಳಲ್ಲದೆ ಇಲ್ಲಿ ಕ್ರಿಯಾಸಮಾಸವೆಂಬ ಇನ್ನೊಂದು ವಿಧವನ್ನು ಹೇಳಿದೆ. ಇದರಲ್ಲಿ ದ್ವಿತೀಯಾ ಅಥವಾ ತೃತೀಯಾ ವಿಭಕ್ತಿಯಲ್ಲಿದ್ದ ಪೂರ್ವಪದವು ಮುಂದಿನ ಕ್ರಿಯಾರ್ಥಕಪದದೊಡನೆ ಸಮಾಸವಾಗುತ್ತದೆ. ಆದರೆ ಪೂರ್ವಪದವು ಕೃದಂತವಾಗಿರಬಾರದು. ಉದಾ : ದ್ವಿತೀಯೆಗೆ : ' ಮನೆಯಂ+ ಮಾಡಲ್=ಮನೆಮಾಡಲ್ (೨೧೫); ತೃತೀಯೆಗೆ : ' ಕಣ್ಣಿಂ+ಕಂಡ=ಕಣ್ಗಂಡಂ ' ಹೀಗೆ ಸಮಾಸಮಾಡುವಾಗ ಪೂರ್ವಪದವು ಸಂಸ್ಕೃತ ಅ ಕಾರಾಂತವಿದ್ದಾಗ ಅದರ ಮುಂದೆ ಬಿಂದು ನಿತ್ಯವೆಂದೂ ಕನ್ನಡ ಅ ಕಾರಾಂತ ಉ ಕಾರಾಂತಗಳಿದ್ದಾಗ ಬಿಂದು ವಿಕಲ್ಪವೆಂದೂ ನಿಯಮ. ಉದಾ : ಸಂಸ್ಕೃತಕ್ಕೆ : ' ಧನಂಬಡೆದಂ '; ಕನ್ನಡ ಅದಂತಕ್ಕೆ : ' ಮೊಗಂ ನೋಡಿದಂ, ಮೊಗನೋಡಿದಂ '; ಉದಂತಕ್ಕೆ : ' ಎಟ್ಟುಂಗೊಳಲ್, ಎಟ್ಟುಗೊಳಲ್ ' (೨೧೫).

ಸೂತ್ರ ೪೯-೫೩

ಕರ್ಮಧಾರಯದಲ್ಲಿ ಪೂರ್ವಪದಗಳಾಗುವ ಕನ್ನಡ ವಿಶೇಷಣಗಳು ಸಮಾಸದಲ್ಲಿ ಬೇರೆ ಬೇರೆ ರೂಪಹೊಂದುವುದನ್ನು ಇಲ್ಲಿ ಹೇಳಿದೆ. ಕೆಲವರು ಸಮಾಸದಲ್ಲಿ ಕಾಣುವ ರೂಪಗಳೇ ಈ ವಿಶೇಷಣಗಳ ಮೂಲರೂಪವಾಗಿರಬೇಕೆಂದು ಊಹಿಸುತ್ತಾರೆ.

ಸೂತ್ರ ೪೯

ಭೂಷಣ ೧೩೫ ರಿಂದ ೧೩೭; ದರ್ಪಣ ೧೭೯; ಶಾಸನ ೩೩೩, ೩೩೪

೨೧೮ — ಕಾವ್ಯಸಾರ ೧೦೯೭

ಸೂತ್ರ ೫೦

ಭೂಷಣ ೧೩೮, ೧೩೯; ದರ್ಪಣ ೧೮೦; ಶಾಸನ ೫೩, ೩೩೫, ೩೩೬

ಪೂರ್ವಪದದಾದಿಯ ಹ್ರಸ್ವಸ್ವರವು ಮುಂದೆ ಒತ್ತಕ್ಷರವಿಲ್ಲದೆ ಅಗುರು (ಲಘು) ವಾಗಿದ್ದು ಉತ್ತರಪದವು ಸ್ವರಾದಿಯಾಗಿದ್ದರೆ ಪೂರ್ವಪದಾದಿಯ ಹ್ರಸ್ವಕ್ಕೆ ದೀರ್ಘಾದೇಶವಾಗುವುದು. ಉದಾ : 'ಕರಿದು+ಒಸಡು=ಕಾರೊಸಡು'; ಆದರೆ 'ಕರ್ಬಾಯ್' (೨೨೦). 'ಪಚ್ಚನೆ+ಓಲೆ=ಪಚ್ಚೋಲೆ' (೨೨೧). ಇಲ್ಲಿ ಮೊದಲು 'ಪ' ಕ್ಕೆ ದೀರ್ಘಾದೇಶವಿಲ್ಲ.

೨೨೪ — ದರ್ಪಣ ೬೯, ೧೮೦

ಸೂತ್ರ ೫೧

ಭೂಷಣ ೧೪೦, ೧೪೨, ೧೪೩; ದರ್ಪಣ ೧೮೧; ಶಾಸನ ೩೩೭, ೩೩೯, ೩೪೦, ೩೯೦

೨೩೦ — ಹೋ. ಧರ್ಮಾಮೃತ: ೧-೧೪೧

ಸೂತ್ರ ೫೨

ಭೂಷಣ ೧೪೫ ರಿಂದ ೧೪೭; ದರ್ಪಣ ೧೮೨; ಶಾಸನ ೩೪೧ ರಿಂದ ೩೪೩

೨೩೪ — ದರ್ಪಣ ೧೮೨

೨೩೫ — ದರ್ಪಣ ೧೮೨; ಹೋ.

ಮನಕತದಿಂದೊಂದೊರ್ವರ
ನಿನಿಸನಗಲ್ದಿರ್ದರಿಸೆ ನಿಮಗಂ ತಮಗಂ
ಮುನಿಸುಂಟೆ ಕಾಯ್ದು ಬೆನ್ನೀರ್
ಮನೆಸುಡದೆಂಬೊಂದು ನುಡಿವೊಲ್ ಕುರುರಾಜಾ

ಪಂಪಭಾರತ: ೯-೩೮

ಸೂತ್ರ ೫೩, ೫೪

ಸೂ. ೫೩ಕ್ಕೆ: ಭೂಷಣ ೧೪೪; ದರ್ಪಣ ೫೮; ಶಾಸನ ೪೬
ಸೂ. ೫೪ಕ್ಕೆ: ಭೂಷಣ ೧೪೮; ದರ್ಪಣ ೫೪, ೧೭೬; ಶಾಸನ ೩೩೨

'ಅರಸು, ಮಾವು, ಪೊಸತು, ಪೞದು, ಎಳದು, ಪೊಱಗು, ಒಳಗು' ಈ ಪದಗಳು ಪೂರ್ವಪದವಾದಾಗ ಇವುಗಳ ಕೊನೆಯ ಅಕ್ಷರವು ಲೋಪವಾಗುವುದು. ಕೆಲವೆಡೆ 'ಮಾವು' ಎಂಬುದು 'ಮಾಮ್' ಎಂದೂ ಆಗುವುದು. ಉದಾ: 'ಮಾಂಗಾಯ್' (೨೫೦).

೨೪೪ — ದರ್ಪಣ ೬೫

೨೪೯ — ,, ೭೪. ಇದು ಕೆಳಗಿನದರ ಅನುವಾದವಾಗಿದೆ :

ಭೀಮಕಾಂತೈರ್ನೃಪಗುಣೈಃ । ಸ ಬಭೂವೋಪಜೀವಿನಾಂ
ಅಧೃಷ್ಯಶ್ಚಾಭಿಗಮ್ಯಶ್ಚ । ಯಾದೋರತ್ನೈರಿವಾರ್ಣವಃ
ರಘುವಂಶ ೧-೧೬

ಸೂತ್ರ ೫೫

ಭೂಷಣ ೧೪೯; ದರ್ಪಣ ೧೭೫; ಶಾಸನ ೩೭೧, ೩೭೩

೨೫೨-೨೫೩ — ದರ್ಪಣ ೧೭೫

ಸೂತ್ರ ೫೬

ಭೂಷಣ ೧೫೦, ೧೫೧; ದರ್ಪಣ ೧೮೬; ಶಾಸನ ೩೨೭, ೩೨೮, ೩೩೦

ಬಹುವ್ರೀಹಿಸಮಾಸದಲ್ಲಿ ಪುಂಸ್ತ್ರೀಲಿಂಗಗಳಲ್ಲಿ ಉತ್ತರಪದಾಂತದ ವ್ಯಂಜನವು ಅ ಕಾರಾಂತವಾಗುವುದು. ಸ್ವರಾಂತವಿದ್ದಲ್ಲಿ ಅ ಕಾರವು ಉಚಿತಾಗಮದೊಡನೆ ಬರುವುದು. ಕೊನೆಯ 'ಇಲ್ಲ' ಶಬ್ದವು 'ಇಲಿ' ಎಂದಾಗುವುದು. ಅನುಕ್ರಮ ಪ್ರಯೋಗ : 'ಕೆಂಗಣ್ಣಂ (೨೫೬); ಕೆಂಗಣ್ಣಳ್; ಬಲ್ದಲೆಯಂ (೨೫೬);' ನಪುಂಸಕದಲ್ಲಿ ಅ ಕಾರಾಂತವಿಲ್ಲದುದಕ್ಕೆ : 'ಪಲಗೆಯ್ಗಳ್ ಪೊಲಗಳ್'; 'ಇಲಿ' ಗೆ 'ಪಲ್ಲಿಲಿ' (೨೫೭).

೨೫೬ — ಭೂಷಣ ೧೫೦. ೨೫೭ — ಭೂಷಣ ೧೫೧; ದರ್ಪಣ ೧೮೬

ಸೂತ್ರ ೫೭-೬೨

ದ್ವಿಗುಸಮಾಸದಲ್ಲಿ ಪೂರ್ವಪದವಾಗಿ ಬರುವ ಕನ್ನಡ ಸಂಖ್ಯಾವಾಚಕಗಳಲ್ಲಿ ಆಗುವ ರೂಪಭೇದಗಳನ್ನು ಇಲ್ಲಿ ಹೇಳಿದೆ.

ಸೂತ್ರ ೫೭

ಭೂಷಣ ೧೫೩, ೧೫೪; ದರ್ಪಣ ೧೮೭, ಶಾಸನ ೧೮೦

ಒಂದು ಎಂಬುದಕ್ಕೆ ‘ ಓರ್, ಒರ್ ’ ಎಂಬುವಲ್ಲದೆ ‘ಒನ್’ ಎಂಬ ರೂಪವೂ ಉಂಟು. ಉದಾ: ‘ ಒಂದು+ದಿನ = ಒಂದಿನ ’. ಒಮ್ಮೊಮ್ಮೆ ‘ ಎರಡು ’ ಎಂಬುದರ ಕೊನೆಯ ಉ ಕಾರಕ್ಕೆ ಲೋಪವೂ ಡ ಕಾರಕ್ಕೆ ಟ-ಆದೇಶವೂ ಉಂಟು. ಉದಾ : ‘ ಎರಡು+ಮಾತಾಡಿ = ಎರಟ್ಮಾತಾಡಿ ’ (೨೬೧).

ಸೂತ್ರ ೫೮

ಭೂಷಣ ೧೫೫, ೧೫೬; ದರ್ಪಣ ೧೮೮; ಶಾಸನ ೬೮, ೩೫೨ರಿಂದ ೩೫೪, ೩೬೦

‘ ಮೂಱು ’ ಎಂಬುದು ವ್ಯಂಜನವು ಪರವಾದಾಗ ಬಹುತರವಾಗಿ ‘ ಮೂ ’ ಎಂದಾಗುವುದು. ‘ ಮೂಲೋಕ ’ (೨೬೩). ಕ-ಪವರ್ಗಗಳು ಪರವಾದಾಗ ‘ ಮು ’ ಎಂದಾಗಿ ಪರಪದದಾದಿವ್ಯಂಜನಕ್ಕೆ ದ್ವಿತ್ವಭಾವವಾಗುವುದು. ಉದಾ: ‘ಮುಕ್ಕೊಡೆ (೨೬೪); ಮುಪ್ಪುರಿ (೨೬೫)’. ಕ-ಪವರ್ಗವಲ್ಲದಲ್ಲಿಯೂ ಉಂಟು: ‘ ಮುಚ್ಚವಡಿ, ಮುಚ್ಚಾಲ್ ’. ಕವರ್ಗದಲ್ಲಿ ‘ ಮೂ ’ ಎಂದೂ ಆಗುವುದು: ‘ ಮೂಗಯ್ಯ’ (೨೬೬). ಸ್ವರವು ಪರವಾದಾಗ ವಿಕಲ್ಪದಿಂದ ‘ ಮುಯ್ (ಯ್ಯ) ’ ಆದೇಶವಾಗುವುದು. ಉದಾ: ‘ ಮುಯ್ಯಡಿ, ಮೂಱಡಿ; ಮುಯ್ಯೆಟು, ಮೂಱೇಟು ’ ಇತ್ಯಾದಿ.

೨೬೩–೨೬೬ — ದರ್ಪಣ ೧೮೮

ಸೂತ್ರ ೫೯

ಭೂಷಣ ೧೫೭, ೧೫೮; ದರ್ಪಣ ೧೮೯; ಶಾಸನ ೩೫೧, ೩೫೫, ೩೫೬

೨೬೮–೨೭೧ — ದರ್ಪಣ ೧೮೯

ಸೂತ್ರ ೬೦

ಭೂಷಣ ೧೫೯ರಿಂದ ೧೬೧; ದರ್ಪಣ ೧೯೦; ಶಾಸನ ೩೬೧, ೩೬೨

೨೭೪ — ದರ್ಪಣ ೧೯೦

ಸೂತ್ರ ೬೧

ಭೂಷಣ ೧೬೩ರಿಂದ ೧೬೫; ದರ್ಪಣ ೧೯೨; ಶಾಸನ ೩೬೪ರಿಂದ ೩೬೭

೨೭೬, ೨೭೭ — ದರ್ಪಣ ೧೯೨

ಸೂತ್ರ ೬೨

ಭೂಷಣ ೧೬೨; ದರ್ಪಣ ೧೯೧; ಶಾಸನ ೩೬೩

೨೭೯–೨೮೧ — ದರ್ಪಣ ೧೯೧

ಸೂತ್ರ ೬೩

ಮಾರ್ಗ ೧-೫೮; ಭೂಷಣ ೧೩೨; ದರ್ಪಣ ೧೭೪, ೨೯೭, ೨೯೮; ಶಾಸನ ೨೯೫, ೨೯೬

ಕನ್ನಡ ಅಥವಾ ತದ್ಭವ ಪದಗಳನ್ನು ಸಂಸ್ಕೃತ ಪದಗಳೊಡನೆ ಬೆರಸಿ ಸಮಾಸಮಾಡಬಾರದೆಂದು ನಿಯಮ. ಹಾಗೆ ಮಾಡುವುದು 'ಅರಿಸಮಾಸ' ದೋಷವೆಂದು ಗ್ರಹಿಕೆ. ಉದಾ: ' ಮಾಣಿಕ್ಯಭಂಡಾರ (೨೮೪); ಅರಸುಕುಮಾರ '. ಆದರೆ ಗಮಕ-ಕ್ರಿಯಾಸಮಾಸಗಳಲ್ಲಿ ಇದು ದೋಷವಲ್ಲ. (ನೋ. ದರ್ಪಣ ೧೬೭, ೧೬೮.) ಬಿರುದಾವಳಿಗಳಲ್ಲಿಯೂ ' ಅರಸುಗುಣ, ಪರವೆಣ್, ಅಬ್ಬೆಜನ (೨೮೩)' ಮುಂತಾದ ಕೆಲವು ವಿಶಿಷ್ಟಸಮಾಸಗಳಲ್ಲಿಯೂ ಇದು ದೋಷವಿಲ್ಲ. (ಹೆಚ್ಚಿನ ಶಬ್ದಗಳಿಗೆ ಶಾಸನ ೨೯೬; ದರ್ಪಣ ೧೭೪ ನೋಡುವುದು.)

ದರ್ಪಣಕಾರನು ಸೂ. ೨೯೭, ೨೯೮ರಲ್ಲಿ ' ಮಣಿ, ಮಂಚ' ಮೊದಲಾದ ಶಬ್ದಗಳ ಪಟ್ಟಿಯೊಂದನ್ನು ಕೊಟ್ಟಿದ್ದಾನೆ. ಅವುಗಳನ್ನು ಕನ್ನಡ ಮತ್ತು ಸಂಸ್ಕೃತ ಶಬ್ದಗಳೊಡನೆ ನಿರ್ದೋಷವಾಗಿ ಸಮಾಸಮಾಡಬಹುದೆಂದು ಹೇಳಿ ಅವುಗಳಿಗೆ 'ತತ್ಸಮ' ಶಬ್ದಗಳೆಂದು ಹೆಸರಿಟ್ಟಿದ್ದಾನೆ. ಉದಾ: ' ಎಳಲತೆ, ನವಲತೆ; ಕರತಳ, ಕೆಂದಳ; ಕಾಂಚನಮಂಚ, ತೂಗುಮಂಚ ' ಇತ್ಯಾದಿ.

೨೮೪ — ದರ್ಪಣ ೨೮೯

ಸೂತ್ರ ೬೪

ಭೂಷಣ ೧೯೨; ದರ್ಪಣ ೧೯೫; ಶಾಸನ ೩೮೫ರಿಂದ ೩೮೮, ೩೯೪, ೩೯೭

ಯಾವುದಾದರೊಂದು ಕಾರ್ಯದಲ್ಲಿ ಸಂಭ್ರಮವನ್ನು ತೋರಿಸುವಲ್ಲಿ (ಚಾಪಲ), ಕಾರ್ಯವು ಸಾಗುತ್ತಲೇ ಇರುವುದು ಅಥವಾ ಸಾವಕಾಶವಾಗಿ ಮುಗಿಯುತ್ತಿರುವುದು (ಅಭೀಕ್ಷ್ಣ್ಯ) ಅಥವಾ ಪುನಃ ಪುನಃ ನಡೆಯುತ್ತಿರುವುದು ಎನ್ನುವಲ್ಲಿ (ಕ್ರಿಯಾಸಮಭಿಹಾರ), ಬೇರೆಬೇರೆಯಾಗಿರುವ ಪ್ರತಿಯೊಂದನ್ನು ಸೇರಿಸಿ ಹೇಳುವಲ್ಲಿ (ವೀಪ್ಸೆ), ಸಮೀಪದ ಅಥವಾ ದೂರದ ವಸ್ತುವನ್ನು ತೋರಿಸುವಲ್ಲಿ, ಆಧಿಕ್ಯ (emphasis) - ಅನುಕರಣ ಮುಂತಾದುವುಗಳಲ್ಲಿ — ಶಬ್ದಗಳನ್ನಾಗಲೀ ವಾಕ್ಯಗಳನ್ನಾಗಲೀ ಎರಡುಸಾರೆಯಾಗಲೀ ಮೂರುಸಾರೆಯಾಗಲೀ ಹೇಳುವುದುಂಟು. ಇಂತಹ ಕಡೆಗಳಲ್ಲಿ ಮೊದಲ ಶಬ್ದಗಳಲ್ಲಿ ಕೆಲಕೆಲವೆಡೆ ಕೊನೆಯ ಅಕ್ಷರಕ್ಕೆ ಲೋಪವಾಗುವುದುಂಟು. 'ಕೆಟಗೆ+ಕೆಟಗೆ = ಕೆಟಕೆಟಗೆ ' (೨೯೧).

೨೮೮, ೨೯೦, ೨೯೨, ೨೯೩ — ಭೂಷಣ ೧೯೨ ; ದರ್ಪಣ ೧೯೫

೨೮೯, ೨೯೧ — ಭೂಷಣ ೧೯೨. **೨೯೪** — ದರ್ಪಣ ೫೩, ೨೩೦

೨೯೫ — ಆದಿಗ್ರಹಣಕ್ಕೆ = ಇತ್ಯಾದಿಗಳಲ್ಲಿಯಲ್ಲದೆ, ಎಂದರೆ ಮೇಲೆ ಹೇಳಿದೆಡೆಗಳಲ್ಲಿ ಮಾತ್ರವಲ್ಲದೆ ಬೇರೆಕಡೆಗಳಲ್ಲಿ ಸಹ ಎಂದರ್ಥ (ನೋ. ಭೂಷಣ ೧೯೨).

ಸೂತ್ರ ೬೫–೬೬

ಭೂಷಣ ೧೧೯, ೧೨೧; ದರ್ಪಣ ೧೮೩, ಶಾಸನ ೮೨, ೧೪೦

೨೯೮, ೨೯೯, ೩೦೧ — ದರ್ಪಣ ೬೬

ಸೂತ್ರ ೬೭

ಭೂಷಣ ೧೧೪, ೧೨೩; ದರ್ಪಣ ೧೫೭, ೧೫೮; ಶಾಸನ ೯೫, ೫೪೦

'ಆವಂ' ಎಂಬುದೇ 'ಆವೊಂ' ಎಂದಾಗಿದೆ. ಹಾಗೆಯೇ 'ಕಾವೊಂ (೩೦೩); ದವ+ದಲೆ=ದೌದಲೆ (೩೦೪); ಸಯ್ತಿರ್ಪೆ=ಸೈತಿರ್ಪೆ (೩೦೫); ತಣ್+ನೆಬಲ್=ತಣ್ಣೆಬಲ್ (೩೦೬)'. ಣ ಕಾರದ ಮುಂದೆ ನ ಕಾರವು ಬಂದಾಗ ಅದಕ್ಕೆ ಣತ್ವವಿದ್ದರೂ ಇದು ಉಚ್ಚಾರಕ್ಕೆ ಕಠಿಣವಾದುದರಿಂದ ಕೆಲವೆಡೆ ಬಿಡಬೇಕಾಗುತ್ತದೆ. ಉದಾ: 'ಕಣ್ನೆಯ್ದಿಲ್, ಗೇಣ್ನೀಳಂ' ಇತ್ಯಾದಿ.

ಸೂತ್ರ ೬೮

ಭೂಷಣ ೫; ದರ್ಪಣ ೮, ೭೦; ಶಾಸನ ೫೬

'ಪೊಯ್, ಬಯ್, ಆರಯ್, ಗೆಯ್, ಸುಯ್' ಎಂಬಿವುಗಳಿಗೆ ಮುಂದೆ ಸ್ವರಾದಿಯಾದ ಪ್ರತ್ಯಯಗಳು ಪರವಾದಲ್ಲಿ ಕೊನೆಯ ಯ ಕಾರವು ವಿಕಲ್ಪದಿಂದ ದ್ವಿತ್ವವಾಗುವುದು. ದರ್ಪಣಕಾರನು 'ಉಯ್, ನೆಯ್, ಬಯ್, ಸುಯ್' ಇವುಗಳಲ್ಲಿ ದ್ವಿತ್ವವು ನಿತ್ಯವೆಂದು ಹೇಳಿದ್ದಾನೆ. ಅವಧಾರಣಾರ್ಥದಲ್ಲಿ ಶಬ್ದಗಳ ಕೊನೆಯಲ್ಲಿ ಬರುವ ಎ, ಒ ಗಳಿಗೆ ಹ್ರಸ್ವದೀರ್ಘರೂಪಗಳೆರಡೂ ಇರುವುವು.

೩೨೦, ೩೨೧ನೆಯ ಪದ್ಯಗಳಲ್ಲಿ– ಏ, ಓ ಕಾರಗಳು ಕನ್ನಡದಲ್ಲಿ ಸಂಸ್ಕೃತದಂತೆ ಸಂಯುಕ್ತವರ್ಣಗಳಲ್ಲ; ಸ್ವಭಾವದಿಂದ ಇರುವುವು — ಎಂಬುದನ್ನು ತೋರಿಸುವ 'ಏಟೆಲೆ, ಓಲೆ' ಇತ್ಯಾದಿ ಉದಾಹರಣೆಗಳಿವೆ. ಇಂತಹ ಕಡೆಗಳಲ್ಲಿ ಸೂತ್ರದಲ್ಲಿ ಹೇಳಿರುವ ಹ್ರಸ್ವ-ದೀರ್ಘವಿಕಲ್ಪವು ಏ, ಓ ಗಳಿಗೆ ಇರುವುದಿಲ್ಲ.

೩೦೯ — ದರ್ಪಣ ೬೯. **೩೧೧** — ಕಾವ್ಯಸಾರ ೬೭೬

೩೧೩ — ಶಾಸನ ೫೬. ಇದು ಕೆಳಗಿನ ಪದ್ಯದ ಅನುವಾದವಾಗಿದೆ:

ಪರ್ಜನ್ಯ ಇವ ಭೂತಾನಾ । ಮಾಧಾರಃ ಪೃಥಿವೀಪತಿಃ ॥
ವಿಕಲೇಽಪಿ ಹಿ ಪರ್ಜನ್ಯೇ । ಜೀವ್ಯತೇ ನ ತು ಭೂಪತೌ ॥

ಶಾರ್ಙ್ಗಧರಪದ್ಧತಿ: ೧೨೮೩

೩೧೪ — ದರ್ಪಣ ೮, ೨೩೪. **೨೧೮** — ದರ್ಪಣ ೧೨೫

ತದ್ಧಿತಪ್ರಕರಣ

ಸಂಸ್ಕೃತದಲ್ಲಿ ಮೂಲಶಬ್ದಗಳು ಹೆಚ್ಚಾಗಿ ಧಾತುರೂಪವಾಗಿರುವುವೆಂದೂ ಅವುಗಳನ್ನು ನಾಮಗಳನ್ನಾಗಿ ಮಾಡಿಕೊಳ್ಳುವಾಗ ಹಚ್ಚುವ ಪ್ರತ್ಯಯಗಳಿಗೆ ಕೃತ್ ಪ್ರತ್ಯಯಗಳೆಂದೂ ಹೀಗೆ ಸಾಧಿತವಾದ ನಾಮಗಳಿಂದ ಹೊಸನಾಮಗಳನ್ನು ಮಾಡಿಕೊಳ್ಳಬೇಕಾದಾಗ ಹಚ್ಚುವ ಪ್ರತ್ಯಯಗಳಿಗೆ ತದ್ಧಿತಪ್ರತ್ಯಯಗಳೆಂದೂ ಸಂಸ್ಕೃತವ್ಯಾಕರಣಕಾರರು ಹೇಳುತ್ತಾರೆ.

ಕನ್ನಡದಲ್ಲಿ ಧಾತುಗಳಿಗೂ ನಾಮಗಳಿಗೂ ಒಂದೇ ರೂಪವುಳ್ಳ ಶಬ್ದಗಳೂ ದಿಟದ ನಾಮಗಳೂ ಸಂಸ್ಕೃತಕ್ಕಿಂತ ಹೆಚ್ಚು ಇರುವುವಾದರೂ ತದ್ಧಿತಪ್ರತ್ಯಯಗಳನ್ನು ಹಚ್ಚಿ ಬೇರೆ ನಾಮಗಳನ್ನು ಮಾಡಿಕೊಳ್ಳುವ ರೂಢಿಯೂ ಉಂಟು. ಈ ಪ್ರಕರಣದಲ್ಲಿ ಕನ್ನಡದಲ್ಲಿ ರೂಢಿಯಾಗಿರುವ ತದ್ಧಿತಪ್ರತ್ಯಯಗಳೂ ಅವುಗಳ ಪ್ರಯೋಗಗಳೂ ಹೇಳಲ್ಪಟ್ಟಿವೆ.

ಸೂತ್ರ ೬೯

ಭೂಷಣ ೧೬೬ರಿಂದ ೧೬೮; ದರ್ಪಣ ೧೯೭; ಶಾಸನ ೪೦೫ರಿಂದ ೪೦೯, ೪೧೮

೩೨೩ — ದರ್ಪಣ ೧೯೭. ಎರವಣಿಗ=ಸಾಲಮಾಡುವವ; ಸರವಂದಿಗ=ಬಾಣಗಳನ್ನು ಕಟ್ಟುವವ (ಸಂ. ‘ ಶರಬಂಧಕ ’ ದಿಂದ); ಮಾಂದರಿಗ=ಕುದುರೆಯ ಆಳು, (ಸಂ. ‘ ಮಂದುರಾ ’ ಎಂಬುದರಿಂದ: ‘ ಮಾಂದುರಿಗ ’ ಎಂದೂ ಇರುವುದು).

ಸೂತ್ರ ೭೦

ಭೂಷಣ ೧೭೦, ೧೭೧; ದರ್ಪಣ ೧೯೮, ೧೯೯; ಶಾಸನ ೪೨೩, ೪೬೬, ೪೨೭

೩೨೫ — ಭೂಷಣ ೧೭೦; ದರ್ಪಣ ೧೯೯

೩೨೬ — ಭೂಷಣ ೧೭೧; ದರ್ಪಣ ೧೯೮. ಅಡಪವಳ=ಅಡಪವನ್ನು ಹಿಡಿಯುವವ; ಅಡುವಳ=ಅಡಿಗೆಯುವ.

ಸೂತ್ರ ೭೧

ಭೂಷಣ ೧೮೫, ೧೮೭; ದರ್ಪಣ ೧೯೯; ಶಾಸನ ೪೧೧, ೪೧೨

೩೨೮, ೩೨೯ — ದರ್ಪಣ ೧೯೯

ಸೂತ್ರ ೭೨

ಭೂಷಣ ೧೮೮, ೧೮೯; ದರ್ಪಣ ೨೦೮; ಶಾಸನ ೧೯೦ರಿಂದ ೧೯೨, ೧೯೮ರಿಂದ ೨೦೧

ಸೂತ್ರ ೭೩

ಭೂಷಣ ೧೯೦, ೧೯೧; ದರ್ಪಣ ೨೦೮; ಶಾಸನ ೧೮೪, ೧೯೫ರಿಂದ ೧೯೭

೩೩೩ — ದರ್ಪಣ ೨೦೮

ಸೂತ್ರ ೭೪
ಭೂಷಣ ೧೬೯; ದರ್ಪಣ ೨೦೦; ಶಾಸನ ೪೨೦

೩೩೫ — ದರ್ಪಣ ೨೦೦. ಕಾಲೂರ್+ಇಚ=ಕಾಲುರಿಚ.

ಸೂತ್ರ ೭೫
ಭೂಷಣ ೧೭೨, ೧೭೩; ದರ್ಪಣ ೨೦೬, ೨೧೪; ಶಾಸನ ೪೦೨, ೪೨೮

೩೩೭ — ಭೂಷಣ ೧೭೨. ೩೩೯ — ಭೂಷಣ ೧೭೩

ಸೂತ್ರ ೭೬
ಭೂಷಣ ೧೭೪, ೧೭೫; ದರ್ಪಣ ೨೧೪; ಶಾಸನ ೩೮೩, ೪೨೮, ೪೨೯

೩೪೨ — ಭೂಷಣ ೧೭೫

ಸೂತ್ರ ೭೭
ಭೂಷಣ ೧೭೮, ೧೭೯; ದರ್ಪಣ ೨೧೧;

ಶಾಸನ ೪೩೦ರಿಂದ ೪೩೨, ೫೫೬ರಿಂದ ೫೫೮, ೫೬೮ರಿಂದ ೫೭೧, ೫೭೩, ೫೭೪

ದರ್ಪಣಕಾರನು ಸೂ. ೨೧೧ರ ವೃತ್ತಿಯಲ್ಲಿ ' ತನ ' ಪ್ರತ್ಯಯವನ್ನು ಕುರಿತು ' ಸಂಸ್ಕೃತದೊಳಿದು ಸಲ್ಲದು; ಆರೋಹಕತನಮೆಂಬುದಬದ್ಧಂ ' ಎಂದು ಹೇಳಿರುವನು. ಆದರೆ ಇಂತಹ ಪ್ರಯೋಗಗಳು ಬಹಳವಾಗಿ ಬಳಕೆಯಲ್ಲಿ ಬಂದಿರಬಹುದಾದುದರಿಂದ ಶಾಸನಕಾರನು ಸೂತ್ರ ೪೩೧ರಲ್ಲಿ ಇವುಗಳನ್ನು ಒಪ್ಪಿ ' ಉನ್ನತತನ ' ಎಂಬ ಉದಾಹರಣೆಯನ್ನು ಕೊಟ್ಟಿದ್ದಾನೆ.

ಸೂತ್ರ ೭೮
ಭೂಷಣ ೧೭೭; ದರ್ಪಣ ೨೦೭; ಶಾಸನ ೪೩೩

ಸಂಖ್ಯಾವಾಚಕಗಳ ಮುಂದೆ ಇಷ್ಟು ಬಾರಿ ಎಂಬ ಅರ್ಥದಲ್ಲಿ ' ಮೆ ' ಎಂಬ ಪ್ರತ್ಯಯವು ಬರುತ್ತದೆ. ಆಗ ' ಮೂಱು ' ಶಬ್ದಕ್ಕೆ ಶಾಸನ ಸೂ. ೩೫೪, ೩೬೦, ೪೩೩ ಇವುಗಳ ಪ್ರಕಾರ 'ಮುಮ್ಮೆ, ಮುಯ್ಮೆ, ಮೂಮೆ, ಮೂರ್ಮೆ (೩೪೯)' ಎಂಬ ರೂಪಗಳಾಗುತ್ತವೆ.

ಸೂತ್ರ ೭೯
ಭೂಷಣ ೧೮೩; ದರ್ಪಣ ೨೦೩; ಶಾಸನ ೪೦೪

೩೫೩ — ದರ್ಪಣ ೨೦೩

ಸೂತ್ರ ೮೦
ಭೂಷಣ ೧೮೧

೩೫೯ — ಭೂಷಣ ೧೮೧; ದರ್ಪಣ ೧೧೮; ಶಾಸನ ೨೫೬

ಸೂತ್ರ ೮೧

ಭೂಷಣ ೧೮೨; ಶಾಸನ ೪೩೭, ೪೩೮

ಪ್ರಕಾರ (ತೆಱ) ಎಂಬ ಅರ್ಥದಲ್ಲಿ 'ಅದು, ಇದು, ಉದು' ಎಂಬಿವು 'ಅಂತು, ಇಂತು, ಉಂತು; ಅಂತೆ, ಇಂತೆ, ಉಂತೆ' ಎಂದಾಗುವುವೆಂದೂ ಕಾಲವನ್ನು ಹೇಳುವಾಗ 'ಅಂದು, ಇಂದು, ಉಂದು' ಎಂದಾಗುವುದೆಂದೂ ಇಲ್ಲಿ ಹೇಳಿದೆ. ಶಾಸನಕಾರನು ಪ್ರಕಾರಾರ್ಥದ ರೂಪಗಳಿಗೆ 'ಅಂತುಟು, ಇಂತುಟು, ಉಂತುಟು' ಎಂಬ ರೂಪಗಳನ್ನೂ ಹೇಳಿರುವನು.

೩೬೪ — ಹೋ:

ಮುನಿದೆಮ್ಮಂ ಕೊಲಲೊಡ್ಡಿದಂದಿನ ಶಿಲಾಸ್ಥಂಭಕ್ಕೆ ಕೆಯ್ನೀಡಿದಂ
ದಿನ ಕಿೞ್ತಂದಿನ ಕಾದಿದಂದಿನ ಕಪಿತ್ಥೋರ್ವೀಜದಿಂಮೋದಿದಂ
ದಿನ ಗೆಲ್ದಂದಿನ ಗೆಲ್ದು ಬಂದು ಬನಮಂ ಕೊಂಡಂದಿನಾ ನಿನ್ನ ಗ
ರ್ಜನೆಯುಂ ಬೀರಮುಮಿಾಗಳಿಂತು ಪುಡಿಯೊಳ್ ಬಿೞ್ದೀ ಪೊರಳ್ದಿರ್ಪುದೇ

ಪೊನ್ನನ ಶಾಂತಿಪುರಾಣ: ೭-೬೦

ಸೂತ್ರ ೮೨

ಭೂಷಣ ೧೭೬; ದರ್ಪಣ ೨೦೭; ಶಾಸನ ೪೩೪

ಒಣರ್ = ಹೇಳು

೩೬೯ — ಭೂಷಣ ೧೭೬

ಸೂತ್ರ ೮೩

ಭೂಷಣ ೧೯೩; ದರ್ಪಣ ೨೦೯

ತದ್ಧಿತಪ್ರತ್ಯಯಗಳು ಸೇರುವಾಗ ಮೂಲಶಬ್ದದ ಕೊನೆಯ ಸ್ವರವಾಗಲೀ ಕೊನೆಯ ಅಕ್ಷರವಾಗಲೀ ಲೋಪವಾಗುವುದುಂಟು. ಉದಾ: 'ಘಟ್ಟಿವಳ+(ಇ)ತಿ ಘಟ್ಟಿವಳ್ತಿ (೩೭೨); ಓದು+ತ=ಓತ; ಏಱು+ತ=ಏತ'. ಒಮ್ಮೊಮ್ಮೆ ಸಮಾಸದಲ್ಲಿ ಆಗುವ ಕಾರ್ಯಗಳೂ ಆಗುವುವು. ಉದಾ: 'ಪಿರಿದು+ಮೆ=ಪೆರ್ಮೆ (೩೭೩); ಮಾಲೆಗಾಱ+(ಇ) ತಿ = ಮಾಲೆಗಾರ್ತಿ'.

ತದ್ಧಿತ-ಭಾವನಾಮಗಳ ಸಲುವಾಗಿ ಈ ಗ್ರಂಥಗಳಲ್ಲಿ ಹೇಳದೆ ಇದ್ದ ಇನ್ನೂ ಕೆಲವು ವಿಷಯಗಳನ್ನು ದರ್ಪಣ-ಶಾಸನಕಾರರು ಹೇಳಿರುವರು. ಅವನ್ನೆಲ್ಲಾ ಪರಿಶೀಲಿಸುವುದರಿಂದ ಹೊಸ ಶಬ್ದಗಳನ್ನು ಸಾಧಿಸುವ ಮುಖ್ಯ ರೀತಿಗಳನ್ನು ಕಂಡುಕೊಳ್ಳಬಹುದು. ಅವುಗಳಲ್ಲಿ ಕೆಲವನ್ನು ಸಂಗ್ರಹರೂಪವಾಗಿ * ಇಲ್ಲಿ ಕೊಟ್ಟಿದೆ.

* ಇದರ ವಿಸ್ತೃತವಿಚಾರಕ್ಕೆ ನೋ. *Kittel: Grammar of Kannada Language pp. 200 et seq.

(೧) ಧಾತುವಿನ ಮೊದಲಿನ ಸ್ವರವು ಹ್ರಸ್ವವಾಗಿದ್ದರೆ ದೀರ್ಘವಾಗುವುದು. ಉದಾ : ' ಪಡು-ಪಾಡು, ಬಿಡು - ಬೀಡು, ಸುಡು - ಸೂಡು '.

(೨) ಇ, ಉ ಗಳು ಏ, ಓ ಗಳಾಗುವುವು. ಉದಾ : ' ಕಿಡು - ಕೇಡು, ಕುಡು - ಕೋಡು, (ದಾನ) '.

(೩) ಕೊನೆಯ ಅಕ್ಷರಕ್ಕೆ ಅ ಅಥವಾ ಎ ಕೂಡುವುದು. ಉದಾ: 'ಸೋಲ್- ಸೋಲ, ಗೆಲ್ - ಗೆಲ್ಲ, ನಿಲ್ - ನೆಲೆ, ಬಿಲ್ - ಬೆಲೆ, ಕಟ್ಟು - ಕಟ್ಟೆ '.

(೪) ಕೊನೆಗೆ ' ಅ ' ಕೂಡುವಾಗ ಅದರ ಮುಂದಿನ ವ್ಯಂಜನವು ಮೃದುವಿದ್ದರೆ ಕರ್ಕಶವಾಗುವುದು. ಉದಾ : ' ತೂಗು - ತೂಕ, ಬೀಗು - ಬಿಂಕ, ಮಾಡು- ಮಾಟ, ಆಡು - ಆಟ, ತೀಡು - ತೀಟ, ಪಡು - ಪಾಟ, ಹೋಗು - ಹೋಕ, ಗೀರು - ಗೀಟು (ರ, ಟಗಳು ಏಕಸ್ಥಾನಿಗಳು) '.

(೫) ಕೆಲವೆಡೆ ಕೊನೆಗೆ ಉ ಕಾರವೂ ಉಂಟು. ' ಬೆಳಗು - ಬೆಳಕು, ಮಿಸುಗು - ಮಿಸುಕು, ನಡುಗು - ನಡುಕು (ನಡುಕ)'. ಪರುಷವ್ಯಂಜನವು ಸರಳವಾಗುವುದೂ ಉಂಟು. ಉದಾ: ' ತುಡುಕು - ತುಡುಗು '.

ಕೆಲವು ಪ್ರತ್ಯಯಗಳನ್ನು ಹಚ್ಚಿ ಹೊಸರೂಪಗಳನ್ನು ಸಾಧಿಸುವುದು ಈ ಪ್ರಕರಣದಲ್ಲಿ ಮೊದಲೇ ಹೇಳಲಾಗಿದೆ. ಆ ಪ್ರತ್ಯಯಗಳಲ್ಲಿ ' ಪು (ವು) ' ಎಂಬುದು ' ಆಗು ' ಧಾತುವಿನಿಂದ ಬಂದಿರಬಹುದು. ' ಮೆ ' ಎಂಬುದು 'ಮೆಯ್' ಎಂಬುದರ ರೂಪಾಂತರ. ' ಕೆ, ಇಕೆ, ಇಕ್ಕೆ, ಗೆ, ಇಗೆ ' ಇವೆಲ್ಲವೂ ' ಇರ್ ' ಧಾತುವಿನಿಂದ ಬಂದಿರಬೇಕು. 'ವಳಿ, ವಳ, ವಳ್ಳ' ಇವು ಬಹುತರವಾಗಿ ' ಪಡು ' ಎಂಬ ಧಾತುವಿನ ರೂಪಾಂತರವಾದ ' ಪಡಿ ' ಎಂಬುದರಿಂದ ಬಂದಂತೆ ತೋರುವುದು. ' ವಣಿಗೆ, ವಳಿಕೆ ' ಇವು ' ಪಣ್ ' ಧಾತುವಿನಿಂದ ಬಂದಿರಬಹುದು. ' ತನ ' ಎಂಬುದು ' ತಾನ್ (ತನ್) ' ಎಂಬುದರ ರೂಪಾಂತರವಾಗಿರಬಹುದು, ಇಷ್ಟೆಲ್ಲ ಊಹೆಯೇ ಹೊರತು ಇನ್ನೂ ನಿರ್ಧಾರವಾಗಿಲ್ಲ. ಆದರೆ ಇವೆಲ್ಲ ದ್ರಾವಿಡಶಬ್ದಗಳೆಂಬಲ್ಲಿ ಸಂದೇಹವಿಲ್ಲ. ಇನ್ನು ' ಕಾಱ (ಗಾಱ), ಅಱ (ಆಱ) ' ಇವು ಸಂಸ್ಕೃತ ' ಕಾರ ', ' ಆರ ' ಗಳೇ ಇರಬೇಕು. ' ಇಗ ' ಮತ್ತು ' ಇಚ ' ಎಂಬಿವು ಕನ್ನಡ ' ಇರ್ ' ಧಾತುವಿನಿಂದ ಬಂದಿರಬಹುದು; ಇಲ್ಲವೆ ಸಂಸ್ಕೃತ ' ಇಕ ' ದ ರೂಪಾಂತರವಾದರೂ ಇರಬಹುದು.

ಆಖ್ಯಾತಪ್ರಕರಣ

ಸೂತ್ರ ೮೪

ಕ್ರಿಯಾರ್ಥವನ್ನು ಹೇಳುವ ಮೂಲ ಶಬ್ದಗಳಿಗೆ ಧಾತುಗಳೆಂದೂ ಇವುಗಳಿಗೆ ಹತ್ತುವ ಪ್ರತ್ಯಯುಗಳಿಗೆ ಆಖ್ಯಾತಪ್ರತ್ಯಯುಗಳೆಂದೂ ಹೆಸರು. ಇವಕ್ಕೆ ಆಖ್ಯಾತ ವಿಭಕ್ತಿಗಳೆನ್ನುವುದೂ ಉಂಟು (ದರ್ಪಣ ೩೭).

ಸಂಸ್ಕೃತದಲ್ಲಿ ೬ ಕಾಲಗಳೂ (ವರ್ತಮಾನ, ಮೂರು ತರದ ಭೂತಕಾಲ, ಎರಡು ತರದ ಭವಿಷ್ಯತ್ಕಾಲ) ಆಜ್ಞಾ, ವಿಧಿ, ಆಶೀಃ, ಸಂಕೇತಗಳೆಂಬ ೪ ಅರ್ಥಗಳೂ ಇರುವುವು. ಮತ್ತು ಅವುಗಳಿಗೆಲ್ಲ ಹಚ್ಚತಕ್ಕ ಪುರುಷಾರ್ಥಕ ಪ್ರತ್ಯಯುಗಳೆಲ್ಲ ಬೇರೆ ಬೇರೆಯಾಗಿಯೇ ಇರುವುವು. ಆದರೆ ಕನ್ನಡವ್ಯಾಕರಣಕಾರರು ಭೂತ, ವರ್ತಮಾನ, ಭವಿಷ್ಯಂತಿ ಎಂಬ ಮೂರೇ ಕಾಲಗಳನ್ನೂ ವಿಧ್ಯಾದಿಯೆಂದು ಒಂದೇ ಅರ್ಥವನ್ನೂ ಅಂಗೀಕರಿಸಿರುವರು. ಪುರುಷಾರ್ಥಕ ಪ್ರತ್ಯಯುಗಳು ಎಲ್ಲ ಕಾಲಗಳಿಗೂ ಒಂದೇ ವಿಧವಾಗಿದ್ದು ಪ್ರತ್ಯೇಕವಾದ ಕಾಲಸೂಚಕ ಪ್ರತ್ಯಯುಗಳು ಅವುಗಳಿಗಿಂತ ಮೊದಲು ಬರುವುವು. ವಿಧ್ಯಾದಿಗೆ ಈ ಗ್ರಂಥದಲ್ಲಿ 'ಸರ್ವಸಾಧನಿ' ಯೆಂದು ಹೇಳಲಾಗಿದೆ.

೩೭೬ — ಇದನ್ನು ಕೆಳಗಿನ ಪದ್ಯದೊಡನೆ ಹೋಲಿಸಿರಿ:

ಮಂದೋಽಯಂ ಮಲಯಾನಿಲಃ ಕಿಸಲಯಂ ಚೂತದ್ರುಮಾಣಾಂ ನವಂ
ಮಾದ್ಯತ್ಕೋಕಿಲಕೂಜಿತಂ ವಿಚಕಿಲಾಮೋದಃ ಪುರಾಣಂ ಮಧು
ಬಾಣಾನಿತ್ಯುಪದೀಕರೋತಿ ಸುರಭಿಃ ಪಂಚೈವ ಪಂಚೇಷವೇ
ಯೂನಾಮಿಂದ್ರಿಯಪಂಚಕಸ್ಯ ಯುಗಪತ್ಸಂಮೋಹಸಂಪಾದಿನಃ

ಶ್ರೀಪಾಲಕವಿರಾಜಃ ಶಾರ್ಙ್ಗಧರಪದ್ಧತಿಃ ೩೭೯

ಸೂತ್ರ ೮೭, ೮೮, ೮೯

ಸೂ. ೮೭ಕ್ಕೆ: ಭೂಷಣ ೧೯೭, ೧೯೮; ದರ್ಪಣ ೨೧೬; ಶಾಸನ ೧೬, ೪೪೨

ಸೂ. ೮೯ಕ್ಕೆ: ಭೂಷಣ ೨೦೭, ೨೦೮; ದರ್ಪಣ ೨೨೭, ೨೨೬; ಶಾಸನ ೪೭೩, ೪೭೪, ೪೭೬

ಕವದಿಂ = ಕ್ರಮದಿಂದ

		ಏಕವಚನ		ಬಹುವಚನ
ಪ್ರಥಮ	ಪು.	ಅಮ್ (ಅನ್)	ಪು., ಸ್ತ್ರೀ.	ಅರ್
	ಸ್ತ್ರೀ.	ಅಳ್		
	ನ.	ಅದು	ನ.	ಅವು
ಮಧ್ಯಮ		ಅಯ್		ಇರ್
ಉತ್ತಮ		ಎನ್		ಎವು

ಎಂಬ ಪುರುಷಾರ್ಥಕ ವಿಭಕ್ತಿಗಳನ್ನು ಇಲ್ಲಿ ಹೇಳಲಾಗಿದೆ. ಇವು ನಿಜವಾಗಿಯೂ ಪುರುಷಾರ್ಥಕ ಸರ್ವನಾಮಗಳ ಮೂಲರೂಪಗಳೇ ಆಗಿರಬೇಕೆಂದು ತೋರುತ್ತದೆ; ಮತ್ತು ನಾಮ-ಸರ್ವನಾಮ-ಗುಣ-ಸಂಖ್ಯಾವಾಚಕಗಳಮೇಲೆಯೂ ಈ ಪ್ರತ್ಯಯಗಳು ಹತ್ತುವುದರಿಂದ ಆಖ್ಯಾತಗಳು ಒಂದುರೀತಿಯ ವಿಶೇಷಣಗಳೆಂದೇ ವ್ಯಾಕರಣಕಾರರ ಗ್ರಹಿಕೆಯೆಂದು ಊಹಿಸಬಹುದು.

ಮಧ್ಯಮೈಕವಚನದಲ್ಲಿ ' ಎ ' ಎಂದೂ (ಉದಾ: " ನಿರವಧಿಸುಖಸಂತತಿಯನದೆಂತು ಪಡೆದೆ ಪೇೞಿನಗರುಹಾ " ಶಾಸನ: ೪೪೨) ಉತ್ತಮಪುರುಷ ಬಹುವಚನದಲ್ಲಿ ' ಎಂ ' ಎಂದೂ ವಿಕಲ್ಪರೂಪಗಳು ದೊರೆಯುವುವು. ಉತ್ತಮಪುರುಷ ಏಕವಚನ ಪ್ರತ್ಯಯವು ' ಏಂ ' ಎಂದು ದೀರ್ಘವಾದುದರ ಪ್ರಯೋಗವು ಕ್ವಚಿತ್ತಾಗಿ ಉಂಟು. ಉದಾ : ' ಕೆಂದಾವರೆಯ ಮಿಸುಪ ಮೆಲ್‌ಮೊಗ್ಗೆಯಂ ಮಾಣದೆಂದುಂ | ನಿನಗೀವೇನಂಜಿ ' — (ಕಬ್ಬಿಗರಕಾವ: ೩೧೮.)

೩೮೦ — ದರ್ಪಣ ೨೩೮, ೨೪೧

ಸೂತ್ರ ೮೬

ಮಾರ್ಗ ೧-೧೨೧; ಭೂಷಣ ೨೦೧, ೨೦೨; ದರ್ಪಣ ೨೨೩

ಸ್ವಾರ್ಥ — ಇದಕ್ಕೆ ದರ್ಪಣಕಾರನು ' ಪುರುಷತ್ರಯಂಗಳ್ ತಮ್ಮರ್ಥಂಗಳೊಳ್ ಸ್ವತಂತ್ರಂಗಳ್ ' ಎಂದು ವೃತ್ತಿಯಲ್ಲಿ ಹೇಳಿದ್ದಾನೆ. ಎಂದರೆ ಈ ಪ್ರತ್ಯಯಗಳು ಒಂದೊಂದೇ ಬಂದಾಗ ಕೇವಲ ಆಯಾ ಪುರುಷಗಳನ್ನಷ್ಟೇ ಹೇಳುವುವು. ಆದರೆ ಯುಗಪತ್ ಪ್ರಯೋಗದಲ್ಲಿ ಎಂದರೆ ಬೇರೆ ಬೇರೆ ಪುರುಷಗಳನ್ನು ಕೂಡಿಸಿ ಹೇಳುವಲ್ಲಿ ಅವುಗಳಲ್ಲೊಂದು ಉತ್ತಮಪುರುಷ ಕರ್ತೃವಿದ್ದರೆ ಅದರ ಬಹುವಚನ ಪ್ರತ್ಯಯವನ್ನೂ ಅದು ಇಲ್ಲದೆ ಕೇವಲ ಪ್ರಥಮಪುರುಷ ಮಧ್ಯಮಪುರುಷ ಕರ್ತೃಗಳಿದ್ದಲ್ಲಿ ಮಧ್ಯಮಪುರುಷ ಬಹುವಚನ ಪ್ರತ್ಯಯವನ್ನೂ ಆಖ್ಯಾತಕ್ಕೆ ಹಚ್ಚಬೇಕು. ಪ್ರಥಮಪುರುಷದ ಪುಂಸ್ತ್ರೀನಪುಂಸಕಗಳನ್ನು ಕೂಡಿಸುಡಿಯುವಾಗ ' ಲಿಂಗತ್ರಯಕ್ಕೆ ತಮ್ಮೊಳ್ ಮುಖ್ಯಾಮುಖ್ಯತೆಯಿಲ್ಲ ' ವಾದುದರಿಂದ ಕೊನೆಗೆ ಬಂದ ಲಿಂಗದ ಬಹುವಚನ ವಿಭಕ್ತಿಯನ್ನು ಆಖ್ಯಾತಕ್ಕೆ ಹಚ್ಚತಕ್ಕುದು. (ದರ್ಪಣ ೧೪೧)

೩೮೫ — ದರ್ಪಣ ೨೧೭

ಸೂತ್ರ ೮೭

ಭೂಷಣ ೧೯೬, ೨೧೦; ದರ್ಪಣ ೨೨೧; ಶಾಸನ ೪೪೬, ೪೭೬

ದ, ದಪ, ವ ಇವು ಈಗ ನಿರರ್ಥಕ ಅಕ್ಷರಗಳಂತೆ ಕಂಡರೂ ಮೊದಲು

ಅರ್ಥವುಳ್ಳ ಕೆಲವು ಶಬ್ದಗಳಿಂದ ಬಂದಿರಬೇಕೆಂದು ತೋರುತ್ತದೆ. ಬೇರೆ ದ್ರಾವಿಡ ಭಾಷೆಗಳಲ್ಲಿ ಆಗುವ ಈ ಮೂರೂ ಕಾಲಗಳ ಆಖ್ಯಾತರೂಪಗಳನ್ನು ಹೋಲಿಸುವುದರಿಂದ ಈ ಪ್ರತ್ಯಯಗಳನ್ನು ಗುರುತಿಸಬಹುದು. 'ದ' ಎಂಬುದರ ಹಿಂದೆ 'ಇ' ಆಗಮವು ಅನೇಕ ಕಡೆ ಬರುವುದರಿಂದ ಈ ಪ್ರತ್ಯಯವು ಮೊದಲು 'ಇದು, ಇತು' ಇವುಗಳ ರೂಪಾಂತರವಾಗಿರಬಹುದು. ಉಚ್ಚಾರದ ಅವಸರದಿಂದ ಕೆಲವೆಡೆ ಹಿಂದಿನ ಇ ಕಾರವು ಹಾರಿ ದ ಕಾರವೊಂದೇ ಬಹಳ ಕಡೆಗಳಲ್ಲಿ ಕಂಡುಬರುವುದರಿಂದ 'ದ' ಎಂಬುದೊಂದೇ ಭೂತಕಾಲಪ್ರತ್ಯಯವೆಂದು ವ್ಯಾಕರಣಕಾರರು ಗ್ರಹಿಸಿರಬಹುದು. ಆದರೆ ತೆಲುಗಿನಲ್ಲಿ 'ಇ' ಎಂಬುದನ್ನೇ ಭೂತಕಾಲಪ್ರತ್ಯಯವೆಂದು ಗ್ರಹಿಸಲಾಗಿದೆ. 'ಇತು, ಇತ್ತು' ಎಂಬಿವು ಈಗಲಾದರೂ ನಪುಂಸಕಲಿಂಗದಲ್ಲಿ ಕಂಡುಬರುತ್ತವೆ. 'ಇ' ಎಂಬುದು ಈಗ ಕೊಡು ಎಂಬ ಅರ್ಥದಲ್ಲಿ ಉಪಯೋಗವಾಗುವ 'ಈ' (ಇ) ಧಾತುವಿನಿಂದ ಬಂದಿರಬೇಕೆಂದು ಕೆಲವರು ಊಹಿಸುತ್ತಾರೆ. 'ದಪ' ಎಂಬುದು ಭೂತಕಾಲ 'ಇದು' (ಇತು) 'ಅಪ' ಎಂಬಿವು ಕೂಡಿ ಆಗಿರಬೇಕೆಂದು ತೋರುತ್ತದೆ. ಈ 'ಅಪ' ಎಂಬುದು 'ಆಗು' ಧಾತುವಿನಿಂದ ಬಂದಿರಬೇಕೆಂದು ಕಿಟ್ಟೆಲರವರ ಅಭಿಪ್ರಾಯವು. 'ಅವು' ಎಂಬ ಇನ್ನೊಂದು ಧಾತುವಿನಿಂದ ಬಂದಿರಬೇಕೆಂದು ಬೇರೆ ಕೆಲವರ ಅಭಿಪ್ರಾಯ. ಆದರೆ 'ಅವು' ಧಾತು ಈಗ ಪ್ರಯೋಗದಲ್ಲಿ ಇಲ್ಲದೆ ಇರುವುದರಿಂದಲೂ 'ಆಗು' ಎಂಬದಕ್ಕೆ 'ಅಪ್ಪುದು, ಅಪ್ಪಂ' ಇತ್ಯಾದಿ ರೂಪಗಳು ಆಗುವುದರಿಂದಲೂ 'ಅವು ಎಂಬುವೇ ರೂಪಪಲ್ಲಟಿಸಿ 'ಅಗು' ಅಥವಾ 'ಆಗು' ಎಂದಾಗಿರಬೇಕೆಂದು ಹೇಳಬರುವಂತಿರುವುದರಿಂದಲೂ ಈ ಎರಡೂ ಅಭಿಪ್ರಾಯಗಳಲ್ಲಿ ಹೆಚ್ಚೇನೂ ವ್ಯತ್ಯಾಸವಿಲ್ಲೆಂದು ಹೇಳಬಹುದು. 'ವ' ಎಂಬುದು 'ಅವ' ಎಂಬುದರ ರೂಪವೇ ಇರಬಹುದು. ಕನ್ನಡದಲ್ಲಿ ಲೋಪಸಂಧಿಯ ಪ್ರಭಾವವು ಹೆಚ್ಚಾಗಿರುವುದರಿಂದ ಕನ್ನಡವ್ಯಾಕರಣಕಾರರು ಹಿಂದಿನ ಸ್ವರಗಳನ್ನು ಹೇಳದೆ ಬಿಟ್ಟಿರಬಹುದು. ದ, ದಪ ಪ್ರತ್ಯಯಗಳ ಹಿಂದೆ ಮಾತ್ರ ಅನೇಕಕಡೆ (ಬಹುತರವಾಗಿ ಉ ಕಾರಾಂತ ಧಾತುಗಳಲ್ಲಿ) 'ಇ' ಆಗಮವು ಬರುವುದು. ಉದಾ: 'ನೋಡಿದಂ'– ಆದರೆ 'ಕೆಟ್ಟಂ, ಕೇಳ್ದಂ, ಬರೆದಂ, ನೋಡುವಂ'.

೩೮೮ — ದರ್ಪಣ ೨೫೧

ಹೋ : K. Ramakrishnaiah : Studies in Dravidian Philology : pp. 57 et seq.

ಸೂತ್ರ ೯೦

ಭೂಷಣ ೨೦೭; ದರ್ಪಣ ೨೨೬; ಶಾಸನ ೪೫೮

ಪ್ರಥಮಪುರುಷ ಏಕವಚನಪ್ರತ್ಯಯವಾದ ‘ ಉದು ’ ಎಂಬುದು ಬಹುಳದಿಂದ ‘ ಇತು, ಇತ್ತು, ಅತ್ತು ’ ಎಂದೂ ಆಗುವುದು.

೩೯೫, ೩೯೬ — ದರ್ಪಣ ೨೨೬

ಸೂತ್ರ ೯೧

ಭೂಷಣ ೨೧೯; ದರ್ಪಣ ೨೨೭; ಶಾಸನ ೪೬೩

ವರ್ತಮಾನ (= ಸಂಪ್ರತಿ), ಭವಿಷ್ಯತ್ಕಾಲಗಳಲ್ಲಿ ಪ್ರಥಮಪುರುಷದಲ್ಲಿ ಲಿಂಗ ವಚನಭೇದವಿಲ್ಲದೆ ‘ ಕುಂ, ಗುಂ ’ ಪ್ರತ್ಯಯಗಳು ಧಾತುಗಳಿಗೆ ಹತ್ತುವುವು. ಈ ರೂಪಗಳೇ ಭೂತಕಾಲದ ಅರ್ಥವನ್ನೂ ಕೊಡುವುವೆಂದು ದರ್ಪಣಕಾರನು ಹೇಳಿದ್ದಾನೆ. ೯೦ನೆಯ ಸೂತ್ರದಲ್ಲಿ ಹೇಳಿದ ಪ್ರತ್ಯಯಗಳ ಕೊನೆಯ ‘ ತು ’ ಎಂಬುದೂ ‘ ಕುಂ, ಗುಂ ’ ಎಂಬಿವೂ ‘ ಉತು, ಆಗು ’ ಎಂಬ ಮೂಲ ಧಾತುಗಳ ಅವಶೇಷಗಳೆಂದು ಕೆಲವರು ಹೇಳುತ್ತಾರೆ. ‘ ಕುಂ-ಗುಂ’ ಅಂತರೂಪಗಳು ಕಾಲ-ವಚನ-ಲಿಂಗ ಭೇದವಿಲ್ಲದೆ ವ್ಯವಹಾರವಾಗುವುದರಿಂದಲೂ ಈ ರೂಪಗಳನ್ನು ‘ ತೊಳ್ಕಾಪ್ಪಿಯಮ್ ’ ಎಂಬ ತಮಿಳು ವ್ಯಾಕರಣದಲ್ಲಿ ಹೇಳಿರುವುದರಿಂದಲೂ ದ್ರಾವಿಡ ಭಾಷೆಗಳಲ್ಲಿ ಮೊದಲು ಕಾಲಭೇದವು ಇದ್ದಿಲ್ಲವೆಂದು ತೋರುತ್ತದೆ. ಬರಬರುತ್ತ ಕಾಲ ವಿವಕ್ಷೆಯನ್ನು ಮಾಡುವುದು ಅವಶ್ಯಕವಾದುದರಿಂದ ಭೂತಕಾಲದ ವಿಭಕ್ತಿಗಳು ಮೊದಲು ಪ್ರಯೋಗದಲ್ಲಿ ಬಂದಿರಬಹುದು. ಆಗ ‘ ಗುಂ-ಕುಂ ’ ಅಂತಪ್ರಯೋಗಗಳು ವರ್ತಮಾನ ಭವಿಷ್ಯತ್‌ಕಾಲಗಳಿಗಾಗಿ ಉಪಯೋಗವಾಗುತ್ತಿದ್ದಿರಬಹುದು. ಆದುದರಿಂದಲೇ ಇವುಗಳ ಹಿಂದೆ ದ, ದಪ, ವ ಕಾರಗಳನ್ನು ಹಚ್ಚುವುದಿಲ್ಲ.

೩೯೯ — ದರ್ಪಣ ೨೨೭

ಸೂತ್ರ ೯೨

ಭೂಷಣ ೨೧೫, ೨೧೯; ದರ್ಪಣ ೨೨೯; ಶಾಸನ ೪೬೫, ೪೭೦

ಉತ್ವೇತ್ವ = ಉತ್ವ + ಇತ್ವ, ಎಂದರೆ ‘ ಉ, ಇ ’ ಪ್ರತ್ಯಯಗಳು. ಅಸ್ಮದ್ ಬಹುವಚನದೊಳಂ = ಅಸ್ಮದ್‌ಬಹುವಚನದೊಳ್ (ಎಂದರೆ ಉತ್ತಮಪುರುಷದಲ್ಲಿ) ‘ ಅಮ್ ’

ವಿಧ್ಯರ್ಥದ ಪ್ರತ್ಯಯಗಳು

ಪ್ರಥಮಪುರುಷ : ಏಕವಚನ-ಬಹುವಚನಗಳಿಗೆ ‘ ಗೆ, ಕೆ, ಕ್ಕೆ ’.
ಮಧ್ಯಮಪುರುಷ : ಏಕವಚನ ‘ ಉ ’ ಬಹುವಚನ ‘ ಇ (ಂ) ’
ಉತ್ತಮಪುರುಷ : ಬಹುವಚನ ‘ ಅಮ್ ’

ಉತ್ತಮಪುರುಷ ಏಕವಚನದಲ್ಲಿ ವಿಧಿಪ್ರಯೋಗವಿಲ್ಲ. ಪ್ರಥಮ-ಮಧ್ಯಮ ಪುರುಷಗಳ ವಿಧ್ಯಾದಿಪ್ರತ್ಯಯಗಳಿಗೆ ' ಉದು ' ಎಂಬ ಆದೇಶವುಂಟು (ಶಾಸನ ೪೬೬). ಉದಾ : ' ಅವಧರಿಪುದು ರಾಜೇಂದ್ರ '.

೪೦೧ — ದರ್ಪಣ ೨೪೩. **೪೦೨** — ದರ್ಪಣ ೨೪೩

೪೦೩ — ದರ್ಪಣ ೨೩೪. **೪೦೪** — ದರ್ಪಣ ೨೨೯

ಸೂತ್ರ ೯೩

ಭೂಷಣ ೨೧೬; ದರ್ಪಣ ೨೩೦; ಶಾಸನ ೪೬೮, ೪೬೯

ಸೂತ್ರ ೯೪-೯೫

ಸೂತ್ರ ೯೪ ಕ್ಕೆ: ಭೂಷಣ ೨೨೧, ೨೨೪, ೨೨೫; ದರ್ಪಣ ೨೩೪, ೨೩೬;
ಶಾಸನ ೫೪೪, ೫೮೦, ೫೮೧, ೫೮೫, ೫೮೬

ಸೂತ್ರ ೯೫ ಕ್ಕೆ: ಭೂಷಣ ೨೨೨, ೨೨೩; ದರ್ಪಣ ೨೩೪, ೨೩೫; ಶಾಸನ ೫೨೪ರಿಂದ ೫೨೯

ಕ್ರಿಯಾರ್ಥಂ = ಬೇರೊಂದು ಕ್ರಿಯೆಯ ಪ್ರಯೋಜನಕ್ಕಾಗಿ.

ವರ್ತಮಾನನ್ಯೂನ ಪ್ರತ್ಯಯಗಳು ' ಉತ್ತುಂ, ಉತುಂ; ಉತೆ, ಉತ್ತೆ ' ಎಂದೂ ಉಂಟು (ದರ್ಪಣ ೨೩೬). ಈ ಪ್ರತ್ಯಯಗಳು ' ಉತ್ ' ಎಂಬೊಂದು ಮೂಲದ್ರಾವಿಡ ಧಾತುವಿನ ರೂಪಗಳೇ ಆಗಿರಬೇಕೆಂದು ತಿಳಿಯುತ್ತದೆ. ಈ ಧಾತುವು ತೆಲುಗಿನಲ್ಲಿ ಇನ್ನೂ ಬಳಕೆಯಲ್ಲಿದೆ. ಉದಾ: ' ಉನ್ನಾಡು (ಇದ್ದಾನೆ)' ಕನ್ನಡದ ' ಉಳ್ ' ಧಾತುವು ಇದರದೇ ಇನ್ನೊಂದು ರೂಪವಿರಬಹುದು. ' ಇ, ಉ' ಎಂಬಿವು ಭೂತನ್ಯೂನ ಪ್ರತ್ಯಯಗಳು. ಉದಾ: 'ನಡುಗಿ,ತೊಡರ್ದು (೪೧೦)'.

ಕ್ರಿಯಾರ್ಥವನ್ನು ಹೇಳುವಲ್ಲಿ ' ಅಲ್ ' ಎಂಬ ಪ್ರತ್ಯಯವು ಬರುವುದು. ಅದೇ ಕೆಲವೆಡೆ ' ಅ ' ಎಂದೂ ' ಅಲ್ಕೆ ' ಎಂದೂ ವಿಕಲ್ಪದಿಂದ ಆಗುವುದು. ಸೂತ್ರ ೯೫ರಲ್ಲಿ ' ಚತುರ್ಥಿ ಸಮಸಲ್ಗುಂ ' ಎಂದು ಹೇಳಿದುದು ಈ ' ಅಲ್ಕೆ ' ಎಂಬ ರೂಪವನ್ನು ಕುರಿತೇ ಆಗಿದೆ.

' ಬೇಡ ' ಎಂಬ ಅರ್ಥದಲ್ಲಿಯೂ ' ಅಲ್ ' ಎಂಬ ಪ್ರತ್ಯಯವು ಬರುವುದು. ಆದರೆ ಈ ' ಅಲ್ ' ಪ್ರತ್ಯಯಕ್ಕೂ ಮೇಲೆ ಹೇಳಿದ ' ಅಲ್' ಪ್ರತ್ಯಯಕ್ಕೂ ಸಂಬಂಧವಿಲ್ಲ. ಇವನ್ನು ಕೂಡಿಸಿ ಹೇಳಿರುವುದರಿಂದ ಇಲ್ಲಿ ಸ್ವಲ್ಪ ಗೊಂದಲವಾಗಿದೆ. ಈ ಎರಡನೆಯ ' ಅಲ್ ' (= ಬೇಡ) ಎಂಬುದು ಪ್ರತಿಷೇಧ ವಿಧಿಯಲ್ಲಿ ಬರುವುದು. ಮಧ್ಯಮ ಪುರುಷ ಬಹುವಚನ ವಿಧ್ಯರ್ಥದ ' ಇಂ ' ಪ್ರತ್ಯಯವನ್ನು ಈ ' ಅಲ್ ' ಎಂಬುದರ ಮುಂದೆ ಹಚ್ಚಲೂಬಹುದು. ಈ ರೂಪಗಳು ' ಮಾಡಬೇಡ (ಂ), ಮಾಡಲ್ ಬೇಡ(ಂ), ಮಾಡಲಿಂ ಬೇಡ(ಂ), ಮಾಡಲ್,ಮಾಡಲಿಂ' ಎಂದಾಗುವುವು.

' ಮಾಡಬೇಡ ' ಎಂಬಲ್ಲಿ ' ಅಲ್ ' ದ ಪ್ರತಿಯಾಗಿ ಕಾಣುವ ' ಅ ' ಎಂಬುದೂ ಪ್ರತಿಷೇಧವಾಚಕವೆಂದು ಶಾಸನಕಾರನ ಮತ.

೪೦೯ — ದರ್ಪಣ ೨೩೬. ೪೧೦ — ದರ್ಪಣ ೨೪೬

೪೧೨ — ದರ್ಪಣ ೨೩೪. ೪೧೩ — ದರ್ಪಣ ೨೩೫

ಸೂತ್ರ ೯೬

ಭೂಷಣ ೨೦೬, ೨೧೭; ದರ್ಪಣ ೨೨೫, ೨೩೦; ಶಾಸನ ೫೭೯

ಏಕಸಂಜ್ಞವಚನಂ=ಪ್ರಥಮಪುರುಷ ನಪುಂಸಕೈಕವಚನರೂಪ — ಎಂದರೆ ' ಉದು ' ಎಂಬುದು.

೪೧೬ — ದರ್ಪಣ ೨೩೦

ಸೂತ್ರ ೯೭

ಭೂಷಣ ೨೧೩, ೨೩೦; ದರ್ಪಣ ೨೩೧; ಶಾಸನ ೬೩, ೫೩೩ರಿಂದ ೫೩೫, ೫೩೯

ಸಂಸ್ಕೃತ ಧಾತುಗಳಿಗೂ ಅವುಗಳಿಂದ ಹುಟ್ಟಿದ ಭಾವನಾಮಗಳಿಗೂ 'ಇಸು' ಪ್ರತ್ಯಯವನ್ನು ಹಚ್ಚಿ ಕನ್ನಡದಲ್ಲಿ ಧಾತುಗಳನ್ನಾಗಿ ಪ್ರಯೋಗಿಸಬಹುದು. ಅನೇಕಾಕ್ಷರಧಾತುಗಳಿದ್ದರೆ ಏನೂ ವ್ಯತ್ಯಾಸವಿಲ್ಲದೆ ' ಇಸು ' ಪ್ರತ್ಯಯವನ್ನು ಹಚ್ಚಬಹುದು. ಉದಾ: 'ಖಂಡಿಸು'. 'ಧೃ, ಸ್ಮೃ, ಭ್ರಮ್, ಗಮ್' ಮುಂತಾದ ಕೆಲವು ಧಾತುಗಳಿಗೆ ' ಇಸು ' ಪ್ರತ್ಯಯವನ್ನು ಹಚ್ಚುವಾಗ ' ಇ (ಯ್) ' ಆಗಮವು ವಿಕಲ್ಪವಾಗಿ ಬರುವುದು. ಉದಾ: ' ಧರಿಸು, ಧರಿಯಿಸು; ಜನಿಸು, ಜನಿಯಿಸು ' ಇತ್ಯಾದಿ.

ಹೇತ್ವರ್ಥ (ಪ್ರೇರಣಾರ್ಥ) ದಲ್ಲಿ ಕನ್ನಡ ಧಾತುಗಳಿಗೆ ' ಇಸು ' ಪ್ರತ್ಯಯವನ್ನು ಹಚ್ಚುವರು. ಉದಾ: ' ಕಡೆಯಿಸಿದಂ ಸುರರಿನಸುರರಿಂ ಪಾಲ್ಗಡಲಂ '. ಕೆಲವೆಡೆ ಪ್ರೇರಣಾರ್ಥವಿಲ್ಲದಲ್ಲಿಯೂ ' ಇಸು ' ಪ್ರತ್ಯಯವು ಬರುತ್ತದೆ. ಉದಾ: ' ನಿಟ್ಟಿಸು, ದಳ್ಳಿಸು, ಕಂಟಿಸು '. ಇದರಂತೆ ಉ ಕಾರಾಂತ ರೇಫಾಂತ ಶಬ್ದಗಳ ಮುಂದೆ ' ಇಸು ' ವಿನ ಪ್ರತಿಯಾಗಿ ' ಸು ' ಬರುವುದು. ಅದು ' ಚು ' ಎಂದಾಗುವುದು. ' ತೊಡರ್ಚು, ಅಲರ್ಚು, ಪೊಗಳ್ಚು ' ಇಂತಹ ರೂಪಗಳನ್ನು ಹೇತ್ವರ್ಥವಿಲ್ಲದಲ್ಲಿಯೂ ಪ್ರಯೋಗಿಸಬಹುದು. ಉದಾ: ' ಪೂವಲರ್ಚಿತು '.

೪೧೮ — ದರ್ಪಣ ೬೧

ಕಾವ್ಯಮಲವ್ಯಾವೃತ್ತ್ಯಧಿಕರಣ

ಇಲ್ಲಿಂದ ಮುಂದಿನ ಅಧಿಕರಣಗಳಲ್ಲಿ ಬರುವ ವಿಷಯಗಳೆಲ್ಲ ಅಲಂಕಾರ ಶಾಸ್ತ್ರಕ್ಕೆ ಸೇರಿದುವು. ಸಂಸ್ಕೃತ ಅಲಂಕಾರ ಗ್ರಂಥಗಳಲ್ಲಿ ವ್ಯಾಕರಣ ವಿಷಯಗಳನ್ನು ಹೆಚ್ಚಾಗಿ ವಿವೇಚಿಸುವುದಿಲ್ಲ. ಕಾವ್ಯದೃಷ್ಟಿಯಿಂದ ದೋಷಗಳೆಂದು ಕಂಡುಬರುವ ಕೆಲವು ವಿಷಯಗಳನ್ನಷ್ಟೆ ಸಂಗ್ರಹವಾಗಿ ಹೇಳುವರು. ಆದುದರಿಂದ ನಾಗವರ್ಮನು ಕೇವಲ ವ್ಯಾಕರಣವಿಷಯಗಳನ್ನೊಳಕೊಂಡ ಶಬ್ದಸ್ಮೃತ್ಯಧಿಕರಣವನ್ನು ಮೊದಲೇ ಸೇರಿಸಿರುವನು.

ಪದ್ಯ ೪೨೪

ಕಾವ್ಯವನ್ನು ರಚಿಸಲಿಕ್ಕೆ ಕವಿಗೆ ಬೇಕಾದ ಮುಖ್ಯ ಸಾಧನ-ಸಾಮಗ್ರಿಗಳನ್ನು ಇಲ್ಲಿ ಹೇಳಿದೆ. ಇದು ದಂಡಿಯ

> ನೈಸರ್ಗಿಕೀ ಚ ಪ್ರತಿಭಾ ಶ್ರುತಂ ಚ ಬಹುನಿರ್ಮಲಂ
> ಅಮಂದಾಶ್ಚಾಭಿಯೋಗೋಽಸ್ಯಾಃ ಕಾರಣಂ ಕಾವ್ಯಸಂಪದಃ (೧-೧೦೩)

ಇದರ ಅನುವಾದವಾಗಿದೆ. (ಹೋ : ಮಾರ್ಗ ೧-೧೧)

ಪದ್ಯ ೪೨೫ ರಿಂದ ೪೨೯

ಕವಿತಾರತ್ನವು ಪುಣ್ಯವಂತರಿಗೆ ಸಂಭವಿಸುವುದೆಂದೂ ಕವಿತೆಯಿಲ್ಲದ ಪಾಂಡಿತ್ಯವು ಶೋಭಿಸುವುದಿಲ್ಲವೆಂದೂ ಕಾವ್ಯರಚನೆಯಿಂದ ಇಹಪರಗಳೆರಡಕ್ಕೂ ಹಿತವುಂಟೆಂದೂ ಕಾವ್ಯದಲ್ಲಿ ದೋಷಗಳುಂಟಾದರೆ ಕವಿಯ ಕೀರ್ತಿಗೂ ಕಲಂಕವುಂಟಾಗುವುದೆಂದೂ ಆದುದರಿಂದ ಪದ-ವಾಕ್ಯ-ಅರ್ಥಗಳಲ್ಲಾಗಬಹುದಾದ ದೋಷಗಳನ್ನು ಕವಿಗಳು ತಮ್ಮ ಕೃತಿಗಳಿಂದ ದೂರಮಾಡಬೇಕೆಂದೂ ಹೇಳಿರುವನು.

೪೨೫ — ಹೋ : ರಾಜಶೇಖರವಿಲಾಸ ೧-೨೯. ೪೨೬ — ಹೋ : ರಾಜಶೇಖರವಿಲಾಸ ೩-೪೭, ಮತ್ತು

> ವಿನಯೇನ ವಿನಾ ಕಾ ಶ್ರೀಃ ನಿಶಾ ಶಶಿನಾ ವಿನಾ
> ರಹಿತಾ ಸತ್ಕವಿತ್ವೇನ ಕೀದೃಶೀ ವಾಗ್ವಿದಗ್ಧತಾ (ಭಾಮಹ: ೧-೪)

೪೨೮ — ಹೋ : ಮಾರ್ಗ ೧-೪೩, ೧-೧೧೨. ೪೨೯ — ಹೋ : ಮಾರ್ಗ ೧-೪೪ ಮತ್ತು

> ಶಬ್ದಾರ್ಥಯೋರಿತಿ ನಿರೂಪ್ಯ ವಿಭಕ್ತರೂಪಾನ್
> ದೋಷಾನ್ ಗುಣಾಂಶ್ಚ ನಿಪುಣೋ ವಿಸೃಜನ್ನಸಾರಂ
> ಸಾರಂ ಸಮಾಹಿತಮನಾಃ ಪರಮಾದದಾನಃ
> ಕುರ್ವೀತ ಕಾವ್ಯಮವಿನಾಶಿಯಶೋಽಧಿಗಂತುಂ (ರುದ್ರಟ ೧೧-೩೬)

ಸೂತ್ರ ೯೮, ೯೯

ಸೂತ್ರ ೯೮ಕ್ಕೆ : ಭಾಮಹ ೧-೧೬; ರುದ್ರಟ ౬-೧.
ಸೂತ್ರ ೯೯ಕ್ಕೆ : ರುದ್ರಟ ೬-೮,೯.

ಕಾವ್ಯದಲ್ಲಿ ಶಬ್ದಕ್ಕೆ ಸರಿಯಾದ ಅರ್ಥವು ಅರ್ಥಕ್ಕೆ ಸರಿಯಾದ ಶಬ್ದಗಳೂ ಇರತಕ್ಕದ್ದು. ಅನೇಕಾರ್ಥಗಳಲ್ಲಿ ಉಪಯೋಗವಾಗುವ ಶಬ್ದಗಳ ಬೇಕಾದ ಅರ್ಥವನ್ನು ಪ್ರಕರಣದಿಂದ ಎಂದರೆ ಪೂರ್ವಾಪರಸಂಬಂಧದಿಂದ (context), ಬೇರೆ ಶಬ್ದಗಳಿಂದ ಮತ್ತು ಅಭಿನಯದಿಂದ ನಿಶ್ಚಯಿಸಿಕೊಳ್ಳಬೇಕು. ಕೆಳಗೆ ಕೊಟ್ಟಿರುವ ಪದ್ಯಗಳಿಂದ ಶಬ್ದಗಳ ಅರ್ಥವನ್ನು ನಿಶ್ಚಯಿಸುವ ಇನ್ನೂ ಕೆಲವು ರೀತಿಗಳನ್ನು ತಿಳಿದುಕೊಳ್ಳಬಹುದು.

ಸಂಯೋಗೋ ವಿಪ್ರಯೋಗಶ್ಚ ಸಾಹಚರ್ಯಂ ವಿರೋಧಿತಾ
ಅರ್ಥಃ ಪ್ರಕರಣಂ ಲಿಂಗಂ ಶಬ್ದಸ್ಯಾನ್ಯಸ್ಯ ಸಂನಿಧಿಃ
ಸಾಮರ್ಥ್ಯಮೌಚಿತೀ ದೇಶಃ ಕಾಲೋ ವ್ಯಕ್ತಿಃ ಸ್ವರಾದಯಃ
ಶಬ್ದಾರ್ಥಸ್ಯಾನವಚ್ಛೇದೇ ವಿಶೇಷಸ್ಮೃತಿಹೇತವಃ — ವಾಕ್ಯಪಾದೀಯ

೮೩೪ — ಇದು ಹೇಮಚಂದ್ರನ ಕಾವ್ಯಾನುಶಾಸನದಲ್ಲಿಯ ೨೩ನೆಯ ಕಾರಿಕೆಯ ಕೆಳಗೆ ಉದಾಹೃತವಾದ ಒಂದು ಪ್ರಾಕೃತ ಪದ್ಯದ ಅನುವಾದ. ಅದರ (ಸಂಸ್ಕೃತ) ಛಾಯೆ ಕೆಳಗಿನಂತೆ:—

ಏತಾವನ್ಮಾತ್ರಸ್ತನಿಕಾ ಏತಾವನ್ಮಾತ್ರಾಭ್ಯಾಮಕ್ಷಿಪತ್ರಾಭ್ಯಾಂ
ಏತಾವದವಸ್ಥಾಂ ಪ್ರಾಪ್ತಾ ಏತಾವನ್ಮಾತ್ರೈರ್ದಿವಸೈಃ

ಸೂತ್ರ ೧೦೦ ರಿಂದ ೧೦೪

ಸೂತ್ರ ೧೦೦ಕ್ಕೆ : ರುದ್ರಟ ೬-೨; ವಾಮನ ೨-೧-೪. ಸೂತ್ರ ೧೦೧ಕ್ಕೆ : ರುದ್ರಟ ೬-೩.
ಸೂತ್ರ ೧೦೨ಕ್ಕೆ : ರುದ್ರಟ ೬-೧೪; ವಾಮನ ೨-೨-೭; ಮಾರ್ಗ ೧-೬೩,೬೫, ೯೫ ರಿಂದ ೯೯.
ಸೂತ್ರ ೧೦೩ಕ್ಕೆ : ವಾಮನ ೨-೧-೬, ೧೪; ಮಾರ್ಗ ೧-೬೨.

ಕಾವ್ಯಾಸ್ವಾದಕ್ಕೆ ಅಡ್ಡಿಯನ್ನುಂಟುಮಾಡುವಂತಹುದೇ ದೋಷ. ಇದು ಪದದಲ್ಲಿಯೂ ಅರ್ಥದಲ್ಲಿಯೂ ಕಂಡುಬರುವುದು. ಪ್ರಾಚೀನ ಆಲಂಕಾರಿಕರಾದ ಭಾಮಹ, ದಂಡಿ ಮೊದಲಾದವರು ಕೆಲವು ದೋಷಗಳನ್ನು ಹೇಳಿದ್ದಾರೆ. ವಾಮನನು ಅವುಗಳನ್ನು ಪದ-ಅರ್ಥ-ವಾಕ್ಯದೋಷಗಳೆಂದು ವಿಭಾಗಿಸಿದ್ದಾನೆ. ಮಮ್ಮಟನು ಇವುಗಳೊಡನೆ ರಸದೋಷವನ್ನೂ ಸೇರಿಸಿದ್ದಾನೆ. ಕನ್ನಡದಲ್ಲಿ ನೃಪತುಂಗನು ದಂಡಿಯನ್ನು ಅನುಸರಿಸಿದ್ದಾನೆ. ನಾಗವರ್ಮನು ವಾಮನ-ರುದ್ರಟರನ್ನೂ ಅನುಸರಿಸಿದ್ದಾನೆ.

ಇಲ್ಲಿ ಅಸಮರ್ಥ, ಅಪ್ರತೀತ, ವಿಸಂಧಿ, ವಿಪರೀತಕಲ್ಪನೆ, ಕಷ್ಟ, ಶ್ರುತಿಕಷ್ಟ, ನೀರಸಗಳೆಂಬ ಪದದೋಷಗಳನ್ನು ಹೇಳಿದೆ.

ಅಸಮರ್ಥ : ಶಬ್ದಕ್ಕೆ ಅರ್ಥಕೊಡುವ ಶಕ್ತಿಯು 'ಯೌಗಿಕ, ರೂಢ' ವೆಂದು ಎರಡು ವಿಧ. ಯೌಗಿಕವೆಂದರೆ ಶಬ್ದದ ಉತ್ಪತ್ತಿಯಿಂದ ತಿಳಿದುಬರುವಂತಹುದು. (etymological sense) ರೂಢವೆಂದರೆ ಬಳಕೆಯಲ್ಲಿದ್ದುದು. ರೂಢಿಯ ಸಮರ್ಥನೆಯಿಲ್ಲದೆ ಕೇವಲ ಯೌಗಿಕಾರ್ಥದಲ್ಲಿ ಪ್ರಯೋಗಿಸಿದ ಪದವು ಅಸಮರ್ಥ ದೋಷಕ್ಕೆ ಗುರಿಯಾಗುವುದು. ಉದಾ : 'ಜಳಭೃತ್' (೪೩೭) ಶಬ್ದವನ್ನು ಸಮುದ್ರ ಎಂಬ ಅರ್ಥದಲ್ಲಿ ಪ್ರಯೋಗಿಸಿರುವುದು. ಒಂದು ಶಬ್ದದ ರೂಢಾರ್ಥವು ಯೌಗಿಕಾರ್ಥಕ್ಕೆ ಯಾವರೀತಿಯಿಂದಲೂ ಸಂಬಂಧವಿಲ್ಲದೆ ಇದ್ದಾಗ ಯೌಗಿಕಾರ್ಥ ದಲ್ಲಿ ಅದನ್ನು ಪ್ರಯೋಗಿಸಿದರೆ ಅದಕ್ಕೆ 'ಅನ್ಯಾರ್ಥದೋಷ' ವೆಂದು ಹೆಸರು. 'ವಿದಗ್ಧ' ಎಂಬುದಕ್ಕೆ ಪಂಡಿತ ಎಂಬ ರೂಢಾರ್ಥವಿರುವಾಗ ಅದನ್ನು 'ಬಹಳ ಸುಟ್ಟ' ಎಂಬ ಯೌಗಿಕಾರ್ಥವಲ್ಲಿ ಪ್ರಯೋಗಿಸಿದರೆ ಈ ದೋಷವುಂಟಾಗುವುದು.

ಅಪ್ರತೀತ — ಬರೆಹಗಾರನು ತನ್ನದೇ ಒಂದಾದ ಸಂಕೇತಾರ್ಥದಲ್ಲಿ ಯಾವು ದಾದರೊಂದು ಪದವನ್ನು ಪ್ರಯೋಗಿಸುವುದು. ಉದಾ: ಮಂತ್ರಶಾಸ್ತ್ರವೆಂಬ ಅರ್ಥ ದಲ್ಲಿ 'ಮನು' ಎಂದು.

ಗೂಢ — (ಇದಕ್ಕೆ ನಿಹಿತಾರ್ಥವೆಂದು ಮಮ್ಮಟನು ಹೇಳುತ್ತಾನೆ.) ಒಂದು ಶಬ್ದವನ್ನು ಅಪ್ರಸಿದ್ಧಾರ್ಥದಲ್ಲಿ ಪ್ರಯೋಗಿಸುವುದು. ಇದು ಇಲ್ಲಿ ಅಪ್ರತೀತಾರ್ಥದೊಳಗೆ ಅಂತರ್ಭಾವವಾಗಿದೆ.

ವಿಸಂಧಿ — ಈ ದೋಷವು ಮೂರು ಬಗೆಯಾಗಿ ಉಂಟಾಗುವುದು: (೧) ಸಂಧಿ ಮಾಡಬೇಕಾದ ಕಡೆ ಮಾಡದೆ ಇರುವುದು; ವ್ಯಾಕರಣದಿಂದ ಸಂಧಿಯನ್ನು ಮಾಡಬಾರದೆಂದು ಅನುಶಾಸವಾದ ಪ್ರಯೋಗಗಳು ಮೇಲಿಂದ ಮೇಲೆ ಎಡೆಬಿಡದೆ ಬರುವುದು; (೨) ಸಂಧಿಮಾಡುವುದರಿಂದ ಬೇರೊಂದು ಅಸಹ್ಯಾರ್ಥ ಅಥವಾ ದುಷ್ಪ್ರತೀತಿ ಹುಟ್ಟುವುದು; ಇಲ್ಲಿ ಇದಕ್ಕೆ 'ವಿರೂಪಸಂಧಿ' ಯೆಂದು ಹೇಳಿದೆ; (೩) ಶ್ರುತಿಕಷ್ಟವಾದ ಸಂಧಿ.

ವಿಪರೀತಕಲ್ಪನೆ — ತಾವು ಹೇಳಲುದ್ದೇಶಿಸಿದ ಅರ್ಥಕ್ಕೆ ವಿಪರೀತವಾದ ಅರ್ಥವು ಹುಟ್ಟುವಂತೆ ಪದಗಳನ್ನು ಇಡುವುದು. ಉದಾ: ೪೪೨ನೆಯ ಪದ್ಯದಲ್ಲಿ 'ಅರಿಭೂಪದಾವಾನಳ' ಎಂಬ ಸಮಾಸವನ್ನು 'ಅರಿಗಳಿಂದ ಆಗುವ ದಾವಾನಳ' ಮತ್ತು 'ಅರಿಗಳಿಗೆ ಆಗುವ ದಾವಾನಳ' (ಇದೇ ಹೆಚ್ಚು ರೂಢ) ಎಂಬುದಾಗಿ ಎರಡು ವಿಧ ದಿಂದ ಬಿಡಿಸಲಿಕ್ಕೆ ಬರುವುದರಿಂದ 'ಆ ದಾವಾನಲವು ನಿನ್ನ ಖಡ್ಗದಿಂದ ಶಾಂತವಾಗಲಿ'.

ಎಂದು ಹೇಳಿದಾಗ ನಿನ್ನ ವೈರಿಗಳಿಗೆ ಉತ್ಕರ್ಷವಾಗಲೆಂಬ ವಿಪರೀತಾರ್ಥವೇ ಹೊರಡುವುದು.

ಕಷ್ಟ — ಕಿವಿಗೆ ಕಠೋರವಾಗುವ ರೀತಿಯಲ್ಲಿ ಪದಗಳನ್ನು ಇಡುವುದು.

ನೀರಸ — ಇದು ಎರಡುವಿಧ: (೧) ಗ್ರಾಮ್ಯ ಅಥವಾ ಅನುಚಿತ* ಶಬ್ದ ಪ್ರಯೋಗ, (೨) ಅಸಭ್ಯವಾದ ಕೃತಿಯನ್ನು ಸೂಚಿಸುವುದು.

೪೪೦ — ದರ್ಪಣ ೬೨

ಸೂತ್ರ ೧೦೫

ರುದ್ರಟ ೬-೪೭

ಇಂತಹ ದೋಷಗಳನ್ನು ಮಾಡಬಾರದೆಂದು (ಶಾಸ್ತ್ರದಲ್ಲಿ) ತೋರಿಸಿಕೊಡುವಲ್ಲಿ ಮತ್ತು ಯಾರಾದರೂ ಇಂತಹ ದೋಷಗಳನ್ನು ಮಾಡುತ್ತಾರೆಂದು ಅನುಕರಿಸಿ ತೋರುವಲ್ಲಿ ಮೇಲಿನ ದೋಷಗಳು ದೋಷಗಳಲ್ಲ. (ಉದಾ: ಮೃಚ್ಛಕಟಿಕದ ಶಕಾರನ ಮಾತುಗಳು)

ವಾಕ್ಯವಾಕ್ಯಾರ್ಥದೋಷಾನುಕೀರ್ತನ ಪ್ರಕರಣ

ಸೂತ್ರ ೧೦೬

ರುದ್ರಟ ೨-೭, ೮; ಭಾಮಹ ೪-೪

ಒಂದೇ ವಿಚಾರವನ್ನು ಹೇಳುವಂತಹ ಪರಸ್ಪರ ಸಂಬಂಧವುಳ್ಳಂತಹ ಅರ್ಥವನ್ನು ಪೂರ್ತಿಗೊಳಿಸಲಿಕ್ಕೆ ಬಾಹ್ಯಸಹಾಯವನ್ನು ಅಪೇಕ್ಷಿಸದಂತಹ ಪದಸಮುದಾಯವೇ ವಾಕ್ಯವು.

೪೫೪ — ದರ್ಪಣ ೨೨೭

ಸೂತ್ರ ೧೦೭

ದಂಡಿ ೩-೧೨೫, ೧೨೬; ಭಾಮಹ ೪-೧, ೨; ವಾಮನ ೨-೨-೧, ೯; ಮಾರ್ಗ ೧-೬೯,೭೦

ವ್ಯವಹಿತ, ಏಕಾರ್ಥ, ವ್ಯರ್ಥ, ಅಪಕ್ರಮ, ಲೋಕ-ಶಾಸ್ತ್ರವಿರುದ್ಧ, ಯತಿ-ಭಂಗ, ಭಿನ್ನವೃತ್ತಗಳೆಂದು ವಾಕ್ಯದೋಷಗಳನ್ನು ಇಲ್ಲಿಂದ ಮುಂದೆ ಹೇಳಿದೆ.

ಸೂತ್ರ ೧೦೮

ರುದ್ರಟ ೬—೪೧

ವ್ಯವಹಿತ: ವಾಕ್ಯದಲ್ಲಿಯ ಪದಗಳು ಅನ್ವಯಕ್ಕೆ ಸರಿಬಾರದೆ ಎತ್ತೆತ್ತಲಾದರೂ ಇದ್ದರೆ ಈ ದೋಷವುಂಟಾಗುವುದು. ಇದಕ್ಕೆ ರುದ್ರಟನು ‘ ಸಂಕೀರ್ಣ ’ ವೆಂದು ಹೇಳುವನು.

---

*ಅನುಚಿತ : ಇದು ಎರಡು ವಿಧ (೧) ರೂಢಿಯಿಂದ ಅನುಚಿತ (೨) ಸಂದರ್ಭದಿಂದ ಅನುಚಿತ.

೪೫೭ — ಹೋ : ಮಾರ್ಗ ೧–೯೧, ಮತ್ತು
ಕಿಮಿತಿ ನ ಪಶ್ಯಸಿ ಕೋಪಂ ಪಾದಗತಂ ಬಹುಗುಣಂ ಗೃಹಾಣೈನಂ
ನನು ಮುಂಚ ಹೃದಯನಾಥಂ ಕಂಠೇ ಮನಸಸ್ತಮೋರೂಪಂ
ರುದ್ರಟ ೬–೪೨

೪೫೮ — ಕೆಳಗಣ ಪದ್ಯದ ಅನುಕರಣವಾಗಿದೆ:
ಗೌರೀಕ್ಷಣಂ ಭೂಧರಜಾಹಿನಾಥಃ । ಪತ್ರಂ ತೃತೀಯಂ ದಯಿತೋಪನೀತಂ
ಯಸ್ಯಾಂಬರಂ ದ್ವಾದಶಲೋಚನಾಖ್ಯಃ । ಕಾಷ್ಟಾಸುತಃ ಪಾತು ಸದಾಶಿವೋ ವಃ
ರುದ್ರಟ ೬–೪೦
(ನಮಿಸಾಧುವಿನ ಟೀಕೆಯಲ್ಲಿ)

ಸೂತ್ರ ೧೦೯

ದಂಡಿ ೩–೧೩೫, ೧೩೭; ಭಾಮುಹ ೪–೧೪; ರುದ್ರಟ ೬–೨೯; ವಾಮನ ೨–೨–೧೧;
ಮಾರ್ಗ ೧–೮೪, ಹಾಗೂ ೨–೨೫

ಏಕಾರ್ಥ : ಒಂದೇ ಅರ್ಥವನ್ನು ಹೇಳುವ ಬೇರೆ ಬೇರೆ ಶಬ್ದಗಳನ್ನು ಉಪಯೋಗಿಸಿದರೆ ಈ ದೋಷವುಂಟಾಗುವುದು. ಕ್ರೋಧಾದಿಭಾವಗಳನ್ನು ಹೇಳುವಲ್ಲಿ ಇದು ದೋಷವಲ್ಲ.

೪೬೦— ಕೆಳಗಣವನ್ನು ಹೋಲಿಸಿರಿ :
ತಾಮುತ್ಕಮನಸಂ ನೂನಂ ಕರೋತಿ ಧ್ವನಿರಂಭಸಾಮ್
ಸೌಧೇಷು ಘನಮುಕ್ತಾನಾಂ ಪ್ರಣಾಲೀಮುಖಪಾತಿನಾಮ್
ಭಾಮುಹ ೪–೧೬

ಉತ್ಕಾಮುನ್ಮನಯಂತ್ಯೇತೇ ಬಾಲಾಂ ತದಲಕತ್ವಿಷಃ
ಅಂಭೋಧರಾಸ್ತಡಿತ್ವಂತೋ ಗಂಭೀರಾಃ ಸ್ತನಯಿತ್ನವಃ
ದಂಡಿ ೩–೧೩೬

ಸೂತ್ರ ೧೧೦

ವಾಮನ ೨–೨–೧೨, ೧೪ ರಿಂದ ೧೭

ಸೂತ್ರ ೧೧೧

ದಂಡಿ ೩–೧೩೧,೧೩೩; ಭಾಮುಹ ೪–೯; ವಾಮನ ೨–೨–೧೦; ಮಾರ್ಗ ೧–೮೧

ವ್ಯರ್ಥ : ಪೂರ್ವಾಪರ ಸಂಬಂಧದಿಂದ ಶಬ್ದಗಳ ಜೋಡಣೆಯು ಪರಸ್ಪರ ವಿರುದ್ಧಾರ್ಥವಾಗುವಂತಿದ್ದರೆ ಈ ದೋಷವಾಗುವುದು. ಆದರೆ ವಿರಹ ಮುಂತಾದ ಕೆಲವು ಅವಸ್ಥೆಗಳಿಂದುಂಟಾದ ಮನಸ್ಸಿನ ಉದ್ವಿಗ್ನತೆಯನ್ನು ಸೂಚಿಸುವಲ್ಲಿ ಇದು ದೋಷವಲ್ಲ.

೪೬೬ — ದಂಡಿ ೩-೧೩೨; ಮಾರ್ಗ ೧-೮೨. ೪೬೭ — ದಂಡಿ ೩–೧೩೪

ಸೂತ್ರ ೧೧೨

ದಂಡಿ ೩-೧೪೪, ೧೪೬; ಭಾಮಹ ೪-೨೦; ವಾಮನ ೨-೨-೨೨; ಮಾರ್ಗ ೧-೮೭

ಅಪಕ್ರಮ-ಅಕ್ರಮ : ಮೊದಲು ಒಂದು ಕ್ರಮದಲ್ಲಿ ಹೇಳ ಹೊರಟು ಮುಂದೆ ಆ ಕ್ರಮವು ತಪ್ಪಿದರೆ ಈ ದೋಷವಾಗುವುದು. ಆದರೂ ಅರ್ಥವು ಸ್ಪಷ್ಟವಾಗುವಂತಿದ್ದರೆ ದೋಷವಲ್ಲ.

೪೬೯ — ಹೋ: ದಂಡಿ ೩-೧೪೫; ಭಾಮಹ ೪-೨೧

೪೭೦ — ಹೋ: ದಂಡಿ ೩-೧೪೭

ಸೂತ್ರ ೧೧೩-೧೧೪

ದಂಡಿ ೩-೧೬೨, ೧೬೩, ೧೭೯; ಭಾಮಹ ೪-೨೦ರಿಂದ ಮುಂದೆ; ವಾಮನ ೨-೨-೨೩, ೨೪

ಇಲ್ಲಿ ಹೇಳಿದ ದೋಷಗಳು ಕವಿಕೌಶಲದಿಂದ ಗುಣಗಳಾಗಬಹುದು.

೪೭೪ — ಹೋ: ದಂಡಿ ೩-೧೬೫; ಭಾಮಹ ೪-೩೦

೪೭೭ — ದಂಡಿ ೩-೧೭೪. **ಸುಗತೋಕ್ತಿ** = ಬುದ್ಧನ ವಚನ

೪೭೮ — ದಂಡಿ ೩-೧೭೮

ಸೂತ್ರ ೧೧೫

ಭಾಮಹ ೪-೨೫; ದಂಡಿ ೩-೧೫೨; ಮಾರ್ಗ ೧-೭೧, ೭೩

ಪದ್ಯಗಳನ್ನು ಸರಾಗವಾಗಿ ಅನ್ನುವ ಉದ್ದೇಶದಿಂದ ಬೇರೆ ಬೇರೆ ವೃತ್ತಗಳಲ್ಲಿ ಬೇರೆ ಬೇರೆ ಕಡೆಗೆ ನಿಲ್ಲಿಸುವುದಕ್ಕೆ ' **ಯತಿ** ' ಯೆಂದು ಹೆಸರು. ಇಂತಹ ನಿಯತ ಸ್ಥಾನಗಳಲ್ಲಿ ನಿಲ್ಲಿಸುವುದರಿಂದ ಶಬ್ದವು ಒಡೆದು ಅದರಿಂದ ಕಾವ್ಯಸ್ಫೂರ್ತಿಗೆ ಇಲ್ಲವೆ ರಸಾನುಭವಕ್ಕೆ ತಡೆಯುಂಟಾಗುತ್ತಿದ್ದರೆ ಅದು ' ಯತಿಭಂಗ ' ವೆಂಬ ದೋಷವಾಗುವುದು. ನಾಗವರ್ಮನು ಛಂದೋಂಬುಧಿಯಲ್ಲಿ ' **ಶ್ರುತಿಸುಭಗಂ ಸ್ವಚ್ಛಂದಂ ಯತಿಯೆಂದಾ ಕಪಿಲ-ಪಿಂಗಳಾದಿಗಳೊಲ್ಲರ್** ' ಎಂದು ಸಂಸ್ಕೃತದಲ್ಲಿಯಾದರೂ ಕಪಿಲ-ಪಿಂಗಲರ ಮತದಂತೆ ಯತಿಯು ಐಚ್ಛಿಕವೆಂದು ಹೇಳಿರುವನಾದರೂ ನೃಪತುಂಗನು ಯತಿಯು ಸಂಸ್ಕೃತದಲ್ಲಿ ಅವಶ್ಯವೆಂದೂ ಕನ್ನಡದಲ್ಲಿ ಅನವಶ್ಯವೆಂದೂ ಅಭಿಪ್ರಾಯಪಟ್ಟಿರುತ್ತಾನೆ (ಮಾರ್ಗ ೧-೭೫). ಕನ್ನಡ ಕವಿಗಳಾದರೂ ಯತಿಯನ್ನು ಪಾಲಿಸಿಲ್ಲ. ಸರಸ್ವತಿಯ ಭಾಂಡಾರವನ್ನೊಡೆದಿರುವನೆಂದು ಹೇಳುವ ಕವಿರತ್ನನು ಅದರೊಡನೆ ಯತಿಯನ್ನೂ ಭಂಗಿಸಿರುವುದರಿಂದಲೆ ಅವನು ಹೇಳಿದುದು ನಮ್ಮ ಅವಗಾಹನೆಗೆ ಬರುವುದು. ದರ್ಪಣದ ಕಾಲಕ್ಕೆ ' ಯತಿವಿಲಂಘನವು ' ಕನ್ನಡದ ವೈಶಿಷ್ಟ್ಯವಾಗಿ ಹೋಗಿತ್ತು ಎಂಬುದು ಅದರಲ್ಲಿಯ ಕೊನೆಯ ಪದ್ಯದಿಂದ ಗೊತ್ತಾಗುತ್ತದೆ.

೪೮೦ — ಹೋ :

ಮೃದುಶ್ಚೇದವಮನ್ಯೇತ ತೀಕ್ಷ್ಣಾದುದ್ವಿಜತೇ ಜನಃ
ತೀಕ್ಷ್ಣಶ್ಚೈವ ಮೃದುಶ್ಚೈವ ಪ್ರಜಾನಾಂ ಸ ಚ ಸಮ್ಮತಃ

ಕಾಮಂದಕ

ಮೃದೋ ಪರಿಭವೋ ನಿತ್ಯಂ ವೈರಂ ತೀಕ್ಷ್ಣಸ್ಯ ನಿತ್ಯಶಃ
ಉತ್ಸೃಜ್ಯೈತದ್ದ್ವಯಂ ತಸ್ಮಾತ್ ಮಧ್ಯಾಂ ವೃತ್ತಿಂ ಸಮಾಶ್ರಯೇತ್

ವ್ಯಾಸ: ಸುಭಾಷಿತಾವಲಿ ೨೬೯೨

ಸಮವೃತ್ತಿರುಪೈತಿ ಮಾರ್ದವಂ । ಸಮಯೇ ಯಶ್ಚ ತನೋತಿ ತಿಗ್ಮತಾಂ
ಅಧಿತಿಷ್ಠತಿ ಲೋಕಮೋಜಸಾ । ಸ ವಿವಸ್ವಾನಿವ ಮೇದಿನೀಪತಿಃ

ಕಿರಾತಾರ್ಜುನೀಯ ೨-೩೮

ನ ಖರೋ ನ ಚ ಭೂಯಸಾ ಮೃದುಃ । ಪವಮಾನಃ ಪೃಥಿವೀರುಹಾನಿವ
ಸ ಪುರಸ್ಕೃತಮಧ್ಯಮಕ್ರಮೋ । ನಮಯಾಮಾಸ ನೃಪಾನನುದ್ಧರನ್

ರಘುವಂಶ ೮-೯

ಸೂತ್ರ ೧೧೬

ದಂಡಿ ೩-೧೫೬; ಭಾಮಹ ೪-೨೬; ಮಾರ್ಗ ೧-೯೨, ೯೩

ಒಂದು ವೃತ್ತದಲ್ಲಿ ಇರತಕ್ಕ ಗುರು-ಲಘು ಅಕ್ಷರ ವಿನ್ಯಾಸದಲ್ಲಿ ಕ್ರಮವು ತಪ್ಪುವುದರಿಂದ, ಅಥವಾ ನಿರ್ದಿಷ್ಟ ಅಕ್ಷರಕ್ಕಿಂತ ಹೆಚ್ಚು ಇಲ್ಲವೇ ಕಡಿಮೆ ಅಕ್ಷರಗಳು ಇರುವುದರಿಂದ 'ಭಿನ್ನವೃತ್ತ' ಎಂಬ ದೋಷವಾಗುವುದು. ಇದನ್ನೇ ಮಾರ್ಗದಲ್ಲಿ 'ಛಂದೋಭಂಗ' ಎಂದು ಹೇಳಿದೆ. ಕನ್ನಡದಲ್ಲಿ ಮೊದಲಿನ ಚರಣಾರಂಭದ ಅಕ್ಷರವು ಗುರು ಅಥವಾ ಲಘುವಾಗಿದ್ದರೆ ಉಳಿದ ಪಾದಗಳ ಮೊದಲಿಗೂ ಅದೇ ರೀತಿಯಾಗಿರಬೇಕು; ಒಂದರಲ್ಲಿ ಗುರು ಇನ್ನೊಂದರಲ್ಲಿ ಲಘು ಹೀಗೆ ಬಂದರೆ ಅದೂ ಛಂದೋಭಂಗವೆಂಬ ದೋಷವಾಗುವುದು. ಇದಕ್ಕೆ ೪೮೩ ನೆಯ ಪದ್ಯವು ಉದಾಹರಣೆಯಾಗಿದೆ.

ಸೂತ್ರ ೧೧೭

ಮಾರ್ಗ ೨-೧೩

೪೯೧ — ಹೋ :

ಪದ್ಮಂ ಚ ನಿಶಿ ನಿಶ್ಶ್ರೀಕಂ ದಿವಾ ಚಂದ್ರಂ ಚ ನಿಷ್ಪ್ರಭಂ
ಸ್ಫುರಚ್ಛಾಯೇನ ಸತತಂ ಮುಖೇನಾಧಃಪ್ರಕುರ್ವತೀಂ

ಉದ್ಭಟ ೨-೧೫

ಗುಣವಿವೇಕಾಧಿಕರಣ

೪೯೮ — ಇದು ಕೆಳಗಿನ ಪದ್ಯದ ಭಾವಾನುವಾದವಾಗಿದೆ:

> ಏತದ್ಗ್ರಾಹ್ಯಂ ಸುರಭಿಕುಸುಮಂ ಗ್ರಾಮ್ಯಮೇತನ್ನಿಧೇಯಂ
> ಧತ್ತೇ ಶೋಭಾಂ ವಿರಚಿತಮಿದಂ ಸ್ಥಾನಮಸ್ಯೈತದಸ್ಯ
> ಮಾಲಾಕಾರೋ ರಚಯತಿ ಯಥಾ ಸಾಧು ವಿಜ್ಞಾಯ ಮಾಲಾಂ
> ಯೋಜ್ಯಂ ಕಾವ್ಯೇಷ್ವವಹಿತಧಿಯಾ ತದ್ವದೇವಾಭಿಧಾನಂ

ಭಾಮಹ ೧-೫೯

ಮಾರ್ಗವಿಭಾಗದರ್ಶನ ಪ್ರಕರಣ

ಸೂತ್ರ ೧೧೮

ದಂಡಿ ೨, ೧; ವಾಮನ ೩-೧-೧; ಮಾರ್ಗ ೨-೧

ಕಾವ್ಯದ ಆತ್ಮವೇ ರಸವು. ರಸದ ಧರ್ಮಗಳೇ ಗುಣಗಳು. ಗುಣಗಳ ಸಾಮಾನ್ಯ ಲಕ್ಷಣವನ್ನು ಕೆಳಗಣ ಪದ್ಯದಲ್ಲಿ ಹೇಳಿದೆ.

> ಯೇ ರಸಸ್ಯಾಂಗಿನೋ ಧರ್ಮಾ ಶೌರ್ಯಾದಯ ಇವಾತ್ಮನಃ
> ಉತ್ಕರ್ಷಹೇತವಸ್ತೇ ಸ್ಯುರಚಲಸ್ಥಿತಯೋ ಗುಣಾಃ

ಗುಣಗಳಿಗೂ ಅಲಂಕಾರಗಳಿಗೂ ಇರುವ ಭೇದಗಳನ್ನು ಮಮ್ಮಟನು ಈ ರೀತಿಯಾಗಿ ಸಂಗ್ರಹಿಸಿದ್ದಾನೆ: (೧) ಗುಣಗಳು ರಸಧರ್ಮಗಳು; ಅಲಂಕಾರಗಳು ರಸಧರ್ಮಗಳಲ್ಲ. (೨) ರಸವಿಲ್ಲದೆ ಗುಣಗಳಿಲ್ಲ; ರಸವಿಲ್ಲದೆ ಅಲಂಕಾರವಿರಬಹುದು. (೩) ಗುಣಗಳು ಅವಶ್ಯವಾಗಿ ರಸವನ್ನು ಪೋಷಿಸುವುವು; ಅಲಂಕಾರಗಳು ಹಾಗಲ್ಲ. (೪) ಗುಣಗಳು ಸಾಕ್ಷಾತ್ತಾಗಿ ರಸಕ್ಕೆ ಉಪಕಾರಗಳು; ಅಲಂಕಾರಗಳು ಅಂಗದ್ವಾರದಿಂದ ರಸಕ್ಕೆ ಉಪಕಾರಗಳು.

ಒಟ್ಟಿನಲ್ಲಿ ಕಾವ್ಯಪುರುಷನಿಗೆ ಅಥವಾ ಕಾವ್ಯಶ್ರೀಗೆ ಗುಣಗಳು ಆಂತರ್ಯದ ಗುಣಗಳು, ಅಲಂಕಾರಗಳು ಕೇವಲ ಬಾಹ್ಯಾಲಂಕಾರಗಳು.

ಸೂತ್ರ ೧೧೯

ದಂಡಿ ೧-೪೧, ೪೨; ವಾಮನ ೩-೧-೪; ಮಾರ್ಗ ೨-೫೩, ೫೪

ಭಾಮಹನು ಮಾಧುರ್ಯ, ಪ್ರಸಾದ, ಓಜಗಳೆಂಬ ಮೂರು ಗುಣಗಳನ್ನು ಹೇಳಿದ್ದಾನೆ. ಮಮ್ಮಟನೂ ಮೂರು ಗುಣಗಳನ್ನು ಹೇಳಿದ್ದಾನೆ; ಆದರೆ ಅವು ಭಾಮಹನು ಹೇಳಿದುವುಗಳಲ್ಲ. ಆತನ ಮತದ ಪ್ರಕಾರ ನವರಸಗಳು 'ಸಾಮಾಜಿಕ'ರ

ಮನಸ್ಸಿನಲ್ಲಿ 'ಧೃತಿ, ವಿಸ್ತಾರ, ವಿಕಾಸ' ಗಳೆಂಬ ಮೂರು ಅವಸ್ಥೆಗಳನ್ನುಂಟು ಮಾಡುತ್ತವೆ. 'ಧೃತಿ'ಯೆಂದರೆ ಮನಸ್ಸು ಕರಗುವಂಥಹ ಅವಸ್ಥೆ (ಕರುಣ ಮೊದಲಾದ ರಸಗಳಿಂದ). 'ವಿಸ್ತಾರ' ವೆಂದರೆ ಮನಸ್ಸು ಹಿಗ್ಗುವಂತಹ ಅವಸ್ಥೆ; ಇದಕ್ಕೆ 'ದೀಪ್ತಿ' ಯೆಂದೂ ಹೆಸರು (ವೀರ-ರೌದ್ರ ರಸಗಳಿಂದ). ವಿಕಾಸವೆಂದರೆ ಮನಸ್ಸು ಅರಳುವ ಅವಸ್ಥೆ (ಹಾಸ್ಯ ಶೃಂಗಾರಾದಿಗಳಿಂದ). ಇವೇ ನಿಜವಾದ ಗುಣಗಳೆಂದೂ ಬೇರೆ ಯವರು ಹೇಳುವ ಗುಣಗಳಲ್ಲಿ ಕೆಲವು ಇವುಗಳಲ್ಲಿ ಸಮಾವೇಶಗಳೆಂದೂ ಉಳಿದುವು ದೋಷರಾಹಿತ್ಯಾವಸ್ಥೆಯೆಂದೂ ಹೇಳಬಹುದು. ಆದರೆ ನಾಗವರ್ಮನು ದಂಡಿ-ವಾಮನರನ್ನನುಸರಿಸಿ ಹತ್ತು ಗುಣಗಳನ್ನು ಹೇಳಿದ್ದಾನೆ.

ಸೂತ್ರ ೧೨೦

ದಂಡಿ ೧-೪೭; ವಾಮನ ೩-೨-೫; ಮಾರ್ಗ ೨-೫೪

ಸಮ ಅಥವಾ ಸಮತೆ — ಬಂಧವಾಗಲೀ ಶೈಲಿಯಾಗಲೀ ಮೊದಲಿಂದ ಕೊನೆಯವರೆಗೆ ಒಂದೇ ಸಮನಾಗಿ ಇರುವುದಕ್ಕೆ ಈ ಹೆಸರು. ಈ ಗುಣವು ಶಬ್ದ ಮತ್ತು ಅರ್ಥ ಇವೆರಡರಲ್ಲಿಯೂ ವರ್ತಿಸುವುದು. ಇದು—ಮೃದು (ಕೋಮಲ), ಸ್ಫುಟ (ವಿಕಟ ಅಥವಾ ತೀವ್ರ) ಮತ್ತು ಇವೆರಡರ ಮಿಶ್ರವೆಂದು—ಮೂರು ವಿಧ. ಶಬ್ದಗಳಲ್ಲಿ ಹೆಚ್ಚಾಗಿ ಲಘ್ವಕ್ಷರಗಳನ್ನು ಉಪಯೋಗಿಸುವುದರಿಂದ ಮೃದುಬಂಧವೂ ದೀರ್ಘಾಕ್ಷರಗಳನ್ನು ಉಪಯೋಗಿಸುವುದರಿಂದ ಸ್ಫುಟಬಂಧವೂ ಆಗುವುವು. ಅರ್ಥ ದೃಷ್ಟಿಯಿಂದ ಆಯಾ ವಿಷಯಗಳನ್ನು ಕ್ರಮವಾಗಿ ವರ್ಣಿಸುವುದರಲ್ಲಿಯೂ ಅರ್ಥವು ಸ್ಫುಟವಾಗಿರುವಂತೆ ರಚಿಸುವುದರಲ್ಲಿಯೂ ಈ ಗುಣವು ಕಂಡುಬರುತ್ತದೆ. ಮಮ್ಮಟನು ಇದನ್ನು ಗುಣವೆಂದು ಗ್ರಹಿಸುವುದಿಲ್ಲವಷ್ಟೇ ಅಲ್ಲ; ಒಮ್ಮೊಮ್ಮೆ ಇದು ದೋಷವೂ ಆಗಬಹುದೆಂದು ಹೇಳುತ್ತಾನೆ. ವಿಷಯಕ್ಕನುಗುಣವಾಗಿ ಶೈಲಿಯಲ್ಲಿ ಆಗಬೇಕಾದ ಹೆಚ್ಚುಕಡಿಮೆಗಳಿಗೆ ಇದು ಅಡ್ಡಬರುವುದೆಂದು ಆತನ ಮತ.

೫೦೨ — ಹೋ: ಮಾರ್ಗ ೨-೬೫

ಸೂತ್ರ ೧೨೧

ದಂಡಿ ೧-೪೩, ೭೩; ಮಾರ್ಗ ೨-೬೪, ೧-೧೦೧

ಸಂಶ್ಲಿಷ್ಟ — ಪದಗಳು ಪರಸ್ಪರ ಹೊಲಿದಂತೆ ನಿಬಿಡವಾಗಿರುವುದು. (ಹೋ: '**ಶ್ಲೇಷೋ ಯತ್ರ ಪದಾನಿ ಸ್ಯುಃ ಸ್ಯೂತಾನೀವ ಪರಸ್ಪರಂ**' — ವಾಗ್ಭಟ) ಅಂದರೆ ಪದಗಳು ಬೇರೆಬೇರೆಯಾಗಿದ್ದರೂ ಸಹಜವಾದ ಸಂಧಿಯಿಂದ ಸಮಸ್ತಪದದಂತೆ ತೋರುವ ಸರಣಿಯಲ್ಲಿ ಈ ಗುಣವು ವ್ಯಕ್ತವಾಗುತ್ತದೆ. ಅವರ್ಗೀಯಗಳೂ ಅಲ್ಪ ಪ್ರಾಣಾಕ್ಷರಗಳೂ ಅಧಿಕವಾಗಿರುವುದರಿಂದ ಈ ಗುಣವು ಬರುವುದೆಂದು ದಂಡಿಯ ಮತ.

ಅರ್ಥವ್ಯಕ್ತಿ — ಅರ್ಥವು ಸ್ಪಷ್ಟವಾಗುವುದಕ್ಕೆ ಬೇಕಾಗುವ ಎಲ್ಲ ಪದಗಳೂ ಇರುವುದು; ನೇಯದ ದೋಷವಿಲ್ಲದುದು (= 'ಅನೇಯ').

ನೇಯ — ಭಾಮಹನು (೧-೩೮ ರಲ್ಲಿ) ನೇಯಾರ್ಥದ ಲಕ್ಷಣವನ್ನು ಈ ರೀತಿಯಾಗಿ ಹೇಳುತ್ತಾನೆ :

ನೇಯಾರ್ಥಂ ನೀಯತೇಽನುಕ್ತೋ ಯಸ್ಯಾರ್ಥಃ ಕೃತಿಭಿರ್ಬಲಾತ್
ಶಬ್ದನ್ಯಾಯಾನುಪಾರೂಢಃ ಕಥಂಚಿತ್ ಸ್ವಾಭಿಸಂಧಿನಾ

ಪದದಿಂದ ರೂಢಿಯಿಂದ ಹೊರಡಬಹುದಾದ ಅರ್ಥವನ್ನು ಬಿಟ್ಟು ಕವಿಯು ತಾನು ಕಲ್ಪಿಸಿಕೊಂಡ ಅರ್ಥವನ್ನು ಅದರಲ್ಲಿ ಹೊರಡಿಸಲಿಕ್ಕೆ ಪ್ರಯತ್ನಿಸಿದರೆ ನೇಯದ ದೋಷವಾಗುವುದು. ಅದು ಇಲ್ಲದಿರುವುದೇ 'ಅರ್ಥವ್ಯಕ್ತಿ' ಯೆಂಬ ಗುಣವಾಗುವುದು.

೫೦೮ — ದರ್ಪಣ ೧೪೫; ಹೋ: ಮಾರ್ಗ ೧-೧೦೨, ೧೦೩

ಸೂತ್ರ ೧೨೨

ವಾಮನನು (೩-೧-೨೧) 'ಪೃಥಕ್‌ಪದತ್ವಂ ಮಾಧುರ್ಯಂ' ಎಂದರೆ ಸಂಧಿ-ಸಮಾಸಗಳಿಲ್ಲದೆ ಪದಗಳು ಬಿಡಿಬಿಡಿಯಾಗಿರುವುದು ಮಾಧುರ್ಯವೆಂದೂ 'ಔಜ್ವಲ್ಯಂ ಕಾಂತಿಃ' (೩-೧-೨೫) ಎಂದೂ ಹೇಳಿದ್ದಾನೆ. ಆದರೆ ಮಮ್ಮಟ ಮೊದಲಾದವರು ಮನಸ್ಸಿಗೆ ಆಹ್ಲಾದವನ್ನು ಮಾಡುವಂತಹುದು ಮಾಧುರ್ಯವೆಂತಲೂ ಗ್ರಾಮ್ಯಪದ ರಾಹಿತ್ಯದಿಂದ ಗಂಭೀರವಾದ ಸರಣಿಯು ಕಾಂತಿಯೆಂತಲೂ ಹೇಳುತ್ತಾರೆ. ಈ ಅಭಿಪ್ರಾಯದ ಪ್ರಕಾರ ಇಲ್ಲಿ ನಾಗವರ್ಮನು ಹೇಳಿರುವ 'ಮಧುರ' ವೆಂಬುದು ಕಾಂತಿಯೆಂತಲೂ 'ಕಾಂತ' ವೆಂಬುದು ಮಾಧುರ್ಯವೆಂತಲೂ ತಿಳಿಯತಕ್ಕದ್ದು.

ಸೂತ್ರ ೧೨೩

ದಂಡಿ ೧-೪೫, ೬೯; ವಾಮನ ೩-೨-೩, ೧೨; ಮಾರ್ಗ ೨-೭೭

ಪ್ರಸನ್ನ ಅಥವಾ ಪ್ರಸಾದ: ಮಮ್ಮಟನು ಇದರ ಲಕ್ಷಣವನ್ನು (ಸೂತ್ರ ೧೦೧) ಹೀಗೆ ಹೇಳುತ್ತಾನೆ:

ಶ್ರುತಿಮಾತ್ರೇಣ ಶಬ್ದಾತ್ತು ಯೇನಾರ್ಥಪ್ರತ್ಯಯೋ ಭವೇತ್
ಸಾಧಾರಣಃ ಸಮಗ್ರಾಣಾಂ ಸ ಪ್ರಸಾದೋ ಗುಣೋ ಮತಃ

ಸೌಕುಮಾರ್ಯ : ಮೃದುವರ್ಣಗಳಿಂದಲೂ ಅನುಸ್ವಾರದಿಂದಲೂ ಈ ಗುಣ ವುಂಟಾಗುತ್ತದೆ.

ಸೂತ್ರ ೧೨೪

ದಂಡಿ ೧-೭೭,೭೯,೮೦; ಮಾರ್ಗ ೨-೭೯,೮೧,೮೫

ಓಜ: ಬಹಳ ಸಮಾಸಗಳುಳ್ಳ ಶೈಲಿಯು.

ಉದಾರ : ಇದನ್ನೇ ಕೆಲವರು ಉದಾತ್ತತೆಯೆಂದು ಹೇಳುವರು. ಅರ್ಥ

ವತ್ತಾದ ವಿಶೇಷಣಗಳನ್ನು ಬಳಸುವುದರಿಂದ ಈ ಗುಣವು ಪ್ರಕಟವಾಗುವುದು. ನಾಗವರ್ಮನ ಮತದಂತೆ ಇದು 'ಲೋಕೋತ್ತರವರ್ಣನೆ' ಯಲ್ಲಿಯೂ ಇರುವುದು.

ಸೂತ್ರ ೧೨೫

ದಂಡಿ ೧—೯೩

ಸಮಾಧಿ: ಈ ಗುಣವನ್ನು ವಾಮನನು ಬೇರೆ ರೀತಿಯಾಗಿ ಹೇಳುತ್ತಾನೆ: 'ಆರೋಹಾವರೋಹನಿಮಿತಂ ಸಮಾಧಿರಾಖ್ಯಾಯತೇ' (೩–೧–೧೯) ಎಂದರೆ ಶೈಲಿ ಯಲ್ಲಿ ಏರಿಳಿತಗಳು ಆಹ್ಲಾದಕರವಾಗುವಂತೆ ಹೊಂದಿಕೊಂಡಿರುವುದು.

೫೨೦ — ಹೋ : ದಂಡಿ ೧–೯೪; ಮಾರ್ಗ ೨–೭೪

ಸೂತ್ರ ೧೨೬

ದಂಡಿ ೧—೪೧, ೪೨; ಮಾರ್ಗ ೨-೫೪, ೫೫

ಉದೀಚ್ಯ=ಉತ್ತರ

ಸೂತ್ರ ೧೨೭

ಭಾಮಹ ೧—೩೨

ವಿಚಾರ: ಭಾಷಾದೃಷ್ಟಿಯಿಂದ ಉತ್ತರ-ದಕ್ಷಿಣ, ಅಥವಾ ವೈದರ್ಭ-ಗೌಡ ಗಳೆಂಬ ಮಾರ್ಗಭೇದಗಳನ್ನು ಹೇಳುವುದು ಬಹಳವಾದರೆ ಸಂಸ್ಕೃತ ವಾಙ್ಮಯಕ್ಕೆ ಮಾತ್ರ ಸಲ್ಲುವುದು. ಈ ವಿಚಾರದಲ್ಲಿ ನೃಪತುಂಗನು ಬಹಳವಾಗಿ ಬೆಳಸಿ ಹೇಳಿದ್ದರೂ (ಮಾರ್ಗ ೨-೧೦೨ರಿಂದ ೧೧೦) ಕನ್ನಡ ಸಾಹಿತ್ಯಕ್ಕೆ ಇದು ಅನ್ವಯಿಸು ವುದಿಲ್ಲವೆಂದೇ ತಿಳಿಯಬೇಕು*. ಇನ್ನು ಕಾವ್ಯಗುಣಗಳ ದೃಷ್ಟಿಯಿಂದ ವಿಚಾರ ಮಾಡಿ ಹೇಳಿರುವುದನ್ನು ಮುಂದೆ ರೀತಿಕ್ರಮರಸನಿರೂಪಣಾಧಿಕರಣದಲ್ಲಿ ನೋಡುವುದು.

ಶಬ್ದಾಲಂಕಾರಪ್ರಕರಣ

ಸೂತ್ರ ೧೨೯–೧೩೦

ರುದ್ರಟ ೨-೧೩; ದಂಡಿ ೩–೧ ಕ್ರಮವಾಗಿ

ಯಮಕ — ಎರಡು ಅಥವಾ ಹೆಚ್ಚು ವರ್ಣಗಳು ಒಂದೇ ಕ್ರಮದಲ್ಲಿ ತಿರು ತಿರುಗಿ ಬರುವುದು. ಆಗ ಪ್ರತಿಯೊಂದು ಸಾರೆ ಅರ್ಥವು ಬೇರೆಬೇರೆಯಾಗತಕ್ಕದ್ದು. ಒಂದುವೇಳೆ ಆ ಅಕ್ಷರಗಳಿಗಷ್ಟೇ ಪ್ರತ್ಯೇಕವಾದ ಅರ್ಥವು ಇಲ್ಲದೆ ಇರಬಹುದು. ಇವರಲ್ಲಿ ವ್ಯವಹಿತ ಅಥವಾ ವ್ಯಪೇತವೆಂದೂ ಅವ್ಯಪೇತವೆಂದೂ ಎರಡು ವಿಧ.

---

* ಹೆಚ್ಚಿನ ವಿಚಾರಕ್ಕೆ ರಾ। ಬ। ನರಸಿಂಹಾಚಾರ್ಯರ History of Kannada Language pp. 121-128 ನೋಡಬಹುದು.

ವ್ಯಪೇತ-ಎಂದರೆ ನಿರ್ದಿಷ್ಟವರ್ಣಗಳ ಪುನರಾವೃತ್ತಿಯಾಗುವುದಕ್ಕೆ ಮೊದಲು ಕೆಲವು ಬೇರೆ ವರ್ಣಗಳು ಬರುವುದು; ಹಾಗೆ ಬಾರದಿದ್ದರೆ **ಅವ್ಯಪೇತ.**

ಸೂತ್ರ ೧೩೧

ಭಾಮಹ ೨-೧೦; ದಂಡಿ ೩-೫೧; ರುದ್ರಟ ೩-೯, ೧೩, ೧೬

ವಿಜಾತೀಯ ಯಮಕಗಳು: ಬೇರೆ ಬೇರೆ ಯಮಕಗಳು ಅಲ್ಲೊಂದು ಇಲ್ಲೊಂದು ಬಂದರೆ ಪರಿವೃತ್ತಿಯೆಂದೂ ಒಂದು ಪಾದದ ಅಂತ್ಯದಲ್ಲಿಯೂ ಮುಂದಿನ ಪಾದದ ಆದಿಯಲ್ಲಿಯೂ ಬಂದರೆ ಸಂದಷ್ಟವೆಂದೂ ಮೇಲಿಂದ ಮೇಲೆ ಬೇರೆಬೇರೆ ಯಮಕ ಗಳು ಪದ್ಯದುದ್ದಕ್ಕೂ ಬಂದರೆ **ಆವಳಿಯೆಂದೂ** ಪೂರ್ವಾರ್ಧದಲ್ಲಿ ಬಂದುದೇ ಉತ್ತರಾರ್ಧದಲ್ಲಿಯೂ ಬಂದರೆ ಸಮುದ್ಗವೆಂದೂ ಹೆಸರು.

ಸೂತ್ರ ೧೩೨

ಯಮಕವಲ್ಲಿ ಬ, ವ ಕಾರಗಳನ್ನೂ ಪ, ಹ ಕಾರಗಳನ್ನೂ ಏಕರೂಪವಮಾಡಿ ಪ್ರಯೋಗಿಸಬಹುದು. ಶಬ್ದಗಳಲ್ಲಿ ಸಹಜವಾದ ಸಂಯುಕ್ತಾಕ್ಷರಗಳೊಡನೆ ಎರಡು ಶಬ್ದಗಳ ಸಂಧಿಯಿಂದಾದ ಸಂಯುಕ್ತಾಕ್ಷರಗಳನ್ನು ಪ್ರಯೋಗಿಸಬಹುದು.

ಸೂತ್ರ ೧೩೩

ದಂಡಿ ೧-೫೫; ಭಾಮಹ ೨-೫

ಯಾವುದಾದರೊಂದು ವ್ಯಂಜನವು ಮೇಲಿಂದ ಮೇಲೆ ಪದ್ಯದಲ್ಲಿ ಬಂದರೆ ಅದಕ್ಕೆ ಅನುಪ್ರಾಸವೆಂದು ಹೆಸರು. ಇದನ್ನೇ ಮಮ್ಮಟನು 'ವರ್ಣಸಾಮ್ಯಮನು ಪ್ರಾಸಂ' ಎಂದು ಹೇಳಿದ್ದಾನೆ. ಇದರಲ್ಲಿ ಒಂದೇ ತರದ (=ಸದೃಶ) ವರ್ಣಗಳೂ ಬರ ಬಹುದು. ಉದಾ: 'ಶ, ಚ; ರ, ಜ, ಡ; ಡ, ಲ, ಳ' ಇತ್ಯಾದಿ. ಇದನ್ನೇ ದರ್ಪಣ ಕಾರನು ವರ್ಣಾವೃತ್ತಿಯೆಂದು (೧೯) ಕರೆದಿರುವನು. ಇದರಲ್ಲಿ ಅನೇಕ ವರ್ಣಗಳು ಕೂಡಿಯೂ ಪುನರಾವೃತ್ತವಾಗಬಹುದು. ಆದುದರಿಂದ ಯಮಕವೂ ವರ್ಣಾ ವೃತ್ತಿಯ ಒಂದು ವಿಶಿಷ್ಟ ಭೇದವೆಂದು ಹೇಳಬಹುದು. ಎರಡು ಅಥವಾ ಹೆಚ್ಚು ವರ್ಣಗಳು ಪುನರಾವೃತ್ತಿಯಾಗುವುದರಿಂದ ಛೇಕಾನುಪ್ರಾಸ, ವೃತ್ಯನುಪ್ರಾಸ, ಲಾಟಾನುಪ್ರಾಸ ಮೊದಲಾದ ಭೇದಗಳು ಉಂಟಾಗುವುವು.

ಸೂತ್ರ ೧೩೪-೧೩೫

ರುದ್ರಟ ೨-೨೭; ಉದ್ಭಟ ೧-೭; ಮತ್ತು ರುದ್ರಟ ೨-೨೦; ಉದ್ಭಟ ೧-೯ ಕ್ರಮವಾಗಿ

ಹ್ರಸ್ವಸ್ವರಗಳಿಂದ ಅಂತರಿತವಾದ ಲ, ರ, ಣ ಗಳೂ ಇದರಲ್ಲಿ ಅಂತ ರ್ಭಾವವಾಗುತ್ತವೆ.

೫೬೩ — ಹೋ : ರುದ್ರಟ ೨-೨೩

ಸೂತ್ರ ೧೩೬

ರುದ್ರಟ ೨-೨೯

ಘ, ಧ, ಭ, ರ, ಸ, ಲ ಇವು ಲಘುಸ್ವರಗಳಿಂದ ಕೂಡಿ ಬಂದರೆ ಲಲಿತೆಯೆಂಬ ವೃತ್ತಿಯಾಗುವುದೆಂದು ರುದ್ರಟನು ಹೇಳುತ್ತಾನೆ. ಆದರೆ ಇಲ್ಲಿ ಕೊಟ್ಟಿರುವ ಉದಾಹರಣೆಯಲ್ಲಿ ಗ ದ ಬ ಗಳು (ಅಲ್ಪಪ್ರಾಣವಾಗಿಯೇ) ಪ್ರಯೋಗಿಸಲ್ಪಟ್ಟಿವೆ.

೫೬೫ —

ಹೇ ಪಾಂಥಾಃ ಸಗೃಹಾಣಿ ಗಚ್ಛತ ಸುಖಂ ಸೇವಾಕ್ಷಣೋ ಮುಚ್ಯತಾಂ
ಮಾನಂ ಮಾನಿನಿ ಮುಂಚ ವಲ್ಲಭಜನೇ ಕೋಪಾನುಬಂಧೇನ ಕಿಂ
ಆಯಾತಃ ಕುಸುಮಾಕರಃ ಕ್ಷಪಯತಿ ಪ್ರಾಣಾನ್ ವಿಯೋಗಾತುರೇ
ಷ್ವಿತ್ಯೇವಂ ಪರಪುಷ್ಟನಾದಪಟಹೋ ವಕ್ತೀವ ಕಾಮಾಜ್ಞಯಾ

ಸುಭಾಷಿತಾವಲಿ ೧೬೮೯

ಸೂತ್ರ ೧೩೮-೧೩೯

ರುದ್ರಟ ೫-೧ರಿಂದ ೪; ಮಾರ್ಗ ೨-೧೧೦

ಬಾಣ, ಧನುಸ್ಸು, ಚಕ್ರ ಇತ್ಯಾದಿ ವಸ್ತುಗಳ ಚಿತ್ರಗಳನ್ನು ಬರೆದು ಅವುಗಳಲ್ಲಿ ಅಕ್ಷರಗಳನ್ನು ತುಂಬಲಿಕ್ಕೆ ಬರುವಂತೆ ಪದ್ಯಗಳನ್ನು ರಚಿಸುವುದು ಚಿತ್ರವೆಂಬ ಅಲಂಕಾರವಾಗುವುದು. ಇವುಗಳ ಚಿತ್ರಗಳನ್ನೂ ಅವುಗಳಲ್ಲಿ ಮಾಡಬೇಕಾದ ವರ್ಣವಿನ್ಯಾಸವನ್ನೂ ರುದ್ರಟ, ಪ್ರತಾಪರುದ್ರೀಯ, ನರಪತಿಚರಿತಾಲಂಕಾರ, ಕವಿರಾಜಮಾರ್ಗ ಮುಂತಾದ ಸಂಸ್ಕೃತ-ಕನ್ನಡ ಮುದ್ರಿತ ಅಲಂಕಾರ ಗ್ರಂಥಗಳಲ್ಲಿ ನೋಡಬೇಕು.

ಸೂತ್ರ ೧೪೦ ರಿಂದ ೧೪೪

ಸೂತ್ರ ೧೪೦, ೧೪೧–ರುದ್ರಟ ೫-೨೪; ಮಾರ್ಗ ೨-೧೪೨, ೧೧೭
ಸೂತ್ರ ೧೪೨, ೧೪೩- ಭಾಮಹ ೨-೧೯; ದಂಡಿ ೩-೯೭; ರುದ್ರಟ ೫-೨೪, ೨೫
ಸೂತ್ರ ೧೪೪–ರುದ್ರಟ ೨-೧೪

ಪೇಳಿಕೆಗಳಿಗೆ ಸಂಸ್ಕೃತದಲ್ಲಿ ' ಪ್ರಹೇಲಿಕಾ ' ಎಂದು ಹೆಸರು. ಇವು ಒಂದು ಬಗೆಯ ಒಗಟುಗಳು. ಇವುಗಳನ್ನು ಕುರಿತು ಭಾಮಹನು ಹೇಳುವುದು ಮನನೀಯವಾಗಿರುವುದು:

ಕಾವ್ಯಾನಿ ಯದೀಮಾನಿ ವ್ಯಾಖ್ಯಾಗಮ್ಯಾನಿ ಶಾಸ್ತ್ರವತ್
ಉತ್ಸವಃ ಸುಧೀಯಾಮೇವ ಹಂತ ದುರ್ಮೇಧಸೋ ಹತಾಃ (೨-೨೦)

' ಶಾಸ್ತ್ರಗಳಂತೆ ಇವಾದರೂ ವ್ಯಾಖ್ಯಾನಗಳಿಲ್ಲದೆ ತಿಳಿಯುವುದಿಲ್ಲವಾದುದರಿಂದ ಇವನ್ನೂ ಕಾವ್ಯವೆಂದು ಅಂಗೀಕರಿಸುವುದರಿಂದ ಬುದ್ಧಿವಂತರಿಗಷ್ಟೇ ಉಪಯೋಗ; ಆದರೆ ಉಳಿದವರ ಗತಿಯೇನು? '

೫೯೭ — ಮಾರ್ಗ ೨-೧೪೩. ೬೦೪ — ರುದ್ರಟ ೨-೧೭

ಅರ್ಥಾಲಂಕಾರ ಪ್ರಕರಣ

ಅಲಂಕಾರಗಳು ಶಬ್ದಾರ್ಥವೈಚಿತ್ರ್ಯಗಳೆಂದೂ ಕಾವ್ಯಸೌಂದರ್ಯಕ್ಕೆ ಗುಣಗಳೇ ಮೂಲಕಾರಣಗಳೆಂದೂ ಅಲಂಕಾರಗಳು ಅವುಗಳನ್ನು ಹೆಚ್ಚಿಸುವುವು ಮಾತ್ರವೆಂದೂ ದಂಡಿ ಮೊದಲಾದ ಆಲಂಕಾರಿಕರ ಮತ. ಕಾವ್ಯದಲ್ಲಿ ರಸವಿದ್ದರೆ ಅದಕ್ಕೆ ಅಲಂಕಾರದಿಂದ ಮತ್ತಷ್ಟು ಶೋಭೆಯುಂಟಾಗುವುದೆಂದೂ ಅದಿಲ್ಲದಿದ್ದರೆ ಇವುಗಳಿಂದ ಏನೂ ಪ್ರಯೋಜನವಿಲ್ಲವೆಂದೂ ಒಮ್ಮೊಮ್ಮೆ ಹಾನಿಯೂ ಉಂಟಾಗಬಹುದೆಂದೂ ಮಮ್ಮಟ ಮೊದಲಾದವರು ಹೇಳುತ್ತಾರೆ. ಕೇಶವಮಿಶ್ರನು ತನ್ನ ಅಲಂಕಾರಶೇಖರದಲ್ಲಿ —

ಅಲಂಕಾರಸಹಸ್ರೈಃ ಕಿಂ ಗುಣೋ ಯದಿ ನ ವಿದ್ಯತೇ
ವಿಕ್ರೀಯಂತೇ ನ ಘಂಟಾಭಿಃ ಗಾವಃ ಕ್ಷೀರವಿವರ್ಜಿತಾಃ

ಎಂದು ಹೇಳುತ್ತಾನೆ. ಆದರೂ ಭರತನ ನಾಟ್ಯಶಾಸ್ತ್ರದ ಕಾಲಕ್ಕೆ ಮೂರೇ ಇದ್ದ ಅರ್ಥಾಲಂಕಾರಗಳು ಬರಬರುತ್ತ ಹೆಚ್ಚಾಗಿ ಕುವಲಯಾನಂದದ ಕಾಲಕ್ಕೆ ನೂರಿಪ್ಪತ್ತರ ವರೆಗೆ ಬೆಳೆದುವೆಂಬುವನ್ನು ವಿಚಾರಮಾಡಿದರೆ ಅಲಂಕಾರಗಳು ಎಷ್ಟು ಮಹತ್ತ್ವವಾದುವೆಂಬುದು ಗೊತ್ತಾಗುವುದು.

ಸಂಸ್ಕೃತ ಆಲಂಕಾರಿಕರನ್ನು ಪ್ರಾಚೀನರು, ನವೀನರು ಎಂದು ಎರಡು ಭಾಗ ಮಾಡಬಹುದು. ಪ್ರಾಚೀನರಲ್ಲಿ ಭರತ, ಭಾಮಹ, ದಂಡಿ, ಉದ್ಭಟ, ವಾಮನ, ರುದ್ರಟ ಇವರು ಮುಖ್ಯರೆಂದೂ ನವೀನರಲ್ಲಿ ಆನಂದವರ್ಧನ, ಮಮ್ಮಟ, ರುಯ್ಯಕ, ವಿಶ್ವನಾಥ, ಅಪ್ಪಯದೀಕ್ಷಿತ, ಜಗನ್ನಾಥ ಇವರು ಮುಖ್ಯರೆಂದೂ ಹೇಳಬಹುದು. ಪ್ರಾಚೀನರು ಕಾವ್ಯದಲ್ಲಿ ಮುಖ್ಯವಾದ ಧ್ವನಿಯೆಂಬುದನ್ನು ಅಲಂಕಾರದಲ್ಲಿಯೇ ಸೇರಿಸಿಬಿಡುತ್ತಿದ್ದರು. ನವೀನರು ಅದನ್ನು ಕಾವ್ಯದ ಮುಖ್ಯ ಗುಣವೆಂದು ತಿಳಿದುಕೊಂಡದ್ದರಿಂದ ಧ್ವನಿಗೆ ಸಂಬಂಧವಿಲ್ಲದ ಅಲಂಕಾರಗಳಷ್ಟೇ ಅರ್ಥಾಲಂಕಾರಗಳೆಂದೂ ಇವುಗಳಲ್ಲ ಧ್ವನಿಯು ಸೇರಬಾರದೆಂದೂ ಅಭಿಪ್ರಾಯಪಡುವರು.

ಅಲಂಕಾರಗಳ ಸಂಖ್ಯೆಯು ಬೆಳೆದಂತೆ ಅವುಗಳನ್ನು ಬೇರೆಬೇರೆ ಗುಂಪುಗಳನ್ನಾಗಿ ವಿಭಾಗಿಸಲಾರಂಭಿಸಿದಂತೆ ತೋರುತ್ತದೆ. ವಾಮನನು ಅಲಂಕಾರಗಳಿಗೆಲ್ಲಾ ಉಪಮೆಯೇ ಆಧಾರವೆಂದೂ ಉಪಮೆ-ಉಪಮಾಪ್ರಪಂಚವೆಂದೂ ಎರಡು ಭಾಗ ಮಾಡಿದ್ದಾನೆ. ರುದ್ರಟನು ವಾಸ್ತವ, ಔಪಮ್ಯ, ಅತಿಶಯ, ಶ್ಲೇಷ ಎಂದು ನಾಲ್ಕು ವಿಧವಾಗಿ ವಿಭಾಗಿಸಿದ್ದಾನೆ. ಇಲ್ಲಿ ನಾಗವರ್ಮನು ಇವನನ್ನೇ ಅನುಸರಿಸಿದ್ದಾನೆ. ಮುಂದೆ ರುಯ್ಯಕನು ಸಾದೃಶ್ಯ, ವಿರೋಧ, ಶೃಂಖಲಾ, ತರ್ಕನ್ಯಾಯ, ವಾಕ್ಯನ್ಯಾಯ, ಲೋಕನ್ಯಾಯ ಗೂಢಾರ್ಥಪ್ರತೀತಿಗಳೆಂದು ಏಳು ವಿಭಾಗಗಳನ್ನು

ಮಾಡಿದ್ದಾನೆ. ಆದರೆ ಮಮ್ಮಟ, ಕುವಲಯಾನಂದಕಾರ ಮೊದಲಾದವರು ಯಾವ ವಿಭಾಗಗಳನ್ನೂ ಹೇಳಿಲ್ಲ.

ಪಾಶ್ಚಾತ್ಯರಲ್ಲಿ ಅಲಂಕಾರಶಾಸ್ತ್ರವು ಅರಿಸ್ಟೋಟಲ್ ಎಂಬ ಸುಪ್ರಸಿದ್ಧ ಗ್ರೀಕ ತತ್ವಜ್ಞಾನಿಯ ಕಾಲದಿಂದ (ಕ್ರಿ. ಶ. ಪೂರ್ವ ೪ನೆಯ ಶತಮಾನದಿಂದ) ಬಂದಿದ್ದರೂ ಅರ್ಥಾಲಂಕಾರಗಳು ಬಹಳ ಕಡಿಮೆಯಾಗಿಯೆ ಇರುವುವು. ಉಪಮೆ, ರೂಪಕ, ಅತಿಶಯೋಕ್ತಿ, ಸಾರ ಮೊದಲಾದ ಕೆಲವು ಪ್ರಸಿದ್ಧ ಅಲಂಕಾರಗಳು ಮಾತ್ರ ಬಳಿಕೆಯಲ್ಲಿವೆ.

ಸೂತ್ರ ೧೪೫ ರಿಂದ ೧೪೭

ರುದ್ರಟ ೭-೯ ರಿಂದ ೧೨

ಸೂತ್ರ ೧೪೮

ಈ ಸೂತ್ರದಲ್ಲಿ ಹೇಳಿದ ' **ಅರ್ಥ** ' ಎಂಬುದಕ್ಕೆ ' ಚಿಕ್ಕಮಕ್ಕಳು ಮೊದಲಾದುವು ' ಎಂದು ತಿಳಿಯತಕ್ಕದ್ದು.

(ಜಾತಿ) ಸ್ವಭಾವೋಕ್ತಿ

ಭಾಮಹ ೨-೯೩; ದಂಡಿ ೨-೮ರಿಂದ ೧೩; ಉದ್ಭಟ ೩-೫; ರುದ್ರಟ ೭-೩೩; ಮಮ್ಮಟ ೧೦-೨೦; ಕುವಲಯಾನಂದ ೧೬೦; ಮಾರ್ಗ ೩-೬

ಇದನ್ನು ರುದ್ರಟನು ಜಾತಿಯೆಂದೂ ದಂಡಿಯು ಸ್ವಭಾವೋಕ್ತಿ ಮತ್ತು ಜಾತಿಯೆಂದೂ ಉಳಿದವರು ಸ್ವಭಾವೋಕ್ತಿಯೆಂದೂ ಕರೆದಿದ್ದಾರೆ. ನಾಗವರ್ಮನು ರುದ್ರಟನನ್ನು ಅನುಸರಿಸಿದ್ದಾನೆ.

ಆವುದಾದರೊಂದು ಪ್ರಾಣಿಯ ಸ್ವರೂಪವನ್ನು ಇಲ್ಲವೆ ಅದರ ಸ್ವಭಾವಕ್ಕನುಗುಣವಾದ ಕ್ರಿಯಾದಿಗಳನ್ನು ವರ್ಣಿಸುವುದರಲ್ಲಿ ಜಾತಿ ಇಲ್ಲವೆ ಸ್ವಭಾವೋಕ್ತಿ ಎಂಬ ಅಲಂಕಾರವುಂಟಾಗುವುದು. ಆದರೆ ಇವುಗಳನ್ನು ಇದ್ದಕ್ಕಿದ್ದಂತೆ ವಾಸ್ತವವಾಗಿ ವರ್ಣಿಸಿದರೆ ಈ ಅಲಂಕಾರವು ಘಟಿಸುವುದಿಲ್ಲ. ವರ್ಣನೆಯು ಸಾಮಾನ್ಯ ಜನರಿಗೆ ಹೊಳೆಯದ ರೀತಿಯಲ್ಲಿ ಕವಿಪ್ರತಿಭೆಯ ಮೂಲಕವಾಗಿ ಚಮತ್ಕಾರವಾಗಿಯೂ ರಮಣೀಯವಾಗಿಯೂ ಇದ್ದರೆ ಮಾತ್ರ ಈ ಅಲಂಕಾರವಾಗುವುದು. ಆದರೆ ಇದರಲ್ಲಿ ಸ್ವಭಾವವಿರುದ್ಧವರ್ಣನೆಯಾಗಲೀ ಅತಿಶಯೋಕ್ತಿಯಾಗಲೀ ಇರಬಾರದು. ಚಿಕ್ಕಮಕ್ಕಳ, ಮುಗ್ಧಯುವತಿಯರ, ಪಶು-ಪಕ್ಷಿಗಳ ಸ್ವಭಾವಕ್ಕನುಸಾರವಾದ ವ್ಯಾಪಾರಗಳನ್ನು ಕಾಲ-ಅವಸ್ಥೆಗಳಿಗನುಗುಣವಾಗಿ ವರ್ಣಿಸುವುದರಲ್ಲಿ ಇದರ ರಮ್ಯತೆಯು ಗೋಚರವಾಗುವುದು. ಇದರಲ್ಲಿ ಜಾತಿ, ದ್ರವ್ಯ, ಕ್ರಿಯೆ, ಗುಣಗಳೆಂದು ನಾಲ್ಕು ವಿಭಾಗಗಳನ್ನು ದಂಡಿ, ರುದ್ರಟ ಮೊದಲಾದ ಆಲಂಕಾರಿಕರು ಮಾಡುತ್ತಾರೆ.

೬೦೯ — ಹೋ. ಮಾರ್ಗ ೩-೭. ೬೧೦ — ದಂಡಿ ೨-೧೨
೬೧೨ — ದಂಡಿ ೨-೧೧; ಮಾರ್ಗ ೩-೯

ಸೂತ್ರ ೧೪೯
ಸಹೋಕ್ತಿ

ಭಾಮಹ ೩-೩೯; ದಂಡಿ ೨-೩೫೧ ರಿಂದ ೩೫೫; ವಾಮನ ೪-೩-೨೮; ಉದ್ಭಟ ೫-೧೫; ರುದ್ರಟ ೭-೧೩ ಹಾಗೂ ೮-೯೯; ಮಮ್ಮಟ ೧೦-೨೬; ಕುವಲಯ ೫೮; ಜಗನ್ನಾಥ ೩೫೭; ಮಾರ್ಗ ೩-೧೫೫

ಬೇರೆ ಬೇರೆ ಕರ್ತೃಗಳಿಂದ ಏಕಕಾಲದಲ್ಲಿ ನಡೆದ ಎರಡು (ಅಥವಾ ಹೆಚ್ಚು) ಕಾರ್ಯಗಳನ್ನು ಒಂದು ಪದವು ವರ್ಣಿಸುವುದರಿಂದ ಸಹೋಕ್ತಿ ಎಂಬ ಅಲಂಕಾರ ವುಂಟಾಗುವುದು ಎಂದು ಉದ್ಭಟನು ಹೇಳುತ್ತಾನೆ. ಒಂದು ಸಂಗತಿಯನ್ನು ಹೇಳಬಲ್ಲ ಒಂದೇ ಪದವು ' ಸಹ ' (ಅಥವಾ ತತ್ಸಮಾನಾರ್ಥಕ) ಶಬ್ದದ ಸಹಾಯದಿಂದ ಎರಡು ಸಂಗತಿಗಳನ್ನು ಏಕಕಾಲದಲ್ಲಿ ವರ್ಣಿಸುವುದೇ ಈ ಅಲಂಕಾರವು.

ಒಂದೇ ತರದ ಎರಡು ಸಂಗತಿಗಳು ಏಕಕಾಲದಲ್ಲಿ ನಡೆದುವೆಂದು ಹೇಳುವ ಶಕ್ತಿಯು ' ಸಹ' ಎಂಬ ಶಬ್ದಕ್ಕೆ ಉಂಟು. ' ತಂದೆಯೂ ಮಗನೂ ಬಂದರು ' ಎಂಬಲ್ಲಿ ಎರಡು ಕ್ರಿಯೆಗಳನ್ನು ಬೇರೆ ಬೇರೆ ಹೇಳಿದಂತಾಗುತ್ತದೆ; ಆದರೆ ' ಮಗನೊಡನೆ ತಂದೆಯು ಬಂದನು ' ಎಂದು ಹೇಳುವಲ್ಲಿ ತಂದೆಯು ಬಂದನೆಂದು ಮುಖ್ಯವಾದ ಅರ್ಥವಾಗುವುದಲ್ಲದೆ ಮಗನೂ ಬಂದನೆಂದು ಅದರೊಡನೆ ಹೇಳಿದಂತಾಗುವುದು. ಇದೇ **ಸಹೋಕ್ತಿ**. ಆದರೆ ಈ ಅಲಂಕಾರವಾಗಬೇಕಾದರೆ ಜನರಂಜನೆಯಾಗುವ ರೀತಿಯಲ್ಲಿ ಹೇಳಬೇಕು; ಎಂದರೆ ಹೀಗೆ ಹೇಳಿದ ಎರಡು ಸಂಗತಿಗಳು ಉಪಮಾನ-ಉಪಮೇಯಾರ್ಥದಲ್ಲಿ ಸಂಬಂಧಿಸಿರಬೇಕೆಂದು ಕುವಲಯಾನಂದಕಾರನ ಮತ. ಇದು ಅತಿಶಯೋಕ್ತಿಪ್ರಧಾನವಾಗಿರಬೇಕೆಂದು ಮಮ್ಮಟಾದಿಗಳ ಮತ. ಆದುದರಿಂದಲೇ ಜಗನ್ನಾಥನು ಇದು ಬೇರೆ ಅಲಂಕಾರವಲ್ಲವೆಂದೂ ಅತಿಶಯೋಕ್ತಿಯ ಒಂದು ಮಾದರಿಯೆಂದೂ ಹೇಳಿದ್ದಾನೆ.

ಭಾವ

ರುದ್ರಟ ೭-೩೮, ೪೦

ವಾಕ್ಯವು ಪ್ರಕಟವಾಗಿ ಒಂದು ಅರ್ಥವನ್ನು ಹೇಳುತ್ತಿದ್ದರೂ ಅದಕ್ಕೆ ವಿರುದ್ಧವಾದ ಅರ್ಥವನ್ನು ತಿಳಿದುಕೊಳ್ಳಲು ಬರುವಂತಿದ್ದರೆ ಭಾವವೆಂಬ ಅಲಂಕಾರವಾಗುವುದು. ರುದ್ರಟನು ಇದರ ಇನ್ನೊಂದು ಪ್ರಕಾರವನ್ನೂ ಹೇಳಿದ್ದಾನೆ. ಅವುದಾದರೊಂದು ವಸ್ತುವಿನ ಅಥವಾ ಘಟನೆಯ ದರ್ಶನದಿಂದ ಒಬ್ಬರ ಮುಖದ ಮೇಲೆ

ಆಗುವ ವಿಕಾರದಿಂದ ಹೆಚ್ಚಿನ ಅರ್ಥವನ್ನು ತಿಳಿದುಕೊಳ್ಳುವಂತಿದ್ದರೂ ಈ ಅಲಂಕಾರವಾಗುವುದು.

ಇದನ್ನು ಬೇರೆ ಆಲಂಕಾರಿಕರು ಹೇಳಿಲ್ಲ.

೬೧೬ — ರುದ್ರಟ ೭-೪೧

ಸೂತ್ರ ೧೫೦

ಪರಿವೃತ್ತಿ

ಭಾಮಹ ೩-೪೧; ದಂಡಿ ೨-೩೫೫ ರಿಂದ ೩೫೭; ವಾಮನ ೪-೩-೧೬; ಉದ್ಭಟ ೫-೧೬; ರುದ್ರಟ ೭-೭೭; ಮಮ್ಮಟ ೧೦-೬೭; ರುಯ್ಯಕ ೬೧; ಕುವಲಯ ೧೧೨; ಜಗನ್ನಾಥ ೪೮೧; ಮಾರ್ಗ ೩-೧೫೯

ಸಮಾನ ಇಲ್ಲವೆ ಅಸಮಾನ (ನ್ಯೂನ ಅಥವಾ ಅಧಿಕ) ವಸ್ತುಗಳ ವಿನಿಮಯವನ್ನು ವರ್ಣಿಸುವುದು ಪರಿವೃತ್ತಿಯೆಂಬ ಅಲಂಕಾರವು. ವಿನಿಮಯವೆಂದರೆ ಒಂದು ವಸ್ತುವನ್ನು ಕೊಟ್ಟು ಇನ್ನೊಂದನ್ನು ಇಸಕೊಳ್ಳುವುದು; ಇಲ್ಲವೆ ಒಂದನ್ನು ಇಸಕೊಂಡು ಮತ್ತೊಂದನ್ನು ಕೊಡುವುದು. ಕೊಡಕೊಳ್ಳುವ ವ್ಯವಹಾರದಲ್ಲಿ ಇಬ್ಬರು ವ್ಯಕ್ತಿಗಳಿರುವಂತೆ ಇಲ್ಲಿಯೂ ಬರಬೇಕೇ ಎಂಬ ಪ್ರಶ್ನೆಯ ಬಗ್ಗೆ ಆಲಂಕಾರಿಕರಲ್ಲಿ ತೀವ್ರವಾದ ಮತಭೇದವುಂಟು. ಮಮ್ಮಟನು ಕೊಡಕೊಳ್ಳುವವರು ಬೇರೆಬೇರೆಯಾಗಿರಬೇಕೆಂದು ಹೇಳುವನು. ವಾಮನಾದಿಗಳು ಹಾಗೇನೂ ಇರಬೇಕೆಂಬ ನಿಯಮವಿಲ್ಲೆಂದು ಹೇಳುವರು. ಜಗನ್ನಾಥನು ಮಮ್ಮಟನನ್ನೇ ಅನುಸರಿಸುತ್ತಾನೆ.

ವಿನಿಮಯವು ಅಲಂಕಾರವೆನಿಸಿಕೊಳ್ಳಬೇಕಾದರೆ ಅದು ಕವಿಕಲ್ಪಿತವಾಗಿರಬೇಕು. ' ಬಾಲಕಿಯರು ಮುಕ್ತಾಫಲಗಳಿಗೆ ಬದರಫಲಗಳನ್ನು ಮಾರುತ್ತಿದ್ದರು ' ಎಂಬಲ್ಲಿ ಅಲಂಕಾರವಿಲ್ಲ. ಭಟ್ಟಿ-ಭಾಮಹರು ಈ ಅಲಂಕಾರವನ್ನು ಸ್ವಲ್ಪ ಬೇರೆ ವಿಧವಾಗಿ ಹೇಳುವರು. ನ್ಯೂನವಾದ ಒಂದು ವಸ್ತುವನ್ನು ತ್ಯಜಿಸಿ ಅಧಿಕವಾದ ಒಂದು ವಸ್ತುವನ್ನು ಗಳಿಸುವುದರ ವರ್ಣನೆಯೂ ಅದರೊಡನೆ ಅರ್ಥಾಂತರನ್ಯಾಸವೂ ಇದ್ದಾಗ ಈ ಅಲಂಕಾರವಾಗುವುದೆಂದು ಅವರ ಹೇಳಿಕೆ.

(ಯಥಾಕ್ರಮ) ಯಥಾಸಂಖ್ಯೆ

ಭಾಮಹ ೨-೮೯; ದಂಡಿ ೨-೨೭೩, ೨೭೪; ವಾಮನ ೪-೩-೧೭; ಉದ್ಭಟ ೩-೨; ರುದ್ರಟ ೭-೩೪; ಮಮ್ಮಟ ೧೦-೨೨; ರುಯ್ಯಕ ೫೯; ಕುವಲಯ ೧೦೭; ಜಗನ್ನಾಥ ೪೭೬; ಮಾರ್ಗ ೩-೪೯.

ಇದಕ್ಕೆ ದಂಡಿಯು ಕ್ರಮಾಲಂಕಾರವೆಂದಿರುವನು. ಬೇರೆಯವರು **ಯಥಾಸಂಖ್ಯೆ**ಯೆಂದು ಹೇಳಿರುವರು. ಇದರಲ್ಲಿ ಮೊದಲು ಒಂದು ಕ್ರಮದಲ್ಲಿ ಹೇಳಿದ ಪದಾರ್ಥ

ಗಳನ್ನು (೧) ಅದೇ ಕ್ರಮದಲ್ಲಿ ಪುನರ್ನಿರ್ದೇಶ ಮಾಡುವುದು (೨) ಅದೇ ಕ್ರಮದಲ್ಲಿ ಮುಂದೆ ಬರುವ ಪದಾರ್ಥಗಳೊಡನೆ ಅನ್ವಯಿಸಿಕೊಳ್ಳುವುದು, ಅಥವಾ (೩) ಕಾರಕವನ್ನು ಹೇಳುವಂತಹ ಅನೇಕಪದಗಳೂ ಕ್ರಿಯೆಯನ್ನು ಹೇಳುವ ಪದಗಳೂ ಒಂದೇ ಕ್ರಮದಲ್ಲಿ ಒಂದಕ್ಕೊಂದು ಸಂಬಂಧವಾಗುವುದು ಯಥಾಸಂಖ್ಯೆ (ಅಥವಾ ಯಥಾಕ್ರಮ) ಎಂಬ ಅಲಂಕಾರವಾಗುವುದು.

'ಇದು ಅಲಂಕಾರವಲ್ಲ, ಅಪಕ್ರಮವೆಂಬ ದೋಷದ ನಿವಾರಣೆ ಮಾತ್ರ' ಎಂದು ಜಗನ್ನಾಥ ಮೊದಲಾದವರು ಹೇಳುವರು. ಅಲ್ಲದೆ ಇದಕ್ಕೆ ನಿದರ್ಶನಗಳಾದ ಅನೇಕ ಉದಾಹರಣೆಗಳಲ್ಲಿ ಉಪಮೆ, ರೂಪಕ, ವ್ಯತಿರೇಕ ಮೊದಲಾದ ಬೇರೆ ಅಲಂಕಾರಗಳು ಪ್ರಧಾನವಾಗಿರುವುದರಿಂದ ಈ ಅಲಂಕಾರವು ವ್ಯರ್ಥವೇ ಆಗುವುದೆಂದು ಕೆಲವರ ಮತ. ಆದರೆ ಇದಕ್ಕೆ ಕವಿಪ್ರತಿಭೆಯು ಬೇಕಾಗಿಲ್ಲವಾದರೂ ಉಳಿದ ಯಾವ ಅಲಂಕಾರಗಳೂ ಇಲ್ಲದಾಗ 'ಕ್ರಮವಾಗಿ' ಮುಂತಾದ ಶಬ್ದಗಳ ಯೋಜನೆಯಿಲ್ಲದೆ ತಿರುತಿರುಗಿ ಅದೇ ಕ್ರಮವನ್ನು ಸಾಧಿಸಿರುವುದರಲ್ಲಿ ವೈಚಿತ್ರ್ಯವಿರುವುದರಿಂದ ಇದು ಅಲಂಕಾರವೆಂದು ಗ್ರಾಹ್ಯವೆನ್ನಬಹುದು.

೬೨೦ — ಇದರಲ್ಲಿ ಈ ಅಲಂಕಾರದ ಮೂರನೆಯ ವಿಧವು ಹೇಳಲ್ಪಟ್ಟಿದೆ.

ಸೂತ್ರ ೧೫೧

(ಪರ್ಯಾಯ ಅಥವಾ) ಪರ್ಯಾಯೋಕ್ತ

ಭಾಮಹ ೩-೮; ದಂಡಿ ೨೯೫ರಿಂದ ೨೯೭; ಉದ್ಭಟ ೪-೬; ರುದ್ರಟ ೭-೪೨; ಮಮ್ಮಟ ೧೦-೨೯; ರುಯ್ಯಕ ೩೬; ಕುವಲಯ ೬೮; ಜಗನ್ನಾಥ ೪೦೯; ಮಾರ್ಗ ೩-೧೩೨

ಇದನ್ನು ಭಾಮಹ, ದಂಡಿ, ಮಮ್ಮಟ ಮೊದಲಾದವರು **ಪರ್ಯಾಯೋಕ್ತವೆಂದು** ಕರೆದಿದ್ದಾರೆ. **ಮನಸ್ಸಿನಲ್ಲಿ ಹೇಳಬೇಕೆಂದು ಮಾಡಿಕೊಂಡಿದ್ದ ಅರ್ಥವನ್ನು ಶಬ್ದಗಳ ವಾಚ್ಯಾರ್ಥದಿಂದ ಹೇಳದೆ 'ಭಂಗ್ಯಂತರ' ದಿಂದ ಎಂದರೆ (ಬೇರೊಂದು ಪ್ರಕಾರದಿಂದ) ಹೇಳುವುದರಲ್ಲಿ ಈ ಅಲಂಕಾರವುಂಟಾಗುವುದು.**

ಇಲ್ಲಿ ಶಬ್ದಗಳಿಂದ ವಾಚ್ಯವಾದ ಅರ್ಥದಲ್ಲಿಯೂ ಗಮ್ಯವಾಗುವ (ಎಂದರೆ ಸೂಚಿತವಾಗುವ) ಅರ್ಥದಲ್ಲಿಯೂ ವ್ಯತ್ಯಾಸ-ವಿಪರೀತತೆಗಳಿರುವುದಿಲ್ಲ. ಎರಡೂ ಅರ್ಥಗಳೂ ಒಂದಕ್ಕೊಂದು ಸಂಬಂಧಪಟ್ಟವೇ. ಆದರೆ ಯಾವ ರೀತಿಯಿಂದ ಸಂಬಂಧಪಟ್ಟವೆಂಬುದರ ಬಗ್ಗೆ ಆಲಂಕಾರಿಕರಲ್ಲಿ ಮತಭೇದವಿದೆ. ಉದ್ಭಟಾದಿಗಳು ಸೂಚಿತವಾದುದೂ ವಾಚ್ಯವಾದುದೂ ಅರ್ಥಾತ್ ಒಂದೇ; ಹೇಳುವ ಪ್ರಕಾರ ಮಾತ್ರ ಬೇರೆ ಎಂದು ಹೇಳುವರು. ಮಮ್ಮಟನು ಸೂಚಿತವಾಗುವ ಮುಖ್ಯಾರ್ಥಕ್ಕಿಂತಲೂ ವಾಚ್ಯವಾದ ಅರ್ಥವು ಹೆಚ್ಚು ರಮಣೀಯವಾಗಿರುವುದೆಂದು

ಹೇಳುವನು. ರುಯ್ಯಕ-ವಿಶ್ವನಾಥ ಮೊದಲಾದವರು ಪ್ರಸ್ತುತಕಾರ್ಯದಿಂದ ಪ್ರಸ್ತುತಕಾರಣವನ್ನು ಸೂಚಿಸುವುದರಲ್ಲಿಯೇ ಈ ಅಲಂಕಾರವಿರುವುದೆಂದು ಹೇಳುತ್ತಾರೆ. ಆದರೆ ಜಗನ್ನಾಥನ ಮತಾನುಸಾರವಾಗಿ (೧) **ವಾಚ್ಯವಾದ ಕಾರ್ಯದಿಂದ ಕಾರಣವೂ** (೨) **ವಾಚ್ಯವಾದ ಕಾರಣದಿಂದ ಕಾರ್ಯವೂ** (೩) **ಕಾರ್ಯ-ಕಾರಣ ಸಂಬಂಧವಿಲ್ಲದ ಬೇರೆ ರೀತಿಯಿಂದ ಸಂಬಂಧವಾದುವುಗಳಲ್ಲಿ** ಒಂದನ್ನು ಹೇಳುವುದರಿಂದ ಇನ್ನೊಂದೂ ಗಮ್ಯವಾಗುವುದರಲ್ಲಿ ಈ ಅಲಂಕಾರವಿರುವುದು ಎಂದು ಹೇಳುವುದೇ ಸೂಕ್ತವೆಂದು ತೋರುತ್ತದೆ.

ಮಮ್ಮಟಾದಿಗಳು ಪರ್ಯಾಯವೆಂಬ ಹೆಸರಿನ ಬೇರೊಂದು ಅಲಂಕಾರವನ್ನು ಹೇಳುವರು. ಅದರ ಲಕ್ಷಣ: (೧) ಒಂದು **ವಸ್ತುವು ಕ್ರಮಶಃ ಅನೇಕ ಕಡೆಗಳಲ್ಲಿ ಇರುವುದು** (ಅಥವಾ ಇರುವಂತೆ ಮಾಡಲ್ಪಟ್ಟಿದೆ) ಎಂದೂ (೨) **ಬೇರೆ ಬೇರೆ ವಸ್ತುಗಳು ಒಂದು ಎಡೆಯಲ್ಲಿ ಬೇರೆ ಬೇರೆ ಕಾಲದಲ್ಲಿ ಇರುವುವು** (ಅಥವಾ ಇರುವಂತೆ ಮಾಡಲ್ಪಟ್ಟಿವೆ) ಎಂದೂ ವರ್ಣಿಸುವುದೇ ಪರ್ಯಾಯವೆಂಬ ಅಲಂಕಾರವು. (' ಇರುವುದು ಅಥವಾ ಇರುವಂತೆ ಮಾಡಲ್ಪಟ್ಟಿರುವುದು ' ಎಂದು ಹೇಳುವಲ್ಲಿ ಕ್ರಮಶಃ ' ಸ್ವಾಭಾವಿಕವಾಗಿ, ಕೃತ್ರಿಮವಾಗಿ ' ಎಂದು ತಿಳಿದುಕೊಳ್ಳಬೇಕೆಂದಿಲ್ಲ; ಅದಕ್ಕೆ ಕಾರಣ ಅಥವಾ ಪ್ರಯೋಜಕವನ್ನು ಬೇಕಾದರೆ ಹೇಳಬಹುದು, ಇಲ್ಲವೆ ಬಿಡಬಹುದು.) ಇದಕ್ಕೆ ಉದಾಹರಣೆ :—

ಪೊಸಜಡೆಯೊಳ್ ತೊಡಂಕಿ ನೊಸಲೊಳ್ ನಡೆದಾಡಿ ಕಪೋಲಭಾಗದೊಳ್
ಪಸರಿಸಿ ಲೋಚನಂಗಳೊಳಮುರ್ಚಿ ತದಾಸ್ಯದೊಳೊಂದಿ ಕಂಠದೊಳ್
ಮಿಸುಗಿ ಭುಜಾಗ್ರದೊಳ್ ತೊಳಗಿ ವಕ್ಷದೊಳಾಳ್ದು ಕರಂಗಳೊಳ್ ವಿರಾ
ಜಿಸಿ ಪದದಲ್ಲಿ ಬಿಳ್ದುವು ಭವಾನಿಯ ಮಾನಿಯ ದೈನ್ಯದೃಷ್ಟಿಗಳ್

ಹರಿಹರ: ಗಿರಿಜಾಕಲ್ಯಾಣ: ೫-೮೬

ಪರ್ಯಾಯದ ಎರಡನೆಯ ವಿಧಕ್ಕೆ: ' **ಯಯೋರಾರೋಪಿತಸ್ತಾರೋ ಹಾರಸ್ತೇಽರಿವಧೂಜನೈಃ । ನಿಧೀಯಂತೇ ತಯೋಃ ಸ್ಥೂಲಾಃ ಸ್ತನಯೋರಶ್ರುಬಿಂದವಃ ॥** ' (ಮೊದಲು ಮುತ್ತಿನ ಹಾರದಿಂದಲಂಕೃತವಾಗಿದ್ದ ನಿನ್ನ ವೈರಿಗಳ ಹೆಂಡಿರ ಸ್ತನಗಳು ಈಗ ಕಣ್ಣೀರಿನಿಂದಲಂಕೃತವಾಗಿವೆ.)

ಯಾವ ಆಧಾರವನ್ನೂ ಬಿಡದೆ ಅನೇಕ ಆಧಾರಗಳನ್ನು ಆಶ್ರಯಿಸಿದಂತೆ ವರ್ಣಿಸಿದರೂ ಈ ಅಲಂಕಾರವಾಗುವುದೆಂದು ಕೆಲವರು ಹೇಳುತ್ತಾರೆ. ಉದಾ:

ಗಿರಿಶಿಖರಂಗಳೊಳ್ ಪರೆದು ಸೌಧಗೃಹಂಗಳೊಳೊಂದಿ ರಥ್ಯೆಯೊಳ್
ಪರಿದು ಸರಿತ್ತರಂಗಿಕೆಗಳೊಳ್ ಪೊರೆದುಂಜಿಗಳೋಳಿವೆಳ್ಪಿನೊಳ್
ಬೆರಸಿ ಲತಾಂಗಿಯರ್ಕಳ ಕದಂಪುಗಳೊಳ್ ಪುದಿದಿಂದುಕಾಂತದಿಂ
ಸುರಿವ ಜಲಂಗಳಿಂ ತೊಳೆದು ಪರ್ವಿದುವಿಂದುಮರೀಚಿಮಾಲೆಗಳ್

ಪರ್ಯಾಯಕ್ಕೂ ಪರಿವೃತ್ತಿಗೂ ಇರುವ ಮುಖ್ಯ ಭೇದವೆಂದರೆ ಪರಿವೃತ್ತಿಯಲ್ಲಿ ವಿನಿಮಯದ ಕಲ್ಪನೆಯಿರುತ್ತದೆ; ಪರ್ಯಾಯದಲ್ಲಿ ಒಂದೇ ವಸ್ತು ಕ್ರಮೇಣ ಬೇರೆ ಬೇರೆ ಆಶ್ರಯಗಳನ್ನು ಹೊಂದಿತೆಂದು ಹೇಳುವುದಿರುತ್ತದೆ. ಒಂದೇ ಎಡೆಯಲ್ಲಿ ಅನೇಕ ವಸ್ತುಗಳು ಕ್ರಮೇಣ ಆಶ್ರಯಹೊಂದಿದುವೆಂದು ಹೇಳುವ ಪರ್ಯಾಯದ ಎರಡನೆಯ ವಿಧದಲ್ಲಿಯೂ ವಿನಿಮಯದ ಕಲ್ಪನೆ ಇರುವುದಿಲ್ಲ.

ಆವಳಿ

ರುದ್ರಟ ೭-೧೦೯; ಮಮ್ಮಟ ೧೦-೪೫; ರುಯ್ಯಕ ೫೪; ಕುವಲಯ ೧೦೫-೧೦೬; ಜಗನ್ನಾಥ ೪೬೩

ಇದನ್ನು ಸಂಸ್ಕೃತ ಆಲಂಕಾರಿಕರು " ಏಕಾವಲಿ " ಎಂದು ಕರೆದಿದ್ದಾರೆ. **ಪೂರ್ವ-ಪೂರ್ವಪದದೊಡನೆ ಉತ್ತರ-ಉತ್ತರಪದಗಳನ್ನು ವಿಶೇಷಣಭಾವದಿಂದ ಹೇಳುವುದರಲ್ಲಿ ಈ ಅಲಂಕಾರವಾಗುವುದು.** ಪೂರ್ವ-ಪೂರ್ವಪದವು ವಿಶೇಷಣವಿದ್ದು, ಉತ್ತರ-ಉತ್ತರಪದವು ವಿಶೇಷ್ಯವಾದರೂ ಈ ಅಲಂಕಾರವಾಗುವುದು.

ವಿಶೇಷಣವೆಂದರೆ ' ಸ್ವರೂಪಮಾತ್ರೇಣಾವಗತಸ್ಯ ವಸ್ತುನೋ ಯತ್ ಸಂಬಂಧಬಲೇನ ವೈಶಿಷ್ಟ್ಯಮವಗಮ್ಯತೇ ತದ್ ವಿಶೇಷಣಂ ' ಎಂಬಂತೆ ಯಾವುದಾದರೊಂದು ವಸ್ತುವಿನ ವೈಶಿಷ್ಟ್ಯವನ್ನು ಹೇಳುವಂತಹ ಪದವೆಂದು ತಿಳಿಯತಕ್ಕದ್ದು.

ಈ ಅಲಂಕಾರವು ಎರಡು ವಿಧ: (೧) ವೈಶಿಷ್ಟ್ಯವು ಇರುವುದೆಂದು ಹೇಳುವುದು (ಸ್ಥಾಪನೆ); (೨) ವೈಶಿಷ್ಟ್ಯವು ಇಲ್ಲವೆಂದು ಹೇಳುವುದು (ಅಪೋಹ).

೬೨೨ — ಮಾರ್ಗ ೩-೧೩೨; ದರ್ಪಣ ೬೧

೬೨೩ — ರುದ್ರಟ ೭-೧೧೦; ದರ್ಪಣ ೯೫

೬೨೪ — ಇದು ಕೆಳಗಿನ ಪದ್ಯದ ಅನುವಾದ:

ನ ತಜ್ಜಲಂ ಯನ್ನ ಸುಚಾರುಪಂಕಜಂ । ನ ಪಂಕಜಂ ತದ್ ಯದಲೀನಷಟ್ಪದಂ
ನ ಷಟ್ಪದೋಽಸೌ ನ ಜುಗುಂಜ ಯಃ ಕಲಂ । ನ ಗುಂಜಿತಂ ತನ್ನ ಜಹಾರ ಯನ್ಮನಃ
ಭಟ್ಟಿ ಕಾವ್ಯ ೨-೧೯

ಸೂತ್ರ ೧೫೨
ಹೇತು

ದಂಡಿ ೨-೨೩೫ ರಿಂದ ೨೬೦; ರುದ್ರಟ ೭-೮೨; ಕುವಲಯ ೧೬೭, ೧೬೮; ಮಾರ್ಗ ೩-೧೭೪

ಹೇತು = ಕಾರಣ. ಹೇತುಮತ್ = ಕಾರ್ಯ.

ಕಾರಣದೊಡನೆ ಕಾರ್ಯವನ್ನು ಹೇಳುವುದೇ ಹೇತುವೆಂಬ ಅಲಂಕಾರವು. ಇಲ್ಲಿ ನಾಗವರ್ಮನು ದಂಡಿಯನ್ನು ಅನುಸರಿಸಿರುವಂತೆ ತೋರುವುದು. ಆದರೆ

ದಂಡಿಯು ಈ ಅಲಂಕಾರದ ಲಕ್ಷಣವನ್ನು ಸ್ಪಷ್ಟವಾಗಿ ಹೇಳಿಲ್ಲ. ಭೇದಗಳನ್ನು ಬಹಳ ಮಾಡಿದ್ದಾನೆ. ಅವನು ಕಾರಕಹೇತುವೆನ್ನುವುದು ಕಾವ್ಯಲಿಂಗ*ವೆಂದೂ ಜ್ಞಾಪಕಹೇತುವೆಂದು ಹೇಳುವುದು ಅನುಮಾನವೆಂದೂ ಹೇಳಬಹುದು.

ಭಾಮಹನು ಇದು ಅಲಂಕಾರವಲ್ಲವೆಂದು (೨-೮೬) ಹೇಳಿರುವನು. ರುದ್ರಟನು 'ಕಾರಣವನ್ನು ಕಾರ್ಯದೊಡನೆ ಅಭೇದದಿಂದ ಹೇಳುವುದೇ ಹೇತುವೆಂಬ ಅಲಂಕಾರ' ವೆಂದು ಹೇಳಿರುವನು. ನಾಗವರ್ಮನು ಅಭೇದದ ಮಾತನ್ನೇ ಎತ್ತಿಲ್ಲ. ಮಮ್ಮಟನು—ಇದರಲ್ಲಿ ವೈಚಿತ್ರ್ಯವಿಲ್ಲವಾದುದರಿಂದ ಇದು ಅಲಂಕಾರವಲ್ಲವೆಂದು ಹೇಳಿರುತ್ತಾನೆ. ಅವನ ಮತದಲ್ಲಿ 'ಕಾವ್ಯಲಿಂಗ' ವೆಂಬುದೇ ಹೇತು ಎಂಬ ಅಲಂಕಾರವಾಗುವುದು (೧೦-೩೪). ಕುವಲಯಾನಂದಕಾರನು ದಂಡಿಯನ್ನು ಅನುಸರಿಸಿ ನಾಗವರ್ಮನು ಹೇಳಿದ ಲಕ್ಷಣವನ್ನು ಈ ಅಲಂಕಾರಕ್ಕೆ ಹೇಳಿ, (ರುದ್ರಟನಂತೆ) ಕಾರ್ಯಕಾರಣಗಳ ಅಭೇದವೂ ಈ ಅಲಂಕಾರದ ಇನ್ನೊಂದು ವಿಧವೆಂದು ಹೇಳಿರುವನು.

ನಾಗವರ್ಮನು 'ಪರಂಪರಿತಹೇತು' ಎಂದು ಹೇಳಿದುದೇ ಬೇರೆ ಆಲಂಕಾರಿಕರು ಹೇಳುವ 'ಕಾರಣಮಾಲೆ' ಎಂಬ ಅಲಂಕಾರವಾಗುವುದು. ಇದರಲ್ಲಿ ಮೊದಮೊದಲು ಹೇಳಿದುದು ಹಿಂದೆಹಿಂದಿನಿಂದ ಹೇಳಿದುದಕ್ಕೆ ಇಲ್ಲವೆ ಮೊದಮೊದಲು ಹೇಳಿದುದಕ್ಕೆ ಹಿಂದಣಿಂದ ಹೇಳಿದುದು ಕಾರಣವೆಂದು ವರ್ಣಿಸಿರುವುದು. ಕಾರ್ಯ-ಕಾರಣಗಳ ಕ್ರಮ ಅಥವಾ ಪರಂಪರೆಯು ಈ ಅಲಂಕಾರದ ರಮಣೀಯತೆಗೆ ಕಾರಣವೆಂದು ರುಯ್ಯಕನು ಹೇಳಿದ್ದಾನೆ. ಇಲ್ಲಿ 'ಕಥಿತಪದತ್ವವು' (ಒಂದೇ ಪದವನ್ನು ಮತ್ತೆ ಮತ್ತೆ ಹೇಳುವುದು) ದೋಷವಲ್ಲ. (ಮಮ್ಮಟ ೧೦-೩೪; ರುಯ್ಯಕ ೫೩; ಕುವಲಯ ೧೦೪; ಜಗನ್ನಾಥ ೪೬೧.)

ಸಮುಚ್ಚಯ

ರುದ್ರಟ ೭-೧೯; ಮಮ್ಮಟ ೧೦-೩೦; ರುಯ್ಯಕ ೬೫, ೬೬; ಕುವಲಯ ೧೧೫, ೧೧೬; ಜಗನ್ನಾಥ ೪೮೯

ಅವುದಾದರೊಂದು (ಸುಖಕರವಾದ ಅಥವಾ ದುಃಖಕರವಾದ) ಫಲವನ್ನುಂಟು

---

* ಇದನ್ನು ನಾಗವರ್ಮನು ಬೇರೆಯಾಗಿ ಹೇಳಿಲ್ಲವಾದರೂ ಅನೇಕ ಆಲಂಕಾರಿಕರು ಇದೂ ಒಂದು ಪ್ರತ್ಯೇಕವಾದ ಅಲಂಕಾರವೆಂದು ಗ್ರಹಿಸುತ್ತಾರೆ. ಇದರ ಲಕ್ಷಣ: ಮೊದಲು ಒಂದು ವಿಧಾನವನ್ನು ಮಾಡಿ ಅದರ ಸಮರ್ಥನೆಗಾಗಿ ಹೃದಯಂಗಮವಾದ (ಎಂದರೆ ಕವಿಕಲ್ಪಿತವಾದ) ಒಂದು ಕಾರಣವನ್ನು ಕೊಡುವುದು. ಉದಾ: ಅಜನಜಡನೆಂದು ನುಡಿವುದು । ಕುಜನತೆ ಜಡಜಾತಜಾತನೆಂತಜಡನವಂ ॥ ಸುಜನವಿರೋಧಿಯುನಜಡಂ । ಸೃಜಿಯಿಪನೆ ಪರೋಪತಾಪಫಲನಂ ಖಲನಂ ॥ ಶಬರಶಂಕರವಿಳಾಸ ೧-೧೭.

ಮಾಡುವಂತಹ ಅನೇಕದ್ರವ್ಯ (ಇಲ್ಲವೆ ಗುಣಕ್ರಿಯೆ ಮುಂತಾದುವು) ಗಳು ಒಂದೇ ಎಡೆಯಲ್ಲಿರುವುವೆಂದು ಹೇಳುವಲ್ಲಿ ಈ ಅಲಂಕಾರವು ಬರುವುದು. ರುದ್ರಟನು ಇದರಲ್ಲಿ (೧) ಸತೋಃಯೋಗ (ಒಳ್ಳೆಯ ವಸ್ತುಗಳ ಕೂಡುವಿಕೆ) (೨) ಅಸತೋಃಯೋಗ (ಕೆಟ್ಟ ವಸ್ತುಗಳ ಕೂಡುವಿಕೆ) (೩) ಸದಸತೋಃಯೋಗ ಎಂದು ಮೂರು ವಿಭಾಗಗಳನ್ನು ಮಾಡಿದ್ದಾನೆ. ಮಮ್ಮಟನು ಎರಡು ವಿಧವಾಗಿ ವಿಭಾಗಿಸಿರುವನು: (೧) ಒಂದು ಕಾರ್ಯವನ್ನು ಮಾಡಲಿಕ್ಕೆ ಸಮರ್ಥವಾದ ಒಂದು ಕಾರಣವಿರಲು * ಅದರೊಡನೆ ಇನ್ನೂ ಅನೇಕ ಕಾರಣಗಳು ಆ ಕಾರ್ಯವನ್ನುಂಟು ಮಾಡಿದುವೆಂದು ವರ್ಣಿಸುವುದು, (೨) ಅನೇಕ ಗುಣಗಳ ಇಲ್ಲವೆ ಅನೇಕ ಕ್ರಿಯೆಗಳ ವರ್ಣನೆಯು, ಅಥವಾ ಗುಣಕ್ರಿಯೆಗಳು ಏಕಕಾಲದಲ್ಲಿ ವರ್ತಿಸುವುವೆಂಬುದರ ವರ್ಣನೆಯು ಸಮುಚ್ಚಯವೆಂಬ ಅಲಂಕಾರವಾಗುವುದು.

೬೨೮ — ರುದ್ರಟ ೭-೮೫. **೬೨೯** — ದಂಡಿ ೨-೨೪೭

ಸೂತ್ರ ೧೫೩

ಅನುಮಿತಿ (ಅನುಮಾನ)

ರುದ್ರಟ ೭-೫೬; ಮಮ್ಮಟ ೧೦-೩೧; ರುಯ್ಯಕ ೫೮;
ಚಂದ್ರಾಲೋಕ ೫-೩೬; ಜಗನ್ನಾಥ ೪೭೫

ಸಾಧ್ಯ-ಸಾಧನ — ತರ್ಕಶಾಸ್ತ್ರದ ಪ್ರಕಾರ ನಾವು ಯಾವುದರ ಅಸ್ತಿತ್ವವನ್ನು ಸಾಧಿಸಬೇಕೆನ್ನುವೆವೋ ಅದು ಸಾಧ್ಯವು. ಯಾವುದರಿಂದ ಅದನ್ನು ಸಾಧಿಸುವೆವೋ ಅದು ಸಾಧನವು. 'ಪರ್ವತದಲ್ಲಿ ಬೆಂಕಿಯಿರುವುದು; ಏಕೆಂದರೆ ಅಲ್ಲಿ ಹೊಗೆ ಹೊರಡುತ್ತಿದೆ' ಎಂದು ಹೇಳುವಲ್ಲಿ ಬೆಂಕಿಯು ಸಾಧ್ಯವು; ಹೊಗೆಯು ಸಾಧನವು.

ಕಾರಣ ಮುಂತಾದವುಗಳಿಂದ ಕಾರ್ಯ ಮೊದಲಾದುವುಗಳನ್ನು ಅರಿತುಕೊಳ್ಳುವುದು ಅನುಮತಿ ಅಥವಾ ಅನುಮಾನ. ಈ ಅಲಂಕಾರಕ್ಕೆ ಕವಿಕಲ್ಪನೆಯು ಅವಶ್ಯಕವಾದುದರಿಂದ ಇದು ರೂಪಕಾದಿ ಬೇರೆ ಅಲಂಕಾರಗಳನ್ನು ಅವಲಂಬಿಸಿ ಬರಬಹುದು.

೬೩೫—ಹೋ :

* ಇವಕ್ಕೆ 'ಖಲೇಕಪೋತನ್ಯಾಯ'ವೆಂಬ ಹೆಸರು — ಎಂದರೆ ಒಂದು ಕಣದಲ್ಲಿಯ ಕಾಳುಗಳನ್ನು ಅಸಂಖ್ಯ ಹಕ್ಕಿಗಳು ಕೂಡಿ ತಿಂದಂತೆ. (ಅದರಲ್ಲಿ ಯಾವುದು ಎಷ್ಟು ತಿಂದಿತೆಂಬುದನ್ನು ಹೇಳಲು ಬರುವುದಿಲ್ಲವಾದುದರಿಂದ ಎಲ್ಲವನ್ನೂ ಕೂಡಿಸಿಯೇ ಹೇಳಬೇಕಾಗುವುದು.)

ಮಾತನೋರ್ೕ ಸಂತಿ ತಸ್ಮಿನ್ ಶಿಶಿರಜಲಕಣಾಕರ್ಷಿಣೋ ಗಂಧವಾಹಾ
ವಿದ್ಯುದ್ಭಾಸಾಃ ಸಿತಾಂಗಾಃ ಪ್ರಚುರತರಪಯಃಸ್ಯಂದಿನೋ ವಾ ಘನೌಘಾಃ
ಕೇಕಾ ವಾ ಬರ್ಹಿಣಾನಾಂ ಗಿರಿವರಶಿಖರಸ್ಥಾಯಿನಾಂ ವಾ ನಿಶೀಥೇ
ಯೇನಾಸೌ ಜೀವಿತೇಶಃ ಸ್ಮರತಿ ಪರಿಜನಸ್ಯಾಸ್ಯ ವೈ ದುಃಖಿತಸ್ಯ
ವಿಕ್ರಮಾದಿತ್ಯ: ಸುಭಾಷಿತಾವಲಿ: ೧೧೬೫

೬೩೬ — ರುದ್ರಟ ೭-೫೭

ಸೂಕ್ಷ್ಮ

ದಂಡಿ ೨-೨೬೦ ರಿಂದ ೨೬೪; ರುದ್ರಟ ೭-೯೮; ಮಮ್ಮಟ ೧೦-೩೬; ರುಯ್ಯಕ ೭೫;
ಕುವಲಯ ೧೫೧

ಸೂಕ್ಷ್ಮವೆಂದರೆ ಮಂದಬುದ್ಧಿಗೆ ತಿಳಿಯದಂತಹುದು, ಆದರೆ ಕುಶಾಗ್ರಬುದ್ಧಿಗೆ ಹೊಳೆಯುವಂತಹುದು ಎಂದು ಆಲಂಕಾರಿಕರು ಅರ್ಥ ಹೇಳುತ್ತಾರೆ.

ಎರಡನೆಯುವರ 'ಆಕಾರ, ಇಂಗಿತ' ಇವುಗಳಿಂದ ಸೂಕ್ಷ್ಮವಾದ ಒಂದು ವಿಷಯವನ್ನು ತಾವು ತಿಳಿದುಕೊಂಡಿರುವೆವೆಂದು ಜಾಣತನದಿಂದ ಎರಡನೆಯವರಿಗೆ ತೋರಿಸುವುದೇ ಈ ಅಲಂಕಾರವು. ಇದರಲ್ಲಿಯೂ ಅನುಮಾನವು ಇರುತ್ತದೆಯಾದರೂ ಇಲ್ಲಿ ಮುಖ್ಯವಾದುದು ಅದಲ್ಲ. ಆದರೆ ಸೂಕ್ಷ್ಮವಾದ ವಿಷಯವು ತಿಳಿದಿದೆಯೆಂಬುದನ್ನು ತೋರಿಸುವಲ್ಲಿ ಕಂಡುಬರುವ ಜಾಣತನವೇ ಮುಖ್ಯವಾದುದು. ಆದುದರಿಂದ ಇದು ಅನುಮಾನದಿಂದ ಭಿನ್ನವಾದ ಅಲಂಕಾರವೆಂದು ತಿಳಿಯತಕ್ಕದ್ದು.

೬೩೭ — ದಂಡಿ ೨-೨೬೧; ಧ್ವನ್ಯಾಲೋಕ ೨-೧೦೩

ಎನಲ್‌ಬಗೆವ= ಎಂದು ಕೇಳಲು ಮನಸ್ಸಿನಲ್ಲಿ ಮಾಡಿಕೊಂಡಿದ್ದ (ಆದರೆ ಹಾಗೆ ಕೇಳುವುದಕ್ಕಿಂತ ಮೊದಲು).

೬೩೮ — ರುದ್ರಟ ೭- ೫೮ ಇದು ಸೂಕ್ಷ್ಮಕ್ಕೆ ಉದಾಹರಣೆಯಲ್ಲ; ಆದರೆ ಅನುಮಿತಿಗೆ ಉದಾಹರಣೆಯಾಗುತ್ತದೆ.

ಸೂತ್ರ ೧೫೪

ಲೇಶ

ದಂಡಿ ೨-೨೬೫ ರಿಂದ ೨೭೨; ರುದ್ರಟ ೭-೧೦೦; ಕುವಲಯ ೧೩೮; ಜಗನ್ನಾಥ ೫೧೨

ಗುಣವನ್ನು ದೋಷವೆಂತಲೂ ದೋಷವನ್ನು ಗುಣವೆಂತಲೂ ವರ್ಣಿಸುವುದೇ ಲೇಶವು. ಇದಕ್ಕೆ **ಲವ**ವೆಂದೂ ಹೆಸರು. ಕೆಲ ಆಲಂಕಾರಿಕರು ಇದು ವ್ಯಾಜಸ್ತುತಿಯೆಂದೇ ಹೇಳುವರು. ಕುವಲಯಾನಂದಕಾರನು ವ್ಯಾಜಸ್ತುತಿಗೂ ಇವಕ್ಕೂ ಭೇದ

ವಿರುವುದೆಂದು ಹೇಳಿ ವ್ಯಾಜಸ್ತುತಿಯಲ್ಲಿ ಗುಣವನ್ನು ದೋಷವೆಂದು ವರ್ಣಿಸಿದಾಗ್ಯೂ ಅಲ್ಲಿ ಅದನ್ನು ಗುಣವೆಂದೇ ತಿಳಿದುಕೊಳ್ಳಬೇಕಾಗುವುದು. ಲೇಶದಲ್ಲಿ ಸಾಮಾನ್ಯವಾಗಿ ಗುಣವಿದ್ದುದು ಒಮ್ಮೊಮ್ಮೆ ದೋಷವಾಗುವುದೆಂದು ತೋರಿಸಲ್ಪಡುವುದು. (ದೋಷವನ್ನು ಗುಣದಂತೆ ವರ್ಣಿಸಿದರೂ ಇದರಂತೆಯೇ ತಿಳಿದುಕೊಳ್ಳಬೇಕು.)
ಉದಾ :

ಅಖಿಲೇಷು ವಿಹಂಗೇಷು ಹಂತ ಸ್ವಚ್ಛಂದಚಾರಿಷು
ಶುಕ ಪಂಜರಬಂಧಸ್ತೇ ಮಧುರಾಣಾಂ ಗಿರಾಂ ಫಲಂ

'ಪಕ್ಷಿಗಳೆಲ್ಲಾ ಸ್ವಚ್ಛಂದವಾಗಿ ಹಾರಾಡುತ್ತಿದ್ದಾಗ ಪಂಜರದಲ್ಲಿರುವುದು ನಿನಗೆ ಬಂದದ್ದು, ಗಿಳಿಯೇ, ನಿನ್ನ ಮಧುರಕಂಠದ ಫಲವು'. ಇಲ್ಲಿ ಮಧುರಕಂಠವು ಸಾಮಾನ್ಯವಾಗಿ ಒಳ್ಳೆಯ ಗುಣವೇ ಆದರೂ ಗಿಳಿಗೆ ಕಷ್ಟವನ್ನು ಕೊಡುವ ದೋಷವಾಗಿ ವರ್ಣಿಸಲ್ಪಟ್ಟಿರುವುದು.

ನಿಗೂಹನ

ಒಂದು ಸಂಗತಿಯು ಬಯಲಿಗೆ ಬರುವಂತಿದ್ದಾಗ ಅದನ್ನು ಮುಚ್ಚಲು ಪ್ರಯತ್ನಿಸುವುದು ನಿಗೂಹನವು. ದಂಡಿಯು ೨-೨೬೫ ರಲ್ಲಿ ಇದು ಲವ ಅಥವಾ ಲೇಶದ ಭೇದವೆಂದು ಹೇಳುವನು. ಆದರೆ ಇದಕ್ಕೆ ವ್ಯಾಜೋಕ್ತಿಯೆಂದು ಕೆಲವರೂ ಛೇಕಾಪಹ್ನುತಿ ಎಂದು ಬೇರೆ ಕೆಲವರೂ ಹೇಳುವರು.

ಭಾಮುಹನು ಸೂಕ್ಷ್ಮ-ಲೇಶಗಳನ್ನು ಅಲಂಕಾರವೆಂದು ಒಪ್ಪಿಕೊಳ್ಳುವುದಿಲ್ಲ. (೨-೮೬)

ಸೂತ್ರ ೧೫೫
ವ್ಯತಿರೇಕ

ಭಾಮುಹ ೨-೭೫; ದಂಡಿ ೨-೧೮೦ ರಿಂದ ೧೯೮; ವಾಮನ ೪-೩-೨೨; ಉದ್ಭಟ ೨-೬; ರುದ್ರಟ ೭-೬೫; ಮಮ್ಮಟ ೧೦-೧೯,೨೦; ರುಯ್ಯಕ ೨೮; ಕುವಲಯ ೫೭; ಜಗನ್ನಾಥ ೩೪೬; ಮಾರ್ಗ ೩-೩೪ - 3 - 37

ಎರಡು ವಸ್ತುಗಳ ಸಾಮ್ಯದೊಡನೆ ಭೇದವನ್ನು ಹೇಳುವುದು ವ್ಯತಿರೇಕವು. ಆದರೆ ಇದರ ಲಕ್ಷಣವನ್ನು ತಿಳಿಯಬೇಕಾದರೆ ಉಪಮಾನದಿಂದ ಉಪಮೇಯದ ಹೆಚ್ಚಳವನ್ನೂ ತೋರಿಸಬೇಕಾಗುವುದು. ಇಲ್ಲಿ ಉಪಮೇಯದ ಆಧಿಕ್ಯವನ್ನೂ ಉಪಮಾನದ ನ್ಯೂನತೆಯನ್ನೂ ಹೇಳಬಹುದು. ಒಂದನ್ನು ಹೇಳಿ ಇನ್ನೊಂದನ್ನು ಬಿಡಬಹುದು. ಎರಡನ್ನೂ ಹೇಳದೆ ಬಿಡಬಹುದು. ಹೇಳುವ ರೀತಿಯು ಶಾಬ್ದಿಕ, ಆರ್ಥಿಕ, ಆಕ್ಷಿಪ್ತವೆಂದು ಮೂರು ವಿಧವಾಗಿರಬಹುದು. ಇದರಲ್ಲಿ ಶ್ಲೇಷವು ಕೂಡಬಹುದು. ಒಟ್ಟಿಗೆ ಇವರ ಭೇದಗಳು ೨೪ ಆಗುವುವೆಂದು ಮಮ್ಮಟನು ಹೇಳಿದ್ದಾನೆ.

ರುದ್ರಟನೂ ರುಯ್ಯಕನೂ ಉಪಮೇಯದಿಂದ ಉಪಮಾನದ ಆಧಿಕ್ಯವನ್ನು ಹೇಳಿದರೂ ಈ ಅಲಂಕಾರವಾಗುವುದೆನ್ನುವರು. ಅದರಲ್ಲಿಯೂ ೨೪ ಭೇದಗಳಾಗುತ್ತವೆ. ಆದರೆ ಮಮ್ಮಟನು ಇದನ್ನು ಒಪ್ಪುವುದಿಲ್ಲ. (ಉಪಮಾನ, ಉಪಮೇಯ ಮೊದಲಾದ ಶಬ್ದಗಳ ವಿವರಣೆಯನ್ನು ಔಪಮ್ಯಭಾಗದಲ್ಲಿ ನೋಡುವುದು.)

೬೪೩ — ದಂಡಿ ೨-೧೮೫

ದೀಪಕ

ಭಾಮಹ ೨-೨೫; ದಂಡಿ ೨-೯೭ ರಿಂದ ೧೧೫; ವಾಮನ ೪-೩-೧೮,೧೯; ಉದ್ಭಟ ೧-೧೪; ರುದ್ರಟ ೭-೬೪; ಮಮ್ಮಟ ೧೦-೧೭; ರುಯ್ಯಕ ೨೪; ಕುವಲಯ ೪೮; ಜಗನ್ನಾಥ ೩೨೨; ಮಾರ್ಗ ೩-೫೩

ಜಾತಿ, ಕ್ರಿಯಾ, ಗುಣ, ದ್ರವ್ಯವಾಚಕವಾದಂತಹ ಅನೇಕ ಪದಗಳು ಒಂದೇ ವಾಕ್ಯದಲ್ಲಿ ಸಂಬಂಧವಾದಾಗ ಈ ಅಲಂಕಾರವಾಗುವುದು. ಇದರಲ್ಲಿ ಎರಡು ಮುಖ್ಯ ಭೇದಗಳನ್ನು ಹೇಳುತ್ತಾರೆ; ಒಂದು ಕಾರಕಕ್ಕೆ ಸಂಬಂಧಿಸಿದ ಅನೇಕ ಕ್ರಿಯೆಗಳನ್ನು ಒಂದೇ ವಾಕ್ಯದಲ್ಲಿ ಹೇಳುವುದು 'ಕಾರಕದೀಪಕ'; ಒಂದು ಕ್ರಿಯೆಯೊಡನೆ ಅನೇಕ ವಸ್ತುಗಳನ್ನು ಹೇಳಿದಾಗ 'ಕ್ರಿಯಾದೀಪಕ'. ಇದು ಪ್ರಾಚೀನ ಆಲಂಕಾರಿಕರ ಮತ. ಆದರೆ ನವೀನರ ಮತದಂತೆ ಪ್ರಸ್ತುತವಾದ ಒಂದು ವಿಷಯವು ಅಪ್ರಸ್ತುತವಾದ ಮತ್ತೊಂದರೊಡನೆ ಗುಣಧರ್ಮಗಳನ್ನು ಹೇಳುವಂತಹ ಒಂದು ಪದದಿಂದ ಸಂಬಂಧಿಸಲ್ಪಟ್ಟರೆ ಈ ಅಲಂಕಾರವಾಗುವುದು. ದೀಪಕದ ಒಂದು ತೆರವೆಂದು ಇಲ್ಲಿ ಹೇಳಿದ 'ಕಾರಕದೀಪಕ'ವನ್ನು ಕೆಲವರು (ನೋ. ಕುವಲಯ ೧೧೭) ಬೇರೊಂದು ಅಲಂಕಾರವೆಂದು ಹೇಳುತ್ತಾರೆ. ಒಂದು ಕಾರಕಕ್ಕೆ ಸಂಬಂಧಪಟ್ಟ ಅನೇಕ ಕ್ರಿಯೆಗಳನ್ನು ಹೇಳಿದಾಗ ಈ ಅಲಂಕಾರವಾಗುವುದು.

ಸೂತ್ರ ೧೫೬

ಸಮಾಹಿತ

ಭಾಮಹ ೩-೧೦; ದಂಡಿ ೨-೨೯೮, ೨೯೯; ಮಮ್ಮಟ ೧೦-೩೯; ರುಯ್ಯಕ ೬೭;
ಕುವಲಯ ೧೧೮; ಜಗನ್ನಾಥ ೪೯೨; ಮಾರ್ಗ ೩-೧೨೪

ಈ ಅಲಂಕಾರವನ್ನು ದಂಡಿ-ಭಾಮಹರು ಸಮಾಹಿತವೆಂದೂ ಮಮ್ಮಟ ರುಯ್ಯಕ ಮೊದಲಾದವರು ಸಮಾಧಿಯೆಂತಲೂ ಹೇಳುತ್ತಾರೆ. ದೈವವಶಾತ್ ಅಥವಾ ಆಕಸ್ಮಿಕವಾಗಿ ಉಂಟಾದ ಬೇರೊಂದು ಕಾರಣದಿಂದ ಇಚ್ಛಿತಕಾರ್ಯವು ಸುಲಭವಾಗಿ ಘಟಿಸಿತೆಂದು ವರ್ಣಿಸುವುದೇ ಸಮಾಧಿ (ಇಲ್ಲವೆ ಸಮಾಹಿತ) ಎಂಬ ಅಲಂಕಾರವು.

ಸಮಾಹಿತಕ್ಕೂ ಸಮುಚ್ಚಯಕ್ಕೂ ಭೇದವಿದೆ. ಸಮಾಹಿತದಲ್ಲಿ ಒಂದು ಕಾರಣವು ಕಾರ್ಯವನ್ನಾರಂಭಿಸುವಷ್ಟರಲ್ಲಿ ಆಕಸ್ಮಿಕವಾಗಿ ಇನ್ನೊಂದು ಪ್ರಬಲ ಕಾರಣವು ಆ ಕಾರ್ಯವನ್ನುಂಟುಮಾಡಲು ಬಹಳ ಸಹಾಯಕಾರಿಯಾಗುವುದು. ಸಮುಚ್ಚಯದಲ್ಲಿ ಎಲ್ಲ ಕಾರಣಗಳು ಏಕಕಾಲದಲ್ಲಿ ಪ್ರವರ್ತಿಸುವುವು; ಆದರೆ ಅದರಿಂದ ಕಾರ್ಯದಲ್ಲಿ ಏನೂ ಹೆಚ್ಚುಕಡಿಮೆಯಾಗುವುದಿಲ್ಲ.

ಉದ್ಭಟ, ವಿಶ್ವನಾಥ, ಅಪ್ಪಯದೀಕ್ಷಿತರು **ಸಮಾಹಿತ**ವೆಂದು ಬೇರೊಂದು ಅಲಂಕಾರವನ್ನು ಹೇಳುವರು. ಅದರಲ್ಲಿ **ಆವುದಾದರೊಂದು ರಸದ ಅಥವಾ ಭಾವದ ಶಾಂತಿಯಾಯಿತೆಂದು ವರ್ಣನೆಯಿರುವುದು.** ಉದಾ: 'ನಿನ್ನ ಖಡ್ಗದ ಕಂಪನದಿಂದ ನಿನ್ನ ವೈರಿಗಳ ಮದವು ಬಯಲಾಯಿತು.' ಈ ಅಲಂಕಾರವನ್ನು ಮಮ್ಮಟನು ಹೇಳಿಲ್ಲ.

ವಾಮನನು ಹೇಳಿದ **ಸಮಾಹಿತವು** ಇನ್ನೂ ಒಂದು ತೆರನಾಗಿರುವುದು (೪-೩-೨೯). ಅವನು ಹೇಳುವಂತೆ ಒಂದು ವಸ್ತುವನ್ನು ಮತ್ತೊಂದು ವಸ್ತುವಿಗೆ ಹೋಲಿಸಿ ಹೇಳುವಾಗ ಆ ವಸ್ತುವು ಹೋಲಿಸಿದ ವಸ್ತುವೇ ಆಗುವುದು ಸಮಾಹಿತವು. ಇದಕ್ಕೆ ಕಾಳಿದಾಸನ ವಿಕ್ರಮೋರ್ವಶೀಯದ ಕೆಳಗಿನ ಪದ್ಯವನ್ನು ಉದಾಹರಿಸಿದ್ದಾನೆ:

ತನ್ವೀ ಮೇಘಜಲಾರ್ದ್ರಪಲ್ಲವತಯಾ ಧೌತಾಧರೇವಾಶ್ರುಭಿಃ
ಶೂನ್ಯೇವಾಭರಣೈಃ ಸ್ವಕಾಲವಿರಹಾದ್ವಿಶ್ರಾಂತಪುಷ್ಪೋದ್ಗಮಾ
ಚಿಂತಾಮೋಹಮಿವಾಸ್ಥಿತಾ ಮಧುಲಿಹಾಂ ಶಬ್ದೈರ್ವಿನಾ ಲಕ್ಷ್ಯತೇ
ಚಂಡೀ ಮಾಮವಧೂಯ ಪಾದಪತಿತಂ ಜಾತಾನುತಾಪೇವ ಸಾ

ಅಂಕ ೪–೩೮

ಈ ವರ್ಣನೆಯನ್ನು ಮಾಡುತ್ತ ಪುರೂರವನು ಲತೆಯನ್ನು ಮುಟ್ಟುವಷ್ಟರಲ್ಲಿ ಅದೇ ಊರ್ವಶಿಯಾಯಿತು. ಈ ಅಲಂಕಾರವನ್ನು ಬೇರೆ ಯಾರೂ ಹೇಳಿಲ್ಲ.

೭೫೪ — ದಂಡಿ ೨-೨೯೯

ಆವೃತ್ತಿ

ದಂಡಿ ೨–೧೧೬ರಿಂದ ೧೧೯; ಜಯದೇವ ೫-೫೪; ಕುವಲಯ ೪೯, ೫೦

ಇದೊಂದು ದೀಪಕಸಜಾತೀಯವಾದ ಅಲಂಕಾರವು. ಜಯದೇವ, ಅಪ್ಪಯದೀಕ್ಷಿತರು ಇದಕ್ಕೆ **ಆವೃತ್ತಿದೀಪಕವೆಂದು** ಹೆಸರಿಟ್ಟಿರುವರು.

ಒಂದು ವಾಕ್ಯದಲ್ಲಿ ಒಂದೇ ಅರ್ಥದ ಅನೇಕಪದಗಳು ಬಂದರೆ ಅದು **ಅರ್ಥಾವೃತ್ತಿ**ಯೆಂತಲೂ ಒಂದೇ ಪದವು ಅನೇಕಸಾರೆ ಬಂದರೆ **ಶಬ್ದಾವೃತ್ತಿ**ಯೆಂತಲೂ ಎರಡೂ ಮತ್ತೆ ಮತ್ತೆ ಬಂದರೆ **ಉಭಯಾವೃತ್ತಿ**ಯೆಂತಲೂ ದಂಡಿಯು ಹೇಳುತ್ತಾನೆ.

ಇಲ್ಲಿ ದೀಪಕವಲ್ಲಿರುವಂತೆ ಪ್ರಸ್ತುತ-ಅಪ್ರಸ್ತುತಗಳೆರಡೂ ಇರಬೇಕೆಂಬ ನಿಯಮವನ್ನು ದಂಡಿಯು ಹೇಳಿಲ್ಲ. ಆದರೆ ಚಂದ್ರಾಲೋಕದಲ್ಲಿ ಪ್ರಸ್ತುತಾಪ್ರಸ್ತುತಗಳೆರಡೂ ವರ್ಣಿತವಾಗಬೇಕೆಂದೂ ದೀಪಕಪದವು ಪುನರಾವೃತ್ತಿಯಾಗಬೇಕೆಂದೂ ಹೇಳಿರುವುದು. ಕುವಲಯಾನಂದಕಾರನು ಇವರಲ್ಲಿಯೇ ಮೂರು ಭೇದಗಳನ್ನು (ದಂಡಿಯಂತೆ) ಮಾಡಿರುವನು; ಅಲ್ಲದೆ ಪ್ರಸ್ತುತ-ಅಪ್ರಸ್ತುತಗಳೆರಡೂ ಇಲ್ಲದಲ್ಲಿಯೂ (ಎಂದರೆ ಬರಿಯ ಪ್ರಸ್ತುತಗಳಿದ್ದರೂ ಅಥವಾ ಬರಿಯ ಅಪ್ರಸ್ತುತಗಳಿದ್ದರೂ) ಈ ಅಲಂಕಾರವಾಗುವುದೆಂದು ಹೇಳಿರುವನು.

೬೫೫ — ದಂಡಿ ೨-೧೧೭

ಸೂತ್ರ ೧೫೭
ಪರಸ್ಪರ

ರುದ್ರಟ ೭-೯೧; ಮಮ್ಮಟ ೧೦-೩೪,೩೫; ರುಯ್ಯಕ ೪೯; ಕುವಲಯ ೯೮; ಜಗನ್ನಾಥ ४೫೫

ಇದನ್ನು ಸಂಸ್ಕೃತ ಆಲಂಕಾರಿಕರು ಅನ್ಯೋನ್ಯವೆಂದು ಕರೆದಿದ್ದಾರೆ. ಎರಡು ವಸ್ತುಗಳು ಒಂದೇ ವಿಧವಾಗಿ ಒಂದಕ್ಕೊಂದು ಉಪಕಾರಿಯಾದುವು (ಎಂದರೆ ಒಂದೇ ವಿಧವಾದ ಪರಿಣಾಮವನ್ನು ಒಂದರ ಮೇಲೊಂದು ಮಾಡಿದುವು) ಎಂದು ಹೇಳುವುದೇ ಈ ಅಲಂಕಾರವು.

೬೫೯ — ಇದು ಕೆಳಗಿನ ಪದ್ಯದ ಅನುವಾದ :

ಕಂಠಸ್ಯ ತಸ್ಯಾಃ ಸ್ತನಬಂಧುರಸ್ಯ । ಮುಕ್ತಾಕಲಾಪಸ್ಯ ಚ ನಿಸ್ತಲಸ್ಯ
ಅನ್ಯೋನ್ಯಶೋಭಾಜನನಾತ್ ಬಭೂವ । ಸಾಧಾರಣೋ ಭೂಷಣಭೂಷ್ಯಭಾವಃ
ಕುಮಾರಸಂಭವ ೧-೪೨

ಸಾರ

ರುದ್ರಟ ೭-೯೬; ಮಮ್ಮಟ ೧೦-೩೭; ರುಯ್ಯಕ ೫೬; ಕುವಲಯ ೧೦೮; ಜಗನ್ನಾಥ ४೬೫

ಒಂದಕ್ಕಿಂತ ಒಂದು ಹೆಚ್ಚೆಂದು ಹೇಳುತ್ತಾ ಕೊನೆಗೆ ಎಲ್ಲಕ್ಕೂ ಹೆಚ್ಚಿನದನ್ನು ಹೇಳುವುದೇ ಸಾರವು. ಇದರಂತೆ ಒಂದಕ್ಕಿಂತ ಒಂದು ಹೆಚ್ಚು ಕೀಳಾದುದೆಂದು ವರ್ಣಿಸುವುದರಲ್ಲಿಯೂ ಈ ಅಲಂಕಾರವಿರುವುದೆಂದು ಜಗನ್ನಾಥನ ಮತ. ಅದರಂತೆ ಒಂದೇ ವಸ್ತು ಸ್ಥಿತ್ಯಂತರದಿಂದ ಅಧಿಕಗುಣವನ್ನು ಹೊಂದುತ್ತ ಹೋಗುವುದೆಂದು ವರ್ಣಿಸಿರುವುದರಲ್ಲಿಯೂ ಈ ಅಲಂಕಾರವುಂಟೆಂದು ಅವನೇ ಹೇಳುತ್ತಾನೆ.

೬೬೦ — ಹೋ :

ಅಕೃತ್ರಿಮಪ್ರೇಮರಸಾ ವಿಲಾಸಾಲಸಗಾಮಿನೀ
ಅಸಾರೇ ದಗ್ಧಸಂಸಾರೇ ಸಾರಂ ಸಾರಂಗಲೋಚನಾ
ಸುಭಾಷಿತಾವಲಿ: ೧४೫३

ಸೂತ್ರ ೧೫೮
ನಿರ್ವಾಳನ
ರುದ್ರಟ ೭-೧೦೬

ಇವನ್ನು ರುದ್ರಟನು ಪಿಹಿತವೆಂದು ಹೇಳಿದ್ದಾನೆ. ಹರ್ಷ, ಕೋಪ, ಭಯ ಮುಂತಾದುವು ಅವುಗಳ ಚಿಹ್ನದಂತೆ ಇದ್ದ ಸ್ವಾಭಾವಿಕವಾದ ಅಥವಾ ಕೃತ್ರಿಮವಾದ ಚಿಹ್ನಗಳಿಂದ ತಿಳಿಯಲಿಕ್ಕೆ ಬಾರದಂತೆ ಇರುವುದೇ ಈ ಅಲಂಕಾರದ ಲಕ್ಷಣವು.

೬೬೨ — ರುದ್ರಟ ೭-೧೦೭. **೬೬೩** — ರುದ್ರಟ ೭-೧೦೮

ಸೂತ್ರ ೧೫೯-೧೬೦
ರುದ್ರಟ ೮-೧, ೨, ೩

ಸೂತ್ರ ೧೬೧
ಉಪಮೆ

ಭಾಮಹ ೨-೩೦; ದಂಡಿ ೨-೧೪ ರಿಂದ ೬೫; ವಾಮನ ೪-೨-೪ ರಿಂದ ೨೧; ಉದ್ಭಟ ೧೧-೫ ರಿಂದ ೨೧; ರುದ್ರಟ ೮-೪ ರಿಂದ ೩೧; ಮಮ್ಮಟ ೧೦-೧ ರಿಂದ ೪; ರುಯ್ಯಕ ೧೧; ಕುವಲಯ ೬, ೭; ಜಗನ್ನಾಥ ೧೫೭ ರಿಂದ ಮುಂದೆ; ಮಾರ್ಗ ೩-೫೯ ರಿಂದ ೮೬.

ಆವುದನ್ನು ಕುರಿತು ನಮಗೆ ಏನಾದರೂ ಹೇಳುವುದಿರುತ್ತದೋ ಅದಕ್ಕೆ **ಪ್ರಸ್ತುತ**ವೆನ್ನುವರು; ಅದನ್ನೇ ಒಮ್ಮೊಮ್ಮೆ **ಪ್ರಕೃತ, ಪ್ರಾಕರಣಿಕ**ವೆಂದೂ ಹೇಳುವುದುಂಟು. ಅಂತಹ ಒಂದು ವಸ್ತುವಿನ ಸ್ವರೂಪ, ಗುಣ ಮುಂತಾದುವನ್ನು ಪ್ರಕಟಿಸುವುದಕ್ಕಾಗಿ ನಮ್ಮ ವರ್ಣನ ವಿಷಯಕ್ಕೆ ಸಂಬಂಧಿಸದ ಬೇರೊಂದು ವಸ್ತುವಿನೊಡನೆ ಹೋಲಿಸಬಹುದು. ಈ ಎರಡನೆಯ ವಸ್ತುವಿಗೆ **ಅಪ್ರಸ್ತುತ, ಅಪ್ರಕೃತ, ಅಪ್ರಾಕರಣಿಕ**ವೆಂದೂ ಹೇಳುವುದುಂಟು. ಪ್ರಸ್ತುತವಾದ ಒಂದು ವಸ್ತುವಿನ ಆವುದಾದರೊಂದು ಗುಣವನ್ನು ಆ ಗುಣದಲ್ಲಿ ಶ್ರೇಷ್ಠವಾದ ಇನ್ನೊಂದು (ಅಪ್ರಸ್ತುತ) ವಸ್ತುವಿನೊಡನೆ ಹೋಲಿಸುವುದರಿಂದ ಪ್ರಸ್ತುತವಸ್ತುವಿನಲ್ಲಿ ಆ ಗುಣವು ಕೆಲಮಟ್ಟಿಗೆ ಇದೆಯೆಂದು ಅಳತೆ ಉಪಮಾನ ಮಾಡಿದಂತಾಗುವುದು. ಆದುದರಿಂದಲೆ ಇದಕ್ಕೆ ಉಪಮೆಯೆಂದು ಹೆಸರು ಬಂದಿರುವುದು. ಆವ ವಸ್ತುವನ್ನು ಹೋಲಿಸುವೆವೋ ಅದು **ಉಪಮೇಯ**; ಆವುದಕ್ಕೆ ಹೋಲಿಸುವೆವೋ ಅದು **ಉಪಮಾನ**. ಅವೆರಡರಲ್ಲಿಯೂ ಸಾಮಾನ್ಯವಾಗಿ ಇರುವಂತಹ ಗುಣವು **ಸಾಧರ್ಮ್ಯ**; ಅದಕ್ಕೆ **ಸಾದೃಶ್ಯ, ಸಾಮ್ಯ, ಸಾಧಾರಣಧರ್ಮ** ಎಂದೂ ಹೇಳುವುದುಂಟು. ಇವಲ್ಲದೆ **ಉಪಮಾನವಾಚಕಪದ** ಅಥವಾ **ವಾಚಕ**ವೆಂಬುದೂ ಉಪಮೆಯೊಳಗಿನ ಒಂದು ಅಂಗವು. ಉಪಮೆಯಲ್ಲಿ ಉಪಮೇಯ-ಉಪಮಾನ ವಸ್ತುಗಳೆರಡೂ ಬೇರೆ ಬೇರೆಯಾಗಿರಬೇಕು.

ಒಂದು ಪದಾರ್ಥದಲ್ಲಿ ಕಂಡು ಬರುವ ಜಾತಿ-ಗುಣ-ಕ್ರಿಯೆ ಮೊದಲಾದುವುಗಳಿಗೆ **ಧರ್ಮ**ವೆಂಬ ಹೆಸರು. ಈ ಧರ್ಮವು ಒಂದೇ ಪದಾರ್ಥದಲ್ಲಿದ್ದರೆ ಅದು ಅಸಾಧಾರಣ (ಅಥವಾ ವಿಶೇಷ) ಧರ್ಮವೆನಿಸುವುದು; ಒಂದಕ್ಕಿಂತ ಹೆಚ್ಚು ಪದಾರ್ಥಗಳಲ್ಲಿದ್ದರೆ ಆಗ ಅದು ಆ ಎಲ್ಲ ಪದಾರ್ಥಗಳಿಗೂ ಸಾಧಾರಣವಾದ ಧರ್ಮವೆನಿಸುವುದು. ಇಂತಹ ಸಾಧಾರಣಧರ್ಮವೆ ಎರಡು ಭಿನ್ನವಾದ ಪದಾರ್ಥಗಳ ಸಾದೃಶ್ಯಕ್ಕೆ ಮೂಲವು. ಇದಕ್ಕೆ **ಸಾಧರ್ಮ್ಯ**ವೆನ್ನುವರು.

ಸಾಧರ್ಮ್ಯವನ್ನು ಮೂರು ಪ್ರಕಾರವಾಗಿ ಹೇಳಲು ಬರುವುದು:

(೧) ಉಪಮಾನ ಉಪಮೇಯಗಳಿಗೆ ಸಂಬಂಧವಾಗುವಂತೆ ಒಂದೇ ಪದದಿಂದ ಹೇಳುವುದು. ಆಗ ಅದಕ್ಕೆ **ಅನುಗಾಮಿಧರ್ಮ**ವೆಂದು ಹೆಸರು. ಇಲ್ಲಿ ಸಾಧರ್ಮ್ಯವು ಒಂದೇ; ಅದನ್ನು ಹೇಳತಕ್ಕ ಪದವೂ ಒಂದೇ.

(೨) ಎರಡು ಬೇರೆ ಬೇರೆ ಪದಗಳಿಂದ ಹೇಳುವುದು. ಇದಕ್ಕೆ **ವಸ್ತುಪ್ರತಿವಸ್ತುಭಾವ**ವೆನ್ನುತ್ತಾರೆ. ಇಲ್ಲಿ ಸಾಧರ್ಮ್ಯವು ಒಂದೇ; ಆದರೆ ಅದನ್ನು ಹೇಳತಕ್ಕ ಪದಗಳು ಬೇರೆ ಬೇರೆ.

(೩) ವಸ್ತುತಃ ಬೇರೆ ಬೇರೆಯಾದ (ಉಪಮಾನ-ಉಪಮೇಯಗಳ) ಧರ್ಮಗಳನ್ನು ಪರಸ್ಪರಸಾದೃಶ್ಯದಿಂದ ಅಭಿನ್ನವೆಂದು ಕಲ್ಪಿಸಿ ಬೇರೆ ಬೇರೆ ಶಬ್ದಗಳಿಂದ ಹೇಳುವುದು **ಬಿಂಬಪ್ರತಿಬಿಂಬಭಾವವು.**

'ನಿನ್ನ ಮುಖವು ಚಂದ್ರನಂತೆ ಆಹ್ಲಾದಕರವಾಗಿರುವುದು' ಎಂಬಲ್ಲಿ ವರ್ಣನೆಗೆ ಪ್ರಸ್ತುತವಾದ ಮುಖವು **ಉಪಮೇಯ**; ಅಪ್ರಸ್ತುತವಾದ ಚಂದ್ರನು **ಉಪಮಾನ**. ಆಹ್ಲಾದಕಾರಕತ್ವವೆಂಬ ಗುಣವು ಎರಡರಲ್ಲಿಯೂ ಇರುವ **ಸಾಧರ್ಮ್ಯ**; 'ಅಂತೆ' ಎಂಬುದು **ಉಪಮಾನವಾಚಕಪದ.** ಈ ನಾಲ್ಕೂ ಅಂಗಗಳು ಒಂದು ಉಪಮೆಯಲ್ಲಿ ವಾಚ್ಯವಾಗಿದ್ದರೆ ಅದಕ್ಕೆ **ಪೂರ್ಣೋಪಮೆ**ಯೆನ್ನುವರು. ಅವುಗಳಲ್ಲಿ ಒಂದಾಗಲೀ ಹೆಚ್ಚಾಗಲೀ ಅಂಗವು (ಪದವು) ವಾಚ್ಯವಾಗದೆ ಇದ್ದರೆ ಅದಕ್ಕೆ **ಲುಪ್ತೋಪಮೆ**ಯೆನ್ನುವರು. ಲುಪ್ತೋಪಮೆಗಳು: (೧) ಧರ್ಮಲುಪ್ತ (೨) ವಾಚಕಲುಪ್ತ (೩) ಉಪಮಾನಲುಪ್ತ (೪) ಧರ್ಮವಾಚಕಲುಪ್ತ (೫) ವಾಚಕೋಪಮಾನಲುಪ್ತ (೬) ವಾಚಕೋಪಮೇಯಲುಪ್ತ (೭) ಧರ್ಮೋಪಮಾನಲುಪ್ತ (೮) ಧರ್ಮೋಪಮಾನವಾಚಕಲುಪ್ತಗಳೆಂದು — ಎಂಟು ವಿಧ.

ಉಪಮೆಯಲ್ಲಿ ಉದ್ಭಟ, ಮಮ್ಮಟ ಮೊದಲಾದವರು ಶ್ರೌತಿ, ಆರ್ಥಿ ಎಂದು ಎರಡು ಮುಖ್ಯ ಭೇದಗಳನ್ನೂ ಒಂದೊಂದರಲ್ಲಿ ಸಮಾಸಗ, ತದ್ಧಿತಗ, ಇತ್ಯಾದಿ

ಯಾಗಿ ವ್ಯಾಕರಣಾನುಸಾರವಾದ ಅನೇಕ ಭೇದಗಳನ್ನು ಮಾಡುತ್ತಾರೆ; ಆದರೆ ಇವೆಲ್ಲ ಭೇದಗಳು ಕನ್ನಡಕ್ಕೆ ಉಪಯೋಗವಿಲ್ಲ.

ಇಲ್ಲಿ ನಾಗವರ್ಮನು ಪ್ರಾಚೀನರಾದ ದಂಡಿ, ವಾಮನ, ರುದ್ರಟರನ್ನನುಸರಿಸಿ ಉಪಮೆಯನ್ನು ಬೇರೆ ವಿಧವಾಗಿಯೇ ವಿಭಾಗಿಸಿದಂತೆ ಅವನ ಉದಾಹರಣೆಗಳಿಂದ ಕಂಡು ಬರುತ್ತದೆ. ಆದರೆ ಅವರು ಹೇಳಿದ ಎಲ್ಲ ವಿಭಾಗಗಳನ್ನು ತೆಗೆದುಕೊಂಡಿಲ್ಲ. ಉದಾಹರಣೆಗಾಗಿ ಕೆಲವನ್ನು ಮಾತ್ರ ತೆಗೆದುಕೊಂಡಿರಬಹುದೆಂದು ತೋರುತ್ತದೆ. ಉದಾಹರಣೆಗಳಲ್ಲಿ ೧ ರಿಂದ ೮ ಮತ್ತು ೧೦ ಈ ಭೇದಗಳು ದಂಡಿಯಲ್ಲಿವೆ- ೯ನೆಯದಾದ ಕಲ್ಪಿತೋಪಮೆಯು ವಾಮನನದು. ಉಳಿದುವು ರುದ್ರಟನವು.

(೧) ಧರ್ಮೋಪಮೆ: ಇಲ್ಲಿ ಜಲನಿಧಿಗೂ ದಾನವಿನೋದನಿಗೂ ಸಮಾನವಾದ 'ಗಭೀರ'ವೆಂಬ ಧರ್ಮವನ್ನು ವಾಚ್ಯವಾಗಿ ಹೇಳಿರುವುದರಿಂದ ಇದು ಧರ್ಮೋಪಮೆ (ಹೋ : ದಂಡಿ ೨-೧೫). ಇದರಂತೆ ಪದ್ಯದಲ್ಲಿ ಹೇಳಿದ ಇತರ ಧರ್ಮಗಳನ್ನೂ ನೋಡಿಕೊಳ್ಳುವುದು.

(೨) ಹೇತೂಪಮೆ: ಇಲ್ಲಿ ಸಾಮ್ಯಕ್ಕೆ 'ಪರಿವೃತ್ತತೆ' 'ನುಣ್ಪು' ಮೊದಲಾದ ಕಾರಣ (ಹೇತು) ಗಳನ್ನು ಹೇಳಿರುವುದು. (ಹೋ : ದಂಡಿ ೨-೫೦.)

(೩) ವಸ್ತೂಪಮೆ: ಇಲ್ಲಿ ಸಾಧಾರಣ ಧರ್ಮಗಳನ್ನು ಹೇಳದೆ ಬರಿಯ ವಸ್ತುಗಳನ್ನು ಹೇಳಿರುವುದರಿಂದ ಇದು ವಸ್ತೂಪಮೆ (ದಂಡಿ ೨-೧೬). ಇದು ನವೀನರ ಪ್ರಕಾರ ಧರ್ಮಲುಪ್ತೋಪಮೆಯಾಗುವುದು.

(೪) ಶ್ಲೇಷೋಪಮೆ : (ದಂಡಿ ೨-೨೮).

(೫) ಅನ್ಯನ್ಯೋಪಮೆ : (ದಂಡಿ ೨-೧೮) ಇದಕ್ಕೆ ನವೀನರು ಉಪಮೇಯೋಪಮೆಯೆಂದು ಬೇರೆ ಅಲಂಕಾರವನ್ನೇ ಹೇಳುವರು.

(೬) ವಿಪರ್ಯಾಸೋಪಮೆ (ದಂಡಿ ೨-೧೭) — ಇದಕ್ಕೆ ನವೀನರು ಪ್ರತೀಪವೆಂಬ ಬೇರೊಂದು ಹೆಸರನ್ನಿಟ್ಟಿರುವರು. ಇದರಲ್ಲಿ ಪ್ರಸ್ತುತವಾದ ವಸ್ತುವು ಅಪ್ರಸ್ತುತವಾದ ವಸ್ತುವನ್ನು ಹೋಲುವುದೆಂಬುದರ ಬದಲು ಅಪ್ರಸ್ತುತವೇ ಪ್ರಸ್ತುತವನ್ನು ಹೋಲುವುದೆನ್ನುವುದರಿಂದ ಪ್ರಸಿದ್ಧಿಯು ವಿಪರ್ಯಾಸ ಹೊಂದುವುದು.

(೭) ಬಹೂಪಮೆ : (ದಂಡಿ ೨-೪೦) — ಸಮಾನಧರ್ಮಗಳುಳ್ಳ ಅನೇಕ ಉಪಮಾನಗಳನ್ನು ಹೇಳುವುದು.

(೮) ಮಾಲೋಪಮೆ : (ದಂಡಿ ೨-೪೨; ರುದ್ರಟ ೮-೨೫, ೨೭).

(೯) ಕಲ್ಪಿತೋಪಮೆ : (ವಾಮನ ೪-೨-೪).

(೧೦) **ವಾಕ್ಯೋಪಮೆ :** (ದಂಡಿ ೨-೪೩; ರುದ್ರಟ ೮-೫). ವಾಕ್ಯ = ಪದ ಸಮೂಹ

(೧೧) **ಪ್ರತ್ಯಯೋಪಮೆ :** (ರುದ್ರಟ ೮-೨೩, ೨೪)—ಇಲ್ಲಿ ಉಪಮಾನಸ್ಥಾನದಲ್ಲಿರುವ 'ಜಲಜ' 'ಅಳಿ' ಮುಂತಾದುವುಗಳಿಗೆ ಬೇರೆ ಪ್ರತ್ಯಯಗಳನ್ನು ಹಚ್ಚಿ ಅವುಗಳನ್ನು ಉಪಮೇಯಗಳಿಗೆ ವಿಶೇಷಗಳನ್ನಾಗಿ ಮಾಡಿದೆ.

(೧೨) **ಸಮಾಸೋಪಮೆ :** (ರುದ್ರಟ ೮-೧೭) — ಇಲ್ಲಿ ಉಪಮಾನ-ಉಪಮೇಯಗಳನ್ನು ಕೂಡಿಸಿ ಸಮಾಸಮಾಡಿದೆ. ಹೀಗೆ ಮಾಡಿದಾಗ ಸಾಧರ್ಮ್ಯವೂ ಉಪಮಾನವಾಚಕಪದವೂ ಲೋಪವಾಗುವುದರಿಂದ ಇದನ್ನು ನವೀನರ ಮತದಂತೆ ಧರ್ಮವಾಚಕಲುಪ್ತವೆನ್ನಬಹುದು.

೬೬೯, ೬೭೫, ೬೭೭ — ರುದ್ರಟ ೮-೬, ೧೪, ೩೦ ಕ್ರಮವಾಗಿ.

ಸೂತ್ರ ೧೬೨

ಭಾಮಹ ೨-೩೯, ೪೦; ದಂಡಿ ೨-೫೧; ವಾಮನ ೪-೨-೮; ಮಮ್ಮಟ ೧೦-೫೬; ಜಗನ್ನಾಥ ೧೬೧; ಮಾರ್ಗ ೩-೮೭ರಿಂದ ೯೦.

ವಾಮನನು ಹೇಳುವಂತೆ ಉಪಮೆಯಲ್ಲಿ ಜಾತಿ-ಪ್ರಮಾಣಗಳಿಂದ ಉಪಮಾನದ ಹೀನತ್ವ ಅಥವಾ ಅಧಿಕತ್ವ, ಉಪಮೇಯ-ಉಪಮಾನಗಳಲ್ಲಿ ಲಿಂಗ-ವಚನ ಭೇದ, ಅಸಾದೃಶ್ಯ, ಅಸಂಭವಗಳೆಂಬ ದೋಷಗಳಿರಬಾರದು.

ಹೀನತ್ವ : ಅರಸನನ್ನು ನಾಯಿಗೆ ಹೋಲಿಸಿದುದು ಹೀನೋಪಮೆ (೬೮೧). ಇದು ಜಾತಿಯಿಂದ ಹೀನ. 'ಸೂರ್ಯನು ಬೆಂಕಿಯ ಕಿಡಿಗಳಂತೆ ಪ್ರಕಾಶಿಸುತ್ತಾನೆ' ಎಂಬಲ್ಲಿ ಪ್ರಮಾಣದಿಂದ ಹೀನ.

ಅಧಿಕತ್ವ : 'ಮಿಾನಂಬುಳು'ಗಳನ್ನು ಸೂರ್ಯನಿಗೆ ಹೋಲಿಸಿದುದು ಜಾತಿ ಪ್ರಮಾಣಗಳೆರಡರಿಂದಲೂ ಉಪಮಾನದ ಆಧಿಕ್ಯ (೬೮೨).

ಅಸಾದೃಶ್ಯ : ನವಿಲನ್ನು ಆನೆಗೆ ಹೋಲಿಸಿದುದು (೬೩೮).

ಅಸಂಭವ :

ಚಕಾಸ್ತಿ ವದನೇ ತಸ್ಯಾಃ ಸ್ಮಿತಚ್ಛಾಯಾ ವಿಕಾಸಿನಿ
ಉನ್ನಿದ್ರಸ್ಯಾರವಿಂದಸ್ಯ ಮಧ್ಯೇ ಮುಗ್ಧೇವ ಚಂದ್ರಿಕಾ

'ಅರಳಿದ ಕಮಲಗಳ ಮಧ್ಯದಲ್ಲಿಯ ಬೆಳ್ದಿಂಗಳಂತೆ ಅವಳ ಮುಖದಲ್ಲಿ ನಗೆಯು ಶೋಭಿಸುತ್ತಿತ್ತು.' ಬೆಳ್ದಿಂಗಳೂ ಕಮಲವಿಕಸನವೂ ಕೂಡುವುದು ಅಸಂಭವವಾದುದೆಂದು ಕವಿಗಳು ಗ್ರಹಿಸಿರುವುದರಿಂದ ಇದು ಅಸಂಭವಕ್ಕೆ ಉದಾಹರಣೆ.

೬೮೧ — ಭಾಮಹ ೨-೫೪. **೬೮೨** — ದಂಡಿ ೨-೫೫.

೬೮೩ — ಭಾಮಹ ೨-೬೨

ಉಪಮಾಲಂಕಾರದಲ್ಲಿ ಎದ್ದು ಕಾಣುವ ಸಾದೃಶ್ಯವೇ ಇನ್ನೂ ಅನೇಕ ಅಲಂಕಾರಗಳಿಗೆ ಬೀಜರೂಪವಾಗಿದೆಯೆಂಬುದನ್ನು ಮುಂದೆ ಕೊಟ್ಟ ಉದಾಹರಣೆಗಳಿಂದ ತಿಳಿದುಕೊಳ್ಳಬಹುದು: (೧) ಮುಖವು ಚಂದ್ರನಂತೆ ಶೋಭಿಸುವುದು — **ಉಪಮೆ** (೨) ಚಂದ್ರನಂತೆ ಮುಖ, ಮುಖದಂತೆ ಚಂದ್ರ — **ಉಪಮೇಯೋಪಮೆ** (೩) ಮುಖದಂತೆ ಚಂದ್ರ — **ಪ್ರತೀತ** (೪) ಚಂದ್ರನನ್ನು ನೋಡಿದರೆ ಮುಖದ ನೆನಪಾಗುತ್ತದೆ — **ಸ್ಮರಣ** (೫) ಮುಖವೇ ಚಂದ್ರ — **ರೂಪಕ** (೬) ಮುಖ ಚಂದ್ರನಿಂದ ತಾಪವು ಶಾಂತವಾಗುತ್ತದೆ — **ಪರಿಣಾಮ** (೭) ಇದು ಮುಖವೋ ಚಂದ್ರನೋ — **ಸಂದೇಹ** (೮) ಚಂದ್ರನೆಂದು ಮುಖಕ್ಕೆ ಚಕೋರಗಳು ಎರಗುವುವು — **ಭ್ರಾಂತಿಮದ** (೯) ಮುಖವನ್ನು ನೋಡಿ ಚಕೋರಗಳು ಚಂದ್ರನೆಂದೂ ಭ್ರಮರಗಳು ಕಮಲವೆಂದೂ ನಲಿಯುವುವು — **ಉಲ್ಲೇಖ** (೧೦) ಇದು ಮುಖವಲ್ಲ ಚಂದ್ರ — **ಅಪಹ್ನುತಿ** (೧೧) ಇಗೊ, ಚಂದ್ರನು ಇದೇ — **ಅತಿಶಯೋಕ್ತಿ** (೧೨) ಮುಖದಿಂದ ಚಂದ್ರ-ಕಮಲಗಳು ಜಯಿಸಲ್ಪಟ್ಟುವು — **ತುಲ್ಯಯೋಗಿತೆ** (೧೩) ಇರುಳಲ್ಲಿ ಚಂದ್ರನಿಂದಲೂ (ನಿನ್ನ) ಮುಖದಿಂದಲೂ ಆನಂದವುಂಟಾಗುತ್ತದೆ–**ದೀಪಕ** (೧೪) ನಿನ್ನ ಮುಖದಿಂದ ನನಗೆ ಆಹ್ಲಾದ; ಚಂದ್ರನಿಂದ ಚಕೋರಕ್ಕೆ ಆಹ್ಲಾದ— **ಪ್ರತಿವಸ್ತೂಪಮೆ** (೧೫) ಇರುಳಲ್ಲಿ ಚಂದ್ರನು ನಿನ್ನ ಮುಖದೊಡನೆ ಆನಂದವನ್ನು ಕೊಡುತ್ತಾನೆ — **ಸಹೋಕ್ತಿ** (೧೬) ಆಕಾಶದಲ್ಲಿ ಚಂದ್ರ; ಭೂಮಿಯಲ್ಲಿ ನಿನ್ನ ಮುಖ — **ದೃಷ್ಟಾಂತ** (೧೭) ಮುಖವು ಚಂದ್ರಕಾಂತಿಯನ್ನು ತಳೆದಿರುವುದು — **ನಿದರ್ಶನ** (೧೮) ನಿಷ್ಕಲಂಕವಾದ ಮುಖವು ಚಂದ್ರನಿಗಿಂತ ಹೆಚ್ಚಿನದು — **ವ್ಯತಿರೇಕ** (೧೯) ಮುಖದೆದುರಿಗೆ ಚಂದ್ರನು ನಿಸ್ತೇಜ — **ಅಪ್ರಸ್ತುತಪ್ರಶಂಸೆ** (೨೦) ಮುಖವೆತ್ತ ಚಂದ್ರನೆತ್ತ — **ವಿಷಮಾಲಂಕಾರ** (೨೧) ನೇತ್ರಾಂಕಿತವಾದ ನಿನ್ನ ವದನವು ನಗೆಬೆಳ್ದಿಂಗಳನ್ನು ಬೀರುತ್ತದೆ — **ಸಮಾಸೋಕ್ತಿ** (೨೨) ಮುಖವು ಚಂದ್ರನೆಂಬಂತೆ ಕಾಂತಿಯನ್ನು ತಳೆದಿರುವುದು — **ಉತ್ಪ್ರೇಕ್ಷೆ** (೨೩) ಮುಖವು ಮುಖದಂತೆ — **ಅನನ್ವಯ.**

ಸೂತ್ರ ೧೬೩
ಪ್ರತಿವಸ್ತೂಪಮೆ

ಭಾಮಹ ೨-೩೪ ವಾಮನ ೪-೩-೨; ಉದ್ಭಟ ೧-೨೨; ಮಮ್ಮಟ ೧೦-೧೫, ೧೬; ರುಯ್ಯಕ ೨೫; ಕುವಲಯ ೫೧; ಜಗನ್ನಾಥ ೧೯೬.

ಇದರಲ್ಲಿ ಎರಡು ವಾಕ್ಯಗಳಿರುವುವು; ಒಂದು ಉಪಮೇಯವನ್ನು ಹೇಳುವುದು; ಇನ್ನೊಂದು ಉಪಮಾನವನ್ನು ಹೇಳುವುದು. ಸಮಾನಧರ್ಮವು ಎರಡರಲ್ಲಿಯೂ ಇರುವುದು. ಆದರೆ ಬೇರೆ ಬೇರೆ ಶಬ್ದಗಳಿಂದ ಹೇಳಲ್ಪಡುವುದು; ಎಂದರೆ ವಸ್ತುಪ್ರತಿವಸ್ತು

ಭಾವದಿಂದ ಹೇಳಲ್ಪಡುವುದು. ಇದರಲ್ಲಿ ಎರಡಕ್ಕಿಂತ ಹೆಚ್ಚು ವಾಕ್ಯಗಳೂ ಇರಬಹುದು. ಉಪಮಾನ-ಉಪಮೇಯಗಳು ಅನೇಕವಿರಬಹುದು. ಈ ಅಲಂಕಾರವು ಮಾಲಾರೂಪವಾಗಿಯೂ ಇರಬಹುದು. ಒಂದು ವಾಕ್ಯದಲ್ಲಿ ಸಾಧರ್ಮ್ಯವನ್ನೂ ಮತ್ತೊಂದರಲ್ಲಿ ಅದರ ಅಭಾವವನ್ನೂ ಹೇಳಬಹುದು.

ಈ ಅಲಂಕಾರಕ್ಕೂ ಉಪಮೆಗೂ ಇರುವ ಭೇದವೆಂದರೆ (೧) ಉಪಮೆಯಲ್ಲಿ ಸಾದೃಶ್ಯವು ವಾಚ್ಯವಾಗಿರುತ್ತದೆ; ಇದರಲ್ಲಿ ಗಮ್ಯ (ಸೂಚಿತ) ವಾಗಿರುತ್ತದೆ. (೨) ಉಪಮೆಯಲ್ಲ ಒಂದು ವಾಕ್ಯವಿರುತ್ತದೆ; ಇದರಲ್ಲಿ ಎರಡು ಇರುತ್ತವೆ. (೩) ಉಪಮೆಯಲ್ಲಿ ಸಾಮಾನ್ಯವಾಗಿ (ಸಾದೃಶ್ಯ) ವಾಚಕಪದವು ಇರುತ್ತದೆ; ಇದರಲ್ಲಿ ಇರುವುದೇ ಇಲ್ಲ.

೬೮೬ — ದಂಡಿ ೨-೪೭

ರೂಪಕ

ಭಾಮಹ ೨-೨೧; ದಂಡಿ ೨-೬೬ ರಿಂದ ೯೬; ವಾಮನ ೪-೩-೬; ಉದ್ಭಟ ೧-೧೧ ರಿಂದ ೧೩; ರುದ್ರಟ ೮-೩೮ ರಿಂದ ೫೬; ಮಮ್ಮಟ ೧೦-೭ ರಿಂದ ೧೦; ರುಯ್ಯಕ ೧೫; ಕುವಲಯಾನಂದ ೧೭ರಿಂದ ೨೦ ಜಗನ್ನಾಥ ೨೨೪ ರಿಂದ ೨೪೬; ಮಾರ್ಗ ೩-೧೨ ರಿಂದ ೨೬.

ವರ್ಣನೀಯವಾದ ಒಂದು ವಸ್ತುವನ್ನು ಉಪಮಾನವಾದ ಇನ್ನೊಂದು ವಸ್ತುವಿನೊಡನೆ ಬೇರೆಯಲ್ಲವೆನ್ನುವಂತೆ—ಆದರೆ ಅದನ್ನು ಮರೆಮಾಡದೆ ಎರಡನೆಯದರ ರೂಪದಿಂದಲೇ ವರ್ಣಿಸುವುದು (ಎಂದರೆ ಉಪಮಾನದ ರೂಪದಿಂದ ಉಪಮೇಯವನ್ನು ವರ್ಣಿಸುವುದು) **ರೂಪಕಾಲಂಕಾರವಾಗುವುದು.** ಜಯದೇವನು ಇದನ್ನೇ ' ಉಪಮಾನಚಿತ್ರದಿಂದ ಉಪಮೇಯ ಗೋಡೆಯನ್ನೆಲ್ಲ ತುಂಬಿಬಿಡುವುದು. ' ಎಂದು ಹೇಳಿದ್ದಾನೆ (೫-೧೮). ಇಲ್ಲಿ ನೆನಪಿಡತಕ್ಕದ್ದೇನಂದರೆ — ಉಪಮಾನ, ಉಪಮೇಯಗಳೆರಡನ್ನೂ ಹೇಳಿರಬೇಕು. ಆದರೆ ಉಪಮೇಯವು ಉಪಮಾನದ ರೂಪವನ್ನು ತಾಳಿದೆಯೆಂದು ತಿಳಿಯಬೇಕು. ಇಲ್ಲಿ ಆಲಂಕಾರಿಕರು ಉಪಮೇಯವನ್ನು ' ವಿಷಯ 'ವೆಂದೂ ಉಪಮಾನವನ್ನು ' ವಿಷಯಿ ' ಯೆಂದೂ ಹೇಳಿ ವಿಷಯದ ಮೇಲೆ ವಿಷಯಿಯನ್ನು ಆರೋಪಿಸುವುದೇ ರೂಪಕಾಲಂಕಾರವೆಂದು ಹೇಳಿರುವರು. ಆದುದರಿಂದ ಇದು ಅಪಹ್ನುತಿಯೆಂಬ ಅಲಂಕಾರದಿಂದ ಬೇರೆಯಾಗಿರುವುದು. ಅಪಹ್ನುತಿಯಲ್ಲಿ ಉಪಮೇಯದ ಸ್ವರೂಪವನ್ನು ಅಲ್ಲಗಳೆದು ಅದನ್ನೇ ಉಪಮಾನದ ರೂಪದಿಂದ ವರ್ಣಿಸುವುದಿರುತ್ತದೆ. ಎಂದರೆ ಉಪಮಾನವನ್ನು ಉಪಮೇಯದಲ್ಲಿ ಮುಳುಗಿಸಿದಂತಾಗುತ್ತದೆ. ಹೀಗೆ ಮಾಡುವುದಕ್ಕೆ ಅಧ್ಯವಸಾಯವೆಂದು ಆಲಂಕಾರಿಕರು ಹೇಳುವರು.

ರೂಪಕದಲ್ಲಿ ದಂಡಿ ಮೊದಲಾದ ಪ್ರಾಚೀನರು ಅನೇಕ ಭೇದಗಳನ್ನು ಹೇಳುತ್ತಾರೆ. ಮಮ್ಮಟನು ಅವುಗಳಲ್ಲಿ ಮೂರು ಮುಖ್ಯ ಭೇದಗಳನ್ನು ಅಂಗೀಕರಿಸಿದ್ದಾನೆ: (೧) **ಸಾಂಗ** (ಸಾವಯವ) (೨) **ನಿರಂಗ** (ನಿರವಯವ) (೩) **ಪರಂಪರಿತ.** ಕುವಲಯಾನಂದಕಾರನು ಇದರಲ್ಲಿ ಬೇರೆ ವಿಭಾಗಗಳನ್ನು ಮಾಡಿದ್ದಾನೆ: (೧) **ಅಭೇದರೂಪಕ** (೨) **ತಾದ್ರೂಪ್ಯರೂಪಕ**ಗಳೆಂದು ಎರಡು ಮುಖ್ಯ ಭೇದಗಳೆಂದೂ ಒಂದೊಂದರಲ್ಲಿಯೂ 'ಉಭಯ, ಅಧಿಕ, ನ್ಯೂನ' ಎಂದು ಮತ್ತೆ ಮೂರು ಭೇದಗಳಾಗುವುವೆಂದೂ ಹೇಳಿರುವನಲ್ಲದೆ 'ಮಾಲಾರೂಪಕ, ಪರಂಪರಿತರೂಪಕ, ಶ್ಲಿಷ್ಟರೂಪಕ' ಎಂಬ ಇತರ ಭೇದಗಳನ್ನೂ ಅಂಗೀಕರಿಸಿದ್ದಾನೆ. ಅಭೇದರೂಪಕದಲ್ಲಿ ಉಪಮೇಯವನ್ನೂ ಉಪಮಾನದೊಡನೆ (ನಾಮ ಮತ್ತು ಅರ್ಥ ಎರಡರಿಂದಲೂ) ಅಭೇದದಿಂದ ವರ್ಣಿಸುವುದು: ಉದಾ: 'ಮುಖಚಂದ್ರ'. ಆದರೆ 'ಮುಖವೆಂಬ ಇನ್ನೊಂದು ಚಂದ್ರ' ಎಂದು ಹೇಳಿದಾಗ 'ಆಕಾಶದಲ್ಲಿರುವ ಪ್ರಸಿದ್ಧ ಚಂದ್ರನಲ್ಲದೆ ಇದೂ ಒಂದು ಬೇರೆಯಾದ ಚಂದ್ರ; ಆದರೆ ಆ ಪ್ರಸಿದ್ಧ ಚಂದ್ರನ ಕಾರ್ಯವನ್ನು ಇದೂ ಮಾಡುವುದು' ಎಂಬ ಅರ್ಥದಲ್ಲಿ ಹೇಳಿದ ಹಾಗಾಗುವುದರಿಂದ ಆದಕ್ಕೆ ತಾದ್ರೂಪ್ಯರೂಪಕವೆಂದು ಹೆಸರು. ಇನ್ನು ಉಪಮಾನಕ್ಕಿಂತ ಉಪಮೇಯವು ಅಧಿಕಗುಣವುಳ್ಳದು ಅಥವಾ ನ್ಯೂನಗುಣವುಳ್ಳದು ಎಂಬುದನ್ನು ಸೂಚಿಸಬಹುದು. 'ನಿನ್ನ ನಿಷ್ಕಳಂಕಮುಖಚಂದ್ರನನ್ನು ನೋಡಿ ಆ ಪ್ರಸಿದ್ಧ ಚಂದ್ರನು ಅಂಬರವನ್ನು ಸೇರಿದನು' ಎಂದು ವರ್ಣಿಸಿದರೆ ಅಧಿಕತಾದ್ರೂಪ್ಯರೂಪಕವಾಗುವುದು. ಹೀಗೆ ಮಿಕ್ಕ ಎಡೆಗಳಲ್ಲಿಯೂ ತಿಳಿದುಕೊಳ್ಳಬೇಕು. **ಅಸಮಸ್ತರೂಪಕ** (ದಂಡಿ ೨-೬೮) ದಲ್ಲಿ **ಸಮಸ್ತರೂಪಕ** (ದಂಡಿ ೨-೬೬) ದಲ್ಲಿ ಆಗುವಂತೆ ಉಪಮೇಯ-ಉಪಮಾನಗಳು ಕೂಡಿ ಒಂದೇ ಸಮಾಸವಾಗುವುದಿಲ್ಲ. **ವಿಭಕ್ತಿರೂಪಕ**ದಲ್ಲಿ 'ಎಂಬ' (ಅಥವಾ ಆ ಅರ್ಥಬರುವ) ಶಬ್ದದಿಂದ ಉಪಮೇಯವನ್ನು ಉಪಮಾನದೊಡನೆ ಸಂಬಂಧಿಸುವುದು. **ಸಾವಯವರೂಪಕ** (ದಂಡಿ ೨-೭೨) ದಲ್ಲಿ ಒಂದು ಮುಖ್ಯ ರೂಪಕಕ್ಕೆ ಅಂಗವಾಗಿ ಬೇರೆಬೇರೆ ರೂಪಕಗಳನ್ನು ಹೊಂದಿಸಿಕೊಂಡು ಹೇಳುವುದು. ಇನೆಯ ಉದಾಹರಣೆಯಲ್ಲಿ ವರ್ಣನೀಯಳಾದ ಸ್ತ್ರೀಯನ್ನು ಲತೆಯೆಂದು ಕಲ್ಪಿಸಿ ಲತೆಯ ಅವಯವಗಳಾದ ಮಂಜರಿ, ಪತಾಕ, ಪಲ್ಲವ ಇವುಗಳನ್ನು ಅವಳ ಘರ್ಮಜಲ, ಭ್ರೂ, ಅಧರ ಎಂಬುವುಗಳೊಡನೆ ಆರೋಪ ಮಾಡಿದೆ. **ನಿರವಯರೂಪಕ**ದಲ್ಲಿ ಈ ರೀತಿಯಾದ ಕಲ್ಪನೆಯಿರುವುದಿಲ್ಲ. **ಸಕಲರೂಪಕ** (ದಂಡಿ ೨-೭೦) ಇದರಲ್ಲಿಯೂ ಸಾವಯವರೂಪಕದಂತೆಯೇ ಒಂದು ಆರೋಪಿತವಸ್ತುವಿನ ಸಮಗ್ರಕಲ್ಪನೆಯು ಬರುವಂತೆ ಹೇಳಿರುವುದು. **ಹೇತು**

ರೂಪಕ* ದಂಡಿ ೨-೮೬ ನೋಡುವುದು. **ರೂಪಕರೂಪಕ** (ದಂಡಿ ೨-೯೩): ಒಂದು ರೂಪಕದ ಮೇಲೆ ಮತ್ತೊಂದು ರೂಪಕವನ್ನು ಆರೋಪಮಾಡುವುದು. ಎಂದರೆ ಒಂದು ಉಪಮೇಯವನ್ನು ಏಕಕಾಲದಲ್ಲಿ ಅನೇಕ ಉಪಮಾನಗಳೊಡನೆ ಅಭೇದದಿಂದ ಸಂಬಂಧಿಸುವುದು. **ಮಾಲಾರೂಪಕ*** ರುದ್ರಟ ೮-೪೭ ನೋಡುವುದು. ರೂಪಕವು ಶ್ಲೇಷದಿಂದ ಪೋಷಿತವಾದರೆ ' ಶ್ಲಿಷ್ಟರೂಪಕ ' ವೆಂದು ಹೆಸರು.

೬೯೧ — ದಂಡಿ ೨-೭೩ ಮತ್ತು ೮೦.

೬೯೫ — ಇದು ಕೆಳಗಿನ ಪದ್ಯದ ಅನುವಾದವಾಗಿದೆ:

ಅಸಾರಂ ಸಂಸಾರಂ ಪರಿಮುಷಿತರತ್ನಂ ತ್ರಿಭುವನಂ
ನಿರಾಲೋಕಂ ಲೋಕಂ ಮರಣಶರಣಂ ಬಾಂಧವಜನಂ
ಅದರ್ಪಂ ಕಂದರ್ಪಂ ಜನನಯನನಿರ್ಮಾಣಮಫಲಂ
ಜಗಜ್ಜೀರ್ಣಾರಣ್ಯಂ ಕಥಮಸಿ ವಿಧಾತುಂ ವ್ಯವಸಿತಃ

ಮಾಲತೀಮಾಧವ, ಪಂಚಮಾಂಕ:

ಸಮಾಸೋಕ್ತಿ

ಭಾಮಹ ೨-೭೯; ದಂಡಿ ೨-೨೦೫ ರಿಂದ ೨೧೩; ವಾಮನ ೪-೩-೩; ಉದ್ಭಟ ೨-೧೦; ರುದ್ರಟ ೮-೬೭; ಮಮ್ಮಟ ೧೦-೧೧; ರುಯ್ಯಕ ೩೧; ಕುವಲಯ ೬೧; ಜಗನ್ನಾಥ ೩೬೭; ಮಾರ್ಗ ೩-೧೨೭.

ಪ್ರಸ್ತುತವನ್ನು ವರ್ಣಿಸುವುದರಿಂದ ಅಪ್ರಸ್ತುತವು ಗಮ್ಯವಾಗುವಂತಿದ್ದರೆ ಈ ಅಲಂಕಾರವಾಗುವುದು. ಇಲ್ಲಿ ಅಪ್ರಸ್ತುತವನ್ನು ಹೇಳದೆ ಪ್ರಸ್ತುತವಲ್ಲಿಯೇ ಅದರ ವ್ಯವಹಾರವನ್ನು ಆರೋಪಿಸುವುದು. ಪ್ರಸ್ತುತಾಪ್ರಸ್ತುತಗಳಿಗೆ ಸಮವಾದ ಕಾರ್ಯ-ಲಿಂಗ-ವಿಶೇಷಣಗಳಿಂದ ಪ್ರಸ್ತುತವನ್ನು ವರ್ಣಿಸಿ ಅದರಿಂದ ಓದುಗರಲ್ಲಿ ಅಪ್ರಸ್ತುತದ ಅರಿವುಂಟಾಗುವಂತೆ ವರ್ಣಿಸುವುದೇ ಈ ಅಲಂಕಾರ. ಹೀಗೆ ಸಂಕ್ಷೇಪವಾದ ವರ್ಣನೆಯಿರುವುದರಿಂದಲೇ ಇದಕ್ಕೆ ಈ ಹೆಸರು ಬಂದಿದೆ. ಇದರಲ್ಲಿ ಶ್ಲೇಷವು ಬಹುತರವಾಗಿ ಇರುತ್ತದೆ. ರೂಪಕದಂತೆ ಅಪ್ರಸ್ತುತದ ರೂಪಸಮಾರೋಪವು ಪ್ರಸ್ತುತದಲ್ಲಿ ಆಗದೆ ವ್ಯವಹಾರಸಮಾರೋಪವು ಮಾತ್ರ ಆಗಿರುವುದರಿಂದ ಇದು ರೂಪಕದಿಂದ ಬೇರೆಯಾಗಿರುತ್ತದೆ. ಅಪ್ರಸ್ತುತಪ್ರಶಂಸೆಯಲ್ಲಿ ಅಪ್ರಸ್ತುತದ ವರ್ಣನೆಯಿಂದ ಪ್ರಸ್ತುತವು ಮನಸ್ಸಿಗೆ ಹೊಳೆಯುತ್ತದೆ. ಆದುದರಿಂದ ಅದು ಸಮಾಸೋಕ್ತಿಯಿಂದ ಭಿನ್ನವಾದುದು.

ಈ ಗ್ರಂಥದಲ್ಲಿ ಉಪಮಾನದಿಂದ ಉಪಮೇಯವು ತಿಳಿಯುವುದು ಎಂದು ಹೇಳಿದುದು ಮೇಲೆ ಹೇಳಿದ ಲಕ್ಷಣಕ್ಕೆ ವಿರುದ್ಧವಾದಂತೆ ತೋರುವುದು.

*ಹೇತುರೂಪಕ-ಮಾಲಾರೂಪಕಗಳನ್ನು ಹಿಂದೆ ಹೇಳಿದ ಹೇತೂಪಮೆ-ಮಾಲೋಪಮೆಗಳಂತೆಯೆ ತಿಳಿದುಕೊಳ್ಳಬೇಕು.

ನಾಗವರ್ಮನು ಇಲ್ಲಿಯು ದಂಡಿಯನ್ನು ಅನುಸರಿಸಿರುವನು. 'ಮನಸ್ಸಿನಲ್ಲಿ ಒಂದು ಕಲ್ಪನೆಯನ್ನು ಮಾಡಿಕೊಂಡು ಅದು ಹೋಳೆಯುವಂತೆ ಬೇರೊಂದು ವಸ್ತುವನ್ನು ವರ್ಣಿಸುವುದೇ ಸಮಾಸೋಕ್ತಿ'ಯೆಂದು ದಂಡಿಯು ಹೇಳಿದ್ದಾನೆ. ಆದುದರಿಂದ ಮನಸ್ಸಿನಲ್ಲಿ ಮಾಡಿಕೊಂಡುದುದೇ ಉಪಮೇಯವೆಂದು ಗ್ರಹಿಸಿದರೆ ವ್ಯತ್ಯಾಸವೇನೂ ಆಗುವುದಿಲ್ಲ. ದಂಡಿಯು ಕೊಟ್ಟ ಉದಾಹರಣೆಗಳೆಲ್ಲಾ ಮೊದಲು ಹೇಳಿದ ಲಕ್ಷಣಕ್ಕೆ ಸರಿಯಾಗಿರುವುವು.

ಆಕ್ಷೇಪ

ಭಾಮಹ ೨-೬೮; ದಂಡಿ ೨-೧೨೦ ರಿಂದ ೧೬೮; ವಾಮನ ೪-೩-೨೭; ಉದ್ಭಟ ೨-೨; ರುದ್ರಟ ೮-೮೯; ಮಮ್ಮಟ ೧೦-೨೦,೨೧; ರುಯ್ಯಕ ೩೮; ಕುವಲಯ ೭೩ರಿಂದ ೭೫; ಮಾರ್ಗ ೩-೧೦೦.

ಈ ಅಲಂಕಾರವನ್ನು ಬೇರೆ ಬೇರೆ ಆಲಂಕಾರಿಕರು ಬೇರೆ ಬೇರೆ ವಿಧದಲ್ಲಿ ಹೇಳಿದ್ದಾರೆ. ವಾಮನನು 'ಉಪಮಾನಾಕ್ಷೇಪಶ್ಚ ಆಕ್ಷೇಪಃ' ಎಂದು ಸೂತ್ರರೂಪವಾಗಿ ಹೇಳಿದ್ದಾನೆ. ಇದರಲ್ಲಿಯ 'ಆಕ್ಷೇಪ' ಶಬ್ದಕ್ಕೆ 'ಅಲ್ಲಗಳೆಯುವುದು' ಎಂದು ಅರ್ಥಮಾಡಿದರೆ ಇದು ನವೀನರ ಪ್ರತೀಪಾಲಂಕಾರವನ್ನು ಹೋಲುವುದು. ಅದೇ ಶಬ್ದಕ್ಕೆ 'ಊಹಿಸಿಕೊಳ್ಳುವುದು' ಅಥವಾ 'ತಿಳಿದುಕೊಳ್ಳುವುದು' ಎಂದು ಅರ್ಥಮಾಡಿದರೆ ಇದು ಸಮಾಸೋಕ್ತಿಯಾಗುವುದು. ನವೀನರ ಪ್ರಕಾರ ಈ ಅಲಂಕಾರವು ಮುಂದೆ ಹೇಳಿದಂತೆ ಇರುವುದು: **ಹೇಳಬೇಕೆಂದು ಬಯಸಿದ ಅರ್ಥವನ್ನು** (ಹೇಳುವುದಕ್ಕಿಂತ ಪೂರ್ವದಲ್ಲಿ ಅಥವಾ ಹೇಳಿದ ಅನಂತರದಲ್ಲಿ) **ನಿಷೇಧಿಸಿ ಅದರಿಂದ ವಿಶೇಷಾರ್ಥವು ಸೂಚಿತವಾಗುವಂತೆ ವರ್ಣಿಸುವುದು.** ಇಲ್ಲಿ ಬರುವ ನಿಷೇಧವು ನಿಜವಾಗಿಯೂ ನಿಷೇಧವಲ್ಲ; ಆಭಾಸ ಮಾತ್ರ. ಈ ಅಲಂಕಾರವುಂಟಾಗಬೇಕಾದರೆ (೧) ಹೇಳಬೇಕೆಂಬ ಅರ್ಥವೊಂದು ಇರಬೇಕು; (೨) ಅದನ್ನು ವಾಚ್ಯವಾಗಿ ನಿಷೇಧಿಸಬೇಕು; (೩) ಈ ನಿಷೇಧವು ನಿಜವಾಗಿಯೂ ನಿಷೇಧವಾಗಿರಬಾರದು; (೪) ಇದರಿಂದ ವಿಶೇಷಾರ್ಥವೊಂದು ಸೂಚಿತವಾಗಬೇಕು.

ಇಲ್ಲಿ ನಾಗವರ್ಮನು ಇಷ್ಟೆಲ್ಲಾ ಹೇಳದೆ ನಿಷೇಧಾಭಾಸವಷ್ಟೇ **ನಿಷೇಧವೆಂದು** ಹೇಳಿರುವನು. ಇದು ದಂಡಿಯ ಮತ.

ಉದ್ದೇಶಿಸಿದ ಅರ್ಥದ ವಿರುದ್ಧವಾಗಿ ಏನಾದರೊಂದು **ಮಾಡಲಿಕ್ಕೆ ಹೇಳುವುದು ಆಕ್ಷೇಪಾಲಂಕಾರದ** ಎರಡನೆಯ ವಿಧವೆಂದು ಕೆಲ ಆಲಂಕಾರಿಕರು ಹೇಳುತ್ತಾರೆ. ಉದಾ: 'ಎಲೆ ಕಾಂತನೇ ನೀನು ಹೋಗಬೇಕೆಂದರೆ ಹೋಗು. ಆದರೆ ನೀನು

ಇದ್ದಲ್ಲಿಯೇ ನಾನು ಹುಟ್ಟಬೇಕೆಂದು ನನ್ನ ಆಶೆ'; ಎಂದರೆ 'ನೀನು ಹೋದರೆ ನನ್ನ ಪ್ರಾಣವು ಹೋಗುವುದು. ಆದುದರಿಂದ ನೀನು ಹೋಗಬೇಡ' ಎಂದು ಹೇಳಿದಂತೆ.

ಸೂತ್ರ ೧೬೫

ಸಾಮ್ಯ

ರುದ್ರಟ ೮-೧೦೫

ಇಲ್ಲಿ ಉಪಮೇಯವು ಪ್ರಸಿದ್ಧವಾದ ಉಪಮಾನದ ಸಾಮ್ಯವನ್ನು ಪಡೆಯುವುದು; ಆದರೆ ಕೇವಲ ಸಾಮಾನ್ಯಧರ್ಮದಿಂದಲ್ಲ; ಸಾಧಾರಣ ಧರ್ಮದ ಕಾರಣವಾದ ಕ್ರಿಯೆಯಿಂದ. ಉದಾಹರಣೆಗಾಗಿ ೭೦೨ ನೆಯ ಪದ್ಯದಲ್ಲಿ ನರಪಾಲಕನು ಉಪಮೇಯ; ಕಲ್ಪಾವನೀಜವು ಉಪಮಾನ. ಈ ಎರಡರಲ್ಲಿ ತೋರುವ ಸಾಮ್ಯವು ಬೇಡಿದ್ದನ್ನು ಕೊಡುವ ಕಾರ್ಯ. ಆದರೆ ಇಲ್ಲಿ ಬೇಡಿದ್ದನ್ನು ಕೊಡುವುದರಲ್ಲಿ ನರಪಾಲಕನೇ ಮಿಗಿಲು ಎಂದು ಕಲ್ಪನೆಯು ಬರುವುದರಿಂದ ಇದು ಪ್ರತೀಪಾಲಂಕಾರದ ಧ್ವನಿಯಾಗಿರುವುದು ಮಾತ್ರ; ಪ್ರತ್ಯೇಕವಾದ ಅಲಂಕಾರವಲ್ಲವೆಂದು ಕೆಲವರು ಹೇಳುವರು.

ಸಂಸ್ಕೃತಆಲಂಕಾರಿಕರಲ್ಲಿ ರುದ್ರಟನೊಬ್ಬನೇ ಈ ಅಲಂಕಾರವನ್ನು ಹೇಳಿರುವನು.

ಪರಾಖ್ಯಾನ

ರುದ್ರಟ ೮-೭೪.

ಇದನ್ನು ರುದ್ರಟನೊಬ್ಬನೇ ಹೇಳಿದ್ದಾನೆ. ಆದರೆ ಅನ್ಯೋಕ್ತಿಯೆಂದು ಕರೆದಿದ್ದಾನೆ.

ಇಲ್ಲಿ ಉಪಮೇಯವನ್ನು ಹೇಳದೆ ಬರಿಯ ಉಪಮಾನವು ವರ್ಣಿಸಲ್ಪಡುವುದು. ಹಾಗೂ ಉಪಮಾನಕ್ಕೆ ಕೊಟ್ಟ ವಿಶೇಷಣಗಳು ಅಸಾಧಾರಣವಾಗಿರುವುವು. ಎಂದರೆ ಉಪಮೇಯಕ್ಕೆ ಸಂಬಂಧಿಸುವುದಿಲ್ಲ. ಆದರೂ ಉಪಮಾನ-ಉಪಮೇಯಗಳ ವೃತ್ತಿಸಾಮ್ಯದಿಂದ ಉಪಮೇಯವು ತಿಳಿದು ಬರುವುದು.

ಪದ್ಯ ೭೦೩ರಲ್ಲಿ ವರ್ಣಿತವಾದುದು ಹಂಸವಾದರೂ ಅದರಿಂದ ನಮಗೆ ತಿಳಿದು ಬರುವುದು ಸಜ್ಜನರ ವೃತ್ತಿ; ಅದನ್ನೇ ಕವಿಯು ಹೇಳಬೇಕೆಂದು ಉದ್ದೇಶಿಸಿರುವುದರಿಂದ ಅದೇ ಉಪಮೇಯವು. ಇದು ಅಪ್ರಸ್ತುತಪ್ರಶಂಸೆಯ ಒಂದು ಮಾದರಿಯೆಂದು ಹೇಳಬಹುದು.

ಸೂತ್ರ ೧೬೬

ದೃಷ್ಟಾಂತ

ರುದ್ರಟ ೮-೯೪; ಉದ್ಭಟ ೬-೮; ಮಮ್ಮಟ ೧೦-೧೬; ರುಯ್ಯಕ ೨೬; ಕುವಲಯ ೫೨; ಜಗನ್ನಾಥ ೩೩೭.

ಇಲ್ಲಿ ಉಪಮೇಯ-ಉಪಮಾನಗಳ ಸಾಮ್ಯವು ಬಿಂಬ-ಪ್ರತಿಬಿಂಬಭಾವದಿಂದ ನಿರ್ದೇಶಿಸಲ್ಪಡುತ್ತದೆ. ಇದು ಪ್ರತಿವಸ್ತೂಪಮೆಯಂತೆ ಕಂಡರೂ ಇದಕ್ಕೂ ಅದಕ್ಕೂ ಭೇದವೆಂದರೆ: (೧) ಪ್ರತಿವಸ್ತೂಪಮೆಯಲ್ಲಿ ಸಾಮಾನ್ಯಧರ್ಮವು ಒಂದೇಯಾಗಿದ್ದರೂ ಬೇರೆಬೇರೆ ಪದಗಳಿಂದ, ಎಂದರೆ ವಸ್ತು-ಪ್ರತಿವಸ್ತುಭಾವದಿಂದ, ಹೇಳಲಾಗುವುದು. ದೃಷ್ಟಾಂತದಲ್ಲಿ ಸಾಮಾನ್ಯಧರ್ಮವು ವಸ್ತುತಃ ಉಪಮಾನ-ಉಪಮೇಯಗಳಲ್ಲಿ ಬೇರೆ ಬೇರೆಯಾಗಿದ್ದು ಬೇರೆ ಬೇರೆ ಶಬ್ದಗಳಿಂದ, ಎಂದರೆ ಬಿಂಬ-ಪ್ರತಿಬಿಂಬಭಾವದಿಂದ, ಹೇಳಲ್ಪಡುವುದು. (೨)ದೃಷ್ಟಾಂತಾಲಂಕಾರವನ್ನು ವೈಧರ್ಮ್ಯದಿಂದಲೂ ಹೇಳಬಹುದು.

ನಾಗವರ್ಮನು (ಸೂ. ೧೬೦) ಉಪಮಾವಿಭಾಗಗಳನ್ನು ವಿವರಿಸುವಾಗ ನಿದರ್ಶನವೆಂದು ಹೇಳಿರುವನಾದರೂ ಇಲ್ಲಿ ಲಕ್ಷಣವನ್ನು ಹೇಳುವಾಗ ದೃಷ್ಟಾಂತವೆಂದು ನಿರ್ದೇಶಿಸಿರುವುದರಿಂದ ಇವನ ಮತದಲ್ಲಿ ಇವೆರಡೂ ಒಂದೇ ಅಲಂಕಾರವೆಂದು ತೋರುವುದು. ಆದರೆ ನಿದರ್ಶನವೆಂಬುದು ದೃಷ್ಟಾಂತದಿಂದ ಬೇರೆಯಾದ ಅಲಂಕಾರವೆಂದು ಅನೇಕ ಆಲಂಕಾರಿಕರು ಗ್ರಹಿಸಿದ್ದಾರೆ. ೭೦೫ನೆಯ ಪದ್ಯವು ದೃಷ್ಟಾಂತಕ್ಕೆ ತಕ್ಕ ಉದಾಹರಣೆಯಾಗಿರುವಂತೆ ೭೦೬ನೆಯದು ನಿದರ್ಶನಕ್ಕೆ ಉತ್ತಮವಾದ ಲಕ್ಷ್ಯವಾಗಿರುವುದು. ನಿದರ್ಶನಕ್ಕೂ ದೃಷ್ಟಾಂತಕ್ಕೂ ಇರುವ ಭೇದವನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು: ದೃಷ್ಟಾಂತದಲ್ಲಿ ಎರಡು ಬೇರೆ ಬೇರೆ ವಾಕ್ಯಗಳಿದ್ದು ಅವುಗಳ ಅರ್ಥಕ್ಕೆ ಪರಸ್ಪರ ಸಹಾಯವು ಬೇಕಾಗಿಲ್ಲ; ಹಿಂದಣಿಂದ ಅವುಗಳೊಳಗಿನ ಸಾಮ್ಯವು ಕಂಡು ಬರುವುದು. ಆದರೆ ನಿದರ್ಶನದಲ್ಲಿ ಒಂದು ವಾಕ್ಯದ ಅರ್ಥದೊಡನೆ ಇನ್ನೊಂದನ್ನು ಸಂಬಂಧಿಸಿಯೆ ಹೇಳುವುದರಿಂದ ಅವುಗಳೊಳಗಿನ ಸಾಮ್ಯದ ಮೂಲಕವಾಗಿಯೆ ಹೀಗೆ ಸಂಬಂಧಮಾಡಿ ಹೇಳಲಾಗಿದೆಯೆಂದು ತಿಳಿದುಬರುತ್ತದೆ. 'ಪತಿಯನ್ನು ಅನುಸರಿಸುವುದು ಪತಿವ್ರತೆಯ ಧರ್ಮವೆಂಬುದನ್ನು ತೋರಿಸುವುದಕ್ಕಾಗಿಯೆ ಸಂಧ್ಯಾಂಗನೆಯು ಸೂರ್ಯನ ಹಿಂದೆ ಹಿಂದೆ ಹೋದಳು' ಎಂದರೆ ನಿದರ್ಶನವಾಗುವುದು. 'ಪತಿವ್ರತೆಯಾದ ಸಂಧ್ಯಾಂಗನೆಯು ಸೂರ್ಯನ ಹಿಂದೆ ಹಿಂದೆ ಹೋದಳು; ಸೀತೆಯು ರಾಮನನ್ನು ಅನುಸರಿಸಲಿಲ್ಲವೆ?' ಎಂದರೆ ದೃಷ್ಟಾಂತವಾಗುವುದು. 'ಸಂಧ್ಯಾಂಗನೆಯು ಸೂರ್ಯನ ಹಿಂದೆ ಹಿಂದೆ ಹೋದಳು; ಪತಿವ್ರತೆಯರು ತಮ್ಮ ಪತಿಗಳನ್ನು ಅನುಸರಿಸುತ್ತಾರೆ' ಎಂದರೆ ಅರ್ಥಾಂತರನ್ಯಾಸವಾಗುವುದು. 'ಪತಿವ್ರತೆಯರು ತಮ್ಮ ಪತಿಗಳನ್ನು ಅನುಸರಿಸುತ್ತಾರೆ; ಸೂರ್ಯನ ಹಿಂದೆ ಹಿಂದೆ ಹೋಗುವ ಸಂಧ್ಯಾಂಗನೆಯಂತೆ' ಎಂದರೆ ಜಗನ್ನಾಥನು ಹೇಳುವ 'ಉದಾಹರಣ'ವೆಂಬ ಇನ್ನೊಂದು ಅಲಂಕಾರ

ವಾಗುವುದು. ‘ ಉದಾಹರಣ ’ದ ಲಕ್ಷಣವೆಂದರೆ : ಒಂದು ಸಾಮಾನ್ಯವಾದ ಅರ್ಥ ವನ್ನು ಮೊದಲು ಹೇಳುವುದು, ಅದನ್ನು ಸಮರ್ಥಿಸುವುದಕ್ಕಾಗಿ ‘ ಅಂತೆ ’ (ಇಲ್ಲವೆ ಅದೇ ಅರ್ಥದ ಯಾವುದಾದರೊಂದು) ಶಬ್ದದ ಪ್ರಯೋಗವಮಾಡಿ ಒಂದು ವಿಶೇಷ (ಉದಾಹರಣ)ವನ್ನು ಹೇಳುವುದು. (ನೋ. ಜಗನ್ನಾಥ : ೨೧೩.)

೭೦೫ — ರುದ್ರಟ ೮-೯೫.

೭೦೬ — ಇದು ಕೆಳಗಿನ ಪದ್ಯದ ಅನುವಾದವಾಗಿದೆ.

ದಿವಸೋನುಮಿತ್ರಮುಗಮದ್ವಿಲಯಂ । ಕಿಮಿಹಾಸ್ಯತೇ ಬತ ಮಯಾಬಲಯಾ
ರುಚಿಭರ್ತುರಸ್ಯ ವಿರಹಾಧಿಗಮಾ । ದಿತಿ ಸಂಧ್ಯಯಾಪಿ ಸಪದಿ ವ್ಯಗಮಿ

ಶಿಶುಪಾಲವಧ ೯-೧೭

ಉತ್ತರ

ರುದ್ರಟ ೮- ೭೨; ಮಮ್ಮಟ ೧೦-೩೫, ೩೬; ರುಯ್ಯಕ ೭೪; ಕುವಲಯ ೧೪೯, ೧೫೦.

ಈ ಅಲಂಕಾರವು ಎರಡು ವಿಧವಾಗಿರುವುದು. (೧) ಹೇಳಿದ ಉತ್ತರದಿಂದ ಪ್ರಶ್ನೆಯ ಕಲ್ಪನೆಯನ್ನು ಮಾಡಿಕೊಳ್ಳಲಿಕ್ಕೆ ಬರುವಂತಹುದು; (೨) ಪ್ರಶ್ನೆಗಳು ಅನೇಕವಾಗಿದ್ದು ಅವುಗಳಿಗೆ (ಸಾಧಾರಣವಾಗಿ ಊಹಿಸಲು ಬಾರದಂತಹ) ಉತ್ತರ ಗಳೂ ಅನೇಕವಾಗಿರುವುದು.

ಈ ಅಲಂಕಾರದ ಮೊದಲನೆಯ ವಿಧವು ಅನುಮಾನಾಲಂಕಾರದಂತೆ ತೋರಿ ದರೂ ಅದರಿಂದ ಭಿನ್ನವಾದುದು. ಅನುಮಾನದಲ್ಲಿ ಸಾಧ್ಯ-ಸಾಧನಗಳೆರಡೂ ವಾಚ್ಯ ವಾಗಿರುವಂತೆ ಇಲ್ಲಿ ಪ್ರಶ್ನೋತ್ತರಗಳೆರಡೂ ವಾಚ್ಯವಾಗಿರದೆ ಉತ್ತರವೊಂದೇ ಇರುತ್ತದೆ. ಇದು ಕಾವ್ಯಲಿಂಗದಿಂದಲೂ ಭಿನ್ನವಾದುದು: ಏಕೆಂದರೆ ಇಲ್ಲಿ ಉತ್ತರವು ಪ್ರಶ್ನೆಯ ಕಾರಕಹೇತುವಲ್ಲ; ಎಂದರೆ ಪ್ರಶ್ನೆಯನ್ನು ಜನಿಯಿಸುವುದಿಲ್ಲ, ಸೂಚಿಸುತ್ತದೆ ಮಾತ್ರ. ಆದುದರಿಂದ ಅದು ಜ್ಞಾಪಕಹೇತುವಾಗಿರುತ್ತದೆ.

ಈ ಅಲಂಕಾರದ ಎರಡನೆಯ ವಿಧವು ಪರಿಸಂಖ್ಯೆಯನ್ನು ಹೋಲುತ್ತಿದ್ದರೂ ಅದರಿಂದಲೂ ಭಿನ್ನವಾದುದು. ಪರಿಸಂಖ್ಯೆಯಲ್ಲಿ ಪ್ರಶ್ನೆಗೆ ಉತ್ತರಗಳು ಅನೇಕವಿದ್ದು ಒಂದನ್ನು ಮಾತ್ರ ಪ್ರಸ್ತುತಕ್ಕೆ ಬೇಕಾದುದೆಂದು ನಿಯಮಿಸಲಾಗುತ್ತದೆ. ಆದರೆ ಇಲ್ಲಿ ಉತ್ತರವು ಮೊದಲೇ ಗೊತ್ತಿರುವುದು ಅಸಂಭವ.

ಇಲ್ಲಿ ಒಂದೇ ಪ್ರಶ್ನೆ ಒಂದೇ ಉತ್ತರವಿದ್ದರೂ ಅವೆರಡೂ ಭಾವಗರ್ಭಿತ ವಾಗಿದ್ದರೆ ಸಾಕು ಈ ಅಲಂಕಾರವಾಗುವುದೆಂದು ನವೀನರು ಹೇಳುವರು. ಒಂದು ಪ್ರಶ್ನೆಗೆ ಅನೇಕ ಉತ್ತರಗಳಿದ್ದರೂ ಈ ಅಲಂಕಾರವಾಗುವುದು. ಪ್ರಶ್ನೆಯಲ್ಲಿಯೇ ಉತ್ತರವು ಶ್ಲೇಷಘಟಿತವಾಗಿದ್ದರೂ ಈ ಅಲಂಕಾರವಾಗುವುದು.

೭೦೭ — ರುದ್ರಟ ೮-೭೩.

ಸೂತ್ರ ೧೬೭

ಸಂಶಯ

ಭಾಮಹ ೩-೪೩; ವಾಮನ ೪-೩-೧೧; ಉದ್ಭಟ ೬-೨; ರುದ್ರಟ ೮-೫೯; ಮಮ್ಮಟ ೧೦-೫; ರುಯ್ಯಕ ೧೭; ಕುವಲಯ ೮ ರಿಂದ ೧೦; ಜಗನ್ನಾಥ ೨೫೬.

ಇದನ್ನೇ ಕೆಲವರು **ಸಸಂದೇಹ**ವೆಂದೂ ಕೆಲವರು **ಸಂದೇಹ**ವೆಂದೂ ಹೇಳಿದ್ದಾರೆ. ದಂಡಿಯು ಇದನ್ನು **ಸಂಶಯೋಪಮೆ** (೨-೨೬) ಎಂದು ಹೇಳಿ ಹಾಗೆ ಹೇಳಿರುವೆನೆಂದು (೨-೩೫೮ರಲ್ಲಿ) ನೆನಪು ಮಾಡಿದ್ದಾನೆ.

ವರ್ಣನೀಯವಾದ ವಸ್ತುವನ್ನು ಬೇರೊಂದು ವಸ್ತುವೋ ಎಂಬ ಸಂದೇಹವನ್ನು ಕಲ್ಪಿಸಿ ವರ್ಣಿಸುವುದೇ ಈ ಅಲಂಕಾರ. ಸಂದೇಹವು ಸಾದೃಶ್ಯಮೂಲಕವಾಗಿರಬೇಕು; ಕವಿಕಲ್ಪಿತವೂ ಚಮತ್ಕಾರಜನಕವೂ ಆಗಿರಬೇಕು.

ಮಮ್ಮಟ-ರುಯ್ಯಕ ಮೊದಲಾದವರು ಇದರಲ್ಲಿ ಮೂರು ಬಗೆಗಳನ್ನು ಮಾಡಿದ್ದಾರೆ. (೧) **ಶುದ್ಧಸಂದೇಹ** - ಇಲ್ಲಿ ಮೊದಲಿಂದ ಕೊನೆಯವರೆಗೆ ಸಂದೇಹವೇ ಉಳಿಯುವುದು. ಇದರಲ್ಲಿ ಉಪಮೇಯವು ಉಪಮಾನದಿಂದ ಬೇರೆ ಎಂಬುದಕ್ಕೆ ಬೇಕಾದ ಭೇದವನ್ನು ಹೇಳಿರುವುದಿಲ್ಲ. ಇದಕ್ಕೆ ಪ್ರಸಿದ್ಧ ಉದಾಹರಣೆಯೆಂದರೆ ಇದೇ ೪೨. (೨) **ನಿಶ್ಚಯಗರ್ಭಸಂದೇಹ** - ಇಲ್ಲಿ ಉಪಮೇಯಕ್ಕೆ ಒಂದು ಉಪಮಾನದ ಹೋಲಿಕೆಯಿಂದ ಸಂದೇಹವನ್ನು ಹೇಳಿ ಆಮೇಲೆ ಅವುಗಳ ಭೇದವನ್ನು ಹೇಳಿ ಆ ಸಂದೇಹವನ್ನು ನಿವಾರಿಸಿ ಅನಂತರ ಮತ್ತೊಂದು ಉಪಮಾನದೊಡನೆ ಸಂದೇಹವನ್ನೆತ್ತುವುದು. ಅದರ ಭೇದವನ್ನೂ ಹೇಳಿ ಮೂರನೆಯದರೊಡನೆ ಸಂದೇಹವನ್ನು ಕಲ್ಪಿಸುವುದು ಇತ್ಯಾದಿ; ಕೊನೆಗೆ ಸಂದೇಹವೇ ಉಳಿಯುವುದು. (೩) **ನಿಶ್ಚಯಾಂತಸಂದೇಹ** – ಇಲ್ಲಿ ಕೊನೆಗೆ ಎಲ್ಲಾ ಉಪಮಾನಗಳಿಂದ ಇದು ಬೇರೆಯೆಂದು ಭೇದದಿಂದ ನಿಶ್ಚಯಿಸುವುದು.

ಭ್ರಮ

ರುದ್ರಟ ೮-೮೭; ಮಮ್ಮಟ ೧೦-೪೬; ರುಯ್ಯಕ ೧೮; ಕುವಲಯ ೨೪; ಜಗನ್ನಾಥ ೨೬೬

ಇದನ್ನು **ಭ್ರಾಂತಿಮಾನ್** ಎಂದೂ ಅನೇಕ ಆಲಂಕಾರಿಕರು ಕರೆದಿದ್ದಾರೆ. ಕುವಲಯಾನಂದದಲ್ಲಿ ಭ್ರಾಂತಿ ಎಂದು ಹೇಳಿದೆ.

ಹೋಲಿಕೆಯ ಮೂಲಕವಾಗಿ (ಪ್ರಸ್ತುತವಾದ) **ಒಂದು ವಸ್ತುವನ್ನು ಬೇರೊಂದು ವಸ್ತುವೆಂದು ಗ್ರಹಿಸುವುದೇ ಈ ಅಲಂಕಾರವು.** ಈ ಬಗೆಯ ತಪ್ಪು

ತಿಳುವಳಿಕೆಗೆ ಹೋಲಿಕೆಯೇ ಮುಖ್ಯ ಕಾರಣ. ಆದರೆ ಅದು ಕವಿಕಲ್ಪಿತವಾಗಿರಬೇಕು. ಇಂತಹ ಭ್ರಾಂತಿಯು ಪಶು-ಪಕ್ಷ್ಯಾದಿಗಳಲ್ಲಿ ಉಂಟಾಯಿತೆಂದು ವರ್ಣಿಸುವುದರಲ್ಲಿ ಹೆಚ್ಚು ವೈಚಿತ್ರ್ಯವಿರುವುದು.

ರೂಪಕದಲ್ಲಿ ಉಪಮಾನ-ಉಪಮೇಯಗಳೆರಡೂ ಬೇರೆ ಬೇರೆಯೆಂಬ ಕಲ್ಪನೆ ಇರುತ್ತದೆ; ಸಾದೃಶ್ಯದ ಮೂಲಕ ಎರಡೂ ಒಂದೇ ಎಂದು ಹೇಳಲಾಗುತ್ತದೆ. ಆದರೆ ಇಲ್ಲಿ ಉಪಮೇಯೋಪಮಾನಗಳನ್ನು ಬೇರೆ ಬೇರೆ ಎಂದು ತಿಳಿಯದೆ ಉಪಮಾನವೇ ಉಪಮೇಯವೆಂಬ ತಪ್ಪು ತಿಳುವಳಿಕೆಯಿರುತ್ತದೆ. ಆದುದರಿಂದ ಇದು ರೂಪಕದಿಂದ ಭಿನ್ನವಾದುದು. ಇದರಲ್ಲಿ ಸಂದೇಹನೇ ಇಲ್ಲದಿರುವುದರಿಂದ ಇದು ಸಂದೇಹಾಲಂಕಾರದಿಂದಲೂ ಭಿನ್ನವಾದುದು.

ಅಪಹ್ನುತಿ

ಭಾಮಹ ೩-೨೧; ದಂಡಿ ೨-೩೦೪ ರಿಂದ ೩೦೯; ವಾಮನ ೪-೩-೫; ಉದ್ಭಟ ೫-೩; ರುದ್ರಟ ೮-೫೭; ಮಮ್ಮಟ ೧೦-೧೦; ರುಯ್ಯಕ ೨೦; ಕುವಲಯ ೨೬ ರಿಂದ ೩೧; ಜಗನ್ನಾಥ ೨೭೮; ಮಾರ್ಗ ೩-೧೮೩.

ಭೂತಾರ್ಥ = ಪ್ರಾಕರಣಿಕಾರ್ಥ = ಉಪಮೇಯ.

ಇಲ್ಲಿ ನಾಗವರ್ಮನು ಭಾಮಹನ ಶಬ್ದಗಳನ್ನು ಪ್ರಯೋಗಿಸಿದ್ದರೂ ದಂಡಿಯು ಹೇಳುವ ಲಕ್ಷಣಗಳನ್ನೇ ಹೇಳುವಂತೆ ತೋರುತ್ತದೆ. ಆವುದಾದರೊಂದನ್ನು ಅಪಹ್ನುತಿ ಮಾಡಿ ಎಂದರೆ ಅಲ್ಲಗಳೆದು ಮತ್ತೊಂದನ್ನು ಸ್ಥಾಪಿಸುವುದು ಈ ಅಲಂಕಾರವೆಂದು ಹೇಳಿದ್ದಾನೆ. ಅವನು ಹೇಳಿದ ಉದಾಹರಣೆಯಾದರೂ ಅವನ ಲಕ್ಷಣಕ್ಕೆ ಸರಿಯಾಗಿದೆ. '**ನ ಪಂಚೇಷುಃ ಸ್ಮರಸ್ತಸ್ಯ ಸಹಸ್ರಂ ಪತ್ರಿಣಾ ಇತಿ**' (ಕಾಮನ ಬಾಣಗಳು ಐದಲ್ಲ; ಸಾವಿರ). ಆದರೆ ಭಾಮಹನೂ ಅವನನ್ನು ಅನುಸರಿಸಿದ ಉದ್ಭಟನೂ ಹೇಳುವುದನ್ನು ಪರಿಶೀಲಿಸಿದರೆ- ಉಪಮೇಯವನ್ನು ಅಲ್ಲಗಳೆದು ಅದರ ಸ್ಥಾನದಲ್ಲಿ ಉಪಮಾನವನ್ನು ಸ್ಥಾಪಿಸಿದರೆ ಮಾತ್ರ ಈ ಅಲಂಕಾರವಾಗುವುದು. ಅವರಂತೆಯೇ '**ಉಪಮೇಯಮಸತ್ಯಂ ಕೃತ್ವಾ ಉಪಮಾನಂ ಯತ್ ಸತ್ಯತಯಾ ಸ್ಥಾಪ್ಯತೇ ಸಾ ತು ಅಪಹ್ನುತಿಃ**' ಎಂದು ಮಮ್ಮಟನೂ ಹೇಳುತ್ತಾನೆ. ಈ ಬಗೆಯ ಅಲಂಕಾರವನ್ನು ದಂಡಿಯು 'ತತ್ತ್ವಾಪಹ್ನವರೂಪಕ' ವೆಂದು ಬಗೆದಂತೆ ೨-೯೪, ೯೫ರಲ್ಲಿ ಕೊಟ್ಟ ಉದಾಹರಣೆಯಿಂದ ಕಂಡುಬರುತ್ತದೆ.

ನವೀನಾಲಂಕಾರಿಕರೆಲ್ಲಾ ಮಮ್ಮಟನನ್ನೇ ಅನುಸರಿಸಿದ್ದಾರೆ. ಅವನು ಈ ಅಲಂಕಾರದಲ್ಲಿ ಶಾಬ್ದಿ, ಆರ್ಥಿ ಎಂದು ಎರಡು ವಿಭಾಗಗಳನ್ನು ಮಾಡಿದ್ದಾನೆ. ಮೊದಲನೆಯದರಲ್ಲಿ ಅಪಹ್ನುತಿಯನ್ನು ತಿಳಿದುಕೊಳ್ಳಬೇಕಾಗುತ್ತದೆ. ರುಯ್ಯಕನು

ಇವರಲ್ಲಿ ಮೂರು ವಿಧಗಳನ್ನು ಹೇಳಿದ್ದಾನೆ: (೧) ಮೊದಲು ಉಪಮೇಯವನ್ನು ಅಲ್ಲಗಳೆದು ಆಮೇಲೆ ಉಪಮಾನವನ್ನು ಆರೋಪಿಸುವುದು; (೨) ಮೊದಲು ಉಪಮಾನವನ್ನು ಆರೋಪಿಸಿ ಆಮೇಲೆ ಉಪಮೇಯವನ್ನು ಅಲ್ಲಗಳೆಯುವುದು; (೩) ' ಛಲ ' ಮೊದಲಾದ ಶಬ್ದಗಳಿಂದ ಅಪಹ್ನುತಿಯನ್ನು ತಿಳಿಸುವುದು. ಚಂದ್ರಾಲೋಕಕಾರನು ಇದರಲ್ಲಿ ಐದು ಭಾಗಗಳನ್ನೂ ಕುವಲಯಾನಂದಕಾರನು ಆರು ಭಾಗಗಳನ್ನೂ ಮಾಡಿರುತ್ತಾರೆ.(೧) **ಶುದ್ಧಾಪಹ್ನುತಿ**-ಶುದ್ಧ 'ಸತ್ಯ' ವನ್ನು ಅಲ್ಲಗಳೆದು ಅಸತ್ಯವನ್ನು ಸ್ಥಾಪಿಸುವುದು. ಇದನ್ನೇ ಒಡೆದು ಕುವಲಯಾನಂದಕಾರನು ಎರಡು ಭಾಗಗಳನ್ನು ಮಾಡಿದ್ದಾನೆ: (ಅ) ಶುದ್ಧಾಪಹ್ನುತಿ (ಮೇಲಿನಂತೆಯೇ) (ಆ) **ಹೇತ್ವಾಪಹ್ನುತಿ** ಅದಕ್ಕೆ ಕಾರಣವನ್ನು ಕೊಡುವುದು. (೨) **ಪರ್ಯಸ್ತಾಪಹ್ನುತಿ** — ಒಂದು ವಸ್ತುವಿನ ಧರ್ಮವನ್ನು ಅಲ್ಲಗಳೆದು ಆ ಧರ್ಮವನ್ನು ಎರಡನೆಯ ವಸ್ತುವಿನಲ್ಲಿ ಆರೋಪಿಸುವುದು. (೩) **ಭ್ರಾಂತಾಪಹ್ನುತಿ**- ಮೊದಲು ಭ್ರಾಂತಿಯನ್ನು ಉಂಟು ಮಾಡಿ ಅದನ್ನು ಅಲ್ಲಗಳೆಯುವುದು (ಎಂದರೆ ಸತ್ಯವನ್ನು ಸ್ಥಾಪಿಸುವುದು). (೪) **ಛೇಕಾಪಹ್ನುತಿ**-ರಹಸ್ಯವಾಗಿದ್ದುದನ್ನು ಎರಡನೆಯವರೊಡನೆ ಹೇಳುತ್ತಿದ್ದಂತೆ ಅದು ಬೇರೊಬ್ಬರಿಗೆ ತಿಳಿದಿದೆ ಎಂದು ಗೊತ್ತಾದಾಗ ಅದನ್ನು ಜಾಣತನದಿಂದ ಅಲ್ಲಗಳೆಯುವುದು. (ಸಾಹಿತ್ಯ ದರ್ಪಣಕಾರನು ಇದನ್ನು ಕಿಂಚಿತ್ ಭೇದದಿಂದ ಅಪಹ್ನುತಿಯ ಬೇರೊಂದು ಪ್ರಕಾರವೆಂದು ಹೇಳಿದ್ದಾನೆ.) (೫) **ಕೈತವಾಪಹ್ನುತಿ** — ' ವ್ಯಾಜ, ಮಿಷ, ಛಲ ' ಮೊದಲಾದ ಶಬ್ದಗಳಿಂದ ಅಪಹ್ನುತಿಯನ್ನು ಹೇಳುವುದು.

೭೧೨ — ಭಾಮಹ ೩-೨೨

ಸೂತ್ರ ೧೬೪
ವ್ಯಪದೇಶ

ನ್ಯಗ್ ಭಾವ = ತಿರಸ್ಕಾರ

ಇದು ಬೇರೊಂದು ಅಲಂಕಾರವಲ್ಲ; ಮೇಲೆ ಹೇಳಿದ ಕೈತವಾಪಹ್ನುತಿಯೇ ಎಂದು ತಿಳಿಯಬೇಕು.

ಸ್ಮರಣ

ರುದ್ರಟ ೮-೧೦೯; ಮಮ್ಮಟ ೧೦-೪೬; ರುಯ್ಯಕ ೧೪; ಕುವಲಯ ೨೪; ಜಗನ್ನಾಥ ೨-೬.

ಆವುದಾದರೊಂದು ವಸ್ತು ಮುಂತಾದುದರ ಜ್ಞಾನ*ದಿಂದ ಅಂತಹದೆ

---

* ಜ್ಞಾನ: ನಮಗೆ ಪದಾರ್ಥಜ್ಞಾನವು ಎರಡು ರೀತಿಯಿಂದಾಗುವುದೆಂದು ನ್ಯಾಯಶಾಸ್ತ್ರಜ್ಞರು ಹೇಳುತ್ತಾರೆ: (೧) **ಅನುಭವ**: ಎಂದರೆ ಇಂದ್ರಿಯಗಳ ದ್ವಾರಾ ಆಗುವ ಪ್ರತ್ಯಕ್ಷ ಜ್ಞಾನ. ಇದರಿಂದ ನಮ್ಮ ಮನಸ್ಸಿನ ಮೇಲೆ ' ಸಂಸ್ಕಾರ ' ಉಂಟಾಗುವುದು; ಎಂದರೆ ಅದರ ನೆನಪು ನಮ್ಮಲ್ಲಿ ಉಳಿಯುವುದು; (೨) **ಸ್ಮೃತಿ**: ಒಮ್ಮೆ ನಮಗೆ ಅನುಭವವಾದ ಜ್ಞಾನವನ್ನು ನಾವು ಬೇಕಾದಾಗ ನೆನಪುಮಾಡಿಕೊಳ್ಳಬಹುದು. ಇಲ್ಲಿ ಜ್ಞಾನವೆಂದು ಹೇಳಿದಾಗ ಈ ಎರಡೂ ವಿಧದ ಜ್ಞಾನವೆಂದು ತಿಳಿಯತಕ್ಕದ್ದು.

ಇನ್ನೊಂದು ಪದಾರ್ಥವನ್ನು ನೆನೆಯುವುದು ಸ್ಮೃತಿ ಅಥವಾ ಸ್ಮರಣಾಲಂಕಾರವು. ಇಲ್ಲಿ ಸಾದೃಶ್ಯವು ಮುಖ್ಯವಾದುದು. ಸಾದೃಶ್ಯವಿಲ್ಲದೆ ಕೇವಲ ವಿಪರೀತವಾದುದರ ಕಲ್ಪನೆಯಾದರೂ ಈ ಅಲಂಕಾರವಾಗುವುದೆಂದು ರಾಘವಾನಂದ ಎಂಬುವನ ಮತವೆಂದು ಸಾಹಿತ್ಯದರ್ಪಣದಲ್ಲಿ ಹೇಳಿದೆ. ಆದರೆ ಇದನ್ನು ಆಲಂಕಾರಿಕರು ಒಪ್ಪುವಂತೆ ತೋರುವುದಿಲ್ಲ.

ಸೂತ್ರ ೧೬೯
ಪ್ರತೀಪ

ರುದ್ರಟ ೮-೭೬; ಮಮ್ಮಟ ೧೦-೪೭; ರುಯ್ಯಕ ೬೯; ಕುವಲಯ ೧೨ ರಿಂದ ೧೬; ಜಗನ್ನಾಥ ೪೯೫.

ಇಲ್ಲಿ ಪ್ರತೀಪವೆಂದು ಹೇಳಿದ ಅಲಂಕಾರವು ರುದ್ರಟನ ಮತಾನುಸಾರವಾಗಿರುತ್ತದೆ. ಈ ಅಲಂಕಾರದಲ್ಲಿ ಉಪಮೇಯವನ್ನು (ಕೆಲವೊಂದು ಸಂದರ್ಭದಲ್ಲಿ) ಉಪಮಾನಕ್ಕೆ ಸರಿಯೆಂದು ಹೇಳಿ ಉಪಮೇಯದ ಬಗ್ಗೆ ಕರುಣೆಯನ್ನಾಗಲೀ ನಿಂದೆಯನ್ನಾಗಲೀ ಹುಟ್ಟಿಸುವ, ಆದರೆ ಒಟ್ಟಿನಲ್ಲಿ ಉಪಮೇಯದ ಉತ್ಕೃಷ್ಟತೆಯನ್ನೇ ಕೊನೆಯಲ್ಲಿ ಸ್ಥಾಪಿಸುವ, ಉದ್ದೇಶವಿರುವುದು. ೭೧೮ರಲ್ಲಿ "ನಿನ್ನ ನಿಷ್ಕಳಂಕವಾದ ಮುಖವು ಚಂದ್ರನ ಹಾಗೆ ಕಾಣಿಸುವುದಲ್ಲ! (ಪಾಪ! ಹಾಗೇಕೆ?); ಈಗ ಕಪೋಲಗಳು ಕಣ್ಣಿನ ಕಾಡಿಗೆಯ ನೀರಿನಿಂದ ಮಲಿನವಾದುದೇ ಕಾರಣ" ಎಂದು ಯಾವಾಗಲೂ 'ಅಮಲಿನವಾಗಿರುವ' ಮುಖದ ಶ್ರೇಷ್ಠತೆಯನ್ನು ಸ್ಥಾಪಿಸಿರುವುದು.

ಪ್ರತೀಪವೆಂಬ ಅಲಂಕಾರವನ್ನು ಅನೇಕ ಆಲಂಕಾರಿಕರು ಕೆಲಮಟ್ಟಿಗೆ ಬೇರೆ ವಿಧವಾಗಿ ಹೇಳುತ್ತಾರೆ. ಪ್ರಸಿದ್ಧವಾದ ಉಪಮಾನ ವಸ್ತುಗಳನ್ನು ಉಪಮೇಯ ವಸ್ತುಗಳಾಗಿ ಪ್ರಯೋಗಿಸುವುದು ಅಥವಾ ಅಂತಹ ಉಪಮಾನ ವಸ್ತುವಿನಿಂದ ಯಾವ ಪ್ರಯೋಜನವೂ ಇಲ್ಲ. ಉಪಮೇಯ ವಸ್ತುವೇ ಉಪಮಾನದ ಕೆಲಸವನ್ನು ಮಾಡುವುದೆಂದು ವರ್ಣಿಸುವುದು ಈ ಅಲಂಕಾರದ ಲಕ್ಷಣವಾಗಿದೆ. ಇದರಲ್ಲಿ ಅನೇಕ ಭೇದಗಳನ್ನು ಕಲ್ಪಿಸಿದ್ದಾರೆ. (ನೋ. ಕುವಲಯಾನಂದ ೧೨ ರಿಂದ ೧೬.) ಉದಾ: ಇದೇ ೬೭೨.

೭೧೮ — ರುದ್ರಟ ೮-೭೭. **೭೧೯** — ರುದ್ರಟ ೮-೭೮

ಸಮಯೋಗ (ಅಥವಾ ತುಲ್ಯಯೋಗಿತೆ)

ಭಾಮಹ ೩-೨೭; ದಂಡಿ ೨-೩೩೦; ವಾಮನ ೪-೩-೨೬; ಉದ್ಭಟ ೫-೭; ಮಮ್ಮಟ ೧೦-೧೮; ರುಯ್ಯಕ ೨೩; ಕುವಲಯ ೪೪ರಿಂದ ೪೭; ಜಗನ್ನಾಥ ೩೧೭; ಮಾರ್ಗ ೩-೯೬.

ಇದನ್ನು ಸಂಸ್ಕೃತ ಆಲಂಕಾರಿಕರು ತುಲ್ಯಯೋಗಿತೆಯೆಂದು ಕರೆದಿದ್ದಾರೆ. ಇಲ್ಲಿ ನಾಗವರ್ಮನು ದಂಡಿಯನ್ನೇ ಅನುಸರಿಸಿದಂತೆ ತೋರುತ್ತದೆ. ಪ್ರಸ್ತುತ ವಸ್ತುವನ್ನು

ಸ್ತುತಿಸಬೇಕು ಅಥವಾ ನಿಂದಿಸಬೇಕು ಎಂಬ ದೃಷ್ಟಿಯಿಂದ ಅದಕ್ಕನುಕೂಲವಾಗುವಂತೆ ಆ ವಸ್ತುವಿನ ಗುಣಗಳನ್ನಾಯ್ದುಕೊಂಡು ಅಂತಹ ಗುಣಗಳಲ್ಲಿ ಉತ್ಕೃಷ್ಟವಾದ ಉಪಮಾನದೊಡನೆ ಸರಿಮಾಡಿ ಹೇಳುವುದೇ ಈ ಅಲಂಕಾರವೆಂದು ದಂಡಿಯು ಹೇಳಿದ್ದಾನೆ. ಇದು ನವೀನರ ಮತದಂತೆ 'ದೀಪಕಾಲಂಕಾರ'ವೇ ಆಗುವುದು; ಸ್ತುತಿ ಅಥವಾ ನಿಂದೆಯ ಉದ್ದೇಶವು ಹೆಚ್ಚಾಗಿ ಇದೆಯೆಂದು ಹೇಳಬಹುದು.

ಉದ್ಭಟ-ಮಮ್ಮಟಾದಿಗಳ ಮತದಂತೆ **ಕೇವಲ ಪ್ರಸ್ತುತಗಳು ಅಥವಾ ಕೇವಲ ಅಪ್ರಸ್ತುತಗಳು ಅನೇಕವಿದ್ದು ಅವುಗಳ ಸಮಾನಧರ್ಮವನ್ನು ಒಂದೇ ಸಾರೆ ಹೇಳುವುದೇ ಈ ಅಲಂಕಾರವು.** ಇಲ್ಲಿ ಬರಿಯ ಪ್ರಸ್ತುತವಸ್ತುಗಳು ಇಲ್ಲವೆ ಬರಿಯ ಅಪ್ರಸ್ತುತವಸ್ತುಗಳು ಇರುವುದರಿಂದ ಇದು ದೀಪಕದಿಂದ ಭಿನ್ನವಾದುದು. ದೀಪಕದಲ್ಲಿ ಇದ್ದಂತೆ ಇದರಲ್ಲಿ ಉಪಮಾನ-ಉಪಮೇಯಭಾವವಿರುವುದಿಲ್ಲ; ಅಥವಾ ಇರುವುದೆಂದು ಗ್ರಹಿಸಿದರೂ ದೀಪಕದಲ್ಲಿ ಪ್ರಸ್ತುತಾಪ್ರಸ್ತುತಗಳ ನಡುವೆ ನಿಯತವಾಗಿ ಇರುವಂತೆ ಇಲ್ಲಿ ಇರುವುದಿಲ್ಲ; ಐಚ್ಛಿಕವಾಗಿ ಇರುತ್ತದೆ. ಹೇಳಿದ ವಸ್ತುಗಳಲ್ಲಿ ಬೇಕಾದುದೊಂದನ್ನು ಉಪಮೇಯವೆಂದೂ ಉಳಿದುವು ಉಪಮಾನವೆಂದೂ ಗ್ರಹಿಸಬಹುದು. ಈ ಅಲಂಕಾರಕ್ಕೂ ದೀಪಕಕ್ಕೂ ಇರುವ ಭೇದವು ಅಷ್ಟು ಮಹತ್ತ್ವದುದಲ್ಲವಾದುದರಿಂದಲೂ ಸಾಮಾನ್ಯಧರ್ಮವು ಒಮ್ಮೆಯೇ ಹೇಳಲ್ಪಡುವುದು ಇವೆರಡೂ ಅಲಂಕಾರಗಳಿಗೆ ಮುಖ್ಯವಾದುದರಿಂದಲೂ ಜಗನ್ನಾಥಪಂಡಿತನು ದೀಪಕವೆಂಬ ಬೇರೊಂದು ಅಲಂಕಾರವನ್ನು ಮಾಡದೆ ತುಲ್ಯಯೋಗಿತೆಯಲ್ಲಿಯೇ ಸೇರಿಸಬಹುದೆಂದು ಹೇಳಿದ್ದಾನೆ. ಆಗ ಅದರಲ್ಲಿ ಮೂರು ವಿಭಾಗಗಳಾಗುವುವು: (೧) ಎಲ್ಲಾ ಪ್ರಕೃತಗಳು, (೨) ಎಲ್ಲಾ ಅಪ್ರಕೃತಗಳು, (೩) ಪ್ರಕೃತಾಪ್ರಕೃತಗಳು. ಕೊನೆಯದೇ ದೀಪಕವಾಗುವುದು.

೭೨೦ — ದಂಡಿ ೨-೩೩೨.

ಸೂತ್ರ ೧೭೦

ಅಪ್ರಸ್ತುತಪ್ರಶಂಸೆ

ಭಾಮಹ ೩-೨೯; ದಂಡಿ ೨-೩೪೦ ರಿಂದ ೩೪೨; ವಾಮನ ೪-೩-೪; ಉದ್ಭಟ ೫-೮; ಮಮ್ಮಟ ೧೦-೧೨; ರುಯ್ಯಕ ೩೪; ಕುವಲಯ ೬೬; ಜಗನ್ನಾಥ ೪೦೨; ಮಾರ್ಗ ೩-೩೯

ಇದು ಸಮಾಸೋಕ್ತಿಯ ವಿರುದ್ಧವಾಗಿರುತ್ತದೆ. ಇದರಲ್ಲಿ ಅಪ್ರಸ್ತುತವಾದುದೊಂದನ್ನು ವರ್ಣಿಸುವುದರಿಂದ ಪ್ರಸ್ತುತವಾದುದು ಸೂಚಿತವಾಗುವುದು. ಮಮ್ಮಟನ ಪ್ರಕಾರ ಇದು ಐದು ವಿಧವಾಗಿರುವುದು (೧) ಕಾರ್ಯವು ಪ್ರಸ್ತುತ

ವಾಗಿರುವಾಗ ಕಾರಣವನ್ನು ಹೇಳುವುದು, (೨) ಕಾರಣ (ನಿಮಿತ್ತ)ವು ಪ್ರಸ್ತುತವಾಗಿರುವಾಗ ಕಾರ್ಯವನ್ನು ಹೇಳುವುದು, (೩) ಸಾಮಾನ್ಯವು ಪ್ರಸ್ತುತವಾದಾಗ ವಿಶೇಷವನ್ನು ಹೇಳುವುದು, (೪) ವಿಶೇಷವು ಪ್ರಸ್ತುತವಾದಾಗ ಸಾಮಾನ್ಯವನ್ನು ಹೇಳುವುದು, (೫) ಪ್ರಸ್ತುತಕ್ಕೆ ಸಮಾನವಾದ ಬೇರೊಂದನ್ನು ಹೇಳುವುದು.

ದಂಡಿಯು ಹೇಳುವ ಅಪ್ರಸ್ತುತಪ್ರಶಂಸೆಯು ಬೇರೆ ತೆರನಾಗಿರುವುದು. ಅವನ ಮತದಂತೆ ಪ್ರಸ್ತುತದ ನಿಂದಾರ್ಥವಾಗಿ ಅಪ್ರಸ್ತುತದ ಪ್ರಶಂಸೆ ಎಂದರೆ ಸ್ತುತಿಯನ್ನು ಮಾಡುವುದೇ ಈ ಅಲಂಕಾರವು. ನಾಗವರ್ಮನು ದಂಡಿಯನ್ನೇ ಅನುಸರಿಸುವಂತೆ ತೋರುತ್ತದೆ. ಇದೇ ೭೨೨ರಲ್ಲಿ ಕೊಟ್ಟ ಉದಾಹರಣೆಯು ದಂಡಿಯ ೨-೩೪೧ರ ಅನುವಾದವಾಗಿದೆ. ಅದರಲ್ಲಿ ವರ್ಣಿತವಾದುದು ಅರಣ್ಯದಲ್ಲಿ ಸುಖದಿಂದ ಜೀವಿಸುವ ಎರಲೆಗಳ ಹಿಂಡು. ಆದರೆ ಅದನ್ನು ಸ್ವಾಮಿಸೇವೆಯಲ್ಲಿ ಬೇಸತ್ತ ಒಬ್ಬ ಸೇವಕನ ಮಾತು ಎಂದು ತಿಳಿದುಕೊಂಡಲ್ಲಿ ಅದರಿಂದ ಪರಸೇವೆಯು ಬಹುನಿಂದ್ಯವಾದುದು ಎಂಬ ಪ್ರಸ್ತುತವಿಷಯವು ತಿಳಿದುಬರುತ್ತದೆ. ಭೋಜರಾಜನ ಹೊರತು ಇನ್ನುಳಿದ ಆಲಂಕಾರಿಕರಾರೂ ಅಪ್ರಸ್ತುತಪ್ರಶಂಸೆಯ ಲಕ್ಷಣವನ್ನು ದಂಡಿಯು ಹೇಳಿದಂತೆ ಹೇಳಿಲ್ಲವೆಂದು ತೋರುತ್ತದೆ.

೭೨೨ — ದಂಡಿ ೨-೩೪೧.

ಅರ್ಥಾಂತರನ್ಯಾಸ

ಭಾಮಹ ೨-೭೧; ದಂಡಿ ೨-೧೬೯ ರಿಂದ ೧೭೧; ವಾಮನ ೪-೩-೨೧; ಉದ್ಭಟ ೨-೪; ರುದ್ರಟ ೮-೭೧; ಮಮ್ಮಟ ೧೦-೩೩; ರುಯ್ಯಕ ೩೫; ಕುವಲಯ ೧೨೨, ೧೨೩; ಮಾರ್ಗ ೩-೨೮.

ಇಲ್ಲಿಯೂ ನಾಗವರ್ಮನು ದಂಡಿಯನ್ನು ಅನುಸರಿಸುವಂತೆ ತೋರುತ್ತದೆ. 'ಒಂದು ಸಂಗತಿಯನ್ನು ಹೇಳಿ ಅದರ ಸಮರ್ಥನಕ್ಕಾಗಿ ಮತ್ತೊಂದನ್ನು ಹೇಳುವುದು' ಈ ಅಲಂಕಾರದ ಲಕ್ಷಣವೆಂದು ದಂಡಿಯು ಹೇಳಿದ್ದಾನೆ. ಆದರೆ ಈ ಲಕ್ಷಣವು 'ದೃಷ್ಟಾಂತ, ಅಪ್ರಸ್ತುತಪ್ರಶಂಸೆ, ಸಮಾಸೋಕ್ತಿ, ಕಾವ್ಯಲಿಂಗ' ಮೊದಲಾದುವುಗಳಿಗೂ ಅನ್ವಯಿಸುವುದು. ಆದುದರಿಂದ ಮಮ್ಮಟಾದಿಗಳು ಹೀಗೆ ಹೇಳುತ್ತಾರೆ:

ಸಾಮಾನ್ಯವಾದ ಒಂದು ಉಕ್ತಿಯನ್ನು ವಿಶೇಷವಾದ ಇನ್ನೊಂದು ಉಕ್ತಿಯಿಂದ ಇಲ್ಲವೆ ವಿಶೇಷವಾದ ಒಂದು ಉಕ್ತಿಯನ್ನು ಸಾಮಾನ್ಯವಾದ ಇನ್ನೊಂದು ಉಕ್ತಿಯಿಂದ (ಒಂದಕ್ಕೊಂದು ಸಾಧರ್ಮ್ಯವಾಗಲೀ ವೈಧರ್ಮ್ಯವಾಗಲೀ ಇರುವುದೆಂದು ಗ್ರಹಿಸಿ) ಸಮರ್ಥಿಸುವುದೇ ಈ ಅಲಂಕಾರ. ಸಾಮಾನ್ಯ-ವಿಶೇಷಗಳಲ್ಲಿ ಒಂದು ಪ್ರಸ್ತುತ, ಇನ್ನೊಂದು ಅಪ್ರಸ್ತುತವೆಂದು ತಿಳಿಯಬೇಕು.

ದೃಷ್ಟಾಂತದಲ್ಲಿ ಸಾಮಾನ್ಯವಾದುದನ್ನು ಸಾಮಾನ್ಯದಿಂದ ವಿಶೇಷವಾದುದನ್ನು ವಿಶೇಷದಿಂದ ಸಮರ್ಥಿಸಲಾಗುತ್ತದೆ. ಕಾವ್ಯಲಿಂಗದಲ್ಲಿ ಕಾರ್ಯದಿಂದ ಕಾರಣದ ಇಲ್ಲವೆ ಕಾರಣದಿಂದ ಕಾರ್ಯದ ಸಮರ್ಥನೆಯಿರುತ್ತದೆ. ಆದುದರಿಂದ ಅರ್ಥಾಂತರ ನ್ಯಾಸವು ಅವೆರಡರಿಂದಲೂ ಬೇರೆಯಾದುದು. ಪ್ರತಿವಸ್ತೂಪಮೆಯಲ್ಲಿ ಸಾದೃಶ್ಯವು ಮುಖ್ಯವಾದುದು; ಇಲ್ಲಿ ಸಮರ್ಥನವು ಮುಖ್ಯವಾದುದು.

ಆರಂಭದಲ್ಲಿ ಒಂದು ವಿಶೇಷವನ್ನು ಹೇಳಿ ಅದನ್ನು ಸಮರ್ಥಿಸಲಿಕ್ಕೆ ಒಂದು ಸಾಮಾನ್ಯವನ್ನು ಹೇಳಿ ಅದನ್ನು ಸಮರ್ಥಿಸಲಿಕ್ಕೆ ಇನ್ನೊಂದು ವಿಶೇಷವನ್ನು ಹೇಳುವುದು ವಿಕಸ್ವರವೆಂಬ ಬೇರೊಂದು ಅಲಂಕಾರವೆಂದು ಚಂದ್ರಾಲೋಕ-ಕುವಲಯಾನಂದಗಳಲ್ಲಿ ಹೇಳಿದೆ. ಅವಕ್ಕೆ ಸುಪ್ರಸಿದ್ಧವಾದ ಉದಾಹರಣೆಯೆಂದರೆ:

ಅನಂತರತ್ನಸ್ಯ ಪ್ರಭವಸ್ಯ ಯಸ್ಯ ಹಿಮಂ ನ ಸೌಭಾಗ್ಯವಿಲೋಪಿ ಜಾತಂ
ಏಕೋ ಹಿ ದೋಷೋ ಗುಣಸನ್ನಿಪಾತೇ ನಿಮಜ್ಜತೀಂದೋಃ ಕಿರಣೇಷ್ವಿವಾಂಕಃ

—ಕುಮಾರಸಂಭವ, ೧–೩

೭೨೩—ಹೋಲಿಸಿರಿ.

ನಿಮರ್ಥ್ಯತೇ ಯದಿ ಸುರಾಸುರ ಸೈನ್ಯಸಂಘೈ
ರಾಪೂರ್ಯತೇ ಯದಿ ಜಲೈರ್ಜಲದಾಪಗಾಭಿಃ
ಪೇಪೀಯತೇ ಚ ವಡಬಾ ಮುಖವಹ್ನಿನಾ ಚೇ
ನ್ನ ಕ್ಷುಭ್ಯತಿ ಸ್ಮ ಜಲಧಿರ್ನ ತನುತ್ವಮೇತಿ

—ಸುಭಾಷಿತಾವಲಿ ೮೭೦

ಸೂತ್ರ ೧೭೧,೧೭೨

ರುದ್ರಟ ೯–೧ ಮತ್ತು ೨ ಕ್ರಮವಾಗಿ

ಸೂತ್ರ ೧೭೩
ವಿರೋಧ

ಭಾಮುಹ ೩–೨೫; ದಂಡಿ ೨–೩೩೩ ರಿಂದ ೩೪೦; ವಾಮನ ೪–೩–೧೨; ಉದ್ಭಟ ೫–೬; ರುದ್ರಟ ೯–೩೦ ರಿಂದ ೩೨; ಮಮ್ಮಟ ೧೦–೨೪; ರುಯ್ಯಕ ೪೦; ಜಯದೇವ ೫–೭೪; ಕುವಲಯ ೭೬.

ಇಲ್ಲಿ ನಾಗವರ್ಮನು ದಂಡಿ ಭಾಮುಹ-ರುದ್ರಟರನ್ನು ಅನುಸರಿಸಿದ್ದಾನೆ. ಪರಸ್ಪರವಿರುದ್ಧವಾದ ಪದಾರ್ಥಗಳು (ದ್ರವ್ಯಾದಿ) ಒಂದೇ ಕಾಲಕ್ಕೆ ಒಂದೇ ಸ್ಥಳದಲ್ಲಿರುವುವು-ಎಂದು ವರ್ಣಿಸುವುದೇ ಈ ಅಲಂಕಾರವು. ಎಲ್ಲಿ ಇಂತಹ ಪದಾರ್ಥಗಳಿರುವುವೆಂದು ವರ್ಣಿಸಿರುವುದೋ ಆ ವಸ್ತುವಿನ ವಿಶೇಷವನ್ನು ಎಂದರೆ

ಶ್ರೇಷ್ಠತೆಯನ್ನು ಪ್ರದರ್ಶಿಸುವುದಕ್ಕಾಗಿ ಈ ಬಗೆಯಾದ ವರ್ಣನೆಯಿರುವುದೆಂದು ತಿಳಿಯಬೇಕು. ಜಾತಿ, ಗುಣ, ಕ್ರಿಯಾ, ದ್ರವ್ಯಗಳಲ್ಲಿ ಪರಸ್ಪರ ವಿರುದ್ಧವಿದ್ದರೆ ಈ ಅಲಂಕಾರವಾಗುವುದೆಂದು ಜಯದೇವನು ಸಂಕ್ಷಿಪ್ತವಾಗಿ ಹೇಳಿರುವನು.

ಇಲ್ಲಿ ಕಂಡುಬರುವ ವಿರೋಧವು ನಿಜವಾದ ವಿರೋಧವಾಗಿರಬೇಕೆಂದು ಇವರೆಲ್ಲರ ಅಭಿಪ್ರಾಯವೆಂದು ತೋರುತ್ತದೆ. ವಾಮನನು ವಿರೋಧಾಭಾಸಮಾತ್ರ (ಮೊದಲು ವಿರೋಧವಿರುವುದೆಂದು ಕಂಡರೂ ವಿಚಾರಾನಂತರದಲ್ಲಿ ಅದು ಪರಿಹಾರವಾಗುವಂತೆ) ಇರಬೇಕೆಂದಿರುವನು. ಮಮ್ಮಟನು 'ವಿರೋಧ ಸೋऽವಿರೋಧೇऽಪಿ ವಿರುದ್ಧತ್ವೇನ ಯದ್ವಚಃ' ಎಂದರೆ ನಿಜವಾಗಿ ವಿರುದ್ಧವಲ್ಲದುವು ವಿರುದ್ಧವೆಂದು ವರ್ಣಿತವಾದರೆ ಈ ಅಲಂಕಾರವಾಗುವುದೆಂದು ಹೇಳಿರುವನು. ಜಾತಿ-ಕ್ರಿಯೆ-ಗುಣ-ದ್ರವ್ಯಗಳು ಒಂದಕ್ಕೊಂದು ವಿರುದ್ಧವೆಂದು ತೋರುವಂತೆ ಹೇಳುವುದರಿಂದ ಒಟ್ಟಿಗೆ ಇದರಲ್ಲಿ ಹತ್ತು ಪ್ರಕಾರಗಳಾಗುವುವೆಂದು ಮಮ್ಮಟ-ರುಯ್ಯಕಾದಿಗಳು ಹೇಳಿರುವರು.

ಶ್ಲೇಷಘಟಿತವಾದ ಪದಗಳು ಮೊದಲು ಒಂದಕ್ಕೊಂದು ವಿರುದ್ಧಾರ್ಥವನ್ನು ಕೊಡುತ್ತಿದ್ದರೂ ವಿರೋಧವು ಬಯಲಾಗುವಂತೆ ಅರ್ಥಮಾಡಲು ಬರುವುದರಿಂದ ಅಂತಹ ಪದಗಳ ವಿನ್ಯಾಸವೂ ಈ ಅಲಂಕಾರದಲ್ಲಿ ಸಮಾವೇಶವಾಗುತ್ತದೆ. ಇದನ್ನು ಇದೇ ಗ್ರಂಥದಲ್ಲಿ 'ವಿರೋಧಾಭಾಸ' ವೆಂದು ಬೇರೆ ಅಲಂಕಾರವಾಗಿ ಹೇಳಲಾಗಿದೆ (ಸೂ. ೧೮೧).

ಈ ಅಲಂಕಾರದ ಲಕ್ಷಣವನ್ನು ಹೇಳುವಲ್ಲಿ ಪ್ರಾಚೀನರಿಗೂ ನವೀನರಿಗೂ ಭೇದವಿರುವುದಕ್ಕೆ ಕಾರಣವೇನಂದರೆ — ಪ್ರಾಚೀನರ ಕಾಲದಲ್ಲಿ ಕಾವ್ಯದಲ್ಲಿ ವರ್ಣಿಸಬಹುದಾದ ವಿರೋಧವು ಎಷ್ಟು ಬಗೆಯಾಗಿರಬಹುದೆಂಬುದರ ಸರಿಯಾದ ಕಲ್ಪನೆಯು ಇದ್ದಿಲ್ಲವೆಂದು ತೋರುತ್ತದೆ; ಮೇಲಾಗಿ ನಿಜವಾದ ವಿರೋಧವನ್ನು ಬಣ್ಣಿಸುವುದು ಕಾವ್ಯದಲ್ಲಿ ಒಂದು ದೋಷವೆಂದು ಮಮ್ಮಟಾದಿಗಳಿಂದ ಅಂಗೀಕೃತವಾದಂತೆ ಕಂಡುಬರುತ್ತದೆ. ಆದುದರಿಂದ ವಿರೋಧವು ಆಭಾಸಮಾತ್ರವಾಗಿರಬೇಕೆಂದು ಅವರು ಹೇಳಿರುವರಲ್ಲದೆ ವಿರೋಧದ ಬೇರೆ ಬೇರೆ ಬಗೆಗಳನ್ನೊಳಗೊಂಡ 'ಅಧಿಕ, ಅಸಂಗತಿ, ವಿಷಮ' ಮುಂತಾದ ಹೆಚ್ಚಿನ ಅಲಂಕಾರಗಳನ್ನೂ ಹೇಳಿರುವರು.

ಕುವಲಯಾನಂದಕಾರನು ಈ ಅಲಂಕಾರವನ್ನು 'ವಿರೋಧಾಭಾಸ'ವೆಂದೇ ಕರೆದಿರುವನು; ಆದರೆ ಪ್ರಾಚೀನರ 'ವಿರೋಧ'ವನ್ನು ಹೇಳಿಲ್ಲ.

೭೨೮ — ಇದು ಪ್ರಾಚೀನರ ಪ್ರಕಾರ ವಿರೋಧಕ್ಕೆ ಉದಾಹರಣೆ. ನವೀನರ ಪ್ರಕಾರ ಇದರಲ್ಲಿ ವರ್ಣಿತವಾದ ಕತ್ತಲೆ-ಬೆಳಕುಗಳು ಒಂದೇ ಪರ್ವತದಲ್ಲಿದ್ದರೂ

ಬೇರೆ ಹೇರೆ ಎಡೆಗಳಲ್ಲಿವ್ವುವೆಂದು ತಿಳಿದುಕೊಳ್ಳಲು ಬರುವುದರಿಂದ ಇದೂ ವಿರೋಧಾಭಾಸವೇ ಆಗುವುದೆಂದು ಕೆಲವರು ಹೇಳುತ್ತಾರೆ.

೭೨೯ — ದಂಡಿ ೩-೩೩೬.

೭೩೦ — ಶ್ಲೇಷಮೂಲಕವಾದ ವಿರೋಧಾಭಾಸಕ್ಕೆ ಉದಾಹರಣೆ.

ಉತ್ಪ್ರೇಕ್ಷೆ

ಭಾಮಹ ೨-೯೧; ದಂಡಿ ೨-೨೨೧-೨೩೪; ವಾಮನ ೪-೩-೯; ಉದ್ಭಟ ೩-೩; ರುದ್ರಟ ೯-೧೧; ಮಮ್ಮಟ ೧೦-೬; ರುಯ್ಯಕ ೨೧; ಕುವಲಯ ೩೨; ಜಗನ್ನಾಥ ೨೮೫.

ಒಂದು ವಸ್ತುವನ್ನು ಅದರಲ್ಲಿ ಬೇರೊಂದು ವಸ್ತುವಿನ ಧರ್ಮವನ್ನು ಸಂಬಂಧಿಸಿ ಅದರ ನಿಮಿತ್ತದಿಂದ ಎರಡನೆಯ ವಸ್ತುವೆಂದು ಸಂಭಾವಿಸುವುದೇ ಉತ್ಪ್ರೇಕ್ಷೆ ಎಂಬ ಅಲಂಕಾರವು. ' ಸಂಭಾವನೆ ' ಎಂಬುದು ಒಂದು ವಿಶೇಷಪ್ರಕಾರದ ಸಂಶಯವು; ಇದರಲ್ಲಿ ಒಂದು ವಸ್ತುವಿನ ಸಹಜರೂಪವು ಮಾಜುವುದಿಲ್ಲ; ಆದರೆ ಹೋಲಿಕೆಯ ಬಲದಿಂದ ಬೇರೊಂದು ವಸ್ತುವೆ ಇರಬೇಕೆಂಬ ಸಂಶಯವೂ ಇರುತ್ತದೆ. ಸಂದೇಹದಲ್ಲಿ ಇದೊ ಅದೊ ಎಂಬ ಭಾವನೆಗಳೆರಡೂ ಅಷ್ಟೆ ಪ್ರಬಲವಾಗಿರುತ್ತವೆ; ಸಂಭಾವನೆಯಲ್ಲಿ ನಿಜದಕ್ಕಿಂತಲೂ (ಮಿಥ್ಯಾರೂಪವಾದ) ಎರಡನೆಯದರ ಕಡೆಗೆ ಒಲವು ಹೆಚ್ಚು ಇರುತ್ತದೆ ಎಂದು ತಿಳಿಯತಕ್ಕುದು. ಉತ್ಪ್ರೇಕ್ಷೆಯಲ್ಲಿ ಉಪಮೇಯವು ಉಪಮಾನವೇ ಎಂಬ ತಿಳಿವಳಿಕೆಯು 'ಆಹಾರ್ಯ'ವಾದುದು, ಎಂದರೆ ಬೇಕೆಂತಲೆ ಮಾಡಿಕೊಂಡಂತಹುದು; ಭ್ರಾಂತಿಯಲ್ಲಿ ಅಂತಹ ತಿಳಿವಳಿಕೆಯು ' ಅನಾಹಾರ್ಯ ' ವಾದುದೆಂದು ಭಾವಿಸಬೇಕು.

ಉತ್ಪ್ರೇಕ್ಷೆಯನ್ನು ವಾಚ್ಯ, ಪ್ರತೀಯಮಾನ ಎಂದು ವಿಭಾಗಿಸುವರು. (೧) ವಾಚ್ಯದಲ್ಲಿ ' ಅಂತೆ, ಎನೆ, ಎನಲ್, ಎಂಬಿನೆಗಂ, ಮಾಱ್ಕೆ, ಪೊಲ್ ' ಮುಂತಾದ ಶಬ್ದಗಳಿಂದ ಉತ್ಪ್ರೇಕ್ಷೆಯನ್ನು ಮಾಡಿರುತ್ತದೆ. (೨) ಪ್ರತೀಯಮಾನದಲ್ಲಿ ಅಂತಹ ಶಬ್ದಗಳ ಪ್ರಯೋಗವಿಲ್ಲದಿರುವುದರಿಂದ ಉತ್ಪ್ರೇಕ್ಷೆಯನ್ನು ಊಹಿಸಿಕೊಳ್ಳಬೇಕಾಗುತ್ತದೆ. ' ಅಂತೆ, ಪೊಲ್ ' ಮೊದಲಾದ ಶಬ್ದಗಳನ್ನು ಪ್ರಯೋಗಿಸಿದಾಗ ಉತ್ಪ್ರೇಕ್ಷೆಯು 'ಉಪಮೆ'ಯಂತೆ ತೋರಬಹುದು. ಇಂತಹ ಪ್ರಸಕ್ತಿಯಲ್ಲಿ ಉಪಮಾನವು ಪ್ರಸಿದ್ಧವಾದುದಾಗಿದ್ದರೆ ಅದು ಉಪಮೆಯೆಂದೂ ಅಲೌಕಿಕವೂ ಕವಿಕಲ್ಪಿತವೂ ಆಗಿದ್ದರೆ ಆಗ ಅದು ಉತ್ಪ್ರೇಕ್ಷೆಯೆಂದೂ ಸ್ಥೂಲವಾಗಿ ನಿಶ್ಚಯಿಸಬಹುದು. ಆದರೂ ಒಮ್ಮೊಮ್ಮೆ ಅಧ್ಯವಸಾನಕ್ಕಿಂತಲೂ ಸಾದೃಶ್ಯವೆ ಹೆಚ್ಚು ಮಹತ್ತ್ವದ್ದೆಂದು ಕಂಡು ಬಂದಲ್ಲಿ

ಅದಕ್ಕೆ ‘ ಅಭೂತೋಪಮೆ ’ ಇಲ್ಲವೆ ‘ ಕಲ್ಪಿತೋಪಮೆ ’ ಎಂದು ಹೇಳಿ ಉಪಮಾಚಕ್ರದಲ್ಲಿಯೆ ಸೇರಿಸಬೇಕಾಗುವುದು.

ರುಯ್ಯಕ ಮೊದಲಾದ ಕೆಲ ಆಲಂಕಾರಿಕರು ಉತ್ಪ್ರೇಕ್ಷೆಯಲ್ಲಿ ಹಲವು ಒಳ-ಭೇದಗಳನ್ನು ಮಾಡಿದ್ದಾರೆ. ಮಮ್ಮಟನು ಅವುಗಳನ್ನೆಲ್ಲ ಹೇಳಿಲ್ಲ. ಜಗನ್ನಾಥ ಪಂಡಿತನು ಅವುಗಳಿಂದ ಯಾವ ಪ್ರಯೋಜನವೂ ಇಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾನೆ. ಕುವಲಯಾನಂದಕಾರನಂತೆ ಅವನು ಮೂರು ಮುಖ್ಯ ಬಗೆಗಳನ್ನು ಒಪ್ಪಿಕೊಂಡಿದ್ದಾನೆ: (೧) **ಹೇತೂತ್ಪ್ರೇಕ್ಷೆ:** ಪ್ರಸ್ತುತಕ್ಕೆ ನಿಜವಾಗಿಯು ಕಾರಣವಲ್ಲದ್ದನ್ನು ಕಾರಣವೆಂದು ಬಗೆಯುವುದು; (೨) **ಸ್ವರೂಪೋತ್ಪ್ರೇಕ್ಷೆ** ಅಥವಾ **ವಸ್ತೂತ್ಪ್ರೇಕ್ಷೆ:** ಪ್ರಸ್ತುತವನ್ನು ಅಪ್ರಸ್ತುತದ ಸ್ವರೂಪದಲ್ಲ ಸಂಭಾವಿಸುವುದು; (೩) **ಫಲೋತ್ಪ್ರೇಕ್ಷೆ:** ಪ್ರಸ್ತುತದ ನಿಜವಾದ ಫಲವಲ್ಲದುದನ್ನು ಅದರ ಫಲವೆಂದು ಊಹಿಸುವುದು.

೭೩೨ — ಹೋ :

ಗಂಗಾವರ್ತಸಮಾನನಾಭಿವಿಲಸದ್ ವಲ್ಮೀಕರಂಧ್ರಾಂತರಾತ್
ತನ್ವೀ ಶ್ಯಾಮಲರೋಮರಾಜಿಭುಜಗೀ ನಿರ್ಗತ್ಯ ಕಾಂತೇ ತವ
ವಕ್ತ್ರೇಂದುಂ ಗ್ರಸತೀತಿ ಪನ್ನಗಭಯಾತ್ ಪೀನೌಸ್ತನೌ ಸಂಗತಾ
ವಿತ್ಯಾಖ್ಯಾತುಮಿವ ತ್ವದಕ್ಷಿಯುಗಲಂ ಕರ್ಣಾಂತಮಾಶಿಶ್ರಿಯೇ

ಸೂತ್ರ ೧೭೪

ವಿಭಾವನೆ

ಭಾಮಹ ೨-೭೭; ದಂಡಿ ೨-೧೯೯ ರಿಂದ ೨೦೪; ವಾಮನ ೪-೩-೧೩; ಉದ್ಭಟ ೨-೯; ರುದ್ರಟ ೯-೧೬; ಮಮ್ಮಟ ೧೦-೨೧; ರುಯ್ಯಕ ೪೧; ಕುವಲಯ ೭೭; ಜಗನ್ನಾಥ ೪೩೧.

ಕ್ರಿಯೆ = ಹೇತು = ಕಾರಣ (ವೈಯಾಕರಣರು ಕ್ರಿಯೆಯನ್ನೆ ಕಾರಣವೆಂದು ಗ್ರಹಿಸುತ್ತಾರೆ.) **ವಿಭಾವನೆ:** (೧) ಕಾರಣವನ್ನು ಊಹಿಸುವುದು; (೨) ಒಂದು ವಿಶಿಷ್ಟ ರೀತಿಯಿಂದ ಕಾರ್ಯದ ಉತ್ಪತ್ತಿ.

ಕಾರಣವಿಲ್ಲದೆ **ಕಾರ್ಯದ ಉತ್ಪತ್ತಿಯಾಯಿತೆಂದು ಹೇಳುವುದೇ ವಿಭಾವನೆ**ಯೆಂಬ ಅಲಂಕಾರವು. ಕಾರಣವಿಲ್ಲದೆ ಕಾರ್ಯೋತ್ಪತ್ತಿಯಾಗುವುದು ಅಸಂಭವವಾದುದರಿಂದ ಇಲ್ಲಿ ತಿಳಿದುಕೊಳ್ಳಬೇಕಾದುದೇನಂದರೆ **ಕಾರ್ಯೋತ್ಪತ್ತಿ**ಗೆ ಪ್ರಸಿದ್ಧವಾದ ಕಾರಣವಿಲ್ಲವಾದರೂ ಅಪ್ರಸಿದ್ಧವಾದ ಕಾರಣವೊಂದು ಇರಬೇಕೆಂಬುದು. ಆದುದರಿಂದಲೆ ದಂಡಿಯು ‘ **ಪ್ರಸಿದ್ಧಹೇತು ವ್ಯಾವೃತ್ತ್ಯಾ ಯತ್ ಕಿಂಚಿತ್ ಕಾರಣಾಂತರಂ । ಯತ್ರ ಸ್ವಾಭಾವಿಕತ್ವಂ ವಾ ವಿಭಾವ್ಯಂ** ’ **ಎಂದು ಸ್ಪಷ್ಟ**ವಾಗಿ ಇದರ ಲಕ್ಷಣವನ್ನು ಹೇಳಿದ್ದಾನೆ. ಇಂತಹ ಕಾರಣವನ್ನು ಹೇಳುವುದರಿಂದ ಇಲ್ಲವೆ ಬಿಡುವುದರಿಂದ ಈ ಅಲಂಕಾರದಲ್ಲಿ ‘ ಉಕ್ತನಿಮಿತ್ತ, ಅನುಕ್ತನಿಮಿತ್ತ ’ ಎಂದು ಎರಡು ವಿಭಾಗಗಳಾಗುತ್ತವೆ.

ಚಂದ್ರಾಲೋಕ-ಕುವಲಯಾನಂದಕಾರರು ಈ ಅಲಂಕಾರದಲ್ಲಿ: (೧) ಕಾರಣ ವಿಲ್ಲದೆ (೨) ಸಮಗ್ರ (ಸಾಕಷ್ಟು) ಕಾರಣಗಳಿಲ್ಲದೆ (೩) ಕಾರಣವಲ್ಲದುದರಿಂದ (೪) ವಿರುದ್ಧಕಾರಣ ಅಥವಾ ಸಾಮಗ್ರಿಗಳಿಂದ (೫) ಪ್ರತಿಬಂಧಕ(ಅಡ್ಡಿ)ಗಳಿದ್ದಾಗಲೂ ಕಾರ್ಯವು ಉಂಟಾಯಿತೆಂದು ವರ್ಣಿಸುವುದೂ (೬) ಕಾರ್ಯದಿಂದಲೆ ಕಾರಣ ವುಂಟಾಯಿತೆಂದು ವರ್ಣಿಸುವುದೂ — ಎಂದು ಆರು ವಿಧಗಳನ್ನು ಹೇಳುತ್ತಾರೆ.

೭೩೭ — ಹೋ: ದಂಡಿ ೨-೨೦೧. ಇದು ಸ್ವಾಭಾವಿಕತ್ವದಿಂದ ವಿಭಾವನೆ ಎಂಬುದಕ್ಕೆ ಉದಾಹರಣೆ. **೭೩೮** — ಹೋ: ಭಾಮಹ ೨-೭೮

ತಿರೋಹಿತ

ರುದ್ರಟ ೯-೫೦

ರುದ್ರಟನು ಈ ಅಲಂಕಾರಕ್ಕೆ 'ಪಿಹಿತ' ವೆಂದು ಹೆಸರಿಟ್ಟಿದ್ದಾನೆ. ಇದನ್ನು ಬೇರೆ ಆಲಂಕಾರಿಕರಾರು ಮೀಲಿತವೆಂದು ಹೇಳುವರು. ಕುವಲಯಾನಂದ (೧೫೨) ದಲ್ಲಿ ಹೇಳಿದ 'ಪಿಹಿತ' ವೆಂಬುದು ಸೂಕ್ಷ್ಮಾಲಂಕಾರದ ಒಂದು ಮಾದರಿಯೆಂದೆ ಹೇಳಬಹುದು.

ಒಂದು (ಗುಣ ಮುಂತಾದ) **ಪದಾರ್ಥವನ್ನು ಪ್ರಬಲವಾದ ಇನ್ನೊಂದು ಪದಾರ್ಥವು ಅಡಗಿಸಿತೆಂದು ವರ್ಣಿಸುವುದೇ ಈ ಅಲಂಕಾರವು.** ಸೂತ್ರ ೧೫೮ರಲ್ಲಿ ಹೇಳಿದ ನಿಮೀಳನ ಅಥವಾ ಮೀಲಿತ ವೆಂಬ ಅಲಂಕಾರದಲ್ಲಿ ಕೋಪ-ಭಯಾದಿಗಳಿಂದ ಉಂಟಾದ ಸ್ಥಿತಿಯನ್ನು ಅದಕ್ಕೆ ಸರಿಸಮಾನವಾದ ಅಂತಹದೆ ಇನ್ನೊಂದು ಗುಣವು ಅಡಗಿಸುವುದು; ಇಲ್ಲಿ ಅಡಗಿಸುವ ಕಾರಣವು ಪ್ರಬಲವಾಗಿರುವುದು; ಆದುದರಿಂದ ಇವೆರಡೂ ಅಲಂಕಾರಗಳು ಬೇರೆ ಬೇರೆ ಎಂದು ರುದ್ರಟನ ಮತ. **ಆದರೂ** ಇದೂ 'ಮೀಲತ'ವೇ ಎಂದು ಹಲವರು ಗ್ರಹಿಸುತ್ತಾರೆ. ಒಟ್ಟಿನಲ್ಲಿ 'ತಿರೋಹಿತ' ಮತ್ತು 'ನಿಮೀಳನ' ಎಂಬ ಎರಡೂ ಅಲಂಕಾರಗಳನ್ನು ಮೀಲಿತದ ಭೇದಗಳೆಂದು ಗ್ರಹಿಸುವುದು ಯುಕ್ತವೆಂದು ತೋರುತ್ತದೆ.

೭೩೯ — ರುದ್ರಟ ೯-೫೧

ಸೂತ್ರ ೧೭೫

ಪೂರ್ವ

ರುದ್ರಟ ೯-೩

ಜನ್ಯ=ಕಾರ್ಯ. **ಜನಕ**=ಕಾರಣ.

ಕಾರಣವು ಉಂಟಾಗುವ ಪೂರ್ವದಲ್ಲಿಯೆ ಕಾರ್ಯವು ಉಂಟಾಯಿತೆಂದು ಹೇಳುವುದು **ಪೂರ್ವ**ವೆಂಬ ಅಲಂಕಾರವು.

ಇದನ್ನು ರುದ್ರಟನೊಬ್ಬನೆ ಹೇಳಿದಂತಿದೆ. ಇದು **ಅತಿಶಯೋಕ್ತಿಯ** ಒಂದು ಭೇದ.

ಅಹೇತುಕ

ರುದ್ರಟ ೯--೫೪.

ವಿಕಾರವನ್ನು ಉಂಟುಮಾಡುವ ಪ್ರಬಲವಾದ ಕಾರಣವಿದ್ದಾಗ್ಯೂ ಅಂತಹ ವಿಕಾರವು ಉಂಟಾಗದೆ ಇರುವುದೆಂದು ವರ್ಣಿಸುವುದೇ ಈ ಅಲಂಕಾರವು.

ಇದನ್ನೂ ರುದ್ರಟನೊಬ್ಬನೇ ಹೇಳಿದ್ದಾನೆ. ಇದೊಂದು **ವಿಶೇಷೋಕ್ತಿಯ** ಪ್ರಕಾರವೆಂದು ಗ್ರಹಿಸಬಹುದು.

೭೪೫ — ರುದ್ರಟ ೯-೫೫.

ಸೂತ್ರ ೧೭೬

ತದ್ಗುಣ

ರುದ್ರಟ ೯-೨೨; ಮಮ್ಮಟ ೧೦-೫೧; ರುಯ್ಯಕ ೭೨; ಕುವಲಯ ೧೪೧; ಜಗನ್ನಾಥ ೫೧೩.

ಒಂದು **ವಸ್ತುವು ತನ್ನ ಗುಣವನ್ನು ಬಿಟ್ಟು ಸಮೀಪದಲ್ಲಿಯ ಎರಡನೆಯ ವಸ್ತುವಿನ ಉತ್ಕೃಷ್ಟಗುಣವನ್ನು ಹೊಂದಿರುವುದೆಂದು ವರ್ಣಿಸುವುದರಿಂದ ಈ ಅಲಂಕಾರವಾಗುತ್ತದೆ.**

ತದ್ಗುಣವೆಂದರೆ (ತತ್ =) ಎರಡನೆಯ ವಸ್ತುವಿನ ಗುಣವೆಂದರ್ಥ. ಆ ಎರಡನೆಯ ವಸ್ತುವು ಅಪ್ರಕೃತವಾಗಿರಬೇಕೆಂದು ಮಮ್ಮಟನ ಅಭಿಪ್ರಾಯ. ಕೆಲವರು ಆ ನಿಯಮವಿರಬೇಕೆಂದು ಹೇಳುವುದಿಲ್ಲ.

ಇದು ಮೀಲಿತಾಲಂಕಾರವಲ್ಲ; ಅದರಲ್ಲಿ ಒಂದು (ಪ್ರಕೃತ) ವಸ್ತು ಬೇರೊಂದರಿಂದ ಆಚ್ಛಾದಿತವಾಗಿರುತ್ತದೆ; ಇಲ್ಲಿ ಎರಡೂ ವಸ್ತುಗಳು ಬೇರೆ ಬೇರೆಯೆಂದೇ ಕಾಣುತ್ತವೆ; ಆದರೆ ಮೊದಲನೆಯದಕ್ಕೆ ಎರಡನೆಯದರ ಗುಣವು ಬರುತ್ತದೆ.

ಪರಸ್ಪರಾಸಂಗತಿಕ

ರುದ್ರಟ ೯-೪೫; ಮಮ್ಮಟ ೧೦-೪೧; ರುಯ್ಯಕ ೪೫; ಕುವಲಯ ೮೮ರಿಂದ ೯೦; ಜಗನ್ನಾಥ **೪೪೩**.

ಇದನ್ನು ಸಂಸ್ಕೃತಾಲಂಕಾರಿಕರು ' **ವಿಷಮ** 'ವೆಂದು ಕರೆದಿದ್ದಾರೆ.

ಪರಸ್ಪರ ಅನುರೂಪವಲ್ಲದ ವಸ್ತುಗಳ ಸಂಸರ್ಗ(ಕೂಡುವಿಕೆ**)ವೇ ಈ ಅಲಂಕಾರಕ್ಕೆ ಕಾರಣವು.** (೧) ಕಾರ್ಯದ ಗುಣ-ಕ್ರಿಯೆಗಳು ಕಾರಣದ ಗುಣ-ಕ್ರಿಯೆಗಳನ್ನು ಹೋಲುವುದಿಲ್ಲವೆಂದು, (೨) ಪ್ರಯತ್ನವು ನಿಷ್ಫಲವಾಯಿತೆಂದು

ಇಲ್ಲವೆ ಅನಿಷ್ಟಫಲದಾಯಕವಾಯಿತೆಂದು, (೩) ಅನುರೂಪವಲ್ಲದ ಸಂಗತಿಗಳ ಸಂಬಂಧವುಂಟಾಯಿತೆಂದು ವರ್ಣಿಸಿದರೆ ಈ ಅಲಂಕಾರವಾಗುವುದು. ಜಗನ್ನಾಥ ಪಂಡಿತನು ಇನ್ನೂ ಅನೇಕ ವಿಭಾಗಗಳನ್ನು ಹೇಳಿರುವನು.

ಇದು **ವಿರೋಧ** ಮತ್ತು **ಅಸಂಗತ** ಎಂಬ ಅಲಂಕಾರಗಳಿಂದ ಬೇರೆ ಯಾದುದು: ವಿರೋಧದಲ್ಲಿ — ಒಂದೇ ಎಡೆಯಲ್ಲಿ ಇರಲು ಅಶಕ್ಯವಾದ ವಸ್ತುಗಳು ಹಾಗೆ ಕೂಡಿ ಇರುವುವೆಂದು ವರ್ಣನೆ ಇರುತ್ತದೆ; **ಅಸಂಗತದಲ್ಲಿ**– ಕಾರಣವೊಂದೆಡೆ ಯಲ್ಲಿ ಉಂಟಾದರೆ ಕಾರ್ಯವು ಮತ್ತೊಂದೆಡೆಯಲ್ಲಿ ಉಂಟಾಯಿತೆಂದು ಹೇಳು ವುದಿರುತ್ತದೆ; ಇಲ್ಲಿ ಕಾರಣದ ಗುಣ-ಕ್ರಿಯೆಗಳು ಒಂದು ವಿಧವಾದರೆ ಕಾರ್ಯದ ಗುಣ-ಕ್ರಿಯೆಗಳು ಮತ್ತೊಂದು ವಿಧವಾಗಿರುತ್ತವೆಂದು ಬಣ್ಣಿಸಿರುತ್ತದೆ.

ಸೂತ್ರ ೧೭೭

ವಿಶೇಷೋಕ್ತಿ

ಭಾಮುಹ ೩–೨೩; ದಂಡಿ ೨–೩೨೩ ರಿಂದ ೩೨೯; ವಾಮನ ೪–೩–೨೩; ಉದ್ಭಟ ೫–೪; ಮಮ್ಮಟ ೧೦-೨೧; ರುಯ್ಯಕ ೪೨; ಕುವಲಯ ೮೩; ಜಗನ್ನಾಥ ೪೩೬; ಮಾರ್ಗ ೩–೧೨೧.

ಇಲ್ಲಿ ನಾಗವರ್ಮನು ದಂಡಿಯನ್ನು ಅನುಸರಿಸಿರುವಂತೆ ಕಾಣುತ್ತದೆ.

ವರ್ಣನೀಯವಾದ ವಸ್ತುವಿನ ಉತ್ಕರ್ಷವನ್ನು ಪ್ರಕಟಿಸುವ ಉದ್ದೇಶದಿಂದ ಅದರ (ಗುಣಾದಿ) ಸಾಮಗ್ರಿಗಳು ಫಲಪ್ರಾಪ್ತಿಗೆ ಉಪಯೋಗವಾಗಲಿಲ್ಲವೆಂದು — ಎಂದರೆ ಮಹಾತ್ಮರ ಕ್ರಿಯಾಸಿದ್ಧಿಯು ಅವರ ಸತ್ತ್ವದಿಂದ ಆಗುವುದಲ್ಲದೆ ಉಪ ಕರಣಗಳಿಂದಲ್ಲವೆಂದು—ವರ್ಣಿಸುವುದು 'ವಿಶೇಷೋಕ್ತಿ'ಯೆಂದು ದಂಡಿ ಹೇಳುವ ಲಕ್ಷಣ. ಆದರೆ ಮಮ್ಮಟಾದಿಗಳ ಮತದಲ್ಲಿ ಇದು 'ವಿಭಾವನೆ' ಎಂಬ ಅಲಂಕಾರವೇ ಆಗುವುದು.

ಭಾಮಹನು ಹೇಳುವ ಲಕ್ಷಣವು ಮೇಲಿನದರಿಂದ ಕಿಂಚಿದ್‌ಭಿನ್ನವಾಗಿರು ವುದು. ಒಂದು ಗುಣವು ಇಲ್ಲವಾದರೂ (ಅದರೊಡನೆ ಹೋಗಬಹುದಾದ) ಇನ್ನೊಂದು ಗುಣವು ಉಳಿದಿದೆಯೆಂದು ಹೇಳುವುದೆ ವಿಶೇಷೋಕ್ತಿಯೆಂಬುದು. ಮಮ್ಮಟ-ರುಯ್ಯಕರು ಇದನ್ನು ಇನ್ನೂ ಬೇರೆಯಾಗಿ ಹೇಳುತ್ತಾರೆ: **ಒಂದು ಕಾರ್ಯಸಾಧನೆಗಾಗಿ ಬೇಕಾಗುವ ಎಲ್ಲ ಸಾಧನಗಳನ್ನು ಹೇಳಿ ಫಲವನ್ನು ಹೇಳದಿದ್ದರೆ ಇಲ್ಲವೆ ಕಾರಣಗಳೆಲ್ಲ ಸಮಗ್ರವಾಗಿದ್ದರೂ ಫಲವುಂಟಾಗಲಿಲ್ಲವೆಂದು ಹೇಳಿದರೆ ಈ ಅಲಂಕಾರವಾಗುವುದು.** ಉದಾ :

ಅಳಿಕುಲಮೆಲ್ಲ ಪೀರ್ದೊಡರೆಯಾಗದ ಸನ್ಮಧು ಮಂದಮಾರುತಂ
ಸೆಳೆದೊಡೆ ಕುಂದದಿರ್ಪ ನಱುಗಂಪಲರೊಳ್ ಗಿಳಿವಿಂಡು ಪೀರ್ದೊಡಂ
ಕಳೆಯದೆ ತುಂಬಿ ತೋರ್ಪ ರಸಮಾ ಪೊಸವಣ್ಣೊಳನೇಕಕೋಕಿಲಾ
ವಳಿ ಮುರಿದೊಟ್ಟೆ ಪಿಂಗದ ತಳಿರ್ ಕಿಱುಮಾಪುರದೊಳ್ ವಿರಾಜಿಕುಂ

ರಾಜಶೇಖರವಿಳಾಸ ೯-೬೧

೭೫೧ — ಹೋ : ಸುಭಾಷಿತಾವಳಿ ೨೨೭೭. ಈ ಪದ್ಯವು ದಂಡಿ ೨-೩೨೪ರ ಅನುವಾದವು:

ಏಕಚಕ್ರೋ ರಥೋ ಯಂತಾ ವಿಕಲೋ ವಿಷಮಾ ಹಯಾಃ
ಆಕ್ರಮತ್ಯೇವ ತೇಜಸ್ವೀ ತಥಾಪ್ಯರ್ಕೋ ನಭಸ್ತಲಂ

೭೫೨ — ಹೋ : ಮಾರ್ಗ ೩-೧೨೧. ಇದು ದಂಡಿಯ ೨-೩೨೪ನೆಯ ಪದ್ಯವಾದ ಕೆಳಗಿನದನ್ನು ಹೋಲುವುದು.

ನ ಕಠೋರಂ ನ ವಾ ತೀಕ್ಷ್ಣಮಾಯುಧಂ ಪುಷ್ಪಧನ್ವನಃ
ತಥಾಪಿ ಜಿತಮೇವಾಸೀದಮುನಾ ಭುವನತ್ರಯಂ

ಸೂತ್ರ ೧೭೪–೧೭೯

ರುದ್ರಟ ೧೦–೧, ೨

ಶ್ಲೇಷ

ಒಂದು ಶಬ್ದಕ್ಕೆ ಅಥವಾ ಪದಕ್ಕೆ ಅನೇಕ ಅರ್ಥಗಳಾಗುತ್ತಿದ್ದರೆ ಅದಕ್ಕೆ ಶ್ಲೇಷವೆನ್ನುವರು. ಶ್ಲೇಷದಲ್ಲಿ ‘ ಶಬ್ದಶ್ಲೇಷ, ಅರ್ಥಶ್ಲೇಷ ’ ಎಂದು ಎರಡು ವಿಧ. ಶಬ್ದಶ್ಲೇಷವೆಂದರೆ ಒಂದು ಶಬ್ದಕ್ಕೆ ಎರಡು ಅಥವಾ ಹೆಚ್ಚು ಅರ್ಥವಾಗುತ್ತಿದ್ದು ಆ ಶಬ್ದವನ್ನು ಬಿಟ್ಟು ಬೇರೆ ಶಬ್ದಗಳನ್ನು ಅವೇ ಅರ್ಥಗಳಲ್ಲಿ ಬಳಿಸಲಿಕ್ಕೆ ಬಾರದಂತಹದು. ಉದಾ: ‘ ಸೈಂಧವ ’ ಎಂಬುದಕ್ಕೆ ‘ಕುದುರೆ’ ಮತ್ತು ‘ಉಪ್ಪು’ ಎಂದು ಎರಡು ಅರ್ಥ. ಆದರೆ ಅದರ ಪ್ರತಿಯಾಗಿ ‘ ಅಶ್ವ ’ ಎಂದು ಪ್ರಯೋಗಿಸಿದರೆ ಶ್ಲೇಷವು ಇಲ್ಲದಂತಾಗುವುದು. ಅರ್ಥಶ್ಲೇಷದಲ್ಲಿ ಬೇರೆ ಶಬ್ದಗಳ ಪ್ರಯೋಗದಿಂದ ಶ್ಲೇಷವು ಅಳಿಯುವುದಿಲ್ಲ. ಶಬ್ದಶ್ಲೇಷದಲ್ಲಿ ‘ಸಭಂಗ, ಅಭಂಗ, ಉಭಯಾತ್ಮಕ’ವೆಂದು ಮೂರು ವಿಧವಾಗಿ ಭಾಗಮಾಡುತ್ತಾರೆ. ಸಭಂಗ ಅಥವಾ ಭಂಗಶ್ಲೇಷವೆಂದರೆ ಒಂದೇ ಶಬ್ದಸಮುದಾಯವನ್ನು ಬೇರೆ ಬೇರೆಯಾಗಿ ಒಡೆದು ಬೇರೆ ಬೇರೆ ಅರ್ಥವನ್ನು ಹೇಳುವುದು. ಉದಾ: ಮಧುಪರಾಗ: (೧) ಮಧು+ಪರಾಗ (ಹೂವಿನ ಬಂಡು ಮತ್ತು ಹುಡಿ) ಹಾಗೂ (೨) ಮಧುಪ+ರಾಗ (ಅಳಿಗಳ ಅಥವಾ ಕುಡುಕರ ಪ್ರೀತಿ) ಎಂದು ಅರ್ಥಮಾಡಬಹುದು. ಅಭಂಗಶ್ಲೇಷಕ್ಕೆ ಉದಾ: ‘ಸೈಂಧವ’. ‘ಮಧುಪ’ ಎಂಬುದು

ಉಭಯಾತ್ಮಕವು; ಏಕೆಂದರೆ ಸಭಂಗ ಮತ್ತು ಅಭಂಗಶ್ಲೇಷಗಳು ಒಂದೇ ಪದದಲ್ಲಿ ಇರುವುವು.

ಶ್ಲೇಷವು ಶಬ್ದಾಲಂಕಾರವೋ ಅರ್ಥಾಲಂಕಾರವೋ ಎಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಉದ್ಭಟನು ಶ್ಲೇಷವು ಅರ್ಥಾಲಂಕಾರವೆಂದೇ ಹೇಳುತ್ತಾನೆ. ಮಮ್ಮಟನು ಅರ್ಥಶ್ಲೇಷವಷ್ಟೇ ಅರ್ಥಾಲಂಕಾರವೆಂದು ಹೇಳುತ್ತಾನೆ. ರುಯ್ಯಕನು ಉದ್ಭಟನನ್ನು ಅನುಸರಿಸಿದರೂ ವಿಭಾಗಗಳನ್ನು ಬೇರೆ ವಿಧವಾಗಿ ಮಾಡುತ್ತಾನೆ.

ಇಲ್ಲಿ 'ವ್ಯಾಜಸ್ತುತಿ'ಯ ಹೊರತು ನಾಗವರ್ಮನು ಶ್ಲೇಷದಲ್ಲಿ ಹೇಳಿರುವ ಅಲಂಕಾರಭೇದಗಳನ್ನೆಲ್ಲಾ ರುದ್ರಟನೊಬ್ಬನೇ ಹೇಳಿರುವನು. ಉಳಿದ ಆಲಂಕಾರಿಕರು ಇಂತಹ ಪ್ರಭೇದಗಳನ್ನು ಮಾಡದೆ ಶ್ಲೇಷವೆಂಬ ಒಂದೇ ಅಲಂಕಾರವನ್ನು ಅಂಗೀಕರಿಸಿರುವರು.

ಸೂತ್ರ ೧೮೦

ತತ್ತ್ವ

ರುದ್ರಟ ೧೦-೨೦

ಪ್ರಕೃತಾರ್ಥಕ್ಕೆ ಅಲಂಕಾರವಾಗುವಂತಹ ಇನ್ನೊಂದು ಅರ್ಥವು ಗಮ್ಯವಾಗುತ್ತಿದ್ದಲ್ಲಿ ಈ ಅಲಂಕಾರವಾಗುವುದು.

ಪದ್ಯ ೭೫೯ ರಲ್ಲಿ ಒಬ್ಬರನ್ನು ಕುರಿತು 'ಈ ನೃಪನ ವಸನ, ಚರಣ, ನಯನಾದಿಗಳು ಗೋಮೇದಕ, ಪದ್ಮರಾಗ, ನೀಲ ಮೊದಲಾದ ರತ್ನಗಳ ರೂಪಗಳಾಗಿರುವುದರಿಂದ ಅವುಗಳಿಂದ ಕೂಡಿದ ಈತನು ನೃಪರತ್ನನಾಗಿರುವುದರಿಂದ ನಿಮ್ಮ ಬರುವಿಕೆಯು ಆ ರತ್ನಕ್ಕೆ ಬಂಗಾರದ ಕುಂದಣ ಕೂಡಿಸಿದಂತಾಯಿತು' ಎಂದು ಸೂಚಿತವಾಗಿರುವುದು.

ವ್ಯಾಜಸ್ತುತಿ

ದಂಡಿ ೨-೩೪೩; ರುದ್ರಟ ೧೦-೧೧

ವಾಚ್ಯವಾದ ನಿಂದೆಯು ನಿಜವಾಗಿಯೂ ಸ್ತುತಿಯಾಗಿದ್ದರೆ ಈ ಅಲಂಕಾರವಾಗುವುದೆಂದು ದಂಡಿಯು ಹೇಳಿದ್ದಾನೆ. ನಾಗವರ್ಮನು ಇವನನ್ನೆ ಅನುಸರಿಸಿರುವನು. ಆದರೆ ರುದ್ರಟ ಮತ್ತು ಆತನ ತರುವಾಯದ ಆಲಂಕಾರಿಕರು ನಿಂದೆಯಿಂದ ಸ್ತುತಿಯು ಇಲ್ಲವೆ ಸ್ತುತಿಯಿಂದ ನಿಂದೆಯು ಪ್ರತೀಯ(ಗಮ್ಯ)ವಾಗುತ್ತಿದ್ದರೆ ಈ ಅಲಂಕಾರವಾಗುವುದೆಂದು ಹೇಳುತ್ತಾರೆ.

೭೫೮ — ಹೋ :

ಭುಜಂಗಭೋಗಸಂಸಕ್ತಾ ಕಲತ್ರಂ ತವ ಮೇದಿನೀ
ಅಹಂಕಾರಃ ಪರಾಂ ಕೋಟಿಮಾರೋಹತಿ ಕುತಸ್ತವ

ದಂಡಿ ೨–೩೪೬

ಸೂತ್ರ ೧೪೧

ಅವಯುವ

ರುದ್ರಟ ೧೦–೧೪

ಪ್ರಕೃತಾರ್ಥಕ್ಕೆ ಪೋಷಕವಾಗುವಂತಹ ಇನ್ನೊಂದು ಅರ್ಥವು ಅವಯುವ ರೂಪವಾಗಿರುವ ವಿಶೇಷಣಗಳಿಂದ ಸೂಚಿತವಾಗುತ್ತಿದ್ದರೆ ಈ ಅಲಂಕಾರವಾಗುವುದು. ಇದಕ್ಕೂ ತತ್ತ್ವಕ್ಕೂ ಭೇದವೆಂದರೆ ಅವಯುವದಲ್ಲಿ ವಿಶೇಷಣಗಳ ಸಮುದಾಯವು ಮುಖ್ಯಾರ್ಥಕ್ಕೆ ಪುಷ್ಟಿಯನ್ನು ಕೊಡುತ್ತದೆ; ತತ್ತ್ವದಲ್ಲಿ ಹೆಚ್ಚಿನದೊಂದು ಭಾವವು ಸೂಚಿತವಾಗುತ್ತದೆ.

೭೬೦—ರುದ್ರಟನ ಪದ್ಯದ ಅನುವಾದವು. ಇಲ್ಲಿ ಪೂರ್ವಾರ್ಧದಲ್ಲಿ ಪ್ರಯೋಗಿಸಿದ ಅವಯುವರೂಪವಾದ ವಿಶೇಷಣಗಳಿಂದ ಹೊರಡುವ ಅರ್ಥವನ್ನು ನಾಗವರ್ಮನು ಉತ್ತರಾರ್ಧದಲ್ಲಿ ಪ್ರಕಟಿಸಿದ್ದಾನೆ. ಇದು ಮೂಲದಲ್ಲಿ ಇಲ್ಲವೆಂಬುದು ಕೆಳಗಿನ ಪದ್ಯದಿಂದ ಗೊತ್ತಾಗುತ್ತದೆ :

ಭುಜಯುಗಲೇ ಬಲಭದ್ರಃ ಸಕಲಜಗಲ್ಲಂಘನೇ ತಥಾ ಬಲಿಜಿತ್
ಅಕ್ರೂರೋ ಹೃದಯೇಽಸೌ ರಾಜಾ ಭೂದರ್ಜುನೋ ಯಶಸಿ

ರುದ್ರಟ ೧೦–೧೯

ವಿರೋಧಾಭಾಸ

ದಂಡಿ ೨–೩೩೩; ರುದ್ರಟ ೧೦–೨೨

ನಿಜವಾಗಿಯೂ ವಿರುದ್ಧವಲ್ಲವಾದರೂ ವಿರುದ್ಧವೆಂಬಂತೆ ಕಾಣುವ ಎರಡು ಬೇರೆ ಬೇರೆ ಅರ್ಥಗಳು ತೋರುವುದು ಈ ಅಲಂಕಾರದ ಲಕ್ಷಣವು. ಇದರ ಸಂಬಂಧವಾಗಿ ಹೆಚ್ಚಿನ ಸಂಗತಿಗಾಗಿ ಸೂತ್ರ ೧೭೦ ರಲ್ಲಿ ಹೇಳಿದ ವಿರೋಧಾಲಂಕಾರವನ್ನು ಕುರಿತು ಟಿಪ್ಪಣಿಯಲ್ಲಿ ಹೇಳಿದುದನ್ನು ನೋಡುವುದು.

ಸೂತ್ರ ೧೪೨

ಅಧಿಕ

ರುದ್ರಟ ೧೦–೭

ಪ್ರಕೃತಕ್ಕೆ ಸಂಬಂಧಪಟ್ಟ ಅರ್ಥಕ್ಕಿಂತ ಉತ್ಕೃಷ್ಟವಾದ ಆದರೆ ಅಪ್ರಕೃತವಾದ ಇನ್ನೊಂದು ಅರ್ಥವು ಹೊರಡುವುದರಿಂದ ಈ ಅಲಂಕಾರವು ಉಂಟಾಗುವುದು.

೭೬೩ — ಇದರಲ್ಲಿ ಪ್ರಕೃತಾರ್ಥವು ಖಳರನ್ನು ಕುರಿತು ಇರುವುದು. ಆದರೆ ಇಲ್ಲಿ ಇದಕ್ಕೂ ಹೆಚ್ಚಿನ (ಅಧಿಕ) ಅರ್ಥವೆಂದರೆ: ಮದನಹರನಾದ ಶಿವನೇ ನಿಜವಾಗಿ ಅಭಿವಂದ್ಯನೆಂಬುದು.

ಮಮ್ಮಟಾದಿಗಳು ಅಧಿಕವೆಂದು ಶ್ಲೇಷಕ್ಕೆ ಸಂಬಂಧವಿಲ್ಲದ ಬೇರೊಂದು ಅಲಂಕಾರವನ್ನೇ ಹೇಳುತ್ತಾರೆ. ಆಶ್ರಯ ಮತ್ತು ಆಶ್ರಯಿ, ಆಧಾರ ಮತ್ತು ಆಧೇಯ ಇವುಗಳಲ್ಲಿ ಒಂದು ಮತ್ತೊಂದಕ್ಕಿಂತ ದೊಡ್ಡದು (ಅಧಿಕ) ಎಂದು ವರ್ಣಿಸುವುದರಲ್ಲಿ ಈ ಅಲಂಕಾರವಾಗುವುದು. ಇದು 'ವಿಷಮ' (ಪರಸ್ಪರಾಸಂಗತಿಕ) ವೆಂಬ ಅಲಂಕಾರದಿಂದ ಬೇರೆಯಾದುದು. ವಿಷಮದಲ್ಲಿ ಯಾವ ಸಂಬಂಧವೂ ಇಲ್ಲದ ಅನುರೂಪವಲ್ಲದ ವಸ್ತುಗಳ ಸಂಘಟನೆಯು ವರ್ಣಿತವಾಗಿರುತ್ತದೆ; ಇಲ್ಲಿ ಆಧಾರ-ಆಧೇಯವೆಂಬ ಸಂಬಂಧವಿರುತ್ತದೆ. ಇದು ಅಲಂಕಾರವಾಗಬೇಕಾದರೆ ಇದರೊಳಗಿನ ಆಧಿಕ್ಯವು ಕವಿಕಲ್ಪಿತವಾಗಿರಬೇಕು. ಉದಾ: (೧) ಆಧಾರವು ಆಧೇಯಕ್ಕೆ ದೊಡ್ಡದೆಂಬುದಕ್ಕೆ ಉದಾ: 'ಪದಿನಾಲ್ಕುಂ ಲೋಕಮಂ ಕಿಱ್ಪೊಡೆಯೊಳೆ ತಳೆದಾವಿಷ್ಣು ತನ್ನೇಕದೇಶಾ | ಗ್ರದೊಳಿರ್ಪಂ........ಎನೆ ಪೆಂಪರ್ಣವಕ್ಕೇಕಭೋಗ್ಯಂ'— ಜಗನ್ನಾಥವಿಜಯ ೧-೪೫. (೨) ಆಧಾರಕ್ಕಿಂತ ಆಧೇಯವು ದೊಡ್ಡದೆನ್ನುವುದಕ್ಕೆ ಉದಾ: 'ಪಡೆಯನಿಮಿರ್ಕೆಗೀ ಧರಣಿ ಸಾಲದು ಕೇತುಗಳೇಱ್ಗಿಗಂ ನಭಂ | ಕಡುಕಿಱಿದು' ಇತ್ಯಾದಿ — ಜಗನ್ನಾಥವಿಜಯ ೯-೬೭.

ಅವಿಶೇಷ

ರುದ್ರಟ ೧೦-೩

ಅವಿಶೇಷ=ಸಮಾನ

ಪ್ರಕೃತಾರ್ಥವಲ್ಲದೆ ಇನ್ನೊಂದು(ಅಪ್ರಕೃತ) ಅರ್ಥವು ಎರಡಕ್ಕೂ ಸಮಾನವಾದ ವಿಶೇಷಣಗಳಿಂದಲೇ ಹೊರಡುವುದರಿಂದ ಈ ಅಲಂಕಾರವಾಗುವುದು.

೭೬೪ — ಈ ಪದ್ಯವು ದಂಡಿಯು (೨-೨೮) ಹೇಳಿದ 'ಶ್ಲೇಷೋಪಮೆ' ಯನ್ನು ಹೋಲುತ್ತದೆ. ಇಲ್ಲಿ ಬಂದ 'ಗುರುಪರಿಣಾಹಂಗಳ್, ಪೀವರಂಗಳ್' ಇತ್ಯಾದಿ ವಿಶೇಷಣಗಳು ಕುಚಮಂಡಳಕ್ಕೂ ಅದ್ರಿಗಳಿಗೂ ಸಾಮಾನ್ಯವಾಗಿರುವುವು.

ಸೂತ್ರ ೧೮೩

ಅಸಂಭವ

ರುದ್ರಟ ೧೦-೧೬

ಇದನ್ನೇ ದಂಡಿಯು 'ವಿರೋಧಿಶ್ಲೇಷ'ವೆಂದು ಹೇಳಿದ್ದಾನೆ (೨-೩೨೨). ಇಲ್ಲಿ

ಉಪಮೇಯಕ್ಕೆ ಪ್ರಯೋಗಿಸಿದ ವಿಶೇಷಣಗಳು ಉಪಮಾನಕ್ಕೆ ವಿರುದ್ಧವಾಗಿ ಅಸಂಭವವಾಗಿ ತೋರುತ್ತವೆ. ೭೬೬ನೆಯ ಪದ್ಯವು ದಂಡಿಯ ೨-೩೨೨ನ್ನೂ ರುದ್ರಟನ ೧೦-೧೭ನ್ನೂ ಹೋಲುತ್ತದೆ. ಇಲ್ಲಿ ವೃಷನೆಂಬ ಅಸುರನನ್ನು ಸಂಹಾರವಾಡಿದುದರಿಂದ ಕೃಷ್ಣನು 'ವೃಷಚ್ಛೇದನ'ನು; ವರ್ಣ್ಯನಾದ ಅರಸನು 'ಅವೃಷಚ್ಛೇದನ'ನು. ಆದುದರಿಂದ ಅರಸನು ಕೃಷ್ಣನನ್ನು ಹೋಲುತ್ತಾನೆಂಬುದು ಅಸಂಭವ. ಆದರೆ 'ವೃಷ'ವೆಂಬುದಕ್ಕೆ ಧರ್ಮವೆಂದು ಅರ್ಥಮಾಡಿದಲ್ಲಿ ಅರಸನು ಧರ್ಮರಕ್ಷಕನು ಎಂದಾಗುವುದರಿಂದ ವಿರೋಧವು ಪರಿಹಾರವಾಗುವುದು.

ವಕ್ರೋಕ್ತಿ

ರುದ್ರಟ ೧೦-೯

ರುದ್ರಟನು ಇದನ್ನು 'ವಕ್ರಶ್ಲೇಷ'ವೆಂದು ಹೇಳಿದ್ದಾನೆ. ಬೇರೆಯವರು ಹೇಳುವ 'ವಕ್ರೋಕ್ತಿ'ಗೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ಶ್ಲೇಷದಿಂದ ಹೊರಡುವ ಅರ್ಥಾಂತರವು ಬೇರೊಂದು ರಸವನ್ನು ಸೂಚಿಸಿದರೆ ಈ ಅಲಂಕಾರವಾಗುವುದು.

ಸೂತ್ರ ೧೮೪

ಭಂಗಶ್ಲೇಷ — ೧೭೮, ೧೭೯ ಸೂತ್ರಗಳ ಟಿಪ್ಪಣಿಯನ್ನು ನೋಡಿರಿ.

ಸೂತ್ರ ೧೮೫

ದಂಡಿ ೨-೩೫೯, ೩೬೦; ಭಾಮುಹ ೩-೪೯

ಸಂಶ್ಲೇಷ: ಅನೇಕ ಅಲಂಕಾರಗಳು ಒಂದೇ ಕಡೆಯಲ್ಲಿ ಕೂಡುವುದಕ್ಕೆ ಈ ಹೆಸರು. ಇದರಲ್ಲಿ 'ಸಂಸೃಷ್ಟಿ, ಸಂಕರ' ಎಂದು ಎರಡು ಭೇದಗಳನ್ನು ಆಲಂಕಾರಿಕರು ಮಾಡುತ್ತಾರೆ. ಅಲಂಕಾರಗಳು 'ತಿಲತಂಡುಲನ್ಯಾಯ'ದಿಂದ (ಎಂದರೆ ಒಂದಕ್ಕೊಂದು ಸಂಬಂಧವಿಲ್ಲದೆ ಪ್ರತ್ಯೇಕವಾಗಿ) ಇದ್ದರೆ ಸಂಸೃಷ್ಟಿ ಎಂತಲೂ 'ನೀರಕ್ಷೀರನ್ಯಾಯ' ದಿಂದ (ಎಂದರೆ ಒಂದರೊಳಗೊಂದು ಬೆರೆದುಕೊಂಡು) ಇದ್ದರೆ ಸಂಕರವೆಂತಲೂ ಹೇಳುತ್ತಾರೆ. ಸಂಸೃಷ್ಟಿಯಲ್ಲಿ (೧) ಎರಡು ಶಬ್ದಾಲಂಕಾರಗಳಾಗಲೀ (೨) ಎರಡು ಅರ್ಥಾಲಂಕಾರಗಳಾಗಲೀ (೩) ಒಂದು ಶಬ್ದಾಲಂಕಾರ ಮತ್ತೊಂದು ಅರ್ಥಾಲಂಕಾರವಾಗಲೀ ಕೂಡಿ ಬರುವುದರಿಂದ ಮೂರು ವಿಧಗಳಾಗುವುವು. ಸಂಕರದಲ್ಲಿ (೧) ಅಂಗಾಂಗಿಭಾವ: ಒಂದು ಪ್ರಧಾನ ಮತ್ತೊಂದು ಆಧೀನ, (೨) ಸಮಪ್ರಧಾನ, (೩) ಸಂದೇಹ (ಅಲಂಕಾರವು ಒಂದೇ ಇದ್ದು ಭೇದ

ವನ್ನು ನಿಶ್ಚಯವಾಗಿ ಹೇಳಲಿಕ್ಕೆ ಬಾರದಂತೆ ಇದ್ದಾಗ ಎರಡೂ ಇರಬಹುದೆಂದು ಅಂಗೀಕರಿಸುವ ಸ್ಥಿತಿ) ಎಂದು ಮೂರು ವಿಧ. ಎರಡು ಅಲಂಕಾರಗಳಲ್ಲಿ ಒಂದು ಹೆಚ್ಚು ಮಹತ್ತ್ವದಿದ್ದು ಮತ್ತೊಂದು ಅಷ್ಟು ಸ್ಪಷ್ಟವಾಗಲೀ ಪ್ರಯೋಜಕವಾಗಲೀ ಇಲ್ಲವೆಂದು ಕಂಡುಬಂದಾಗ ಮುಖ್ಯ ಅಲಂಕಾರವೊಂದನ್ನೇ ಹೇಳಬೇಕಾಗುವುದು. ಆಗ ಸಂಕರವಾಗಲೀ ಸಂಸೃಷ್ಟಿಯಾಗಲೀ ಇಲ್ಲವೆಂದೇ ತಿಳಿಯತಕ್ಕದ್ದು.

೭೭೧ — ಭಾಮಹ ೩-೫೦

ಇಲ್ಲಿ ಉಪಮೆ, ವ್ಯತಿರೇಕ, ಶ್ಲೇಷವೆಂಬ ಮೂರು ಅಲಂಕಾರಗಳಿರುವುವು. ಮೊದಲಿನವೆರಡು ' ಸಮಕಕ್ಷಿ ' (ಸಮಪ್ರಧಾನ) ಗಳಾಗಿರುವುವು. ಶ್ಲೇಷವು ಎರಡಕ್ಕೂ ಅಧೀನವಾಗಿರುವುದು.

ಸೂತ್ರ ೧೮೬

ಭಾಮಹ ೩-೫ ರಿಂದ ೭, ೧೦, ೫೫; ದಂಡಿ ೨-೨೭೫; ಉದ್ಭಟ ೪-೧ ರಿಂದ ೫, ೭; ರುಯ್ಯಕ ೮೨; ಕುವಲಯ ೧೭೦, ೧೭೧; ಮಾರ್ಗ ೩-೧೮೮, ೧೯೯, ೨೦೪, ೨೦೬.

ಸಂಸ್ಕೃತ-ಆಲಂಕಾರಿಕರು ' ಪ್ರೇಯಃ ' ಅಥವಾ ' ಪ್ರೇಯಸ್ವತ್ ' ಹಾಗೂ 'ರಸವತ್, ಊರ್ಜಸ್ವಿ, ಸಮಾಹಿತ' ಎಂಬ ಅಲಂಕಾರಗಳನ್ನು ಒಟ್ಟಾಗಿ ಹೇಳುತ್ತಾರೆ. ಇವೆಲ್ಲವೂ ರಸಕ್ಕೆ ಸಂಬಂಧಪಟ್ಟುವು. ನಾಗವರ್ಮನು ಇವುಗಳಲ್ಲಿ ರಸವತ್ ಮತ್ತು ಸಮಾಹಿತ ಎಂಬೆರಡನ್ನು ಹೇಳಿಲ್ಲ. ಹಿಂದೆ ಸೂತ್ರ ೧೫೬ರಲ್ಲಿ ಹೇಳಿದ ಸಮಾಹಿತವು ಇದಕ್ಕೆ ಸಂಬಂಧಿಸಿದ್ದಲ್ಲ.

' ರತಿ ' ಎಂಬ ಸ್ಥಾಯಿಭಾವವು ತಕ್ಕ ವಿಭಾವ-ಅನುಭಾವಗಳಿಂದ ರಸಸ್ಥಿತಿಗೆ ಏರಿದಾಗ ಶೃಂಗಾರವೆನಿಸಿಕೊಳ್ಳುವುದು. ಈ ಶೃಂಗಾರವು ಸ್ತ್ರೀ-ಪುರುಷರಲ್ಲಿ ಮಾತ್ರ ಗೋಚರವಾಗುವುದು. ಆದರೆ ದೇವರಲ್ಲಿ, ಗುರುಜನರಲ್ಲಿ ತೋರಿಸಬಹುದಾದ ವಾತ್ಸಲ್ಯ, ಪ್ರೀತಿ ಮುಂತಾದುವು ರಸಸ್ಥಿತಿಗೆ ಹೋಗದೆ ಭಾವಗಳಾಗಿಯೇ ಉಳಿಯುತ್ತವೆಯೆಂದು ಆಲಂಕಾರಿಕರು ಗ್ರಹಿಸುತ್ತಾರೆ. ಇಂತಹ ಭಾವಗಳನ್ನು ವರ್ಣಿಸುವುದು **ಪ್ರೇಯಸ್ವತ್** ಎಂಬ ಅಲಂಕಾರವು.

ಸ್ಥಾಯಿಭಾವವನ್ನಲ್ಲದೆ ಒಂದು ರಸವನ್ನೇ ಮತ್ತೊಂದು ರಸದ ಪೋಷಣಾರ್ಥವಾಗಿ ವರ್ಣಿಸಿದರೆ ಅದು **ರಸವತ್** ಎಂಬ ಅಲಂಕಾರವಾಗುವುದು. ಉದಾ: ಕಾಮನು ಭಸ್ಮವಾದಾಗ ಪ್ರಲಾಪಿಸುತ್ತಿರುವ ರತಿಯು ಅವನ ಶೃಂಗಾರ ಚೇಷ್ಟೆಗಳನ್ನು ನೆನೆಸಿಕೊಂಡು ಬಣ್ಣಿಸುವುದು ಕರುಣಾರಸಕ್ಕೆ ಪೋಷಕವಾಗುವುದರಿಂದ ಅಂತಹ ವರ್ಣನೆಯು ರಸವದಲಂಕಾರವಾಗುವುದು.

ರಸದ ಅನೌಚಿತ್ಯವನ್ನು ವರ್ಣಿಸುವುದು ಎಂದರೆ ಸಿಟ್ಟು, ಪ್ರೀತಿ ಮುಂತಾದುವು ಮಿತಿಮೀರಿದ ಸ್ಥಿತಿಯಲ್ಲಿ ಉಂಟಾಗಬಹುದಾದ ಔಚಿತ್ಯಭಂಗವನ್ನು ವರ್ಣಿಸುವುದು **ಊರ್ಜಸ್ವಿ**ಯೆಂಬ ಅಲಂಕಾರವು.

ಒಂದು ಭಾವದ ಅಥವಾ ರಸದ ಶಾಂತಿಯನ್ನು ವರ್ಣಿಸುವುದು **ಸಮಾಹಿತ**ವೆಂಬ ಅಲಂಕಾರವು.

ಆಶೀರಲಂಕಾರವು

ದಂಡಿ ೨-೩೫೭; ಭಾಮಹ ೩-೫೫

ಇಷ್ಟಾರ್ಥವನ್ನು ಪ್ರಕಟಿಸುವುದು ಇಲ್ಲವೆ ತಮಗೆ ಪ್ರಿಯರಾದವರಿಗೆ ಶುಭ ಫಲವನ್ನು ಪ್ರಾರ್ಥಿಸುವುದು ಆಶೀರಲಂಕಾರವು. ಇದು ನಾಟಕ ಮೊದಲಾದವುಗಳ್ಲಿ ಮಾತ್ರ ಉಪಯೋಗವಾಗುವುದೆಂದು ಅನೇಕರ ಕಲ್ಪನೆಯಿರುವುದರಿಂದ ಇದು ಅಲಂಕಾರವಲ್ಲವೆಂದು ಅವರ ಮತ.

ಸೂತ್ರ ೧೮೭-೧೮೮

ಭಾಮಹ ೩-೫೩, ೫೪; ದಂಡಿ ೨-೩೬೪ ರಿಂದ ೩೬೬; ಉದ್ಭಟ ೬-೬; ರುಯ್ಯಕ ೭೧; ಕುವಲಯ ೧೬೧; ಮಾರ್ಗ ೩-೨೦೮.

'ಭಾವ' ವೆಂದರೆ ಕವಿಯ ಅಭಿಪ್ರಾಯ; ಅದು ಓದುಗರ ಮನಸ್ಸಿನಲ್ಲಿ ಸಂಪೂರ್ಣವಾಗಿ ಬರುವಂತೆ ಮಾಡುವುದೇ **ಭಾವಿಕ**ವು. ಆದುದರಿಂದ ಇದು ಸಮಗ್ರ ಕಾವ್ಯದ ಗುಣವು; ಬರಿಯ ಒಂದು ಪದ್ಯದಲ್ಲಿ ಪ್ರಕಟವಾಗತಕ್ಕದ್ದಲ್ಲವೆಂದು ದಂಡಿ, ಭಾಮಹರ ಮತ. ಆದುದರಿಂದಲೇ ಅವರು ಇದಕ್ಕೆ ಉದಾಹರಣೆಗಳನ್ನು ಕೊಟ್ಟಿಲ್ಲ. ಅವರನ್ನು ಅನುಸರಿಸಿ ನಾಗವರ್ಮನೂ ಉದಾಹರಣೆಗಳನ್ನು ಕೊಟ್ಟಿಲ್ಲ. ಬೇರೆ ಆಲಂಕಾರಿಕರು ಇದನ್ನು ಅಲಂಕಾರವೆಂದು ಗ್ರಹಿಸಿರುವರು. **ಭೂತ ಅಥವಾ ಭವಿಷ್ಯತ್ಕಾಲಗಳ ಸಂಗತಿಗಳನ್ನು ವರ್ತಮಾನದಲ್ಲಿಯೇ ಸಂಭವಿಸುತ್ತಿರುವುವೆಂದು ವರ್ಣಿಸುವುದೂ ದೂರದಲ್ಲಿ ಇದ್ದುದನ್ನು, ಇಲ್ಲವೇ ಕಾಣದೆ ಇದ್ದುದನ್ನು ಕಣ್ಣಿಗೆ ಕಂಡಂತೆ ವರ್ಣಿಸುವುದೂ ಭಾವಿಕಾಲಂಕಾರದ ಲಕ್ಷಣವು.**

ಈ ಗ್ರಂಥದಲ್ಲಿ ಹೇಳದೆ ಇದ್ದ ಕೆಲವು ಪ್ರಸಿದ್ಧ ಅಲಂಕಾರಗಳು

ನಾಗವರ್ಮನು ತನಗೆ ಹಿಂದೆ ಆಗಿಹೋದ ಸಂಸ್ಕೃತ-ಆಲಂಕಾರಿಕರ ಗ್ರಂಥಗಳ ಆಧಾರದಿಂದ ಕಾವ್ಯಾವಲೋಕನವನ್ನು ರಚಿಸಿದ ತರುವಾಯ ಬೇರೆ ಕೆಲ ಪ್ರಸಿದ್ಧ ಆಲಂಕಾರಿಕರು ಇನ್ನೂ ಹಲವು ಅಲಂಕಾರಗಳನ್ನು ಸಂಸ್ಕೃತದಲ್ಲಿ ಹೇಳಿದ್ದಾರೆ. ಅವುಗಳಲ್ಲಿ ಮಹತ್ತ್ವವುಮೆಂದು ತೋರಿದ ಕೆಲವನ್ನು ಇಲ್ಲಿ ಅಕಾರಾದಿ

ಯಾಗಿ ಸಂಗ್ರಹವಾಗಿ ಹೇಳಲಾಗಿದೆ. ಅವುಗಳನ್ನು ಕುರಿತು ವಿಸ್ತಾರವಾದ ಪ್ರತಿಪಾದನೆಗಾಗಿ ಸಂಸ್ಕೃತ ಗ್ರಂಥಗಳಾದ 'ಕಾವ್ಯಪ್ರಕಾಶ, ಅಲಂಕಾರಸರ್ವಸ್ವ, ಕುವಲಯಾನಂದ, ರಸಗಂಗಾಧರ' ಮೊದಲಾದುವುಗಳನ್ನು ನೋಡಬಹುದು.

ಅತದ್ಗುಣ: (ಮಮ್ಮಟ ೧೦-೫೨) – ಉತ್ಕೃಷ್ಟಗುಣವುಳ್ಳ ಒಂದು ವಸ್ತುವಿನ ಸಂಬಂಧವಿದ್ದರೂ ಇನ್ನೊಂದು ವಸ್ತುವಿಗೆ ಆ ಗುಣವು ಬರಲಿಲ್ಲವೆಂದು ವರ್ಣಿಸುವುದು. ಇಲ್ಲಿ ಹೇಳಿದ ವಸ್ತುಗಳಲ್ಲಿ ಒಂದು ಪ್ರಸ್ತುತ ಇನ್ನೊಂದು ಅಪ್ರಸ್ತುತವೆಂದು ತಿಳಿದುಕೊಳ್ಳುವುದರಿಂದ ಇದರಲ್ಲಿ ಎರಡು ಬಗೆಗಳಾಗುತ್ತವೆ. ಇದು 'ತದ್ಗುಣ'ವೆಂಬ ಅಲಂಕಾರಕ್ಕೆ ವಿಪರೀತವಾದುದು. ಇದು 'ವಿಶೇಷೋಕ್ತಿ' ಯಲ್ಲಿ ಅಂತರ್ಭಾವವಾಗುವುದೆಂದು ಹೇಳಬಹುದಾದರೂ ಇಲ್ಲಿ ಮುಖ್ಯವಾಗಿ ಹೇಳಬಯಸಿದುದು 'ಗುಣಗ್ರಾಹಕತ್ವವು ಉಂಟಾಗಲಿಲ್ಲ' ಎಂಬುದೇ ಆದುದರಿಂದ ಇದು 'ವಿಶೇಷೋಕ್ತಿ'ಯಿಂದ ಭಿನ್ನವಾದುದೆಂದು ಕೆಲವರು ಹೇಳುತ್ತಾರೆ. ಉದಾ: 'ಭವದ್-ವಲ್ಲಭೆಯವಳ ವಿಯೋಗಾಗ್ನಿಸಂತಪ್ತಚಿತಾಗ್ರದೊಳಿರ್ದುಂ ನೀನಜಸ್ರಂ ಕೊರಗಿದುದಿನಿತಿಲ್ಲ' ಇತ್ಯಾದಿ: ರಾಜಶೇಖರವಿಳಾಸ ೧೧-೧೦೩.

ಅತಿಶಯೋಕ್ತಿ: (ರುಯ್ಯಕ ೨೨) — (೧) ಭೇದವಿದ್ದರೂ ಭೇದವಿರುವುದಿಲ್ಲವೆಂದು ಕಲ್ಪಿಸಿ, (೨) ಭೇದವಿಲ್ಲದಿದ್ದರೂ ಭೇದವನ್ನು ಕಲ್ಪಿಸಿ, (೩) ಸಂಬಂಧವಿದ್ದರೂ ಸಂಬಂಧವಿಲ್ಲವೆಂದು ಕಲ್ಪಿಸಿ, (೪) ಸಂಬಂಧವಿಲ್ಲದಿದ್ದರೂ ಸಂಬಂಧವಿರುವುದೆಂದು ಕಲ್ಪಿಸಿ, (೫ ಅ) ಕಾರಣವೂ ಕಾರ್ಯವೂ ಏಕಕಾಲದಲ್ಲಿ ಉಂಟಾದುವೆಂದಾಗಲಿ, (೫ ಆ) ಕಾರಣಕ್ಕಿಂತಲೂ ಕಾರ್ಯವೇ ಮೊದಲು ಘಟಿಸಿತೆಂದಾಗಲಿ ಕಲ್ಪಿಸಿ ವಿಷಯ (ಪ್ರಸ್ತುತ) ವನ್ನು ವಿಷಯಿ (ಅಪ್ರಸ್ತುತ) ಯಲ್ಲಿ ಮುಳುಗಿಸಿಬಿಡುವುದೇ 'ಅತಿಶಯೋಕ್ತಿ' ಯೆಂಬ ಅಲಂಕಾರವು.

ಕುವಲಯಾನಂದಕಾರನು (೩೬ರಿಂದ ೪೩) ಇದರಲ್ಲಿ ೭ ಭೇದಗಳನ್ನು ಬೇರೆ ವಿಧವಾಗಿ ಕಲ್ಪಿಸಿದ್ದಾನೆ. (೧) **ರೂಪಕಾತಿಶಯೋಕ್ತಿ**: ಉಪಮೆಯನ್ನು ಹೇಳದೆ ಬರಿಯ ಉಪಮಾನವನ್ನೆ ಹೇಳುವುದು.* ಉದಾ: 'ತಾವರೆಯಲ್ಲಿ ತಾರೆ ಜನನಂಬಡೆದಂದು' ಇತ್ಯಾದಿ: ರಾಜಶೇಖರವಿಳಾಸ ೭-೨೬; (೨) **ಸಾಪಹ್ನವಾತಿಶಯೋಕ್ತಿ**: ಅಪಹ್ನುತಿಗರ್ಭವಾದ ಅತಿಶಯೋಕ್ತಿ (೩) **ಭೇದಕಾತಿಶಯೋಕ್ತಿ**: ಒಂದು ವಸ್ತುವನ್ನು

* ಇದನ್ನು 'ನಿಗರಣ' ವೆಂದು ಸಂಸ್ಕೃತ-ಆಲಂಕಾರಿಕರು ಹೇಳುತ್ತಾರೆ. 'ನಿಗರಣ'ವೆಂದರೆ ವಿಷಯವನ್ನು ವಿಷಯಿಯಲ್ಲಿ ಸಂಪೂರ್ಣವಾಗಿ ಮುಳುಗಿಸುವುದು ಎಂದರೆ ('ಅಧ್ಯವಸಾಯ' ಮಾಡುವುದು).

ತನ್ನಿಂದ ಅಥವಾ ತನ್ನ ಸ್ವಭಾವದಿಂದ ಭಿನ್ನವಾದುದೆಂದು ವರ್ಣಿಸುವುದು. ಉದಾ: 'ಇದು ಪೊಸರೀತಿ ನೋಡಿದು ನವೀನಮಲಂಕೃತಿ' ಇತ್ಯಾದಿ : ಶಬರಶಂಕರ ವಿಳಾಸ ೧-೨೬; (೪) **ಸಂಬಂಧಾತಿಶಯೋಕ್ತಿ**: ಮೇಲಿನ ಪರಿಚ್ಛೇದ (paragraph) ದಲ್ಲಿಯ (೩) ಮತ್ತು (೪) ವಿಧಗಳನ್ನು ಹೋಲುವುದು. ಉದಾ: 'ಸಿರಿ ತಂದಿಕ್ಕಿದ ಶೋಕೆ' ಇತ್ಯಾದಿ: ಗಿರಿಜಾಕಲ್ಯಾಣ ೨-೩೧; ಮತ್ತು 'ಉರಮಿಂಬಿಲ್ಲ ಪಯೋಧರ ದ್ವಯದ ಕೊರ್ಬಿಂಗಾಸ್ಯಮಿಂಬಿಲ್ಲ' ಇತ್ಯಾದಿ: ಗಿರಿಜಾಕಲ್ಯಾಣ ೪-೫೪; (೫) **ಅಕ್ರಮಾತಿಶಯೋಕ್ತಿ**: ಇದು ಮೇಲೆ ಹೇಳಿದ (೫ ಅ)ವನ್ನು ಹೋಲುವುದು. ಉದಾ: 'ಎನ್ನಿನಿಯಂ ಕನಲ್ದು ಪೋದೊಡೆ ಬಳೆ ಕೈಗಳಿಂದಿಱಿದು ಬೀೞ್ವವು ಬರ್ಪುದುಮಾಗಳಂತೆ ಕೇಳೊಡೆವುವು ನನ್ನಿ' ಇತ್ಯಾದಿ: ಕವಿಕುಂಜರಲೀಲಾವತಿ ೨-೫೪; (೬) **ಚಪಲಾತಿಶಯೋಕ್ತಿ**: ಕಾರಣದ ಹೆಸರು ಹೇಳುವಷ್ಟರಲ್ಲಿಯೆ ಕಾರ್ಯೋತ್ಪತ್ತಿಯಾಯಿತೆಂಬ ವರ್ಣನೆ; (೭) **ಅಂತ್ಯಂತಾತಿಶಯೋಕ್ತಿ**: ಇದು ಮೇಲಿನ (೫ ಆ) ವನ್ನು ಹೋಲುವುದು.

ಅತ್ಯುಕ್ತಿ: (ಕುವಲಯ ೧೬೩) — ಶೌರ್ಯ-ಔದಾರ್ಯ-ಸೌಂದರ್ಯ ಮೊದಲಾದುವು ಅದ್ಭುತವಾಗಿಯೂ ಅಸಂಭಾವಿತವಾಗಿಯೂ ಅಲೌಕಿಕವಾಗಿಯೂ ಇರುವುವೆಂದು ವರ್ಣಿಸುವುದು. ಈ ಅಲಂಕಾರವು 'ಉದಾತ್ತ' ದಲ್ಲಿ ಸೇರ್ಪಡೆಯಾಗುವುದೆಂದು ಕೆಲ ಆಲಂಕಾರಿಕರು ಹೇಳುವರು. ಉದಾ : 'ಎಸಳೆ ದೆಸೆ ಮಿಸುನಿವೆಟ್ಟು ಪೊಸಕರ್ಣಿಕೆ' ಇತ್ಯಾದಿ: ರಾಜಶೇಖರವಿಳಾಸ ೫-೪.

ಅಧಿಕ: ಇದೇ ಪುಟ ೩೨೦ ನೋಡುವುದು.

ಅನನ್ವಯ: (ಮಮ್ಮಟ ೧೦-೫) — ಒಂದು ವಸ್ತುವನ್ನು ಹೋಲಿಸುವುದಕ್ಕೆ ಇನ್ನೊಂದು ವಸ್ತು ದೊರಕದಿರುವುದರಿಂದ ಅದನ್ನು ಅದಕ್ಕೇ ಹೋಲಿಸುವುದು ಉದಾ : 'ದೊರೆಗಾಣೆಂ ನಿನಗೆ ಜಿನೇಶ್ವರ ನಿನಗೆ ನೀನೆ ದೊರೆಯೆನಿಪಯ್'.

ಅನುಗುಣ: (ಕುವಲಯ ೧೪೫) — ಬೇರೊಂದು ವಸ್ತುವಿನ ಸಂಬಂಧದಿಂದ ಒಂದು ವಸ್ತುವಿನ (ಮೊದಲೆ ಇದ್ದ) ಗುಣವು ವರ್ಧಿಸುವುದೆಂಬ ವರ್ಣನೆ. ಉದಾ: 'ಮೊದಲೆ ಮರ್ಕಟ ಮೇಲೆ ಮಧ್ಯ ಮದವು ತಲೆಗೇರಿರಲು' ಇತ್ಯಾದಿ: ಅನುಭವಾಮೃತ ೧-೩೬.

ಅರ್ಥಾಪತ್ತಿ: (ಕುವಲಯ ೧೨೦) — ಒಂದು ಅರ್ಥವನ್ನು ಸ್ಥಾಪಿಸಲಿಕ್ಕೆ ಹೇಳಿದ ಕಾರಣವು ಇನ್ನೊಂದು ಅರ್ಥವನ್ನು ಸ್ಥಾಪಿಸಲಿಕ್ಕೆ ಅನುಕೂಲವಾದರೆ*

* ಸಂಸ್ಕೃತದಲ್ಲಿ ಇದಕ್ಕೆ 'ಕೈಮುತ್ಯನ್ಯಾಯ' ಎಂದೆನ್ನುವುದುಂಟು. 'ಇವರ ಅವಸ್ಥೆಯೆ ಹೀಗಾದಾಗ ಬೇರೆಯದನ್ನು ಕೇಳಬೇಕೆ' ಎಂಬ ಅರ್ಥವನ್ನು ಸೂಚಿಸುವ 'ಕಿಮುತ' ಎಂಬ ಶಬ್ದಪ್ರಯೋಗವು ಇದರಲ್ಲಿರುತ್ತದೆ.

ಈ ಅಲಂಕಾರವಾಗುವುದು. ಉದಾ : ' ಪರಿಕಿಪೊಡೆ ಪಿಶುನಸಗ್ಗದ ಹರನೊಳ್ ಪುರುಡಿಸುವನೆಂದೊಡುಟೀದರ ಪುರುಳೇಂ'ಇತ್ಯಾದಿ: ಕವಿಕುಂಜರಲೀಲಾವತಿ ೧-೩೩.

ಅಸಂಗತಿ : (ಮಮ್ಮಟ ೧೦- ೩೮) — ಕಾರ್ಯ–ಕಾರಣಗಳು ಬೇರೆ ಬೇರೆ ಎಡೆಗಳಲ್ಲಿ ಉಂಟಾದುವೆಂದು ಹೇಳುವುದು. ಉದಾ : ' ಮತ್ತಮೂರ್ವಸಿಯ ಸೊಗಕಾ ' ಇತ್ಯಾದಿ: ಚೆನ್ನಬಸವಪುರಾಣ ೩೭-೭೪.

ಉದಾತ್ತ : (ಮಮ್ಮಟ ೧೦-೨೯) — ಈ ಹೆಸರಿನ ಅಲಂಕಾರಗಳು ಎರಡು ಇರುತ್ತವೆ: (೧) ಲೋಕಾನುಭವವನ್ನು ಮೀರಿದ ಸಂಪತ್ತನ್ನು ವರ್ಣಿಸುವುದು; ಉದಾ : ' ಮರವೆಲ್ಲಂ ಸುರಪಾದಪಂ ಮಿಸುಪ ಕಲ್ಲೆಲ್ಲಂ ಮಣಿಶ್ರೇಣಿ ' ಇತ್ಯಾದಿ : ಶಬರಶಂಕರವಿಳಾಸ ೧-೩೭; (೨) ಪ್ರಸ್ತುತವಾದುದೊಂದು ವಸ್ತುವಿನ ವರ್ಣನೆಯಲ್ಲಿ ಮಹಾತ್ಮರ ಚರಿತ್ರೆಯನ್ನು ಅಂಗಭೂತವಾಗಿ ವರ್ಣಿಸುವುದು; ಉದಾ : ' ಗುರುವಿನ ನನ್ನಿಗುರ್ವರೆಯನಿತ್ತು ' ಇತ್ಯಾದಿ ಕಾದಂಬರಿ ೧೦೭. ಈ ಎರಡನೆಯ ಪ್ರಕಾರವನ್ನು ಭಟ್ಟಿಯು ' **ಉದಾರ** ' ವೆಂದು ಹೇಳಿದ್ದಾನೆ.

ಉದಾಹರಣ : ಇದೇ ಪುಟ ೩೦೩ ನೋಡುವುದು.

ಉನ್ಮೀಲಿತ : ಬಹುಸಾದೃಶ್ಯದಿಂದ ಎರಡು ಪದಾರ್ಥಗಳು ಒಂದೇ ಎಂದು ಕಾಣುತ್ತಿದ್ದರೂ ಒಂದು ವಿಶೇಷಗುಣದಿಂದ ಅವುಗಳ ಭೇದವು ಗೊತ್ತಾಯಿತೆಂದು ಹೇಳುವುದು. ಇದು ' ಮೀಲಿತಾಲಂಕಾರ 'ದ ಪ್ರತಿದ್ವಂದ್ವಿಯಾದ ಅಲಂಕಾರವು. ಉದಾ : ' ಲಳಿತಾವಯವದ ಚೆಲ್ವಿಂ | ತೊಳಗುವ ಲಾವಣ್ಯರಸದಿನಬಳಾವಳಿ ತ || ನ್ನಿಳಯಮಣಿಪುತ್ರಿಕಾಸಂ|ಕುಳದೊಳ್ ಯಾನಾನುಮೇಯವಾಯ್ತಾ ಪದದೊಳ್||' ಜಗನ್ನಾಥವಿಜಯ ೧೦-೧೩೫.

ಉಪಮೇಯೋಪಮೆ : (ಮಮ್ಮಟ ೧೦-೫) — ಇದನ್ನೇ ನಾಗವರ್ಮನು ' ಅನ್ಯೋನ್ಯೋಪಮೆ ' ಎಂದು ಹೇಳಿದ್ದಾನೆ. ಇದೇ ಪುಟ ೧೪೯ ಮತ್ತು ೨೯೫ ನೋಡುವುದು. ಎರಡು ವಸ್ತುಗಳಲ್ಲಿ ಪರಸ್ಪರ ಉಪಮೇಯ-ಉಪಮಾನ ಭಾವವಿದ್ದಲ್ಲಿ ಈ ಅಲಂಕಾರವಾಗುವುದು. ಇವುಗಳಿಗೆ ಸದೃಶವಾದ ಮೂರನೆಯ ವಸ್ತುವಿಲ್ಲವೆಂಬ ಅರ್ಥವೂ ಹೊರಡುವುದು. ಉದಾ : ಇದೇ ೬೭೧.

ಉಲ್ಲೇಖ : (ರುಯ್ಯಕ ೧೯) — ಇದು ಎರಡು ಪ್ರಕಾರವಾಗಿರುವುದು. (೧) ಒಂದೇ ವಸ್ತುವನ್ನು ಬೇರೆ ಬೇರೆಯವರು ಬೇರೆ ಬೇರೆಯಾಗಿ ತಿಳಿದುಕೊಂಡಂತೆ ವರ್ಣನೆ; ಉದಾ : ' ಶಿವನೆಂದುತ್ತಮಶೈವರಂಬುರುಹನೇತ್ರಂಗೆತ್ತು ತಾಂ ವೈಷ್ಣವರ್ ' ಇತ್ಯಾದಿ: ಉದ್ಭಟಕಾವ್ಯ ೧-೧೦; (೨) ಒಂದೇ ವಸ್ತುವು ಬೇರೆ

ಬೇರೆ ' ವಿಷಯ ' ಸಂಬಂಧದಿಂದ ಇಲ್ಲವೆ ಬೇರೆ ಬೇರೆ ಆಶ್ರಯಗಳ ಸಂಬಂಧದಿಂದ ಬೇರೆ ಬೇರೆಯಾಗಿ ವರ್ಣಿತವಾಗುವುದು; ಉದಾ : ' ಮಿಸುಪ ನಿಶಾನಿತಂಬಿನಿಗೆ ಬೆಳ್ಳುಡೆಯಾದುದು ಭಾನುರೋಚಿಯಿಂ ಬಸವಳಿದೀ ಧರಾಂಗನೆಗೆ ಚಂದನಲೇಪ ಮಾದುದು ' ಇತ್ಯಾದಿ : ರಾಜಶೇಖರವಿಳಾಸ ೧೧-೬೫.

ಕಾರಣಮಾಲೆ : (ಮಮ್ಮಟ ೧೦-೩೪) — ಇದೇ ಪುಟ ೨೮೬ ನೋಡುವುದು.

ಕಾವ್ಯಲಿಂಗ : (ರುಯ್ಯಕ ೫೭) — ಇದೇ ಪುಟ ೨೮೬ ರ ಅಡಿಟಿಪ್ಪಣಿಯನ್ನು ನೋಡುವುದು.

ನಿದರ್ಶನ : (ಮಮ್ಮಟ ೧೦-೧೧) — ಇದೇ ಪುಟ ೩೦೩ ನೋಡುವುದು.

ನಿರುಕ್ತಿ : (ಕುವಲಯ ೧೬೪) — ಒಂದ ಅರ್ಥವುಳ್ಳ ನಾಮ ಇಲ್ಲವೆ ಅಭಿಧಾನಕ್ಕೆ ಇನ್ನೊಂದು ಅರ್ಥವನ್ನು ಕಲ್ಪಿಸಿ ಅದಕ್ಕನುಗುಣವಾದ ವರ್ಣನೆಯನ್ನು ಮಾಡುವುದು. ಉದಾ : ' ಎನ್ನ ಸಹಾಯದಿಂದೆ ತಾಳ್ದು ಘನತ್ವಮಂ ' ಇತ್ಯಾದಿ : ರಾಜಶೇಖರವಿಳಾಸ ೮-೧೧೬.

ಪರಿಕರ : (ಮಮ್ಮಟ ೧೦-೩೨) — ಸಾಭಿಪ್ರಾಯವುಳ್ಳ — ಎಂದರೆ ಮುಖ್ಯಾರ್ಥಕ್ಕೆ ಪೋಷಕವಾಗುವಂತಹ — ವಿಶೇಷಣಗಳನ್ನು ಪ್ರಯೋಗಿಸುವುದು. ಅರ್ಥಪೋಷಕವಲ್ಲದ ಶಬ್ದಗಳನ್ನು ಪ್ರಯೋಗಿಸುವುದು ' ಅಪುಷ್ಟಾರ್ಥ ' ಎಂಬ ದೋಷಕ್ಕೆ ಎಡೆಗೊಡುವುದರಿಂದ ವಿಶೇಷಣಗಳು ಸಾಭಿಪ್ರಾಯವಾಗಿಯೇ ಇರಬೇಕಾಗುವುದು; ಆದುದರಿಂದ ಈ ಅಲಂಕಾರವಾಗಬೇಕಾದರೆ ಇಂತಹ ವಿಶೇಷಣಗಳು ಹಲವು ಇರಬೇಕೆಂದು ಕೆಲವರು ಹೇಳುತ್ತಾರೆ. ಮತ್ತೆ ಕೆಲವರು ಹೇಳುವುದೇನಂದರೆ: ಇಂತಹ ವಿಶೇಷಣದಿಂದ ಅಪುಷ್ಟಾರ್ಥದೋಷವು ಇಲ್ಲದಂತಾಗುವುದಲ್ಲದೆ ಮುಖ್ಯಾರ್ಥಕ್ಕೆ ಹೆಚ್ಚಿಗೆ ಕಳೆಯೇರುವುದರಿಂದ ಒಂದೇ ವಿಶೇಷಣವಿದ್ದರೂ ಈ ಅಲಂಕಾರವಾಗುವುದು. ಉದಾ : ' ಸಕಳಂಕಂ ಶಶಿ ಕಾಮನೀಶನುರಿಗಣ್ಣಿಂ ಬೆಂದವಂ ' ಇತ್ಯಾದಿ : ಗಿರಿಜಾಕಲ್ಯಾಣ ೪-೧೪೭.

ಪರಿಕರಾಂಕುರ : (ಕುವಲಯ ೬೩) — ವಿಶೇಷ್ಯವು ಸಾಭಿಪ್ರಾಯವಾಗಿದ್ದರೆ ಈ ಅಲಂಕಾರವಾಗುವುದು. ಉದಾ : ' ಶರ್ವಾಣಿಯ ಸೌಂದರ್ಯಮನೊರ್ವಂ ಬಣ್ಣಿಸುವನೆಂಬವಂ ಗಾಂಪಂ ಪ | ನ್ನಿರ್ವರ್ ಭಾರತಿಯರ್ ಸಾಸಿರ್ವರ್ ಫಣಿರಾಜರಾದೊಡಂ ತೀರ್ದಪುದೇ || ' ಗಿರಿಜಾಕಲ್ಯಾಣ ೪-೧೦. ಈ ಅಲಂಕಾರವು 'ಪರಿಕರ' ದಲ್ಲಿಯೆ ಅಂತರ್ಭಾವವಾಗುವುದೆಂದು ಕೆಲವರು ಹೇಳುತ್ತಾರೆ.

ಪರಿಣಾಮ : (ರುಯ್ಯಕ ೧೬)–ಇದು ರೂಪಕಸಜಾತೀಯವಾದ ಅಲಂಕಾರವು; ಆದರೆ ಅದರಿಂದ ಭಿನ್ನವಾದುದು. ರೂಪಕದಲ್ಲಿ ಉಪಮೇಯವು ಉಪಮಾನದ

ರೂಪವನ್ನು ತಳೆಯುವುದು. ಆದರೆ ಉಪಮಾನದ ಸ್ವಭಾವದಿಂದ ಘಟಿಸಿದ ಉಪಮೇಯಕ್ಕೆ ಸಹಜವಾದ ಒಂದು ಕಾರ್ಯವು ವರ್ಣಿತವಾದರೆ ಆಗ ಆ ಉಪಮಾನವು ತಿರುಗಿ ಉಪಮೇಯದ ರೂಪದಿಂದ ಪರಿಣಮಿಸಿತೆಂದು ಭಾವಿಸಬೇಕಾಗುತ್ತದೆ; ಆಗ 'ಪರಿಣಾಮ' ವೆಂಬ ಈ ಅಲಂಕಾರವಾಗುತ್ತದೆ. 'ಮುಖಕಮಲವು ಶೋಭಿಸುವುದು' ಎಂದರೆ **ರೂಪಕ**; 'ಮುಖಕಮಲವು ನೋಡುವುದು' ಎಂದರೆ **ಪರಿಣಾಮ**; ಏಕೆಂದರೆ ನೋಡುವುದು ಕಮಲಕ್ಕೆ ಅಸಾಧ್ಯವಾದ ಕಾರ್ಯ. ಹೀಗೆಯೆ 'ವಾಗಮೃತವನ್ನು ಈಂಟು' ಎಂದರೆ **ರೂಪಕ**; 'ವಾಗಮೃತವನ್ನು ಕೇಳು' ಎಂದರೆ **ಪರಿಣಾಮ**.

ಪರಿಸಂಖ್ಯೆ:* (ಮಮ್ಮಟ ೧೦-೩೩)—ಇದು ಎರಡು ಬಗೆಯಾಗಿರುವುದು: (೧) ಒಂದು ಪ್ರಶ್ನೆಗೆ ಅನೇಕ ಉತ್ತರಗಳನ್ನು ಹೇಳಬಹುದಾದ ಪ್ರಸಂಗದಲ್ಲಿ ಒಂದನ್ನೆ ಹೇಳುವುದರಿಂದ ಉಳಿದುವುಗಳು ಇಲ್ಲಿ ಪ್ರಯೋಜನವಲ್ಲವೆಂದು ವಾಚ್ಯವಾಗಿ ಇಲ್ಲವೆ ಗಮ್ಯವಾಗಿರುವಂತೆ ಸೂಚಿಸುವುದು. ಉದಾ: 'ಗುರುಪಾದಸೇವೆಯೆ ಕರಣಕೆ ಭೂಷಣ' ಇತ್ಯಾದಿ ಕೈವಲ್ಯಕಲ್ಪವಲ್ಲರಿ. (೨) ಒಂದರಲ್ಲಿ ಒಂದು ವಸ್ತು ಇಲ್ಲೆಂದೂ ಮತ್ತೊಂದರಲ್ಲಿ ಇರುವುದೆಂದು ಹೇಳುವುದು. ಉದಾ: 'ಬಡತನಮುಂ ಮಾಂದ್ಯಮುಮಿ | ಟ್ಟೆಡೆಯುಂ ಚಪಲತೆಯುಮಧಿಕತರಕುಟಿಲತೆಯುಂ | ಮಡದಿಯ ನಡುನಡೆಮೊಲೆ ಕಣ್ಗಡೆ ಕುರುಳೊಳ್ ತೋರ್ಕುಮಲ್ಲಿ ತಲೆದೋರುಗುಮೇ ||' ರಾಜಶೇಖರವಿಳಾಸ ೨-೩೧.

ಪೂರ್ವರೂಪ: (ಕುವಲಯ ೧೪೨) — (ಅ) ಒಂದು ವಸ್ತುವಿನ ಮೊದಲಿದ್ದ ಗುಣವು ನಡುವೆ ಮಾರ್ಪಟ್ಟು ಮತ್ತೆ ಮೊದಲಿನ ರೂಪವನ್ನು ಹೊಂದಿತೆಂದು ವರ್ಣಿಸುವುದು; ಇಲ್ಲವೆ (ಆ) ವಸ್ತುವಿನ ರೂಪವು ಮಾರ್ಪಟ್ಟರೂ ಗುಣವು ಮೊದಲಿನಂತೆಯೇ ಇರುವುದೆಂದು ವರ್ಣಿಸುವುದು. ಉದಾ: (ಅ) 'ಕರತಳದರುಣದ್ಯುತಿ ತಳ್ತಿರೆ' ಇತ್ಯಾದಿ: ರಾಜಶೇಖರವಿಳಾಸ ೧೦-೩೫; (ಆ) 'ಕಾಮನು ಶಿವನಿಂದ ಸುಡಿಸಿಕೊಂಡು ಅನಂಗನಾದರೂ ಲೋಕಕ್ಕೆ ತಾಪವೀಯುವುದನ್ನು ಬಿಡಲಿಲ್ಲ'.

ಪ್ರತ್ಯನೀಕ: (ಮಮ್ಮಟ ೧೦-೪೩) — ಬಲವಂತನಾದ ಶತ್ರುವನ್ನು ಎದುರಿಸಲಾರದೆ ಅವನ ಪಕ್ಷದವರ ಮೇಲೆ ಪರಾಕ್ರಮವನ್ನು ತೋರಿಸಿದಂತೆ ವರ್ಣಿಸುವುದು. ಉದಾ: 'ತಮಮೆಂದು ವಿಧುಂತದ' ಇತ್ಯಾದಿ: ರಾಜಶೇಖರವಿಳಾಸ ೧೧-೫೬.

* 'ಪರಿಸಂಖ್ಯೆ' ಎಂಬುದು ಪಾರಿಭಾಷಿಕ ಶಬ್ದವು. ಅದರ ವಿವೇಚನೆಗಾಗಿ ಮುಂದೆ ಕವಿಸಮಯಾಧಿಕರಣದ ನಿಯಮಾರ್ಥ ಪ್ರಕರಣದ ಟಿಪ್ಪಣಿಯನ್ನು ನೋಡುವುದು.

ಭಾವೋದಯ, ಭಾವಸಂಧಿ, ಭಾವಶಬಲತೆ : (ರುಯ್ಯಕ ೮೩) — ಇವು ' ರಸಾಲಂಕಾರ ' ಗಳು. ಒಂದು ಭಾವವು ಹೊಸದಾಗಿ ಉಂಟಾಯಿತೆಂದು ಹೇಳುವುದು **' ಭಾವೋದಯ '** ವು. ಬೇರೆಬೇರೆಯಾದ ಎರಡು ಭಾವಗಳು ಏಕಕಾಲದಲ್ಲಿದ್ದುವೆಂಬ ವರ್ಣನೆಯೆ **'ಭಾವಸಂಧಿ'**. ಮೊದಲಿನ ಭಾವವು ನಾಶವಾಗಿ ಇನ್ನೊಂದು ಭಾವವು ಹುಟ್ಟಿತೆಂದೂ ಅದೂ ನಾಶವಾಗಿ ಮತ್ತೊಂದು ಭಾವವು ಹುಟ್ಟಿತೆಂದೂ ಹೀಗೆಯೆ ಅನೇಕ ಭಾವಗಳನ್ನು ವರ್ಣಿಸುವುದು **' ಭಾವಶಬಲತೆ '**. ಉದಾಹರಣೆಗಳಿಗೆ ಅಪ್ರತಿಮವೀರಚರಿತೆಯಲ್ಲಿ ಪುಟ ೧೨೫-೧೨೬ಗಳನ್ನು ನೋಡುವುದು.

ಲಲಿತ : (ಕುವಲಯ ೧೨೮) — ಪ್ರಸ್ತುತವಾದ ಒಂದು ವಸ್ತುವಿನ ಕಾರ್ಯವನ್ನು ಹೇಳಬಯಸಿ ಆ ಕಾರ್ಯವನ್ನು ಹೇಳದೆ ಅದಕ್ಕೆ ಸಮಾನವಾದ ಇನ್ನೊಂದು ಕಾರ್ಯವನ್ನು ಪ್ರತಿಬಿಂಬಭಾವದಿಂದ ಹೇಳುವುದು. ಉದಾ: 'ಮರುಳಹರೆ ಭೂಪಾಲ ಬಾದರಾಯಣನಿಕ್ಕಿದುಬ್ಬಿಲ ಕಣ್ಣಿಗೆ ಸಿಲ್ಕುವರೆ ' ಇತ್ಯಾದಿ: ಜೈಮಿನಿಭಾರತ ೨-೫೭.

ವಕ್ರೋಕ್ತಿ : (ಕುವಲಯ ೧೪೫) — ಶ್ಲೇಷದಿಂದಾಗಲಿ ಕಾಕುಸ್ವರದಿಂದಾಗಲಿ ನುಡಿಗೆ ಬೇರೊಂದು (ವಾಚ್ಯವಾದ) ಅರ್ಥವನ್ನು ಕಲ್ಪಿಸುವುದು. ' ಎಲೆ ಕಾಯ್ಪೇರಿದೆ ಚೈತ್ರವಲ್ಲರಿಯೆ ' ಇತ್ಯಾದಿ : ರಾಜಶೇಖರವಿಳಾಸ ೧೧-೧೬೯.

ವಿಕಲ್ಪ : (ರುಯ್ಯಕ ೬೪) — ಸಮಬಲವಾದ ಎರಡು ವಿರುದ್ಧ (ಎಂದರೆ ಒಂದನ್ನು ಸ್ವೀಕರಿಸಿದರೆ ಇನ್ನೊಂದನ್ನು ಸ್ವೀಕರಿಸಲಾರದಂತಹ) ಪಕ್ಷಗಳಲ್ಲಿ ಆವುದನ್ನು ಅಂಗೀಕರಿಸಿದರೂ ಸರಿಯೆಂಬರ್ಥದ ವರ್ಣನೆ. ಇಲ್ಲಿ ಸಾದೃಶ್ಯವು ಗಮ್ಯವಾಗಬೇಕು; ಇಲ್ಲವಾದರೆ ಈ ಅಲಂಕಾರವಾಗುವುದಿಲ್ಲ. ಉದಾ : ' ಬೆಸನೇನೆಂದೊಡೆ ಪೇಟ್ವಿನೆನ್ನ ಬೆಸನಂ ' ಇತ್ಯಾದಿ : ಪಂಪಭಾರತ ೧-೭೮.

ವಿಕಸ್ವರ : (ಕುವಲಯ ೧೨೪) — ಇದೇ ಪುಟ ೩೧೧ ನೋಡುವುದು.

ವಿಚಿತ್ರ : (ರುಯ್ಯಕ ೪೭) — ಒಂದು ಫಲಸಾಧನೆಗಾಗಿ ಅದಕ್ಕೆ ವಿಪರೀತವಾದ ಕ್ರಿಯೆಯನ್ನು ಮಾಡಿದಂತೆ ಇಲ್ಲವೆ ಒಂದು ಫಲಕ್ಕೆ ಅನುಕೂಲವಾದ ಕ್ರಿಯೆಯು ಅದಕ್ಕೆ ವಿಪರೀತವಾದ ಫಲವನ್ನುಂಟುಮಾಡಿದಂತೆ ವರ್ಣಿಸುವುದು. ಉದಾ : ' ನರಪತಿಪದವಾಂತಿಳೆಯಂ । ಪೊರೆವಿನಮಪ್ರತಿಮವೀರಚಿಕದೇವೇಂದ್ರಂ||
ಮೊರೆತನಕೆಳಿಸಿದ ಬಳಸಿನ । ಮೊರೆಗುವರರ್ ಸಂಚಿಪಡಿಗವಾವುಗೆವಿಡಿವರ್ || ' ಅಪ್ರತಿಮವೀರಚರಿತೆ ೩-೧೦೫. ' ವಿಷಮಾಲಂಕಾರ ' ದಲ್ಲಿಯೂ ಕಾರ್ಯ-ಕಾರಣ ವಿಪರೀತತೆಯಿದ್ದರೂ ಅದರಲ್ಲಿ ಆ ವಿಪರೀತತೆಯು ತನ್ನಿಂದ ತಾನೆ ಉಂಟಾಗುತ್ತದೆ; ' ವಿಚಿತ್ರ ' ದಲ್ಲಿ ಪ್ರಯತ್ನಪೂರ್ವಕವಾಗಿ ವಿಪರೀತತೆ ಉತ್ಪನ್ನವಾಗುತ್ತದೆ.

ವಿನೋಕ್ತಿ : (ಮಮ್ಮಟ ೧೦-೨೭) – ಒಂದು ಪದಾರ್ಥವು ಇಲ್ಲದಿರುವುದರಿಂದ ವರ್ಣ್ಯವಾದ ವಸ್ತುವು ಹೀನವಾಗಿರುವುದು ಇಲ್ಲವೆ ರಮಣೀಯವಾಗಿರುವುದು ಎಂದು ವರ್ಣಿಸುವುದು. ಉದಾ : ' ಎಳವೆಱೆ ಬಳೆಯದ ಗಗನಸ್ಥಳಿ ' ಇತ್ಯಾದಿ: ಮಲ್ಲಿನಾಥಪುರಾಣ.

ವಿಶೇಷ :(ಮಮ್ಮಟ ೧೦-೪೯, ೫೦)— ಈ ಹೆಸರಿನ ಅಲಂಕಾರಗಳು ಮೂರು ಇರುವುವು : (೧) ಆಧೇಯವಾದ ಒಂದು ವಸ್ತುವು ಆಧಾರವಿಲ್ಲದೆ ಇರುವುದೆಂಬ ವರ್ಣನೆ; (೨) ಒಂದು ವಸ್ತುವು ಒಂದೇ ಕಾಲದಲ್ಲಿ (ವಾಸ್ತವವಾಗಿ ಹಾಗೆ ಇಲ್ಲದೆ ಇದ್ದರೂ) ಅನೇಕ ಎಡೆಗಳಲ್ಲಿರುವುದೆಂಬ ವರ್ಣನೆ; (೩) ಒಂದು ಕಾರ್ಯವನ್ನು ಮಾಡುವಾಗ ಅಶಕ್ಯವಾದ ಇನ್ನೊಂದು ಕಾರ್ಯವೂ ಆಯಿತೆಂಬ ವರ್ಣನೆ. ಉದಾ : ಅಪ್ರತಿಮವೀರಚರಿತೆ ೩-೧೧೦ ರಿಂದ ೧೧೨ ಕ್ರಮವಾಗಿ.

ವಿಶೇಷಕ : (ಕುವಲಯ ೧೪೮) — ಇದು ' ಸಾಮಾನ್ಯ ' ವೆಂಬ ಅಲಂಕಾರಕ್ಕೆ ಪ್ರತಿದ್ವಂದ್ವಿಯಾದುದು. ಒಂದೇ ವಿಧವಾಗಿ ತೋರುವ ಎರಡು ವಸ್ತುಗಳ ಭೇದವನ್ನು ವ್ಯಾವರ್ತಕವಾದ (ಎಂದರೆ ವಿಶೇಷವಾದ) ಧರ್ಮದಿಂದ ಗ್ರಹಿಸುವುದು. ಉದಾ : ' ಕಪ್ಪಾಗಿರುವುದರಿಂದ ಕಾಗೆ ಕೋಗಿಲೆಗಳೆರಡೂ ಒಂದು ವಿಧವಾಗಿ ಕಂಡರೂ ವಸಂತಮಾಸ ಬಂದಾಗ ಕಾಗೆಯು ಕಾಗೆ, ಕೊಗಿಲೆಯು ಕೋಗಿಲೆ.'

ವ್ಯಾಘಾತ : (ರುಯ್ಯಕ ೫೧) — ಇದು ಎರಡು ಬಗೆಯಾಗಿರುವುದು: (೧) ಒಂದು ಉಪಾಯದಿಂದ ಒಂದು ಕಾರ್ಯವು ನಿಷ್ಪನ್ನವಾದಾಗ ಅದೇ ಉಪಾಯದಿಂದ ವಿರುದ್ಧಕಾರ್ಯವು ಸಾಧಿತವಾಯಿತೆಂದಾಗಲಿ ಮೊದಲಿನ ಕಾರ್ಯವು ನಿಷ್ಫಲವಾಯಿತೆಂದಾಗಲಿ ವರ್ಣಿಸುವುದು. ಉದಾ : ' ದೃಶಾದಗ್ಧಂ ಮನಸಿಜಂ ಜೀವಯಂತಿ ದೃಶೈವ ಯಾಃ । ವಿರೂಪಾಕ್ಷಸ್ಯ ಜಯನೀಸ್ತಾಃ ಸ್ತುವೇ ಚಾರುಲೋಚನಾಃ ॥ ' (ಶಿವನು ಕಣ್ಣಿನಿಂದ ಮನ್ಮಥನನ್ನು ಸುಟ್ಟನು; ಆದರೆ [ಸ್ತ್ರೀಯರ] ಕಣ್ಣಿನಿಂದಲೇ ಅವನು ಬದುಕಿದನು.) (೨) ಒಂದು ಕಾರಣವನ್ನು ಉಂಟುಮಾಡಲಿಕ್ಕೆ ಯೋಗ್ಯವಾದುದೆಂದು ಹೇಳಿದ ಕಾರಣವೇ ಅದಕ್ಕೆ ವಿಪರೀತವಾದ ಕಾರ್ಯಕ್ಕೆ ಅನುಕೂಲವಾಗುವುದೆಂದು ಹೇಳುವುದು. 'ನೀನು ಮೃದುಪ್ರಕೃತಿಯವಳಾದುದರಿಂದ ನನ್ನೊಡನೆ ಬರಬೇಡ ' ಎಂದು ಹೇಳಿದ ಪತಿಗೆ ' ನಾನು ಮೃದುಪ್ರಕೃತಿಯವಳಾದುದರಿಂದಲೆ ನಿನ್ನೊಡನೆ ಕರೆದುಕೊಂಡು ಹೋಗು, ಇಲ್ಲವಾದರೆ ನಿನ್ನ ವಿರಹವನ್ನು ಸೈರಿಸಲಾರೆನು ' ಎಂಬಲ್ಲಿ ಈ ಅಲಂಕಾರವಿರುವುದು.

ವ್ಯಾಜನಿಂದೆ : (ಕುವಲಯ ೭೨) — ಒಬ್ಬರ ನಿಂದೆಯಿಂದ ಇನ್ನೊಬ್ಬರ ನಿಂದೆಯು ಸೂಚಿತವಾಗುವುದು. ಉದಾ : ' ದುರ್ಜನರನ್ನು ಸೃಷ್ಟಿಸಿದ ಬ್ರಹ್ಮನು ಮೂರ್ಖನು '.

ವ್ಯಾಜೋಕ್ತಿ : (ಮಮ್ಮಟ ೧೦-೩೨) — ಇದೇ ಪುಟ ೨೮೯ ನೋಡುವುದು. 'ವ್ಯಾಜೋಕ್ತಿ'ಗೂ 'ಛೇಕಾಪಹ್ನುತಿ'ಗೂ ಇರುವ ಭೇದವನ್ನು ಹೀಗೆ ಹೇಳುತ್ತಾರೆ : **ಛೇಕಾಪಹ್ನುತಿ**ಯಲ್ಲಿ ತಥ್ಯವನ್ನೆ ಮೊದಲು ಹೇಳಿ ಅದು ಸಂದೇಹಕ್ಕೆ ಕಾರಣವಾದಾಗ ಅದನ್ನು ಸಂಪೂರ್ಣವಾಗಿ ಅಲ್ಲಗಳೆಯುವುದು; **ವ್ಯಾಜೋಕ್ತಿ**ಯಲ್ಲಿ ಸಂದೇಹಕ್ಕೆ ಕಾರಣವಾದುದನ್ನು ಬೇರೆ ರೀತಿಯಿಂದ ಮರೆಮಾಜುವುದು.

ಸಮ : (ಮಮ್ಮಟ ೧೦-೩೯) — ಇದು ' ವಿಷಮಾಲಂಕಾರ ' ಕ್ಕೆ ವಿರುದ್ಧವಾದುದು. ಎರಡು ವಸ್ತುಗಳ ಸಂಬಂಧವು ಅನುರೂಪವಾದುದೆಂದು ವರ್ಣಿಸುವುದರಿಂದ ಈ ಅಲಂಕಾರವಾಗುವುದು. ಉದಾ : ' ಸ್ತ್ರೀರತ್ನಮಿಾಗಳೀಕೆಯೆ ಧಾರಿಣಿಯೊಳ್ ಪುರುಷರತ್ನಮಿಾತನೆ ಸದೃಶಾ | ಕಾರರನಿವರಂ ಕೂಡಿ ಪಯೋರುಹಜಂಗಕ್ಕೆ ಸಮಸಮಾಯೋಗಯಶಂ || '.

ಸಮಾಹಿತ : (ರುಯ್ಯಕ ೮೨) — ಇದೇ ಪುಟ ೨೯೧ ನೋಡುವುದು.

ಸಾಮಾನ್ಯ : (ಮಮ್ಮಟ ೧೦-೪೮) — ಸಾದೃಶ್ಯಮೂಲಕವಾಗಿ ಬೇರೆ ಬೇರೆ ವಸ್ತುಗಳು ಒಂದೇ ಬಗೆಯಾಗಿ ಕಾಣುವುದರಿಂದ ಅವುಗಳೊಳಗಿನ ಭೇದವು ತಿಳಿಯದಾದಂತೆ ವರ್ಣಿಸುವುದು. ಉದಾ : ' ಇದು ದವಶಿಖಿಯಿದು ಕಿಂಶುಕಮಿದು ಕರ್ಮುಗಿಲಿದು ತಮಾಲಮಿದು ಮದಗಜಮಿಂ| ತಿದು ಗಂಡಶೈಲಮೆಂದೆಂಬುದು ತಿಳಿವೊಡಶಕ್ಯಮೆನಿಪುದಾ ಪೆರ್ಗಾಡೊಳ್ || '. ಈ ಅಲಂಕಾರವು ' ಮಿಾಲಿತ ' ದಿಂದ ಬೇರೆಯಾದುದು. ಮಿಾಲಿತದಲ್ಲಿ ವಸ್ತುವಿನ ವ್ಯಕ್ತಿತ್ವವೇ ಗೊತ್ತಾಗುವುದಿಲ್ಲ; ಸಾಮಾನ್ಯದಲ್ಲಿ ವಸ್ತುಗಳು ಬೇರೆ ಬೇರೆ ಇದ್ದರೂ ಅವುಗಳ ಭೇದವು ತಿಳಿಯುವುದಿಲ್ಲ.

ರೀತಿಕ್ರಮರಸನಿರೂಪಣಾಧಿಕರಣ

ರೀತಿ ಪ್ರಕರಣ

ಸೂತ್ರ ೧೪೯

ವಾಮನನು (೧-೨-೬) ' ರೀತಿಯೇ ಕಾವ್ಯದ ಆತ್ಮವೆಂದು ' ಹೇಳಿ ಕಾವ್ಯ ರಚನೆಗೆ ರೀತಿಯೇ ಅತ್ಯಂತ ಮಹತ್ತ್ವವಾದುದೆಂದು ತನ್ನ ಮತವನ್ನು ವ್ಯಕ್ತ ಪಡಿಸಿರುವನು. ಆದರೆ ಇವನನ್ನು ಬಹಳ ಜನರು ಅನುಸರಿಸಿಲ್ಲ. ವಾಮನನೇ ಹೇಳಿದಂತೆ (೧-೨-೭) ವಿಶಿಷ್ಟವಾದ ಪದರಚನೆಯೇ ರೀತಿಯಾದುದರಿಂದ ಇಂತಹ ರೀತಿಗಳು ಅನೇಕವಾಗಿರಬೇಕೆಂದು ತೋರುತ್ತದೆ. ದಂಡಿಯು (೧-೪೦) ಮಾರ್ಗಗಳು ಅನೇಕವಾಗಿದ್ದು ಅವುಗಳ ಪರಸ್ಪರ ಭೇದಗಳು ಬಹಳ ಸೂಕ್ಷ್ಮವಾದುವುಗಳೆಂದು ಹೇಳಿ ' ವೈದರ್ಭ, ಗೌಡ ' ಎಂಬ ಎರಡು ರೀತಿಗಳನ್ನು ಮಾತ್ರ ವರ್ಣಿಸಿದ್ದಾನೆ. ವೈದರ್ಭದಲ್ಲಿ ' ಶ್ಲೇಷ ' ಮುಂತಾದ ಹತ್ತು ಗುಣಗಳಿರುವುವೆಂದೂ ಅದಕ್ಕೆ ವಿಪರೀತವಾದ ಗುಣಗಳು ಗೌಡಮಾರ್ಗದಲ್ಲಿರುವುವೆಂದೂ ಹೇಳಿ ಅವನ್ನೆಲ್ಲಾ ಮುಂದೆ ಸ್ಪಷ್ಟ ಮಾಡಿರುವನು. ಭಾಮಹನು ಇಂತಹ ಭೇದಗಳನ್ನು ಮಾಡುವುದರಲ್ಲಿ ಏನೂ ಅರ್ಥವಿಲ್ಲವೆಂದು (೧-೩೧ ರಿಂದ ೩೩) ಹೇಳಿರುವನು. ವಾಮನನು ' ವೈದರ್ಭೀ, ಗೌಡೀ, ಪಾಂಚಾಲೀ ' ಯೆಂದು ಮೂರು ಭೇದಗಳನ್ನು ಹೇಳಿರುವನು. ಸಾಹಿತ್ಯದರ್ಪಣಕಾರನಾದ ವಿಶ್ವನಾಥನು ' ಲಾಟೀ ' ಎಂಬ ನಾಲ್ಕನೆಯ ಭೇದವನ್ನೂ ಹೇಳಿರುವನು. ಭೋಜನೆಂಬುವನು ' ಆವಂತಿಕಾ, ಮಾಗಧೀ ' ಎಂದು ಇನ್ನೆರಡು ಭೇದಗಳನ್ನು ಸೇರಿಸಿರುವನು. ಮಮ್ಮಟನು ' ಉಪನಾಗರಿಕಾ, ಪರುಷಾ, ಕೋಮಲಾ ' ಎಂಬ ಮೂರು ವೃತ್ತಿಗಳನ್ನು ಹೇಳಿರುವನು; ಇವು ಕ್ರಮವಾಗಿ ವೈದರ್ಭ-ಗೌಡ-ಪಾಂಚಾಲ ರೀತಿಗಳನ್ನು ಹೋಲುವುವು.

ಒಂದೊಂದು ಪ್ರಾಂತದ ಬರೆವಣಿಗೆಯಲ್ಲಿ ವಿಶಿಷ್ಟವಾದ ಕೆಲವು ಗುಣಗಳು ಕಂಡುಬರುವುದರಿಂದ ಆಯಾ ಪ್ರಾಂತದ ಒಂದೊಂದು ರೀತಿಯೆಂದು ಆಲಂಕಾರಿಕರು ಪರಂಪರೆಯಿಂದ ಹೇಳುತ್ತ ಬಂದಂತೆ ತೋರುತ್ತದೆ. ಆದರೆ ವಿಷಯಗಳಿಗನುಗುಣವಾಗಿ ಶೈಲಿಯಲ್ಲಿ ಏರಿಳಿತಗಳು ಆಗಬೇಕಾಗುವುದರಿಂದ ಒಂದೇ ಕಾವ್ಯದಲ್ಲಿ ಬೇರೆ ಬೇರೆ ರೀತಿಗಳು ಕಂಡುಬರುವುವು; ಅಲ್ಲದೆ ಒಂದೊಂದು ರಸಕ್ಕೆ ಒಂದೊಂದು ರೀತಿಯು ಹೆಚ್ಚಾಗಿ ಒಪ್ಪುವುದು. ಇದನ್ನೇ ಹೆಚ್ಚು ವಿಸ್ತಾರವಾಗಿ ಆಲಂಕಾರಿಕರು ಪ್ರತಿಪಾದಿಸುತ್ತಾರೆ. ನಾಗವರ್ಮನು ವಾಮನ-ರುದ್ರಟರನ್ನನುಸರಿಸಿ ಈ ಪ್ರಕರಣವನ್ನು ಬರೆದಿರುವನು.

ಸೂತ್ರ ೧೯೦ ರಿಂದ ೧೯೩

ವಾಮನ ೧-೨-೭ ರಿಂದ ೯; ರುದ್ರಟ ೨-೪ ರಿಂದ ೬

ಸೂತ್ರ ೧೯೪ ರಿಂದ ೧೯೬

ರುದ್ರಟ ೧೪-೩೭, ೧೫-೨೦

ರುದ್ರಟನು ಶೃಂಗಾರ, ಕರುಣ, ಭಯಾನಕ, ಅದ್ಭುತ ಇವುಗಳಲ್ಲಿ ವೈದರ್ಭೀ ಅಥವಾ ಪಾಂಚಾಲೀರೀತಿಗಳನ್ನೂ ರೌದ್ರದಲ್ಲಿ ಲಾಟೀ ಅಥವಾ ಗೌಡೀರೀತಿಗಳನ್ನೂ ಉಳಿದುವುಗಳಲ್ಲಿ ಬೇಕಾದ ರೀತಿಗಳನ್ನೂ ಅನುಸರಿಸಬೇಕೆಂದು ಹೇಳಿರುವನು.

ರಸಪ್ರಕರಣ

ಸೂತ್ರ ೧೯೭ ರಿಂದ ೨೦೨

ಮನುಷ್ಯನ ಹೃದಯದಲ್ಲಿ ಯಾವಾಗಲೂ ಇರುವಂತಹ ಸ್ವಾಭಾವಿಕವಾದ ಕೆಲವು ಭಾವಗಳಿಗೆ **ಸ್ಥಾಯಿಭಾವ**ಗಳೆಂದು ಹೆಸರು. ಇವು—

ರತಿರ್ಹಾಸಶ್ಚ ಶೋಕಶ್ಚ ಕ್ರೋಧೋತ್ಸಾಹೌ ಭಯಂ ತಥಾ
ಜುಗುಪ್ಸಾ ವಿಸ್ಮಯಶ್ಚೇತಿ ಸ್ಥಾಯಿಭಾವಾಃ ಪ್ರಕೀರ್ತಿತಾಃ

— ಭರತ ೬-೧೭

ಎಂಬ ಶ್ಲೋಕದಲ್ಲಿ ಹೇಳಿದಂತೆ ಎಂಟು ಇರುವುವೆಂದು ಅನೇಕರು ಅಂಗೀಕರಿಸಿರುವರು. ಇವು ಸಾಮಾನ್ಯವಾಗಿ ಸ್ತಬ್ಧಾವಸ್ಥೆಯಲ್ಲಿರುವುವು; ಆದರೆ ಅನುಕೂಲಪರಿಸ್ಥಿತಿಯುಂಟಾದಾಗ ಉದ್ದೀಪನಗೊಳ್ಳುವುವು. ಮುಂದೆ ಉತ್ಕರ್ಷಾವಸ್ಥೆಯನ್ನು ಮುಟ್ಟಿದಾಗ ಇವೇ ರಸಗಳಾಗುವುವು. ಸ್ಥಾಯಿಭಾವಗಳಿಗೆ ಪೋಷಕಗಳಾದ ಪದಾರ್ಥಗಳಿಗೆ ವಿಭಾವಗಳೆಂದು ಹೆಸರು. ಇವುಗಳನ್ನು **ಆಲಂಬನವಿಭಾವ, ಉದ್ದೀಪನವಿಭಾವ**ವೆಂದು ಎರಡು ವಿಭಾಗಮಾಡುವರು. **ರತಿ**ಯೆಂಬ ಸ್ಥಾಯಿಭಾವವು ಒಬ್ಬ ಪುರುಷನಲ್ಲಿ ಮೊದಲೇ ಇರುತ್ತಿದ್ದು, ಆಲಂಬನವಿಭಾವವಾದ ಅನುರೂಪಳಾದ ಸ್ತ್ರೀಯನ್ನು ಕಂಡೊಡನೆ ಜಾಗೃತವಾಗುವುದು. ಮುಂದೆ ಏಕಾಂತದಲ್ಲಿ ರಮ್ಯವಾದ ಸ್ಥಳದಲ್ಲಿ ಅವರ ದರ್ಶನ-ಸಂಭಾಷಣ ಮುಂತಾದುವುಗಳಿಂದ ಆ ಭಾವವು ಇನ್ನಷ್ಟು ಹೆಚ್ಚುವುದು. ಇಂತಹ ಸಂದರ್ಶನ, ಭಾಷಣ, ಅಭಿನಯ ಮುಂತಾದುವುಗಳಿಗೆ ಉದ್ದೀಪನವಿಭಾವವೆಂದು ಹೆಸರು. ಹೀಗೆ ‘ ರತಿ ’ ಯೆಂಬ ಸ್ಥಾಯಿಭಾವದಿಂದ ‘ ಶೃಂಗಾರ ’ ವೆಂಬ ರಸವು ಉದ್ಭವಿಸುವುದು. ಆದರೆ ಆಯಾ ಪರಿಸ್ಥಿತಿಗನುಸರಿಸಿ ಪುರುಷರಲ್ಲಿಯಾಗಲೀ ಸ್ತ್ರೀಯರಲ್ಲಿಯಾಗಲೀ ಅನೇಕ ಬೇರೆ ಭಾವಗಳು ಬಂದು - ಹೋಗುತ್ತಲೂ ಇರುವುವು. ಉದಾಹರಣೆಗಾಗಿ ತಮ್ಮ

ಪ್ರಿಯರನ್ನು ನೋಡಬೇಕೆಂಬ ಉತ್ಕಟೇಚ್ಛೆ, ಕಾಣದಾದಾಗ ಆಗುವ ನಿರಾಶೆ, ತಮ್ಮ ಸ್ಥಿತಿಯು ಎರಡನೆಯವರಿಗೆ ತಿಳಿಯಬಹುದೆಂಬ ಶಂಕೆ ಮುಂತಾದುವು. ಇವುಗಳಿಗೆ **ಸಂಚಾರಿ** ಅಥವಾ **ವ್ಯಭಿಚಾರಭಾವ**ಗಳೆಂದು ಹೆಸರು. ಇವು ಒಟ್ಟು ೩೩ ಇರುವುವೆಂದು ಸೂತ್ರ ೧೯೯ ರಲ್ಲಿ ಹೇಳಿದೆ. ಆದರೆ ಈ ಎಲ್ಲಾ ಸಂಚಾರಿಭಾವಗಳು ಎಲ್ಲಾ ರಸಗಳಲ್ಲಿ ಉಂಟಾಗುವುವೆಂದು ಹೇಳಲಾಗುವುದಿಲ್ಲ. ಸ್ಥಾಯಿಭಾವವನ್ನು ಸಮುದ್ರಕ್ಕೂ ಸಂಚಾರಿಭಾವಗಳನ್ನು ಅಲೆಗಳಿಗೂ 'ದಶರೂಪಕ' (೪-೭) ದಲ್ಲಿ ಹೋಲಿಸಿದೆ.

ಸ್ಥಾಯಿಭಾವವು ಬಳೆದು ರಸಸ್ಥಿತಿಗೆ ಬಂದಾಗ ಅದನ್ನು ಪ್ರಕಟಿಸುವ ಅಲಸಗಮನ-ಶೂನ್ಯದೃಷ್ಟಿ ಮುಂತಾದುವುಗಳಿಗೆ **ಅನುಭಾವ**ವೆಂದು ಹೆಸರು.

ಇದಲ್ಲದೆ ಎಂಟು ಬಗೆಯ **ಸಾತ್ತ್ವಿಕಭಾವ**ಗಳೂ ಸೂತ್ರ ೨೦೦ ರಲ್ಲಿ ಹೇಳಲ್ಪಟ್ಟಿವೆ. ಇವುಗಳನ್ನು ಮಮ್ಮಟ ಮೊದಲಾದವರು ಅನುಭಾವಗಳಲ್ಲಿ ಸೇರಿಸಿಬಿಡುತ್ತಾರೆ. ಆದರೆ ಸಾಹಿತ್ಯದರ್ಪಣಕಾರನು (೩-೧೩೪, ೧೩೫)

ವಿಕಾರಾಃ ಸತ್ತ್ವಸಂಭೂತಾಃ ಸಾತ್ತ್ವಿಕಾಃ ಪರಿಕೀರ್ತಿತಾಃ
ಸತ್ತ್ವಮಾತ್ರೋದ್ಭವತ್ವಾತ್ತೇ ಭಿನ್ನಾ ಅಪ್ಯನುಭಾವತಃ

ಎಂದು ಹೇಳಿ ಈ ಸಾತ್ತ್ವಿಕ ಭಾವಗಳು ರಸವನ್ನು ಪ್ರಕಟಮಾಡತಕ್ಕ ವಿಶಿಷ್ಟ ಬಗೆಯ ಆಂತರಧರ್ಮಗಳು; ಆದುದರಿಂದ ಉಳಿದ ಅನುಭಾವಗಳಿಗಿಂತ ಹೆಚ್ಚಿನವು ಎಂದು ಹೇಳಿರುವನು. ಹೇಮಚಂದ್ರನು ಸಾತ್ತ್ವಿಕಭಾವಗಳ ಬಳವಣಿಗೆಯನ್ನು ಈ ರೀತಿಯಾಗಿ ಹೇಳುತ್ತಾನೆ: 'ಸ್ಥಾಯಿಭಾವಗಳು ಉದ್ದೀಪನಗೊಂಡು ಮನುಷ್ಯನ "ಸತ್ತ್ವ" ಎಂದರೆ ಪಂಚಪ್ರಾಣಗಳನ್ನು ತಗಲುವುವು. ಪೃಥ್ವೀಭಾಗವನ್ನು ಮುಟ್ಟಿದಾಗ **ಸ್ತಂಭ**, ಜಲಭಾಗವನ್ನು ಮುಟ್ಟಿದಾಗ **ಬಾಷ್ಪ**, ತೇಜೋಭಾಗವನ್ನು ಮುಟ್ಟಿದಾಗ **ಸ್ವೇದ** ಮತ್ತು **ವೈವರ್ಣ್ಯ**, ಆಕಾಶಭಾಗವನ್ನು ಮುಟ್ಟಿದಾಗ **ಪ್ರಲಯ**, ವಾಯುಭಾಗವನ್ನು ಮುಟ್ಟಿದಾಗ **ರೋಮಾಂಚ**, **ವೇಪಥು** ಮತ್ತು **ಸ್ವರಭಂಗ**ವೆಂಬ ಸಾತ್ತ್ವಿಕಭಾವಗಳುಂಟಾಗುವುವು; (ಕಾವ್ಯಾನುಶಾಸನ ೫೩ ರ ವೃತ್ತಿ.) ಆದುದರಿಂದ ಇವು ಅನುಭಾವಗಳಿಗಿಂತ ಬೇರೆಯಾದುವೆಂದು ಗ್ರಹಿಸಬೇಕಾಗುವುದು.

ನಾಗವರ್ಮನು ಭರತಾದಿಗಳನ್ನನುಸರಿಸಿ ರಸಗಳು ಎಂಟೇ ಎಂದು (ಸೂ. ೧೯೭) ಹೇಳಿರುವನಾದರೂ ಸೂತ್ರ ೨೦೭ರಲ್ಲಿ **ಶಾಂತ**ವೆಂಬ ಒಂಬತ್ತನೆಯ ರಸವನ್ನೂ ಹೇಳಿರುವನು. ಶಾಂತರಸವು ನಾಟಕಗಳಲ್ಲಿ ಪ್ರದರ್ಶಿಸಲಿಕ್ಕೆ ಬಾರದಿರುವುದರಿಂದ ಅದನ್ನು ಭರತಾದಿಗಳು ಬಿಟ್ಟಿದ್ದಾರೆ. ಆದರೆ ಕಾವ್ಯಗಳಲ್ಲಿ ಅದರ ನಿರೂಪಣೆಯು ಸಾಧ್ಯವಿರುವುದರಿಂದ ಮಮ್ಮಟಾದಿಗಳು '**ಶಾಂತೋಽಪಿ**

ನವಮೋ ರಸಃ ' ಎಂದು ಒಪ್ಪಿಕೊಂಡಿರುತ್ತಾನೆ. ಶಾಂತರಸದ ಸ್ಥಾಯಿಭಾವವು ' ನಿರ್ವೇದ ' ವೆಂದು ಕೆಲವರೂ ' ಶಮ ' ವೆಂದು ಬೇರೆ ಕೆಲವರೂ ಹೇಳುತ್ತಾರೆ. ಶಾಂತರಸವು ವಿಷಯಜುಗುಪ್ಸೆಯೇ ಕಾರಣವಾದ ಬೀಭತ್ಸದಲ್ಲಿ ಅಂತರ್ಭಾವ ವಾಗುವುದೇ ಎಂಬ ಪ್ರಶ್ನೆಗೆ ಉತ್ತರರೂಪವಾಗಿ ಹೀಗೆ ಹೇಳಬಹುದು: ಬೀಭತ್ಸದಲ್ಲಿ ಜುಗುಪ್ಸೆಯು ಸ್ಥಾಯಿಭಾವವಾದರೂ ಶಾಂತದಲ್ಲಿ ಅದು ಸಂಚಾರಿಭಾವ ಮಾತ್ರ. ಜುಗುಪ್ಸೆಯು ಇರುವ ವರೆಗೆ ಶಾಂತಿಯು ಉಂಟಾಗದಿರುವುದರಿಂದ ಶಾಂತವು ಬೀಭತ್ಸದಿಂದ ಭಿನ್ನವು.

ಮೊದಲನೆಯ ಎಂಟು ರಸಗಳಲ್ಲಿ ಶೃಂಗಾರ, ವೀರ, ರೌದ್ರ, ಬೀಭತ್ಸ ಇವು ಮೂಲರಸಗಳೆಂದೂ ಇವುಗಳಿಂದ ಕ್ರಮವಾಗಿ ಹಾಸ್ಯ, ಅದ್ಭುತ, ಕರುಣ, ಭಯಾ ನಕರಸಗಳು ಹುಟ್ಟುವುವೆಂದೂ ಭರತನ ನಾಟ್ಯಶಾಸ್ತ್ರ (೬-೩೯ ರಿಂದ ೪೧) ದಲ್ಲಿ ಹೇಳಿದೆ.

ಸೂತ್ರ ೨೦೩

ರುದ್ರಟ ೧೨-೫,೬; ಹೇಮಚಂದ್ರ ೨೪; ಕವಿಕಾಮ ೪-೩೦

ರತಿಯೆಂಬ ಸ್ಥಾಯಿಭಾವವೇ ಸ್ತ್ರೀ-ಪುರುಷ ಸಂಬಂಧದಲ್ಲಿದ್ದಾಗ ಮಾತ್ರ ಶೃಂಗಾರರಸವಾಗಿ ಪರಿಣಮಿಸುವುದು. ದೇವ-ಗುರುಜನ ಮುಂತಾದವರಲ್ಲಿ ಈ ರತಿಯು ಕೇವಲ ಭಾವವಾಗಿಯೇ ಉಳಿಯುತ್ತದೆಂದು ಆಲಂಕಾರಿಕರ ಮತ. ಮಮ್ಮಟನು ೪-೩೫ರಲ್ಲಿ ' **ರತಿರ್ದೇವಾದಿವಿಷಯಾ ವ್ಯಭಿಚಾರಿ ತಥಾಂಜಿತಃ ಭಾವಃ ಪ್ರೋಕ್ತಃ** ' ಎಂದು ಸ್ಪಷ್ಟಮಾಡಿದ್ದಾನೆ.

ಶೃಂಗಾರರಸವು ' **ಸಂಭೋಗ** ' ಮತ್ತು ' **ವಿಪ್ರಲಂಭ** ' ವೆಂದು ಎರಡು ವಿಧ. ಸ್ತ್ರೀ-ಪುರುಷರ ಮೇಳನದಲ್ಲಿ ಮೊದಲನೆಯ ವಿಧವೂ ಅಗಲಿಕೆಯಲ್ಲಿ ಎರಡನೆಯ ವಿಧವೂ ಪ್ರಕಟವಾಗುವುದೆಂದು ಆಲಂಕಾರಿಕರು ಹೇಳುತ್ತಾರೆ. ಆದರೆ ಸಂಭೋಗ ದಲ್ಲಿ ತಾವು ಅಗಲಬಹುದೆಂಬ ಭಯವು ವಿಪ್ರಲಂಭವನ್ನೂ ವಿರಹದಲ್ಲಿ ತಾವು ಕೂಡಬಹುದೆಂಬ ಆಶೆಯು ಸಂಭೋಗವನ್ನೂ ಕೆಲವು ಮಟ್ಟಿಗೆ ಉಂಟುಮಾಡುವುದ ರಿಂದ ಹೀಗೆ ಪ್ರತ್ಯೇಕವಾಗಿ ಎರಡು ವಿಭಾಗ ಮಾಡುವುದು ಅಷ್ಟೊಂದು ಸರಿಯಲ್ಲ ವೆಂದು ಹೇಮಚಂದ್ರನ ಮತ.

ನಾಯಕ-ನಾಯಿಕೆಯರಲ್ಲಿ (ವರ್ಣನೀಯರಾದ ಸ್ತ್ರೀ-ಪುರುಷರು) ಅನೇಕ ಭೇದಗಳಿದ್ದು ಅವರಲ್ಲಿ **ಮುಗ್ಧೆ, ಮಧ್ಯೆ, ಪ್ರೌಢೆ** (ಪ್ರಗಲ್ಭೆ) ಎಂಬ ಮೂರು ವಿಧದ ನಾಯಿಕೆಯರಲ್ಲಿ ಉಂಟಾಗುವ ಸಂಭೋಗ-ಶೃಂಗಾರದ ವಿಧಗಳು ಇಲ್ಲಿಯ ಮೊದಲಿನ

ಮೂರು ಉದಾಹರಣೆಗಳಲ್ಲಿವೆ. ಈ ಮೂರು ವಿಧದ ನಾಯಿಕೆಯರ ಲಕ್ಷಣವನ್ನು ಕವಿಕಾಮನು ಹೀಗೆ ತನ್ನ ಶೃಂಗಾರರತ್ನಾಕರದಲ್ಲಿ ಹೇಳುತ್ತಾನೆ.

ಅತಿಲಜ್ಜಾನ್ವಿತೆ ಸಂಚಳ । ಮತಿಯವಿರಳಲೋಲಭಾವಸಂಭ್ರಮೆಯಾವಿ ॥
ಸ್ಕೃತಚಿತ್ತೆಯೆನಿಪ ಬಾಲಿಕೆ । ಸತತಮವಳ್ ಮುಗ್ಧೆಯೆಂಬ ಪೆಸಱಂ ಪಡೆಗುಂ
—೩-೨೭

ನಿಯತರಸರಸಿಕೆ ಕಿಂಚಿದ್ । ಭಯತರರತನು ವಿಜಿತವಿಷಯಮತಿ ಗರ್ವಸಮಾ ॥
ಶ್ರಯಮಾಗೆ ಸುಭಗೆಯೆನೆ ನೆಗ । ಳ್ದ ಯುವತಿ ಸಲೆ ಮಧ್ಯೆಯೆಂಬ ಪೆಸಱಂ ಪಡೆಗುಂ
—೩-೩೦

ಅನುರಕ್ತೆ ಸರಸತರಮಾ । ನಿನಿ ಪರಿಚಿತೆಯಖಿಳವಿಷಯನಿಶ್ಚಿತಮತಿ ಕಾ
ಮಿನಿಯೆನಿಸಿದಾಕೆ ಕವಿಕಾ । ಮನ ಮತದಿಂ ಪ್ರಗಲ್ಭೆಯೆನೆ ಪೆಸರ್ವಡೆಗುಂ —೩-೩೩

ವಿಪ್ರಲಂಭಶೃಂಗಾರದಲ್ಲಿ (೧) **ಅಭಿಲಾಷವಿಪ್ರಲಂಭ** (ಪ್ರಥಮಸಮಾಗಮಕ್ಕಿಂತ ಮೊದಲು ಸ್ತ್ರೀಪುರುಷರಲ್ಲಿ ಪರಸ್ಪರಾಭಿಲಾಷೆ) (೨) **ಮಾನವಿಪ್ರಲಂಭ** (ಪ್ರಣಯಕೋಪದಿಂದ ಅಗಲುವಿಕೆ) (೩) **ಪ್ರವಾಸವಿಪ್ರಲಂಭ** (ಬೇರೆ ಬೇರೆ ಸ್ಥಳಗಳಲ್ಲಿ ಇರುವುದರಿಂದ ಉಂಟಾಗುವುದು) ಎಂದು ಮೂರು ವಿಧ. ಮಾನವಿಪ್ರಲಂಭದಲ್ಲಿ ಪ್ರಣಯಮಾನ, ಈರ್ಷ್ಯಾಮಾನವೆಂದು ಮತ್ತೆ ಎರಡು ವಿಧ. ಪ್ರಣಯ**ಮಾನ**ವೆಂದರೆ ಪ್ರಣಯ-ಕೋಪ (ಇದು ಸ್ತ್ರೀ-ಪುರುಷರಿಬ್ಬರಲ್ಲಿಯೂ ಉಂಟಾಗಬಹುದು). **ಈರ್ಷ್ಯಾಮಾನ**ವೆಂದರೆ ಸ್ತ್ರೀಯರಲ್ಲಿ ಮಾತ್ರ ಆಗುವ ಅಸೂಯೆ. ಆದರೆ ನಾಗವರ್ಮನು ಈರ್ಷೆ-ಅಭಿಲಾಷೆಗಳಿಗೆ ಮಾತ್ರ ಉದಾಹರಣೆಗಳನ್ನು ಸಂಭೋಗ-ಶೃಂಗಾರದ ಕೆಳಗೆ ಕೊಟ್ಟಿದ್ದಾನೆ. ಪ್ರಣಯಮಾನಕ್ಕೆ ಇದೇ ೭೯೧ ಪದ್ಯವೂ ಉತ್ತಮ ಉದಾಹರಣೆಯಾಗಿದೆ. ವಿಪ್ರಲಂಭವು ದುಃಖಪರ್ಯವಸಾಯಿಯಾದರೆ ಕರುಣಾತ್ಮಕವಾಗುವುದು. ಪದ್ಯ ೮೦೫ರಲ್ಲಿ ಹೇಳಿರುವ ಪೂರ್ವಾನುರಾಗದ ಲಕ್ಷಣವನ್ನು ಕವಿಕಾಮನು ಕೆಳಗಿನಂತೆ ಹೇಳಿರುತ್ತಾನೆ.

ಸಮಸಂದು ನೋಡಿ ಮೇಣ್ ನುಡಿ
ದು ಮೇಣ್ ಮನಂಗೊಂಡು ಕೂರ್ತು ಕೂಟಂ ತನ್ನೊಳ್
ಸಮನಿಸದೆ ಮಱುಗುವಾ ಮಱು
ಕಮುಮದು ಪೂರ್ವಾನುರಾಗಮೆನೆ ಪೆಸರ್ವಡೆಗುಂ —೪-೪೦

(ಹೆಚ್ಚಿನ ವಿಷಯಗಳಿಗೆ ಕವಿಕಾಮನ ಶೃಂಗಾರರತ್ನಾಕರವನ್ನು ನೋಡುವುದು.)

ಸೂತ್ರ ೨೦೪

ಹಾಸ್ಯ

ರುದ್ರಟ ೧೫-೧೧, ೧೨; ಹೇಮಚಂದ್ರ ೩೫

ದೇಶ, ಕಾಲ, ವಯಸ್ಸು ಮುಂತಾದುವುಗಳಿಗೆ ವಿಪರೀತವಾದ ವೇಷ, ನುಡಿ

ಮುಂತಾದುವುಗಳು ಹಾಸ್ಯವನ್ನುಂಟುಮಾಡುತ್ತವೆ. ಹಾಸ್ಯದಲ್ಲಿ ಸ್ಮಿತ (ಮುಗುಳ್ನಗೆ), ವಿಹಸಿತ (ಮೆಲುನಗೆ), ಅಪಹಸಿತ (ಗಟ್ಟಿಯಾದ ನಗೆ) ಎಂದು ಮೂರು ವಿಧಗಳನ್ನು ಮಾಡುತ್ತಾರೆ. ಇವು ಕ್ರಮವಾಗಿ ಉತ್ತಮ, ಮಧ್ಯಮ, ಜಘನ್ಯ (ಅಧಮ) ಪಾತ್ರಗಳಲ್ಲಿ ಕಂಡುಬರುವುವು. ಇವುಗಳ ಭೇದವನ್ನು ಭರತನಾಟ್ಯಶಾಸ್ತ್ರದಲ್ಲಿ (೬-೫೪, ೫೬, ೫೮) ಹೀಗೆ ಹೇಳಿದೆ:

ಈಷದ್‌ವಿಕಸಿತೈರ್ಗಂಡೈಃ ಕಟಾಕ್ಷೈಃ ಸೌಷ್ಠವಾನ್ವಿತೈಃ
ಅಲಕ್ಷಿತದ್ವಿಜಂ ಧೀರಮುತ್ತಮಾನಾಂ ಸ್ಮಿತಂ ಭವೇತ್
ಆಕುಂಚಿತಾಕ್ಷಿಗಂಡಂ ಯತ್ ಸಸ್ವನಂ ಮಧುರಂ ತಥಾ
ಕಾಲಾಗತಂ ಸಾಸ್ಯರಾಗಂ ತದ್‌ವೈ ವಿಹಸಿತಂ ಭವೇತ್
ಅಸ್ಥಾನಹಸಿತಂ ಯತ್ರ ಸಾಸ್ರನೇತ್ರಂ ತಥೈವ ಚ
ಉತ್ಕಂಪಿತಾಂಸಕಶಿರಸ್ತಚ್ಚಾಪಹಸಿತಂ ಭವೇತ್

೮೧೫ — ನೋ. ರಘುವಂಶ ೯-೭೮ :

ತೌ ದಂಪತೀ ಬಹು ವಿಲಪ್ಯ ಶಿಶೋಃ ಪ್ರಹರ್ತ್ರಾ
ಶಲ್ಯಂ ನಿಖಾತಮುದಹಾರಯತಾಮುರಸ್ತಃ
ಸೋಽಭೂತ್ ಪರಾಸುರಥ ಭೂಮಿಪತಿಂ ಶಶಾಪ
ಹಸ್ತಾರ್ಪಿತೈರ್ನಯನವಾರಿಭಿರೇವ ವೃದ್ಧಃ

ಕರುಣ

ರುದ್ರಟ ೧೫-೩, ೪; ಹೇಮಚಂದ್ರ ೩೭

ಕರುಣೆಯು ಇಷ್ಟವಿಯೋಗ ಹಾಗೂ ಅನಿಷ್ಟಸಂಪ್ರಯೋಗ ಇವುಗಳಿಂದ ಉಂಟಾಗುವುದು.

ಸೂತ್ರ ೨೦೫

ವೀರ

ರುದ್ರಟ ೧೫-೧, ೨; ಹೇಮಚಂದ್ರ ೩೯

ವೀರವು ಉತ್ಸಾಹಾತ್ಮಕವೆಂದೂ ಧರ್ಮ, ದಾನ, ಯುದ್ಧ ಎಂದು ಮೂರು ವಿಧವಾಗಿರುವುದೆಂದೂ ಆಲಂಕಾರಿಕರು ಹೇಳುತ್ತಾರೆ. ೮೧೮ನೆಯ ಪದ್ಯದಲ್ಲಿ ಯುದ್ಧವೀರ, ದಾನವೀರಗಳಿಗೆ ಉದಾಹರಣೆಗಳಿವೆ. ಭೀಷ್ಮನಲ್ಲಿ ಧರ್ಮವೀರ, ಯುದ್ಧವೀರ,ಗಳನ್ನೂ ಕರ್ಣನಲ್ಲಿ ದಾನವೀರ, ಯುದ್ಧವೀರಗಳನ್ನೂ ಕಾಣಬಹುದು. ದಯಾವೀರ ಎಂಬ ಇನ್ನೊಂದು ವಿಭಾಗವನ್ನೂ ಮಾಡಿ ಅದಕ್ಕೆ ಜೀಮೂತವಾಹನನ ಉದಾಹರಣೆಯನ್ನು ಕೆಲವರು ಕೊಡುತ್ತಾರೆ. ಪಾಂಡಿತ್ಯವೀರ, ಕ್ಷಮಾವೀರ,

ಬಲವೀರ ಎಂದು ಇನ್ನೂ ಹಲವು ವಿಭಾಗಗಳನ್ನು ಮಾಡಬಹುದಾದರೂ ಇಂತಹ ವಿಭಾಗಗಳಿಂದ ಏನೂ ಪ್ರಯೋಜನವಿಲ್ಲವೆಂದು ಜಗನ್ನಾಥನು ಹೇಳಿದ್ದಾನೆ.

ರೌದ್ರ

ರುದ್ರಟ ೧೫-೧೩, ೧೪; ಹೇಮಚಂದ್ರ ೩೮

ದಾರಾಪಹಾರ-ನಿಂದಾ ಮುಂತಾದ ಅಪಮಾನಗಳಿಂದ ರೌದ್ರವು ಉಂಟಾಗುವುದೆಂದು ಹೇಮಚಂದ್ರನು ಹೇಳುತ್ತಾನೆ.

೮೧೮ — ನೋ.

ಭಸ್ಮಸಾತ್ಕೃತವತಃ ಪಿತೃದ್ವಿಷಃ । ಪಾತ್ರಸಾಚ್ಚ ವಸುಧಾಂ ಸಸಾಗರಾಂ
ಆಹಿತೋ ಜಯವಿಪರ್ಯಯೋऽಪಿ ಮೇ । ಶ್ಲಾಘ್ಯ ಏವ ಪರಮೇಷ್ಠಿನಾ ತ್ವಯಾ
ರಘುವಂಶ ೧೧–೮೬

ಸೂತ್ರ ೨೦೬

ಭಯಾನಕ

ರುದ್ರಟ ೧೫-೭, ೮; ಹೇಮಚಂದ್ರ ೪೦.

ವಿಕೃತರೂಪ, ಸ್ವರ ಇವುಗಳಿಂದ ಇದು ಉಂಟಾಗುವುದು.

ಬೀಭತ್ಸ

ರುದ್ರಟ ೧೫-೫, ೬; ಹೇಮಚಂದ್ರ ೪೧.

ಅದ್ಭುತ

ರುದ್ರಟ ೧೫-೯, ೧೦; ಹೇಮಚಂದ್ರ ೪೨

ಇದು ದಿವ್ಯದರ್ಶನ, ಇಂದ್ರಜಾಲ ಮೊದಲಾದುವುಗಳಿಂದ ಉಂಟಾಗುವುದು.

೮೨೭ — ನೋ :

ಯದಸ್ತಿ ತದ್ದದಾಸೀತಿ ನೈತಚ್ಚಿತ್ರಮುಪ್ಯೈನ್ಯಹಂ
ಭಯಂ ಸ್ವಪ್ನೇऽಪಿ ತೇ ನಾಸ್ತಿ ದತ್ತಂ ತದ್ವಿದ್ವಿಷಾಂ ಕಥಂ
ಸುಭಾಷಿತಾವಲಿ ೨೪೭೦

ಸೂತ್ರ ೨೦೭

ಶಾಂತ

ರುದ್ರಟ ೧೫-೧೫, ೧೬; ಹೇಮಚಂದ್ರ ೪೩.

ಇದು ಸಮ್ಯಗ್ಜ್ಞಾನ, ವೈರಾಗ್ಯ ಇವುಗಳಿಂದ ಉಂಟಾಗುವುದು.

ಸೂತ್ರ ೨೦೮ ಮತ್ತು ೨೦೯

ಕೆಲವು ರಸಗಳು ಒಂದಕ್ಕೊಂದು ವಿರುದ್ಧವಾಗಿಯೂ ಕೆಲವು ಒಂದಕ್ಕೊಂದು ಅವಿರುದ್ಧವಾಗಿಯೂ ಇರುವುವು. ಹೇಗೆಂದರೆ: ವೀರ-ಶೃಂಗಾರ, ಶೃಂಗಾರ-ಹಾಸ್ಯ, ವೀರ-ಅದ್ಭುತ, ವೀರ-ರೌದ್ರ, ಶೃಂಗಾರ-ಅದ್ಭುತ—ಇವು ಒಂದಕ್ಕೊಂದು ಅವಿರುದ್ಧ ರಸಗಳು; ಶೃಂಗಾರ-ಬೀಭತ್ಸ, ಶೃಂಗಾರ-ಕರುಣ, ವೀರ-ಭಯಾನಕ, ಶಾಂತ-ರೌದ್ರ — ಇವು ಪರಸ್ಪರ ವಿರುದ್ಧ ರಸಗಳು.

ಎರಡು ವಿರುದ್ಧ ರಸಗಳು ಒಂದೆಡೆಯಲ್ಲಿರುವುವೆಂದು ವರ್ಣಿಸುವುದಿದ್ದರೆ ಅವುಗಳಲ್ಲಿಯ ವಿರೋಧವು ನಾಶವಾಗುವಂತೆ ವರ್ಣಿಸಬೇಕಾಗುವುದು. ಉದಾ : ವೀರ-ಭಯಾನಕ ರಸಗಳು ಪರಸ್ಪರ ವಿರುದ್ಧಗಳಾದರೂ ನಾಯಕನಲ್ಲಿ ವೀರವನ್ನೂ ಪ್ರತಿನಾಯಕನಲ್ಲಿ ಭಯಾನಕವನ್ನೂ ವರ್ಣಿಸುವುದರಿಂದ ಪರಸ್ಪರ ವಿರೋಧವು ಅಳಿಯುವುದು. ಒಮ್ಮೊಮ್ಮೆ ಪರಸ್ಪರ ವಿರುದ್ಧಗಳಾದ ರಸಗಳ ಮಧ್ಯದಲ್ಲಿ ಒಂದು ಮಿತ್ರರಸವನ್ನು ಸ್ಥಾಪಿಸಿ ವಿರೋಧವನ್ನು ಅಳಿಯಬಹುದು.

ಸೂತ್ರ ೨೧೦

ಕವಿಕಾಮ ೧–೨೦

ಸೂತ್ರ ೨೧೧ ರಿಂದ ೨೧೫

ವೃತ್ತಿಗಳು ಮೂಲತಃ ನಾಟಕಕ್ಕೆ ಸಂಬಂಧವಾಗಿಯೂ ಬೇರೆ ಬೇರೆ ರಸಗಳಿಗೆ ಪೋಷಕಗಳಾಗಿಯೂ ಇರತಕ್ಕುವು; ವೇಷಭೂಷಾಲಂಕೃತನಾದ ನಟನ ಅಂಗಚಲನಗಳಂತೆಯೇ ಇವನ್ನು ತಿಳಿದುಕೊಳ್ಳಬೇಕು. ಇವುಗಳ ಉತ್ಪತ್ತಿಯನ್ನು ಕುರಿತು ಭರತಮುನಿಯು ನಾಟ್ಯಶಾಸ್ತ್ರದಲ್ಲಿ ಹೇಳಿದುದನ್ನು ಸಂಗ್ರಹವಾಗಿ ಹೀಗೆ ಹೇಳಬಹುದು: ಭಗವಾನ್ ವಿಷ್ಣುವು ಒಮ್ಮೆ ತನ್ನ ಮಾಯೆಯಿಂದ ಲೋಕಗಳನ್ನೆಲ್ಲಾ ತನ್ನಲ್ಲಿ ಸಂಕ್ಷೇಪಿಸಿಕೊಂಡು ಶೇಷಶಾಯಿಯಾಗಿ ಸಮುದ್ರದಲ್ಲಿ ಮಲಗಿದ್ದಾಗ ವೀರ್ಯಮದೋನ್ಮತ್ತರಾದ ಮಧುಕೈಟಭರೆಂಬ ರಕ್ಕಸರು ತೆಗಳ್ನುಡಿಗಳಿಂದ ಅವನನ್ನು ಯುದ್ಧಕ್ಕೆ ಆಹ್ವಾನಿಸಿದರು. ವಿಷ್ಣುವು ಕೂಡಲೇ ಯುದ್ಧಕ್ಕೆ ಸನ್ನದ್ಧನಾಗದೆ ಇದ್ದುದರಿಂದ ಅವರ ಆರಭಟವು ಇನ್ನಷ್ಟು ಹೆಚ್ಚಿತು. ಅವರ ಮಾತುಗಳನ್ನೆಲ್ಲಾ ಕೇಳುತ್ತಿದ್ದ ಬ್ರಹ್ಮನು ವಿಷ್ಣುವಿಗೆ “ ಇದೇನು ಬರಿಯ ಮಾತಿನಿಂದಲೇ ಭಾರತೀವೃತ್ತಿಗೆ (=ನಾಟಕವಾಡುವುದಕ್ಕೆ) ಆರಂಭವಾಗಿದೆ? ಅವರನ್ನು ಈಗಲೇ ಕೊಂದುಹಾಕಬಾರದೇ ? ” ಎಂದನು. ಅದಕ್ಕೆ ವಿಷ್ಣುವು “ ಉದ್ದೇಶಪೂರ್ವಕವಾಗಿಯೇ ಈ ಮಾತುಗಳನ್ನು ನಿರ್ಮಿಸಿದ್ದೇನೆ. ಅವರ ಮಾತು ಹಾಗೆಯೇ ಸಾಗಲಿ

ಅವೇ ಭಾರತಿಯಾಗುವುದು. ಅವರನ್ನು ಈ ಹೊತ್ತೇ ಕೊಂದುಹಾಕುವೆನು" ಎಂದು ಹೇಳಿ ಅವರೊಡನೆ ನಾನಾತರದ ಅಂಗವಿನ್ಯಾಸದಿಂದ ಯುದ್ಧಕ್ಕನುವಾದನು. ಹರಿಯು ತನ್ನ ಪಾದಗಳಿಂದ ಭೂಮಿಯನ್ನು ಮೆಟ್ಟಿದೊಡನೆ ಅದಕ್ಕೆ ಅತ್ಯಂತ ಭಾರವೆನಿಸಿದುದರಿಂದ 'ಭಾರತಿ'ಯು ಅಲ್ಲಿಯೇ ಜನಿಸಿತು. ಸತ್ತ್ವಾಧಿಕವಾದ ಅವನ ಚಲನದಿಂದ 'ಸಾತ್ತ್ವತಿ'ಯು ಹುಟ್ಟಿತು. ವಿಚಿತ್ರವಾದ ರೀತಿಯಿಂದ ಅವನು ತನ್ನ ಕೇಶಗಳನ್ನು ಕಟ್ಟುತ್ತಿದ್ದಾಗ 'ಕೈಶಿಕಿ'ಯು ಉತ್ಪನ್ನವಾಯಿತು. ಅತ್ಯಂತ ಸೌರಂಭದಿಂದಲೂ ರಭಸದಿಂದಲೂ ಅವನು ಯುದ್ಧಮಾಡುವಾಗ 'ಆರಭಟಿ'ಯು ಉಂಟಾಯಿತು. ಮಧುಕೈಟಭರ ಸಂಹಾರದನಂತರ ಇವುಗಳನ್ನು ವೃತ್ತಿಗಳೆಂದು ಕರೆದು ಬ್ರಹ್ಮನು ವೇದಗಳಲ್ಲಿ ಸೇರಿಸಿದನು; ಮುಂದೆ ಬ್ರಹ್ಮನ ಆಜ್ಞಾನುಸಾರವಾಗಿ ಭರತಮುನಿಯು ನಾಟ್ಯಶಾಸ್ತ್ರದಲ್ಲಿ ಸೇರಿಸಿದನು. (ನೋ. ಭರತ ೨೨ ನೆಯ ಅಧ್ಯಾಯ.)

'ಕೈಶಿಕ' (=ಶೃಂಗಾರರಸ) ದಿಂದ, ಅಥವಾ 'ಕೇಶಿನ್' (=ಕೃಷ್ಣ) ಎಂಬುದರಿಂದ 'ಕೈಶಿಕೀ' ಶಬ್ದವು ಉಂಟಾಗಿರುವುದು. ಹೀಗೆಯೇ 'ಸತ್ತ್ವ' (=ಶಕ್ತಿ) ದಿಂದ 'ಸಾತ್ತ್ವತಿ', 'ಭರತ' ದಿಂದ, ಭರತಮುನಿಗೆ ಅಥವಾ ನಟರಿಗೆ ಪ್ರಿಯವಾದುದು ಎಂಬ ಅರ್ಥದಲ್ಲಿ, 'ಭಾರತಿ', ರಭಸಯುಕ್ತವಾದ ಆರಂಭ ಎಂಬ ಅರ್ಥದಲ್ಲಿ 'ಆರಭಟಿ' ಎಂಬಿವು ಬಂದಿರುವುವು. ಭರತಮುನಿಯು ಹೇಳಿದ ಇವುಗಳ ಲಕ್ಷಣವನ್ನು ನೋಡಿದರೆ ಇವು ನಾಟಕದ ಸರಣಿಗಷ್ಟೇ ಅಲ್ಲದೆ ನಾಟಕದ ಸಂಗತಿಗಳನ್ನು ರಂಗಸ್ಥಲದಲ್ಲಿ ತೋರಿಸುವುದಕ್ಕೆ ಬೇಕಾದ ಸಾಧನಗಳಿಗೂ ಅಲ್ಲಿಯ ವ್ಯವಸ್ಥೆಗೂ ಅನ್ವಯಿಸುವಂತೆ ತೋರುತ್ತದೆ. (ನೋ. ಭರತ ೨೨-೨೫, ೩೮, ೪೭, ೫೬, ೫೭ ಇತ್ಯಾದಿ)

ವೃತ್ತಿಗಳಿಗೂ ರೀತಿಗಳಿಗೂ ಭೇದವಿದೆ. ವೃತ್ತಿಗಳು ಅರ್ಥಕ್ಕೆ ಸಂಬಂಧಪಟ್ಟುವು; ರೀತಿಗಳು ಶಬ್ದಕ್ಕೆ ಸಂಬಂಧಿಸಿದುವು. ವೃತ್ತಿಗಳು ರಸಪೋಷಕಗಳು; ರೀತಿಗಳು ಕಾವ್ಯಗುಣಪೋಷಕಗಳು. ಸರಣಿಯು ಕೋಮಲ ಅಥವಾ ಪರುಷವಾಗುವುದು ರೀತಿಗಳಿಂದ.

ನಾಗವರ್ಮನು ವೃತ್ತಿಗಳ ಸ್ವರೂಪಗಳನ್ನು ಸೂತ್ರ ೨೧೩, ೨೧೪, ೨೧೫ ಇವುಗಳಲ್ಲಿ ಸ್ಪಷ್ಟಮಾಡಿರುವನು. ಸಾತ್ತ್ವತಿಯು ವೀರದಲ್ಲಿಯೂ ಕೈಶಿಕಿಯು ಶೃಂಗಾರದಲ್ಲಿಯೂ ಆರಭಟಿಯು ರೌದ್ರ-ಬೀಭತ್ಸಗಳಲ್ಲಿಯೂ ಶೋಭಿಸುವುವು. 'ಭಾರತೀ ತು ಶಬ್ದವೃತ್ತಿಃ' ಎಂಬುದರಿಂದ ಭಾರತಿಯು ನಟನ ವ್ಯಾಪಾರಗಳಿಗೆ ಸಂಬಂಧಿಸದೆ ಮಾತುಗಳಿಗೆ ಮಾತ್ರ ಸಂಬಂಧಿಸುವುದರಿಂದ ಅದು ಎಲ್ಲಾ ರಸಗಳಲ್ಲಿಯೂ ಬರಬಹುದು. ಈ ವೃತ್ತಿಯು ಮಾತಿನಲ್ಲಿ ಕಂಡುಬರುವ ವೈಚಿತ್ರ್ಯವನ್ನು ಅವಲಂಬಿಸಿರುವುದು.

ಕವಿಸಮಯಾಧಿಕರಣ

ಸಂಸ್ಕೃತದಲ್ಲಿ 'ಕವಿಸಮಯ'ವನ್ನು ಬೇರೆ ವಿಷಯವನ್ನಾಗಿ ಪ್ರತಿಪಾದಿಸಿದವರಲ್ಲಿ ರಾಜಶೇಖರನೆಂಬ ಕವಿಯೆ ಮೊದಲಿಗನು. ಇವನಿಗಿಂತ ಮೊದಲಿನವರಾದ ಭಾಮಹ, ದಂಡಿ, ವಾಮನರು ದೇಶ-ಕಾಲ-ಕಲಾ-ಲೋಕ-ನ್ಯಾಯ-ಆಗಮಗಳಿಗೆ ವಿರುದ್ಧವಾದ ಸಂಗತಿಗಳನ್ನು ವರ್ಣಿಸುವುದು ಕಾವ್ಯದೋಷವೆಂದು ಹೇಳಿರುವರು. ರಾಜಶೇಖರನು ಅಶಾಸ್ತ್ರೀಯವಾದ ಮತ್ತು ಅಲೌಕಿಕವಾದ ಸಂಗತಿಗಳಲ್ಲಿ ಕೆಲವನ್ನು ಕವಿಗಳು ಉಪಯೋಗಿಸಿಕೊಳ್ಳುವುದಕ್ಕೆ ಪ್ರತಿಬಂಧಕವಿಲ್ಲವೆಂದು ತನ್ನ ಕಾವ್ಯಮೀಮಾಂಸೆಯಲ್ಲಿ ಹೇಳಿರುವನು. ಇಂತಹ ಸಂಗತಿಗಳು ಅಶಾಸ್ತ್ರೀಯವಾಗಿಯೂ ಅಲೌಕಿಕವಾಗಿಯೂ ಕಂಡುಬಂದರೂ—ಹಿಂದೆ ಯಾವುದಾದರೊಂದು ಕಾಲದಲ್ಲಿಯಾಗಲಿ, ಜಗತ್ತಿನ ಯಾವುದಾದರೊಂದು ಎಡೆಯಲ್ಲಿಯಾಗಲಿ ಇದ್ದಿರಬೇಕೆಂದೂ ಅಥವಾ ಪ್ರಾಚೀನ ಕವಿಗಳು ಪರಂಪರೆಯಾಗಿ ಇವುಗಳನ್ನು ವರ್ಣಿಸುತ್ತ ಬಂದಿರುವರೆಂದೂ—ಆದುದರಿಂದ ಇವು ಗ್ರಾಹ್ಯವಾದುವುಗಳೆಂದೂ ಅವನ ಮತ. ಇವನ್ನೆ 'ಕವಿಸಮಯ'ವೆಂದು ಹೇಳಿರುವನು.

ವಾಮನನು (೫-೧) 'ಕಾವ್ಯಸಮಯ'ವೆಂಬ ಪದವನ್ನು ಪ್ರಯೋಗಿಸಿರುವನಾದರೂ ಅಲ್ಲಿ ಅವನು ಹೇಳಿದ ಸಂಗತಿಗಳು ವ್ಯಾಕರಣ-ಛಂದಸ್ಸು ಮುಂತಾದುವುಗಳಲ್ಲಿ ಆಗಬಹುದಾದ ತಪ್ಪುಗಳನ್ನು ಕುರಿತು ಇರುವುವು. ಇವರೊಳಗಿನ ಕೆಲವು ಸಂಗತಿಗಳನ್ನೂ ನಾಗವರ್ಮನು ಈ ಅಧಿಕರಣದಲ್ಲಿ ತೆಗೆದುಕೊಂಡಿದ್ದಾನೆ.

ರಾಜಶೇಖರನು ತನ್ನ 'ಕಾವ್ಯಮೀಮಾಂಸೆ'ಯಲ್ಲಿ ಕವಿಸಮಯವನ್ನು ವಿಸ್ತಾರವಾಗಿ ವಿವೇಚಿಸಿದನಂತರ ಹೇಮಚಂದ್ರ, ಜಿನಸೇನ, ಅಮರಸಿಂಹ, ದೇವೇಶ್ವರ ಮೊದಲಾದವರು ಅವನು ಹೇಳಿದುದನ್ನೆ ಎತ್ತಿಕೊಂಡು ಹೆಚ್ಚಿನ ಉದಾಹರಣೆಗಳೊಡನೆ ಪದ್ಯರೂಪದಲ್ಲಿಯೋ ಗದ್ಯದಲ್ಲಿಯೋ ತಮ್ಮ ತಮ್ಮ ಗ್ರಂಥಗಳಲ್ಲಿ ಸೇರಿಸಿದ್ದಾರೆ. ಆದರೆ ಪ್ರತಿಪಾದನಕ್ರಮದಲ್ಲಿ ರಾಜಶೇಖರನಿಗೂ ಉಳಿದವರಿಗೂ ಸ್ವಲ್ಪ ವ್ಯತ್ಯಾಸವುಂಟು. ರಾಜಶೇಖರನು ಜಾತಿ, ದ್ರವ್ಯ, ಗುಣ, ಕ್ರಿಯೆಯೆಂಬುವುಗಳನ್ನು ತೆಗೆದುಕೊಂಡು ಒಂದೊಂದರಲ್ಲಿ ಕವಿಸಮಯದ ಮೂರು ವಿಧಗಳನ್ನು ಹೇಳಿರುವನು. ಉಳಿದವರು ಕವಿಸಮಯದ ವಿಧಗಳನ್ನೆ ತೆಗೆದುಕೊಂಡು ಅವುಗಳಲ್ಲಿ ಜಾತಿ, ಗುಣ ಮೊದಲಾದುವುಗಳನ್ನು ಹೇಳಿರುವರು. ನಾಗವರ್ಮನು ಇಲ್ಲಿ ಹೇಮಚಂದ್ರ-ಅಮರಸಿಂಹ ಮೊದಲಾದವರಂತೆಯೇ ಕ್ರಮವನ್ನಿಟ್ಟುಕೊಂಡಿರುವನು.

ಸೂತ್ರ ೨೧೬

ಇದು ರಾಜಶೇಖರನ 'ಅಶಾಸ್ತ್ರೀಯಮಲೌಕಿಕಂ ಚ ಪರಂಪರಾಯತಂ ಯಮರ್ಥಮುಪನಿಬಧ್ನಂತಿ ಕವಯಃ ಸ ಕವಿಸಮಯಃ' (೧೪) ಎಂಬುದರ ವಿಸ್ತಾರವಾದ ಅನುವಾದ.

ಸೂತ್ರ ೨೧೭

ಇಲ್ಲಿ ಮಾಡಿರುವ ವಿಭಾಗಗಳು ರಾಜಶೇಖರನ ಮತಾನುಸಾರವಾಗಿರುವುವು. ಜಾತಿ-ದ್ರವ್ಯ-ಕ್ರಿಯಾ-ಗುಣ ಇವುಗಳ ವರ್ಣನೆಯನ್ನು 'ಅಸತೋಽಪಿನಿಬಂಧಂ, ಸತೋಽಪ್ಯನಿಬಂಧಂ, ನಿಯಮಂ' ಎಂದು ಮೂರು ವಿಧವಾಗಿ ಕಾವ್ಯಮೀಮಾಂಸೆಯಲ್ಲಿ ವಿಭಾಗಮಾಡಿದುದನ್ನೆ ಇಲ್ಲಿ ಕ್ರಮವಾಗಿ 'ಅಸದಖ್ಯಾತಿ, ಸದಕೀರ್ತನ, ನಿಯಮಾರ್ಥ' ವೆಂದು ಮೂರು ಪ್ರಕರಣಗಳನ್ನಾಗಿ ನಾಗವರ್ಮನು ಹೇಳಿರುವನು. ಸಂಸ್ಕೃತದಲ್ಲಿ 'ಐಕ್ಯ' ವೆಂಬುದನ್ನು 'ನಿಯಮವಿಶೇಷ' ವೆಂದು ಹೇಳಿ ನಿಯಮದಲ್ಲಿಯೆ ಸೇರಿಸಿರುವರು. ಇದನ್ನೆ ನಾಗವರ್ಮನು ನಾಲ್ಕನೆಯ ವಿಭಾಗವಾಗಿ ಪ್ರತ್ಯೇಕ ಪ್ರಕರಣವನ್ನು ಮಾಡಿರುವನು.

ಅಸದಖ್ಯಾತಿ ಪ್ರಕರಣ

ಈ ಪ್ರಕರಣದಲ್ಲಿ 'ಅಸದಖ್ಯಾತಿ' ಎಂಬ ಕವಿಸಮಯವನ್ನು ವರ್ಣಿಸಿದೆ. ಕೆಲವು ವಸ್ತುಗಳು ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲಿ ದೊರೆಯುವುದಿಲ್ಲವಾದರೂ ಹಾಗೆ ದೊರೆಯುತ್ತವೆ ಎಂದು ವರ್ಣಿಸುವುದೇ ಈ ಕವಿಸಮಯವು. ಉದಾ : ನದಿಗಳಲ್ಲಿ ಕಮಲಗಳು ದೊರೆಯುವುವೆಂದು ವರ್ಣಿಸುವುದು.

೮೫೭ — ಹೋ :

ಏಕೇನಾಕ್ಷ್ಣಾ ಪ್ರವಿತತರುಷಾ ವೀಕ್ಷತೇ ಲಂಬಮಾನಂ
ಭಾನೋರ್ಬಿಂಬಂ ಜಲವಿಲುಲಿತೇನಾಪರೇಣ ಸ್ವಕಾಂತಂ
ಅಹ್ನಶ್ಛೇದೇ ದಯಿತವಿರಹಾಶಂಕಿನೀ ಚಕ್ರವಾಕೀ
ದ್ವೌ ಸಂಕೀರ್ಣೌ ರಚಯಿತಿ ರಸೌ ನರ್ತಕೀವ ಪ್ರಗಲ್ಭಾ

ಶಾರ್ಙ್ಗಧರಪದ್ಧತಿ : ೩೯೯೬

(ಇಲ್ಲಿ ಕನ್ನಡ ಪದ್ಯದಲ್ಲಿ 'ನದೀಲೀಲೆ' ಎಂಬುದಕ್ಕಿಂತಲೂ 'ನಟೀಲೀಲೆ' ಎಂಬುದು ಹೆಚ್ಚು ಒಪ್ಪುತ್ತದೆ. ಆದರೆ ಕೈಬರೆಹದ ಪ್ರತಿಗಳಲ್ಲೆಲ್ಲ 'ನದೀಲೀಲೆ' ಯೆಂದೇ ಇರುವುದು).

೮೬೦ — ಹೋ :

ಅಪಿ ಪಿಬತ ಚಕೋರಾಃ ಕೃತ್ಸ್ನಮುನ್ನಾಮ್ಯಕಂಠಂ
ಕ್ರಮುಕಬಲನಚಂಚಚ್ಚಂಚವಶ್ಚಂದ್ರಿಕಾಂಭಃ
ವಿರಹವಿಧುರಿತಾನಾಂ ಜೀವಿತತ್ರಾಣಹೇತೋಃ
ಭವತಿ ಹರಿಣಲಕ್ಷ್ಮಾ ಯೇನ ತೇಜೋದರಿದ್ರಃ

ಸುಭಾಷಿತರತ್ನಭಾಂಡಾಗಾರ

ಸದಕೀರ್ತನ ಪ್ರಕರಣ

ಕೆಲವೆಡೆಗಳಲ್ಲಿಯೂ ಕೆಲವು ಕಾಲಗಳಲ್ಲಿಯೂ ಕಂಡುಬರಬಹುದಾದ ವಸ್ತುಗಳನ್ನು ವರ್ಣಿಸದೆ ಇರುವುದು 'ಸದಕೀರ್ತನ' ವೆಂಬ ಕವಿಸಮಯವು. ಉದಾ: ಶುಕ್ಲಪಕ್ಷದಲ್ಲಿ ಕತ್ತಲೆಯನ್ನೂ ಕೃಷ್ಣಪಕ್ಷದಲ್ಲಿ ಬೆಳ್ದಿಂಗಳನ್ನೂ ವರ್ಣಿಸದೆ ಇರುವುದು. ೮೭೪ನೆಯ ಪದ್ಯದಲ್ಲಿ 'ಕಾಳ' ವೆಂದರೆ ಕೃಷ್ಣಪಕ್ಷವೆಂದೂ 'ಜೊನ್ನ' ವೆಂದರೆ ಶುಕ್ಲಪಕ್ಷವೆಂದೂ ತಿಳಿದುಕೊಳ್ಳಬೇಕು. ಇದಕ್ಕೆ ರಾಜಶೇಖರನು ೮೧ರಲ್ಲಿ ಕೊಟ್ಟ ಕೆಳಗಿನ ಉದಾಹರಣೆಯು ಹೆಚ್ಚು ಸ್ಪಷ್ಟವಾಗಿರುವುದು:

ದದೃಶಾತೇ ಜನೈಸ್ತತ್ರ ಯಾತ್ರಾಯಾಂ ಸಕುತೂಹಲೈಃ
ಬಲಭದ್ರಪ್ರಲಂಭಘ್ನೌ ಪಕ್ಷಾವಿವ ಸಿತಾಸಿತೌ

ಸೂತ್ರ ೨೨೪

ಶೇಫಾಲಿಕಾಕುಸುಮಗಳು (ಹಗಲು ಬೀಳುತ್ತಿದ್ದರೂ) ರಾತ್ರಿಯಲ್ಲಿ ಮಾತ್ರ ಬೀಳುತ್ತವೆಯೆಂದು ವರ್ಣಿಸುವುದೂ ಹಾಗೆ ಬೀಳುವುದನ್ನು ಕಣ್ಣೀರಿಗೆ ಹೋಲಿಸುವುದೂ ಕವಿಸಮಯವಾಗಿದೆ. ೮೮೭ರಲ್ಲಿ ಈ ಕುಸುಮಗಳು ಸಂತೋಷದಿಂದ ಕಣ್ಣೀರು ಸುರಿಸುವುವೆಂದು ಹೇಳಿದೆ. ಕೆಳಗೆ ಕೊಟ್ಟ ರಾಜಶೇಖರನ ೮೨ನೆಯ ಉದಾಹರಣೆಯಲ್ಲಿ ಅವು ದುಃಖದಿಂದ ಕಣ್ಣೀರಿಡುವುವೆಂದು ವರ್ಣಿತವಾಗಿದೆ:

ತ್ವದ್ವಿಪ್ರಯೋಗೇ ಕಿರಣೈಸ್ತಥೋಗ್ರೈ । ರ್ದಗ್ಧಾಸ್ಮಿ ಕೃತ್ಸ್ನಂ ದಿವಸಂ ಸವಿತ್ರಾ
ಇತೀವ ದುಃಖಂ ಶಶಿನೇ ಗದಂತಿ । ಶೇಫಾಲಿಕಾ ರೋದಿತಿ ಪುಷ್ಪಬಾಷ್ಪೈಃ

ಸೂತ್ರ ೨೨೫

ಕುಂದಪುಷ್ಪದ ಮೊಗ್ಗೆಗಳು, ಹಲ್ಲುಗಳು ಕೆಂಪು ಇದ್ದಾಗ್ಯೂ ಪ್ರಿಯಂಗ ಕುಸುಮಗಳು ಹಳದಿ, ಕಮಲದ ಮೊಗ್ಗೆಗಳು ಹಸುರು ಇದ್ದಾಗ್ಯೂ—ಆಯಾ ಬಣ್ಣಗಳನ್ನು ವರ್ಣಿಸದೆ—ಇವೆಲ್ಲವನ್ನೂ ಬೆಳ್ಳಗೆ ಎಂದೇ ವರ್ಣಿಸುವುದು ಕವಿಸಮಯವಾಗಿದೆ. ಹಲ್ಲುಗಳನ್ನು ಕುಂದದ ಮೊಗ್ಗೆಗೆ ಕವಿಗಳು ಹೋಲಿಸುತ್ತಾರೆ. ಷಡಕ್ಷರಿದೇವನ ವೃಷಭೇಂದ್ರವಿಜಯದ ಕೆಳಗಿನ ಪದ್ಯವನ್ನು ನೋಡುವುದು:

ಕುಂದುವ ಮೊಲ್ಲೆಯ ಮುಗುಳಂ
ಕುಂದದ ಮುಗುಳೆಂದು ನುಡಿವುದನುಚಿತಮಿಳೆಯೊಳ್
ಕುಂದದ ಚೆಂದದ ದಶನಂ
ಕುಂದದ ಮುಗುಳಲ್ತೆ ತನ್ಮೃದುಸ್ಮಿತಲತೆಯಾ

೮೭೯ — ಹೋ :

ಸಿತಂ ಸಿತಿಮ್ನಾ ಸುತರಾಂ ಮುನೇರ್ವಪು । ರ್ವಿಸಾರಿಭಿಸ್ಸೌಧಮಿವಾಥ ಲಂಬಯನ್
ದ್ವಿಜಾವಲಿವ್ಯಾಜನಿಶಾಕರಾಂಶುಭಿಃ । ಶುಚಿಸ್ಮಿತಾಂ ವಾಚಮವೋಚದಚ್ಯುತಃ
ಶಿಶುಪಾಲವಧ ೧-೨೫

೮೮೧ — ಹೋ :

ಪ್ರಿಯಂಗುಶ್ಯಾಮಾಮಂಭೋಧಿರಂಧ್ರೀಣಾಂ ಸ್ತನಮಂಡಲಂ
ಅಲಂಕರ್ತುಮಿವ ಸ್ವಚ್ಛಾಃ ಸೂತೇ ಮೌಕ್ತಿಕಸಂಪದಃ
ಹೇಮಚಂದ್ರ : ಕಾವ್ಯಾನುಶಾಸನ

ನಿಯಮಾರ್ಥ ಪ್ರಕರಣ

'ವಿಧಿ, ನಿಯಮ, ಪರಿಸಂಖ್ಯೆ' ಎಂಬುವು ಧರ್ಮಶಾಸ್ತ್ರದಲ್ಲಿ ಬರುವ ಸಾಂಕೇತಿಕ ಶಬ್ದಗಳು. ಬೇರೆ ಯಾವ ರೀತಿಯಿಂದಲೂ ಗೊತ್ತಾಗದೆ ಇರುವ ಒಂದು ಕಾರ್ಯವನ್ನು ಮಾಡಲಿಕ್ಕೆ ಹೇಳುವುದು 'ವಿಧಿ' ಎಂಬುದು. (ಉದಾ : 'ಸ್ವರ್ಗಪ್ರಾಪ್ತಿಗಾಗಿ ಜ್ಯೋತಿಷ್ಟೋಮವೆಂಬ ಯಾಗವನ್ನು ಮಾಡಬೇಕು' ಎಂದು ಹೇಳುವುದು ವೇದೋಕ್ತ ವಿಧಿ.) ಪಕ್ಷ (alternative) ಗಳು ಅನೇಕವಿರುವಾಗ ಒಂದನ್ನೆ ವಿಧಿಸುವುದು 'ನಿಯಮ'; ಒಂದು ಪಕ್ಷವನ್ನು ವಿಧಿಸುವುದಲ್ಲದೆ ಮತ್ತೊಂದನ್ನು ನಿಷೇಧಿಸುವುದು 'ಪರಿಸಂಖ್ಯೆ'. ಇಲ್ಲಿ 'ನಿಯಮ' ವೆಂಬ ಕವಿ ಸಮಯವನ್ನು ಕುರಿತು ರಾಜಶೇಖರನು '**ಅನೇಕತ್ರಪ್ರವೃತ್ತವೃತ್ತೀನಾಂ ಏಕತ್ರಾಚರಣಂ ನಿಯಮಃ**' (ಎಂದರೆ ಅನೇಕ ಎಡೆಗಳಲ್ಲಿ ಇರಬಹುದಾದ ವಸ್ತುವು ಒಂದೆ ಎಡೆಯಲ್ಲಿ ಮಾತ್ರ ಇರುವುದೆಂದು ಹೇಳುವುದು) ಎಂದು ಹೇಳಿರುವನು. ಉದಾ : ಮುತ್ತುಗಳು ತಾಮ್ರಪರ್ಣೀನದಿಯಲ್ಲಿ ಮಾತ್ರ ಇರುವುವೆಂದು ವರ್ಣಿಸುವುದು.

ಸೂತ್ರ ೨೨೭

ಬಂಹಿಮತ್ = ವಿಪುಲವಾದ

೮೯೩ — ಹೋ :

ಅಧ್ಯಾಸ್ಯ ಚಾಂಭಃಪೃಷತೋಕ್ಷಿತಾನಿ । ಶೈಲೇಯಗಂಧೀನಿ ಶಿಲಾತಲಾನಿ
ಕಲಾಪಿನಾಂ ಪ್ರಾವೃಷಿ ಪಶ್ಯ ನೃತ್ಯಂ । ಕಾಂತಾಸು ಗೋವರ್ಧನಕಂದರಾಸು
—ರಘುವಂಶ ೬-೫೧

೪೯೫ — ಹೋ :

ಪುಷ್ಪಂ ಪ್ರವಾಲೋಪಹಿತಂ ಯದಿ ಸ್ಯಾ । ನ್ಮುಕ್ತಾಫಲಂ ವಾ ಸ್ಫುಟವಿದ್ರುಮಸ್ಥಂ
ತತೋಽನುಕುರ್ಯಾದ್ವಿಶದಸ್ಯ ತಸ್ಯಾ । ಸ್ತಾಮ್ರೌಷ್ಠಪರ್ಯಸ್ತರುಚೇಃ ಸ್ಮಿತಸ್ಯ
ಕುಮಾರಸಂಭವ ೧-೪೪

ಐಕ್ಯಪ್ರಕರಣ

ನಿಜವಾಗಿಯೂ ಬೇರೆ ಬೇರೆಯಾದುವುಗಳನ್ನು ಒಂದೇ ಎಂದು ತಿಳಿದು ಕೊಳ್ಳುವುದೇ ' ಐಕ್ಯ ' ವೆಂಬ ಕವಿಸಮಯ.

ಸೂತ್ರ ೨೩೦-೨೩೧

ಹಿರಣ್ಯಾಕ್ಷ, ಹಿರಣ್ಯಕಶಿಪು, ಪ್ರಹ್ಲಾದ, ವಿರೋಚನ, ಬಲಿ, ಬಾಣ ಮುಂತಾದ ವರು ' ದೈತ್ಯ 'ರು; ವಿಪ್ರಚಿತ್ತಿ, ಶಂಬರ, ನಮುಚಿ, ಪ್ರಲೋಮ ಮೊದಲಾದವರು ' ದಾನವ 'ರು; ಬಲ, ವೃತ್ರ, ವಿಕ್ಷುರ, ವೃಷಪರ್ವಾದಿಗಳು ' ಅಸುರ 'ರು. ಹೀಗೆ ಬೇರೆ ಬೇರೆಯಾದ ವಸ್ತುಗಳನ್ನು ಒಂದೇ ಎಂದು ವರ್ಣಿಸುವುದು ಐಕ್ಯವೆಂಬ ಕವಿಸಮಯ.

೬೦೨ — ಹೋ :

ಮಯೂಖನಖರತ್ರುಟತ್ತಿಮಿರಕುಂಭಿಕುಂಭಸ್ಥಲೋ
ಚ್ಚಲತ್ತರಲತಾರಕಾಕಪಟಕೀರ್ಣಮುಕ್ತಾಗಣಃ
ಪುರಂದರಹರಿದ್ದರೀಕುಹರಗರ್ಭಸುಪ್ತೋತ್ಥಿತ
ಸ್ತುಷಾರಕರಕೇಸರೀ ಗಗನಕಾನನಂ ಗಾಹತೇ
ಸುಭಾಷಿತಾವಲಿ ೧೯೪೧

ಸೂತ್ರ ೨೩೨

ಸಿರಿ=ವಿಭೂತಿ=ಸಂಪತ್ತು.

ಹೀಗೆಯೇ ಸಾಗರ - ಮಹಾಸಮುದ್ರ ಇವುಗಳನ್ನು ಒಂದೇ ಎಂದು ಹೇಳು ವುದೂ ಹನ್ನೆರಡು ಮಂದಿ ಸೂರ್ಯರಿಗೆ (ಶಾಸ್ತ್ರದಲ್ಲಿ ಅವರಿಗೆ ಹೆಸರುಗಳು ಸಹ ಬೇರೆ ಬೇರೆಯಾಗಿದ್ದರೂ) ಐಕ್ಯವನ್ನು ಹೇಳುವುದೂ ಕಾಮನಿಗೆ ಅಂಗತ್ವವನ್ನೂ ಅನಂಗತ್ವವನ್ನೂ ಅಂಗೀಕರಿಸುವುದೂ ಶಿವನ ಜಡೆಯೊಳಗಿನ ಚಂದ್ರನಿಗೆ ಬಾಲತ್ವ ವನ್ನು ಹೇಳುವುದೂ ಈ ಕವಿಸಮಯಕ್ಕೆ ರಾಜಶೇಖರನು ಕೊಟ್ಟ ಹೆಚ್ಚಿನ ಉದಾ ಹರಣೆಗಳಾಗಿವೆ.

೬೦೩ — ಹೋ :

ಗರ್ಭಂ ದಧತ್ಯರ್ಕಮರೀಚಯೋಸ್ಮಾ । ದ್ವಿವೃದ್ಧಿಮತ್ರಾಪ್ನುವತೇ ವಸೂನಿ
ಅಭಿಂದನಂ ವಹ್ನಿಮಸೌ ಬಿಭರ್ತಿ । ಪ್ರಹ್ಲಾದನಂ ಜ್ಯೋತಿರಜನ್ಯನೇನ ॥
ಪಕ್ಷಚ್ಛಿದಾ ಗೋತ್ರಭಿದಾತ್ತಗಂದಾಃ । ಶರಣ್ಯಮೇನಂ ಶತಶೋ ಮಹೀಧ್ರಾಃ
ನೃಪಾ ಇವೋಪಪ್ಲವಿನಃ ಪರೇಭ್ಯೋ । ಧರ್ಮೋತ್ತರಂ ಮಧ್ಯಮಮಾಶ್ರಯಂತೇ
ರಘುವಂಶ ೧೩-೪ ಮತ್ತು ೭

೯೧೦ — ಹೋ : ಹೇಮಚಂದ್ರನ ಕಾವ್ಯಾನುಶಾಸನ, ೨೯

ಯದಿಂದೋರನ್ವೇತಿ ವ್ಯಸನಮುದಯಂ ವಾ ನಿಧಿರಪಾ
ಮುಪಾಧಿಸ್ತತ್ರಾಯಂ ಜಯತಿ ಜನಿಕರ್ತುಃ ಪ್ರಕೃತಿತಾ
ಅಯಂ ಕಃ ಸಂಬಂಧೋ ಯದನುಹರತೇ ತಸ್ಯ ಕುಮುದಂ
ವಿಶುದ್ಧಾಃ ಶುದ್ಧಾನಾಂ ಧ್ರುವಮನಭಿಸಂಧಿಪ್ರಣಯಿನಃ

೯೨೦ — ಹೋ :

ಉಪಾಂತವಾನೀರವನೋಪಗೂಢಾ । ನ್ಯಾಲಕ್ಷ್ಯ ಪಾರಿಪ್ಲವಸಾರಸಾನಿ
ದೂರಾವತೀರ್ಣಾ ಪಿಬತೀವ ಖೇದಾ । ದಮೂನಿ ಪಂಪಾಸಲಿಲಾನಿ ದೃಷ್ಟಿಃ
ರಘುವಂಶ ೧೩–೩೦

೯೨೨ — ಹೋ : ಹೇಮಚಂದ್ರನ ಕಾವ್ಯಾನುಶಾಸನ, ೨೮

ಮರಕತಸದೃಶಂ ಚ ಯಾಮುನಂ । ಸ್ಫಟಿಕಸಿಲಾವಿಮಲಂ ಚ ಜಾಹ್ನವಂ
ತದುಭಯಮುದಕಂ ಪುನಾತು ವೋ । ಹರಿಹರಯೋರಿವ ಸಂಗತಃ ವಪುಃ

೯೨೪ — ಹೋ :

ಲೇಖಯಾ ವಿಮಲವಿದ್ರುಮಭಾಸಾ । ಸಂತತಂ ತಿಮಿರಮಿಂದುರುದಾಸೇ
ದಂಷ್ಟ್ರಯಾ ಕನಕಟಂಕಪಿಶಂಗ್ಯಾ । ಮಂಡಲಂ ಭುವ ಇವಾದಿವರಾಹಃ
ಕಿರಾತಾರ್ಜುನೀಯ ೯–೨೨

೯೨೫ — ಹೋ :

ಸ ತಪ್ತಕಾರ್ತಸ್ವರಭಾಸ್ವರಾಂಬರಃ । ಕಠೋರತಾರಾಧಿಫಲಾಂಛನಚ್ಛವಿಃ
ವಿದಿದ್ಯುತೇ ಬಾಡಬಜಾತವೇದಸಃ । ಶಿಖಾಭಿರಾಶ್ಲಿಷ್ಟ ಇವಾಂಭಸಾಂ ನಿಧಿಃ
ಶಿಶುಪಾಲವಧ ೧–೨೦

ಸೂತ್ರ ೨೩೬

ವಾಮನ ೫–೧–೧೭; ದರ್ಪಣ ೯೪, ೧೪೪.

ಇಲ್ಲಿಂದ ಮುಂದೆ ವಾಮನನ 'ಕಾವ್ಯಸಮಯ'ದಲ್ಲಿ ಹೇಳಿದ ಸಂಗತಿಗಳಲ್ಲಿ ಕೆಲವನ್ನು ನಾಗವರ್ಮನು ತೆಗೆದುಕೊಂಡಿದ್ದಾನೆ. ತೋಳು, ತೊಡೆ, ಕಣ್ಣು,

ಮುಂತಾದುವುಗಳನ್ನು ವರ್ಣಿಸುವಾಗ ಕನ್ನಡದಲ್ಲಿ ಏಕವಚನವನ್ನಾಗಲಿ ಬಹುವಚನವನ್ನಾಗಲಿ ಪ್ರಯೋಗಿಸಬಹುದಾದರೂ ಅರ್ಥದಲ್ಲಿ ಅವು ಎರಡೆರಡೇ ಎಂದು ತಿಳಿದು ಕೊಳ್ಳಬೇಕು. ಸಂಸ್ಕೃತದಲ್ಲಿ ಇಂಥಲ್ಲಿ ದ್ವಿವಚನವನ್ನು ಉಪಯೋಗಿಸುವರಾದರೂ ಬೇರೆ ವಚನಗಳನ್ನು (ಉದಾ : 'ಸ್ತ್ರೀಣಾಮ್ ಚಕ್ಷುಃ ') ಉಪಯೋಗಿಸಬಹುದೆಂದು ವಾಮನನು ಹೇಳಿದ್ದಾನೆ.

ಸೂತ್ರ ೨೩೭

ವಾಮನ ೫-೧-೨; ದರ್ಪಣ ೬೧.

ಪದ್ಯಗಳಲ್ಲಿ ಪಾದಗಳ ಕೊನೆಗೆ ಸಂಧಿಯನ್ನು ಮಾಡುವುದು ನಿತ್ಯವಾದರೂ ಪದ್ಯಾರ್ಧದ ಕೊನೆಗೆ (ಎಂದರೆ ಪೂರ್ವಾರ್ಧದ ಕೊನೆಯ ಅಕ್ಷರವನ್ನೂ ಉತ್ತರಾರ್ಧದ ಮೊದಲನೆಯ ಅಕ್ಷರವನ್ನೂ ಕೂಡಿಸಿ) ಸಂಧಿಯನ್ನು ಬೇಕಾದರೆ ಮಾಡಬಹುದು ಇಲ್ಲವೆ ಬಿಡಬಹುದು ಎಂಬುದನ್ನು ಇಲ್ಲಿ ಹೇಳಿದೆ. ಒಂದೊಂದು ಪದ್ಯವೂ ತನ್ನಷ್ಟಕ್ಕೆ ಸಂಪೂರ್ಣವಾದುದೆಂದು ಬಗೆಯುವುದರಿಂದ ಪದ್ಯದ ತುದಿಯಲ್ಲಿ ಸಂಧಿಯ ಪ್ರಶ್ನೆಯು ಉಂಟಾಗುವುದಿಲ್ಲ.

ಸೂತ್ರ ೨೩೮

ವಾಮನ ೫-೧-೧೨; ಹಾಗೂ ೫-೨-೧೫; ದರ್ಪಣ ೧೩೨.

ಒಂದು ವಸ್ತುವಿಗೆ ಸಂಬಂಧವಾದ ಇನ್ನೊಂದು ವಸ್ತುವಿಗೆ ಮೂರನೆಯದೊಂದು ವಸ್ತುವಿನ ಸಂಬಂಧವನ್ನು ಹೇಳುವುದಕ್ಕೆ 'ಸಂಬಂಧದ ಸಂಬಂಧ' ವೆನ್ನುವರು. ಉದಾ : 'ನೊಸಲ ಕಣ್ಣ ದೇವಂ;' ಹೀಗೆಯೆ 'ಕಮಳದ ಕಂದದ ಅಗ್ರಿಮದ ಅಂಕುರದ ಆಸ್ವಾದ' (೯೪೨).

ಪಾಣಿನಿಯ ೨-೧-೫೬ ನೆಯ ಸೂತ್ರದಮೇರೆಗೆ 'ಅಧರಬಿಂಬ'ವೆಂದು ಆಗಬೇಕಾದ ಸಮಾಸವು 'ಬಿಂಬಾಧರ' ಎಂದು ಆಗಬೇಕಾದರೆ ಇದನ್ನು 'ಬಿಂಬಾಕಾರವಾದ ಅಧರ' ಎಂದು ವಿಗ್ರಹಮಾಡಬೇಕಾಗುವುದು. ಆದುದರಿಂದ ಇಲ್ಲಿ 'ಆಕಾರ' ವೆಂಬ ಮಧ್ಯದಲ್ಲಿದ್ದ ಪದವು ಲೋಪವಾಗಿದೆಯೆಂದು ತಿಳಿದು 'ಮಧ್ಯಮಪದವಿಲೋಪಿ' ಸಮಾಸವೆಂದು ತಿಳಿದುಕೊಳ್ಳುವುದು. ಇದರಂತೆ 'ಬಿಂಬೋಷ್ಠ' ಮೊದಲಾದುವನ್ನು ಅರಿತುಕೊಳ್ಳಬೇಕು.

ಸೂತ್ರ ೨೩೯

ವಾಮನ ೫-೨-೩೮.

'ಭಂಗುರ, ಭಿದುರ, ಛಿದುರ' ಶಬ್ದಗಳು ಕರ್ಮ-ಕರ್ತರಿ ಪ್ರಯೋಗದಲ್ಲಿಯೂ ಕರ್ತರಿ ಪ್ರಯೋಗದಲ್ಲಿಯೂ ಪ್ರಯೋಗಿಸುವುದುಂಟು. ಉದಾಹರಣೆ : 'ಭಂಗುರ

ಕೇಶ' (೯೪೫) = ' ಮುರಿ ' ಯುವಂತಹ (ಉಂಗುರುಂಗುರಾದ) ಕೂದಲು; ' ಲತಾ ಭಂಗುರ ' (೯೪೬) = (ಖೇದವೆಂಬ ಲತೆಯನ್ನು)ಮುರಿಯುವಂತಹ (ಉಂಗುರ); ಹೀಗೆಯೆ ' ಪ್ರಸೂನಭಿದುರ ' (೯೪೭) = ಪುಷ್ಪಗಳನ್ನು ಭೇದಿಸುವಂತಹದು— ಇತ್ಯಾದಿಯಾಗಿ ತಿಳಿದುಕೊಳ್ಳುವುದು.

ಸೂತ್ರ ೨೪೦

ದಂಡಿ ೧-೧೧, ೨೩; ರುದ್ರಟ ೧೬-೨೦ ರಿಂದ ಮುಂದೆ; ಹೇಮಚಂದ್ರ ೮-೫

ಇಲ್ಲಿಂದ ಮುಂದಿನ ಸೂತ್ರಗಳು ಕವಿಸಮಯಕ್ಕೆ ಸಂಬಂಧವಾದುವುಗಳಲ್ಲ. ದಂಡಿ-ಹೇಮಚಂದ್ರರನ್ನು ಅನುಸರಿಸಿ ನಾಗವರ್ಮನು ಗದ್ಯಪದ್ಯಗ್ರಂಥಗಳ ವಿಧ ಗಳನ್ನು ತಿಳಿಸುತ್ತಾನೆ.

' ಕಥೆ, ಆಖ್ಯಾಯಿಕೆ ' ಎಂಬಿವು ಗದ್ಯಗ್ರಂಥಗಳ ಭೇದಗಳು. ಆಖ್ಯಾಯಿಕೆ ಯಲ್ಲಿ ನಾಯಕನಾದವನು ತನ್ನ ಕಥೆಯನ್ನು ಸ್ವತಃ ಹೇಳುವನು. ಕಥೆಯಲ್ಲಿ ನಾಯಕನಾಗಲಿ ಮತ್ತಾವನಾಗಲಿ ಹೇಳಬಹುದು ಎಂದು ತಿಳಿಯುತ್ತದೆ. ಆದರೆ ಈ ಭೇದಗಳು ಅಷ್ಟು ಸ್ಫುಟವಾದುವಲ್ಲವೆಂದೂ ಗದ್ಯಕಾವ್ಯಗಳನ್ನೆಲ್ಲ ಒಂದೇ ಜಾತಿ ಎಂದು ತಿಳಿಯುವುದು ಸರಿಯೆಂದೂ ದಂಡಿಯ ಮತ (೧-೨೮). ಈ ಪ್ರಭೇದಗಳು ಪದ್ಯದಲ್ಲಿಯೂ ಇರಬಹುದೆಂದು ಹೇಮಚಂದ್ರನು ಹೇಳಿದ್ದಾನೆ.

ಸೂತ್ರ ೨೪೧

ದಂಡಿ ೧-೧೪, ೩೧; ರುದ್ರಟ ೧೬-೭ ರಿಂದ ೧೨; ಹೇಮಚಂದ್ರ ೮-೬

ಅನೇಕ ಸರ್ಗಗಳುಳ್ಳುದು, ಪದ್ಯದಲ್ಲಿ ರಚಿತವಾದುದು **ಮಹಾಕಾವ್ಯ**ವೆಂದು ದಂಡಿಯು ಹೇಳಿರುವನು. ಇದರ ಇನ್ನಿತರ ಲಕ್ಷಣಗಳನ್ನು ದಂಡಿಯು (೧-೧೪ ರಿಂದ ೧೯) ವಿಸ್ತಾರವಾಗಿ ಹೇಳಿರುವುದನ್ನು ನೋಡಬಹುದು. ಮುಂದೆ ಸೂತ್ರ ೨೪೭ ನೋಡುವುದು.

ಗದ್ಯಪದ್ಯಗಳಿಂದ ಮಿಶ್ರವಾದುದು ' **ಚಂಪು** ' ಎಂಬುದು. ಸಂಸ್ಕೃತದಲ್ಲಿ ವಿರಲವಾದ ಈ ಮಾದರಿಯೆ ಕನ್ನಡದಲ್ಲಿ ಬಹು ಪ್ರಚಾರಗೊಂಡಿದೆ. ಇದರಲ್ಲಿಯೆ ' ಮಹಾಕಾವ್ಯ ' ದ ಎಲ್ಲ ಲಕ್ಷಣಗಳು ದೊರೆಯುತ್ತವೆ.

ಸೂತ್ರ ೨೪೨

ರುದ್ರಟ ೧೬-೩೬ ಹಾಗೂ ನಮಿಸಾಧುವಿನ ಟೀಕೆ; ಹೇಮಚಂದ್ರ ೮-೧೦ ರಿಂದ ೧೩

ಒಂದೇ ಶ್ಲೋಕದಲ್ಲಿ ವಾಕ್ಯಾರ್ಥವು ಮುಗಿದರೆ 'ಮುಕ್ತಕ'ವೆಂದೂ ಎರಡರಲ್ಲಿ ಮುಗಿದರೆ ' ಸಂದಾನಿತಕ ' ವೆಂದೂ ಮೂರರಲ್ಲಿ ಮುಗಿದರೆ ' ವಿಶೇಷಕ ' ವೆಂದೂ

ನಾಲ್ಕರಲ್ಲಿ ಮುಗಿದರೆ 'ಕಲಾಪಕ' ವೆಂದೂ ಹೆಸರುಗಳು. ಐದು ಶ್ಲೋಕದಿಂದ ಹದಿನಾಲ್ಕು ಶ್ಲೋಕಗಳಲ್ಲಿ ಮುಗಿಯುವ ವಾಕ್ಯಾರ್ಥಕ್ಕೆ 'ಕುಲಕ' ವೆಂಬ ಹೆಸರು. ಅನೇಕ ಮುಕ್ತಕಗಳಿಂದ ಕೂಡಿದುದಕ್ಕೆ 'ಕೋಷ' ವೆಂದು ಹೆಸರು. ಮುಕ್ತಕಕ್ಕೇ 'ಇಡುಕುಂಗಬ್ಬ' ವೆಂದು ನಾಗವರ್ಮನು ಹೇಳಿದಂತೆ ತೋರುತ್ತದೆ.

ಸೂತ್ರ ೨೪೩ ರಿಂದ ೨೪೬

ಹೇಮಚಂದ್ರ ೮-೪; ಮಾರ್ಗ ೧-೩೪, ೩೫.

ಇಲ್ಲಿ ನಾಗವರ್ಮನು ಹೇಳಿದ 'ಪಾಡುಗಬ್ಬ' ವೆಂಬುದು ಹೇಮಚಂದ್ರನು ಹೇಳಿದ 'ಗೇಯಕಾವ್ಯ' ವನ್ನು ಹೋಲುವಂತೆ ತೋರುತ್ತದೆ. ಗೇಯಕಾವ್ಯವು ರೂಪಕ (= ನಾಟಕ) ಗಳಿಂದ ಭಿನ್ನವಾದುದೆಂದು ಕಾಣುವುದು. ನಾಟಕ ದಲ್ಲಿಯ ಕಥಾವಸ್ತು ರಂಗಸ್ಥಲದಲ್ಲಿ ಅಭಿನಯಿಸುವಂತಹದಿರುತ್ತದೆ; ಗೇಯ ಕಾವ್ಯದಲ್ಲಿ ಹಾಡುಗಳ ರೂಪದಲ್ಲಿದ್ದ ವಾಕ್ಯಗಳನ್ನು ಮಾತ್ರ (ಅಂಗವಿನ್ಯಾಸದೊಡನೆ) ಗಾನಮಾಡಬೇಕಾಗುತ್ತದೆ. ಗೇಯಕಾವ್ಯದಲ್ಲಿ 'ಡೊಂಬಿಕಾ, ಭಾಣ, ಪ್ರಸ್ಥಾನ, ರಾಸಕ್ರೀಡಾ, ಹಲ್ಲೀಸಕ, ಗೋಷ್ಠೀ' ಇತ್ಯಾದಿಯಾಗಿ ಅನೇಕ ವಿಭೇದಗಳಿರುವುವು. ಇಲ್ಲಿ ಪಾಡುಗಬ್ಬದ ಭೇದಗಳೆಂದು ನಾಗವರ್ಮನು ಹೇಳಿದುದು ಸಂಸ್ಕೃತ ಆಲಂಕಾರಿ ಕರು ಹೇಳಿದುವುಗಳಾಗಿರದೆ ಅವುಗಳನ್ನು ಹೋಲಬಹುದಾದ ದೇಶೀಯ ವಿಭೇದ ಗಳಾಗಿರಬೇಕೆಂದು ತೋರುತ್ತದೆ. ಕವಿರಾಜಮಾರ್ಗದಲ್ಲಿ (೧-೩೫) 'ಬೆದಂಡೆ' ಎಂಬುದು ಹೇಳಿರುವುದಲ್ಲದೆ 'ಚತ್ತಾಣ' ವೆಂಬ ಇನ್ನೊಂದು ವಿಭೇದವೂ ಉಕ್ತವಾಗಿದೆ.

ಸೂತ್ರ ೨೪೭

14462

ದಂಡಿ ೧-೧೬, ೧೮, ೧೯.

ಮಹಾಕಾವ್ಯಗಳಲ್ಲಿ ವರ್ಣಿಸತಕ್ಕ ವಿಷಯಗಳು ಹದಿನೆಂಟು ಇರುವುವೆಂದೂ ಅವುಗಳನ್ನು ಯಥೋಚಿತವಾಗಿ ಕಥೆಯ ಮೆಯ್ಗೆಡದಂತೆ ವರ್ಣಿಸಬೇಕೆಂದೂ ಅವುಗಳಲ್ಲಿ ಕೆಲವು ಕಾವ್ಯದಲ್ಲಿ ಬಾರದೆ ಹೋದರೂ ಅಡ್ಡಿಯಿಲ್ಲವೆಂದೂ ಆಲಂಕಾರಿ ಕರ ಅಭಿಪ್ರಾಯ. ಈ ವರ್ಣನೀಯಾಂಶಗಳನ್ನು ಮಲ್ಲಿಕಾರ್ಜುನನ ಸೂಕ್ತಿ ಸುಧಾರ್ಣವದೊಳಗಿನ ಕೆಳಗಿನ ಪದ್ಯದಲ್ಲಿ ನೋಡುವುದು:

ವಾರಿಧಿ ಪರ್ವತಂ ಪುರಮಧೀಶ್ವರನುದ್ವಹನಂ ಕುಮಾರನಂ
ಭೋರುಹಪುಷ್ಪೈರಿಮಿತ್ರರುದಯಂ ಋತು ನಂದನಮಂಬು ಸೀಧು ಕಾಂ
ತಾರತಿ ಚಿಂತೆ ಮಂತ್ರ ಚರ ಯಾನ ವಿರೋಧಿಜಯಂಗಳೆಂಬಿವಂ
ಸೂರಿಗಳಂಗಮೆಂದು ಕೃತಿಯೊಳ್ ಪದಿನೆಂಟುಮನೆಯ್ದೆ ಬಣ್ಣಿಪರ್ .

ಸೂತ್ರ ೨೪೮

ಭರತ ೧೯-೩೭-೪೩; ರುದ್ರಟ ೧೬-೧೨ ಹಾಗೂ ನಮಿಸಾಧುವಿನ ಟೀಕೆ

ಭರತಮುನಿ ತನ್ನ ನಾಟ್ಯಶಾಸ್ತ್ರದಲ್ಲಿ —'ನಾಟಕಗಳಲ್ಲಿ ಮುಖ, ಪ್ರತಿಮುಖ, ಅವಮರ್ಶ, ಗರ್ಭ, ನಿರ್ವಹಣ' ವೆಂಬ ಐದು ಸಂಧಿಗಳಿರಬೇಕೆಂದು ಹೇಳಿದ್ದಾನೆ. ಇವನ್ನೆ ಹೇಮಚಂದ್ರನು ಮಹಾಕಾವ್ಯಗಳಿಗೂ ಅನ್ವಯಿಸುವಂತೆ ಹೇಳಿರುತ್ತಾನೆ (೮-೬). 'ಮುಖ' ವೆಂಬ ಸಂಧಿಯಲ್ಲಿ ಕಥೆಯ ಮುಖ್ಯೋದ್ದೇಶವು 'ಬೀಜ' ರೂಪವಾಗಿ ಕವಿಯಿಂದ ನಿರ್ದೇಶಿಸಲ್ಪಡುವುದು. 'ಪ್ರತಿಮುಖ' ಸಂಧಿಯಲ್ಲಿ ಈ 'ಬೀಜ' ವು ಒಮ್ಮೆ ಕಣ್ಣಿಗೆ ಕಾಣುವುದೂ ಮತ್ತೊಮ್ಮೆ ನಾಶವಾದಂತೆ ತೋರುವುದೂ ಆದರೂ ಒಟ್ಟಿನಲ್ಲಿ 'ಬೀಜ' ದ ಬೆಳವಣಿಗೆಯೆ ಇದರಲ್ಲಿ ತೋರುವುದು. 'ಗರ್ಭ' ಸಂಧಿಯೆಂಬ ಮೂರನೆಯ ಸಂಧಿಯಲ್ಲಿ ಫಲವು ಪ್ರಾಪ್ತವಾಗುವುದೋ ಇಲ್ಲವೋ ಎಂಬ ಸಂದಿಗ್ಧವಾದ ಸ್ಥಿತಿಯು ಕಂಡುಬರುವುದು; ಆದರೂ ಪ್ರಾಪ್ತವಾಗ ಬಹುದೆಂಬುದೇ ಹೆಚ್ಚು ಸಂಭವನೀಯವಾಗಿ ತೋರುವುದು. 'ಅವಮರ್ಶ' (ಅಥವಾ ವಿಮರ್ಶ) ಸಂಧಿಯಾದ ನಾಲ್ಕನೆಯದರಲ್ಲಿ ಫಲಪ್ರಾಪ್ತಿಯ ಬಗ್ಗೆ ನಿರಾಶೆಯೆ ಹೆಚ್ಚಾಗಿ ತೋರುವುದು. 'ನಿರ್ವಹಣ' ವೆಂಬುವ ಕೊನೆಯ ಸಂಧಿಯಲ್ಲಿ ಫಲಪ್ರಾಪ್ತಿಗೆ ಅನುಕೂಲವಾದ ಸಂಘಟನೆಗಳೆ ಪ್ರಬಲವಾಗಿ ಒಮ್ಮೊಗ ವಾಗತೊಡಗುವುವು.

ಸೂತ್ರ ೨೪೯

ಭರತ ೧೯-೨೧ ರಿಂದ ಮುಂದೆ

ಇಲ್ಲಿ ಸಂಧ್ಯಂಗಗಳೆಂದು ಹೇಳಿದುವುಗಳಿಗೆ 'ಅರ್ಥಪ್ರಕೃತಿ' ಗಳೆಂದೆನ್ನುವು ಮುಂಟು. ಇವುಗಳಿಂದ ಮೂಲಕಥೆಯು ವಿಸ್ತಾರಹೊಂದುತ್ತ ಹೋಗುವುವು. ಕಥೆಯ ಫಲಕ್ಕೆ ಸಾಧನವಾದ ಘಟನೆ ಆರಂಭದಲ್ಲಿ (ಅತ್ಯಲ್ಪವಾಗಿ) ಸೂಚಿತವಾಗು ವುದಕ್ಕೆ 'ಬೀಜ' ವೆಂಬ ಹೆಸರು. ಅವಾಂತರ ಘಟನೆಯಿಂದ ಬೀಜರೂಪವಾಗಿದ್ದ ಘಟನೆಯು ಮರೆಯಾಗಿ ಮತ್ತೆ ಕಣ್ಗೊಳಿಸುವುದಕ್ಕೆ 'ಬಿಂದು' ಎಂಬ ಹೆಸರು. ('ಬಿಂದು' ಎಂಬುದು 'ನೀರಿನ ಮೇಲೆ ಬಿದ್ದ ಎಣ್ಣೆಯ ಹನಿಯು ವಿಸ್ತಾರ ವಾಗುವಂತೆ' ಎಂಬುದನ್ನು ಸೂಚಿಸುವುದು.) ಪ್ರಾಸಂಗಿಕವಾಗಿ ಬರುವ ಬೇರೊಂದು ಕಥೆಗೆ 'ಪತಾಕೆ' ಎಂದೂ ಅಂತಹದೇ ಆದರೆ ಅದಕ್ಕೂ ಸಣ್ಣದಾದ ಇನ್ನೊಂದು ವೃತ್ತಾಂತಕ್ಕೆ 'ಪ್ರಕರಿ' ಎಂದೂ ಹೆಸರುಗಳು. 'ಕಾರ್ಯ' ವೆಂಬುದೇ ಕಥೆಯ ಕೊನೆಗಾಣುವ ಘಟನೆ. ಈ ಐದು ವಿಭಾಗಗಳು ಸೂತ್ರ ೨೪೮ರಲ್ಲಿ ಹೇಳಿದ ಈ ಸಂಧಿಗಳಲ್ಲಿ ಕ್ರಮವಾಗಿ ಬರುವುದುಂಟು.

ಪದ್ಯ ೯೬೫

‘ ಸಂದಭಿಧಾನ....ಕೋಶ ’ ಎಂಬುದು ‘ ಸಂದಭಿಧಾನವಸ್ತುಕೋಶ ’ ಇರಬಹುದೆಂದು ಕೆಲವರು ಊಹಿಸುತ್ತಾರೆ. (ನೋ. ಮದ್ರಾಸ ವಿಶ್ವವಿದ್ಯಾಲಯದಿಂದ ಪ್ರಕಟಿತವಾದ ವಸ್ತುಕೋಶ ಮುನ್ನುಡಿ ಪುಟ ix.)

ಟಿಪ್ಪಣಿ ಸಮಾಪ್ತ

★

ಪರಿಶಿಷ್ಟ ೧

ಕಾವ್ಯಾವಲೋಕನದಲ್ಲಿಯ ಪದ್ಯಗಳ ಅಕಾರಾದಿ

[ಸೂತ್ರದ ಆರಂಭದ ಶಬ್ದಗಳನ್ನು ಬೇರೆ ಅಕ್ಷರದಲ್ಲಿ ಹಾಕಿ ಅವುಗಳ ಮುಂದೆ ಸೂತ್ರ ಸಂಖ್ಯೆಯನ್ನು ಕಂಸಿನಲ್ಲಿ ಹಾಕಿರುತ್ತದೆ]

★

ಆರಂಭದ ಶಬ್ದಗಳು	ಪದ್ಯ
ಅ	
ಅಕುಪಿತಕಲುಷಿಜಲ	೭೩೮
ಅಕ್ಕುಮನುಸ್ವಾರಮುದಂತಕ್ಕೆ (೧೯)	೯೬
ಅಕ್ಕುಂ ಬಹುಳಮುಕಾರಾಂತಕ್ಕೆ (೨೪)	೧೧೨
ಅಕ್ಷರಬಿಂದುಚ್ಯುತಕಂ (೧೪೦)	೫೭೦
ಅಗ್ರಾಮ್ಯವಚನವೃತ್ತಿ (೧೨೨)	೫೦೯
ಅಂಕುರದಿಂ ಪ್ರವಾಳಚಯದಿಂ	೪೯೦
ಅಂಗನೆಯೊಳ್ ಕಳ್ದಿರ್ಪುದ	೪೪೫
ಅಂಗುಳೊಳಡಸಿದ ವಿಷಮುಂ	೭೬೩
ಅಜಾತಶಂಖಂ ತಾನಾಪ್ತ	೫೭೭
ಅಂಚೆಯುರಗಿಳಿಯ ಪುರುಳಿಯ	೨೨೭
ಅಡಪವಳಂ ಪಡೆವಳ್ಳಂ	೩೨೬
ಅಡವಿ ಬಯಲಾಗೆ ನದಮೊಟ್ಟುಡುಗೆ	೨೯೪
ಅಣಿಯುರಮೆಸೆದೊಪ್ಪಿರ್ಪುವು	೩೨೮
ಅತಿರೂಢಾರ್ಥಮಗೂಢಂ (೧೨೩)	೫೧೨
ಅತಿದೀರ್ಘಸಮಾಸಾಂಚಿತಗತಿ (೧೯೩)	೭೮೬
ಅತಿಬಹುಲಸ್ಥಿತಿಯಿಂ (೧೭೬)	೭೪೬
ಅತಿಮೃದುಮನಿಱಿಸುಗುಂ	೪೮೦
ಅತಿಶಯಮಾಯ್ತು ಕಾಲ್ದುಱುಗಲಿಟ್ಟೆಳ	೬೧
ಅತಿಸೂಕ್ಷ್ಮೇಕ್ಷಣನೆಂತುಮಂಥ	೭೩೧
ಅತ್ತಣಿಮೆಂದನುಸಂಧಿಸಿ (೨೬)	೧೧೭
ಅತ್ರಿಯ ಪಿರಿಯ ಮಗಂ	೯೦೯
ಅದಱಿನೀತನನಾತನೆ ಕೊಂದು	೯೪೮
ಅದಱಿಂದಾನೊಂದಂ ಬೇಡಿದಪೆಂ	೧೧೪
ಅದಱಿಂದುಪೇಕ್ಷೆಗೆಯ್ಯದೆ	೪೨೯
ಅದಱಿಂದಮೊಪ್ಪಿಸೊಪ್ಪಿಸು	೨೮೮
ಅದಿದೆನ್ನದೆ ಮೂಱಿಂಬೀ (೫೮)	೨೬೨
ಅದಿರದಿದಿರಿದಿರನೆಯ್ತಂದೊದಱುತ್ತುಂ	೫೦೬
ಅದುವಿದುವುದುವೆಂಬಿಂತೀ (೮೦)	೩೫೪
ಅದು ಸುಖದೊಂದು ಪಿಂಡಮುದು	೧೫೯
ಅದ್ವೈತವಾದಿನಿವಹ	೧೮೮
ಅನವರತದಾನದಿಂ	೨೬೫
ಅನಿತೊಂದಣ್ಮಿನಿತೊಂದು ದರ್ಪ	೩೫೫
ಅನುಕಂಪೆಯಕ್ಕೆ ಮೋಹ್ (೧೬೯)	೭೧೭
ಅನುಕರಣದೊಳೊಂದಿದ (೧೦೫)	೪೫೨
ಅನುಗತಕರ್ಣಂ ಕೃಷ್ಣಾ	೭೬೧
ಅನುಗತಮುಪ್ಪಂತಿರೆ (೨೩೬)	೯೩೨
ಅನುನಾಸಿಕಮಕ್ಕುಂ (೫)	೧೭
ಅನುಸಂಧಿಸಿ ಕೃತ್ಸ್ನವ್ಯಂಜನ (೪೪)	೧೯೬
ಅಂತಲ್ಲದೆಯುಂ ಧನದನಗಂ	೮೫೨
ಅಂತು ಕಾಡುಗುಮೆ ಲೋಕಮನಿಂದ್ರಂ	೩೬೧
ಅಂತೆಂತೆನೆ ಪರಿಚಾರಕಿ	೨೯೫
ಅನ್ಯೋನ್ಯವಿರುದ್ಧಪದಾರ್ಥ (೧೭೩)	೭೨೭
ಅಭಿಮತಶಬ್ದಸಂಸ್ಮರಣದಿಂ	೪೨೩

ಆರಂಭದ ಶಬ್ದಗಳು	ಪದ್ಯ
ಅಮಲಿನಮಾಗಿಯುಮೀ	೭೧೮
ಅಮಳ್ಗಳ್ ನಯವಿಕ್ರಮಗುಣ	೫೩೪
ಅಮೃತದ ಕಂಡಸಕ್ಕರೆಯ	೧೪೪
ಅಮೃತಪಯೋಧಿಮಂಥನದೆ	೯೧೨
ಅಂಬುಜಸೂತ್ರಮೆಂಬ	೬೮೯
ಅಂಭೋನಿಧಿಗಂಭೀರಂ	೫೦೩
ಅಯ್ಯನೆನೆ ಬಳ್ಕಿ ತಾಮೆಂದೊಯ್ಯನೆ	೧೯
ಅರನೇಱಲ ಪೊಂಬಾೞಿಯ	೨೪೮
ಅರಮನೆಗಲ್ತು ಸೂಳೆಮನೆಗಲ್ತು	೨೦೫
ಅರಮೆ ಅರಲ್ದ ಬಯಲ್ದಾವರೆಗಳ	೪೭
ಅರಮೆ ಎಲೇ ಏ ಓಹೋ (೧೦)	೪೬
ಅರಸಾಳ್ತನಮೆನ್ನದೆ ಕೇಳ್	೫೧೧
ಅರಸುಗಳೆಲ್ಲಂ ಬಾಯ್ಸ್	೯೩೯
ಅರಸುಗುಣಂಗಳನತಿ	೨೪೯
ಅರಸುಗುಣಂ ಪೞಿಯನಣಂ	೨೮೩
ಅರುಣಜಳಾವಲಿಪ್ತಿ	೮೩೪
ಅರೆ ಎಡೆ ಹಸ್ತಿಶಿಕ್ಷಣ	೫೧
ಅರಿಬರ್ ತದೇಕವಚನಾಂತರಂ (೯೦)	೩೯೪
ಅರಿಬರ್ ದೀರ್ಘಸಮಾಸಂ (೧೯೬)	೭೯೦
ಅರ್ಕೇಂದುಗಳಂ ತವೆ ನುಂಗಿರ್ಕುಂ	೩೯೯
ಅಱಿದು ನರನೊವಜರೆನ್ನಂ	೩೨೯
ಅಱಿಪಿದುದು ರೌದ್ರರಸಮಂ	೮೨೦
ಅಱಿಯದೆ ಗೆಯ್ದನಬ್ಜಮುಖಿ	೮೦೬
ಅಱಿಯಲಾಗದು ನೆಟ್ಟನೆಂದು	೯೫
ಅಱಿವಳ್ ಪಾಂಡುತನೂಜರ	೩೯೩
ಅಱುದಿಂಗಳಾಯುವುಂಟೆನೆ	೨೭೦
ಅಲರ್ಗಣ್ ಪೊಂಗಿದ ಲಾಳೆವಾಯ್ಸ್	೨೦೬
ಅಲರ್ಗಣ್ ಮೀನ್‌ಬೊಣರಂತಿರೆ	೮೮
ಅಲರ್ದ ಮೊಗಂ ಕಿಱಿದಾದುದು	೯೧೯
ಅಲರ್ದುವು ಕುಟಜಂಗಳ್	೬೫೫
ಅಲರ್ದುವೊಡನೊಡನೆ ಕುವಲಯ	೬೭೪
ಅಲ್ಲಿ ಇದುಂಟೆಂಬರ್ಥದೊಳ್ (೭೫)	೩೬೬
ಅಲ್ಲಿಯೆ ಪುಟ್ಟಿದನಿಂತಿವನಲ್ಲಿಯೆ (೭೪)	೩೩೪
ಅವತಂಸಾಶೋಕನವ	೮೬೭
ಅವತಂಸೋತ್ಪಲತಾಡನಂ	೭೯೧
ಅವಧಾರಿಸದುಕ್ತಾರ್ಥಮ (೧೦೯)	೪೫೯
ಅವನಾಕೆಯನಂತಾತನ	೧೫೮
ಅವನಾತನೆಂಬ ಮಾತುಗಳವು (೩೭)	೧೫೭
ಅವಯವಮುಖದಿಂ (೧೮೧)	೭೫೯
ಅವರ್ಣವಾದಕ್ಕೆಡೆಯಾಗದೊಳ್ಪಿಂ	೧೩
ಅವಱೊಳಗೆ ನಪುಂಸಕಲಿಂಗ (೮೯)	೩೯೧
ಅವಱೊಳ್ ದ್ವಿತ್ವಬಹುತ್ವಂ (೧೭)	೮೭
ಅವಱೊಳ್ ಪೋಲ್ಗಕ್ಕಂ (೭೬)	೩೪೦
ಅವಱೊಳ್ ಶಬ್ದಾಲಂಕಾರ (೧೨೯)	೫೨೪
ಅವಿನಯದಿನನಿಂದ್ರಿಯ	೬೨೯
ಅವಿನಶ್ವರಗತಿಸಂಸ್ಕಾರಂ	೪೭೭
ಅವಿಶಿಷ್ಟಲಿಂಗವಚನ (೯೧)	೩೯೭
ಅವಿಶೇಷದಿನುದ್ಗಮದೊಳ್ (೨೨೯)	೮೯೪
ಅವಿಶೇಷವರ್ಣರಚನಾ (೧೩೬)	೫೬೪
ಅವಿಹಿತವೇಗಮೇೞ್ಗೆಯ ಜವಂ	೬೨೦
ಅವಿಹಿತಸಂಹಿತೆ ಮೇಣ್ (೧೦೨)	೪೩೯
ಅವು ಪರಮಾಗಿರೆ (೨೧)	೧೦೧
ಅವು ಪಿರಿಯವು ಭಾವಿಪೊಡಿಂತಿವು	೯೦
ಅಶಿಥಿಲಪದಚಯರಚನಾ (೧೨೧)	೫೦೫
ಅವ್ಯಷಚ್ಛೇದನನತಿಧವಳ	೭೬೬
ಅಸಮರ್ಥಮಪ್ರತೀತಂ (೧೦೦)	೪೩೫
ಅಸಮಸ್ತಪದನ್ಯಾಸಂ (೧೯೧)	೭೮೨
ಅಸವಸದಿಂ ಪಟಿಗೆಯ್ಯಂ	೪೫೪
ಅಸಿತರ್ಧಿ ವಯಸ್ಸ್ಯಾಧ್ವದೊಳೆಸೆವ	೪೩೮
ಅಸಿತೇಂದೀವರಲೋಲಲೋಚನೆಯ	೩೦೫
ಅಸಿತೋತ್ಪಳದಳಶೋಭೆಯ	೭೧೯
ಅಸಿಯ ಒಱೆ ಬೆಸದ ಪೆಟ್ಟಿಗೆ	೪೪೦
ಅಸುಕೆಯ ಕುಜದೊಳ್ ಫಳಮಂ (೨೨೨)	೮೬೯
ಅಸುರಹರಂ ತೇರಂ	೩೮೨
ಅಸುಹೃತ್ಸೇನೆಗೆ ಸಾಲ್ವನೊರ್ವನೆ	೧೪೬
ಅಳವಿಗೞಿದುರುನಿತಂಬ	೨೪೩
ಅಳಿಕುಳದಂತಳಕಚಯಂ	೬೬೯
ಅಳಿಕುಳರುತಿಗಳಿನವನತ	೫೧೦

ಆರಂಭದ ಶಬ್ದಗಳು	ಪದ್ಯ
ಅಳಿಗಳೊ ನೀಳ್ದ ಕಬೊರ್ಗೆಯೊ	೭೦೯
ಅಳ್ಪಾಡಿ ನರನ ಕೂರ್ಗಣೆ	೨೬೪
ಅಱಲನೆರ್ದೆಯೊಳ್ ತಿಣ್ಣಂ	೮೧೫
ಅಱಿವು ಕೊಲೆ ಕಳವು ಪುಸಿ	೨೯೧
ಆ	
ಆ ಕಥೆ ಮತ್ತೆಂತೊಂದೊಡೆ	೪೯೩
ಆಕಾರಕ್ಕೆ ಲಘೂಕೃತಮೆ (೩೯)	೧೭೦
ಆಗಳ್ ಜಸಂ ಕೆಯ್ದುವನಿಕ್ಕಿ	೧೭೫
ಆ ಗಿರಿಯ ನಿತಂಬಂ	೫೫೪
ಆ ಜಂಬೂದ್ವೀಪಮಹಾ	೨೦೩
ಆಟಂ ಬಾಜನೆ ಗಾಡಿಗಳ್	೬೩೩
ಆಡಿದನಿಂದ್ರನಿಂದ್ರಗಣಿಕಾ	೩೮೭
ಆತಂಗಮಾಕೆಗಂ	೧೧೬
ಆತತಸತ್ವವಿಸಮಯಂ (೨೧೭)	೮೪೫
ಆತನಯೆ ತೋರದೊಡೆಗಳಿವಾತನ	೪೩
ಆತನಲ್ಲದನಂ ಮೆಚ್ಚೆಂ	೫೯೧
ಆತಂ ಪುರೋಹಿತಂ	೯೩೭
ಆದಿವಿಭಕ್ತಿಯೊಳಂ (೨೭)	೧೨೦
ಆನುಂ ದುಶ್ಯಾಸನನುಂ	೧೫೩
ಆನ್ನೋಡರ್ಜುನನೆಂಬೆನಂತಕಸುತಂ	೧೭೮
ಆಮುಂ ದ್ರೋಣರು	೩೮೫
ಆ ಯತಿ ನಿಮಿರ್ವಂತು	೩೧೬
ಆಯಿರ್ದ ಮಾಱ್ಕೆಯೊಳೆ	೩೮
ಆರಕ್ತಕಪೋಲಂ ಮದಿರಾ	೬೯೧
ಆರಕ್ತಮಾಗಿ ನೇಱಲ	೫೦೮
ಆರಬ್ಧಕ್ಕಧಿಕಮಸಾಧಾರಣ (೧೮೨)	೭೬೨
ಆರಯೆ ಜಡನಾದೊಡಮಧಿಕಾರಿಯ	೩೧೨
ಆರಯ್ಯೆ ಸರ್ವಭೂತಾಧಾರಂ	೩೧೩
ಆರಾಜಶಿರಶ್ಶೇಖರ	೪೬೩
ಆರಾರ್ಗೆ ಪೆಂಡಿರೊಡವುಟ್ಟಿದ	೯೩
ಆಲೋಚಂ ಸಾಲದೆ ಶಿಶುಪಾಲ	೫೨೯
ಆವರಿಸಿತ್ತೊ ನಭೋಂತರ್ಭೂ	೬೪೮
ಆವಳುಮನೊಲಿಸಿ ಕಂಟಿಸಿ	೧೬೬
ಆವುದಶೇಷಲೋಕವಿಷಯಸ್ಥಿತಿ (೨೧೬)	೮೪೪
ಆವೊಂ ಕಾವೊಂ ಲೋಕಮನಾವೊ	೩೦೩
ಆಳಿ ಪ್ರತ್ಯಯಮುಕ್ಕುಂ (೭೯)	೩೫೨
ಇ	
ಇಡಿದಿರೆ ಗುಹಾಂಧಕಾರಂ	೮೭೪
ಇಡುಕುಂಗಬ್ಬಂ ಮುಕ್ತಕ (೨೪೨)	೯೫೧
ಇತರೇತರಕಾರಕ (೧೫೭)	೬೫೮
ಇದನೀತಂ ಮಾಱ್ಪನೆನಿಪ್ಪದಱೊಳ್ (೭೧)	೩೨೭
ಇದಱೊಳಿವಂ ವ್ಯಾಪೃತನೆನೆ (೭೦)	೩೨೪
ಇದಱೊಳ್ ಗರ್ಭಂಗಳಂ	೯೦೭
ಇದಿರ್ವರ್ಪರ್ವೊಲಾಯ್ತು ಪವನ	೪೪೪
ಇದು ಕಿಱಿದಿದು ಪಿರಿದಿದು	೭೪೮
ಇದು ನಿನ್ನರ್ಚಿಸಿದಿಕ್ಷುಚಾಪಮಿದು	೬೧೯
ಇದು ಮಳಯಾಚಳಂ ಮಳಯಜಂ	೮೯೦
ಇದು ಸೌಂದರ್ಯಗುಣಪ್ರಕಾಶಮಿದು	೪೯೮
ಇದ್ಧಂ ಶುದ್ಧಂ	೩೦
ಇನಿತನೆಯ ಭವದೊಳಿಂತಾ	೩೭೦
ಇನಿತಱಲುಮಿನಿತು ಮಱುಕಮು	೩೫೬
ಇನಿಯನ ಕೆಂದಳಂ	೭೮೫
ಇನಿಯನಗಲ್ದು ಪೋಗಿ	೮೦೭
ಇನಿಯನ ವಿಯೋಗದಿಂದಾದ	೭೩೯
ಇನಿಯನೆ ಬೆಲ್ಲದಿಂದಿನಿಯನೀವನೆ	೫೨
ಇನಿಯವು ವಿಷಯಸುಖಂ	೧೦೨
ಇನಿಯಳ ತನಿಸೋಂಕಿನ್ನುಣಿಸೆನೆ	೨೨೫
ಇನಿವಿರಿಯವಪ್ಪ ಮೊಲೆಯವಳಿನಿ	೪೩೪
ಇಂತಿದು ವಿಭಾಷೆಯಿಂ (೭೩)	೩೩೨
ಇಂತಿಂತೆ ಪಲಬರುಂ	೩೬೨
ಇಂತಿರೆ ಶಬ್ದಂ ಸಂದೇಹಧ್ವಾಂತೌಘಂ	೪೨೨
ಇಂತೀ ಪೇಳ್ದ ನೃಪಗುಣ	೪೮೧
ಇಂತು ಕವೀಂದ್ರಸಮಯಮುಂ	೯೫೯
ಇಂದು ನೋಡಿದು ಬೇಱಿಂದಂ	೫೮೨
ಇಂದು ಪಿಂಗಿದುವೆಮ್ಮ ಪೀಡೆಗಳಿಂದು	೩೬೫
ಇರದೆಂಟುಂ ದಿಗ್ಗಜಂಗಳ್	೭೯೨

ಆರಂಭದ ಶಬ್ದಗಳು	ಪದ್ಯ
ಇರದೆ ನಿತಂಬಮೆಂಬಹಿನಿವಾಸದಿ	೭೩೨
ಇರುಳೊಳ್ ಚಕ್ರಾಪ್ಷಯಯುಗ (೨೨೦)	೮೫೬
ಇರಿ ತದ್ಧಿತಪ್ರಯೋಗಂ (೮೩)	೩೭೧
ಇರಿ ಶಬ್ದಾರ್ಥಂಗಳ್ (೯೮)	೪೩೦
ಇರ್ಮೆಯ್ಗಂ ಹಿತಮುಂ ಜಿನ	೨೬೦
ಇರ್ವಾಳ್ ಮೂವಾಳಿಕ್ಕಿದುರ್ಜ	೨೦೭
ಇಲ್ಲಿಯೆ ಪೇೞಿಂದು ಮಹೀವಲ್ಲಭ	೯೩೮
ಇವನಧಿಕಪುಣ್ಯನೀತನ	೧೦೫
ಇವಂಬುನಿಧಿಕೂಪದಿಂದಮುರ	೧೯೩
ಇವಳಂ ಶೃಂಗಾರಸಾರಂ ಕುಸುಮಶರನೆ	೪೨
ಇವಳೀ ಪ್ರಿಯಂಗುಕುಸುಮ	೮೮೧
ಇವಳ್ದಿರೊಳಿವಂದಿರಂ	೯೪
ಇವು ನಿಯತಂ ದಕ್ಷಿಣದೇಶವರ್ತಿ (೧೨೬)	೫೨೧
ಇವು ಪಣ್ಯಮಿವರ್ಗೆ ಮೇಣೆಂತಿವು (೬೯)	೩೬೨
ಈ	
ಈತನೀ ನೆಲನನಾಳ್ವರಸಂ	೧೨೪
ಈ ತೆಱದಿಂದರ್ಥಾಲಂಕೃತಿ	೭೭೮
ಈ ಧರೆಯ ಪೆಂಡಿರುದ್ಘ	೫೩೬
ಈ ನವೀನಸಿತಾಂಭೋಜಾ	೫೯೭
ಈ ಪುರಷೋತ್ತಮನವ	೮೯೭
ಈ ಪೇೞ್ದನಿತುಂ ಶಬ್ದಕಳಾಪಂ (೭೨)	೩೩೦
ಈ ಪೇೞ್ದ ಮಾೞ್ಕೆಯಿಂ	೪೯೫
ಈಯಲ್ ಬಂದತ್ತು ಕಲ್ಪಾಂಘ್ರಿಪ	೧೮೭
ಈ ಯುವಾನರನವದ್ಯವಿದ್ಯರಾ	೧೮೪
ಉ	
ಉಗೆ ಕೆ ವಿಕಲ್ಪಿತಮನ್ಯಾ (೯೨)	೪೦೦
ಉಡುವವರುಮನುಣ್ಬರುಮಂ	೧೮೧
ಉತ್ತರಪದದರ್ಥಂ (೪೬)	೨೦೪
ಉತ್ತರಪದಂ ವಿಶೇಷ್ಯದೊಳ್ (೪೯)	೨೧೬
ಉದಯಗಿರೀಂದ್ರರುಂದ್ರತಟದಿಂ	೯೦೨
ಉದಯಾಸ್ತೋನ್ನತಶೈಲ	೧೭೩
ಉದ್ಯೋತಿತವಿಶ್ವರ್ ಕೃತವಿದ್ಯರ್	೯
ಉನ್ಮದಮಧುಕರಕುಳ	೭೧೨
ಉನ್ಮನಮೆ ಮಾೞ್ಕುಮುತ್ತೈಜು	೪೬೦
ಉಪದಾತ್ತನುತೋನ್ನತಮಂ	೫೩೮
ಉಪನಯನಂ ಗೆಯ್ಯದೆಯುಂ	೪೭೮
ಉಪಮಾನಕಥನಮೊಂದಱಿಂ (೧೬೪)	೬೯೭
ಉಪಮಾನ ಪ್ರತಿವಸ್ತು ರೂಪಕ (೧೬೦)	೬೬೫
ಉಪಮೇಯಂ ಗುಣಲೇಶದಿ (೧೬೧)	೬೬೬
ಉಪಮೇಯಮನ್ಯಗ್ಭಾವೋ (೧೬೮)	೭೧೩
ಉಪಯೋಗದೆ ಬೀಜಂ (೨೪೯)	೯೫೮
ಉಪಹತಿ ನಾಲ್ಕುಯ್ಬೆಂಬಿವ (೫೯)	೨೬೭
ಉಮೆಗೆ ಮಹೀಜೆಗೆ ಸುಮನೋ	೫೯೯
ಉರಗಂ ಕೊಂಡಲ್ಲಿಂ	೨೬೮
ಉರಗರಗಿದರ್ ದ್ವೈತ್ಯರ್	೩೯೬
ಉರಗಾಳಿ ನಂದನಾವಳಿ	೪೩೭
ಉರದೊಳ್ ಕೌಸ್ತುಭರತ್ನಮುಂ	೯೧೧
ಉರುತರಸಿತಕೀರ್ತಿಗುಣಾಕರಂ	೫೭೮
ಉರ್ವಿಯೊಳೆಲ್ಲಿಯುಂ ನೆಗೞ್ದ	೪೪
ಊ	
ಊದಿದುದು ತಣ್ಣೆಲರ್	೩೯೨
ಊರೇರಲ್ ಮನೆಮಾಡ	೨೧೫
ಎ	
ಎನಗದಱಭಿಲಾಷೆ ತಾನದೇನುಂ	೧೬೭
ಎನಗಿದು ಚೋದ್ಯಂ	೨೭೬
ಎನಗೆ ಕೂರ್ಪುದನಾ ಘಟಸಂಭವಂ	೧೫೫
ಎನಿತುಂ ಕಾಯ್ದುಂ ಬೆನ್ನೀರ್	೨೩೫
ಎನಿತು ಸುಮನಸ್ಸಮುನ್ನತಿ	೮೭೧
ಎನಿತ್ತೆನಿತ್ತಂಬುಜಪತ್ರನೇತ್ರೆಯಾ	೩೫೯
ಎಂತೆಡಱದಯೆಂತುರ್ಕಿದ	೩೬೩
ಎಂತುಟು ಮುನ್ನಂ ಪೇೞ್ದ (೧೬೬)	೭೦೪
ಎಂತು ಬಸಂತಮುದರ್ಕೆ	೬೭೪
ಎಂದಮರರನರೆಯಟ್ಟುವೆ	೩೬೬
ಎಂದಿಂತಾತನನಂದುನಂಬಿಸಿದೊಡಾ	೩೮೪
ಎನ್ನಯ್ಯಂಗಕ್ಕುಮೆನ್ನಂ ನಡೆಪಿದ	೩೩
ಎನ್ನೊಲ್ದು ಬೇೞ್ಪ	೩೧
ಎಯ್ದೆ ಕಕಾರದಿ (೪)	೧೫
ಎರಗಿಸು ಭುಜವಿಜಯಃದಿನಣ	೪೬೬

ಆರಂಭದ ಶಬ್ದಗಳು	ಪದ್ಯ
ಎರಡರ್ಥವೊಂದೆ ಶಬ್ದಾಂ (೧೭೮)	೭೫೩
ಎರಡಱೊಳಂ ಚಂದ್ರಾದಿತ್ಯರ	೯೪೦
ಎರಡುಂ ವಿರುದ್ಧರಸಂ (೨೦೯)	೮೩೩
ಎರಲೆಯ ಪಿಂಡುಗಳಂ	೬೮೧
ಎಲೆವಳ್ಳಿಯ ತಳ್ಳಿಂದೇ	೩೨೦
ಎಲ್ಲಂಗಮೆಲ್ಲಧನಮುಮ	೨೫೩
ಎವೆಯಿಕ್ಕದೆ ಪದೆಪಿಂ	೯೨೮
ಎಸಗಿದುದೀಗಳೀಗಳನಿಸೊಯ್ಯನೆ	೩೭೬
ಎಸೆಗುಂ ಋಜ್ವಾಗತಂ	೪೧೮
ಎಸೆಗುಂ ಭಾವದೊಳಮುದ್ರೇಕ (೯೬)	೪೧೪
ಎಸೆಗುಂ ರೌದ್ರಭಯಾನಕ (೧೯೫)	೭೮೯
ಎಸೆದಿರೆ ನಿಲ್ಕುಂ (೩೦)	೧೩೧
ಎಳದಳಿರ ತುಱುಗಲೊಳ್	೨೪೨
ಎಳನೀರೊತ್ತಿನೊಳೊತ್ತಿ	೧೬೫
ಎಳಮಾವೇ ತಳಿರುಯ್ಯಲೇ	೧೨೯
ಎಳಮಿಂಚಿಲ್ಲಕ್ಕುಮಾಖಂಡಲಲಲಿತ	೬೩೫
ಎಳಲತೆಯ ಜೊಂಪದೊಳ್	೫೬೭
ಎಳವೆಱೆ ದಾಡೆ ಕೆಂದಳಿರೆ	೬೪
ಎಳೆಯಳ ಮೊಗದ ನೆಱಲ್	೭೩೩
ಎಱಲದೆನಸುಂ	೫೭
ಐ	
ಐಗಳ್ ನಮಗಕ್ಕುಂ	೬೩೭
ಐತಱ ಮಾತೊ ಭೂತಳದೊಳ	೫೩
ಐನನೇನಂ ಮಹಾಘೋರಂ	೫೯೦
ಐನಾನುಮನೊಂದಂ (೧೩೮)	೫೬೮
ಐನಾನುವೊಂದು ತೆಱದಿಂ (೧೫೯)	೬೬೪
ಐನೇನುಂ ಮದನುಜರೆನಗಾ	೪೩೨
ಐಳಿದಂಗೆಯಲಿವಿಾಗಡೆ	೩೧೪
ಒ	
ಒಕ್ಕಲಿತಿ ಜೋಡೆಯಾದಂತಕ್ಕು	೩೩೩
ಒಡನಮೃತಂ ಜನಿಯಿಸೆ	೬೯೯
ಒಡನಿರ್ದಗಲ್ಕೆಯಾದೊಂದೆಡೆ	೬೪೦
ಒದವಿದ ಬೇಟದತ್ತಳಗದೊಳ್	೯೨೯
ಒದವಿದ ಸಾಮಗ್ರಿಯೊಳೇ (೧೭೭)	೭೫೦
ಒಂದಂ ಕೊಟ್ಟೊಂದಂ (೧೫೦)	೬೧೭
ಒಂದುಗಱಿಂಗೆಯೊಳೆ ಸಂಪುಟ	೫೯೬
ಒಂದೆಂಬುದರ್ಕೆ ರೇಫಂ (೫೭)	೨೫೮
ಒಂದೆರಡು ಮೂಱು ನಾಲ್ಕು (೭೮)	೩೪೮
ಒಂದೆರಡೆಂಬಿವು ಪರದೊಳ್ (೬೧)	೨೭೫
ಒಂಬತ್ತು ದಶಾಹತಿಯಿಂ (೬೦)	೨೭೩
ಒರ್ಕೆಯ್ಸಿ ಬಿಲ್ಲನಂಬುಮ	೫೬
ಒರ್ಮೆ ಪೋಗಿ ಮೃಗಯಾನಿಮಿತ್ತದಿಂ	೩೭೩
ಒರ್ವಂ ಬಂದೊಂದೆ ತೇರೊಳ್	೨೮೦
ಒರ್ವಳೆ ಪೆರ್ಮಗಳ್	೧೬೩
ಒಸಗೆ ಮರುಳ್ಗೊಂಡಾಡುವ	೫೬೩
ಒಳಕೆಯ್ಯೊಳಿರ್ದು	೨೪೪
ಒಳಕೊಳ್ ಮುಂ ನಿನಗಿಲ್ಲದ	೪೫೭
ಒಳಗುಳ್ಳೋವಣಮುಮಿರ್ದಿರೆ	೨೪೬
ಓ	
ಓರಂತೆ ಪರೆದ ನವ	೫೦೭
ಓರೆಂಜಲ್ಗೊರ್ಪಂತಿಗೆ	೨೫೯
ಓರೊರ್ವರ್ ಸೆಣಸಿ	೫೪೮
ಓಲೆಯನೋಲೆಯೊಳಿಕ್ಕಿದ	೩೨೧
ಓಸರಿಸಿದ ಜವನಿಕೆಯೊಡ	೬೪೭
ಓಹೋ ಇರಲಿಂ ಪೆಱವಱ	೫೦
ಕ	
ಕಂಸಾಸುರಹರಂ ದೈತ್ಯ	೫೭೫
ಕಂಜನಾಭಂ ಸುರದ್ರೋಹಿ	೫೭೬
ಕಟ್ಟಾಯದ ಕಣೆ ಪೆಂಪಿನ	೨೨೯
ಕಡಿದು ನಿಡಿದೆಂಬಿವೆರಡಱ (೫೧)	೨೨೮
ಕಡುಕೆಯ್ದಾಂತನ್ಯಸೈನ್ಯಂಗಳ	೩೭೭
ಕಡುಗಲಿತನಮುಂ ಚಾಗದ	೩೪೪
ಕಡುಗಟ್ಟಲೆಯೊಳ್ ಪ್ರಿಯನಿರ್ದೆಡೆ	೬೫೩
ಕಡುಗಾಡಿ ನಾಡೆಯುಂ	೨೦೦
ಕಡುಟಕ್ಕುಗೊಂಡವೋಲ್	೬೨
ಕಡೆಗಣ್ಣಿಂ ಕಡೆಗೋಡಿವೋಗೆ	೮೦೩
ಕಡೆದವೊಲಿರ್ಪ ಪೆರ್ಮೊಲೆ	೯೩೪
ಕಣ್ಗೆ ದಱಿದೊಡನೆ	೨೭೨

ಆರಂಭದ ಶಬ್ದಗಳು	ಪದ್ಯ	ಆರಂಭದ ಶಬ್ದಗಳು	ಪದ್ಯ
ಕಣ್ಣಾರೆ ನೋಡಿ ಮಾವಿನ	೩೦೬	ಕಾರೊಸಡುಂ ಕರ್ಬಾಯುಂ	೨೨೦
ಕಣ್ಸೋಲಮನಱಿಯಂ	೭೫	ಕಾಲಿಂದಿಯಸಿತಜಲದೊಳ	೭೪೦
ಕಮನೀಯವಿಭ್ರಮಗುಣಾನ್ವಿತೆಯರ್	೭೨	ಕಾಳಸ್ವಭಾವದೇಶ (೧೧೩)	೪೭೧
ಕಮಲನಯನಂ ಕಂಬುಗ್ರೀವಂ	೬೭೮	ಕಾಟ್ಕಿಚ್ಚು ತಗುಳೆ ತನ್ಮೊಳ್	೨೯೮
ಕಮಲಂಬೊಲ್ ಮೊಗಮುತ್ಪಲಂ	೧೭೨	ಕಾಟ್ಪುರಮಾಗೆ ಕಾವ್ಯರಸಮುಂ	೨೬೯
ಕಮಳದ ಕೋಮಳಕಂದಾ	೯೪೨	ಕಿಡಿಗಳ್ ಜಾತಿಜರಾದಿಗಳ್ಗೆ	೮೯
ಕರಜಕ್ಷತಗಳಿತಾ	೮೩೨	ಕಿಱುನೆಲೆಯ ಲತಾಲಲಿತೆಗೆ	೨೩೨
ಕರಿಕಳಭಮೆನೆ (೧೧೦)	೪೬೨	ಕಿವಿಗಾದ ಸಂತಸಂ	೧೨೧
ಕರಿಮಕರಂಗಳುಚ್ಚಳಿತ	೮೮೫	ಕೀಱು ಪುಗಲೆನೆಯುಮೆಂತುಂ	೨೬೯
ಕರಿಯಿವು ಕರಿಯಲ್ಲಿವು	೧೪೮	ಕೀಱು ಪೌರುಷಮುನಾತ್ಮಪುಣ್ಯದಿಂ	೪೯೨
ಕರಿವೋಲ್ ಭದ್ರಗುಣಂ	೩೩೯	ಕುಂಕುಮದ ಕದಡುನೀರಂ	೮೬೮
ಕರುಣದಿಂ ಮೃಗಮುಂ	೧೬೪	ಕುಚಯುಗಳಚ್ಛಲದಿಂದೊಂದಿ	೭೧೪
ಕರುಣಾರಸಕ್ಕೆ ಮಿಗೆ (೨೦೮)	೮೩೧	ಕುಟಿಲಾನೀಲಾಳಕಂಗಳ್	೮೦೨
ಕರೆವೆರಸಿದ ಪೊಸದುಗುಲದ	೭೬	ಕುಡಿದಂಬೋಧಿಗಳೇೞುಮಂ	೩೧೮
ಕರ್ಪೂರಭೂರುಹಾರಾ	೪೨೪	ಕುಡಿವೆಂ ದುಶ್ಶಾಸನೋರಃಸ್ಥಲಮನಗಲೆ	೮೧೯
ಕಱೆ ಕೊರಲೊಳ್ ಕಣ್ ನೊಸಲೊಳ್	೬೧೦	ಕುಡುವಿಲ್ಲನೆಚ್ಚ ಸರಲುಂ	೨೦೯
ಕಱೆಮುಱೆಗಳೊಳವು	೭೧೧	ಕುಂದದಳಧವಳನೃಪ	೮೮೦
ಕಲಿ ಪಾರ್ಥಂ ಪಾರ್ಥನಿಂದಂ	೬೫೭	ಕುಲಜನಭಿಮಾನಿ ತಕ್ಕಂ	೫೮೧
ಕಲ್ಲೆನ್ನದೆ ಬೆಳೆದ ಪಸುಱ್	೨೧	ಕುಲಮುಂ ಚಲಮುಂ ವಿದ್ಯಾ	೧೯೭
ಕಲ್ಲೆಲ್ಲಂ ಕಿಸುಗಲ್	೮೧	ಕುವಲಯನವರುಚಿಯಿಂ	೮೪೯
ಕವಡಿಕೆ ಬಂದುದೋಪ	೧೯೮	ಕುಸುಮಕಿಸಲಯಮೆ	೮೭೦
ಕವದಿನಮುರಯಿರೆನೆ (೮೫)	೩೭೯	ಕುಳಿರ್ವೆಲರುಮಾಲಿನೀರುಂ	೬೫೧
ಕವಿಗಳ್ಗಿದು ಕೆಯ್ಗನ್ನಡಿ	೪	ಕುಳ್ಳಿರ್ದು ಕುಳಿರ್ವ ಮೆಳೆಯೊಳ್	೮೧೫
ಕವಿವ ಕುಬೇರಧೂಪದ	೭೧೧	ಕೂರಿಸಿ ವೀರಶ್ರೀಯಂ	೨೮೬
ಕಸವರದಾಸೆಯಿಂ ಪಡೆವುದೋರ್ಪ	೩೦೪	ಕೃತಮಣಿಭೂಷಣಂಗಳ	೬೩೧
ಕಳಧೌತೋಚ್ಚಶಿಲೋದ್ಗತಾಂಶು	೮೫೦	ಕೃತಿಸತಿಯ ಮೆಯ್ಯೊಳೆ	೪೨೮
ಕಳರುತಿಯಿಲ್ಲದ ಮಧುಪಾವಳಿ	೬೨೪	ಕೆದಱುತ್ತುಂ ಮಣಲಂ	೪೦೯
ಕಟಿಲೆ ನುಡಿದಟಿಲೆ ಬಗ್ಗಿಸಿ	೨೬	ಕೆಯ್ವಾರಮೇ ಪೊಗೞ್ತೆಯೆ	೧೮೦
ಕಱಿದ ಮನಃಪ್ರಿಯವಿರಹದಿ	೨೦೧	ಕೆಲಬರುಪಾಂತ್ಯದಕಾರದ (೬೭)	೩೦೨
ಕಾಡುಂ ಕೋಡುಂ ನಾಡುಂ (೬೬)	೨೯೭	ಕೆಳದೀ ಬಿಲ್ಲುಮನಂಬುಮ	೭೭೪
ಕಾಯದೆ ಚಲಮುಂ ಪಲರುಂ	೩೧೭	ಕೆಳರೆ ವಿರಹಿವೃಂದಂ	೫೫೦
ಕಾಯಲುಂ ಬಲಗರ್ವದಿಂ	೩೫೮	ಕೇವಲಮುದಂತಲಿಂಗದೊಳ್ (೨೦)	೯೮
ಕಾರಕಮುಂ ಕ್ರಿಯೆಯುಂ (೩೪)	೧೪೩	ಕೇಳ ಮಾಧವ ಭವನ್ಮಥಿತ	೧೩೨
ಕಾರುಣ್ಯಂ ಹಾಸ್ಯಂ (೧೯೪)	೭೨೮	ಕೈಲಾಸಾದ್ರಿಯನೆತ್ತಿ ನೊಂದ	೧೬೮

ಆರಂಭದ ಶಬ್ದಗಳು	ಪದ್ಯ	ಆರಂಭದ ಶಬ್ದಗಳು	ಪದ್ಯ
ಕೊಡೆ ಗುಡಿ ತೋರಣಂ ದಧಿ	೬೩೨	ಚಾಗಂ ಬೀರಂ ಸೊಬಗೆಂಬೀ (೨೧೩)	೮೪೯
ಕೊಱತಿವಲ್ ಬತ್ತಿದ ಕಾಲ್	೪೫೦	ಚಾಪಲವೀಪ್ಸಾಭೀಕ್ಷ್ಣ್ಯ (೬೪)	೨೮೭
ಕೊಳಗಳ್ ದಳಿತಾಬ್ಜಂಗಳ್	೬೨೩	ಚಾರೂರೂರೂದ್ಧ	೫೪೫
ಕೊಳನಂ ಗಗನಂ ನೀರ್ವೂ	೯೦೩	ಚಿತ್ತಜನಿಕ್ಷು ಚಾಪದಳವಂ	೯೮೪
ಕೊಳ್ ಕೊಳ್ಳೆಂದೊಡನೊಡನೆಯೆ	೪೧೬	ಚ್ಯುತದತ್ತಾಕ್ಷರವುಂ (೧೪೧)	೫೮೭
ಕೋಡುಳ್ಳ ತುರಂಗಂ	೪೭೩	ಛ	
ಕ್ರಿಯೆ ತಾಂ ಕ್ರಿಯಾರ್ಥ (೯೪)	೪೦೭	ಛಂದೋವಿಚಿತಿಯಲಂಕೃತಿ	೯೬೫
ಕ್ರಿಯೆಯಂ ಪ್ರತಿಷೇಧಂ ಗೆಯೆ (೧೭೪)	೭೩೬	ಜ	
ಕ್ರೂರಾಸ್ತ್ರಪಾತಚಿತ್ರ (೨೧೫)	೮೪೧	ಜಕ್ಕವಕ್ಕಿಗಳಿಂ ಕಳಹಂಸೆಯಿಂ	೮೪೭
ಕ್ಷಾರಕ್ಷೀರಾಂಬುಧಿಗಂ (೨೩೨)	೯೦೬	ಜಗದಾಲೋಕನದರ್ಪಣಂ	೬೯೬
ಕ್ಷಿತಿಯೊಳರಾತಿ ಭೂಪತಿಗಳಂ	೮೧೮	ಜಗದೊಳುಳ್ಳ ನದೀಪ್ರವಾಹ	೭೨೩
ಖ		ಜನನೀಜನಕಸಹೋದರ	೩೫೭
ಖಗತತಿ ಸಾರೆ	೫೫೯	ಜನಿಯಿಸೆ ಮುನ್ನಂ ಜನ್ಯಂ (೧೭೫)	೭೪೧
ಗ		ಜಲಜಾಯಮಾನಮಲರ್ಗಣ್	೬೭೭
ಗಗನಾಧ್ವರ್ ಶರಣಾಗಿ	೪೬೧	ಜಲನಿಧಿವೋಲ್ ಗಂಭೀರಂ	೬೬೭
ಗಗನಾಭೋಗಮನೆಯ್ದಿ	೪೮	ಜಳಧಿಯೊಳೆ ತಿಮಿತಿಮಿಂಗಿಳ (೨೨೬)	೮೮೩
ಗಣನಾವಿಶೇಷ (೮೨)	೩೬೮	ಜಾತಿಯೆನಿಕುಂ ಸ್ವಭಾವಾಖ್ಯಾತಿ (೧೪೮)	೬೦೮
ಗಣಿಕೆಯರ ವಿಳಾಸಾಗಾರದೊಳ್	೯೩೧	ಜಾತಿಯೊಳಂ ಸಂಖ್ಯಾನಾ (೩೫)	೧೪೭
ಗದ್ಯಮುಯುಂ ಪದ್ಯಮುಯುಂ (೨೪೦)	೯೮೯	ಜಾತಿ ಸಹೋಕ್ತಿ ಭಾವ ಪರಿವೃತ್ತಿ (೧೪೭)	೬೦೭
ಗಂದಿಗನೆರವಣಿಗಂ	೭೨೩	ಜಿನಮುದನರೊಳಗೆ	೩೬೯
ಗಂಭೀರಮುಮುಳಲಕ್ಷ್ಮೀ	೬೪೩	ಜಿನರಾಜಶಿಶುಗೆ	೮೮೭
ಗಿಳಿಯೊಡನೋದಿಯೋದಿ	೨೯೦	ಜೀಮೂತಕೇತುಗಣ್ಣಂ	೪೮೩
ಗುಣದಿಂ ಕ್ರಿಯೆಯಿಂ (೨೪)	೧೨೫	ಜೋಡೆ ಕರಮುಡಿಯ	೭೫೮
ಗುಣಮನೆ ತರ್ಪುದು ದೋಷದ (೧೫೪)	೬೩೯	ಜ್ಯಾಯನರಣ್ಯದೊಳ್ ನೆಲಸುಗುಂ	೧೮೯
ಗುರುಪರಿಣಾಹಂಗಳ್	೭೬೪	ತ	
ಗುರುಲಘುರಚನೆಗೆ (೧೧೬)	೪೮೨	ತತದಶನದ್ಯುತಿಯೊಳ್ (೨೨೫)	೮೭೮
ಗೆಲವಂ ಕೊಂಡಭಿಮಾನಿಯಾದ	೨೬೧	ತತ್ಪುರುಷಸಮಾಸದೊಳ್ (೫೪)	೨೪೭
ಗ್ರೀವೆ ಮೊಗಮುಂಸಮುಳಿಕಂ	೧೬೯	ತತ್ತ್ವಂ ವ್ಯಾಜಸ್ತುತಿಯುಮಯುವ (೧೭೯)	೭೫೪
ಘ		ತದಪತ್ಯಂ ಚಾಗದ	೧೬೧
ಘನಸಮಯದೊಳಿರ್ದು ಶಿಳಾ	೮೯೩	ತದುಪಗತಮಧ್ಯಮೈಕತ್ವದೊಳ್ (೯೩)	೪೦೫
ಘನಜಘನಂ ತನುತನು	೭೨೯	ತನಗಿಂಬಪ್ಪುದನಾಯ್ದು ನೋಡಿ	೩೫೧
ಚ		ತನಗಿಲ್ಲದ ಭಯಮುಂ	೮೨೭
ಚತುರಂತಕ್ಷಿತಿಕಾಂತೆ ಕೇಳ್	೧೨೭	ತನಗೆ ಮೇಗಿನಿಸೆಂಬಿನಿತಾದೊಡಾ	೧೫೬
ಚರ್ಚಲ್ ಶಶಿಶಿಶುವಂ	೫೫೬	ತನಮಿಕೆಯುಮೆಂಬಿವುಂ (೭೭)	೩೪೩

ಆರಂಭದ ಶಬ್ದಗಳು	ಪದ್ಯ
ತಂತಮ್ಮ ವರ್ಗದಂತ್ಯದೊಳ್ (೧೩೫)	೫೬೨
ತಂದೆಯ ನನ್ನಿಗಿತ್ತನನುಜಂಗೆ	೩೧೯
ತನ್ನ ಸಂತತಿ ಮುನ್ನೀತಂ	೫೭೪
ತಮದೊಡ್ಡು ಮುಷ್ಟಿಸಂಗ್ರಾಹ್ಯಂ (೨೧೯)	೮೫೩
ತರವೇೞ್ ಮದವಾರಣಮಂ	೪೧೩
ತರವೇೞ್ ಮಾಣಿಕ್ಯಭಂಡಾರದ	೨೮೪
ತರುಣಿಯ ಮುಖೇಂದುಕಮಲಾ	೬೯೪
ತಱಿಸಂದಿರೆ ಕರಿಘಟೆಯುಂ	೫೩೧
ತಲೆಮುಟ್ಟಿಪಾಯ್ದು	೪೪೬
ತಳಮುಂ ಕೆಂದಳಿರುಂ	೬೭೧
ತಳಿರ ಮೇಗಣಲರೋಳಿಗಳೋ	೮೯೫
ತಾನೆ ಗಡಳಿಪಂ ಮೂರ್ಖಂ	೧೫೪
ತಾರವೀ ವೀರತಾಸಾರ	೮೯೨
ತಾರಾತಾರಾಮಳಿನಗುಳಿಕಾ	೫೪೭
ತಿಂಗಳನಪ್ಪಿಕೊಳಲ್	೪೦೮
ತಿಂದು ಕಪೀನಫಲಂಗಳ	೫೨೭
ತಿರಿವುದು ಬೈಕಂಗೊಳ್ಳದು	೫೯೫
ತಿವಳಿಯೊಳ್ ಮಿಡುಕಾಱದ	೬೨೬
ತೀವಿರ್ದತ್ತು ಮೊದಲ್ಮೊದಲ್ಗೆ	೨೬೬
ತುಂಗವಿಚಿತ್ರಕೂಟನಿವಹಂ	೮೯೬
ತುದಿಯೊಳ್ ದೀರ್ಘಾದೇಶಂ (೩೨)	೧೩೬
ತುರಗದೞಿಂಗಳ್ ಕವಿತರೆ	೨೮೫
ತೞಿಕಲಡುಗೆಗಳೊಳೇಂ	೨೪೧
ತೆಂಕವಕ್ಕದೊಳಸಂಖ್ಯಬಲಂ	೧೨೨
ತೆರೆಯ ಪೊಯ್ಲೊಳೆ ತೆರಳ್ದು ಬರ್ಪ	೮೮೨
ತೆಱಿದಿರೆ ತದ್ವಾಚಕತೆಯಾ (೧೦೧)	೪೩೬
ತೊಟ್ಟಂ ಸಂಮೋಹನಮಂ	೩೮೦
ತೊಟ್ಟು ತೀವಿ ಬಳೆಯಂ	೩೭೨
ತೊಡೆಯಿಂ ಕಡುಗುದುರೆಗಳಂ	೨೩೧
ತೊಱಗಲೆ ಬಿಟ್ಟಹಳ್ಳಿ	೨೧೨
ತೊಱಿಗಳ ಪುಳಿನತಳಂಗಳ	೨೪
ತೊಳಗೆ ಪೊನ್ನ ರಥಂ ರಥವಾಜಿಗಳ್	೪೮೯
ತೊಳಪ ದಂತಮರೀಚಿಸಂತತಿ	೮೭೯
ತೋಳ ಘಟ್ಟಣೆಗುಚ್ಚಳಿಸುತ್ತುಂ	೯೩೩
ತ್ರಿದಶೇಂದ್ರಾರ್ಜಿತಶೌರ್ಯಮೊರ್ಮೆ	೮೧೭
ತ್ರಿಭುವನರಾಜ್ಯಪಟ್ಟದೊಡ	೩೭೫
ತ್ರ್ಯಂಬಕಲೋಚನಾರ್ಚಿ	೨೮
ದ	
ದಂಡಿತಾರಾತಿಭೂಭೃತ್	೫೯೮
ದದಪವಕಾರಂಗಳ್ (೮೭)	೩೮೬
ದನುಜರನಾ ಮುರಾರಿ ಗೆಲೆ	೮೯೯
ದಶರಥನಾಗಿಯುಂ ದಶಸಹಸ್ರರಥಂ	೭೩೦
ದಾನವದೈತ್ಯಾಸುರ (೨೩೦)	೮೯೮
ದಾನಾಂಬುಚುಂಬಿತಕಪೋಲತಲಂ	೬೮೩
ದಾರುಣಮುಂ ಶರಶಲ್ಯಮು	೬೦೪
ದಿಕ್ಕನಿತುಂ ತೋಱಿದುವು	೧೯೫
ದಿವಸದೊಳಸಿತಾಬ್ಜ (೨೨೪)	೮೭೫
ದಿವಾಕರನ ಪುಟ್ಟಿ ಪೋದ	೧೩೫
ದೂರಾವತೀರ್ಣಪಂಪಾ	೯೨೦
ದೆಸೆ ಪತ್ತು ಜಲಧಿ ನಾಲ್ಕು	೧೪೯
ದೊರೆಕೊಂಡ ಪಾಪಲೇಶ್ಯಾ	೮೬೬
ದೊರೆವೆತ್ತ ಪದ್ಯದಿಂದಂ (೨೪೧)	೯೫೦
ದ್ವಿಜವಂಶಾರ್ಣವಪಾರಿಜಾತಕುಜ	೯೬೦
ದ್ವಿತ್ರಿಪದರಚಿತವೃತ್ತಿ (೧೯೨)	೭೮೪
ದ್ವಿಪದಂ ಮೇಣ್ ಬಹುಪದಂ (೪೭)	೨೦೮
ಧ	
ಧನು ಕಾಮಂಗಿಕ್ಷುದಂಡಂ	೯೮೫
ಧನುವುಂ ಕರ್ಬಿನ ಬಿಲ್	೭೫೨
ಧರೆಯುಂ ಕ್ಷಮೆಯಿಂ ಹಿಮವದ್	೧೭೧
ಧರೆಯುಂ ಮುಟ್ಟದೆ ಮುಟ್ಟುವ	೬೫೦
ಧರೆಯೆಂತಂತೆ ರಸಾಶ್ರಯಂ	೮೪೩
ಧರೆಯೊಳ್ ಧರ್ಮಪಥಕ್ರಮಂಗಳೆಸೆಗುಂ	೮೩೦
ಧರೆಯೊಳ್ ಬೀರದ ಪೆಂಪಿಂ	೭೦
ಧಾತುಗನೇಕಾಕ್ಷರ (೯೭)	೪೧೭
ಧಾತುವಿವರ್ಜಿತಮರ್ಥೋಪೇತಂ (೧೫)	೮೪
ಧಾತುವಿಹಿತಂ ತೃಶಬ್ದಂ (೪೦)	೧೭೬
ನ	
ನಗರಾದಿವರ್ಣನಂ ನೃತ್ಯಗೀತ (೨೧೪)	೮೪೦

ಆರಂಭದ ಶಬ್ದಗಳು	ಪದ್ಯ
ನಗರಾರ್ಣವ ಸರಿದಟವೀ (೨೪೭)	೯೫೭
ನಗೆಯುಂ ಬಲ್ಮುಗುಳ್ಗಳ್ಗೆ	೯೧೮
ನಗೆಯೊಳಮಪ್ಪೊಡಮಿಂತೀ	೪೧೨
ನಗೆವಡಿಕಾಱಂ ನೀಱಂ	೩೨೫
ನಡುಗಿ ತಡವರಿಸಿ ಬೆಂಕೆಯ	೪೧೦
ನಡುವಣ ಕರ್ಪುರ ಕಡೆಯಣ	೧೫೦
ನಡುವ ನಾಟಸದುಂತೆ	೭೦
ನಡೆ ಕೋಲ್ವರಮುಂದಂಬುರ	೩೦೫
ನಂದನನೊಸೆಗೆಯುಮ	೮೬೪
ನಮಿತಾರಿಗೆ ದಮಿತಾರಿಗೆ	೩೪೬
ನಯನಾದಿವಿವಿಧವರ್ಣಾ (೨೩೫)	೯೨೭
ನರಪರೊಳಗೊಂದು ಕೋಟಿಯ	೧೪೨
ನವಕುಸುಮಮಾಲೆ ಮೌಕ್ತಿಕ	೪೬೪
ನಪಜಳದಾಗಮಮಿಂತೀ	೬೪೬
ನವಲಕ್ಷಂ ಕಟಕದೊಳಿ	೫೬೨
ನಾಡಾಡಿಗಱಿವಿನಂ (೧೭೧)	೭೨೫
ನಾನಾಶಶಮೃಗಧರಮುಂ	೫೩೯
ನಿಗಳಂಬೊಲ್ ತೊಡರ್ದಿರ್ದ	೩೪೨
ನಿಜದಿಂದಂ ಚೆಲ್ವಿಗೆ (೧೨೮)	೫೨೩
ನಿಟ್ಟೆಯೆದ್ದು ಯಾಗು ಪತಿಯೊಳ್	೨೨೩
ನಿತ್ಯಂ ನಪುಂಸಕತ್ವಂ (೩೮)	೧೬೦
ನಿಂದಾಸಂದದ	೫೮೩
ನಿನ್ನನ್ನನೊರ್ವನುಂ	೭೮೬
ನಿನ್ನ ವಾಕ್ಯಾರ್ಥಮೆಂಬೊಂದು	೫೪೩
ನಿನ್ನನೇನಿನ್ನನಾ	೫೮೪
ನಿಮ್ಮಂ ಪಿಂಬಡಿನೊಳದೇ	೩೧೫
ನಿಯುತಸ್ಥಾನಂ ಪದವಿಸೃತಿ (೧೧೫)	೪೭೯
ನಿರತಂ ಪ್ರಕೃತಿಪ್ರತ್ಯಯಂ (೭)	೨೯
ನಿರತಿಶಯಕಾವ್ಯಶೋಭಾ (೧೧೮)	೪೯೯
ನಿರವದ್ಯಂ ಗತದುರಿತಂ	೬೮೦
ನಿರುಪಮರಪ್ರಮೇಯ	೮
ನೀಂಗಳ ಕಾಲ್ಗರ್ಚಿದ	೯೧
ನೀನಾಂ ತಾನೆನಿಕುಂ (೩೬)	೧೫೨

ಆರಂಭದ ಶಬ್ದಗಳು	ಪದ್ಯ
ನೀಲಿಯ ರಸದೊಳ್ ಕರಡಿಯ	೭೩೫
ನುಡಿದನೆ ಕಾವುದನೇ	೪೯
ನುಡಿದಯರ್ ಪೊಚ್ಚಱಮಾತಂ	೩೮೧
ನುಡಿದುದದೆ ಪದ ವಿಭಂಗತೆ (೧೪೪)	೬೦೧
ನುಡಿಯುದೆ ಮನದರ್ಥಮ (೧೫೧)	೬೨೧
ನುಸಳೊರ್ನುಡಿ ಭಾವೆ (೧೪೩)	೫೯೪
ನೂರ್ಮೆ ಪಶು ಕಱಿವುದಂ	೩೫೦
ನೃಪನ ದಯೆಯುಂ ನಚ್ಚುಂ	೬೩೦
ನೆಗಱೆ ಯತಿಸ್ಥಿತಿ ಚಿತ್ತದಿ	೫೮೫
ನೆಗೆದಂಭೋದಪಥಕ್ಕೆ	೫೯
ನೆತ್ತರಂ ಕುಡಿದು ಸೀನೆಣ	೮೨೫
ನೆನೆಯದೆ ಕಜ್ಜದ ಬಿಣ್ಪಂ	೪೦೪
ನೆಯ್ದಲೆಸಳಿವಱ ಪೋಲ್ವೆಯ	೫೩೨
ನೆರೆಪೆ ತುಂಬಿಗಳನಾತ್ಮ	೭೪
ನೆರೆವನ್ನಂ ರವಿ ನಿಲ್ಲ	೮೫೭
ನೆಱಗೊಂಡು ತೊನೆವ ಸರಲಿಂ	೪೪೮
ನೆಲನನವಯವದೆ ತಳರದೆ	೭೭೩
ನೆಲನಂ ನುಂಗಲುಮಂಬುಧಿ	೧೦೮
ನೆಲನಿದಱ ನೆಲನಂ ಪಾಲಿಸು	೮೬
ನೆಲಸಿರ್ದಪ್ಪುದಧಃಸ್ಥಳಂ	೨೬೩
ನೆಲೆಗೊಳ್ಗೆ ನಿಜಭುಜಾಸಿಯೊಳ್	೭೭೫
ನೆಲೆಮೊಲೆ ಪೊನ್ನಸೊನ್ನಲಿಗೆ	೬೮೭
ನೇಸಱಂ ಪೆಱಗುಮಾಡಿ	೨೭
ನೊರೆಯಿವಲ್ಲವು ತಳ್ತ ಶಂಖದ	೮೮೬
ನ್ಯಾಯಾಗಮನೃಪವಿದ್ಯಾ (೧೧೪)	೪೭೬
ಪ	
ಪಗಲೊಪ್ಪದು ಶಶಿ ನಿಶೆಯೊಳ್	೪೯೧
ಪಗಲ್ ರತಾರಂಭದೊಳ್	೮೭೬
ಪಚ್ಚನೆಯುಂ ಕೆಚ್ಚನೆಯುಂ (೫೨)	೨೩೩
ಪಟುವೇಕವಾಕ್ಯನಮುಳಂ	೩೬
ಪಟ್ಟಕಮೂಗಿನ	೨೧೦
ಪಡುವಳ್ ಕೀೞಿಲೊಳಿಮ್ಮ	೬೧೭
ಪಡೆಗುಂ ಮಹಿಮೋನ್ನತಿಯಂ	೬೫೬

ಆರಂಭದ ಶಬ್ದಗಳು	ಪದ್ಯ	ಆರಂಭದ ಶಬ್ದಗಳು	ಪದ್ಯ
ಪಡೆಗುಂ ವಿಭಾಷೆಯಿಂದಂ (೪೩)	೧೯೦	ಪರಿವಿಡಿಯೆ ಕರ್ತೃ ಕರ್ಮಂ (೧೬)	೮೫
ಪಣಮನೀಯನಂ	೪೮೪	ಪರಿವೃತ್ತಂ ಸಂದಷ್ಟಂ (೧೩೧)	೫೪೬
ಪಣ್ಣಾಯರ್ ತಳ್ತ ತುಱುಂಗಲ	೨೧೮	ಪರಿವೃತ್ತತೆಯಿಂ ನುಣ್ಪಿಂ	೬೭೮
ಪಣ್ಣನೆ ತೊಱಲ್ದು ತೀಡುವ	೨೨೨	ಪರಿಹರಿಸೆಯುವರ್ಣಮನಾ (೩)	೧೨
ಪತ್ರಿಯಿಂ ಪಿಂಬಡಿನೊಳ್	೭೦೬	ಪಲತೆಱದ ಪದ್ಯದಿಂದಂ (೨೪೬)	೯೫೫
ಪತ್ತಿರೆ ಕಾರಕದೊಳ್ (೪೮)	೨೧೪	ಪಲ್ಲಟಿಸಿ ಡಕಾರದ ನೆಲೆ (೬೫)	೨೯೬
ಪತ್ರಂ ಭುಜಂಗಸಮಿತಿ	೪೫೮	ಪಸುರಂ ಬಿಡದೆಸೆಪ	೪೪೧
ಪದದೊಳ್ ಮಾಟ್ಪಿಂತಿರೆ (೨೩೭)	೯೩೫	ಪಸುರ್ಪೊನ್ನ ಜಗುಲಿ	೨೩೬
ಪದಧೂಳೀಕ್ಷೋಭದಿಂ	೯೨೩	ಪಱಿಗನ್ನಡಂ ಪುದುಂಗೊಳೆ	೫೫
ಪದರಚನಾತಿಶಯಂ (೧೮೯)	೭೮೦	ಪಾಡುಗಳಿಂದಂ ತಱಿಸಲೆ (೨೪೫)	೯೫೪
ಪದವರ್ಣನಾವ್ಯಾವೃತ್ತಿ (೧೩೦)	೫೨೫	ಪಾರಾವಾರಾಂ ತುಹಿನಕಿರಣಂ	೯೧೦
ಪದವರ್ಣವಿಭಕ್ತಿ (೧೮೪)	೭೬೮	ಪಿಂಗಿದುದಿಲ್ಲಿನ್ನುಂ ಮನ	೫೫೩
ಪದವಿಧಿಯಿಂ ನೆಱೆದುತ್ತರ (೧೧)	೫೪	ಪಿಂಗೆ ಪೂಸಿದ ಭಸ್ಮಪರಾಗಂ	೮೦೪
ಪದವೆತ್ತಿರ್ವರ ಜೀವಮೊಂದೊಡಲೆ	೮೦೫	ಪಿಡಿದು ಮುಚ್ಚದೆ ನೋವದೆ	೩೧೦
ಪದಿನಯ್ದುಮಿರ್ಪತಯ್ದುಂ (೨೪೪)	೯೫೩	ಪಿಡಿಯೆಂ ಚಕ್ರಮನೆಂಬ	೨೭೯
ಪದಿನೆಣ್ಬಾಸಿರಲೋಹವಕ್ಕರೆಯ	೭೭	ಪಿಡಿಯೆ ಮೆಲಲ್ ಪಿಡಿ	೧೪೫
ಪದೆಯಿಸಿ ಸೊಂಕಿ ಸಂಕೆಗಿಡೆ	೮೦೦	ಪಿರಿದುಂ ಸಮಾಸಮಾಗಿರೆ (೧೨೪)	೫೧೫
ಪಂದಲೆಯೋಳಿ ದೋರಣದ	೫೬	ಪುಗಿಲಂ ಕ್ರೀಡನಶೀಲನಕ್ಕರಿಗ	೧೩೯
ಪಂದಳಿರ ತೋರಣಂ	೨೩೪	ಪುರುಷಸ್ತ್ರೀವಾಚಕ (೧೮)	೯೨
ಪಂದಿಯಿಂ ಕೆದಱಿದುತ್ಪಳಮುಂ	೬೨೭	ಪುಲಿಗಳ ಮೀಸೆಯ	೮೨
ಪನ್ನಗ ಕನ್ನೆಯೊರ್ವಳ್	೫೩೭	ಪೆತ್ತುಂ ತೆಳ್ಪಱಿಯದ ನಡು	೭೪೪
ಪನ್ನಗತಳ್ಪಜ್ಕಂಸ	೧೯೮	ಪೆರೆಸುಲಿವ ಹಿಮವದವನೀ	೮೮೯
ಪಯವುಲಿಗಳ್ ಮೊಲೆಯೂಡಿದುವಾ	೮೨೬	ಪೆರ್ಮರನನಡರ್ದ ವನಲತೆ	೨೧೭
ಪರದಾರಗಮನಮಾರ್ಯಾ	೪೬೭	ಪೆಱವಱ ಧರ್ಮಂಗಳ (೧೨೫)	೫೧೯
ಪರಮನೊಳಗೊಳಗದೊಂದಂ	೬೭೬	ಪೆಸರೊಳಸಂಭವಮೆನಿಸುಗು (೧೮೩)	೭೬೫
ಪರಮಪ್ರೀತಿನಿಮಿತ್ತಂ	೪೨೭	ಪೇೞರ್ದಿರ್ಪತ್ತುತೋಳುಂ	೩೦೧
ಪರಮಾಗಮಃಮೂರ್ತಿ	೨	ಪೊಗೞಲಾಡುವು ನಾಲಗುಳ್ಳರ	೩೫
ಪರಮಾರ್ಥಂ ಪೇೞೆಪಟ್ಟಿರ್ದ	೬	ಪೊಗೞಲ್ಕಾ ನೃಪನಂ	೭೦೦
ಪರಿಗದಿತಬಹುವ್ರೀಹಿಗೆ (೫೬)	೨೫೫	ಪೊಂಗಳಸಂಗಳಿ	೯೯
ಪರಿಣತವಯಃಸರೆ	೧೯೧	ಪೊದೆದಮದವನ್ಮಾತಂಗ	೮೫೪
ಪರಿಮರ್ದಿಸುವುದು	೨೭೧	ಪೊನ್ನುಳ್ಳವನೆ ಕುಲೀನಂ	೮೦
ಪರಿಲುಳಿತಘರ್ಮಜಲಮುಂ	೬೯೦	ಪೊಂಬೆಸದಿಂದಮೆಯ್ದೆ	೧೩೮
ಪರಿವರ್ಜಿತದೋಷನನಾ	೫೮೯	ಪೊಯೆ ಬಯೆ ಮುತ್ತಾರಯೆ (೬೮)	೩೦೭
ಪರಿವಿಡಿಗೆಯ್ಯೆ ಸೊಂದಿಗಿಳಿ	೬೪೧	ಪೊಸತು ಪೞದೆಳದು (೫೩)	೨೩೯

ಆರಂಭದ ಶಬ್ದಗಳು	ಪದ್ಯ	ಆರಂಭದ ಶಬ್ದಗಳು	ಪದ್ಯ
ಹೊಸದೇಸೆಯಂ ಬೆಡಂಗಂ	೨೪೦	ಬರ್ಪನಮೋಘಮಬ್ದಸಮಯಕ್ಕೆ	೩೮೯
ಹೊಸಯಿಸುವರ್ಥಂ ಕ್ರಿಯೆಯಿಂ (೧೬೫)	೭೦೧	ಬಲಿಯುವಮಾಂತದ ಬೇಟದೊಳ್	೨೦೨
ಹೊಸವಿಸಿಲೊಳ್ ಮುಗುಳ್ಗಳ್	೯೧೭	ಬಲ್ದಲೆಯಂ ತೋಳ್ ನೀಳ್ದನ	೨೫೬
ಹೊಟಲಿಂದ್ರಪುರಂ ಕಾಲೂರ್	೩೩೫	ಬಲ್ಲಂತೆಂತುಂ ಗುಣವು	೨೫೨
ಹೋಗದಿರೆಂದು ನೀಂ ತಡೆವೆಯಪ್ಪೊಡೆ	೪೫	ಬಲ್ಪಲಿಕೆಯಿಂದಿದಿರ್ಚಿದ	೬೯
ಪ್ಲವಂಗಮುಕುಲಂಗಳಲ್ಲಿ	೮೧೨	ಬಲ್ವೆಣನುರ್ಚಿ ಕೋಡೊಳಿರೆ	೬೮
ಪ್ರಕರಣದಿಂ ಶಬ್ದಾಂತರ (೯೯)	೪೩೧	ಬ ವಕಾರಂಗಳ್ (೧೩೨)	೫೫೧
ಪ್ರಕೃತಿಗಳಂ ಧಾತ್ವರ್ಥದ	೪೨೦	ಬಹುಪೋಷಣದಿಂ ಮಾವಿನ	೫೧೭
ಪ್ರಕೃತಿಯನಲ್ಲದೊಡಾ (೧೫೪)	೬೬೧	ಬಳಭದ್ರಂ ಭುಜದೊಳುರಃ	೭೬೦
ಪ್ರಣುತಗುಣರೆನಿಪ	೧೮೫	ಬಳವದರಿಭೂಪದಾವಾನಳಂ	೪೪೨
ಪ್ರತಿಬುದ್ಧರಂ ಕುಱಿತ್ತೀ	೪೨೧	ಬಾಟಿತೆಯ ಖರ್ಜೂರದ	೨೩೦
ಪ್ರತಿಭಾನಂ ಕಾವ್ಯವಿದ್ಯಾ	೪೨೪	ಬಿಗಿ ಪುಗು ಬಿಟ್ಟು ಕೂಡು	೪೦೬
ಪ್ರತಿವಸ್ತೂಪಮೆ ಸಾಮ್ಯ (೧೬೩)	೬೮೫	ಬಿಜ್ಜಮ್ಪುತ್ತೆಸೆವಱ್ಚೆಯು	೧೮
ಪ್ರತಿಷೇಧದೊಳಂ ಕೆಲಬರ (೯೫)	೪೧೧	ಬಿಚ್ಚತಮಿರ್ದು ಕಣ್ಣ ಪಸ	೪೯೪
ಪ್ರವರಾರ್ಥಾಲಂಕಾರಂ (೧೪೫)	೬೦೫	ಬಿದಿಗಭಿಧಾನಂ (೪೧)	೧೭೯
ಪ್ರವಿರಾಜತ್ಕಳಧೌತ	೯೨೪	ಬಿದಿವಸದೆ ಕುಸುಮಫಲ	೮೭೨
ಪ್ರಾಯಿಕಮುಕ್ಕುಂ ದೀರ್ಘಾ (೫೫)	೨೫೧	ಬಿಂಬಾಧರಕಾಂತಿಪ್ರತಿ	೯೪೩
ಪ್ರಾಲೇಯಾದ್ರಿನವಪ್ರಸೂನ	೯೪೭	ಬಿರಯಿಗಳ ಸುಯ್ಗಳೊಡನೆಯೆ	೬೧೫
ಪ್ರೇಯಂ ಪ್ರಿಯತರವಚನ (೧೮೬)	೭೭೨	ಬಿಸರುಹಸಖನಸ್ತಾದ್ರೀ	೮೫೮
ಫ		ಬಿಳಿಯಲರ್ಗಣ್ಗಳ್ ಬೆಳ್ಪಂ	೬೧೮
ಫಣಿರಾಜಂ ಬಾರಿಯಿಟ್ಟಟ್ಟದೊಡ	೯೦೦	ಬೆರಲಂ ಕರ್ಚುವ ಪುತ್ತಂ	೮೨೪
ಫಲಸಾರಸನಮವಂತೆ	೫೨೮	ಬೆರಸಿರೆ ಶ ಷ ಸ ಹ ವರ್ಣಂ (೧೩೪)	೫೬೦
ಫಳತರುಗಳ್ ಪಲವುಂ	೬೯೮	ಬೆರಸಿ ಸಮಸಂಸ್ಕೃತಂಗಳ್ (೬೩)	೨೮೨
ಬ		ಬೆಲಗಸೆದೀವಿಕೊಂಡು ಕುಡಿಯಲ್	೮೫೫
ಬಕಕುರರಪಕ್ಷವಿಕ್ಷಿಪ್ತ	೫೧೬	ಬೆಸೆದಿರೆ ನಿನ್ನೋಪಳ	೬೩೬
ಬಗಿದು ಪುಗಲ್ಕರಿದೆಲ್ಲಿಯು	೯೭	ಬೆಳಗುಗಳ ಬಳೆದ ಬಳಗದ	೨೩
ಬಗೆಗೀಗಳ್ ನಿಶ್ಚಯಂ	೮೧೪	ಬೆಳಪ ಮುಖಚಂದ್ರನೊಳ್	೮೬೨
ಬಗೆದಂತಾಗೆ ಸುರೇಂದ್ರರಿಂ	೧೧೧	ಬೆಳಗೆಯ್ಗಳೊಳಿರ್ದೆತ್ತಂ	೨೯೩
ಬಗೆದಿದ್ದುರ್ ಬೇಱದೊಂದಂ (೧೭೦)	೭೨೧	ಬೇರ್ವೆರಸು ಕಿಱ್ತು ಪಲವುಂ	೭೧
ಬಗೆ ಹೆಱತುಮರ್ಥವೊಂದಂ (೧೮೦)	೭೫೫	ಬೇಱೊಂದದ್ಭುತರಸಮುಂ	೪೭೫
ಬಗೆಯುಂ ತಾರದೆ ತಾಪಸಾಶ್ರಮ	೮೨೯	ಬೇಸಱದಾಸಱದೆ	೩೪೭
ಬಗೆಯೊಳ್ ಪೊಣ್ಮುವಲಂಪು	೮೦೧	ಬೇಸರಿಸುವಂಗಜಾಗ್ನಿಯು	೨೩೮
ಬಂಡಣದೊಳೆನ್ನನೋಡಿಸಿ	೧೦೩	ಭ	
ಬನದೊಳಗೆ ನೋಡಿ ಪೊಸವೂ	೬೨೨	ಭಂಗುರಕೇಶಿ ನಲ್ಲನ	೯೪೫

ಆರಂಭದ ಶಬ್ದಗಳು	ಪದ್ಯ
ಭಂಗುರಭಿದುರಚ್ಛಿದುರ (೨೩೯)	೯೪೪
ಭಯದಿಂ ಕರ್ಚಿದುದೊಂದು ಪುಲ್	೮೩೫
ಭಯದಿಂಪಂ ಮುಳಿಸಿಂದಂ	೧೧೦
ಭಯಹೇತುಸಮುದ್ಭೂತಂ (೨೦೬)	೮೨೧
ಭವದಾಲೋಕನದಿಂದಾ	೭೦೫
ಭಾರತಿಯ ಕೊಂಕು (೨೧೧)	೮೩೭
ಭಾವಂ ವಿಭಾವಮೆನೆ (೨೦೨)	೭೯೮
ಭಾವಂ ಬಹಿರರ್ಥಸಮುದ್ (೨೦೧)	೭೯೭
ಭಾವಿಕಮೆಂದರೆಭರ್ (೧೮೭)	೭೭೬
ಭಾವಿಭವತ್ಕಾಲಂಗಳೊಳ್ (೮೮)	೩೯೦
ಭಾಷೆಯೊಳೇಕತ್ವಕ್ಕೆ (೨೯)	೧೨೮
ಭೂತವತಿವರ್ತಮಾನಂ (೮೪)	೩೭೪
ಮ	
ಮಕರಂ ಬಾಯ್ದೆಱೆದಂದದಿಂ	೮೨೨
ಮಚ್ಚರದ ಸೂಟಿಸುಂದಿನ	೪೮೯
ಮಡದೊಳೊಂದುವುದೆತ್ತ	೨೨೬
ಮಡಿಯಿಂ ಮಡಿವಳ್ತಿಯವೋಲ್	೩೩೧
ಮಡುಗಳೊಳಲರ್ದ ನೆಯ್ದಿಲ	೫೧೩
ಮಣಿಭವನಂಗಳ ರುಚಿಗಳ್	೫೧೪, ೭೧೦
ಮತಿ ನಿರ್ವೇದಾವಹಿತ್ಥ ಶ್ರಮ (೧೯೯)	೭೯೫
ಮತ್ತಮವರ್ಕಳ್ಕಂ (೮೧)	೩೬೦
ಮತ್ತರುಡಂಗೆಗೊಂಡು	೪೫೧
ಮತ್ತಹಸ್ತಿಗಳ ಮಸ್ತಕದಿಂ	೧೧೯
ಮತ್ತಾದ್ವಿತೀಯೆಗಂ (೨೩)	೧೦೭
ಮದನನ ಕೆಯ್ದುವೆಲ್ಲಿದ	೧೨೩
ಮದನನೃಪಾಲಾದೇಶದಿ	೫೬೫
ಮದಮಿಲ್ಲದಿಭಂ ಮಧು	೮೨೬
ಮದನವಿಭ್ರಮಲಕ್ಷ್ಮಿಗೆ	೧೭೪
ಮದಿರಾಮದಭರಪಾಟಲ	೬೬೩
ಮನಕಂ ಪಕ್ಕಲ್ಲದೆ	೭೧೫
ಮನದಿಂ ಬೇಗಂ ಮುಟ್ಟಿದ	೧೦೬
ಮನದೊಳ್ ಮುದಮಂ ಕೋಮಳ	೬೧೨
ಮನಮನೊನಲ್ಚಿವಂ	೮೬೦
ಮನಮೊಲ್ದಾತನ ಗಾಡಿಯಂ	೭೮೩
ಮನುವಿನ ಮಾರ್ಗಂ	೧೧೩
ಮನೆಮನೆದಪ್ಪದೆಯುಂ	೫೧೮
ಮಂತಣಕಂ ಚದುರರ್ ಗಡ	೫೩೫
ಮಂದರಶೈಲದಂತೆ ದಿವಿಜಾಪಗೆಯಂತೆ	೯೬೪
ಮಂದರಾಗಂ ಗುಣೋದ್ದಾಮಂ	೫೭೯
ಮರಕತತ್ವಿಷಮಾ ಯಮುನಾಜಳಂ	೯೨೨
ಮರಕತದ ಕಲ್ಲ ಕವಿಗಳೊ	೮೫೧
ಮರಣಮೆನಿಪ್ಪುದಾವುದು	೭೦೭
ಮರದುಱುಗಲ ಕಟ್ಟಲೆಯುಂ	೭೨೮
ಮರವಣಿಗೆಗಂ ಬೀಣೆಗಮಂತರ	೬೫
ಮರ್ಚದಿರು ಬಸನಮಂ	೩೭೮
ಮಱಸುಂದು ಸೂಟಿಸುಂದೆನೆ (೧೦೪)	೪೪೭
ಮಲರೆ ತಮದೊಡ್ಡು ಪಂಕಜ	೫೩೩
ಮಾಂಗಾಯ ಗೊಂಚಲೊಳ	೨೫೦
ಮಾಡಿದಪಂ ಖಳಸಮಿತಿಗೆ	೩೮೮
ಮಾಣಿಕದಂತೊಪ್ಪಿದನೀ	೫೨೬
ಮಾತೇನೋ ಸಂಶಯಂ (೧೬೭)	೭೦೮
ಮಾದೇವನುಮಾದೇವಿಗೆ	೨೫೪
ಮಾರ್ಪಿಡಿಯೆ ಮಾಣನೀ	೩೦೦
ಮಾಱಾಳಿಯುಮೋದಾಳಿಯು	೩೫೩
ಮಾವಿನ ಕೊನೆ ಮಾವಿನ ನನೆ	೪೮೭
ಮಿಗದಾ ಸ್ವಾರ್ಥದೊಳಂತವು (೮೬)	೩೮೩
ಮಿಗೆ ದಲ್ ವಲಂ ವೆಱಂ (೧೧೭)	೪೮೫
ಮಿಳಿರ್ವರುಣಧ್ವಜಂಗಳ	೮೮೪
ಮೀಱುಗುಮಲ್ಲಿ ದೇವರೆಡೆ	೩೯೮
ಮುಕುಲಿತವಿಲೋಚನಂ	೯೧೫
ಮುಕುಳನನಿಮಾಳನಂಗಳ್ (೨೩೩)	೯೧೪
ಮುಕ್ಕೊಡೆ ಪುಷ್ಪವೃಷ್ಟಿ	೨೬೪
ಮುಟ್ಟಿತು ಮುಟ್ಟದು ದಿವಮಂ	೩೯೫
ಮುತ್ತಯ್ಯ ಚಮರಿದೇನೆನೆ	೬೦೨
ಮುದಮೂರೂರಬಲಾಜನಕ್ಕೆ	೨೮೯
ಮುನಿಸಿಂ ಮೇಲೆತ್ತಿ ಬರ್ಪಂದಿನ	೩೬೪
ಮುನ್ನಿನ ಕಡನಂ ನೀಂ ಕುಡು	೬೦೩
ಮುಂಬಿಟ್ಟು ಪರೆದ ಕಟ್ಟಲೆ	೬೮೨

ಆರಂಭದ ಶಬ್ದಗಳು	ಪದ್ಯ
ಮುಳಿದಿರೆ ನಿಜವಲ್ಲಭೆಯುಂ	೬೫೪
ಮೃಗನಯನೆಯರೊಲವುಂ	೭೨೦
ಮೃಗಮದಕಲ್ಪಿತಪತ್ರ	೬೭೫
ಮೃಗರಾಜಂ ವಿಕ್ರಮದಿಂ	೬೯೩
ಮೃಡನಾ ಗಂಗಾಂಬುಧಾರಾ	೧೩೭
ಮೃಡನುಡುರಾಜಪನ್ನಗವಿರಾಜಿ	೯೩೬
ಮೃದುಹರಿತಪ್ರವಾಳ	೭೨೨
ಮೆಯ್ಯ ಮಸಿ ಕೊರಲ ಬಕ್ಕಳೆ	೩೦೯
ಮೆಯ್ವೆಸದಿಂ ಕೆಯ್ವೆಸದಿಂ	೬೭
ಮೇದಿನಿ ಸಾಗರಾಂತಮದು	೪೦೧
ಮೇರು ಕಲಂಕೆಯುಂ ಕದಡಿತೋ	೯೦೮
ಮೇಲುದಂ ಮುಱಿದು	೨೨೧
ಮೊಕ್ಕಳಮೆಸೆದಿರ್ಪಿನ ಮೊಳ	೧೧
ಮೊಗಮುಂ ತಾವರೆ ಕಣ್ಣ	೬೭೨
ಮೊದಲ ವಿಭಕ್ತಿಯೆ ವಾಕ್ಯದ (೩೩)	೧೪೦
ಮೊದಲೊಳನುಸ್ವಾರಂ (೨೫)	೧೧೫
ಮೊದಲೊಳೆ ವಿಕಾರಿ ನಾಕಾರ	೬೦೦
ಮೊದಲೊಳ್ ಚಪಲಂ ಮರ್ಕಟ	೧೯೨
ಮೊದಲೊಳ್ ಮುಂ ಪೇೞ್ದ (೧೧೨)	೪೬೮
ಮೊರೆದೆಱಗುವರಿಯ ಮಿಱುಗುವ	೨೫
ಯ	
ಯಮುನಾಪಗೆ ಸುರನದಿಯುಂ	೭೪೭
ಯ ಲ ರಹಿತವ್ಯಂಜನದೊಳ್ (೧೩)	೭೩
ಯೋಗಂ ಪಲವುಮಲಂಕೃತಿ (೧೮೫)	೭೭೦
ರ	
ರತಿ ಪರಿಹಾಸಂ ಶೋಕೋ (೧೯೮)	೭೯೪
ರಥಮೊಂದೆ ಗಾಲಿಯದು	೭೫೧
ರೀತಿಯಂ ರಸವಿಭಾಗಮುಮಂ	೮೪೨
ರೀತಿ ವಿನೂತವಸ್ತುಕೃತಿಗೊಪ್ಪುವ (೧೮೯)	೭೮೦
ರೂಪುಂ ಸೊಬಗುಮುಣ್ಮಂ	೫೮೬
ರೂಪರ್ಧನಾರಿಯಾಯ್ತು	೭೨೪
ಲ	
ಲತೆಯೊಳ್ ನಳಿತೋಳ್	೬೮೪
ಲ ರ ಡಗ್ರಹಣದೆ (೬)	೨೨

ಆರಂಭದ ಶಬ್ದಗಳು	ಪದ್ಯ
ಲಿಂಗವಚೋವಿಹಿತ (೧೬	
ವ	
ವಂಗಾಂಗಾಂಧ್ರ ಕಳಿಂ	
ವದನಾಬ್ಜಂ ಕರಪಲ್ಲವೆ	
ವದನಾಬ್ಜಾಸವಗಂಧ	
ವರಗೋಮೇದಕವಿಸ್ಫುರತ್	
ವರಸಂಧ್ಯಕ್ಷರದಂತಿರೆ	೧೪
ವರ್ಗಾಕ್ಷರಮೆಂತಂತೆ	೧೬
ವಸುಧೆಗೆ ಸಂದಹೀನರಿಪುವರ್ಗ	೬೪೪
ವಸ್ತುಸ್ವಭಾವಕಥನಂ (೧೪೬)	೬೦೬
ವಳಿಗಳಱಿಯೆ ಬಿಂಕಂಬೆತ್ತ	೬೧೧
ವಾತಂ ಪಿತ್ತಂ ಕಫಂ	೪೭೦
ವಾತಿ ಪರವೆಣ್ಗೆ ಶರಣಾ	೭೫೭
ವಾಮನನುಂ ರುದ್ರಟನುಂ	೯೬೧
ವಾಯುಸದಂತೆ ನೋಡು	೪೦೨
ವಾರಣೇಂದ್ರಮಣಿಹೇಮವರಸ್ತ್ರೀ	೧೩೩
ವಾರಿಜಂ ವದನಂ ಬೃಹತ್ಪುಲಿನಂ	೬೯೨
ವಾರಿಜಗಂಧಿ ವಿಭಾತಸಮೀರಂ	೬೪೫
ವಾರಿಧಿಯದೊಂದು ಗುಣ್ಪಂ	೩೪೫
ವಾಸರಪತಿ ಬಿಸುಗದಿರಿಂ	೨೩೭, ೭೩೪
ವಿಕಚಸರಸೀರುಹಂ	೭೦೩
ವಿಕಚಾಂಭೋರುಹಷಂಡಂ	೪೭೨
ವಿಕೃತಾಂಗವೇಷಭಾಷಾ (೨೦೪)	೮೦೯
ವಿಕ್ರಮವಹ್ನಿ ಮುನ್ನಳುರ್ದು	೪೮೮
ವಿದಳತ್‌ಕಿಂಶುಕಕಿಂಕಿರಾತ	೯೨೫
ವಿದಿತಾರ್ಥಂ ಶ್ಲೋದಕ್ಷನುಂ (೧೦೬)	೪೫೩
ವಿದ್ವಜ್ಜನಹೃದಯಂಗಮ (೨೧೨)	೮೩೮
ವಿಧುವಿಲ್ಲದಿರುಳ್ ಕೆಲದೊಳ್	೪೮
ವಿನಯಮನಿತ್ತುದಿಂದ್ರಿಯಜಯಂ	೬೨೮
ವಿನಯೋಪಚಾರವಚನ	೬೩೮
ವಿನಿಮೀಲಿತನೀಲಾಂಬುಜ	೫೨೦
ವಿನಿಮೀಳನ್ನೀಳಾಂಬುಜ	೯೧೬
ವಿನುತಕ್ರೌಂಚಾಚಳರಂ	೨೯೨
ವಿರಹದೊಳಾದ ವೇದನೆಯ	೩೬೭

ಆರಂಭದ ಶಬ್ದಗಳು	ಪದ್ಯ
ವಿಠಹಿ ಮೃಗಂ ದಲಂಜಿಸುವವಂ	೪೮೬
ವಿರೋಧಮುತ್ಪ್ರೇಕ್ಷೆವಿಭಾವನಾ (೧೭೨)	೭೨೬
ವಿಶಾಲಮಳಿನೋಗ್ರತುಂಗಗಿರಿ	೭೧೬
ವಿಳಸದಮೃತಾಂಶುಮಂಡಲ	೮೬೫
ವೀರಂ ಗೌರಂ ರೌದ್ರ (೨೧೦)	೮೩೬
ವೀರರಸಪ್ರದಚಾರಣ	೭೬೭
ವೀರರಸಂ ಬಗೆವರಿಸುಗು (೨೦೫)	೮೧೬
ವೀರಶ್ರೀಕಾಂತೆಯಂ ತಾಳೆ	೫೭೨
ವೀರಶ್ರೀ ವಿಜಯನ ಕೆಯ್	೭೮
ವೈದರ್ಭ ಗೌಡ ಮಾರ್ಗ (೧೨೭)	೫೨೨
ವ್ಯತಿಕೀರ್ಣಪದಕ್ರಮ (೧೦೮)	೪೫೬
ವ್ಯತಿರೇಕಮುಭಯಸಾಮ್ಯ (೧೫೫)	೬೪೨
ವ್ಯರ್ಥಂ ಪೂರ್ವಾಪರವಿಹಿತಾರ್ಥ (೧೧೧)	೪೬೫
ವ್ಯವಹಿತಮೇಕಾರ್ಥಂ (೧೦೭)	೪೫೫
ವ್ರತಕೆಂತಾಯಿತ್ತಾಗಳಿಂತೀ	೮೦೮
ಶ	
ಶಯುದಂಷ್ಟ್ರಾವಿಷದಂಶವೊಂದೆ	೩೪೯
ಶರದದೊಳೊನಲ್ದು ಬಿಡುತುಂ	೫೦೦
ಶರದಂಬುದಮುಂ ಗಂಗಾ	೬೭೩
ಶರ ಶೂಲ ಚಾಪ ಚಕ್ರಾಸಿ (೧೩೯)	೫೬೯
ಶಶಧರಲಕ್ಷ್ಮದೊಳಕ್ಕುಂ (೨೩೧)	೯೦೧
ಶಿಖಿ ಬರ್ಹಂ ಸರ್ಪಪ	೫೬೧
ಶೃಂಗಾರಾದಿಗಳಪ್ಪ (೧೯೭)	೭೯೩
ಶ್ರೀ ತನ್ನೆಂದಿನ ರೂಪೆ	೮೧೦
ಶ್ರೀಯ ಜವ್ವನದ ರೂಪಿನ	೩೪೧
ಶ್ರೀರಾಮಾಧಾಮನಾಮಂ	೫೮೦
ಶ್ರೀವರ್ಧಮಾನನಾಸತ	೧
ಶ್ರುತದೇವೀಮುಕರಂದಕಲ್ಪಲಪನಂ	೭೭೯
ಶ್ರುತವಾರಿನಿಧಿಯ ಪಾರಮ	೪೨೫
ಶ್ರುತಿಪದ್ಧತಿವೆರಸು	೨೦
ಶ್ರುತಿವಿರಸಪದಕ್ಷೇಪ (೧೦೩)	೪೪೩
ಶ್ರೇಯಂ ಶ್ರೇಯಂ ದ್ವಿಷದವ	೫೪೯
ಶ್ವಯುವಾಧ್ವನ್ ಸಖಿಯನ್ (೪೨)	೧೮೨
ಶ್ವಾನಂಗಳ್ ಗಂಧಮಾರ್ತಂಡನ	೧೮೩
ಸ	
ಸಂಸಾರಕ್ಕೇಕಸಾರಂ ಬಿದಿಯ	೬೯೫
ಸಂಸಾರವಿಷಮವಾರಿಧಿ	೫೭೩
ಸಕಲಕಲಾವಿದಂ ಮದವಿದೂರ	೯೬೨
ಸಕಲಬುಧಸಮಿತಿ	೩
ಸಕಲಾರ್ಥಿಮನೋರಥದಾಯಕಂ	೭೦೩
ಸಕಲುಷವಿಕೃತಾಶಯರೊಳ	೭೪೫
ಸಂಗತನಿಜಹಸ್ತಕ	೯೪೬
ಸಂಗತಸತ್ತ್ವರ್ ಕುರು	೧೪೧
ಸಂಗತಿಯಿಂದಂ ನಾಮಪದಂ (೪೫)	೧೯೯
ಸತ್ತ್ವರಜಸ್ತಮೋಗುಣ	೪೬೯
ಸದೃಶಾಕ್ಷರವಿನ್ಯಾಸಂ (೧೩೩)	೫೫೫
ಸಂತಂ ಕಿಟ್ಟೈಱಿಗಳೊಳ್	೨೧೩
ಸಂತಮಿರ್ಪುದೆ ನವಗ್ರಹಮಾಶಾ	೧೫೧
ಸಂದ ಸರ್ವಗತಂ ಧರ್ಮ	೫೪೦
ಸಂದಿಸಿರೆ ಕಂದಮುಂ (೨೪೩)	೯೫೨
ಸಂದಿಸೆ ಗಱಿ ಸಂದಿಸೆ	೭೪೨
ಸಬಳಿಕೆಯಿಂ ಪಾಱಿಯ	೫೪೪
ಸಮಕಾಲಮಪ್ಪುವೆರಡ (೧೪೯)	೬೧೩
ಸಮನಿಸಿ ಬಿದಿವಸದಿಂದಂ (೧೫೬)	೬೫೨
ಸಮಭಾವಪ್ರಭವಂ (೨೦೭)	೮೨೮
ಸಮಮೆಂಬುದು ಬಂಧದೊಳ (೧೨೦)	೫೦೧
ಸಮಱದೆ ಕೊಂಕಿ ನೀಳ್ದ	೭೩೭
ಸಮವಯಸಂ ಸಮಸತ್ತ್ವಂ	೧೮೬
ಸಮವೃತ್ತಸಂಧಿಲಕ್ಷಣ	೬೭೦
ಸಮಸಂಶ್ಲಿಷ್ಟಾರ್ಥ (೧೧೯)	೫೦೦
ಸಮಸುತಿಯೊಳೊಂದಿ	೨೪೫
ಸಮುಚಿತಕೃತಿದೋಷದೂಷ್ಯ	೪೯೬
ಸಮುಚಿತಶಬ್ದಸ್ಮೃತಿ	೫
ಸಂಬಂಧದ ಸಂಬಂಧದೊಳಂ (೨೩೮)	೯೪೧
ಸರಂ ಸರಂ ಕಂತುವ	೫೪೧
ಸರಣಾರುಮೊಳರೆ	೮೩
ಸರಭಸತೆಯಿಂ ಮತ್ತೊಂದಜ್ಞಾನ	೯೬೩
ಸರಭಸದೆ ಕಾಲಯಮ	೫೩೦

ಆರಂಭದ ಶಬ್ದಗಳು	ಪದ್ಯ
ಸರಯೂನದ್ಯರವಿಂದ	೮೪೮
ಸರಸತಿಗಂ ಸಿರಿಗಂ	೧೬೨
ಸರಳತರಧವಳಸುಸ್ನಿಗ್ಧ	೬೬೨
ಸರಸಿಜಷಂಡದ ತೆರೆಗಳ್	೮೫೯
ಸರಿಗೆಗೆ ಕೊರಲ್ ಕೊರಲ್ಗಂ	೬೫೯
ಸರಿವಱಿಗೆಗಱಿವಂತಿರೆ	೧೯೪
ಸಲಿಲಾಶ್ರಯಮಾತ್ರದೊಳಂ (೨೧೮)	೮೪೬
ಸವನಿಕಮಾಕಾರಂ (೯)	೩೭
ಸವಸಂದ ಮುಖಂ ಪ್ರತಿಮುಖ (೨೪೮)	೯೫೭
ಸಸಿಯೆಟ್ಟರಮಂ ಕಂಡೊಂ	೮೭೭
ಸಾಧನಮುಂ ಸಾಧ್ಯ (೧೫೩)	೬೩೪
ಸಾರಂ ಸಂಸಾರದೊಳಬಲಾರತ್ನಂ	೬೬೦
ಸಾರಲ್ ಸಲ್ಲದು ಪನ್ನೆರಟ್	೨೭೭
ಸಾರವಿಚಾರಬಂಧುರ	೪೯೭
ಸಾಸಿರಮಿರೆ ಮುಂದೊತ್ತಿ (೬೨)	೨೭೮
ಸಾಸಿರಯೋಜನಮುಮುರ್ದು	೨೭೪
ಸಾಸಿರ್ವರ್ ವನಿತೆಯರ್ಗೆ	೨೮೧
ಸಿಡಿಲಂ ಪೊಸೆವುದು ಶೇಷನ	೪೧೫
ಸಿತಪಕ್ಷದೊಳುಳ್ಳೊಡಮುಂ (೨೨೩)	೮೭೩
ಸಿರಿಯೊಡೆಯಂ ಸಿರಿಯುಳ್ಳಂ	೩೩೭
ಸೀತಾರಾಮಸಮೀಪಸ್ಥಂ	೫೮೮
ಸುಕವಿಪ್ರಕರಕ್ಕೆ ವಿನೋದ (೧೪೨)	೫೯೩
ಸುಗ್ಗಿಯ ಪುಗಿಲೊಳ್	೮೯೨
ಸುಂದರಾಕಾರಸಂಪನ್ನ	೫೭೧
ಸುಯ್ಯ ನಿಡುಪುಡುಗದಿರೆಯುಂ	೩೧೧
ಸುರಕರಿಯಿಲ್ಲಿಯಲ್ಲಿ	೩೯
ಸುರತರುನಂದನಂಗಳಿರ	೧೩೦
ಸುರಪತಿಯಂತೆ ವಿಸ್ಫುರಿತ	೩೩೮
ಸುರಭಿಶರಂಗಳಂ ನಯನದೊಳ್	೯೧೩
ಸುರಭಿ ಸಮಯದೊಳೆ ಕೋಕಿಳ (೨೨೮)	೮೯೧
ಸುರರಮಣೀರಮಣೀಯ	೫೪೨
ಸುರರೊಸೆಯೆ ಸಕಳ	೪೧೯
ಸುರರೊಳಗೆಂತು ವಜ್ರಿ	೧೨೬
ಸುರಿಗೆ ಶುಭಂಕರಗತ್ತಿಗೆ	೬೬
ಸೊಗಯಿಪ್ಪೊಳ್ಪೊಡೆ ನೋಯೆ	೮೧೧
ಸೊಗಯಿಸಿ ತೋರ್ಪ ಸೋಗೆ	೬೦೯
ಸೊಗಯಿಸಿದುದು ಕಾರ್ಗಾಲದ	೬೪೯
ಸೊಗಯಿಸುಗುಮೆ ಪಲ್ಲಿಲಿವಾಯ್	೨೫೭
ಸೊವಡೊಂದೊಯ್ಯನೆ ಬಂದು	೩೪
ಸೋಡಂಬಾಡಂ ಕರಿಯ ಮುಗಿಲಂ	೫೫೭
ಸೋರ್ಮುಡಿ ಸೋರ್ದು ಪಿಂದಲೆಯೆ	೮೨೩
ಸ್ತ್ರೀಪುಂಸರತಿಸಮುತ್ಥ (೨೦೩)	೭೯[illegible]
ಸ್ತ್ರೀಯೆಂಬನಾಥೆಯೆಂಬ	೪೦
ಸ್ಥಾನಂ ಕ್ರಿಯೆಯೆಂಬಿವಱೊಳ್ (೧೩೭)	೫೬೬
ಸ್ಥಾನೋಪವರ್ಣನಂ (೧೮೮)	೭೭೭
ಸ್ಮರನ ಶರಂಗಳಿವೆನೆ	೭೪೩
ಸ್ವಗತಾನಲಸನ್ಮಣಿ	೭೬೯
ಸ್ವಭಾವಗಂಭೀರನಲಂಘ್ಯವೈಭವಂ	೭೭೧
ಸ್ವರದಿಂ ಯ ಲ ದಿ (೧೨)	೬೩
ಸ್ವರದೊಳಗನೇಕಮಾತ್ರ (೨)	೧೦
ಸ್ವರಮುಮುರ್ದಿರೆ ಮುಂದೇಕ (೧೪)	೭೯
ಸ್ವರಮಾದಿಯಪ್ಪವವು (೫೦)	೨೧೯
ಸ್ವರಮಿದಿರೊಳಕಾರಾಂತ (೨೨)	೧೦೪
ಸ್ವರಮಿರೆ ಪರದೊಳ್ (೮)	೩೨
ಸ್ವರಮೊಂದುಂ ವ್ಯಂಜನ (೧)	೭
ಸ್ವರಸಂಜ್ಞಕಂಗಳ (೩೧)	೧೩೪
ಸ್ವೇದಂ ವೈವರ್ಣ್ಯಂ ಸ್ವರ (೨೦೦)	೭೯೬
ಹ	
ಹರಸಗಮಿಂತಿದು	೧೦೦, ೧೦೯
ಹರಹಾಸದ್ಯುತಿಯಂ ನಿರಾಕರಿಸಿ	೮೬೩
ಹರಿತಾಸಿತ ನೀಳ (೨೩೪)	೯೨೧
ಹರಿದಾಂತಂ ಬಲಂ ಬೆರ್ಚಿ	೫೫೦
ಹರಿ ನುಡಿಯೆ ನುಡಿಯಿ	೪೦೩
ಹರಿ ಪೊಯ್ಯೆ ಬಿರಿದ	೪೩೩
ಹಸಿತಯಶಃಪ್ರಭೃತಿ (೨೨೧)	೮೬೧
ಹಸ್ತಾವಚಯದಿನುರು	೫೦೪
ಹಿಮಕುಮುದ ಕುಂದಶಶಿ	೭೪೯
ಹಿಮವದಗೇಂದ್ರಮೆ ಭೂರ್ಜ (೨೨೭)	೮೮೮
ಹಿಮವದ್ಗಿರಿಕಟಕ	೯೨೬
ಹೇತುಮುದಾಖ್ಯಾನಂ (೧೫೨)	೬೨೫
ಹೋತೃವೆನಾನಧ್ವರಿಯಯ್	೧೭೭

ಪರಿಶಿಷ್ಟ ೨

ಪಾರಿಭಾಷಿಕ ಶಬ್ದಗಳ ಅನುಕ್ರಮಣಿಕೆ

[ಸೂಚನೆ:— ಕಂಸದೊಳಗಿನ ಸಂಖ್ಯೆಗಳು ಸೂತ್ರಸಂಖ್ಯೆಗಳನ್ನೂ ಉಳಿದುವು ಪುಟ ಸಂಖ್ಯೆಗಳನ್ನೂ ತೋರಿಸುತ್ತವೆ. ಅರ್ಥಾಲಂಕಾರಗಳ ಕೆಳಗೆ ಕಂಸದಲ್ಲಿ ಹಾಕಿದ ಅಲಂಕಾರಗಳನ್ನು ನಾಗವರ್ಮನು ಹೇಳಿಲ್ಲವೆಂದು ತಿಳಿಯಬೇಕು. – ಈ ಚಿಹ್ನವು ಒಂದು ಶಬ್ದದ ಮುಂದೆ ಇದ್ದರೆ ಅದರ ಶಿರೋಭಾಗದಲ್ಲಿದ್ದ ಶಬ್ದವನ್ನು ಅದಕ್ಕೆ ಕೂಡಿಸಿಕೊಳ್ಳಬೇಕೆಂದು ತಿಳಿಯುವುದು. ಉದಾ: 'ಅರ್ಥ–'ವನ್ನು 'ಅರ್ಥಾಲಂಕಾರ' ಎಂದು ಓದಿಕೊಳ್ಳತಕ್ಕದ್ದು.]

ಅಗುರು ನೋ. ಹ್ರಸ್ವ (೫೦) ೫೨
ಅಧ್ಯವಸಾಯ ೨೯೮
ಅಧ್ಯಾರೋಪ (೩೪) ೩೫, ೨೪೩
ಅನನುನಾಸಿಕ(=ನಿರನುನಾಸಿಕ) (೫) ೫, ೨೨೭, ೨೭೮
ಅನುಕರಣ (=ಅನುಕೃತಿ) (೬, ೬೪, ೧೦೫) ೬, ೬೬, ೧೦೨, ೨೫೪
ಅನುಗಾಮಿಧರ್ಮ ೨೯೪
ಅನುನಾಸಿಕ (೫) ೫, ೨೨೭, ೨೨೮
ಅನುಸ್ವಾರ (೧೯, ೨೫) ೨೫, ೨೮
ಅನೇಕವಚನ ನೋ. ವಚನ: ಬಹು
ಅನ್ಯೋಕ್ತಿ ನೋ. ಪುರುಷ: ಪ್ರಥಮ(೩೬) ೩೭
ಅನ್ವಿತಾರ್ಥ (೧೨) ೧೭
ಅಪಭ್ರಂಶ (೭೧) ೭೫
ಅಪ್ರಕೃತ, ಅಪ್ರಸ್ತುತ, ಅಪ್ರಾಕರಣಿಕ ೨೯೩
ಅಭಂಗಶ್ಲೇಷ ೩೧೮
ಅಭಿನಯ (೯೯) ೯೮
ಅಭಿಲಾಷೆ ೭೯
ಅರೆಮಾತ್ರಿಕೆಗಳ್ (೧) ೩, ೨೨೬
ಅರ್ಥ (೯೮, ೯೯) ೯೮
ಅರ್ಥದೋಷ ನೋ. ದೋಷ ೨೬೬, ೨೬೭
ಅಲಂಕಾರ: ೨೭೩
ಅರ್ಥ– ವಿಭಾಗಗಳು: (೧೪೫) ೧೩೬
ಅತಿಶಯ (೧೪೫,೧೭೧,೧೭೨) ೧೩೬, ೧೬೦,೧೬೧
ಔಪಮ್ಯ (೧೪೫, ೧೫೯, ೧೬೦)೧೩೬, ೧೪೮
ವಾಸ್ತವ (೧೪೫, ೧೪೬, ೧೪೭) ೧೩೬
ಶ್ಲೇಷ (೧೪೫, ೧೭೮, ೧೭೯) ೧೩೬, ೧೬೬
ಅರ್ಥಾಲಂಕಾರಗಳು: ೨೭೯
(ಅತದ್ಗುಣ) ೩೨೫
(ಅತಿಶಯೋಕ್ತಿ) ೨೯೭, ೩೧೬, ೩೨೫
(ಅತ್ಯುಕ್ತಿ) ೩೨೬
ಅಧಿಕ (೧೮೨) ೧೬೮, ೩೨೦
(ಅಧಿಕ) ೩೨೧, ೩೨೬
(ಅನನ್ವಯ) ೨೯೭, ೩೨೬
(ಅನುಗುಣ) ೩೨೬
(ಅನುಮಾನ) ಅನುಮಿತಿ (೧೫೩) ೧೪೨, ೨೮೬ ,೨೮೭
(ಅನ್ಯೋಕ್ತಿ) ನೋ. ಪರಾಖ್ಯಾನ ೩೦೨
(ಅನ್ಯೋನ್ಯ) ನೋ. ಪರಸ್ಪರ ೨೯೨

ಅಪಹ್ನುತಿ (೧೬೭) ೧೫೭, ೨೯೭, ೩೦೬
ಕೈತವ– ೩೦೭
ಛೇಕ– ೨೮೯, ೩೦೭, ೩೩೨
ಪರ್ಯಸ್ತ– ೩೦೭
ಭ್ರಾಂತ– ೩೦೭
ಶುದ್ಧ– ೩೦೭
ಹೇತು– ೩೦೭
ಅಪ್ರಸ್ತುತಪ್ರಶಂಸೆ(೧೭೦)೧೬೦, ೨೯೭, ೩೦೨, ೩೦೯, ೩೧೦
ಅರ್ಥಾಂತರನ್ಯಾಸ(೧೭೦)೧೬೦, ೩೦೩, ೩೧೦
(ಅರ್ಥಾಪತ್ತಿ) ೩೨೬
ಅವಯವ (೧೮೧) ೧೬೭, ೩೨೦
ಅವಿಶೇಷ (೧೮೨) ೧೬೮, ೩೨೧
(ಅಸಂಗತಿ) ೩೧೭, ೩೨೭
ಅಸಂಭವ (೧೮೩) ೧೬೯, ೩೨೧
ಅಹೇತುಕ (೧೭೫) ೧೬೪, ೩೧೬
ಆಕ್ಷೇಪ (೧೬೪) ೧೫೫, ೩೦೧
ಆವಳಿ,–ಆಪೋಹ (೧೫೧) ೧೩೯, ೨೮೫
ಆವೃತ್ತಿ (–ದೀಪಕ) (೧೫೬) ೧೪೫, ೨೯೧
ಆಶಿ (೧೮೬) ೧೭೦, ೩೨೪
ಉತ್ತರ (೧೬೬) ೧೫೬, ೩೦೪
(ಉದಾತ್ತ ಅಥವಾ ಉದಾರ) ೩೨೭
(ಉದಾಹರಣ) ೩೦೩, ೩೨೭
ಉತ್ಪ್ರೇಕ್ಷೆ (೧೭೩) ೧೬೧, ೨೯೭, ೩೧೩
ಫಲ– ೩೧೪
ವಸ್ತು– ಅಥವಾ ಸ್ವರೂಪ– ೩೧೪
ಹೇತು– ೩೧೪
(ಉನ್ಮೀಲಿತ) ೩೨೭
ಉಪಮೆ: (೧೬೧) ೧೪೮, ೨೯೩, ೨೯೭
ಪೂರ್ಣ– ೨೯೪
ಲುಪ್ತ– ೨೯೪
ಅನ್ಯೋನ್ಯ– ನೋ. ಉಪಮೇಯೋಪಮೆ ಸಹ ೧೪೯, ೨೯೫
ಕಲ್ಪಿತ– (ಅಥವಾ ಅಭೂತ) ೧೫೦, ೨೯೫, ೩೧೪
ಧರ್ಮ– ೧೪೮, ೨೯೫
ಪ್ರತ್ಯಯ– ೧೫೦, ೨೯೬
ಬಹು– ೧೫೦, ೨೯೫
ಮಾಲಾ– ೧೫೦, ೨೯೫
ವಸ್ತು– ೧೪೯, ೨೯೫
ವಾಕ್ಯ– ೧೫೦, ೨೯೬
ವಿಪರ್ಯಾಸ– ೧೪೯, ೨೯೫
ಶ್ಲೇಷ– ೧೪೯, ೨೯೫
ಸಮಾಸ– ೧೫೧, ೨೯೬
ಹೇತು– ೧೪೯, ೨೯೫
(ಉಪಮೇಯೋಪಮೆ) ೨೯೫, ೨೯೭, ೩೨೭
(ಉಲ್ಲೇಖ) ೨೯೭, ೩೨೭
ಊರ್ಜಸ್ವಿ (೧೮೬) ೧೭೦, ೩೨೩
(ಏಕಾವಳಿ) ನೋ. ಆವಳಿ ೨೮೫
(ಕಾರಣಮಾಲೆ) ೨೮೬, ೩೨೮
(ಕಾವ್ಯಲಿಂಗ) ೨೮೬, ೩೧೦, ೩೧೧, ೩೨೮
ಜಾತಿ: (ಕ್ರಿಯಾ–, ಗುಣ–, ಜಾತಿ–, ದ್ರವ್ಯಸ್ವಭಾವಾಖ್ಯಾನ) (೧೪೮) ೧೩೬, ೨೮೦
ತತ್ತ್ವ (೧೮೦) ೧೬೭, ೩೧೯, ೩೨೦
ತದ್ಗುಣ (೧೭೬) ೧೬೫, ೩೧೬
ತಿರೋಹಿತ (೧೭೪) ೧೬೩, ೩೧೫
(ತುಲ್ಯಯೋಗಿತೆ) ನೋ. ಸಮಯೋಗ ೨೯೭, ೩೦೮
ದೀಪಕ: (೧೫೫) ೧೪೩, ೨೯೦, ೨೯೭, ೩೦೯
ಕಾರಕ– ೧೪೪, ೨೯೦
ಕ್ರಿಯಾ– ೧೪೫, ೨೯೦
ದೃಷ್ಟಾಂತ (೧೬೬) ೧೫೬, ೨೯೭, ೩೦೨, ೩೦೩, ೩೧೦, ೩೧೧
ನಿಗೂಹನ (೧೫೪) ೧೪೩, ೨೮೯
(ನಿದರ್ಶನ) ೨೯೭, ೩೦೩, ೩೨೮
ನಿಮೀಳನ (ಅಥವಾ ಮೀಲಿತ) (೧೫೮) ೧೪೭, ೨೯೩, ೩೧೫, ೩೩೨

(ನಿರುಕ್ತಿ) ೩೨೮
ಪರಸ್ಪರ (೧೫೭) ೧೪೭, ೨೯೨
ಪರಸ್ಪರಾಸಂಗತಿಕ (೧೭೬)೧೬೫, ೨೯೭, ೩೧೬
ಪರಾಖ್ಯಾನ (೧೬೫) ೧೫೫, ೩೦೨
(ಪರಿಕರ): ೩೨೮
(-ಅಂಕುರ) ೩೨೮
(ಪರಿಣಾಮ) ೨೯೭, ೩೨೮
(ಪರಿಸಂಖ್ಯೆ) ೩೨೯
ಪರಿವೃತ್ತಿ (೧೫೦) ೧೩೮, ೨೮೨
ಪರ್ಯಾಯ (-ಉಕ್ತ)(೧೫೧) ೧೩೯, ೨೮೩
(ಪರ್ಯಾಯ) ೨೮೪
ಪೂರ್ವ (೧೭೫) ೧೬೪, ೩೧೫
(ಪೂರ್ವರೂಪ) ೩೨೯
ಪ್ರತಿವಸ್ತೂಪಮೆ(೧೭೩) ೧೫೨, ೨೯೭, ೩೦೩
ಪ್ರತೀಪ (೧೬೯) ೧೫೯, ೨೯೫, ೨೯೭, ೩೦೮
(ಪ್ರತ್ಯನೀಕ) ೩೨೯
ಪ್ರೇಯ (-ಸ್ವತ್) (೧೮೬) ೧೭೦, ೩೨೩
ಭಾವ (೧೪೯) ೧೩೭, ೨೮೧
(ಭಾವಶಬಲತೆ) ೩೩೦
(ಭಾವಸಂಧಿ) ೩೩೦
ಭಾವಿಕ (೧೮೭, ೧೮೮) ೧೭೧, ೩೨೪
(ಭಾವೋದಯ) ೩೩೦
ಭ್ರಮ, (ಭ್ರಾಂತಿ, ಭ್ರಾಂತಿಮದ,
ಭ್ರಾಂತಿಮಾನ್)(೧೭೭)೧೫೭, ೨೯೭, ೩೦೫
(ಮೀಲನ) ನೋ. ತಿರೋಹಿತ ೩೧೫
ಯಥಾಕ್ರಮ (-ಸಂಖ್ಯೆ)(೧೫೦)೧೩೮, ೨೫೨
(ರಸವತ್) ೩೨೩
ರೂಪಕ: (೧೬೩) ೧೫೨, ೨೯೭, ೨೯೮, ೩೨೯
ಅಭೇದ- ೨೯೯
ಅಸಮಸ್ತ- ೧೫೨, ೨೯೯
ತಾದ್ರೂಪ್ಯ- ೨೯೯
ನಿರವಯವ- (ನಿರಂಗ-) ೧೫೩, ೨೯೯
ಪರಂಪರಿತ- ೨೯೯
ಮಾಲಾ- ೧೫೪, ೩೦೦
ರೂಪಕ- ೧೫೪, ೩೦೦
ವಿಭಕ್ತ- ೧೫೩, ೨೯೯
ವಿಶೇಷಗುಣ- ೧೫೪
ಸಕಲ- ೧೫೩, ೨೯೯
ಶ್ಲಿಷ್ಟ- ೨೯೯
ಸಮಸ್ತ- ೧೫೩, ೨೯೯
ಸಾವಯವ- (ಸಾಂಗ-) ೧೫೩, ೨೯೯
ಹೇತು- ೧೫೪, ೩೦೦
(ಲಲಿತ) ೩೩೦
ಲವ ಅಥವಾ ಲೇಶ(೧೯೪) ೧೪೩, ೨೮೮, ೨೮೯
ವಕ್ರೋಕ್ತಿ (೧೯೩) ೧೬೯, ೩೨೨
(ವಕ್ರೋಕ್ತಿ) ೩೨೨, ೩೩೦
(ವಿಕಲ್ಪ) ೩೩೦
(ವಿಕಸ್ವರ) ೩೧೧, ೩೩೦
(ವಿಚಿತ್ರ) ೩೩೦
(ವಿನೋಕ್ತಿ) ೩೩೧
ವಿಭಾವನೆ (೧೭೪) ೧೬೩, ೩೧೪, ೩೧೭
ವಿರೋಧ (೧೭೩) ೧೭೧, ೩೧೧, ೩೧೭
ವಿರೋಧಾಭಾಸ (೧೯೧) ೧೬೭, ೩೧೨, ೩೨೦
(ವಿಶೇಷ) ೩೩೧
(ವಿಶೇಷಕ) ೩೩೧
ವಿಶೇಷೋಕ್ತಿ (೧೭೭) ೧೬೫, ೩೧೬, ೩೧೭
(ವಿಷಮ) ನೋ. ಪರಸ್ಪರಾಸಂಗತಿಕ ೨೯೭
೩೧೬, ೩೨೧
ವ್ಯತಿರೇಕ (೧೫೫) ೧೪೩, ೨೮೯, ೨೯೭
ವ್ಯಪದೇಶ (೧೭೮) ೧೫೮, ೩೦೭
(ವ್ಯಾಘಾತ) ೩೩೧
ವ್ಯಾಜಸ್ತುತಿ (೧೮೦) ೧೬೭, ೩೧೯
(ವ್ಯಾಜನಿಂದೆ) ೩೩೨
(ವ್ಯಾಜೋಕ್ತಿ) ೨೮೯, ೩೩೨
ಶ್ಲೇಷ: ಅರ್ಥ-, ಶಬ್ದ- (೧೭೧)೧೬೬, ೩೧೯
ಸಂಶ್ಲೇಷ (೧೮೫) ೧೭೦, ೩೨೨
ಸಂಸೃಷ್ಟಿ ೩೨೨

ಪಾರಿಭಾಷಿಕ ಶಬ್ದಗಳ ಅನುಕ್ರಮಣಿಕೆ

ಸಂಕರ ೩೨೨
(ಸಂದೇಹ,ಸಸಂದೇಹ) ಸಂಶಯ (೧೬೭) ೧೫೭, ೨೯೭, ೩೦೫
(ಸಮ) ೩೩೨
ಸಮಯೋಗ (೧೬೯) ೧೫೯, ೨೯೭, ೩೦೮
ಸಮಾಸೋಕ್ತಿ (೧೬೪) ೧೫೫, ೨೯೭, ೩೦೦, ೩೧೦
(ಸಮಾಧಿ) ಸಮಾಹಿತ (೧೫೬) ೧೪೫, ೨೯೦
(ಸಮಾಹಿತ) ೨೯೧, ೩೨೩,೩೩೨
ಸಮುಚ್ಚಯ (೧೫೨) ೧೪೦, ೨೮೬
ಸಹೋಕ್ತಿ (೧೪೯) ೧೩೭, ೨೮೧, ೨೯೭
(ಸಾಮಾನ್ಯ) ೩೩೨
ಸಾಮ್ಯ (೧೬೫) ೧೫೫, ೩೦೨
ಸಾರ (೧೫೭) ೧೪೭, ೨೯೨
ಸೂಕ್ಷ್ಮ (೧೫೩) ೧೪೨, ೨೮೮
ಸ್ಮರಣ (೧೬೮) ೧೫೮, ೨೯೭, ೩೦೭
(ಸ್ವಭಾವೋಕ್ತಿ) ನೋ. ಜಾತಿ ೨೮೦
ಹೇತು: (೧೫೨) ೧೪೦, ೨೮೫
ಅಭಾವ- ೧೪೧
ಕಾರಕ- ನೋ. ಕಾವ್ಯಲಿಂಗ ೧೪೦, ೨೮೬
ಜ್ಞಾಪಕ- ೧೪೦, ೨೮೬
ಪರಂಪರಿತ- (ನೋ. ಕಾರಣಮಾಲೆ) ೧೪೧, ೨೮೬
ಶಬ್ದ-: (೧೨೮, ೧೨೯) ೧೧೯
ಅನುಪ್ರಾಸ (೧೨೯,೧೩೩,೧೩೭) ೧೧೯,೧೨೫, ೧೨೭, ೨೭೭
ಚಿತ್ರ: (೧೨೯, ೧೩೮ ರಿಂದ ೧೪೧)೧೧೯, ೧೨೭ ರಿಂದ ೧೩೨, ೨೭೮
ಅಕ್ಷರಚ್ಯುತಕ (೧೪೦) ೧೨೮, ೧೩೦
ಅತಾಲವ್ಯ (೧೪೦) ೧೨೮, ೧೩೦
ಅರ್ಧಭ್ರಮಣ (೧೩೯) ೧೨೮, ೧೩೦
ಅಸಿ-ಖಡ್ಗ (೧೩೯) ೧೨೮, ೧೨೯
ಏಕಾಕ್ಷರ (೧೪೦) ೧೨೮, ೧೩೧
ಕಾರಕಗೋಪ (೧೪೧) ೧೩೧, ೧೩೨
ಕ್ರಿಯಾಗೋಪ (೧೪೧) ೧೩೧, ೧೩೨
ಗತಪ್ರತ್ಯಾಗತ (೧೪೧) ೧೩೧, ೧೩೨
ಗೂಢಚತುರ್ಥ (೧೪೧) ೧೩೧, ೧೩೨
ಗೋಮೂತ್ರಿಕೆ (೧೩೯) ೧೨೮, ೧೨೯
ಚಕ್ರ (೧೩೯) ೧೨೮, ೧೨೯
ಚಾಪ (೧೩೯) ೧೨೮
ಚ್ಯುತದತ್ತಾಕ್ಷರ (೧೪೧) ೧೩೧, ೧೩೨
ದ್ವ್ಯಕ್ಷರಿ (೧೪೦) ೧೨೮, ೧೩೧
ನಿರೋಷ್ಠ್ಯ (೧೪೦) ೧೨೮, ೧೩೧
ಪುಷ್ಕರ-ಪದ್ಮ (೧೩೯) ೧೨೮, ೧೩೦
ಬಿಂದುಚ್ಯುತಕ (೧೪೦) ೧೨೮, ೧೩೦
ಮುರಜ (೧೩೯) ೧೨೮, ೧೨೯
ಶರ (೧೩೯) ೧೨೮
ಶೂಲ (೧೩೯) ೧೨೮
ಸರ್ವತೋಭದ್ರ (೧೩೯) ೧೨೮
ಪೇಳಿಕೆ: (೧೪೨, ೧೪೩) ೧೩೩, ೨೭೮
ಉಟಿವು (೧೪೩) ೧೩೩, ೧೩೪
ಒನರ್ಗಡಿ (೧೪೩) ೧೩೩
ನಾಮಾಂತರಿತ (೧೪೩) ೧೩೩, ೧೩೪
ನುಸುಳ್ (೧೪೩) ೧೩೩
ಭಾಮೆ (೧೪೩) ೧೩೩
(ಅ) ಸ್ಪಷ್ಟಾರ್ಥ (೧೪೩) ೧೩೩, ೧೩೪
ಯಮಕ: (೧೨೯, ೧೩೦) ೧೧೯, ೨೭೬
ಅವ್ಯಪೇತ (೧೩೦) ೧೧೯, ೨೭೭
ಆವಳಿ (೧೩೧) ೧೨೩, ೨೭೭
ದುಷ್ಕರ (೧೩೨) ೧೨೪
ಪರಿವೃತ್ತ (೧೩೧) ೧೨೩, ೨೭೭
ವರ್ಣಾವೃತ್ತಿ ೧೨೩, ೨೭೭
ವ್ಯಪೇತಾವ್ಯಪೇತ ೧೨೩, ೨೭೭
ವ್ಯವಹಿತ (೧೩೦) ೧೧೯
ಸಂದಷ್ಟ (೧೩೧) ೧೨೩, ೨೭೭
ಸಮುದ್ಗ (೧೩೧) ೧೨೩, ೨೭೭

ವಕ್ರೋಕ್ತಿ: ಕಾಕುವಕ್ರೋಕ್ತಿ (೧೨೯, ೧೪೪) ೧೧೯, ೧೩೪

ಅವಧಾರಣ (೧೦) ೧೨

ಅವರ್ಗ (೪) ೫

ಅವಿಕೃತ ನೋ. ಪ್ರಕೃತಿಸಂಧಿ (೧೦) ೧೨

ಅವಿನಷ್ಟನಾಮಭಾಗಸ್ಥಿತಿ (೮) ೯, ೨೩೦, ೨೩೧

ಅನ್ವಯ ೨೩೫

ಅಸ್ಮದುಕ್ತಿ ನೋ. ಪುರುಷ: ಉತ್ತಮ (೩೬) ೩೭

ಆಖ್ಯಾತ (೮೪) ೮೫

ಆಭೀಕ್ಷ್ಣ್ಯ (೬೪) ೬೬, ೬೭, ೨೫೪

ಆಮಂತ್ರಣ ನೋ. ವಿಭಕ್ತಿ: ಸಂಬೋಧನೆ (೨೮) ೩೧

ಈರ್ಷೆ ೧೭೯

ಉಚಿತವರ್ಣಾಗಮ (೫೪) ೫೮

ಉತ್ತಮಪಾತ್ರ ೧೮೧

ಉತ್ತರಪದ (೧೧, ೪೬, ೪೯, ೫೬) ೧೪, ೪೯, ೫೧, ೫೯

ಉಪಧೆ (೫೯) ೬೨

ಉಪಮಾನ ೨೯೩, ೨೯೪

ಉಪಮೇಯ ೨೯೩, ೨೯೪

ಉಪಾಂತ್ಯ (೪೯) ೫೧

ಏಕಾಶ್ರಯ (೪೬) ೪೯

ಕರುಣಾತ್ಮಕ ೧೮೦

ಕವಿಕೌಶಲ (೧೧೩) ೧೦೬, ೧೦೭, ೨೭೧

ಕವಿಸಮಯ: (೨೧೬, ೨೧೭) ೧೮೯, ೩೪೨

ಅಸದಖ್ಯಾತಿ: (೨೧೭ ರಿಂದ ೨೨೧) ೧೮೯ ರಿಂದ ೧೯೪, ೩೪೩

ಕ್ರಿಯೆ (೨೨೦) ೧೯೧, ೧೯೨

ಗುಣ (೨೨೧) ೧೯೩, ೧೯೪

ಜಾತಿ (೨೧೮) ೧೮೯, ೧೯೦

ದ್ರವ್ಯ (೨೧೯) ೧೯೧

ಐಕ್ಯ: (೨೧೭, ೨೩೦ ರಿಂದ ೨೩೫) ೧೮೯, ೨೦೩ ರಿಂದ ೨೧೦, ೩೪೬

ಕ್ರಿಯೆ (೨೩೩) ೨೦೬ ರಿಂದ ೨೦೮

ಗುಣ (೨೩೪, ೨೩೫) ೨೦೮ ರಿಂದ ೨೧೦

ಜಾತಿ (೨೩೦, ೨೩೧) ೨೦೩, ೨೦೪

ದ್ರವ್ಯ (೨೩೨) ೨೦೫, ೨೦೬

ನಿಯಮಾರ್ಥ: (೨೧೭, ೨೨೬ ರಿಂದ ೨೨೯) ೧೮೯, ೧೯೯ ರಿಂದ ೨೦೨, ೩೪೫

ಕ್ರಿಯೆ (೨೨೮) ೨೦೦, ೨೦೧

ಗುಣ (೨೨೯) ೨೦೧, ೨೦೨

ಜಾತಿ (೨೨೬) ೧೯೯

ದ್ರವ್ಯ (೨೨೭) ೨೦೦

ಸದಕೀರ್ತನ: (೨೧೭, ೨೨೨ ರಿಂದ ೨೨೫) ೧೮೯, ೧೯೫ ರಿಂದ ೧೯೮, ೩೪೪

ಕ್ರಿಯೆ (೨೨೪) ೧೯೬

ಗುಣ (೨೨೫) ೧೯೭, ೧೯೮

ಜಾತಿ (೨೨೨) ೧೯೫

ದ್ರವ್ಯ (೨೨೩) ೧೯೫, ೧೯೬

ಕಾಕು (೩೦) ೩೨, ೨೪೨, ೨೪೩

ಕಾಕುವಕ್ರೋಕ್ತಿ ನೊ. ಶಬ್ದಾಲಂಕಾರ: ವಕ್ರೋಕ್ತಿ

ಕಾರಕ: (೧೫, ೧೬) ೨೨

ಅಧಿಕರಣ ನೋ. ವಿಭಕ್ತಿ: ಕಾರಕ: ಸಪ್ತಮಿ (೧೬) ೨೨, ೨೩೬, ೨೩೭

ಅಪಾದಾನ (ಅಪನಯನ) ನೋ. ವಿಭಕ್ತಿ: ಕಾರಕ: ಪಂಚಮಿ (೧೬) ೨೨, ೨೩೬, ೨೩೭

ಕರಣ ನೋ. ವಿಭಕ್ತಿ: ಕಾರಕ: ತೃತೀಯೆ (೧೬) ೨೨, ೨೩೬

ಕರ್ತೃ ,, ,, ,, ಪ್ರಥಮೆ (೧೬) ೨೨, ೨೩೬

ಕರ್ಮ ,, ,, ,, ದ್ವಿತೀಯೆ (೧೬) ೨೨, ೨೩೬

ಸಂಪ್ರದಾನ ,, ,, ಚತುರ್ಥಿ (೧೬) ೨೨, ೨೩೬, ೨೩೭

ಕಾರಗ್ರಹಣ ೨೩೧

ಕಾಲ (೮೧) ೮೧

ಕಾಲ: (೮೪) ೮೫, ೨೬೦ ರಿಂದ ೨೬೨
ಅತೀತ– ನೋ. ವಿಭಕ್ತಿ: ಆಖ್ಯಾತ:
ಭೂತವತಿ (೮೪, ೯೪) ೮೫, ೯೨
ಭವತ್– ನೋ. ವಿಭಕ್ತಿ: ಆಖ್ಯಾತ:
ವರ್ತಮಾನ (೮೪, ೮೮) ೮೫, ೮೮
ಭಾವಿ– ನೋ. ವಿಭಕ್ತಿ: ಆಖ್ಯಾತ:
ಭವಿಷ್ಯಂತಿ (೮೪, ೮೮) ೮೫, ೮೮
ವಿಧ್ಯಾದಿ ನೋ. ವಿಭಕ್ತಿ: ಆಖ್ಯಾತ:
ಸರ್ವಸಾಧನಿ (೮೪) ೮೫, ೨೬೦
ಕಾವ್ಯಸಮಯ (೨೧೬) ೧೯೦, ೩೪೨, ೩೪೭
ಕೃತ್ ೨೩೬, ೨೫೬
ಕೃತಿ– ಭೇದಗಳು: (೨೪೦ ರಿಂದ ೨೪೬) ೨೧೪, ೨೧೫
ಆಖ್ಯಾಯಿಕೆ (೨೪೦) ೨೧೪, ೩೪೯
ಇಡುಕುಂಗಬ್ಬ (೨೪೨) ೨೧೪, ೩೫೦
ಕಥೆ (೨೪೦) ೨೧೪, ೩೪೯
ಕಾವ್ಯ (೯೮, ೨೪೧) ೯೮, ೨೧೪, ೩೪೯
ಕುಳಕ (೨೪೨) ೨೧೪, ೩೫೦
ಕೋಶ (ಷ) (೨೪೨) ೨೧೪, ೩೫೦
ಚತ್ತಾಣ ೩೫೦
ಚಂಪು (೨೪೧) ೨೧೪, ೩೪೯
ಪಾಡು (೨೪೪) ೨೧೫
ಪಾಡುಗಬ್ಬ (೨೪೪) ೨೧೫, ೩೫೦
ಬಾಜನೆಗಬ್ಬ (೨೪೬) ೨೧೫
ಬೆದಂಡೆಗಬ್ಬ (೨೪೫) ೨೧೫, ೩೫೦
ಮಹಾಕಾವ್ಯ ೩೪೯, ೩೫೦
ಮುಕ್ತಕ (೨೪೨) ೨೧೪, ೩೪೯
ಮೆಲ್ವಾಡು (೨೪೩) ೨೧೪
ಕೃತಿಸಂಧಿಗಳು: ಅವಮರ್ಶ, ಗರ್ಭ, ನಿರ್ವಹಣ, ಪ್ರತಿಮುಖ, ಮುಖ (೨೪೮) ೨೧೫, ೩೫೧
ಸಂಧ್ಯಂಗಗಳು: ಕಾರ್ಯ, ಪತಾಕೆ, ಪ್ರಕರಿ, ಬಿಂದು, ಬೀಜ (೨೪೯) ೨೧೬, ೩೫೧
ಕ್ರಿಯಾರ್ಥ (೯೪, ೯೫) ೯೨
ಕ್ರಿಯಾಸಮಭಿಹಾರ (೬೪, ೯೬) ೬೬, ೬೭, ೯೩, ೨೫೪
ಕ್ರಿಯೆ (೨೮, ೩೪, ೪೮, ೯೪) ೩೧, ೩೫, ೫೧, ೯೨
ಖೇದ (೩೨) ೩೪
ಗುಣಗಳು: (೧೧೮ ರಿಂದ ೧೨೫) ೧೧೩ ರಿಂದ ೧೧೭, ೨೭೩
ಅರ್ಥವ್ಯಕ್ತಿ (೧೧೯, ೧೨೧) ೧೧೩, ೧೧೪, ೨೭೫
ಉದಾರ (೧೧೯, ೧೨೪) ೧೧೩, ೧೧೬, ೨೭೫
ಓಜಸ್ಸು (೧೧೯, ೧೨೪) ೧೧೩, ೧೧೬, ೨೭೩, ೨೭೫
ಕಾಂತ (೧೧೯, ೧೨೨) ೧೧೩, ೧೧೫, ೨೭೫
ಪ್ರಸನ್ನ (= ಪ್ರಸಾದ) (೧೧೯, ೧೨೩) ೧೧೩, ೧೧೬, ೨೭೩, ೨೭೫
ಮಧುರ (೧೧೯, ೧೨೨) ೧೧೩, ೧೧೫, ೨೭೩, ೨೭೫
ಸಂಶ್ಲಿಷ್ಟ (೧೧೯, ೧೨೧) ೧೧೩, ೧೧೪. ೨೭೪
ಸಮ (ಸಮತೆ) (೧೧೯, ೧೨೦) ೧೧೩, ೨೭೪
ಸಮಾಧಿ (೧೧೯, ೧೨೫) ೧೧೩, ೧೧೭, ೨೭೫
ಸುಕುಮಾರ (೧೧೯, ೧೨೩) ೧೧೩, ೧೧೬, ೨೭೫
ಗುಣವಚನ (-ಉಕ್ತಿ) (೧೭, ೨೧, ೨೮, ೭೩) ೨೨, ೨೬, ೩೧, ೭೬
ಚಾಪಲ (೬೪) ೬೬, ೨೫೪
ಜಘನ್ಯಪಾತ್ರ ೧೮೧
ಜಾತಿ (೩೫) ೩೬
ತತ್ಸಮ ೨೫೪
ತದ್ಧಿತ (೮೨, ೮೩) ೮೩, ೨೩೬, ೨೫೬, ೨೫೮, ೨೫೯
ತ್ರಿಪ್ರಯೋಗ ೬೭, ೨೫೪
ದೀರ್ಘ (೨, ೩೦ ರಿಂದ ೩೨, ೫೫) ೪, ೩೨ ರಿಂದ ೩೪, ೫೮
ದೇಸೆ (೩೦) ೩೨
ದೋಷ (೧೦೮) ೧೦೩, ೨೬೬ ರಿಂದ ೨೭೨

ಅಕ್ರಮ ಅಥವಾ ಅಪಕ್ರಮ (೧೦೭, ೧೧೨) ೧೦೩, ೧೦೬, ೨೭೧
ಅಪ್ರತೀತ ಅಥವಾ ಗೂಢ (೧೦೦, ೧೦೧) ೯೯, ೨೬೮
ಅನುಚಿತ ೨೬೯
ಅರಿಸಮಾಸ ೨೫೪
ಅಸಮರ್ಥ (೧೦೦, ೧೦೧) ೯೯, ೨೬೮
ಉಪಮಾದೋಷಗಳು: ಅಧಿಕ, ಅಸದೃಶ ಲಿಂಗವಚನಭೇದ, ಹೀನ (೧೬೨) ೧೫೧, ೧೫೨, ೨೯೬
ಏಕಾರ್ಥ (೧೦೭, ೧೦೯) ೧೦೩, ೧೦೪
ಕಥಿತಪದತ್ವ ೨೮೬
ಕಷ್ಟ (೧೦೦, ೧೦೩) ೯೯, ೧೦೦, ೨೬೯
ಗ್ರಾಮ್ಯ (೧೦೩, ೧೦೪) ೧೦೦, ೧೦೧
ದುಷ್ಕರ ಅಥವಾ ದುಷ್ಪ್ರತೀತಿ (೧೦೪) ೧೦೧
ನೀರಸ (೧೦೦, ೧೦೩) ೯೯, ೧೦೦, ೨೬೯
ನೇಯ ೧೧೫, ೨೭೫
ಪೌನರುಕ್ತ್ಯ (೧೧೦) ೧೦೪
ಭಿನ್ನವೃತ್ತ (ಛಂದೋಭಂಗ) (೧೦೭, ೧೧೬) ೧೦೩, ೧೦೯, ೨೭೨
ಯತಿಭಂಗ (೧೦೭, ೧೧೫)೧೦೩,೧೦೮,೨೭೧
ಲೋಕವಿರುದ್ಧ: (೧೧೭) ೧೦೬
ಕಾಲ–, ದೇಶ–, ವಸ್ತುರೂಪ–, ಸ್ವಭಾವ–, (೧೧೩) ೧೦೬, ೧೦೭
ವಿಪರೀತಕಲ್ಪನೆ (೧೦೦, ೧೦೨) ೯೯,೧೦೦, ೨೬೮
ವಿರುದ್ಧ (೧೦೭, ೧೧೩, ೧೧೪)೧೦೩, ೧೦೬, ೧೦೭
ವಿರೂಪಸಂಧಿ ೧೦೦
ವಿಸಂಧಿ (೧೦೦, ೧೦೨,) ೯೯, ೧೦೦, ೨೩೦, ೨೬೮
ವ್ಯರ್ಥ (೧೦೭, ೧೧೧) ೧೦೩, ೧೦೫, ೨೭೦
ವ್ಯವಹಿತ (ಅಥವಾ ಸಂಕೀರ್ಣ) (೧೦೭, ೧೦೮) ೧೦೩, ೨೬೯
ಶಾಸ್ತ್ರವಿರುದ್ಧ (೧೧೪) ೧೦೭
ದ್ವಿತ್ವವೃತ್ತಿ (೧೪, ೨೫, ೪೩, ೫೦, ೬೮. ೭೭) ೨೧, ೨೮, ೪೬, ೫೨, ೭೦, ೭೮, ೨೫೫
ಧಾತು (೯೭) ೯೪
ನಾಮ (೪೫) ೪೮, ೨೧೬
ನಾಮರೂಢಿ ನೋ. ಅವಿನಷ್ಟನಾಮಭಾಗ ೨೩೦, ೨೩೧
ನಾಮಿ (೩) ೪, ೨೨೭
ನಿಗರಣ ೩೨೫
ನಿಧನ ನೋ. ಲಿಂಗ: ನಪುಂಸಕ (೨೩) ೨೭
ನಿಂದಿತಕ್ರಮ ೧೩೯
ನಿಪಾತ (೧೦) ೧೨
ನಿಯಮ ೩೪೫
ನಿರ್ಧಾರಣೆ (೨೩) ೩೧
ಪದ (೭, ೯೯, ೧೦೦) ೮, ೯೮, ೯೯, ೨೨೯
ಪದದೋಷ (ನೋ. ದೋಷಸಹ)೨೬೬, ೨೬೭
ಪದವಿಧಿ (=ಸಮಾಸ) (೧೧) ೧೪
ಪರಪದ (ನೋ. ಉತ್ತರಪದ) (೪೯) ೫೧
ಪರಿಸಂಖ್ಯೆ ೩೪೫
ಪುರುಷ: (೮೫, ೮೯) ೮೬, ೮೮
ಉತ್ತಮ (೩೬, ೮೫, ೯೨) ೩೭, ೮೬, ೯೦
ಪ್ರಥಮ (೩೬, ೮೫, ೯೧, ೯೨) ೩೭, ೮೬, ೮೯, ೯೦
ಮಧ್ಯಮ (೩೬, ೮೫, ೯೨, ೯೩, ೯೬) ೩೭, ೮೬, ೯೦, ೯೧, ೯೩
ಪೂರ್ವಪದ (೪೭, ೪೯, ೫೪) ೫೦, ೫೧, ೫೮
ಪೂರ್ವಾನುರಾಗ ೧೭೯
ಪ್ರಕರಣ (೯೯) ೯೮, ೨೬೭
ಪ್ರಕಾರಾರ್ಥ (೮೧) ೮೧
ಪ್ರಕೃತ, ಪ್ರಸ್ತುತ, ಪ್ರಾಕರಣಿಕ ೨೯೩
ಪ್ರಕೃತಿ (೭,೯೩) ೮, ೯೧
ಪ್ರಕೃತಿಸಂಧಿ (೧೦) ೧೨, ೨೩೨
ಪ್ರತಿಷೇಧ (೯೫) ೯೨, ೨೬೪

ಪ್ರತ್ಯಯ (೭, ೬೯, ೯೨, ೯೪) ೮, ೭೪, ೮೩, ೯೨, ೨೩೬, ೨೫೬
ಪ್ರಥಮೈಕವಚನ (೧೯) ೨೫
ಪ್ರಯೋಗ
ಕರ್ತೃ- (೨೩೯) ೨೧೩
ಕರ್ಮಕರ್ತೃ- (೨೩೯) ೨೧೩
ಯುಗಪತ್- (೮೭) ೮೬, ೨೬೧
ಹೇತು- (೯೭) ೯೪, ೨೬೫
ಪ್ರವಾಸ ೧೮೦
ಪ್ರೌಢಸಮಾಗಮ ೧೭೯
ಪ್ಲುತ (೨) ೪, ೨೨೭, ೨೩೨
ಬಿಂದು (೨೦, ೪೮) ೨೫, ೫೧
ಬಿಂಬಪ್ರತಿಬಿಂಬಭಾವ ೨೯೪, ೩೦೩
ಭಂಗಶ್ಲೇಷ (೧೮೪) ೧೬೯,೩೧೮,೩೨೨
ಭಾವ: (೧೯೭,೨೦೧,೨೦೨) ೧೭೭, ೧೭೮
ಅನುಭಾವ (೨೦೧, ೨೦೨) ೧೭೭,೧೭೮,೩೩೫
ವಿಭಾವ(೨೦೧,೨೦೨) ೧೭೭, ೧೭೮, ೩೩೪
ಆಲಂಬನ ೩೩೪
ಉದ್ದೀಪನ ೩೩೪
ಸಂಚಾರಿ (ವ್ಯಭಿಚಾರಿ)(೧೯೯,೨೦೧,೨೦೨) ೧೭೭, ೧೭೮, ೩೩೫
ಸಾತ್ತ್ವಿಕ (೨೦೦) ೧೭೭, ೩೩೫
ಸ್ಥಾಯಿ- (೧೯೮) ೧೭೭, ೩೩೪
ಭಾವನಾಮ (೩೫,೭೭,೯೬) ೩೬, ೭೮, ೯೩
ಮಧ್ಯಮಪಾತ್ರ ೧೮೧
ಮಧ್ಯಮಸಮಾಗಮ ೧೭೮
ಮಹಾಪ್ರಾಣ (೬) ೬
ಮಾರ್ಗ (೩೦) ೩೨
ಮಾರ್ಗ: ನೋ.' ರೀತಿ' ಸಹ ೨೭೬
ಉದೀಚ್ಯ (ಉತ್ತರ)-(೧೨೬) ೧೧೭, ೨೭೬
ಗೌಡ- (೧೨೭) ೧೧೮, ೨೭೬
ದಕ್ಷಿಣ- (೧೨೬) ೧೧೭, ೨೭೬
ವೈದರ್ಭ-(೧೨೭) ೧೧೮, ೨೭೬
ಮಾತ್ರೆ (೨) ೪
ಮಾನಾಖ್ಯ ೧೮೦
ಮುಗ್ಧಸಮಾಗಮ ೧೭೮
ಯತಿ (೧೧೫) ೧೦೮, ೨೭೧
ರಸ: (೧೮೯, ೧೯೭) ೧೭೩,೧೭೭
ಅದ್ಭುತ-(೧೯೪,೨೦೬,೨೧೦) ೧೭೫, ೧೮೩, ೧೮೬, ೩೩೪ ೩೩೬
ಕರುಣ- (೧೯೪,೨೦೪,೨೧೦) ೧೭೫, ೧೮೦, ೧೮೬, ೩೩೪, ೩೩೬, ೩೩೮
ಬೀಭತ್ಸ- (೧೯೫,೨೦೬,೨೧೦) ೧೭೫, ೧೮೩, ೧೮೬, ೩೩೬, ೩೩೯, ೩೪೧
ಭಯಾನಕ- (೧೯೫,೨೦೬,೨೧೦)೧೭೫,೧೮೩, ೧೮೬, ೩೩೪, ೩೩೬, ೩೩೯
ರೌದ್ರ- (೧೯೫, ೧೯೬, ೨೦೫, ೨೧೦) ೧೭೫, ೧೮೨, ೧೮೬, ೩೩೬, ೩೩೯, ೩೪೧
ವೀರ- (೧೯೪, ೨೦೫, ೨೧೦) ೧೭೫,೧೮೨, ೧೮೬,೩೩೬,೩೩೮,೩೪೧
ಶಾಂತ- (೨೦೭) ೧೮೫, ೩೩೫, ೩೩೯
ಶೃಂಗಾರ-:(೧೯೪,೧೯೬,೨೦೩,೨೧೦)೧೭೫, ೧೭೮,೧೮೬,೩೩೪,೩೩೬,೩೪೧
ವಿಪ್ರಲಂಭಶೃಂಗಾರ (೨೦೩) ೧೭೮, ೩೩೬, ೩೩೭
ಸಂಭೋಗಶೃಂಗಾರ (೨೦೩) ೧೭೮,೩೩೬
ಹಾಸ್ಯ- (೧೯೪.೨೦೪,೨೧೦) ೧೭೫, ೧೮೦, ೧೮೬,೩೩೬, ೩೩೭
ರಸವರ್ಣಗಳು (೨-೦) ೧೮೬
ವಿರುದ್ಧರಸಗಳು (೨೦೮, ೨೦೯) ೧೮೫, ೧೮೬, ೩೪೦
ರೀತಿ (೧೮೯, ೧೯೦) ೧೭೩, ೩೩೩, ೩೪೧
ಅವಂತಿಕೆ ೩೩೩
ಗೌಡ (೧೯೦, ೧೯೩, ೧೯೫) ೧೭೩ರಿಂದ ೧೭೫, ೩೩೩, ೩೩೪
ಪಾಂಚಾಲ (೧೯೦, ೧೯೨, ೧೯೪) ೧೭೩ ರಿಂದ ೧೭೫, ೩೩೩, ೩೩೪
ಮಾಗಧ ೩೩೩

ಲಾಟ ೩೩೩,೩೩೪
ವೈದರ್ಭ (೧೯೦,೧೯೧,೧೯೪) ೧೭೩,೧೭೫, ೩೩೩, ೩೩೪
ರೂಪದ್ವಿತ್ವ (೬೪) ೬೬, ೨೫೪
ರೇಫೆ (೫೭,೬೫) ೬೦, ೬೮
ಲಿಂಗ (=ಪ್ರಾತಿಪದಿಕ)(೧೫,೨೧) ೨೨,೨೬,೨೩೬
ಲಿಂಗ: (೯೧) ೮೯
ನಪುಂಸಕ– (೨೨,೨೩,೨೫,೩೭,೩೮,೮೯,೯೦) ೨೬,೨೭,೨೮,೩೮,೩೯,೮೮,೮೯
ಪುಂ– (೧೮,೨೨,೩೭,೩೮,೭೩) ೨೪, ೨೬, ೩೮, ೩೯, ೭೬
ಸ್ತ್ರೀ– (೧೮,೩೭,೩೮,೭೨,೭೩,೮೯) ೨೪,೩೮, ೩೯, ೭೫, ೭೬, ೮೮
ವರ್ಣ (೪,೪೪) ೫, ೪೭
ವರ್ಣತೃತೀಯೆ (೧೧) ೧೪, ೨೩೩
ವರ್ಣಪ್ರಥಮೆ (೧೧) ೧೪, ೨೩೩
ವಚನ: (೮೭,೯೧) ೮೭, ೮೯
ಏಕ– (೧೯,೨೮,೨೯,೩೫,೮೯,೯೦,೯೩,೯೬) ೨೫,೩೧,೩೨,೩೬,೮೮,೮೯,೯೧,೯೩,೩೪೮
ದ್ವಿ– (೧೭,೨೯,೨೩೬) ೨೨,೩೨,೨೧೦,೨೧೧ ೨೩೭, ೩೪೮
ಬಹು– (೧೭,೧೮,೨೧,೨೯,೩೫,೭೮,೮೫,೯೨) ೨೨,೨೪,೨೬,೩೨,೩೬,೭೯,೮೬,೯೦,೨೭೯, ೩೪೮
ವಚನಪಲ್ಲಟ (೩೫) ೩೬, ೨೪೪
ವರ್ಣಕಗಳು (೨೪೭) ೨೧೫, ೩೫೦
ವರ್ಣಗ್ರಹಣ ೨೩೧
ವರ್ಣಮಾಲೆ ೨೨೩
ವರ್ಣೋತ್ಪತ್ತಿ ಸ್ಥಾನಗಳು ೨೨೪, ೨೨೫
ವಸ್ತುಪ್ರತಿವಸ್ತುಭಾವ ೨೯೪, ೩೦೩
ವಾಕ್ಯ (೧೨, ೧೦೬) ೧೭, ೧೦೩
ವಾಕ್ಯದೋಷ ನೋ. ದೋಷ ಸಹ (೧೦೭) ೧೦೩, ೨೬೬, ೨೬೭
ವಿಧಿ ೩೪೫
ವಿಭಕ್ತಿ: (೮,೧೫,೨೧,೩೩,೩೪,೪೫,೮೫,೮೭, ೮೮,೯೭) ೯,೨೨,೨೬,೩೫,೪೮,೮೬ ರಿಂದ ೮೮, ೯೪, ೨೩೬, ೨೩೭
ಆಖ್ಯಾತ– (೮೪) ೮೫, ೨೨೯, ೨೬೦, ೨೬೧
ಪ್ರತಿಷೇಧ (೯೫) ೯೨, ೨೬೪
ಭವಿಷ್ಯಂತಿ (೮೪, ೮೭, ೯೦, ೯೧) ೮೫, ೮೭, ೮೯, ೨೬೩
ಭೂತವತಿ (೮೪,೮೭,೯೪) ೮೫,೮೭,೯೨
ವರ್ತಮಾನ (೮೪, ೮೭, ೯೪) ೮೫, ೮೭, ೯೨, ೨೬೩
ವರ್ತಮಾನಸ್ಯೂನ ೨೬೪
ಸರ್ವಸಾಧನಿ (೮೪, ೯೨, ೯೬) ೮೫, ೯೦, ೯೩, ೨೬೦, ೨೬೩
ಕಾರಕ– (೩೩, ೩೪, ೪೮) ೩೫, ೫೧, ೨೨೯, ೨೩೬
ಚತುರ್ಥಿ (೨೪, ೨೫, ೨೭, ೩೬, ೯೫) ೨೮,೩೦,೩೭.೯೨,೨೩೬,೨೩೭,೨೪೧
ತೃತೀಯೆ (೨೩, ೨೪, ೨೬) ೨೭ ರಿಂದ ೨೯, ೨೩೬
ದ್ವಿತೀಯೆ (೨೨, ೨೩, ೩೧) ೨೬,೨೭,೩೩, ೨೩೬
ಪಂಚಮಿ (೨೪,೨೬) ೨೮,೨೯,೨೩೬,೨೩೭ ೨೪೧
ಪ್ರಥಮೆ (೧೯,೨೭,೨೮,೩೩,೩೬,) ೨೫, ೩೦,೩೧,೩೫,೩೭,೨೩೬ ರಿಂದ ೨೩೮
ಸಪ್ತಮಿ (೨೪,೨೮) ೨೮,೩೧,೨೩೬,೨೩೭
(ಸಂಬಂಧ) ಷಷ್ಠಿ (೨೪,೨೭,೩೨,೨೩೮) ೨೮,೩೦,೩೪,೨೧೨,೨೩೭,೩೪೮
ಸಂಬೋಧನೆ (೨೮ ರಿಂದ ೩೦) ೩೧, ೩೨
ವಿಭಕ್ತಿಪಲ್ಲಟ (೨೭) ೩೦,೨೪೨
ವಿಶಂಕೆ (೧೦) ೧೨
ವಿಶೇಷಣ (೩೩) ೩೫
ವಿಶೇಷ್ಯ (೪೯) ೫೧
ವಿಷಯ ೨೯೮

ವಿಷಯಿ ೨೯೮
ವೀಪ್ಸೆ (೬೪) ೬೬, ೨೫೪
ವೃತ್ತಿ: ೧೨೬, ೩೩೩
ಕೋಮಲೆ ೩೩೩
ಪರುಷೆ (೧೩೪) ೧೨೬, ೩೩೩
ಮಧುರೆ(=ಉಪನಾಗರಿಕೆ)(೧೩೫)೧೨೬,೩೩೩
ಲಲಿತೆ (=ಗ್ರಾಮ್ಯೆ) (೧೩೬) ೧೨೭, ೨೭೮
ವೃತ್ತಿ: (೨೧೧) ೧೮೬, ೩೪೦, ೩೪೧
ಆರಭಟಿ (೨೧೧, ೨೧೫) ೧೮೬, ೧೮೭, ೩೪೧
ಕೈಶಿಕಿ (೨೧೧, ೨೧೪) ೧೮೬, ೧೮೭, ೩೪೧
ಭಾರತಿ (೨೧೧, ೨೧೨,) ೧೮೬, ೧೮೭, ೩೪೧
ಸಾತ್ವತಿ (೨೧೧, ೨೧೩) ೧೮೬, ೧೮೭, ೩೪೧
ವೃತ್ತಿ (ಸೂತ್ರದ ಮೇಲಿನ) ೨೨೨
ವೈಧರ್ಮ್ಯ ೩೦೩
ವ್ಯಂಜನ (೧, ೪೪, ೬೫) ೩, ೪೭, ೬೮, ೨೨೬
ವ್ಯವಸ್ಥಿತವಿಭಾಷೆ ೪೬
ಶಬ್ದ (೯೮, ೯೯) ೯೮
ಶ್ಲಾಘ್ಯವಿಶೇಷಣ ೧೧೭
ಸಂಹಿತೆ (=ಸಂಧಿ) (೭, ೨೩೭) ೮, ೨೧೧, ೨೨೯,
೨೩೦, ೩೪೮
ಸಂಖ್ಯೆ (೬, ೧೩, ೩೫, ೪೬) ೬, ೧೯, ೩೬, ೪೯
ಸಂಧಿಃ ಪ್ರಕೃತಿಪ್ರತ್ಯಯ—, ಪದಮಧ್ಯ—,
ಪದಾಂತ—, ೨೩೦
ಸಂಧಿಕಾರ್ಯ: ೨೨೯, ೨೩೦
ಆಗಮ (೯, ೧೪, ೮೮) ೧೦, ೨೧, ೮೮
೨೩೧, ೨೩೫
ಆದೇಶ (೧೧ ರಿಂದ ೧೩) ೧೪ ರಿಂದ ೨೦,
೨೩೩, ೨೩೪, ೨೫೧
ಲೋಪ (೮, ೧೯, ೨೧, ೨೮, ೪೫, ೪೯, ೫೪,
೫೬, ೫೮, ೫೯, ೬೨, ೭೧, ೭೨, ೮೩,
೯೩, ೯೫)
ಲೋಪ ೯, ೨೫, ೨೬, ೩೧, ೪೮, ೫೧, ೫೮,
೬೦ ರಿಂದ ೬೨, ೬೪, ೭೫, ೮೩, ೯೧,
೯೨, ೨೩೦, ೨೪೮, ೨೫೨.
ಸಂಧ್ಯಕ್ಷರ (೩) ೪, ೨೨೭
ಸಮರ್ಥಕ್ರಿಯಾಪದ (೪೮) ೫೧
ಸಮಸಂಸ್ಕೃತ (೩೮ ರಿಂದ ೪೪, ೬೩) ೩೯ ರಿಂದ
೪೭, ೬೫, ೨೪೫ ರಿಂದ ೨೪೮
ಸಮಾಸ: (=ಪದವಿಧಿ) (೪೫, ೪೮, ೬೨, ೬೩,
೬೫, ೮೩, ೨೩೮) ೪೮, ೫೧, ೬೪,
೬೫, ೬೮, ೮೩, ೨೩೨, ೨೩೬
ಅವ್ಯಯೀಭಾವ- (೪೭) ೫೦, ೨೫೦
ಕರ್ಮಧಾರಯ- (೪೬) ೪೯, ೨೪೯, ೨೫೧
ಕ್ರಿಯಾ- ೨೫೦
ಗಮಕ- ೪೮, ೨೩೦
ತತ್ಪುರುಷ- (೪೬, ೫೪) ೪೯, ೫೮, ೨೪೯
ದ್ವಂದ್ವ- (೪೭) ೫೦, ೨೫೦
ದ್ವಿಗು- (೪೬) ೪೯, ೨೪೯
ಬಹುವ್ರೀಹಿ- (೪೭, ೫೬) ೫೦, ೫೯, ೨೪೯
ಮಧ್ಯಮಪದಲೋಪಿ- ೩೪೮
ಸಮೀಪ (೬೪) ೬೬
ಸಂಪ್ರತಿ ನೋ. ಕಾಲ: ವರ್ತಮಾನ
ಸಂಭಾವನೆ ೩೧೩
ಸರ್ವನಾಮ (೧೭, ೧೮, ೨೧, ೨೪, ೮೦) ೨೨,
೨೪, ೨೬, ೨೮, ೮೦
ಸೂತ್ರ ೨೨೨
ಸ್ವರ (೧) ೩, ೨೨೬
ಸಾದೃಶ್ಯ, ಸಾಧರ್ಮ್ಯ, ಸಾಧಾರಣಧರ್ಮ
ಸಾಮ್ಯ ೨೯೩, ೨೯೪
ಸ್ವಾಮಿ(ತ್ವ) (೨೭) ೩೦
ಹ್ರಸ್ವ (೨, ೩೦, ೩೯, ೫೦, ೭೪) ೪, ೩೨, ೪೧,
೫೨, ೭೬

ಶುದ್ಧಾಶುದ್ಧಿ ಪತ್ರಿಕೆ

ಪುಟ	ಸಾಲು	ಅಶುದ್ಧ	ಶುದ್ಧ
೧೮	೧೮	ಕಾರೆಗಳ	ಕಾರಗಳ
೬೨	೧೩	ಏಱು	ಏಱು
೬೨	೧೪	ಆಯ್ದ್	ಆಯ್ದ್
೬೩	೧೪	ರೂಪಗಳ್	ರೂಪಂಗಳ್
೬೭,೨೫೪	೧, ೨೦	ಅಭೀಕ್ಷ್ಣಶಿ	ಅಭೀಕ್ಷ್ಣಶಿ
೭೨	೬	ಮ್ಣಾಯು	ಮ್ನಾಯು
೯೪	೯	ಭಿಸುಗಂ	ಭಿಸುಗುಂ
೧೦೯	೧೦	ಬಗೆಯೊಯರ್	ಬಗೆಯುಯರ್
೧೩೦	೮	ಶ್ರಿರಾಮಾ	ಶ್ರೀರಾಮಾ
೧೩೬	೧೨, ೧೩	ಮಾನಸ್ತೋಭನಕಾರಿ	ಮಾನಃಸ್ತೋಭನಕಾರಿ
೧೩೯	೫	ನೀಳ್ದ ಪಾಂ	ನೀಳ್ದ ಪಾಂ
೧೩೯	೧೨	ಸಂದೆಯುದೆ	ಸಂದೆಯುದ
೧೫೨	೨೧	ಮಱ	ಮರ
೧೫೬	೧೦	ವಸಿಯುಕುಮೇ	ವಸಿಯಿಕುಮೇ
೧೯೮	೧	ಹರಿತತ್ತ್ವ	ಹರಿತತ್ತ್ವ
೨೨೬	೪	ಸ್ಪಷ್ಟೋಚಾರಣೇನ	ಸ್ಪಷ್ಟೋಚ್ಚಾರಣೇನ
೨೨೬	೮	ಉಚ್ಚರಿಸಲಿಕ್ಕೆ	ಸ್ಪಷ್ಟವಾಗಿ ಉಚ್ಚರಿಸಲಿಕ್ಕೆ
೨೪೨	೧೯	ಪ್ರತ್ಯಯಲೋಪವೆಂದೂ	ಪ್ರತ್ಯಯಕ್ಕೆ ಲೋಪವೆಂದೂ
೨೪೫	೨೧	ವೈಯ್ಯಾಕರಣರು	ವೈಯಾಕರಣರು
೨೪೯	೨೨	ಕಿಱುದು+ಕೂಸು	ಕಿಱುದು+ಕೂಸು
೨೫೩	೧೫	ಮುಯ್ಯೈಱು	ಮುಯ್ಯೋಱು
೨೮೯	೧	ಹೇಳಿ	ಹೇಳಿರುವನು.
೨೯೩	೨೩, ೨೪	ಅಳತೆ ಉಪಮಾನ	ಅಳತೆ (ಉಪಮಾನ)
೨೯೫	೨೦	ಅನ್ಯನ್ಯೋಪಮೆ	ಅನ್ಯೋನ್ಯೋಪಮೆ
೩೦೧	೪	ಮಾಡಿಕೊಂಡುದುದೇ	ಮಾಡಿಕೊಂಡುದೇ
೩೦೭	೪, ೬	ಅಸಂಗತ, ಅಸಂಗತದ	ಅಸಂಗತಿ, ಅಸಂಗತಿಯ
೩೨೬	೨೪	ಮಧ್ಯ	ಮದ್ಯದ

೫೫ನೆಯ ಪುಟದಲ್ಲಿ 'ಪಚ್ಚನೆ'ಯ ರೂಪವು 'ಪಸುರ್' ಎಂದು ಕೊಟ್ಟಿದ್ದನ್ನು ನರಸಿಂಹಾಚಾರ್ಯರು 'ಪಸು' ಎಂದು ತಿದ್ದಿಕೊಳ್ಳಲು ಸೂಚಿಸಿರುವರು. ಆದರೆ 'ಪಸುರ್' ಎಂಬ ಪ್ರಯೋಗವೂ ದೊರೆಯುತ್ತದೆ.